ಕರ್ನಾಟಕ ಸರ್ಕಾರ

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು ಸಂಪುಟ-೩

ಲೇಖಕರು

## ಪಂ. ದೀನ್ ದಯಾಳ್ ಉಪಾಧ್ಯಾಯ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು, ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು-೫೬೦ ೦೫೬

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೩೨
ವಿಚಾರ ಸಾಹಿತ್ಯಮಾಲೆ – ೪೮

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೩

**ಸಂಪಾದಕ ಮಂಡಳಿ**

| | |
|---|---|
| ಡಾ. ಪ್ರಧಾನ್ ಗುರುದತ್ತ | (ಅಧ್ಯಕ್ಷ) |
| ಶ್ರೀ ಎಸ್.ಆರ್. ರಾಮಸ್ವಾಮಿ | (ಸದಸ್ಯರು) |
| ಡಾ. ಜಿ.ಬಿ. ಹರೀಶ್ | (ಸದಸ್ಯರು) |
| ಡಾ. ಮಂಗಳಾ ಶ್ರೀಧರ್ | (ಸದಸ್ಯರು) |
| ಶ್ರೀ ಪಿ.ಎಂ. ರಮೇಶ್ | (ಸದಸ್ಯರು) |



# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೩

**ಪಂ॥ ದೀನ್ ದಯಾಳ್ ಉಪಾಧ್ಯಾಯ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**DĪN DAYĀL UPĀDHYĀYA AVARA SAMAGRA BAREHAGAḶU (Samputa 3) (Complete Works of Pandit Deendayal Upadhaya Vol. 3)** Consisting of the Kannada translation of **Integral Humanism and Discourses there on ;** Editor-in-Chief : **Dr. Pradhan Gurudatta;** Published by **Sri P. Narayana Swamy, Registrar, Kuvempu Bhasha Bharathi Pradhikara;** Kalagrama, Jnana Bharathi, Behind Bangalore University Campus, Mallattahalli, Bangalore - 560 056 ; 2012 ; Pp. xx + 312 ; Price : Rs. 125/-

© : ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

ಪ್ರಥಮ ಮುದ್ರಣ : ೨೦೧೨
ಪುಟಗಳು : xx + ೩೧೨
ಬೆಲೆ : ರೂ. ೧೨೫/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀ ವಿಶ್ವನಾಥ್ ಶೆಟ್ಟಿಗಾರ್**

**ISBN : 978-93-80415-19-2**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦. ದೂ : ೨೩೩೪೨೭೨೪



# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೩

## ಏಕಾತ್ಮ ಮಾನವದರ್ಶನ

**Blank Page**



# ಪರಿವಿಡಿ

## ಸಂಪುಟ ೩


**ಪೀಠಿಕೆ** ೯

**ಏಕಾತ್ಮ ಮಾನವದರ್ಶನ**
ಅನು. : **ಜಿ.ಎನ್. ರಂಗನಾಥರಾವ್**

**ಭಾಗ – ೧**

ಮೂಲ ಪ್ರಮಾಣಗಳು ೧

**ದಸ್ತಾವೇಜು : ಒಂದು–ತತ್ತ್ವ–ಸಿದ್ಧಾಂತಗಳು ಮತ್ತು ನೀತಿಗಳು** ೩

**ದಸ್ತಾವೇಜು : ಎರಡು–ಏಕಾತ್ಮ ಮಾನವದರ್ಶನ**

೧ ನಮ್ಮ ದಿಕ್ಕುದಿಸೆ ೧೭

೨ ಪಾಶ್ಚಾತ್ಯ ಮತ್ತು ಭಾರತೀಯ ದರ್ಶನಗಳು ೨೯

೩ ವ್ಯಕ್ತಿ – ಸಮಷ್ಟಿ ನಡುವೆ ಸಾಮರಸ್ಯ ೪೬

೪ ರಾಷ್ಟ್ರೀಯ ಮನೋಧರ್ಮಕ್ಕೆ ಹೊಂದುವ ಅರ್ಥವ್ಯವಸ್ಥೆ ೭೩

**ಭಾಗ – ೨**

ಏಕಾತ್ಮ ಮಾನವದರ್ಶನ : ಚಿಂತನೆಗಳು
ಅನು. : **ಜಿ.ಎನ್. ರಂಗನಾಥರಾವ್**

೫. ಭಾರತೀಯ ಪರಿಕಲ್ಪನೆ ೯೭

೬. ಒಂದು ಅಧ್ಯಯನ : ೧೦೯

೭. ದಯಾಪರ ಸಮಾಜೋ–ಆರ್ಥಿಕ ವ್ಯವಸ್ಥೆ ಕುರಿತ
ಒಂದು ತತ್ತ್ವಜಿಜ್ಞಾಸೆ ೧೩೬

೮. ಸಾಮಾಜಿಕ ತತ್ತ್ವ ಸಿದ್ಧಾಂತಗಳನ್ನು ಕುರಿತ ದೀನ್ ದಯಾಳರ
ಚಿಂತನೆಗಳು : ಒಂದು ಸಮಗ್ರ ಪ್ರಸ್ತಾಪ ೧೪೯

೯. ದೀನ್ ದಯಾಳ್ ಉಪಾಧ್ಯಾಯರ ಆರ್ಥಿಕ ಚಿಂತನೆ ೧೫೫

**ಭಾಗ – ೩**

**ಸಾಂದರ್ಭಿಕ ಪ್ರಕ್ರಿಯೆ ಮತ್ತು ತೌಲನಿಕ ಅಧ್ಯಯನ**

೧೦. ಭಾರತೀಯ ಚಿಂತನಶೀಲ ಪರಂಪರೆಯ ಮುಂದುವರಿಕೆ ೧೬೫
೧೧. ದೀನ್ ದಯಾಳ್‌ಜೀ, ಆರ್.ಎಸ್.ಎಸ್. ಮತ್ತು ಹಿಂದೂ ರಾಷ್ಟ್ರೀಯತೆ ೧೭೪
೧೨. ಗಾಂಧೀಜೀ ಮತ್ತು ದೀನ್ ದಯಾಳ್: ಇಬ್ಬರು ದ್ರಷ್ಟಾರರು ೧೮೭
೧೩. ಗಾಂಧೀ, ಲೋಹಿಯಾ, ದೀನ್ ದಯಾಳ್ ಅವರ ಆರ್ಥಿಕ ಚಿಂತನೆಗಳು ೧೯೭
೧೪. ಮಾರ್ಕ್ಸ್ ಮತ್ತು ದೀನ್ ದಯಾಳ್: ಎರಡು ಚಿಂತನ ಧಾರೆಗಳು ೨೧೯
೧೫. ಎಂ.ಎನ್. ರಾಯ್ ಮತ್ತು ದೀನ್ ದಯಾಳ್ : ಮಾನವತಾವಾದದ ಪ್ರತಿಪಾದಕದ್ವಯರು ೨೩೪
೧೬. ಏಕಾತ್ಮ ಮಾನವದರ್ಶನ ಮತ್ತು ಸಂಪೂರ್ಣ ಕ್ರಾಂತಿ ೨೫೪

**ಭಾಗ – ೪**

**ಗುರಿಗಮ್ಯತೆ**

೧೭. ಒಂದು ಅವಿಚ್ಛಿನ್ನ ಸತತ ಪ್ರವಾಹ : ಏಕಾತ್ಮ ಮಾನವದರ್ಶನ ೨೭೩
೧೮. ಹಿಂದುತ್ವ : ಒಂದು ಭೌಗೋಳಿಕ ಸಾಂಸ್ಕೃತಿಕ ಪರಿಕಲ್ಪನೆ ೨೭೮
೧೯. ಧರ್ಮದ ಪರಿಕಲ್ಪನೆ : ದೀನ್ ದಯಾಳರ ಚಿಂತನ ಮಾರ್ಗ ೨೮೨
೨೦. ಗ್ರಾಮೀಣ ಅಭಿವೃದ್ಧಿ : ದೀನ್ ದಯಾಳರ ವಿಚಾರಧಾರೆ ೨೯೬



## ಪೀಠಿಕೆ

ಏಕಾತ್ಮ ಮಾನವದರ್ಶನ ಕುರಿತಂತೆ ಪ್ರಕಟಿತ ಹಾಗೂ ಅಪ್ರಕಟಿತ ಪಂಡಿತ ದೀನ್ ದಯಾಳ್ ಉಪಾಧ್ಯಾಯ ಪ್ರಣೀತ ವಿಚಾರಧಾರೆಯನ್ನು ನಮ್ಮ ಓದುಗರ ಕೈಯಲ್ಲಿರಿಸುವ ಪ್ರಯತ್ನ ಮುಂದಿನ ಪುಟಗಳಲ್ಲಿದೆ. ಸಮ್ಯಕ್‌ದೃಷ್ಟಿ ಅಥವಾ ಅಖಂಡ ವಿಶ್ವದರ್ಶನ ಆದಿ ಅನಾದಿ ಕಾಲದಿಂದಲೂ ಭಾರತೀಯ ಸಂಸ್ಕೃತಿಯ ಮುಖ್ಯ ಗುಣಲಕ್ಷಣವಾಗಿದೆ. ಈ ದೇಶದಲ್ಲಿ ಜನ್ಮವೆತ್ತಿದ ಋಷಿಗಳು, ಮುನಿಗಳು, ಸಾಧುಸಂತರು, ಚಿಂತಕರು ಮತ್ತು ಮೇಧಾವಿಗಳು ಕಾಯಾ ವಾಚಾ ಈ ತತ್ವವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಈ ತತ್ವಾನುಸಾರ ಬದುಕಲೆತ್ನಿಸಿದ್ದಾರೆ. ಭಾರತದ ಇತಿಹಾಸದಲ್ಲಿ ಕಂಡುಬರುವ ಇಂಥ ಒಂದು ಜೀವನಯಾತ್ರೆಯಲ್ಲಿ ದೀನದಯಾಳರ ಸ್ಥಾನಮಾನ ಏನು? ಈ ಪ್ರಶ್ನೆಗೆ ಉತ್ತರ ತಿಳಿಯಲು ನಾವು ನವೀನ ತಂತ್ರಜ್ಞಾನದಲ್ಲಿ ಮಾನವ ಸಾಧಿಸಿರುವ ವಿಕ್ರಮ ಹಾಗೂ ಗ್ರಾಹಕರ ಹಿತಾಸಕ್ತಿ ಆಧಾರಿತ ಪಾಶ್ಚಾತ್ಯ ನಾಗರಿಕತೆಗೆ ಭಾರತದ ಪ್ರತಿಕ್ರಿಯೆ, ಪ್ರತಿ ಮನೋವೃತ್ತಿಗಳೇನು ಎಂಬುದನ್ನು ಅಧ್ಯಯನ ಮಾಡಬೇಕಾಗುತ್ತದೆ. ಭಾರತ ಇದಕ್ಕೆ ಮುಖಾಮುಖಿಯಾದ ಹತ್ತೊಂಬತ್ತನೆ ಶತಮಾನದ ಮಧ್ಯಕಾಲ–ಹಿಂದಲೇ ನಾವು ಈ ಅಧ್ಯಯನವನ್ನು ಆರಂಭಿಸಬಹುದು.

೧೮೫೯ನೇ ವರ್ಷ, ಭಾರತದ ಇತಿಹಾಸದಲ್ಲಿ, ಅಷ್ಟೇಕೆ ಪ್ರಪಂಚದ ಚರಿತ್ರೆಯಲ್ಲೇ ಒಂದು ಪರ್ವಕಾಲ. ಈ ವರ್ಷ ಭಾರತದಲ್ಲಿನ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಹಳೆಯ ರಾಜಕೀಯ ವ್ಯವಸ್ಥೆ ನಡೆಸಿದ ಸಂಘಟಿತ ಮಿಲಿಟರಿ ಪ್ರಯತ್ನಗಳು ಮಣ್ಣುಗೂಡಿದ್ದವು. ೧೭೫೭ರಲ್ಲಿ ಪ್ಲಾಸಿ ಕದನದೊಂದಿಗೆ ಶುರುವಾದ ಭಾರತದ ಮೇಲಣ ರಾಜಕೀಯ ಹಾಗೂ ಮಿಲಿಟರಿ ವಿಜಯದ ಪ್ರಕ್ರಿಯೆ ಈ ವೇಳೆಗೆ ಕೊನೆಯ ಅಂಕಕ್ಕೆ ಬಂದು ನಿಂತಿತ್ತು. ಇದೇ ವರ್ಷ (೧೮೫೯) ಬ್ರಿಟನ್ನಿನ ಪ್ರಸಿದ್ಧ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್, ಜೈವಿಕ ಪ್ರಪಂಚದ ವಿಕಾಸ ಸಿದ್ಧಾಂತವನ್ನು ಪ್ರಕಟಿಸಿದ್ದ. 'ಅಸ್ತಿತ್ವಕ್ಕಾಗಿ ಹೋರಾಟ' ಮತ್ತು 'ಅರ್ಹತಮದ ಉಳಿವು' (ಉಳಿಯುವ ಸಾಮರ್ಥ್ಯ ಉಳ್ಳವರೇ ಉಳಿಯುತ್ತಾರೆ) ಎಂಬೆರಡು ಸೂತ್ರಗಳನ್ನು ಆಧರಿಸಿದ ವಿಕಾಸ ಸಿದ್ಧಾಂತವಿದು. ಈ ಸಿದ್ಧಾಂತ ಒಂದು ರೀತಿಯಲ್ಲಿ ಸಮಕಾಲೀನ ಐರೋಪ್ಯ ಚಿಂತನೆಯ ಪ್ರತಿಬಿಂಬ.

ತನ್ನ ಮಹತ್ತರ ಸಾಧನೆಗಳಾದ ವೈಜ್ಞಾನಿಕ ಮತ್ತು ಕೈಗಾರಿಕಾ ಕ್ರಾಂತಿ ಮತ್ತು ಸಾಮ್ರಾಜ್ಯ ವಿಸ್ತರಣೆಯ ವಿಜಯಗಳಿಂದ ಚಕಿತಗೊಂಡಿದ್ದ ಯೂರೋಪ್ ತಾನು ವಿಶ್ವ ನಾಗರಿಕತೆಯ ಶೃಂಗಸದೃಶ ಹಂತವನ್ನು ಪ್ರತಿನಿಧಿಸುತ್ತಿರುವುದಾಗಿ ನಂಬಿತ್ತು. ಆವಿಶಕ್ತಿಯ ಆವಿಷ್ಕಾರ ಹಬೆಯಂತ್ರಕ್ಕೆ, ಟೆಲಿಗ್ರಾಫ್ ವ್ಯವಸ್ಥೆಗೆ, ವಿದ್ಯುಚ್ಛಕ್ತಿಗೆ, ಬೃಹತ್ ಯಂತ್ರಗಳಿಗೆ ಹಾಗೂ ಭಾರಿ ಕೈಗಾರಿಕೋದ್ಯಮಗಳಿಗೆ ಜನ್ಮ ಕೊಟ್ಟಿತ್ತು. ಇವುಗಳ

ಜೊತೆಗೆ ಉತ್ಪಾದನೆ, ಸಾರಿಗೆ ಸಂಪರ್ಕ ಮತ್ತು ಸಂವಹನ ಸಾಧನಗಳಿಂದ ಸಜ್ಜುಗೊಂಡ ಯೂರೋಪ್ ವಿಶ್ವದಾದ್ಯಂತ ತನ್ನ ವಸಾಹತುಗಳನ್ನು, ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿತು. ನಿಜವಾದ ಅರ್ಥದಲ್ಲಿ ಯೂರೋಪ್ ತನ್ನ ಕಣ್ಣಿಗೆ ಬಿದ್ದುದೆಲ್ಲದರ ಒಡೆಯನಾಯಿತು. ಈ ಪ್ರಭುತ್ವವನ್ನು ಎದುರಿಸಿ ನಿಲ್ಲುವವರು ಯಾರೂ ಇಲ್ಲ ಎನ್ನುವಂತಾಯಿತು.

ಈ ಐಹಿಕ ಪ್ರಪಂಚದ ಸಾಧನೆಗಳೊಟ್ಟಿಗೇ ಹೊಸ ಹೊಸ ವಿಚಾರಗಳು, ಪರಿಕಲ್ಪನೆಗಳು, ಘೋಷಣೆಗಳು ಹುಟ್ಟಿಕೊಂಡವು. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವ ಕುರಿತ ಮಾನವನ ಚಿರಂತನ ಆಸೆ ಆಕಾಂಕ್ಷೆಗಳಿಗೆ, ಹಂಬಲಗಳಿಗೆ, ಅಮೇರಿಕದ ಸ್ವಾತಂತ್ರ್ಯ ಮತ್ತು ಫ್ರೆಂಚ್ ಕ್ರಾಂತಿ ಹೊಸ ದೃಷ್ಟಿಕೋನವನ್ನು ನೀಡಿದವು. ಹೊಸದಿಕ್ಕು ದಿಶೆಗಳನ್ನು ತೋರಿದವು. ಬಂಡವಾಳಶಾಹಿ, ಸಮಾಜವಾದ, ಪ್ರಜಾಪ್ರಭುತ್ವ, ರಾಷ್ಟ್ರೀಯತೆ, ಜಾತ್ಯತೀತತೆಯಂಥ ಹೊಸ ತತ್ವ, ಸಿದ್ಧಾಂತಗಳು ರೂಪುಗೊಳ್ಳ ತೊಡಗಿದವು. ಕೈಗಾರಿಕೀಕರಣ ಮತ್ತು ಬಂಡವಾಳಶಾಹಿಯ ಶೋಷಣೆಯ ಗುಣಲಕ್ಷಣಗಳಿಗೆ ಪ್ರತಿಕ್ರಿಯೆಯಾಗಿ, ಪ್ರತಿಮನೋವೃತ್ತಿಯಾಗಿ ಕಾರ್ಲ್ ಮಾರ್ಕ್ಸ್ ೧೮೪೮ರಲ್ಲಿ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಪ್ರಕಟಿಸಿದ. ಪ್ರಾಕ್ತನಶಾಸ್ತ್ರ, ಜನಾಂಗಶಾಸ್ತ್ರ, ಮಾನವ ಮಾಪನ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ರಾಜಕೀಯ, ಭಾಷಾಶಾಸ್ತ್ರ ಮೊದಲಾದ ಜ್ಞಾನ ಶಾಖೆಗಳು ಹುಟ್ಟಿಕೊಂಡವು. ಪ್ರಪಂಚದ ಹಾಗೂ ಮನುಷ್ಯನ ಪ್ರಕೃತಿ, ಸ್ವಭಾವಗಳ ಬಗ್ಗೆ ತನ್ನದೇ ಆಖೈರು ನಿರ್ಣಯ ಎಂದು ಐರೋಪ್ಯ ಬುದ್ಧಿ ಮತ್ತೆ ಬೀಗಲಾರಂಭಿಸಿತ್ತು.

ಬ್ರಿಟಿಷ್ ಸಾಮ್ರಾಜ್ಯದ ಈ ವಿಸ್ತರಣಾಕಾಂಕ್ಷೆ ಹೆಚ್ಚಿದಂತೆ ಭಾರತದಲ್ಲೂ ಅರ್ಜನಶೀಲ ಪ್ರವೃತ್ತಿಯ, ಪ್ರಾಬಲ್ಯ ಸ್ಥಾಪನೆಯ ಪ್ರವೃತ್ತಿಯ ನಾಗರಿಕತೆಯ ಬಿತ್ತನೆ ಪ್ರಾರಂಭವಾಯಿತು. ೧೮೫೭ರ ಸಿಪಾಯಿ ದಂಗೆಗೂ ಮೊದಲೇ ದೇಶದಲ್ಲಿ ಯಂತ್ರಚಾಲಿತ ಹಡಗುಗಳು ಮತ್ತು ರೈಲ್ವೆ ಎಂಜಿನ್ನುಗಳು ಹಾಗೂ ಟೆಲಿಗ್ರಾಫ್ ಸಂಪರ್ಕ ಸಾಧನಗಳು ಪ್ರತ್ಯಕ್ಷವಾಗಿ ಕಲ್ಕತ್ತ ನಗರ ಮತ್ತು ಪೆಷಾವರ್, ಮುಂಬಯಿ, ಮದರಾಸುಗಳ ನಡುವೆ ಸಂಬಂಧ ತಂತುವಾಗಿದ್ದವು. ಅತಿದೂರದ ಊರುಗಳಲ್ಲಿ ಕುಳಿತಿರುವವರ ಮಧ್ಯೆ ಸಣ್ಣ ತಂತಿಯೊಂದು ಮಾತಿನ ಸಂಪರ್ಕ ಸಾಧನವಾಗ –ಬಹುದೆಂಬುದು ಆ ಕಾಲದ ಭಾರತೀಯ ಮನಸ್ಸುಗಳಿಗೆ ಕಲ್ಪನಾತೀತವಾದ ಸಂಗತಿಯಾಗಿತ್ತು. ಎಫ್ ಜಿ ಸಿ ಹಿರೇನ್‌ಷಾ ಎಂಬ ಬ್ರಿಟಿಷ್ ಲೇಖಕ ತನ್ನ 'ದಿ ಇಫ್ಸ್ ಆಫ್ ಹಿಸ್ಟರಿ' ಗ್ರಂಥದಲ್ಲಿ ಭಾರತದ ಚರಿತ್ರೆಯ ಮೇಲೆ ಈ ಮಹತ್ವದ ಸಂಗತಿಗಳ ಪ್ರಭಾವ, ಪರಿಣಾಮಗಳನ್ನು ನಿರೂಪಿಸಿದ್ದಾನೆ. 'ಐವತ್ತರ ದಶಕದಲ್ಲಿ ವಿದ್ಯುತ್ ಟೆಲಿಗ್ರಾಫ್ ಇಲ್ಲದಿದ್ದಲ್ಲಿ.....' ಎನ್ನುವ ಹತ್ತೊಂಬತ್ತನೆಯ ಅಧ್ಯಾಯದಲ್ಲಿ ಅವನು ಹೀಗೆ ಬರೆದಿದ್ದಾನೆ.

> "ಆಗ ಭಾರತದಲ್ಲಿದ್ದ ಬ್ರಿಟಿಷ್ ಪಡೆಗಳ ಸಂಖ್ಯೆ ೪೫೦೦ ಮಂದಿ. ಸಿಪಾಯಿಗಳಾದರೋ ೨,೫೦,೦೦೦ ಮಂದಿ ಇದ್ದರು. ಟೆಲಿಗ್ರಾಫ್ ಅಳವಡಿಕೆಗೆ ಮುನ್ನ ಸಿಪಾಯಿ ದಂಗೆ ಸಂಭವಿಸಿದ್ದಿದ್ದರೆ ಗಂಗಾ ನದಿ ಕಣಿವೆ ಪ್ರದೇಶದಲ್ಲಿದ್ದ ಬ್ರಿಟಿಷ್ ನಿವಾಸಿಗಳನ್ನು ಮಿಲಿಟರಿಯವರು, ಸಿವಿಲಿಯನ್ನರು ಸೇರಿದಂತೆ ಯಾರನ್ನೂ ಜೀವಂತ ಪಾರುಮಾಡುವುದು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ; ಬಂಗಾಳ ಮತ್ತು ಔಧ್‌ನಲ್ಲಿ ಬ್ರಿಟಿಷ್ ಆಡಳಿತದ ನಿಷ್ಕ್ರಮಣವನ್ನು ತಪ್ಪಿಸುವುದು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ: ತಾತ್ಕಾಲಿಕವಾಗಿಯೂ ಬ್ರಿಟಿಷ್ ಆಧಿಪತ್ಯದ ನಿರ್ಮೂಲನವನ್ನು ತಪ್ಪಿಸುವುದು ಸಾಧ್ಯವಾಗುತ್ತಿರಲಿಲ್ಲ"

(ಪುಟ ೧೫೬)



> "ಟೆಲಿಗ್ರಾಫ್ ಮಾರ್ಗಗಳನ್ನು ಕಡಿದು ಹಾಕುವುದು ದಂಗೆಕೋರರಿಗೆ ಸಾಧ್ಯವಾಗಿರಲಿಲ್ಲ. ಟೆಲಿಗ್ರಾಫ್ ಸಂಪರ್ಕ ಸಾಧನದ ಮೂಲಕವೇ ಗೌರ್ನರ್ ಜನರಲ್ ಲಾರ್ಡ್ ಕ್ಯಾನಿಂಗ್ ಇಂಗ್ಲೆಂಡಿನಿಂದ ಹೆಚ್ಚುವರಿ ಸೈನ್ಯವನ್ನು ಕರೆಸಿಕೊಂಡರು. ಮದ್ರಾಸ್, ಲಂಡನ್, ಬರ್ಮಾಗಳಿಂದ ಅತಿಕ್ಷಿಪ್ರದಲ್ಲಿ ಸೇನಾ ತುಕಡಿಗಳನ್ನು ಕರೆಸಿಕೊಳ್ಳುವುದು ಟೆಲಿಗ್ರಾಫ್ ಸಂಪರ್ಕದಿಂದಾಗಿಯೇ ಲಾರ್ಡ್ ಕ್ಯಾನಿಂಗ್ ಅವರಿಗೆ ಸಾಧ್ಯವಾಯಿತು. ಜೊತೆಗೆ ಪರ್ಷಿಯಾಕ್ಕೆ ಜನರಲ್ ಔಟ್ರಾಮ್ ಸೇನಾಧಿಪತ್ಯದಲ್ಲಿ ಕಳುಹಿಸಲಾಗಿದ್ದ ಪ್ರಬಲ ಸೇನಾಪಡೆಯನ್ನು ಕರೆಸಿಕೊಳ್ಳುವ ಸ್ಥಿತಿಯಲ್ಲಿ ಅವರಿದ್ದರು. ಆದರೆ ಅತ್ಯಂತ ನಿರ್ಣಾಯಕವಾಗಿ ಕೆಲಸಮಾಡಿದ್ದು ಲಾರ್ಡ್ ಕ್ಯಾನಿಂಗರ ನಿರೋಧಕ ಸಾಮರ್ಥ್ಯ, ತಡೆಯುವ ಶಕ್ತಿ. ಅವರು ಸಿಂಗಪುರಕ್ಕೆ ತಂತಿ ಮೂಲಕ ಅನುಲ್ಲಂಘನೀಯ ಸಂದೇಶವೊಂದನ್ನು ಕಳುಹಿಸಿ, ಚೀನಾದಲ್ಲಿನ ಕ್ಷೋಭೆಯನ್ನು ಹತ್ತಿಕ್ಕಲು ಲಾರ್ಡ್ ಎಲ್ಜಿನ್ ಸೇನಾಧಿಪತ್ಯದಲ್ಲಿ ರವಾನಿಸಲಾಗುತ್ತಿದ್ದ ಐದುಸಾವಿರ ಸೈನಿಕರನ್ನೊಳಗೊಂಡ ಸುಸಜ್ಜಿತ ಸೇನಾಪಡೆಯನ್ನು ಕರೆಸಿಕೊಂಡರು. ತಂತಿ ಮೂಲಕ ಸಮಾಚಾರ ರವಾನಿಸಿ ಕೇಪ್ ಕಾಲನಿಯಿಂದಲೂ ಎರಡು ತುಕಡಿ ಫಿರಂಗಿ ದಳವನ್ನೂ ಕುದುರೆಗಳು, ಸಾಮಗ್ರಿಗಳು ಹಾಗೂ ೬೦ ಸಾವಿರ ಪೌಂಡ್ ಚಿನ್ನವನ್ನೂ ತರಿಸಿಕೊಂಡರು"

(ಪುಟ ೧೫೬–೧೫೭)

ತಾಂತ್ರಿಕ ಆವಿಷ್ಕಾರಗಳ ಜೊತೆಗೆ ಭಾರತದಲ್ಲಿ ಆಡಳಿತ, ರೆವಿನ್ಯೂ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಐರೋಪ್ಯ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ೧೮೫೭ರಲ್ಲಿ ಮುಂಬಯಿ, ಕಲ್ಕತ್ತಾ ಮತ್ತು ಮದ್ರಾಸ್ ನಗರಗಳಲ್ಲಿ ಮೂರು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಯಿತು. ಇವು ಲಂಡನ್ನಿನ ವಿಶ್ವವಿದ್ಯಾನಿಲಯದ ಮಾದರಿಯಲ್ಲೇ ಇದ್ದವು. ಭಾರತದಾದ್ಯಂತ ಗಣ್ಯರ ಭಾಷೆಯಾಗಿ ಸಂಸ್ಕೃತದ ಸ್ಥಾನವನ್ನು ಇಂಗ್ಲಿಷ್ ಆಕ್ರಮಿಸಿತು. "ರಕ್ತಗತವಾಗಿ ಭಾರತೀಯರು, ಬಣ್ಣದಲ್ಲಷ್ಟೇ ಭಾರತೀಯರು. ಆದರೆ ಅಭಿರುಚಿ, ಆದರ್ಶ, ರೀತಿ–ನೀತಿಗಳಲ್ಲಿ ಭಾರತೀಯರು ಇಂಗ್ಲಿಷ್ ಆಗಬೇಕು" ಎನ್ನುವುದು ಮೆಕಾಲೆಯ ಕನಸು. ಅತ್ಯಂತ ಕಡಿಮೆ ಸಂಖ್ಯೆಯ ಭಾರತೀಯ ಪ್ರಭಾವಿ ವರ್ಗವೊಂದು ಈ ಕನಸಿನ ಮೂಸೆಯಲ್ಲಿ ರೂಪುಗೊಳ್ಳತೊಡಗಿತು.

'ಬಹುಮಾನದ ಪ್ರಲೋಭನೆ ಮತ್ತು ದಂಡದ ಶಿಕ್ಷೆಯ ಹೆದರಿಕೆ' ಬ್ರಿಟಿಷ್ ಸರ್ಕಾರದ ನೀತಿ. ೧೮೫೭ರ ಹೋರಾಟದಲ್ಲಿ ಬ್ರಿಟನ್ನಿನ ಈ ದೇಶದ್ರೋಹಿಗಳಿಗೆ ಯಥೇಚ್ಛವಾಗಿ ಪ್ರತಿಫಲ ನೀಡಲಾಯಿತು. ಆದರೆ ಸಾವಿರಾರು ಮಂದಿ ಸ್ವಾತಂತ್ರ್ಯ ಯೋಧರನ್ನು ಗುಂಡಿಟ್ಟು ಕೊಲ್ಲಲಾಯಿತು. ಹಾದಿ ಬೀದಿಗಳಲ್ಲಿನ ಮರಗಳಿಗೆ ನೇಣುಹಾಕಿ ಸಾಯಿಸಲಾಯಿತು. ಬ್ರಿಟಿಷರ ಮಿಲಿಟರಿ ಪ್ರಾಬಲ್ಯದ ಭಯ ಅಂಜಿಕೆಗಳು ಭಾರತೀಯರ ಎದೆಯನ್ನು ಹೊಕ್ಕಿತು. ಎದೆಗಳನ್ನು ನಡುಗಿಸಿತು. ಈ ಹೋರಾಟವನ್ನು ಬ್ರಿಟನ್ನಿನ ಲೇಖಕರು "ಬರ್ಬರತೆ ಮತ್ತು ನಾಗರಿಕತೆಗಳ ನಡುವಣ ಹೋರಾಟ. ಈ ಹೋರಾಟದಲ್ಲಿ ನಾಗರಿಕತೆ ಉಳಿಯಿತು." ಎಂದು ಬಣ್ಣಿಸಿರುವುದು ಸಹಜವಾಗಿಯೇ ಇದೆ. ಅವರ ದೃಷ್ಟಿಯಲ್ಲಿ ಈ ಹೋರಾಟ "ಅಸ್ತಿತ್ವಕ್ಕಾಗಿ ನಡೆದ ಹೋರಾಟವಾಗಿತ್ತು"; "ಉಳಿಯುವ ಸಾಮರ್ಥ್ಯವುಳ್ಳವರ ಉಳಿವಿನ ಹೋರಾಟದ" ಜೀವಂತ ನಿದರ್ಶನವಾಗಿತ್ತು.

ಸಂಕ್ಷಿಪ್ತವಾಗಿ ಹೇಳುವುದಾದರೆ, ೧೮೫೭ ಹಳೆಯ ವ್ಯವಸ್ಥೆಯ ಅವಸಾನವನ್ನೂ ಹೊಸದರ ಆಗಮನವನ್ನೂ ಸಾರಿದ ವರ್ಷವಾಗಿತ್ತು. ಪಾಶ್ಚಾತ್ಯ ನಾಗರಿಕತೆ, ಪಾಶ್ಚಾತ್ಯ ಸಂಸ್ಥೆ, ಪಾಶ್ಚಾತ್ಯ ಜ್ಞಾನ ಮತ್ತು ಆದರ್ಶ–ಸಿದ್ಧಾಂತಗಳ ಥಳುಕುಬಳುಕಿನ ಆಕರ್ಷಣೆಗಳು ಪಾಶ್ಚಾಮಾತ್ಯದ ಪಡಿಯಚ್ಚಿನಲ್ಲಿ ಭಾರತವನ್ನು ರೂಪುಗೊಳಿಸುತ್ತಿದ್ದವು. ಭಾರತದ ಪುನುರುತ್ಥಾನ ಸಾಧ್ಯವಾದೀತೆ? ಭಾರತದ ಮೇಲೆ ತಮ್ಮ ರಾಜಕೀಯ ಹಾಗೂ ಮಿಲಿಟರಿ ಅಧಿಪತ್ಯವನ್ನು ಸ್ಥಾಪಿಸಲು ಶತಮಾನಕಾಲ ಶ್ರಮಿಸಿದ ಬ್ರಿಟಿಷರನ್ನು ಭಾರತದಿಂದ ಓಡಿಸುವುದು ಸಾಧ್ಯವಾದೀತೆ? ಅದೂ ತನ್ನ ಆಳ್ವಿಕೆಯನ್ನು ಗಟ್ಟಿಗೊಳಿಸಿದ ನೂರು ವರ್ಷಗಳು ತುಂಬುವ ಮೊದಲೇ ಬ್ರಿಟಿಷ್‌ರನ್ನು ಭಾರತದಿಂದ ಹೊರ ದಬ್ಬುವುದು ಸಾಧ್ಯವಾದೀತೆ? ಇವೆಲ್ಲ ಆ ಕಾಲಕ್ಕೆ ಯಾರ ಕಲ್ಪನೆಗೂ ಮೀರಿದ, ಊಹಾತೀತವಾದ ಪ್ರಶ್ನೆಗಳಾಗಿದ್ದವು. ಈ ಪವಾಡಕ್ಕೆ ಏನನ್ನೋಣ? ಈ ಪವಾಡ ಹೇಗೆ ಸಾಧ್ಯವಾಯಿತು.

ಭೌತಿಕವಾಗಿ ಪರಾಜಿತವಾದರೂ ಆಧ್ಯಾತ್ಮಿಕವಾಗಿ ಶಕ್ತಿಶಾಲಿಯಾಗಿದ್ದ ಭಾರತ ಮಾತೆ ಸಾವಿರಾರು ಮಂದಿ ಸಾಧು ಸಂತರು. ಚಿಂತಕರು ಮತ್ತು ತತ್ತ್ವವೇತ್ತರಿಗೆ ಜನ್ಮಕೊಟ್ಟ ತಾಯಿ. ದೇವೇಂದ್ರನಾಥ ಠಾಕೂರ್ (೧೮೧೭), ಸ್ವಾಮಿ ದಯಾನಂದ (೧೮೨೪), ರಾಜನಾರಾಯಣ ಬೋಸ್ (೧೮೨೬), ರಾಮಕೃಷ್ಣ ಪರಮಹಂಸ (೧೮೩೬), ಬಂಕಿಮಚಂದ್ರ ಚಟ್ಟೋಪಾಧ್ಯಾಯ (೧೮೩೮), ಬಾಲಗಂಗಾಧರ ತಿಲಕರು (೧೮೫೬), ಬಿಪಿನ್ ಚಂದ್ರ ಪಾಲ್ (೧೮೫೮), ಮಹಾತ್ಮಗಾಂಧಿ (೧೮೬೯) ಮತ್ತು ಶ್ರೀ ಅರಬಿಂದೊ (೧೮೭೨) ಇವರೆಲ್ಲ ಪಾಶ್ಚಾತ್ಯ ಸಿದ್ಧಾಂತಗಳು ಹಾಗೂ ಸಂಘ ಸಂಸ್ಥೆಗಳು ಸಾಧಿಸಲೆತ್ನಿಸಿದ ಪ್ರಾಬಲ್ಯದ  ವಿರುದ್ಧ ಸೆಡ್ಡು ಹೊಡೆದು ನಿಂತ ಭಾರತದ ಸಂಕೇತಗಳಾದರು. ದೇವೇಂದ್ರನಾಥರು ತತ್ವ ಬೋಧಿನಿ ಸಭಾವನ್ನು, ಸ್ವಾಮಿ ದಯಾನಂದರು ಆರ್ಯ ಸಮಾಜವನ್ನು ಸ್ಥಾಪಿಸಿದರು. ಇದನ್ನು ಹಿಂದೂ ಮೇಳ ಅಥವಾ ರಾಷ್ಟ್ರೀಯ ಮೇಳ ಎಂದೂ ಕರೆಯಲಾಗುತ್ತಿತ್ತು. ರಾಮಕೃಷ್ಣ ಪರಮಹಂಸರು ಪಾಶ್ಚಾತ್ಯವಾದುದೆಲ್ಲದರ ವಿರೋಧ ಪ್ರಮೇಯುವಾಗಿದ್ದರು ಹಾಗೂ ಪೌರ್ವಾತ್ಯವಾದುದೆಲ್ಲದರ ಸಜೀವ ಸಂಯೋಗವಾಗಿದ್ದರು ಸಮನ್ವಯಕಾರರಾಗಿದ್ದರು. ಬಂಕಿಮಚಂದ್ರ ಚಟ್ಟೋಪಾಧ್ಯಾಯರು 'ವಂದೇಮಾತರಂ' ರಾಷ್ಟ್ರಗೀತೆಯನ್ನು ರಚಿಸಿದರು. ತಿಲಕರು ಸಮ್ಯಕ್ ಜನಜಾಗೃತಿ ಉಂಟುಮಾಡುವ ಹೊಸ ಹೊಸ ತಂತ್ರಗಳನ್ನು ಸೃಷ್ಟಿಸಿದರು – 'ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು" ಎನ್ನುವ ಘೋಷಣೆಯನ್ನು ಕೊಟ್ಟರು.

೧೮೫೭ ಭಾರತಕ್ಕೆ ಪರಾಜಯದ ವರ್ಷವಾದರೆ, ೧೮೯೩ ಭಾರತಕ್ಕೆ ಪುನಶ್ಚೇತನ ತಂದುಕೊಟ್ಟ ವರ್ಷ, ಪುನರುತ್ಥಾನದ ವರ್ಷ. ರಾಮಕೃಷ್ಣ ಪರಮಹಂಸರ ಯುವ ಶಿಷ್ಯರಾದ ವಿವೇಕಾನಂದರು ೧೮೯೩ರಲ್ಲಿ ಅಮೇರಿಕಕ್ಕೆ ಹೋಗಿ ಶಿಕಾಗೋದ ಸರ್ವಧರ್ಮ ಪರಿಷತ್ತಿನ ವೇದಿಕೆಯಲ್ಲಿ ಪಾಶ್ಚಾತ್ಯ ಐಹಿಕತೆಯ ಮೇಲೆ ಭಾರತದ ಆಧ್ಯಾತ್ಮಿಕ ಪಾರಮ್ಯವನ್ನು ಸ್ಥಾಪಿಸಿದರು. ಇದೇ ವರ್ಷ ಅರವಿಂದರು ಇಂಗ್ಲೆಂಡಿನಿಂದ ಭಾರತಕ್ಕೆ ವಾಪಸಾದರು. ಅರವಿಂದರ ತಂದೆ ಕೃಷ್ಣಧನ ಘೋಷರು ಪಾಶ್ಚಾತ್ಯ ನಾಗರಿಕತೆಯೇ ಶ್ರೇಷ್ಠವಾದುದೆಂದು ಮನಗಂಡು ಮಗನನ್ನು ಭಾರತೀಯ ಸಂಸ್ಕಾರಗಳಿಂದ ದೂರವಿಟ್ಟು ಇಂಗ್ಲೆಂಡಿಗೆ ಕಳುಹಿಸಿದ್ದರು. ಆರು ವರ್ಷದ



ಬಾಲಕನಾಗಿದ್ದಾಗಲೇ ಅರವಿಂದರನ್ನು ಇಂಗ್ಲೆಂಡಿಗೆ ಕಳುಹಿಸಿ ಇಂಗ್ಲಿಷ್ ಕುಟುಂಬವೊಂದರಲ್ಲಿ ಇರಿಸಿ, ಅತ್ಯುತ್ತಮವಾದ ಪಾಶ್ಚಾತ್ಯ ಶಿಕ್ಷಣದ ವ್ಯವಸ್ಥೆಮಾಡಿದ್ದರು. ಹೀಗೆ ಮಾತೃಭಾಷೆ ಮತ್ತು ಸಾಂಸ್ಕೃತಿಕ ಪರಿಸರದಿಂದ ವಂಚಿತರಾದ ಅರವಿಂದರು ಇಂಗ್ಲಿಷ್‌ನಲ್ಲಿ ಕಾವ್ಯ ರಚನೆ ಆರಂಭಿಸಿದ್ದರು. ಐರೋಪ್ಯ ಶಾಸ್ತ್ರೀಯ ಭಾಷೆಗಳು ಮತ್ತು ಸಾಹಿತ್ಯದಲ್ಲಿ ಪ್ರಭುತ್ವ ಸಂಪಾದಿಸಿದ್ದ ಅರವಿಂದರು ಹಡಗಿನಿಂದಿಳಿದು ಭಾರತದ ನೆಲದಲ್ಲಿ ಕಾಲಿಟ್ಟ ಕ್ಷಣದಲ್ಲೇ ಅವರು ಪರಿವರ್ತನೆ ಹೊಂದಿದ್ದರು. ಭಾರತಕ್ಕೆ ವಾಪಸಾದ ನಂತರ ಅವರು ಬರೆದ 'ಹಳಬರಿಗೆ ಹೊಸಬೆಳಕು' ಲೇಖನ ಮಾಲೆಯಲ್ಲಿ ಬ್ರಿಟಿಷ್ ಆಳ್ವಿಕೆ ವಿರುದ್ಧ ಭಾರತದ ಹೋರಾಟ ಕೇವಲ ರಾಜಕೀಯ ಫಲಿತಕ್ಕಾಗಿ ನಡೆಸಿರುವ ಹೋರಾಟವಲ್ಲ ಅದೊಂದು ನಾಗರಿಕ ಹೋರಾಟವೆಂದು ಘೋಷಿಸಿದ್ದರು. ಇದೇ ವರ್ಷ ಐರಿಷ್ ಮಹಿಳೆ ಆ್ಯನಿಬೆಸೆಂಟ್ ಭಾರತದಿಂದ ಆಕರ್ಷಿತರಾದರು. ಹಿಂದೂ ಮಹಿಳೆಯರಂತೆ ವೇಷಭೂಷಣ ಧರಿಸುತ್ತಿದ್ದ ಆ್ಯನಿಬೆಸೆಂಟ್ ಸಾಂಸ್ಕೃತಿಕ ಕ್ಷೇತ್ರದಲ್ಲಿ, ಸಂಸ್ಕೃತಿ ತತ್ತ್ವಸಿದ್ಧಾಂತಗಳಲ್ಲಿ ಭಾರತ ಪಾಶ್ಚಾತ್ಯರಿಂದ ಕಲಿಯುವಂಥಾದ್ದೇನಿಲ್ಲವೆಂದು ಘೋಷಿಸಿದರು. ಪಾಶ್ಚಾತ್ಯರೇ ಭಾರತದಿಂದ ಕಲಿಯಬೇಕಾದ್ದು ಬಹಳಷ್ಟಿದೆ ಎಂದೂ ಅವರು ಕಂಠೋಕ್ತವಾಗಿ ನುಡಿದಿದ್ದರು. ಇದೇ ವರ್ಷದಲ್ಲೇ (೧೮೯೩) ಇಂಗ್ಲಿಷ್ ಶಿಕ್ಷಣ ಪಡೆದಿದ್ದ ಗಣಿತದ ಪ್ರೊಫೆಸರ್ ಬಾಲಗಂಗಾಧರ ತಿಲಕರು ಸಾಂಪ್ರದಾಯಿಕ ಗಣೇಶನ ಹಬ್ಬಕ್ಕೆ ಹೊಸ ದೃಷ್ಟಿಕೋನ ಕೊಟ್ಟು ಗಣೇಶೋತ್ಸವವನ್ನು ಜನಜಾಗೃತಿಯ ಸಾಧನವಾಗಿ ಪರಿವರ್ತಿಸಿದರು. ತಮ್ಮ ಜೀವನದ ಪರಮಧ್ಯೇಯವಾದ ಸ್ವರಾಜ್ಯ ಸಾಧನೆಗಾಗಿ ಜನಜಾಗೃತಿಯುಂಟು ಮಾಡಲು ಈ ಹಬ್ಬವನ್ನು ಬಳಸಿಕೊಂಡರು. ಕುತೂಹಲದಾಯಕ ಅಂಶವೆಂದರೆ, ಇದೇ ವರ್ಷವೇ ಇಂಗ್ಲೆಂಡಿನಲ್ಲಿ ಶಿಕ್ಷಣ ಪಡೆದ ತರುಣ ವಕೀಲ ಮೋಹನದಾಸ್ ಕರಂಚಂದ್ ಗಾಂಧಿಯವರು ಭಾರತದಲ್ಲಿ ಸಾಧಿಸಲಾಗದ ಯಶಸ್ಸನ್ನು, ಭವ್ಯ ಭವಿಷ್ಯವನ್ನು ಅರಸುತ್ತ ದಕ್ಷಿಣ ಆಫ್ರಿಕಾಗೆ ಪ್ರಯಾಣ ಬೆಳೆಸಿದ್ದು. ಇದು ಮಹಾತ್ಮಗಾಂಧಿಯ ಅವತಾರಕ್ಕೆ ಹಾದಿ ಸುಗಮ ಮಾಡಿಕೊಟ್ಟಿತು.

ಒಂದೇ ವರ್ಷದಲ್ಲಿ (೧೮೯೩) ಇಷ್ಟೆಲ್ಲ ಮಹತ್ವಪೂರ್ಣ ಘಟನೆಗಳು ಸಂಭವಿಸಿದ್ದು ಒಂದು ಐತಿಹಾಸಿಕ ಯೋಗಾಯೋಗವಿರಬಹುದು ಎನ್ನಲಾದೀತೆ? ೧೮೯೩ ರಿಂದ ಭಾರತ ಕೇವಲ ರಾಜಕೀಯ ಲಾಭಗಳಿಗಾಗಿ ಅಥವಾ ಆರ್ಥಿಕ ಅಭ್ಯುದಯಕ್ಕಾಗಿ ಮಾತ್ರವೇ ಹೋರಾಟ ನಡೆಸಲಿಲ್ಲ. ಈ ಅವಧಿಯ ಹೋರಾಟ ಆತ್ಮಾನ್ವೇಷಣೆಯ, ಆತ್ಮಾಭಿವ್ಯಕ್ತಿಯ, ಸಾಂಸ್ಕೃತಿಕ ಸ್ವಾತಂತ್ರ್ಯದ ಹೋರಾಟವಾಗಿತ್ತು. ಅದೊಂದು ಭಾರತದ ನಿಯತಿ ಸಾಧನೆಯತ್ತ ನಡೆಸಿದ ಪಯಣವಾಗಿತ್ತು. ಈ ವಿಧಿ, ಈ ನಿಯತಿ, ವಿವೇಕಾನಂದರ ಮಾತುಗಳಲ್ಲೇ ಹೇಳುವುದಾದರೆ "ಭಾರತದಲ್ಲಿ ವಿಶ್ವಕ್ಕೊಂದು ಸಂದೇಶ"ವಿತ್ತು.

ಭಾರತದಲ್ಲಿ ಉಂಟಾದ ಈ ಜಾಗೃತಿ ೧೯೦೫–೧೯೦೮ರ ಸ್ವದೇಶಿ ಚಳವಳಿಯಲ್ಲಿ ಸಂಪೂರ್ಣವಾಗಿ ಪ್ರಕಟಗೊಂಡಿತು. ಬಂಗಾಳವನ್ನು ವಿಭಜಿಸುವ ಸಾಮ್ರಾಜ್ಯಶಾಹಿ ನಿರ್ಧಾರಕ್ಕೆ ಪ್ರಕ್ರಿಯೆಯಾಗಿ ಹೊರಹೊಮ್ಮಿದ ಈ ಚಳವಳಿ, ಸ್ವದೇಶಿ–ಸ್ವರಾಜ್ ಮತ್ತು ವಂದೇಮಾತರಂ ಘೋಷಣೆಗಳೊಂದಿಗೆ ಖಚಿತವಾದ ಗುಣಲಕ್ಷಣವನ್ನು ಪಡೆದುಕೊಂಡಿತು. ಈ ಚಳವಳಿ ಭಾರತೀಯ ರಂಗಕ್ಕೆ ಲಾಲ–ಬಾಲ್–ಪಾಲ್ ತ್ರಿಮೂರ್ತಿಗಳನ್ನು ಪರಿಚಯಿಸಿತು. ಈ ತ್ರಿಮೂರ್ತಿಗಳು ಜಾಗೃತಿಯ ಅಖಿಲಭಾರತ

ಸ್ವರೂಪದ ಸಂಕೇತದಂತಿದ್ದರು. ಅಷ್ಟೇ ಅಲ್ಲದೆ ಮೂರು ಪ್ರತ್ಯೇಕ ವಾಹಿನಿಗಳ ಸಮನ್ವಯಕಾರರೂ ಆಗಿದ್ದರು. ತಿಲಕರ ಮೂಲಕ ಮಹಾರಾಷ್ಟ್ರ ಧರ್ಮ, ಬಿಪಿನ್‌ಚಂದ್ರಪಾಲ್ ಮೂಲಕ ಬ್ರಹ್ಮ ಸಮಾಜ ಹಾಗೂ ಲಾಲಾ ಲಜಪತ ರಾಯ್ ಮೂಲಕ ಆರ್ಯಸಮಾಜ ಈ ಮೂರು ಪ್ರತ್ಯೇಕವಾಹಿನಿಗಳ ಸಂಯೋಗವಾಗಿತ್ತು. ಈ ಚಳವಳಿ ಭಾರತದಾದ್ಯಂತ ರಾಷ್ಟ್ರಭಕ್ತಿ ಭಾವಗಳ ಸಂವೇದನೆಯನ್ನು ಕೆರಳಿಸಿತು. ದೇಶದ ಮೂಲೆ ಮೂಲೆಗಳಿಂದ ರಾಷ್ಟ್ರಭಕ್ತ ಯುವಕರನ್ನು ಸೆಳೆಯಿತು. ಮದರಾಸಿನ ಸುಬ್ರಹ್ಮಣ್ಯ ಭಾರತಿ ಮತ್ತು ವಿ.ವಿ.ಎಸ್. ಅಯ್ಯರ್, ಮಹಾರಾಷ್ಟ್ರದ ಸಾವರ್ಕರ್ ಸಹೋದರರು, ನಾಗಪುರದ ಕೇಶವ ಬಲಿರಾಮ ಹೆಡ್ಗೆವಾರ್, ರಾಮಕೃಷ್ಣ–ವಿವೇಕಾನಂದ ಚಳವಳಿಯ ಪ್ರತಿನಿಧಿ ಸಿಸ್ಟರ್ ನಿವೇದಿತಾ ಇವರಲ್ಲಿ ಪ್ರಮುಖರು. ಬಡಬ್ರಾಹ್ಮಣ ಕುಟುಂಬ ಯುವಕ ಹೆಡ್ಗೆವಾರ್ ೧೯೧೦ರಲ್ಲಿ ಕ್ರಾಂತಿಕಾರಿಗಳ ಭದ್ರಕೋಟೆಯಾದ ಕಲ್ಕತ್ತೆಗೆ ಹೋದರು. ಸ್ವಾಮಿ ದಯಾನಂದರ ಶಿಷ್ಯರಾದ ಗುಜರಾತಿನ ಮೇಧಾವಿ ಶ್ಯಾಮ್‌ಜಿ ಕೃಷ್ಣವರ್ಮ ಬಂಡಾಯವನ್ನು ಇಂಗ್ಲೆಂಡಿಗೇ ಒಯ್ದರು.

ಭಾರತದ ಆತ್ಮ ಪಾಶ್ಚಾತ್ಯ ಭಾಷೆಗಳಲ್ಲಿ, ಆಧುನಿಕ ನುಡಿಗಟ್ಟಿನಲ್ಲಿ ಅಭಿವ್ಯಕ್ತಿಗೊಳ್ಳುವ ಪ್ರಯತ್ನ ನಡೆಸಿತ್ತು. ಲೋಕಮಾನ್ಯ ತಿಲಕರು, ಮಂಡಲಾಯ್ ಕಾರಾಗೃಹದಲ್ಲಿ ಬಂದಿಯಾಗಿ 'ಗೀತಾರಹಸ್ಯ' ಬರೆಯಲಾರಂಭಿಸಿದ್ದರು. ಇದು ಭಗವದ್ಗೀತೆಗೆ ಬರೆದ ವ್ಯಾಖ್ಯಾನ. ಅಲೀಪುರ ಬಾಂಬ್ ಪಿತೂರಿ ಪ್ರಕರಣದಲ್ಲಿ ಬಿಡುಗಡೆ ಹೊಂದಿದ ಕೂಡಲೇ ಅರವಿಂದರು ೧೯೦೯ರಲ್ಲಿ ಉತ್ತರ ಪಾರಾದಲ್ಲಿ ಸುಪ್ರಸಿದ್ಧವಾದ ಭಾಷಣ ಮಾಡಿದರು. ಇದೇ ಕಾಲಕ್ಕೆ ಆಫ್ರಿಕಾದಲ್ಲಿ ಗಾಂಧೀಜಿಯವರು ಅಂಕುರಸ್ವರೂಪದ 'ಹಿಂದ್ ಸ್ವರಾಜ್' ರಚನೆಯಲ್ಲಿ ತೊಡಗಿದ್ದರು.

ಈ ಎಲ್ಲ ಪ್ರಯತ್ನಗಳು ಪ್ರತ್ಯೇಕ ಪ್ರತ್ಯೇಕವೆಂಬಂತೆ ಕಂಡರೂ ಇವು ಅದೇ ಸಂಚಲನ ಪ್ರಕ್ರಿಯೆಯ, ಅದೇ ಮಹತ್ವಾಕಾಂಕ್ಷೆ, ಅದೇ ದಾಹದ, ಅದೇ ಜೀವನ ಸಿದ್ಧಾಂತದ ಕುರುಹುಗಳಾಗಿದ್ದವು. ಈ ಪ್ರತ್ಯೇಕ ಪ್ರಯತ್ನಗಳು ನಮ್ಮ ಸ್ವಾತಂತ್ರ್ಯ ಹೋರಾಟದ ತತ್ವಸಿದ್ಧಾಂತಗಳಿಗೆ ಒಂದು ರೂಪಕೊಡುವ ಮಹತ್ಕಾರ್ಯವನ್ನು ಈಡೇರಿಸುತ್ತಿದ್ದವು. ಭಾರತದ ಸ್ವಾತಂತ್ರ್ಯ ಹೋರಾಟ ಕೇವಲ ರಾಜಕೀಯ ಸ್ವಾತಂತ್ರ್ಯಕ್ಕಾಗಿಯಲ್ಲ, ಅದು ನಮ್ಮ ಸಂಸ್ಕೃತಿಯ ಅಭಿವ್ಯಕ್ತಿಗೆ, ಅದರ ಸಾರ್ಥಕ ಅನುಸರಣೆಗೆ ನಡೆಸಿರುವ ಹೋರಾಟ ಎಂಬುದು ಇವರೆಲ್ಲರ ನಿಲುವಾಗಿತ್ತು. ಭಾರತ ಛಿದ್ರಛಿದ್ರವಾದ, ವಿಭಜನೆಗೊಂಡ ಪಾಶ್ಚಾತ್ಯ ಐಹಿಕ ನೀತಿ–ನಿಲುವುಗಳಲ್ಲಿ ಸಹಮತ ಹೊಂದಿರಲಿಲ್ಲ. ಯಾಂತ್ರಿಕತೆ ಮತ್ತು ಬಳಕೆದಾರರ ಹಿತರಕ್ಷಣೆ ಆಧಾರಿತ ಅಭಿವೃದ್ಧಿಯ ಮಾದರಿಯಲ್ಲಿ ಅಂಥ ಅನುಕರಣೆಗೆ ಭಾರತದ ಒಲವು ಇರಲಿಲ್ಲ. ಮಾನವನನ್ನು ಐಹಿಕದಿಂದ ಆಧ್ಯಾತ್ಮಿಕ ನೆಲೆಗೆ ಒಯ್ಯುವಂಥ ಸಮಗ್ರ ಜೀವನದೃಷ್ಟಿಯನ್ನು ಆಧರಿಸಿದ ಅಭಿವೃದ್ಧಿ ಭಾರತದ ಆದರ್ಶವಾಗಿತ್ತು. ಇಂಥ ತನ್ನದೇ ಆದ ಅಭಿವೃದ್ಧಿ ಮಾದರಿಯೊಂದನ್ನು ಸೃಜಿಸುವ ಕಾರ್ಯದಲ್ಲಿ ಭಾರತ ನಿರತವಾಗಿತ್ತು. ೧೯೧೫ರ ವೇಳೆಗೆ ಗಾಂಧೀಜಿ ನಿಯತ ಪುರುಷನಂತೆ ಭಾರತಕ್ಕೆ ವಾಪಸಾಗಿದ್ದರು. ನಮ್ಮ ಸ್ವಾತಂತ್ರ್ಯ ಸಿದ್ಧಾಂತ ಸ್ಪಷ್ಟವಾಗಿ ಹರಳುಗಟ್ಟಿತ್ತು. ಗಾಂಧೀಜಿಯವರು ಇದರ ವಕ್ತಾರರಾದರು, ಇದರ ಮೂರ್ತಿಸ್ವರೂಪರಾದರು.

ವೈದ್ಯಕೀಯ ವಿಜ್ಞಾನದ ವಿದ್ಯಾರ್ಥಿಯಾಗಿ ಕಲ್ಕತ್ತೆಯಲ್ಲಿ ಆರು ವರ್ಷಗಳನ್ನು



ಕಳೆದಿದ್ದ ಡಾ॥ ಹೆಡ್ಗೆವಾರ ಅವರು ೧೯೧೬ರಲ್ಲಿ ವೈದ್ಯರಾಗಿ ನಾಗಪುರಕ್ಕೆ ಹಿಂದಿರುಗಿದರು. ವೃತ್ತಿಯಿಂದ ವೈದ್ಯರಾದರೂ ವಾಸ್ತವದಲ್ಲಿ ಅವರೊಬ್ಬ ಸ್ವಾತಂತ್ರ್ಯ ಹೋರಾಟಗಾರ. ಬಂಗಾಳಿ ಕ್ರಾಂತಿಕಾರರ ಬಾಂಬ್ ಪಂಥದಲ್ಲಿ ನಂಬಿಕೆ ಹೊಂದಿದ್ದ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ನಾಗಪುರಕ್ಕೆ ವಾಪಸಾದ ಹೆಡ್ಗೆವಾರ್ ಅವರು ತಮ್ಮ ಬಡಕುಟುಂಬದ ಜೀವನ ನಿರ್ವಹಣೆಗಾಗಿ ಸಂಪಾದನೆಯ ಮಾರ್ಗ ಹಿಡಿಯದೆ ಲೋಕಮಾನ್ಯ ತಿಲಕರ ಅನುಯಾಯಿಯಾಗಿ ತಮ್ಮ ಪೂರ್ಣಸಮಯವನ್ನು ಸ್ವಾತಂತ್ರ್ಯ ಹೋರಾಟಕ್ಕೆ ಧಾರೆ ಎರೆದರು. ಅಂತೆಯೇ ಬಾಂಬ್ ಪಂಥದ ಕ್ರಾಂತಿ ಮಾರ್ಗದಲ್ಲೂ ತೊಡಗಿಕೊಂಡರು. ೧೯೨೦ರಲ್ಲಿ ವಿಧಿ ಲೋಕಮಾನ್ಯ ತಿಲಕರನ್ನು ಇಹಲೋಕದಿಂದ ಸೆಳೆದುಕೊಂಡಾಗ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ವಹಿಸಿಕೊಂಡರು. ರಾಷ್ಟ್ರವ್ಯಾಪಿ ಸತ್ಯಾಗ್ರಹಕ್ಕೆ ಕರೆ ನೀಡಿದರು. ಈ ಸತ್ಯಾಗ್ರಹ ಅಸಹಕಾರ ಚಳವಳಿ ಎಂದು ಖ್ಯಾತಿ ಪಡೆಯಿತು. ತಿಲಕರ ಶಿಷ್ಯರಾದ, ಕ್ರಾಂತಿಕಾರಿ ಹೆಡ್ಗೆವಾರ್ ಅಸಹಕಾರ ಚಳವಳಿಗೆ ಧುಮುಕಿದರು. ಜೈಲಿಗೆ ಹೋದರು. ಗಾಂಧೀಜಿಯವರ ರಾಜಕೀಯ ವ್ಯೂಹಗಳ ಒಳಹೊಕ್ಕು ನೋಡಿದರು. ಹೀಗೆ ಹೆಡ್ಗೆವಾರ್ ಅವರು ಬಂಗಾಳದ ಕ್ರಾಂತಿಕಾರಿ ಪಂಥ ಮತ್ತು ಗಾಂಧೀಜಿಯವರ ಜನಾಂದೋಲನ ಮಾರ್ಗದ ಸಮ್ಮಿಶ್ರ ಸ್ವರೂಪರಾಗಿದ್ದರು. ಗಾಂಧೀಜಿಯವರ ರಾಜಕೀಯ ದೃಷ್ಟಿಕೋನದ ಬಗ್ಗೆ ಹೆಡ್ಗೆವಾರ್ ಅವರಿಗೆ ಭಿನ್ನಾಭಿಪ್ರಾಯವಿತ್ತಾದರೂ ನಮ್ಮ ಸಾಂಸ್ಕೃತಿಕ ಪರಂಪರೆ ಮತ್ತು ಜೀವನ ತತ್ವಗಳಿಗೆ ಅವರು ಬದ್ಧರಾಗಿದ್ದರು.

೧೯೨೫ರಲ್ಲಿ ಡಾ. ಹೆಡ್ಗೇವಾರ್ ಅವರು ಯಾವುದೇ ಬಾಜಾಭಜಂತ್ರಿ ಇಲ್ಲದೆ ನಾಗ್ಪುರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಸ್ಥಾಪಿಸಿದರು. ಭಾರತದ ಸಾರ್ವತ್ರಿಕ ಜೀವನದಲ್ಲಿ ಇದೊಂದು ವಿನೂತನ ತಂತ್ರದ ಸಂಘಟನೆಯಾಗಿತ್ತು. ಡಾ. ಹೆಡ್ಗೇವಾರ್ ಅವರ ಜ್ವಲಂತ ರಾಷ್ಟ್ರಪ್ರೇಮ ಹಾಗೂ ಪಾರದರ್ಶಕವಾದ ಆದರ್ಶ ಎಂ.ಎಸ್. ಗೋಳ್ವಲ್ಕರ್ ಅವರನ್ನು ಆಕರ್ಷಿಸಿತು. ಗೋಳ್ವಲ್ಕರ್ ಬಡ ಶಾಲಾಶಿಕ್ಷಕನ ಮಗ. ಸ್ವತಃ ಮದನ ಮೋಹನ ಮಾಳವೀಯ ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಣಿಶಾಸ್ತ್ರದ ಪ್ರೊಫೆಸರ್ ಆಗಿದ್ದರು. ಮಾಳವೀಯರು ಗಾಂಧಿಪೂರ್ವ ಯುಗದ ಮಹಾನ್ ನಾಯಕರಾಗಿದ್ದು ಹಿಂದೂ ಜೀವನ ಸಿದ್ಧಾಂತದ ಪ್ರಬಲ ಪ್ರತಿಪಾದಕರಾಗಿದ್ದರು. ಸ್ವಾಮಿ ಅಖಂಡಾನಂದರ ಕಟ್ಟಾಶಿಷ್ಯರಾಗಿದ್ದ ಗೋಳ್ವಲ್ಕರ್ ಅವರು ಡಾ. ಹೆಡ್ಗೇವಾರ್ ಅವರಿಂದ ಪ್ರಭಾವಿತರಾಗದೇ ಇದ್ದಲ್ಲಿ ರಾಮಕೃಷ್ಣ–ವಿವೇಕಾನಂದರ ಶ್ರೇಣಿಯ ಸನ್ಯಾಸಿಯಾಗುತ್ತಿದ್ದರು. ಆದರೆ ವಿಧಿ ಬೇರೊಂದು ದಿಕ್ಕಿನಲ್ಲಿ ನಡೆಸಿತ್ತು. ಡಾ॥ ಹೆಡ್ಗೇವಾರ್ ಮತ್ತು ಗೊಳ್ವಾಳ್ಕರ್ ಅವರು ಆರ್.ಎಸ್.ಎಸ್. ವಾಹಿನಿಯಲ್ಲಿ ಒಂದಾದುದರಿಂದ ಭಾರತೀಯ ಜೀವನ ಸಿದ್ಧಾಂತದ ಉಗಮಸ್ಥಾನದಿಂದ ಹರಿಯುವ ಹಲವಾರು ನದಿಗಳ ಸಂಗಮದಂತಾಯಿತು. ಭಾರತೀಯ ಜೀವನದರ್ಶನದ ಚಿಂತನೆ ಮತ್ತು ಕ್ರಿಯಾಸ್ಥಾನಗಳು ಒಟ್ಟುಗೂಡಿದಂತಾಗಿತ್ತು. ನೀಳಗಡ್ಡಧಾರಿಯಾಗಿದ್ದ ಗೋಳ್ವಲ್ಕರ್ ಗುರೂಜಿ ಎಂದೇ ಪ್ರಖ್ಯಾತರಾಗಿದ್ದರು. ಗೋಳ್ವಲ್ಕರ್ ಅವರು ಭಾರತೀಯ ತತ್ವಸಿದ್ಧಾಂತಗಳ ಬಗ್ಗೆ ಉಪನ್ಯಾಸಗಳನ್ನು ನೀಡಿದರೆ ಹೆಡ್ಗೇವಾರ್ ಅವರು ಈ ಉಪನ್ಯಾಸಗಳನ್ನು ಆರ್.ಎಸ್.ಎಸ್. ಮುಖೇನ ಕಾರ್ಯರೂಪಕ್ಕೆ ತರುತ್ತಿದ್ದರು. ಈ ಆರ್.ಎಸ್.ಎಸ್. ನದಿಯೇ ದೀನ್ ದಯಾಳ್ ಉಪಾಧ್ಯಾಯರನ್ನು ಆಕರ್ಷಿಸಿದ್ದು.

ಉಪಾಧ್ಯಾಯರು ಬಡಕುಟುಂಬವೊಂದರಲ್ಲಿ ಜನಿಸಿದ ಮತ್ತೊಬ್ಬ ಮೇಧಾವಿ ಪುರುಷ. ಬಾಲ್ಯದಲ್ಲೇ ತಂದೆ ತಾಯಿಯರನ್ನು ಕಳೆದುಕೊಂಡ ಅವರು ಸ್ವಪ್ರಯತ್ನ ಶಿಕ್ಷಣ ಪಡೆದುಕೊಂಡರು. ರಾಷ್ಟ್ರ ಸ್ವಾತಂತ್ರ್ಯ ಮತ್ತು ರಾಷ್ಟ್ರ ಪುನರ್ ನಿರ್ಮಾಣದಲ್ಲಿ ತಮ್ಮ ಬದುಕನ್ನು ಮುಡುಪಾಗಿಸಿದರು.

ಮಹಾ ಮೇಧಾವಿ ಹಾಗೂ ಸಂಘಟಕರಾಗಿದ್ದ ದೀನ್ ದಯಾಳ್ ಉಪಾಧ್ಯಾಯರಿಗೆ ತಮ್ಮ ಸಾಂಸ್ಕೃತಿಕ ಪರಂಪರೆಯ ಸಂಪೂರ್ಣ ಜ್ಞಾನವಿತ್ತು. ಪರಂಪರೆಯ ಪ್ರಜ್ಞಾವಂತರಾಗಿದ್ದ ಅವರು ಕಾರ್ಯಶಾಲಿ ತತ್ತ್ವಜ್ಞಾನಿಯಾಗಿ ರೂಪುಗೊಂಡರು. 'ಸಾಮ್ರಾಟ್ ಚಂದ್ರಗುಪ್ತ', 'ಜಗದ್ಗುರು ಶ್ರೀ ಶಂಕರಾಚಾರ್ಯ' ಕೃತಿಗಳಿಂದ ಉಪಾಧ್ಯಾಯರ ಬೌದ್ಧಿಕ ಕೊಡುಗೆ ಪ್ರಾರಂಭವಾಯಿತು. ಇವೆರಡೂ ಹಿಂದೂ ದಾರ್ಶನಿಕತೆಯ ನಿರೂಪಣೆಯ ವ್ಯವಸ್ಥಿತ ಪ್ರಬಂಧಕೃತಿಗಳು. ಪುಣೆ ಮುಂಬಯಿಗಳಲ್ಲಿ ನೀಡಿದ ನಾಲ್ಕು  ಉಪನ್ಯಾಸಗಳಲ್ಲಿ ಅವರ ಕೊಡುಗೆಯ ಸಮಾರೋಪವನ್ನು ಗುರುತಿಸಬಹುದು. ಮುಂದೆ ಈ ಉಪನ್ಯಾಸಗಳೇ 'ಅಖಂಡ ಮಾನವತಾ ಸಿದ್ಧಾಂತ' ಎಂಬ ಶೀರ್ಷಿಕೆಯಡಿ ಗ್ರಂಥ ರೂಪದಲ್ಲಿ ಪ್ರಕಟಗೊಂಡವು. ತಾವು ಹೊಸ ಸಿದ್ಧಾಂತವೊಂದರ ಸಂಸ್ಥಾಪಕರೆಂದು, ಸೃಷ್ಟಿಕರ್ತರೆಂದು ದೀನ್ ದಯಾಳರು ಯಾವತ್ತೂ ಹೇಳಿಕೊಂಡಿರಲಿಲ್ಲ. ಭಾರತೀಯ ಜನಸಂಘಕ್ಕೆ ಬರೆದುಕೊಟ್ಟ ಅದರ ತತ್ತ್ವ ನೀತಿ ಪ್ರಣಾಳಿಕೆಯಲ್ಲಿ ಉಪಾಧ್ಯಾಯರು 'ಏಕಾತ್ಮ ಮಾನವವಾದ' ಪದಗುಚ್ಛವನ್ನು ಬಳಸಿದ್ದರು. ಇದನ್ನು ಅವರು ರಚಿಸಿದ್ದು ೧೯೬೪ರ ಡಿಸೆಂಬರ್ ಮಾಹೆಯಲ್ಲಿ. ಬಹುಶಃ ಇದೇ ಮೊದಲಬಾರಿಗೆ ರಾಜಕೀಯ ತತ್ತ್ವ ಪ್ರಣಾಳಿ ದಾಖಲೆಯಲ್ಲಿ 'ಏಕಾತ್ಮ ಮಾನವವಾದ' ಪ್ರಕಟಗೊಂಡಿತ್ತು. ಅಖಂಡ ಮಾನವತಾ ಸಿದ್ಧಾಂತ ಎನ್ನುವುದು 'ಭಾರತೀಯ ಸಂಸ್ಕೃತಿಯ' ಒಂದು ಪರ್ಯಾಯ ಪದವೆಂದು ಅವರು ಖಚಿತವಾಗಿ ನಿರೂಪಿಸಿದ್ದರು. ಭಾರತೀಯ ಸಂಸ್ಕೃತಿಯ ಸಮಗ್ರ ದೃಷ್ಟಿಕೋನವನ್ನು ಪರಿಣಾಮಕಾರಿಯಾಗಿ ಬಿಂಬಿಸಲು ಅವರು 'ಅಖಂಡ ಮಾನವತಾ ಸಿದ್ಧಾಂತ' ಪದಗುಚ್ಛವನ್ನು ಟಂಕಿಸಿದ್ದರು. ಪಾಶ್ಚಾತ್ಯ ಸಿದ್ಧಾಂತಗಳ ತೊಳಸಂಬಟ್ಟೆಯಲ್ಲಿ ಸಿಕ್ಕಿ ಬಿದ್ದಿದ್ದ ಕಳೆದುಹೋಗಿದ್ದ ಆಧುನಿಕ ಮನಸ್ಸುಗಳಿಗೆ ಭಾರತೀಯ ಸಂಸ್ಕೃತಿಯ ಸಮಗ್ರ ದೃಷ್ಟಿಯನ್ನು ಪರಿಚಯಿಸಲು ಅವರು ಈ ಪದಪ್ರಯೋಗ ಮಾಡಿದ್ದರು.

ನವ ಕೈಗಾರಿಕಾ ನಾಗರಿಕತೆಗೆ ಪ್ರತಿಸಂವಾದಿಯಾಗಿ ತಾನು ಪುನರಾವತಾರವೆತ್ತಿ ಬರಬೇಕು. ತನ್ನ ಪುನರುತ್ಥಾನವಾಗಬೇಕು ಎನ್ನುವುದು ಭಾರತದ ಮಹತ್ವಾಕಾಂಕ್ಷೆಯಾಗಿತ್ತು. ಭಾರತದ ಈ ಹೆಬ್ಬಯಕೆಯ ಅಂಗವಾಗಿದ್ದರು ದೀನ್ ದಯಾಳು ಅವರು. ಇತಿಹಾಸದಲ್ಲಿ ಅವರ ಸ್ಥಾನ ಇರುವುದೇ ಈ ಮಹತ್ವಾಕಾಂಕ್ಷೆಯಲ್ಲಿ ವಿಶ್ವನಾಗರಿಕತೆಯಲ್ಲಿ ಆಗುತ್ತಿದ್ದ ಬದಲಾವಣೆಗಳು, ಈ ಬದಲಾವಣೆಗಳ ವಿನ್ಯಾಸಗಳು ಹಾಗೂ ಭಾರತ ಎದುರಿಸಬೇಕಾಗಿ ಬಂದ ಹೊಸ ಸವಾಲುಗಳ ಹಿನ್ನೆಲೆಯಲ್ಲಿ ದೀನ್ ದಯಾಳರು ಭಾರತೀಯ ದರ್ಶನ ಮತ್ತು ತತ್ವಸಿದ್ಧಾಂತಗಳ ಮರುವ್ಯಾಖ್ಯಾನ ಕಾಯಕವನ್ನು ಕೈಗೆತ್ತಿಕೊಂಡರು. ಭಾರತದ ಪೂರ್ವಸೂರಿಗಳು ಈ ಮೊದಲು ರೂಪಿಸಿದ್ದ ಭಾರತೀಯ ತತ್ವಶಾಸ್ತ್ರವನ್ನು ಹೆಡ್ಗೇವಾರ್ ಮತ್ತು ಗೋಳ್ವಲ್ಕರ್ ವ್ಯಾಖ್ಯಾನಿಸಿದ್ದರು.

ಇದೇ ಕೆಲಸವನ್ನು ದೀನ್ ದಯಾಳ್ ಉಪಾಧ್ಯಾಯರು ಮುಂದುವರಿಸಿಕೊಂಡು ಹೋದರು. ತಮ್ಮ ನಾಯಕರುಗಳನ್ನು ದ್ರಷ್ಟಾರರನ್ನು ಸೃಷ್ಟಿಸಿಕೊಳ್ಳುವುದು ಹಾಗೂ ಮಾರ್ಗದರ್ಶನಕ್ಕಾಗಿ ಅವರತ್ತ ಮುಖಮಾಡುವುದು, ಎಲ್ಲ ಒಳಿತುಗಳ, ಎಲ್ಲ ಹೊಸ ಆಲೋಚನೆಗಳ ಮೂಲಸ್ರೋತ ಅವರೆಂದು ಭಾವಿಸುವುದು ಯಾವುದೇ ಸುಸಂಘಟಿತ ಕಾರ್ಯಚಟುವಟಿಕೆಗಳ ಅಥವಾ ಆಂದೋಲನದ ಸಹಜ ಮನೋಧರ್ಮ. ಆದರೆ ತಮ್ಮ ನೇತಾರರ ಆಲೋಚನೆ ಮತ್ತು ಬದುಕುಗಳಿಂದ ಸ್ಫೂರ್ತಿ ಪಡೆಯುವಾಗ, ಮುಂದಾಲೋಚನೆಯುಳ್ಳ ಚಲನಶೀಲ ಆಂದೋಲನಗಳು ಎಚ್ಚರಿಕೆಯಿಂದಿರ ಬೇಕಾಗುತ್ತದೆ. ಅವು ಸಂಕುಚಿತ ನಾಯಕಪೂಜೆಯಲ್ಲಿ ಅಥವಾ ಜಡ 'ಸಿದ್ಧಾಂತ'ಗಳಲ್ಲಿ ಬಂಧಿಯಾಗಬಾರದು. ಇಂಥ ಮನೋಧರ್ಮದ ವಿರುದ್ಧ ಗಾಂಧಿ ಮತ್ತು ಮಾರ್ಕ್ಸ್ ತಮ್ಮ ಅನುಯಾಯಿಗಳಿಗೆ ಎಚ್ಚರಿಕೆ ನೀಡಿದ್ದರು. "ದೇವರ ದಯೆ, ನಾನೊಬ್ಬ ಮಾರ್ಕ್ಸ್‌ವಾದಿಯಾಗಲಿಲ್ಲ" ಎಂದು ಕಾರ್ಲ್‌ಮಾರ್ಕ್ಸ್ ಒಮ್ಮೆ ಉದ್ಗರಿಸಿದ್ದರಂತೆ. "ಗಾಂಧೀವಾದ–ಗಾಂಧಿತತ್ವ" ಅನ್ನುವಂಥಾದ್ದು ಯಾವುದೂ ಇಲ್ಲ ಎಂದು ಗಾಂಧಿಯವರೇ ಒಮ್ಮೆ ಸ್ಪಷ್ಟವಾಗಿ ಬರೆದಿದ್ದರು.

ಭಾರತೀಯ ಸಂಸ್ಕೃತಿಯ ಅರ್ಥಧಾರಿಗಳಾಗಿ ದೀನ್ ದಯಾಳರು ತಮ್ಮ ಅಂತ–ರ್ಬೋಧೆಯಿಂದ. ತಮ್ಮೊಳಗಿನ ವಿವೇಕದಿಂದ ಆಧುನಿಕತೆಯಲ್ಲಿನ ಕೊರತೆಗಳನ್ನು, ಅಸಮರ್ಪಕತೆಗಳನ್ನು ಕಂಡುಕೊಂಡಿದ್ದರು. ಮನುಷ್ಯನ ಸ್ವಭಾವ ಮತ್ತು ಮನುಷ್ಯ ಪ್ರಕೃತಿ ಹಾಗೂ ವಿಶ್ವದ ಬಗ್ಗೆ ಅರೆ ಬರೆ ವೈಜ್ಞಾನಿಕ ಅರಿವನ್ನು ಆಧರಿಸಿದ ಆಧುನಿಕತೆ ಇದಾಗಿತ್ತು. ಈ ಕೊರತೆಗಳ ಜೊತೆಗೆ ಕೈಗಾರಿಕಾ ನಾಗರಿಕತೆಯಿಂದ ಪ್ರಪಂಚ ಎದುರಿಸಬೇಕಾಗಬಹುದಾದ ಹಾನಿ ದುರಂತಗಳನ್ನೂ ದೀನ್‌ದಯಾಳರು ಮನಗಂಡಿದ್ದರು. ಅವರ ಅನೇಕ ಮುನ್ನೆಚ್ಚರಿಕೆಗಳು ನಿಜವಾಗಿದ್ದವು. ಕಮ್ಯುನಿಸ್ಟ್ ಸಿದ್ಧಾಂತ ಕುಸಿಯಲಾರಂಭಿಸಿತ್ತು. ಬಂಡವಾಳಶಾಹಿ ಆಂತರಿಕ ಬಿಕ್ಕಟ್ಟಿನಲ್ಲಿ ಬಂದಿಯಾಗಿತ್ತು. ಹೊಸ ಸಂಯೋಗಗಳು ಸಂಯೋಜನೆಗಳು ತಲೆ ಎತ್ತುತ್ತಿದ್ದವು. ಹೊಸ ಘರ್ಷಣೆಗಳು, ತಿಕ್ಕಾಟಗಳು ಸಂಭವಿಸುತ್ತಿದ್ದವು.

ಪರಿಸರದ ಬಿಕ್ಕಟ್ಟು ಹಾಗೂ ಪರಿಸರ ವಿಜ್ಞಾನದ ಅಸಮತೆಗಳು ಮಾನವ ಕುಲದ ಅಸ್ತಿತ್ವಕ್ಕೇ ತೀವ್ರ ಸವಾಲುಗಳನ್ನೊಡ್ಡಿದ್ದವು. ಆಧುನಿಕ ವಿಜ್ಞಾನ ತನ್ನ ಪ್ರಯೋಗದ ಮಾದರಿಗಳಲ್ಲಿ ಒಂದು ಪರಿಮಿತಿಗೆ ಬಂದು ನಿಂತಿತ್ತು. ಮೂಲಭೂತ ಸತ್ಯದ, ಪೂರ್ಣ ಸತ್ಯದ ಅನ್ವೇಷಣೆಯಲ್ಲಿ ತೊಡಗಿದ್ದ ವಿಜ್ಞಾನ ಊಹಾಪ್ರಪಂಚದಲ್ಲಿ ಕಳೆದುಹೋಗಿತ್ತು. ದೇಶಕಾಲಗಳಾಚೆಯ ಸತ್ಯವನ್ನು ಶೋಧಿಸಿ ಅನಾವರಣಗೊಳಿಸುವುದು ಒಂದು ದೊಡ್ಡ ಜೀವನ ಸಂಗ್ರಾಮವೇ ಆಗಿತ್ತು. ಬಹುಶಃ ವಿಜ್ಞಾನ ಅಧ್ಯಾತ್ಮದ ಬಾಗಿಲನ್ನು ಬಡಿಯಲಾರಂಭಿಸಿತ್ತು. ಇವತ್ತು ಮಾನವ ಕುಲ ಹಲವಾರು ಸಾಧ್ಯತೆಗಳಿಂದ ಗರ್ಭಿತವಾದ ಕೂಡು ಹಾದಿಯ ನಾಗರಿಕತೆಯಲ್ಲಿ ಬದುಕುತ್ತಿದೆ. ಅದು ತನ್ನ ಸರ್ವನಾಶವನ್ನು ಕೈಯ್ಯಾರೆ ಸ್ವಾಗತಿಸುವುದೆ? ಅಥವಾ ಪ್ರಾಚೀನ ಭಾರತೀಯ ವಿವೇಕದ ಬೆಳಕಿನಲ್ಲಿ ಬಳಕೆದಾರರ ಹಿತರಕ್ಷಣೆ ಹಾಗೂ ಪರಿಸರನಾಶಕ ಕೈಗಾರಿಕೋದ್ಯಮದ ಹಿಡಿತದಿಂದ ಪಾರಾಗುವುದೆ? ಪಾರಾಗಿ "ಸರಳಜೀವನ ಶ್ರೇಷ್ಠಚಿಂತನ" ತತ್ವವನ್ನು ಆಧರಿಸಿದ ಹೊಸ ನಾಗರಿಕತೆಯನ್ನು ಸೃಷ್ಟಿಸುವುದೆ? ಹೊಸ ನಾಗರಿಕತೆಯನ್ನು ಹುಟ್ಟುಹಾಕುವುದೆ?

ಈ ಹಿನ್ನೆಲೆಯಲ್ಲಿ ಏಕಾತ್ಮ ಮಾನವವಾದದ ಮೂಲ ಪರಿಕಲ್ಪನೆಗಳನ್ನೂ

ಅದರ ಅರ್ಥವ್ಯಾಖ್ಯಾನಗಳನ್ನು ಮುಂದಿನ ಪುಟಗಳಲ್ಲಿ ಕೊಡಲಾಗಿದೆ. ಈ ಮಂಡನೆ ಉತ್ತರಗಳಿಗಿಂತ ಸಮಾಧಾನಗಳಿಗಿಂತ ಹೆಚ್ಚಿನ ಪ್ರಶ್ನೆಗಳಿಗೆಡೆ ಮಾಡಿಕೊಡಲಿದೆ. ಮನುಕುಲ ಎದುರಿಸುತ್ತಿರುವ ಹೊಸ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಹೊಸ ಅರ್ಥ – ಹೊಸ ವ್ಯಾಖ್ಯಾನಗಳ ಪ್ರಕ್ರಿಯೆಯನ್ನು ಮುಂದುವರಿಸಿಕೊಂಡು ಹೋಗಲು ಮಾನ್ಯ ವಾಚಕರಿಗೆ ಪಂಥಾಹ್ವಾನ ನೀಡುತ್ತಿದ್ದೇವೆ.

**ದೇವೇಂದ್ರ ಸ್ವರೂಪ್**
ಸಂಪಾದಕರು



# ಏಕಾತ್ಮ ಮಾನವದರ್ಶನ

ಅನು. : **ಜಿ.ಎನ್. ರಂಗನಾಥರಾವ್**

**Blank Page**



# ಏಕಾತ್ಮ ಮಾನವದರ್ಶನ : ಚಿಂತನೆಗಳು

ಅನು. : ಜಿ.ಎನ್. ರಂಗನಾಥರಾವ್

# ಭಾಗ–೧

# ಮೂಲ ಪ್ರಮಾಣಗಳು

**೧. ತತ್ತ್ವ–ಸಿದ್ಧಾಂತಗಳು ಮತ್ತು ನೀತಿ ನಿಯಮಗಳು**

ಪಂಡಿತ ದೀನ್ ದಯಾಳ್ ಉಪಾಧ್ಯಾಯರು ಸಿದ್ಧಪಡಿಸಿದ ಕರಡು ದಾಖಲೆಯಿಂದ ಆಯ್ದ ಭಾಗಗಳು ಇದನ್ನು ೧೯೬೫ರ ಜನವರಿ ೨೩ ರಿಂದ ೨೫ರ ವರೆಗೆ ವಿಜಯವಾಡಾದಲ್ಲಿ ನಡೆದ ಭಾರತೀಯ ಜನಸಂಘದ ಅಖಿಲ ಭಾರತ ಪ್ರತಿನಿಧಿ ಸಭಾದಲ್ಲಿ ಅಂಗೀಕರಿಸಲಾಗಿತ್ತು.

**೨. ಏಕಾತ್ಮ ಮಾನವದರ್ಶನ**

ಮುಂಬಯಿಯಲ್ಲಿ ೧೯೬೫ರ ಏಪ್ರಿಲ್ ೨೨ ರಿಂದ ೨೫ರವರೆಗೆ ದೀನ್ ದಯಾಳರು ನೀಡಿದ ನಾಲ್ಕು ಉಪನ್ಯಾಸಗಳ ಪಠ್ಯ.

**BLANK PAGE**



# ದಸ್ತಾವೇಜು : ಒಂದು

## ತತ್ತ್ವ–ಸಿದ್ಧಾಂತಗಳು ಮತ್ತು ನೀತಿಗಳು

*(೧೯೬೫ರ ಜನವರಿ ೨೩ ರಿಂದ ೨೫ ರವರೆಗೆ ವಿಜಯವಾಡಾದಲ್ಲಿ ನಡೆದ ಭಾರತೀಯ ಜನಸಂಘದ ಅಖಿಲಭಾರತ ಪ್ರತಿನಿಧಿ ಸಭೆಯಲ್ಲಿ ಅಂಗೀಕರಿಸಲಾದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು ಸಿದ್ಧಪಡಿಸಿದ ದಸ್ತಾವೇಜಿನಿಂದ ಆಯ್ದ ಉದ್ಧೃತ ಭಾಗಗಳು)*

ಪ್ರಜಾಪ್ರಭುತ್ವ, ಸಮಾನತೆ, ರಾಷ್ಟ್ರ ಸ್ವಾತಂತ್ರ್ಯ ಮತ್ತು ವಿಶ್ವಶಾಂತಿ ಇವೆಲ್ಲ ಅಂತರ್‌ಸಂಬಂಧೀಯ ಪರಿಕಲ್ಪನೆಗಳು. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಅನೇಕ ವೇಳೆ ಈ ಪರಿಕಲ್ಪನೆಗಳ ನಡುವೆ ತಿಕ್ಕಾಟ, ಘರ್ಷಣೆಗಳು ಸಂಭವಿಸಿವೆ. ಈ ಘರ್ಷಣೆಯನ್ನು ನಿವಾರಿಸಲು ನಡೆಸಿದ ಪ್ರಯತ್ನಗಳಿಂದ ಸಮಾಜವಾದ ಮತ್ತು ವಿಶ್ವಸರ್ಕಾರದ ಆಲೋಚನೆಗಳು ಹುಟ್ಟಿಕೊಂಡಿವೆ. ಆದರೆ ಈ ಆಲೋಚನೆಗಳೆಲ್ಲ ಕಾರ್ಯಸಾಧನೆಯಲ್ಲಿ ವಿಫಲವಾಗಿದ್ದು ಈ ಪರಿಕಲ್ಪನೆಗಳನ್ನೇ ದುರ್ಬಲಗೊಳಿಸಿವೆ ಹಾಗೂ ಹೊಸ ಸಮಸ್ಯೆಗಳನ್ನು ಹುಟ್ಟಿಸಿವೆ. ಭಾರತೀಯ ಸಂಸ್ಕೃತಿಯಲ್ಲಿ ಒಂದು ತಾತ್ವಿಕ ತಳಹದಿ ಇದ್ದು ಈ ಬುನಾದಿಯ ಮೇಲೆ ಈ ಪರಿಕಲ್ಪನೆಗಳನ್ನು ಸಮನ್ವಯಗೊಳಿಸುವ ಮೂಲಕ ನಂಬಿರುವ ಗುರಿ, ಉದ್ದೇಶಗಳನ್ನು ಈಡೇರಿಸಿಕೊಳ್ಳಬಹುದಾಗಿದೆ. ಇಂಥದೊಂದು ಆಧಾರ–ಅಸ್ತಿವಾರಗಳಿಲ್ಲದೆ ಮನುಷ್ಯನ ಆಲೋಚನೆಗಳು ಮತ್ತು ಅಭ್ಯುದಯ ಕುಂಠಿತಗೊಂಡಿದೆ. ಉಸಿರು ಕಟ್ಟಿಸುವಂಥ ಸ್ಥಿತಿ ಉಂಟಾಗಿದೆ. ಭಾರತೀಯ ಸಂಸ್ಕೃತಿ ಪ್ರತಿಪಾದಿಸುವ ಮೂಲಭೂತ ಸತ್ಯಗಳು ಕಾಲಾತೀತವಾದವು ಹಾಗೂ ಸೀಮಾತೀತವಾದವು. ಆದ್ದರಿಂದ ಈ ಸತ್ಯಗಳ ಜ್ಞಾನ ಅರಿವುಗಳು ನಮ್ಮ ಪ್ರಗತಿಗೆ ಮಾತ್ರವಲ್ಲವೆ ವಿಶ್ವದ ಪ್ರಗತಿಗೂ ಮಾರ್ಗದರ್ಶನ ಮಾಡಬಲ್ಲವು.

ಭಾರತೀಯ ಸಂಸ್ಕೃತಿಯ ದೃಷ್ಟಿಕೋನವೇ ಅಖಂಡವಾದದ್ದು. ಸಮಗ್ರವಾದದ್ದು. ಅದು ಜೀವನದ ವಿವಿಧ ಅಸ್ತಿತ್ವಗಳು ಹಾಗೂ ವಿವಿಧ ದರ್ಶನಗಳು, ವಿವಿಧ ರೂಪಗಳಲ್ಲಿರುವ ತೋರಿಕೆಯ ವ್ಯತ್ಯಾಸಗಳನ್ನು ಒಪ್ಪಿಕೊಳ್ಳುತ್ತದೆ. ಇದೇ ಕಾಲಕ್ಕೆ ಅವುಗಳ ಮೂಲಾಧಾರವಾದ ಏಕತೆ–ಸಮಗ್ರತೆಗಳನ್ನು ಅನ್ವೇಷಿಸುತ್ತದೆ ಹಾಗೂ

ಇಡೀ ದರ್ಶನವನ್ನು ಸಮಗ್ರವಾಗಿ ಪರಿಗಣಿಸುತ್ತದೆ. ಭಾರತೀಯ ಸಂಸ್ಕೃತಿ, ಪ್ರಪಂಚದ ಬಹುರೂಪಿ ಚಟುವಟಿಕೆಗಳಲ್ಲಿ ಪರಸ್ಪರ ಅವಲಂಬನೆ, ಸಹಕಾರ ಮತ್ತು ಸಮ್ಮತಿ –ಸಹಮತಗಳನ್ನು ಗುರುತಿಸಿದೆ. ಘರ್ಷಣೆ ವಿರೋಧಾಭಾಸಗಳು ಮತ್ತು ಅಸಮ್ಮತಿಗಳನ್ನು ಅದು ಲೆಕ್ಕಕ್ಕೆ ಹಿಡಿಯುವುದಿಲ್ಲ. ಭಾರತೀಯ ಸಂಸ್ಕೃತಿಯ ದೃಷ್ಟಿಕೋನ ಅಂಶಿಕವಾದುದಲ್ಲ, ಸರ್ವಸಮಗ್ರವಾದದ್ದು, ಎಲ್ಲವನ್ನು ಗ್ರಹಿಸುವಂಥಾದ್ದು. ಅದು ಎಲ್ಲರ ಸುಖಸಂತೋಷಗಳನ್ನು ಬಯಸುತ್ತದೆ ಹಾಗೂ ಸರ್ವರ ಸುಖಸಂತೋಷಗಳಿಗಾಗಿ ಶ್ರಮಿಸುತ್ತದೆ. ಹೀಗಾಗಿ ಅಖಂಡತೆ, ಸಮಗ್ರತೆಗಳು ಭಾರತೀಯ ಸಂಸ್ಕೃತಿಯ ಜೀವಸ್ವರವಾಗಿದೆ, ಪ್ರಧಾನ ಧೋರಣೆಯಾಗಿದೆ.

## ವ್ಯಕ್ತಿ ಮತ್ತು ಸಮಾಜ

ಪಾಶ್ಚಾತ್ಯ ಪ್ರಪಂಚದ ಅನೇಕ ತತ್ತ್ವಸಿದ್ಧಾಂತಗಳು, ವ್ಯಕ್ತಿ ಮತ್ತು ಸಮಾಜದ ನಡುವೆ ಅಂತರ್ಗತವಾದ ಸಂಘರ್ಷವಿದೆ ಎಂಬ ಊಹೆಗಳನ್ನು ಆಧರಿಸಿವೆ. ಈ ತತ್ತ್ವಸಿದ್ಧಾಂತಗಳು ವ್ಯಕ್ತಿ ಅಥವಾ ಸಮಾಜದ ಸಮರ್ಥನೆಯಲ್ಲಿ ತೊಡಗುತ್ತವೆ. ಆದರೆ ವಾಸ್ತವವಾಗಿ ವ್ಯಕ್ತಿ ಮತ್ತು ಸಮಾಜದ ನಡುವೆ ಅಂತರ್ಗತ ಸಂಘರ್ಷವೇನೂ ಇಲ್ಲ. ಪ್ರತ್ಯಕ್ಷವಾಗಿ ಕಾಣುವ ವ್ಯಕ್ತಿ ಅಗೋಚರ ಸಮಾಜದ ಪ್ರತಿನಿಧಿಯೂ ಹೌದು. ವ್ಯಕ್ತಿಯ ಮುಖೇನವೇ ಸಮಾಜ ಪ್ರಕಟಗೊಳ್ಳುತ್ತದೆ. ವ್ಯಕ್ತಿ ಸಮಾಜದ ಒಂದು ಪ್ರಮುಖ ಸಾಧನ ಹಾಗೂ ಅದರ ಸಫಲತೆಯ ಪ್ರಮಾಣವೂ ಹೌದು. ವ್ಯಕ್ತಿಯ ಅಸ್ಮಿತೆಯ ಅವನತಿ ಅಥವಾ ಕುಗ್ಗುವಿಕೆ ಸಮಾಜವನ್ನು ಕುಂಠಿತಗೊಳಿಸಬಹುದು. ಹೂವಿನ ಅಸ್ತಿತ್ವ ಇರುವುದು ಅದರ ದಳಗಳಿಂದಾಗಿ ಹಾಗೂ ಹೂವಿಗೆ ಅಂಟಿಕೊಂಡಿರುವುದರಲ್ಲೇ ದಳಗಳ ಕಿಮ್ಮತ್ತಿದೆ. ದಳಗಳ ಸೌಂದರ್ಯವಿದೆ. ವ್ಯಕ್ತಿಯ ಅಭ್ಯುದಯ ಮತ್ತು ಸಾಮಾಜಿಕ ಕ್ಷೇಮ ಪರಸ್ಪರ ವಿರುದ್ಧವಾದ ಆಸಕ್ತಿಗಳೇನಲ್ಲ.

## ವ್ಯಕ್ತಿಯ ಸರ್ವಾಂಗೀಣ ಪ್ರಗತಿ

ಒಬ್ಬ ವ್ಯಕ್ತಿ ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮ ಇವೆಲ್ಲದರ ಒಟ್ಟು ಮೊತ್ತ. ಇವೆಲ್ಲದರ ಸಮಷ್ಟಿ. ವ್ಯಕ್ತಿಯ ಸರ್ವಾಂಗೀಣ ಪ್ರಗತಿಯನ್ನು ಬಯಸುವವರು ತಮ್ಮೊಳಗಿನ ಈ ಎಲ್ಲ ವಿಶೇಷಣಗಳನ್ನು ಮನಗಾಣಬೇಕು. ಇವೆಲ್ಲವನ್ನೂ ತೃಪ್ತಿಪಡಿಸಬೇಕು. ಆಗ ಮಾತ್ರ ವ್ಯಕ್ತಿಗೆ ಸುಖ–ಸಂತೋಷಗಳ ಅನುಭವ ದಕ್ಕುವುದು. ಇದರ ಅರ್ಥವೆಂದರೆ, ಐಹಿಕ ಮತ್ತು ಆಧ್ಯಾತ್ಮಿಕ ಪ್ರಗತಿಗಳೆರಡೂ ಗುರಿಯಾಗಿರಬೇಕು ಎಂದು. ಈ ನಾಲ್ಕೂ ವಿಶೇಷಣಗಳನ್ನು ತೃಪ್ತಿಪಡಿಸಲು ಬೇಕಾಗುವ ಸಾಧನ ಸಂಪತ್ತುಗಳೆಂದರೆ, ಐಹಿಕ ಸಂಪನ್ಮೂಲಗಳು, ಶಾಂತಿ, ಜ್ಞಾನೋದಯ ಮತ್ತು ತಾದಾತ್ಮ್ಯಭಾವ. ಈ ಗುರಿ–ಉದ್ದೇಶಗಳ ಸಮಗ್ರ ಲಕ್ಷಣವೇ ಸಾಮಾಜಿಕ ಒಳಿತಿಗಾಗಿ ಶ್ರಮಿಸಲು ವ್ಯಕ್ತಿಗೆ ಸ್ಫೂರ್ತಿ, ಪ್ರೇರಣೆಗಳನ್ನು ಒದಗಿಸುತ್ತದೆ.



ವ್ಯಕ್ತಿಗತ ಅಭ್ಯುದಯ ಹಾಗೂ ಸಮಾಜ ಕಲ್ಯಾಣ ಎರಡು ಮುಖ್ಯ ಧ್ಯೇಯಗಳು. ನಾಲ್ಕು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಈ ಧ್ಯೇಯ ಸಾಧನೆಯ ಮಾರ್ಗಗಳೆಂದು ಪರಿಭಾವಿಸಲಾಗಿದೆ. ಧರ್ಮ, ಅರ್ಥ ಮತ್ತು ಕಾಮಗಳು ಒಂದನ್ನೊಂದು ಪೋಷಿಸುತ್ತವೆ ಹಾಗೂ ಒಂದು ಮತ್ತೊಂದಕ್ಕೆ ಪೂರಕವಾಗಿರುತ್ತದೆ. ಇವುಗಳಲ್ಲಿ ಯಾವುದೇ ಒಂದನ್ನು ಮಾನವ ಚಟುವಟಿಕೆಯ ಸ್ಫೂರ್ತಿಮೂಲವೆಂದು ಭಾವಿಸುವುದು. ಇವುಗಳಿಂದ ಮಾತ್ರ ಮಾನವನ ಕಾರ್ಯಚಟುವಟಿಕೆಗಳ ಮೌಲ್ಯ ಮಾಪನ ಸಾಧ್ಯವೆಂದು ಭಾವಿಸುವುದು ಸರಿಯಲ್ಲ. ಇಂಥ ಭಾವನೆಯಿಂದ ಯಾವುದೇ ವಸ್ತುವಿನ ಸಮತೂಕದ ದೃಷ್ಟಿದರ್ಶನಗಳು ಸಾಧ್ಯವಾಗುವುದಿಲ್ಲ. ಅರ್ಥ ಮತ್ತು ಕಾಮಗಳ ಸಾಧನೆಗೆ ಧರ್ಮವೊಂದೇ ಮಾರ್ಗ. ಆದ್ದರಿಂದ ಧರ್ಮಕ್ಕೆ ತುಂಬ ಮಹತ್ವ ಇದೆ. ಅದು ಬಲು ಮುಖ್ಯ.

## ಧರ್ಮದ ಸ್ವರೂಪ

ಧರ್ಮವನ್ನು ಜಾತಿ, ಮತ, ಪಂಥಗಳೊಂದಿಗೆ ಸಮೀಕರಿಸಿರುವುದರಿಂದ ಸಾಕಷ್ಟು ಗೊಂದಲ ಉಂಟಾಗಿದೆ. ಧರ್ಮ ಎಂದರೆ ನಿಜವಾಗಿ ಶಾಶ್ವತ ಮೂಲಭೂತ ತತ್ತ್ವಗಳು. ವ್ಯಕ್ತಿ ಅಥವಾ ಸಂಘಟಿತ ಸಂಸ್ಥೆ–ಸಮುದಾಯಗಳನ್ನು ಪೋಷಿಸುವ ತತ್ತ್ವಗಳು. ಈ ತತ್ತ್ವಗಳಿಗೆ ಬದ್ಧರಾಗಿ ನಡೆದುಕೊಳ್ಳುವ ಮೂಲಕ ಐಹಿಕ ಅಭ್ಯುದಯವನ್ನೂ ಮುಂದಿನ ಜನ್ಮದಲ್ಲಿ ಆಧ್ಯಾತ್ಮಿಕ ಮೋಕ್ಷವನ್ನೂ ಸಾಧಿಸಬಹುದು. ಧರ್ಮದ ಮೂಲ ಗುಣಗಳು ಶಾಶ್ವತವಾದುದು ಹಾಗೂ ಅವು ಅಪರಿವರ್ತನೀಯವಾದವು. ಆದರೆ ಈ ಮೂಲ ತತ್ತ್ವಗಳ ಕಾಗುಣಿತ ಅಥವಾ ನಿರೂಪಣಾ ಪ್ರಕ್ರಿಯೆಯಲ್ಲಿ ಕಾಲದೇಶಕ್ಕನುಗುಣವಾಗಿ ಧರ್ಮದಲ್ಲಿ ಭಿನ್ನತೆ. ವೈವಿಧ್ಯತೆಗಳು ತೋರುವುದುಂಟು. ಇದೇನೇ ಇದ್ದರೂ ಬದಲಾಗುತ್ತಿರುವ ಈ ಪ್ರಪಂಚದಲ್ಲಿ ಸಮಾಜದಲ್ಲಿ ಸ್ಥಿರತೆಯುಂಟು ಮಾಡಬಲ್ಲ ಏಕೈಕ ಶಕ್ತಿಯೆಂದರೆ ಧರ್ಮ. ಭಾರತೀಯ ರಾಜ್ಯತಂತ್ರದ ಪ್ರಕಾರ ನಿರುಪಾಧಿಕ ಸಾರ್ವಭೌಮತ್ವ ಇರುವುದು ಧರ್ಮ ಒಂದರಲ್ಲೇ.

ಸಮಾಜ ಕೇವಲ ವ್ಯಕ್ತಿಗಳ ಸಂಘಟಿತ ಕೂಟವಷ್ಟೇ ಅಲ್ಲ. ಅದಕ್ಕೆ ತನ್ನದೇ ಆದ ಜೀವಂತ ಅಸ್ತಿತ್ವ ಇದೆ. ತನ್ನ ನೆಲದ ಬಗ್ಗೆ ಮಾತಾಪಿತೃಸದೃಶವಾದ ಭಕ್ತಿಭಾವ, ಧರ್ಮಶ್ರದ್ಧೆ ಹಾಗೂ ತನ್ನದೇ ಆದ ಧೀಮಂತ ಗುಣಲಕ್ಷಣಗಳನ್ನು ಹೊಂದಿರುವ ಸಮಾಜದಿಂದ ಒಂದು ರಾಷ್ಟ್ರ ರೂಪುಗೊಳ್ಳುತ್ತದೆ. ಧೀಮಂತಿಕೆ, ಮೇಧಾವಿತನ, ಮನೋಧರ್ಮ ಇವೆಲ್ಲ ಚರಿತ್ರೆ – ಭೂಗೋಳಗಳ ಉತ್ಪನ್ನಗಳಲ್ಲ. ಇವೆಲ್ಲ ವ್ಯಕ್ತಿಯಲ್ಲೇ ಅಂತರ್ಗತವಾಗಿರುವಂಥ ಜನ್ಮದಾರಭ್ಯ ಪ್ರಾಪ್ತವಾಗಿರುವ ಗುಣವಿಶೇಷಗಳು. ವ್ಯಕ್ತಿಗಳ ನಡವಳಿಕೆ, ಶೀಲಚಾರಿಗಳು ಎಷ್ಟರ ಮಟ್ಟಿಗೆ ಈ ವಿಶಿಷ್ಟ ಮನೋಧರ್ಮಗಳಿಗೆ

ಅನುಗುಣವಾಗಿದೆ ಎನ್ನುವುದರ ಮೇಲೆ ರಾಷ್ಟ್ರವೊಂದರ ಅಭ್ಯುದಯ ಅಥವಾ ಅವನತಿ ನಿರ್ಧಾರವಾಗುತ್ತದೆ. ರಾಷ್ಟ್ರವೊಂದರ ಅಭ್ಯುದಯ, ಅವನತಿಗಳು ಪ್ರಜೆಗಳ ನಡವಳಿಕೆ, ಗುಣಶೀಲಗಳನ್ನು ಅವಲಂಬಿಸಿರುತ್ತದೆ. ಆದರೆ ವೈವಿಧ್ಯಮಯವಾದ ಗುಣಲಕ್ಷಣಗಳಿದ್ದಾಗ್ಯೂ ವಿವಿಧ ರಾಷ್ಟ್ರಗಳು ವಿಶ್ವದಲ್ಲಿ ಏಕತೆಯನ್ನು, ಅಖಂಡತೆಯನ್ನು ರೂಪಿಸುವುದರಲ್ಲಿ ಪೂರಕ ಪಾತ್ರವನ್ನು ನಿರ್ವಹಿಸಬಹುದಾಗಿದೆ. ಯಾವುದೇ ಒಂದು ರಾಷ್ಟ್ರ ತನ್ನ ಈ ಪೂರಕ ಪಾತ್ರವನ್ನು ನಿರ್ವಹಿಸದೆ ಏಕತೆ, ಅಖಂಡತೆಗಳಿಗೆ ಧಕ್ಕೆಯುಂಟುಮಾಡಿದಲ್ಲಿ ಅದನ್ನು ವಿಕೃತ ಮನೋಧರ್ಮ ಎಂದೇ ಕರೆಯಬೇಕಾಗುತ್ತದೆ. ಹಾಗೆಂದು ಪ್ರಪಂಚದ ಏಕತೆ, ಅಖಂಡತೆಗಳ ಸಾಧನೆಗಾಗಿ, ಅಖಂಡ ವಿಶ್ವದ ನಿರ್ಮಾಣಕ್ಕಾಗಿ ರಾಷ್ಟ್ರಗಳನ್ನು ವಿಸರ್ಜಿಸಬೇಕು ಎನ್ನುವ ವಾದ ಸರಿಯಲ್ಲ. ಇದು ಸಂಘಟಿತ ಕ್ಷೇಮಾಭಿವೃದ್ಧಿಗಾಗಿ ವ್ಯಕ್ತಿಗಳು ತಮ್ಮ ಅಸ್ಮಿತೆಯನ್ನು ಅಳಿಸಿ ಹಾಕುವಂಥ ಆತ್ಮಘಾತುಕ ಕ್ರಮವಾಗುತ್ತದೆ. ಇದು ಸರಿಯಾದ ಮಾರ್ಗವಲ್ಲ.

**ಪದ್ಧತಿಗಳ ಉಗಮ**

ಪ್ರಜೆಗಳು ನಾಲ್ಕು ಪುರುಷಾರ್ಥಗಳನ್ನು ಸಾಧಿಸಲು ಸಮಾಜ ಸಹಾಯಹಸ್ತ ಚಾಚುತ್ತದೆ. ಇದಕ್ಕಾಗಿ ಸಮಾಜ ಮದುವೆ, ಕುಟುಂಬ, ಆಸ್ತಿ, ಜಾತಿ, ಸಮುದಾಯ, ಪಂಚಾಯಿತಿ, ಸರ್ಕಾರ ಇತ್ಯಾದಿ ಹಲವಾರು ವ್ಯವಸ್ಥೆಗಳಿಗೆ, ಪದ್ಧತಿಗಳಿಗೆ, ಕಟ್ಟುಕಟ್ಟಳೆಗಳಿಗೆ ಜನ್ಮಕೊಟ್ಟಿದೆ.

ಕೃತಯುಗದಲ್ಲಿ ಧರ್ಮ ಸರ್ವರಿಗೂ ಮಾರ್ಗದರ್ಶಕ ಸೂತ್ರವಾಗಿತ್ತು. ಆದ್ದರಿಂದ ಸರ್ಕಾರ ಇರಲಿಲ್ಲ. ಇದು ನಿಜವಾಗಿ ಆದರ್ಶಪ್ರಾಯವಾದ ಸಮಾಜವೊಂದರ ಪರಿಕಲ್ಪನೆಯಾದೀತು. ಇಲ್ಲಿ ಎಲ್ಲವೂ ಧರ್ಮದಿಂದ ನಿಯಂತ್ರಿತ. ಇದು ನಮ್ಮ ಆದರ್ಶ. ಎಲ್ಲರೂ ಧರ್ಮನಿಷ್ಠರಾದಾಗ ಮಾತ್ರ ಇಂಥದೊಂದು ಆದರ್ಶ ಸಮಾಜ ಸಾಕಾರಗೊಳ್ಳವುದು ಸಾಧ್ಯ. ಆದರೆ ಕಾಯಿದೆ ಸುವ್ಯವಸ್ಥೆ ಪಾಲನೆಗಾಗಿ, ಪ್ರತಿಯೊಬ್ಬರೂ ತಮ್ಮ ಧರ್ಮವನ್ನು ಅನುಸರಿಸಲು ಸೂಕ್ತ ವ್ಯವಸ್ಥೆ ಮಾಡುವ ಸಲುವಾಗಿ ಸರ್ಕಾರ ಅತ್ಯಗತ್ಯವಾಗುತ್ತದೆ. ಇಂಥದೊಂದು ಭರವಸೆ ನೀಡಲು ಸರ್ಕಾರ ಬೇಕಾಗುತ್ತದೆ.

**ಧರ್ಮ ರಾಜ್ಯ–ನಮ್ಮ ಆದರ್ಶ**

ಭಾರತಕ್ಕೆ ಆದರ್ಶ ಪ್ರಾಯವಾದದ್ದು ಧರ್ಮ ರಾಜ್ಯ. ಎಲ್ಲ ಬಗೆಯ ಶ್ರದ್ಧೆ, ನಂಬಿಕೆಗಳನ್ನು ಗೌರವಿಸುವುದು. ಅವುಗಳಲ್ಲಿ ಸಹಿಷ್ಣುತೆ ತೋರುವುದು ಭಾರತದ ಮುಖ್ಯ ಗುಣಲಕ್ಷಣ. ಭಾರತದಲ್ಲಿ ಸಕಲರಿಗೂ ಆರಾಧನೆಯ ಸ್ವಾತಂತ್ರ್ಯವಿದೆ. ಧರ್ಮಾಧರ್ಮ ಜ್ಞಾನದ ಸ್ವಾತಂತ್ರ್ಯವಿದೆ. ಇದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ



ಹಾಗೂ ತನ್ನ ನೀತಿ ನಿಯಮಗಳನ್ನು ಅನುಷ್ಠಾನಗೊಳಿಸುವಾಗ ಸರ್ಕಾರ ವಿವಿಧ ಶ್ರದ್ಧೆ–ನಂಬಿಕೆಗಳನ್ನುಳ್ಳ ಜನರಲ್ಲಿ ಪಕ್ಷಪಾತ ಮಾಡುವುದಿಲ್ಲ. ಭಾರತ ಸರ್ಕಾರ ಯಾವುದೇ ಪಂಥಕ್ಕೆ ಸೇರದ ಸರ್ಕಾರ. ಅದು ಪುರೋಹಿತಶಾಹಿ ಸರ್ಕಾರವಲ್ಲ.

ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ ಸಾರ್ವಭೌಮ ಎಂಬುದನ್ನು ಧರ್ಮರಾಜ್ಯ ಮಾನ್ಯ ಮಾಡುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಕೆಲವೊಂದು ಹಂಗುಗಳಿಗೆ, ಕೆಲವೊಂದು ನಿಯಂತ್ರಣಗಳಿಗೆ ಒಳಪಟ್ಟಿರುತ್ತಾನೆ. ಶಾಸಕಾಂಗ, ಕಾರ್ಯಾಂಗ ಹಾಗೂ ಜನತೆಯ ಹಕ್ಕುಗಳನ್ನು ಧರ್ಮ ನಿರ್ಧರಿಸುತ್ತದೆ. ಧರ್ಮ ಆ ಹಕ್ಕುಗಳನ್ನು ನಿಯಂತ್ರಿಸುತ್ತದೆ. ಧರ್ಮರಾಜ್ಯಕ್ಕೆ ಹತ್ತಿರ ಹತ್ತಿರ ಸಮಾನವಾದ ಇಂಗ್ಲಿಷ್ ಪದ ಪ್ರಯೋಗವೆಂದರೆ ಕಾನೂನಿನ ಪ್ರಭುತ್ವ (ರೂಲ್ ಆಫ್ ಲಾ). ಧರ್ಮ ರಾಜ್ಯ ಏಕಪಕ್ಷೀಯತೆಯನ್ನು ಹಾಗೂ ನಿರಂಕುಶ ಪ್ರಭುತ್ವವನ್ನು, ಸರ್ವಾಧಿಕಾರವನ್ನು ಹತ್ತಿಕ್ಕುತ್ತದೆ. ಅಂತೆಯೇ ಪ್ರಜಾಪ್ರಭುತ್ವ ದೊಂಬಿಪ್ರಭುತ್ವ ಆಗುವುದನ್ನು ತಡೆಗಟ್ಟುತ್ತದೆ. ಸರ್ಕಾರದ ಬೇರೆ ಬೇರೆ ಪರಿಕಲ್ಪನೆಗಳು ಹಕ್ಕುಪ್ರಧಾನವಾದವು. ಆದರೆ ಭಾರತೀಯ ಪರಿಕಲ್ಪನೆಯ ಧರ್ಮರಾಜ್ಯವು ಕರ್ತವ್ಯಪ್ರಧಾನವಾದದ್ದು. ಆದ್ದರಿಂದ ಸಹಜವಾಗಿಯೇ ಇಲ್ಲಿ ಹಕ್ಕುಗಳನ್ನು ಮೊಟಕುಗೊಳಿಸಲು ಹೊಸಕಿಹಾಕಲು ಅವಕಾಶವಿಲ್ಲ ಅಥವಾ ಮಿತಿಯಿಲ್ಲದ ಹಕ್ಕುಗಳಿಗಾಗಿ ಹಂಬಲಿಸಲು ಹಾತೊರೆಯಲು ಅವಕಾಶವೂ ಇಲ್ಲ. ಅಲ್ಲದೆ ಕರ್ತವ್ಯ ವಿಮುಖತೆಗೆ, ಅಧಿಕಾರವಿಕಲತೆಗೆ ಅಥವಾ ಹಕ್ಕುಗಳ ಘರ್ಷಣೆಗೂ ಇಲ್ಲಿ ಅವಕಾಶವಿಲ್ಲ.

**ಕರ್ತವ್ಯಗಳು –ಹಕ್ಕುಗಳು**

ಧರ್ಮರಾಜ್ಯದಲ್ಲಿ ಜನತೆಯ ಹಕ್ಕುಗಳು ಅನುಲ್ಲಂಘನೀಯವಾದವು. ಈ ಹಕ್ಕುಗಳ ರಕ್ಷಣೆ ಪ್ರಜೆಗಳ ಕರ್ತವ್ಯ. ಈ ಹಕ್ಕುಗಳನ್ನು ಚಲಾಯಿಸುವ ಮೂಲಕ ಪ್ರಜೆಗಳು ತಮ್ಮ ಧರ್ಮವನ್ನು ಪಾಲಿಸಬಹುದು. ನಮ್ಮ ಪರಿಕಲ್ಪನೆಯ ಪ್ರಕಾರ ಹಕ್ಕು ಎನ್ನುವುದು ಒಂದು ಸಾಧನವಿದ್ದಂತೆ. ವ್ಯಕ್ತಿಯೊಬ್ಬನು ಈ ಸಾಧನದ ಮೂಲಕ ತನ್ನ ಕರ್ತವ್ಯಗಳನ್ನು ನೆರವೇರಿಸಿ ತನ್ನ ಅಸ್ತಿತ್ವವನ್ನು ತನ್ನ ಸಂಬಂಧವನ್ನು ಪ್ರಚುರಪಡಿಸಬಹುದು. ಹೀಗಾಗಿ ಕರ್ತವ್ಯ ಮತ್ತು ಹಕ್ಕುಗಳು ಧರ್ಮಾಧಾರಿತ ತ್ರಿಕೋನವೊಂದರ ಎರಡು ಮುಖಗಳಿದ್ದಂತೆ. ಶಸ್ತ್ರಸಜ್ಜಿತನಾಗುವುದು ವೀರ ಯೋಧನ ಹಕ್ಕು. ಏಕೆಂದರೆ ಶಸ್ತ್ರಾಸ್ತ್ರರಹಿತನಾಗಿ ಅವನಿಂದ ತನ್ನ ಕರ್ತವ್ಯವನ್ನು ನಿರ್ವಹಿಸಲಾಗದು. ಪ್ರಜೆಗಳ ರಕ್ಷಣಾ ಕಾರ್ಯವನ್ನು ನಿರ್ವಹಿಸಲಾಗದು. ಆದರೆ ಯೋಧರಿಗೆ ಶಸ್ತ್ರಾಸ್ತ್ರಗಳನ್ನು ಹೇಗೆ ಪೂರೈಸಬೇಕು. ಯೋಧರು ಅವುಗಳನ್ನು ಹೇಗೆ ಬಳಸಬೇಕು ಎಂಬುದು ಸಂಪೂರ್ಣವಾಗಿ ಧರ್ಮದ ಆಧಿಪತ್ಯಕ್ಕೆ ಸೇರಿದ ವಿಷಯ. ಧರ್ಮಾಧಿಪತ್ಯವೇ ಇದನ್ನು ನಿರ್ಧರಿಸಬೇಕು.

**ಪ್ರಜಾಪ್ರಭುತ್ವ**

ಪ್ರಜಾಪ್ರಭುತ್ವ ಎಂದರೆ ಪ್ರಜೆಗಳ ಆಳ್ವಿಕೆ ಅಥವಾ ಲೋಕತಂತ್ರ. ಇದು ಜನರ ಹಕ್ಕನ್ನು ಅಥವಾ ಲೋಕಾಧಿಕಾರವನ್ನು ಎತ್ತಿಹಿಡಿಯುವ ಸಾಧನ ಹಾಗೂ ಪ್ರಜೆಗಳ ಕರ್ತವ್ಯವನ್ನು ಅಥವಾ ಲೋಕಕರ್ತವ್ಯವನ್ನು ಪ್ರಾಯೋಜಿಸುವ, ಪ್ರೋತ್ಸಾಹಿಸುವ ಸಾಧನ. ಪ್ರಜಾಪ್ರಭುತ್ವ ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲ ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲೂ ಅನುಷ್ಠಾನಗೊಳ್ಳಬೇಕು. ಪ್ರಜಾಪ್ರಭುತ್ವ ಅಖಂಡವಾದದ್ದು, ಅವಿಭಾಜ್ಯವಾದದ್ದು. ಅದನ್ನು ತುಣುಕು ತುಣುಕಾಗಿ ಪರಿಗ್ರಹಿಸಲಾಗದು. ಯಾವುದೇ ಒಂದು ಕ್ಷೇತ್ರದಲ್ಲಿ ಪ್ರಜಾಸತ್ತೆಯ ಲೋಪವಾದರೆ ಅದರಿಂದ ಉಳಿದ ಕ್ಷೇತ್ರಗಳಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗೆ ಧಕ್ಕೆಯುಂಟಾಗುವುದು. ಸಹನೆ–ಸಹಿಷ್ಣುತೆ, ಘನತೆ– ಗೌರವ, ಅಸ್ಮಿತೆಯ ಭಾವನೆ ಇವೆಲ್ಲ ಪ್ರಜಾಪ್ರಭುತ್ವದೊಂದಿಗೆ ಮೇಳೈಸಿವೆ. ಇವು ಪ್ರಜಾಪ್ರಭುತ್ವದ ಅತ್ಯಗತ್ಯ ಅಂಶಗಳು. ಇವಿಲ್ಲದೆ ಪ್ರಜಾಪ್ರಭುತ್ವಕ್ಕೆ ಅರ್ಥವಿಲ್ಲ. ಇವಿಲ್ಲದ ಪ್ರಜಾಪ್ರಭುತ್ವದ ಸಾಧನ ಸಾಮಗ್ರಿಗಳು ಉದ್ದೇಶರಹಿತವಾದವು. ಇವೆಲ್ಲವೂ ಇದ್ದೂ ಪ್ರಜಾಪ್ರಭುತ್ವದ ಸ್ವರೂಪ ಕಾಲದಿಂದ ಕಾಲಕ್ಕೆ ದೇಶದಿಂದ ದೇಶಕ್ಕೆ ವಿಭಿನ್ನವಾಗಿರಬಹುದು.

ಆಳುವ ಪ್ರತಿನಿಧಿಗಳನ್ನು ಆಯ್ಕೆಮಾಡುವ ಹಕ್ಕು ಪ್ರಜಾಪ್ರಭುತ್ವದ ಮುಖ್ಯಲಕ್ಷಣ. ಹಾಗೂ ಈ ರೀತಿ ಆಯ್ಕೆಗೊಳ್ಳುವ ಪ್ರಜೆಗಳ ಹಕ್ಕೂ ಸಹ ಒಂದು ಮುಖ್ಯ ಲಕ್ಷಣ. ವ್ಯಕ್ತಿ ಸ್ವಾತಂತ್ರ್ಯ, ಹಾಗೂ ಉತ್ಪನ್ನಗಳ ಆಯ್ಕೆಯ ಸ್ವಾತಂತ್ರ್ಯ ಆರ್ಥಿಕ ಪ್ರಜಾಪ್ರಭುತ್ವಕ್ಕೆ ಅನಿವಾರ್ಯವಾದದ್ದು. ಸಮಾನ ಸ್ಥಾನಮಾನ ಹಾಗೂ ಸಮಾನ ಅವಕಾಶಗಳಿಂದ ಸಾಮಾಜಿಕ ಪ್ರಜಾಪ್ರಭುತ್ವ ಹುಟ್ಟುತ್ತದೆ. ಈ ಎಲ್ಲಾ ಹಕ್ಕುಗಳೂ ಒಂದಕ್ಕೊಂದು ಪೂರಕವಾಗಿರಬೇಕು. ಒಂದು ಇನ್ನೊಂದರ ಪ್ರಯತ್ನಗಳನ್ನು ಕುಂಠಿತಗೊಳಿಸಬಾರದು. ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಪ್ರಯತ್ನಗಳಾಗಬೇಕು.

**ಸ್ವಾತಂತ್ರ್ಯ**

ಸ್ವಾತಂತ್ರ್ಯ ಎನ್ನುವುದು ವ್ಯಕ್ತಿಗಾಗಲಿ, ರಾಷ್ಟ್ರಗಳಿಗಾಗಲೀ ಒಂದು ಸಹಜವಾದ ಕಟ್ಟಾಸೆ, ಆಕಾಂಕ್ಷೆ, ಬಂಧನದಲ್ಲಿ, ಗುಲಾಮಗಿರಿಯಲ್ಲಿ ಸುಖವಾಗಲೀ ಶಾಂತಿಯಾಗಲೀ ಇಲ್ಲ. ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ ವಿಮೋಚನೆಯೂ ಅತ್ಯಗತ್ಯ. ವ್ಯಕ್ತಿ ಮತ್ತು ಸಮಾಜದ ಸಹಜ ಆಸಕ್ತಿಗಳಲ್ಲಿ ಸರ್ಕಾರ ಮಧ್ಯಪ್ರವೇಶ ಮಾಡದೇ ಇರುವುದೇ ರಾಜಕೀಯ ಸ್ವಾತಂತ್ರ್ಯ. ಆರ್ಥಿಕ ಸ್ವಾತಂತ್ರ್ಯ 'ಅರ್ಥ'ದಲ್ಲಿದೆ. ಅಂದರೆ ಮಾನವನ ಪ್ರಗತಿಗೆ ತೊಡಕಾಗಿರುವುದು, ಪ್ರತಿಬಂಧಕಗಳನ್ನು ಒಡ್ಡದೇ ಇರುವುದು. ಇತ್ಯಾತ್ಮಕ ಅಥವಾ ನೇತ್ಯಾತ್ಮಕವಾದ ಯಾವುದೇ ರೀತಿಯ ತೊಡಕಾಗದಿರುವುದು. ಕೊನೆಯದಾಗಿ ಹೇಳುವುದಾದರೆ, ಪ್ರತಿಬಂಧಕಗಳನ್ನೊಡ್ಡದೆ, ವ್ಯಕ್ತಿಯ ಸಹಜ



ಪ್ರಗತಿ, ಅಭ್ಯುದಯಗಳಿಗೆ ಅಗತ್ಯವಾದಂಥ ಸಹಕಾರವನ್ನು ಸಮಾಜ ನೀಡಬೇಕು. ಇಂಥ ಪರಿಸ್ಥಿತಿ ಸಮಾಜದಲ್ಲಿರಬೇಕು. ಇದೇ ಸಾಮಾಜಿಕ ಸ್ವಾತಂತ್ರ್ಯ ರಾಷ್ಟ್ರದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದ್ದಾಗಲೇ ಅಂದರೆ ಸ್ವತಂತ್ರ ರಾಷ್ಟ್ರದಲ್ಲಿ ಮಾತ್ರ ವ್ಯಕ್ತಿಗೆ ಇಂಥ ಸ್ವಾತಂತ್ರ್ಯ ಲಭಿಸುತ್ತದೆ.

ಪ್ರಜಾಪ್ರಭುತ್ವದಂತೆ ಸ್ವಾತಂತ್ರ್ಯವೂ ಅಖಂಡವಾದದ್ದು. ಅವಿಭಾಜ್ಯವಾದದ್ದು. ರಾಜಕೀಯ ಸ್ವಾತಂತ್ರ್ಯ ಇಲ್ಲದೆ ಉಳಿದೆರಡು ಸ್ವಾತಂತ್ರ್ಯಗಳನ್ನು ಪಡೆಯುವುದು ಅಸಾಧ್ಯವಾದದ್ದು. ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಜನತೆಗೆ ಸಾಮಾಜಿಕ ಸ್ವಾತಂತ್ರ್ಯ ಪ್ರಾಪ್ತವಾಗದು. ಬಹುಮಟ್ಟಿಗೆ ರಾಜಕೀಯ ಸ್ವಾತಂತ್ರ್ಯವೂ ದಕ್ಕದು ಹಾಗೂ ಸಾಮಾಜಿಕ ಸ್ವಾತಂತ್ರ್ಯರಹಿತ ಆರ್ಥಿಕ – ರಾಜಕೀಯ ಸ್ವಾತಂತ್ರ್ಯಗಳು ಸತ್ವಹೀನವಾಗುತ್ತವೆ.

**ಅರ್ಥವ್ಯವಸ್ಥೆಯ ಹತೋಟಿ**

ರಾಜಕೀಯ ಪ್ರಪಂಚದಂತೆ ಅರ್ಥಲೋಕದಲ್ಲೂ ತಾಟಸ್ಥ್ಯ ನೀತಿ ಎನ್ನುವುದು, ಅಂದರೆ ಸರ್ಕಾರ ಪ್ರವೇಶಿಸದೇ ಇರುವುದು ಕೃತಯುಗದ ಮಾತಾಯಿತು. ದಿಟವಾದ ಆದರ್ಶ ಸರ್ಕಾರದಲ್ಲಿ ಮಾತ್ರ ಇಂಥ ತಾಟಸ್ಥ್ಯನೀತಿ ಸಾಧ್ಯ. ಆದ್ದರಿಂದ ಸಂಪತ್ತಿನ ಉತ್ಪಾದನೆ, ವಿತರಣೆ ಮತ್ತು ಬಳಕೆಯ ಸೂಕ್ತ ನಿರ್ವಹಣೆಗೆ ಅರ್ಥ ವ್ಯವಸ್ಥೆಯ ಮೇಲೆ ಹತೋಟಿ ನಿಯಂತ್ರಣಗಳಿಗಾಗಿ ಹಲವಾರು ರೂಢಿಗಳು ಪದ್ಧತಿಗಳು ತಲೆಎತ್ತಿವೆ. ಈ ವಿಷಯದಲ್ಲಿ ಸರ್ಕಾರದ ಹೊಣೆ ಗುರುತರವಾದದ್ದು.

ಉತ್ಪಾದನೆಯ ಎಲ್ಲ ಮಾರ್ಗಗಳು ಸಾಧನ ಸಂಪತ್ತುಗಳು ಸರ್ಕಾರದ ಒಡೆತನದಲ್ಲಿ ಇದ್ದಲ್ಲಿ ಅದು ಆರ್ಥಿಕ ಹಾಗೂ ರಾಜಕೀಯ ಅಧಿಕಾರದ ಕೇಂದ್ರೀಕರಣಕ್ಕೆಡೆ ಮಾಡಿಕೊಡುತ್ತದೆ. ಇದು ಸರಿಯಲ್ಲ. ಆದರೆ ಸರ್ಕಾರ ಮೂಲ ಧ್ಯೇಯೋದ್ದೇಶಗಳನ್ನು ಸಾಧಿಸುವ ದೃಷ್ಟಿಯಿಂದ ಸಮತೋಲ ಕಾಪಾಡುವುದು ಅಗತ್ಯ. ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಇಂಥ ಸಮತೋಲ ಸಾಧಿಸಲು ಸರ್ಕಾರ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಹಲವಾರು ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಅರ್ಥ ವ್ಯವಸ್ಥೆಯ ಮೇಲೆ ಹತೋಟಿ ಕ್ರಮಗಳನ್ನು ಕೈಗೊಳ್ಳುವುದಷ್ಟೇ ಅಲ್ಲದೆ ಕೆಲವೊಂದು ನಿರ್ದಿಷ್ಟ ಕ್ಷೇತ್ರಗಳಲ್ಲಿ ಸರ್ಕಾರವೇ ಮಾಲೀಕತ್ವದ ಹಾಗೂ ಆಡಳಿತದ ಹೊಣೆಯನ್ನು ವಹಿಸಿಕೊಳ್ಳಬೇಕಾಗುತ್ತದೆ.

**ಅರ್ಥ ಮತ್ತು ಐಶ್ವರ್ಯದ ಹಂಬಲ**

'ಅರ್ಥ' ರಾಹಿತ್ಯದಿಂದ 'ಅರ್ಥ' ದ ಹಂಬಲದಿಂದ ಧರ್ಮಕ್ಕೆ ಹಾನಿ. ಐಶ್ವರ್ಯ, ಸಿರಿವಂತಿಕೆಗಳಿಂದಲೂ ಧರ್ಮಕ್ಕೆ ಹಾನಿಯಾಗುತ್ತದೆ. ಈ ಎರಡೂ ಸಂದರ್ಭಗಳಲ್ಲಿ, ಪರಿಸ್ಥಿತಿಯಲ್ಲಿ ಆರ್ಥಿಕ ಸ್ವಾತಂತ್ರ್ಯ ಮೊಟಕುಗೊಳ್ಳುತ್ತದೆ. ಸೂಕ್ತವಾದ

ಜೀವನಾವಶ್ಯಕತೆಗಳು ಲಭ್ಯವಾಗದಿರುವ ಪರಿಸ್ಥಿತಿ ಹಾಗೂ ಉತ್ಪಾದನೆ ಕಾಪಾಡಿಕೊಳ್ಳಲು ಅಥವಾ ಉತ್ಪಾದನೆ ಹೆಚ್ಚಿಸಲು ಅಗತ್ಯವಾದ ಬಂಡವಾಳ ಅಲಭ್ಯವಾದ ಪರಿಸ್ಥಿತಿಯಲ್ಲಿ ಆರ್ಥಿಕದಾರಿದ್ರ್ಯ ಅಥವಾ ಹಣಕಾಸಿನ ಕೊರತೆ ತಲೆದೋರುತ್ತದೆ. ಇಂಥ ಮುಗ್ಗಟ್ಟಿನ ಪರಿಸ್ಥಿತಿಯಲ್ಲೆ ಧನದಾಹ, ದುಡ್ಡಿನ ಹಂಬಲವೂ ಹೆಚ್ಚಾಗುತ್ತದೆ. ಇದು ವ್ಯಕ್ತಿ ಹಾಗೂ ಸಾಮಾಜಿಕ ಜೀವನಗಳೆರಡಕ್ಕೂ ಅನ್ವಯವಾಗುತ್ತದೆ.

- ಸಂಪತ್ತು ಅಥವಾ ಐಶ್ವರ್ಯ ಕೇವಲ ಒಂದು ಸಾಧನ ಎನ್ನುವುದನ್ನು ಮರೆತು ಧನಮೋಹಕ್ಕೆ ಜೋತುಬೀಳುವುದು
- ಧರ್ಮನಿಯಂತ್ರಿತ ಅಪೇಕ್ಷೆ–ಹಂಬಲಗಳ ಕೊರತೆ
- ಐಶ್ವರ್ಯ ಭೋಗದ ಸಾಮರ್ಥ್ಯ ಮತ್ತು ತಿಳುವಳಿಕೆಗಳ ಕೊರತೆ
- ಹಣ ಮತ್ತು ಸಂಪತ್ತಿನ ಅನುಚಿತ ಪ್ರಭಾವ
- ಸಮಾಜದಲ್ಲಿನ ಆರ್ಥಿಕ ಅಸಮಾನತೆಗಳು
- ಹಣದುಬ್ಬರ ಮತ್ತು ಅಪಮೌಲ್ಯ

– ಇವೆಲ್ಲ 'ಅರ್ಥ' ಸಂಕೀರ್ಣತೆಯಿಂದ ಧರ್ಮಕ್ಕೆ ಉಂಟಾಗಬಹುದಾದ ಕೇಡಿನ ಲಕ್ಷಣಗಳು. ಇಂಥ ಅತಿರೇಕಗಳು ಮಾನವ ಶಕ್ತಿಯನ್ನು ಶಿಥಿಲಗೊಳಿಸುತ್ತವೆ. ಆಖೈರಾಗಿ ಐಶ್ವರ್ಯ ಮತ್ತು ಅಭ್ಯುದಯದ ಲಯಕ್ಕೆಡೆ ಮಾಡಿಕೊಡುತ್ತವೆ.

### ಆಸ್ತಿಯ ಒಡೆತನ

ಆಸ್ತಿಯ ಒಡೆತನ ತುಂಬ ಮಹತ್ವದ ವಿಷಯ. ವ್ಯಕ್ತಿಯ ಆಸ್ತಿ ಒಡೆತನದ ಹಕ್ಕು ಅಬಾಧಿತವಾದದ್ದು ಎಂದು ಕೆಲವರ ತರ್ಕ. ಆಸ್ತಿಯ ಒಡೆತನ ಹಾಗೂ ವಿಶೇಷವಾಗಿ ಉತ್ಪಾದನಾ ಮೂಲಗಳ ಸಾಧನ ಸಂಪತ್ತುಗಳ ಮಾಲೀಕತ್ವವೇ ಎಲ್ಲ ಕೇಡು–ಕೆಡಕುಗಳಿಗೆ ಮೂಲ ಕಾರಣವೆಂಬುದು ಇನ್ನು ಕೆಲವರ ವಾದ. ಎಲ್ಲಾ ಆಸ್ತಿಯೂ ಭಗವಂತನಿಗೆ ಸೇರಿದ್ದು. ಮನುಷ್ಯ ಏನಿದ್ದರೂ ಅದರ ಧರ್ಮದರ್ಶಿ ಎನ್ನುವ ಅಭಿಪ್ರಾಯವನ್ನು ಸಮರ್ಥಿಸುವ ಚಿಂತಕರೂ ಇದ್ದಾರೆ. ತಾತ್ವಿಕವಾಗಿ ಈ ಧರ್ಮದರ್ಶಿತ್ವದ ಪರಿಕಲ್ಪನೆ ಪ್ರಶಂಸನೀಯವಾದದ್ದು. ಆದರೆ ವಾಸ್ತವ ಕಾರ್ಯಾನುಷ್ಠಾನದಲ್ಲಿ ಧರ್ಮದರ್ಶಿಗಳ ನಡಾವಳಿಯನ್ನು ನಿಯಂತ್ರಿಸುವ ನೀತಿ ನಿಯಮಗಳು ಯಾವುದು. ಅವರ ಪರಿಮಿತಿಗಳೇನು ಎಂಬ ಪ್ರಶ್ನೆ ಯಾವಾಗಲೂ ಇದ್ದದ್ದೇ.

ಒಬ್ಬ ವ್ಯಕ್ತಿಯಾಗಲೀ ಅಥವಾ ವ್ಯಕ್ತಿಯು ಅವಿಭಾಜ್ಯ ಅಂಗವಾದ ಹಲವು ವ್ಯಕ್ತಿಗಳ ಸಮುದಾಯವಾಗಲಿ ಆಸ್ತಿರಹಿತವಾಗಿ ಬದುಕುವುದು ಕಷ್ಟ. ಆಸ್ತಿಯೊಂದಿಗೇ ಕರ್ಮಸಂಬಂಧವೂ ಇದೆ; ಕರ್ಮಫಲವೂ ಇದೆ. ಬಳಕೆಯ ಸ್ವಾತಂತ್ರ್ಯ ಹಾಗೂ ಉಪಭೋಗದ ಸ್ವಾತಂತ್ರ್ಯದಿಂದ ವ್ಯಕ್ತಿಯಲ್ಲಿ ಆಸ್ತಿಯ ಪರಿಕಲ್ಪನೆ ಹುಟ್ಟುತ್ತದೆ.



ಸಂಪಾದಿಸಿದ್ದೆಲ್ಲವನ್ನೂ ತಿಂದು ಮುಗಿಸದೆ ಉಳಿತಾಯ ಮಾಡಬೇಕು, ಕೂಡಿಡಬೇಕು ಎನ್ನುವುದು ಮಾನವನಲ್ಲಿರುವ ಸಹಜ ಮನೋಧರ್ಮ. ಇದು ರಾಷ್ಟ್ರೀಯ ಶೀಲವೂ ಹೌದು. ಆಸ್ತಿ, ಮನುಷ್ಯನಿಗೆ ಘನತೆ, ಭದ್ರತೆ ಮತ್ತು ತೃಪ್ತಿಯ ಭಾವನೆಗಳನ್ನು ಕೊಡುತ್ತದೆ. ಹೀಗಾಗಿ ಆಸ್ತಿಯನ್ನು ಸಂಪೂರ್ಣವಾಗಿ ತ್ಯಜಿಸಲೂ ಬಾರದು, ನಿರಾಕರಿಸಲೂ ಬಾರದು.

ಆಸ್ತಿಯ ಒಡೆತನ ಅಥವಾ ಮಾಲೀಕತ್ವದ ಹಕ್ಕು ಸಾಮಾಜಿಕ ಅಂಗೀಕಾರ, ಅನುಮೋದನೆಗಳಿಗೆ ಒಳಪಟ್ಟ ವಿಷಯ. ಆಸ್ತಿಯ ಪರಿಕಲ್ಪನೆ ತುಂಬ ತೊಡಕಿನದು, ಸಂಕೀರ್ಣವಾದದ್ದು. ಇದು ದೇಶಕಾಲಗಳಿಗನುಗುಣವಾಗಿ, ವಸ್ತು ಉದ್ದೇಶಗಳಿಗನುಗುಣವಾಗಿ ಭಿನ್ನಭಿನ್ನವಾಗಿರುತ್ತದೆ. ಸಮಾಜದ ವಿವಿಧ ಅಗತ್ಯಗಳಿಗನುಸಾರವಾಗಿ ವ್ಯತ್ಯಾಸಗಳುಂಟಾಗುತ್ತವೆ. ಸಮಾಜಕ್ಕೆ ಆಸ್ತಿ ನಿಯಂತ್ರಣದ ಹಕ್ಕು ಇರಬಾರದೆಂದು ಕೆಲವರು ಹೇಳುತ್ತಾರೆ. ಒಂದು ನಿರ್ದಿಷ್ಟ ಕಾಲಕ್ಷಣದಲ್ಲಿ ಚಾಲ್ತಿಯಲ್ಲಿರುವ ಆಸ್ತಿ ಪರಿಕಲ್ಪನೆಯಲ್ಲಿ ಬದಲಾವಣೆಗಳಿಗೆ ಅವಕಾಶವಿರಬಾರದೆಂಬುದು ಇಂಥವರ ವಾದ. ಆದರೆ ಸಮಾಜಕ್ಕೆ ಅಂಥ ಅಧಿಕಾರವಿದೆ. ಆಸ್ತಿ ಹಕ್ಕುಗಳಲ್ಲಿ ಆಗಿಂದಾಗ್ಗೆ ಮಾರ್ಪಾಟುಗಳನ್ನು ಮಾಡುವುದು ಸಮಾಜದ ಕರ್ತವ್ಯ, ಹೊಣೆಗಾರಿಕೆ. ಆಸ್ತಿಹಕ್ಕು ಅಬಾಧಿತ, ಅದು ಅಪರಿವರ್ತನೀಯ ಎನ್ನುವಂಥಾದ್ದು ಏನೂ ಇಲ್ಲ.

ಆಸ್ತಿಯ ಹಕ್ಕನ್ನು ಕೆಲವೊಂದು ಮಿತಿಗಳಿಗೊಳಪಡಿಸಿ ಮಾನ್ಯ ಮಾಡಬೇಕು. ವ್ಯಕ್ತಿ ಮತ್ತು ಸಮಾಜದ ಅಗತ್ಯಗಳು ಹಾಗೂ ಜೀವನ ಮೌಲ್ಯಗಳಿಗನುಸಾರವಾಗಿ ಈ ಮಿತಿಗಳನ್ನು ನಿರ್ಧರಿಸಬೇಕು. ಆಸ್ತಿಯು ಸಂಪತ್ತು ಆಲಸ್ಯಕ್ಕೆಡೆ ಮಾಡಿಕೊಡುವುದಾದಲ್ಲಿ ಅಥವಾ ಪರಾವಲಂಬನೆಗೆ ಅವಕಾಶ ಮಾಡಿಕೊಡುವುದಾದಲ್ಲಿ ಅಥವಾ ಉಳಿದವರ ಸ್ವಾತಂತ್ರ್ಯಕ್ಕೆ ಚ್ಯುತಿ ತರುವುದಾದಲ್ಲಿ ಆಸ್ತಿಹಕ್ಕನ್ನು ನಿಯಂತ್ರಿಸುವುದು ಅನಿವಾರ್ಯವಾಗುತ್ತದೆ.

ಚಾಲ್ತಿಯಲ್ಲಿರುವ ಆಸ್ತಿಪರಿಕಲ್ಪನೆಯಲ್ಲಿ ಮಾರ್ಪಾಟುಗಳನ್ನು ಮಾಡಿದಾಗ ಸಂತ್ರಸ್ತ ವ್ಯಕ್ತಿಗಳಿಗೆ ಪುನರ್ವಸತಿ ಕಲ್ಪಿಸುವುದು ಮುಖ್ಯವಾಗಿ ಸಮಾಜದ ಜವಾಬ್ದಾರಿ. ಆದರೆ ಪರಿಹಾರ ತತ್ತ್ವಾಧಾರಿತವಾಗಿರಬೇಕು. ಖಚಿತತೆ ಮತ್ತು ಸ್ಥಿರತೆ ದೃಷ್ಟಿಯಿಂದ ಇದು ಅಗತ್ಯ.

### ಸ್ವಸ್ಥ ಅರ್ಥವ್ಯವಸ್ಥೆಯ ಮಾನದಂಡ

ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಯೇ ದೇಶದ ಅರ್ಥವ್ಯವಸ್ಥೆಯ ಹಾಗೂ ರಾಜಕೀಯ ವ್ಯವಸ್ಥೆಯ ಮುಖ್ಯ ಆಶಯವಾಗಿದೆ. ಸಂಪತ್ತಿನ ಉತ್ಪಾದನೆಯ ಮುಖ್ಯಗುರಿ ಮಾನವನಿಗೆ ಸುಖ–ಸಂತೋಷ ಕೊಡುವುದೇ ಆಗಿದೆ. ಮಾನವನ

ಶ್ರಮ ಉತ್ಪಾದನೆಯ ಮೂಲ ಸಂಪನ್ಮೂಲವಾಗಿದೆ. ನೈಸರ್ಗಿಕ ಸಂಪನ್ಮೂಲಗಳನ್ನು ತನ್ನ ಅಗತ್ಯಗಳ ಪೂರೈಕೆಗಾಗಿ ಬಳಸಿಕೊಳ್ಳುವುದು ಮಾನವನ ಆರ್ಥಿಕ ಚಟುವಟಿಕೆಯ ಮುಖ್ಯ ಉದ್ದೇಶವಾಗಿದೆ. ಈ ಅಗತ್ಯಗಳ ಈಡೇರಿಕೆಗೆ ಹಾಗೂ ಸರ್ವಾಂಗೀಣ ಯೋಗಕ್ಷೇಮ, ಕಲ್ಯಾಣಕ್ಕೆ ಸಹಾಯ ಮಾಡುವಂಥ ವ್ಯವಸ್ಥೆಯೇ ಸಾಧುವಾದದ್ದು, ಉತ್ತಮವಾದದ್ದು. ವ್ಯಕ್ತಿಯ ಆರ್ಥಿಕ ಒಳಿತಿಗೆ ಮಾತ್ರ ಮುನ್ನಡೆ ಒದಗಿಸುವಂಥ ಆದರೆ ಉಳಿದ ನಿಟ್ಟುಗಳಲ್ಲಿ ಅವನ ಪ್ರಗತಿಯನ್ನು ಅಲಕ್ಷಿಸುವಂಥ ವ್ಯವಸ್ಥೆ ಸರಿಯಾದುದಲ್ಲ. ಪ್ರತಿಯೊಂದು ಅರ್ಥವ್ಯವಸ್ಥೆಯ ಕೇಂದ್ರ ಬಿಂದು ಮಾನವನೇ ಆಗಿರಬೇಕು.

ಧನವಂತರನ್ನು ತನ್ನೆಲ್ಲ ಚಟುವಟಿಕೆಗಳ ಕೇಂದ್ರಬಿಂದುವಾಗಿ ಮಾನ್ಯ ಮಾಡುವ ಬಂಡವಾಳಶಾಹಿ ಪದ್ಧತಿ ಅಸಮರ್ಪಕವಾದದ್ದು. ಹೆಚ್ಚು ಹೆಚ್ಚು ಲಾಭಗಳಿಸುವ ಸ್ವಾರ್ಥಬಯಕೆ ಈ ಬಂಡವಾಳಶಾಹಿ ಅರ್ಥ ವ್ಯವಸ್ಥೆಯ ಹಿಂದಿನ ಪ್ರೇರಕಶಕ್ತಿ. ಈ ವ್ಯವಸ್ಥೆಯಲ್ಲಿ ಸ್ಪರ್ಧೆಯೇ ಪ್ರತಿಬಂಧಕ. ಇದು ಭಾರತೀಯ ಸಿದ್ಧಾಂತಕ್ಕೆ, ತತ್ವದರ್ಶನಗಳಿಗೆ ಅನುಗುಣವಾದುದಲ್ಲ. ಬಂಡವಾಳಶಾಹಿ ಅರ್ಥವ್ಯವಸ್ಥೆ ಸೃಷ್ಟಿಸಿದ ಸಮಸ್ಯೆಗಳಿಗೆ ಪ್ರತಿಕ್ರಿಯೆಯಾಗಿ ಸಮಾಜವಾದ ಹುಟ್ಟಿಕೊಂಡಿತು. ಸಮಾಜವಾದದ ಧ್ಯೇಯೋದ್ದೇಶಗಳೇನೋ ಪ್ರಶಂಸಾರ್ಹವಾದದ್ದೆ, ಆದರೆ ಆಶ್ಚರ್ಯರಾಗಿ ಇದು ಮಾನವಕುಲಕ್ಕೆ ಫಲಕಾರಿಯಾಗುವುದರಲ್ಲಿ ವಿಫಲಗೊಂಡಿತು. ವೈಜ್ಞಾನಿಕ ಸಮಾಜವಾದದ ಪ್ರತಿಪಾದಕನಾದ ಕಾರ್ಲ್‌ಮಾರ್ಕ್ಸ್ ನಡೆಸಿದ ಸಮಾಜ ಮತ್ತು ವ್ಯಕ್ತಿ ವಿಶ್ಲೇಷಣೆಗಳು ಮೂಲಭೂತವಾಗಿ ಐಹಿಕವಾದದ್ದು. ಪ್ರಾಪಂಚಿಕ ಭೋಗಭಾಗ್ಯಗಳಿಗೆ ಸಂಬಂಧಿಸಿದ್ದು. ಆದ್ದರಿಂದ ಇದು ಅಸಮರ್ಪಕ, ಅಪರ್ಯಾಪ್ತ. ವರ್ಗ ಸಂಘರ್ಷದ ಪರಿಲ್ಪನೆಯಲ್ಲಿ ಸ್ವಯಂಸ್ಫೂರ್ತಿಯ ಮನೋಧರ್ಮಕ್ಕೆ ಅವಕಾಶವಿಲ್ಲ ಹಾಗೂ ಇದರಿಂದ ಖಾಯಂ ಸಹಕಾರಕ್ಕೂ ಆಸ್ಪದವಿಲ್ಲ.

ಆಸ್ತಿ ವಿಷಯದಲ್ಲಿ ಬಂಡವಾಳಶಾಹಿ ಮತ್ತು ಸಮಾಜವಾದಗಳಲ್ಲಿ ಅಭಿಪ್ರಾಯ ಬೇಧವಿದೆ. ಆದರೆ ಇವೆರಡೂ ಕೇಂದ್ರೀಕರಣ ಮತ್ತು ಏಕಸ್ವಾಮ್ಯತೆಗೆಡೆ ಮಾಡಿಕೊಡುತ್ತದೆ. ಹೀಗಾಗಿ ಈ ಎರಡೂ ವ್ಯವಸ್ಥೆಗಳಲ್ಲಿ ಮಾನವ ನಿರ್ಲಕ್ಷಿತ. ಮಾನವನ ಸ್ಫೂರ್ತಿ ಚೈತನ್ಯಗಳಿಗೆ ಅಡಚಣೆಯುಂಟು ಮಾಡದಂಥ, ಸಮಾಜದೊಂದಿಗೆ ವ್ಯಕ್ತಿಯ ಸಂಬಂಧಗಳಿಗೆ ಹಾಗೂ ಜೀವನ ಮೌಲ್ಯಗಳಿಗೆ ಬಾಧಕವುಂಟು ಮಾಡದಂಥ ವ್ಯವಸ್ಥೆಯೊಂದು ನಮಗೆ ಬೇಕಾಗಿದೆ. ವಿಕೇಂದ್ರೀಕೃತ ಅರ್ಥವ್ಯವಸ್ಥೆಯಿಂದ ಈ ಉದ್ದೇಶ ಈಡೇರಬಲ್ಲದು.

## ವಿಕೇಂದ್ರಿತ ಅರ್ಥವ್ಯವಸ್ಥೆ

ಅಧಿಕಾರ ಕೇಂದ್ರೀಕರಣ ಪ್ರಜಾಪ್ರಭುತ್ವಕ್ಕೆ ಹಾಗೂ ಮಾನವನ ಸ್ವಾತಂತ್ರ್ಯಕ್ಕೆ



ಅಸಂಗತವಾದದ್ದು. ಹೊಂದಿಕೊಳ್ಳುವುದಿಲ್ಲ. ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಗೆ ಒಳಪಟ್ಟಂತೆ ಆರ್ಥಿಕ ಅಧಿಕಾರವನ್ನು ಅಡ್ಡಡ್ಡವಾಗಿ ಮತ್ತು ಲಂಬವಾಗಿ ವಿಕೇಂದ್ರೀಕರಿಸಬೇಕು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೈಗಾರಿಕೀಕರಣ ಪ್ರಕ್ರಿಯೆ ಅಧಿಕಾರ ಕೇಂದ್ರೀಕರಣಕ್ಕೆಡೆ ಮಾಡಿಕೊಟ್ಟಿದೆ. ಪಬ್ಲಿಕ್ ಲಿಮಿಟೆಡ್ ಕಂಪನಿ, ಮ್ಯಾನೇಜಿಂಗ್ ಏಜೆನ್ಸಿ, ಹೋಲ್ಡಿಂಗ್ ಕಂಪನಿ ಇತ್ಯಾದಿಗಳು ಸಂಪತ್ತು ಮತ್ತು ಅಧಿಕಾರ ಕೆಲವೇ ಕೆಲವು ಜನರ ಕೈಯ್ಯಲ್ಲಿ ಕೇಂದ್ರೀಕೃತವಾಗುವುದಕ್ಕೆ ಉತ್ತೇಜಕಾರಿಯಾಗಿವೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯ ಅನೇಕ ಕೇಡು–ಕೆಡಕು–ಹಾನಿಗಳಿಗೆ ಕೇಂದ್ರೀಕೃತ ವ್ಯವಸ್ಥೆಯೇ ಕಾರಣ. ಸಮಾಜವಾದಿ ವ್ಯವಸ್ಥೆಗೆ ಕೇಂದ್ರೀಕರಣದಲ್ಲಿ ಹಾನಿ ಏನಿಲ್ಲ ಎಂದೇ ತೋರಿದೆ. ಬಂಡವಾಳವನ್ನು ಖಾಸಗಿಯವರ ಕೈಯ್ಯಿಂದ ಸರ್ಕಾರಕ್ಕೆ ಹಸ್ತಾಂತರಿಸುವುದು ಸಮಾಜವಾದಿಗಳ ಉದ್ದೇಶ. ಸಮಾಜವಾದಿ ವ್ಯವಸ್ಥೆ ಆಳ್ವಿಕೆಯಲ್ಲಿ ಆರ್ಥಿಕ ಮತ್ತು ರಾಜಕೀಯ ಅಧಿಕಾರ ಒಡೆತನಗಳು ಒಬ್ಬರ ಕೈಯ್ಯಲ್ಲೇ ಇರುತ್ತವೆ. ಇದರಿಂದಾಗಿ ಕೇಂದ್ರೀಕರಣದ ಕೇಡು – ಹಾನಿಗಳು ಹೆಚ್ಚು. ಈ ವ್ಯಾಧಿಗಳಿಗೆ ಪರಿಹಾರವಿದೆ. ವಿಕೇಂದ್ರಿಕರಣವೊಂದೇ ಇದಕ್ಕೆ ಪರಿಹಾರ. ವಿಕೇಂದ್ರೀಕರಣದ ಅನುಸಾರವಾಗಿಯೇ ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳನ್ನು, ಪದ್ಧತಿಗಳನ್ನು ಮಾನ್ಯ ಮಾಡಬೇಕಾಗುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಅನ್ವೇಷಣೆ, ಆವಿಷ್ಕಾರಗಳು ಉದ್ಯಮಗಳ ವಿಕೇಂದ್ರೀಕರಣದ ಪರವಾಗಿವೆ. ಮನುಷ್ಯನ ವ್ಯಕ್ತಿತ್ವದ ಸರ್ವಾಂಗೀಣ ಪ್ರಗತಿಗೆ ವಿಕೇಂದ್ರೀಕರಣ ತುಂಬ ಹಿತಕರವಾದದ್ದು. ವ್ಯಕ್ತಿಗಳು ಅಥವಾ ಒಂದು ಕುಟುಂಬ ಖಾಸಗಿಯಾಗಿ ಅಥವಾ ಸಹಕಾರಿ ಒಡೆತನದಲ್ಲಿ ನಿರ್ವಹಿಸಬಹುದಾದಂಥ ಸಣ್ಣ ಕೈಗಾರಿಕೆಗಳು, ಸಣ್ಣಪುಟ್ಟ ವಾಣಿಜ್ಯ ವ್ಯಾಪಾರಿಗಳು ಹಾಗೂ ಕೃಷಿ ಕಾರ್ಯಗಳು ನಮ್ಮ ಅರ್ಥವ್ಯವಸ್ಥೆಯ ಆಧಾರವಾಗಬೇಕು.

## ಪ್ರಗತಿಯ ಮಾನದಂಡ

ಹುಟ್ಟುವ ಪ್ರತಿಯೊಂದು ಮಗುವಿನ ಪಾಲನೆ ಪೋಷಣೆಗೆ ವ್ಯವಸ್ಥೆಮಾಡುವುದು ಸಮಾಜದ ಹೊಣೆ. ಮಗುವಿಗೆ ಶಿಕ್ಷಣ ಕೊಡಿಸುವುದು ಸಮಾಜದ ಜವಾಬ್ದಾರಿ. ಇದರಿಂದ ಮಗುವಿನ ವ್ಯಕ್ತಿತ್ವ ವಿಕಾಸಗೊಳ್ಳುತ್ತದೆ. ಮುಂದೆ ಈ ಮಗುವೇ ಜವಾಬ್ದಾರಿಯುತ ಸದಸ್ಯನಾಗಿ ಸಮಾಜದ ಸ್ವಾಸ್ಥ್ಯಕ್ಕೆ ಪಾಲನೆ–ಪೋಷಣೆಗೆ ಕೊಡುಗೆ ನೀಡುತ್ತದೆ. ಪ್ರತಿಯೊಬ್ಬ ಸಮರ್ಥ ವ್ಯಕ್ತಿಗೂ ಉದ್ಯೋಗ ಒದಗಿಸುವುದು. ಜೀವನ ನಿರ್ವಹಣೆಗೆ ಅವಕಾಶ ಕಲ್ಪಿಸುವುದು ಹಾಗೂ ಸಾಕಷ್ಟು ವಿಶ್ರಾಂತಿ ಕಲ್ಪಿಸುವುದು ಪ್ರತಿಯೊಂದು ಸಮಾಜದ ಹೊಣೆಗಾರಿಕೆ. ಪ್ರತಿ ನಾಗರಿಕ ಸಮಾಜವೂ ಒಂದಲ್ಲ ಒಂದು ರೀತಿಯಲ್ಲಿ ಈ ಹಂಗು ಹೊಣೆಯನ್ನು ನಿರ್ವಹಿಸುತ್ತಿದೆ. ವಾಸ್ತವವಾಗಿ ಇದೇ ಪ್ರಗತಿಯ ಮಾನದಂಡವಾಗಿದೆ. ಆದ್ದರಿಂದ ಕನಿಷ್ಠ ಜೀವನಮಟ್ಟ, ಶಿಕ್ಷಣ

ಹಾಗೂ ಉದ್ಯೋಗಗಳ ಹಕ್ಕನ್ನು, ಸಾಮಾಜಿಕ ಭದ್ರತೆ ಮತ್ತು ಕಲ್ಯಾಣದ ಹಕ್ಕನ್ನು ಮೂಲಭೂತ ಹಕ್ಕುಗಳಾಗಿ ಒಪ್ಪಿಕೊಳ್ಳಬೇಕು.

**ಅಖಂಡ ಮಾನವತೆ**

ನಮ್ಮ ವ್ಯವಸ್ಥೆಯಲ್ಲಿ ವ್ಯಕ್ತಿಗೆ ಪ್ರಮುಖ ಸ್ಥಾನಮಾನವಿದೆ. 'ಯತ್‌ಪಿಂಡೇ ತದ್ ಬ್ರಹ್ಮಾಂಡೇ' (ಪಿಂಡಾಂಡವೂ ಬ್ರಹ್ಮಾಂಡದಲ್ಲಿದೆ) ತತ್ತ್ವದ ಪ್ರಕಾರ ವ್ಯಕ್ತಿಯು ಸಮಾಜದ ಪ್ರತಿನಿಧಿ ಹಾಗೂ ಪ್ರಧಾನ ಸಾಧನ. ಲೌಕಿಕ ಸಂಪತ್ತು ಮನುಷ್ಯನ ಸುಖಸಂತೋಷಗಳಿಗೆ ಒಂದು ಸಾಧನ ಅಷ್ಟೇ. ಅದೇ ಸರ್ವಸ್ವವಲ್ಲ. ಅದರಿಂದಲೇ ಸಕಲವೂ ಕೊನೆಗಾಣುವುದಿಲ್ಲ. ಸಮೂಹ ಮಾನವ ಪರಿಕಲ್ಪನೆಯನ್ನು ಆಧರಿಸಿದ ಗ್ರಹಿಕೆಯು ಅಸ್ಮಿತೆಯ ಗುಣಲಕ್ಷಣಗಳನ್ನು ಪರಿಗಣಿಸಿಲ್ಲ. ಇದು ಅಸಮರ್ಪಕವಾದ ತಿಳುವಳಿಕೆ. ಮನುಷ್ಯನ ಯಾವುದೋ ಒಂದು ಗುಣವಿಶೇಷವನ್ನು ಮಾತ್ರ ಗಣನೆಗೆ ತೆಗೆದುಕೊಂಡು, ಮನುಷ್ಯ ಶರೀರ, ಮನಸ್ಸು, ಬುದ್ಧಿ ಮತ್ತು ಆತ್ಮಗಳನ್ನುಳ್ಳ ಒಬ್ಬ ಸಾವಯವ ವ್ಯಕ್ತಿ ಎಂಬುದನ್ನು ಪರಿಗಣಿಸದೆ ಇರುವ ಪದ್ಧತಿಯೂ ಅಸಮರ್ಪಕವಾದದ್ದು. ಮನುಷ್ಯನಾದವನು ಹಲವಾರು ಪುರುಷಾರ್ಥಗಳನ್ನು ಸಾಧಿಸಬೇಕಾಗುತ್ತದೆ. ಇಂತಹದೊಂದು ಒತ್ತಡ ಅವನಲ್ಲಿ ಅಂತರ್ಗತವಾಗಿರುತ್ತದೆ. ಏಕಕಾಲದಲ್ಲಿ ಅಸಂಖ್ಯಾತ ವ್ಯಕ್ತಿ ಹಾಗೂ ಸಾಂಸ್ಥಿಕ ಅಸ್ತಿತ್ವಗಳನ್ನು ಹಂಚಿಕೊಳ್ಳುವ ಸಾಮರ್ಥ್ಯವುಳ್ಳವನೇ ನಮ್ಮ ಅಖಂಡ ಮಾನವ. ಇವನೇ ನಮ್ಮ ಆದರ್ಶ. ಅಖಂಡ ಮಾನವತೆ ಎನ್ನುವುದು ಒಂದು ಅಡಿಗಲ್ಲು. ಇದರ ಮೇಲೆ ಈ ವ್ಯವಸ್ಥೆಯನ್ನು ಕಟ್ಟಬೇಕಾಗಿದೆ.

ಮಾನವತಾ ಸಿದ್ಧಾಂತವನ್ನು ಪ್ರತಿಪಾದಿಸುವ ಅನೇಕ ಪಂಥಗಳಿವೆ. ಆದರೆ ಇವರ ಆಲೋಚನೆಗಳ ಬೇರು ಪಾಶ್ಚಾತ್ಯ ತತ್ತ್ವ ಸಿದ್ಧಾಂತಗಳಲ್ಲಿರುವಂಥಾದ್ದು ಎಂದೇ ಇವರ ಪ್ರತಿಪಾದನೆಗಳು ಅತ್ಯವಶ್ಯವಾಗಿ ಪ್ರಾಪಂಚಿಕವಾದವು. ಮನುಷ್ಯನ ನಡವಳಿಕೆ ಅಥವಾ ನೈತಿಕ ಸ್ವಭಾವಗಳ ಬಗ್ಗೆ ತಾತ್ವಿಕ ಸಮಜಾಯಿಷಿ ಕಾರಣಗಳನ್ನು ನೀಡುವುದು ಈ ಚಿಂತಕರಿಗೆ ಸಾಧ್ಯವಾಗಿಲ್ಲ. ಆಧ್ಯಾತ್ಮಿಕತೆ ಮುಖ್ಯವಾದದ್ದು. ಇದನ್ನು ನಿರಾಕರಿಸಿ ಮನುಷ್ಯನ ಸ್ವಭಾವ, ನಡಾವಳಿ ಹಾಗೂ ಬ್ರಹ್ಮಾಂಡದೊಂದಿಗೆ ಅವನ ಸಂಬಂಧಗಳನ್ನು ವಿವರಿಸಲಾಗದು, ವಿಷದಪಡಿಸಲಾಗದು.

**ಪಾಶ್ಚಾತ್ಯ ಸಿದ್ಧಾಂತಗಳ ಅಂಧ ಅನುಕರಣೆ**

ಭಾರತದಲ್ಲಿನ ಬಹುತೇಕ ರಾಜಕೀಯ ಪಕ್ಷಗಳು ಪಾಶ್ಚಾತ್ಯ ತತ್ತ್ವ ಸಿದ್ಧಾಂತಗಳಿಂದ ಸ್ಫೂರ್ತಿ ಪಡೆದ ಪಕ್ಷಗಳು. ಅವು ಪಶ್ಚಿಮದ ಒಂದಲ್ಲ ಒಂದು ರಾಜಕೀಯ ಆಂದೋಲನದ ಜೊತೆ ಸಂಬಂಧ ಹೊಂದಿದ್ದು ಅಲ್ಲಿನ ವ್ಯವಸ್ಥೆಯ



ಪದ್ಧತಿಗಳ ಪ್ರತಿಕೃತಿಗಳಂತಿವೆ. ಭಾರತದ ಆಶೋತ್ತರಗಳನ್ನು ಈ ರಾಜಕೀಯ ಪಕ್ಷಗಳಿಂದ ಈಡೇರಿಸಲಾಗದು. ಅಥವಾ ಈ ಪಕ್ಷಗಳು ಕೂಡು ಹಾದಿಗೆ ಬಂದು ನಿಂತಿರುವ ಪ್ರಪಂಚಕ್ಕೆ ಮಾರ್ಗದರ್ಶನ ನೀಡುವಂಥ ಸಾಮರ್ಥ್ಯವನ್ನೂ ಹೊಂದಿಲ್ಲ. ಅವು ಮಾರ್ಗದರ್ಶನ ಮಾಡಲಾರವು.

ಭಾರತೀಯ ಸಂಸ್ಕೃತಿಗೆ ನಿಷ್ಠವಾಗಿರುವ ಕೆಲವು ಪಕ್ಷಗಳಿವೆ. ಆದರೆ ಅವುಗಳಲ್ಲಿ ಭಾರತೀಯ ಸಂಸ್ಕೃತಿಯ ಚೈತನ್ಯಶೀಲತೆ ಇಲ್ಲ ಹಾಗೂ ಶಾಶ್ವತ ಸ್ವರೂಪದ ಭಾರತೀಯ ಮೌಲ್ಯಗಳು ಈ ಪಕ್ಷಗಳಿಗೆ ನಿಂತ ನೀರಿನಂತೆ, ಅನಮ್ಯವಾದಂತೆ, ಜಗ್ಗದಂತೆ ತೋರುತ್ತವೆ. ಹೀಗಾಗಿ ಅವು ಹಳೆಯ ಪದ್ಧತಿಗಳನ್ನೇ ಸಮರ್ಥಿಸುತ್ತವೆ ಹಾಗೂ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಪ್ರತಿಪಾದಿಸುತ್ತವೆ. ಭಾರತೀಯ ಸಂಸ್ಕೃತಿಯಲ್ಲಿರುವ ಕ್ರಾಂತಿಕಾರಕ ಮೂಲಾಂಶಗಳನ್ನು ಗ್ರಹಿಸುವುದರಲ್ಲಿ ಇವರು ವಿಫಲರಾಗಿದ್ದಾರೆ. ನಮ್ಮ ಸಮಾಜದಲ್ಲಿ ಈಗಿರುವ ಅಸ್ಪೃಶ್ಯತೆ, ಜಾತಿಬೇಧ, ವರದಕ್ಷಿಣೆ, ತಿಥಿಗಳು, ಮಹಿಳೆಯರನ್ನು ಅಲಕ್ಷಿಸುತ್ತಿರುವುದು ಇವೇ ಮೊದಲಾದ ಪಿಡುಗುಗಳು ಅನಾರೋಗ್ಯದ, ಅವನತಿಯ ಲಕ್ಷಣಗಳು; ಕುರುಹುಗಳು. ಭಾರತೀಯ ಸಂಸ್ಕೃತಿಗೆ ತಮ್ಮನ್ನು ಸಮರ್ಪಿಸಿಕೊಂಡ ಅನೇಕ ಮಹಾನುಭಾವರು ಹಿಂದೆ ಈ ಪಿಡುಗುಗಳ ವಿರುದ್ಧ ಹೋರಾಡಿದ್ದಾರೆ. ಪರಿವರ್ತನೆ ಹೊಂದುವುದರಲ್ಲಿ ಹಾಗೂ ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವುದರಲ್ಲಿ ನಾವು ಅಸಮರ್ಥವಾಗಿರುವುದೇ ಇವಕ್ಕೆಲ್ಲ ಕಾರಣ. ನಮ್ಮ ಹಲವಾರು ಸಾಮಾಜಿಕ ಮತ್ತು ಆರ್ಥಿಕ ವಿಶ್ಲೇಷಣೆಗಳಿಂದ ನಮ್ಮ ಸಮಾಜದ ಈ ದೌರ್ಬಲ್ಯ ತಿಳಿದುಬರುತ್ತದೆ. ಈ ಕೆಲವು ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳು, ಪದ್ಧತಿಗಳು ಒಂದು ಕಾಲಕ್ಕೆ ವಿದೇಶಿಯರ ವಿರುದ್ಧ ಗುರಾಣಿಯಾಗಿ ಕೆಲಸ ಮಾಡುವ ಉದ್ದೇಶದಿಂದ ರೂಪುಗೊಂಡಂಥವು ಅಥವಾ ವಿದೇಶಿಯರಿಂದ ನಮ್ಮ ಮೇಲೆ ಹೇರಲಾದವು. ಇಲ್ಲದೇ ವಿದೇಶಿಯರ ಕುರುಡು ಅನುಕರಣೆಯಿಂದ ಬಂದಂಥವು. ಇಂಥ ಸಾಮಾಜಿಕ – ಆರ್ಥಿಕ ವ್ಯವಸ್ಥೆಗಳನ್ನು, ಪದ್ಧತಿಗಳನ್ನು, ಕಟ್ಟಳೆಗಳನ್ನು ಭಾರತೀಯ ಸಂಸ್ಕೃತಿಯ ಹೆಸರಿನಲ್ಲಿ ಮುಂದುವರಿಸಿಕೊಂಡು ಹೋಗಲಾಗದು.

**ಅಖಂಡ ಮಾನವತಾ ಮಾರ್ಗವೊಂದೇ ಪರಿಹಾರ**

ಅಖಂಡ ಮಾನವತಾ ಸಿದ್ಧಾಂತ ಭಾರತೀಯ ಸಂಸ್ಕೃತಿ ಹಾಗೂ ಪಾಶ್ಚಾತ್ಯ ಸಿದ್ಧಾಂತಗಳೆರಡನ್ನೂ ಸಮತೂಕದಿಂದ ಬೆಲೆಕಟ್ಟಿ ನೋಡಬೇಕು. ಇಂಥ ಒಂದು ಮೌಲ್ಯಮಾಪನದ ಆಧಾರದ ಮೇಲೆ ಮನುಷ್ಯನ ಪ್ರಗತಿಯ ಹೊಸ ಮಾರ್ಗವೊಂದನ್ನು ಕಂಡುಕೊಳ್ಳಬೇಕಾಗಿದೆ. ಮನುಷ್ಯನ ಈಗಿನ ಸ್ಥಾನಮಾನ, ಚಿಂತನೆ, ಅನುಭವ, ಸಾಧನೆಗಳಿಂದ ಮುಂದುವರಿದು ಮತ್ತಷ್ಟು ಪ್ರಗತಿ ಹೊಂದುವ ಅಭ್ಯುದಯದ ಮಾರ್ಗವೊಂದನ್ನು ಕಂಡುಕೊಳ್ಳಬೇಕಾಗಿದೆ.

ಪಾಶ್ಚಿಮಾತ್ಯ ಪ್ರಪಂಚ ಪ್ರಚಂಡವಾದ ಐಹಿಕ ಪ್ರಗತಿಯನ್ನು ಸಾಧಿಸಿದೆ. ಆದರೆ ಆಧ್ಯಾತ್ಮಿಕ ಸಾಧನೆಯಲ್ಲಿ ಹೇಳಿಕೊಳ್ಳುವಂಥ ಪ್ರಗತಿಯನ್ನು ಕಂಡಿಲ್ಲ. ಇದಕ್ಕೆ ತದ್ವಿರುದ್ಧ ಭಾರತ. ಐಹಿಕ ಸಾಧನೆಯಲ್ಲಿ ಹಿಂದೆ ಬಿದ್ದಿದೆ. ಎಂದೇ ಭಾರತದ ಆಧ್ಯಾತ್ಮಿಕತೆ ಒಂದು ಪೊಳ್ಳು ಮಾತಾಗಿ ತೋರುತ್ತದೆ. "ನಯಂ ಆತ್ಮ ಬಲಹೀನ ಲಭ್ಯಾ:"– ದುರ್ಬಲರಿಂದ ಆತ್ಮಸಾಧನೆ, ಆತ್ಮಸಾಕ್ಷಾತ್ಕಾರ ಸಾಧ್ಯವಿಲ್ಲ. ಐಹಿಕ ಭೋಗಭಾಗ್ಯಗಳಲ್ಲಿ ಅಭ್ಯುದಯ ಸಾಧಿಸದೇ ಆಧ್ಯಾತ್ಮಿಕ ಮುಕ್ತಿಸಾಧನೆ ಸಾಧ್ಯವಿಲ್ಲ. ಆದ್ದರಿಂದ ನಾವು ಶಕ್ತಿ ಮತ್ತು ಪ್ರಾಪಂಚಿಕ ಸುಖ–ಸಂತೋಷಗಳನ್ನು ಸಾಧಿಸಲು ಶ್ರಮಿಸಬೇಕಾಗಿದೆ. ಇಂಥ ಪ್ರಯತ್ನದಿಂದ ನಾವು ರಾಷ್ಟ್ರದ ಸ್ವಾಸ್ಥ್ಯವನ್ನು ಬೆಳೆಸಬಹುದು ಹಾಗೂ ವಿಶ್ವದ ಪ್ರಗತಿಗೆ ನಮ್ಮ ಕೊಡುಗೆಯನ್ನೂ ನೀಡಬಹುದು. ವಿಶ್ವಕ್ಕೆ ಹೊರೆಯಾಗಿ ಉಳಿಯುವ ಬದಲು ಕೊಡುಗೆ ನೀಡಬಹುದು. ಬದ್ಧತೆ, ಕ್ರಿಯಾಶಕ್ತಿ, ಸಂಯೋಜನೆ, ಸಮನ್ವಯ ಹಾಗೂ ಸಂಸ್ಕಾರ ಇವು ಭಾರತೀಯ ಸಂಸ್ಕೃತಿಯ ವಿವಿಧ ಗುಣಲಕ್ಷಣಗಳು. ಈ ಎಲ್ಲ ಗುಣಲಕ್ಷಣಗಳ ಮೊತ್ತವೇ ಅಖಂಡ ಮಾನವತೆ. ಈ ಗುಣಮೊತ್ತವನ್ನು ಲಕ್ಷಿಸಿಯೇ ಅಖಂಡಮಾನವತೆಯ ಹೆಸರು ಕೊಡಲಾಗಿದೆ. ಇದು ನಮ್ಮ ದಿಕ್ಕುದಿಶೆಗಳನ್ನು, ಗೊತ್ತುಗುರಿಗಳನ್ನು ನಿರ್ಧರಿಸಲಿರುವ, ನಿಷ್ಕರ್ಶಿಸಲಿರುವ ಆದರ್ಶ. ನಮ್ಮ ಈ ಆದರ್ಶ ಶುಷ್ಕಸಿದ್ಧಾಂತವೂ ಅಲ್ಲ ಒಣಪಾಂಡಿತ್ಯವೂ ಅಲ್ಲ ವಿತಂಡವಾದವೂ ಅಲ್ಲ. ಯಾವುದೇ ಒಂದು ಆದರ್ಶವನ್ನು ಕಾರ್ಯತತ್ಪರವನ್ನಾಗಿಸಬೇಕು. ಕಾರ್ಯರೂಪಕ್ಕೆ ತರಬೇಕು. ಆದ್ದರಿಂದ ನಮ್ಮ ಕಾರ್ಯಕ್ರಮ ವಾಸ್ತವವಾಗಿರಬೇಕು. ವಾಸ್ತವದ ನೆಲದಲ್ಲಿ ಬೇರುಬಿಟ್ಟಿರಬೇಕು. ವಾಸ್ತವತೆ, ವ್ಯವಹಾರಿಕತೆ ನಮ್ಮ ಕಾರ್ಯಕ್ರಮದ ವೈಶಿಷ್ಟ್ಯ, ನಮ್ಮ ಆದರ್ಶದ ಮತ್ತು ಸಾಧನೆಗಳ ಮಾನದಂಡ ಈ ವಾಸ್ತವತೆ ಅಥವಾ ವ್ಯಾವಹಾರಿಕತೆ.

# ದಸ್ತಾವೇಜು : ಎರಡು
# ಏಕಾತ್ಮ ಮಾನವದರ್ಶನ

## ೧ ನಮ್ಮ ದಿಕ್ಕುದಿಸೆ

ಈ ಸಂಜೆ ಪ್ರಾರಂಭವಾಗಲಿರುವ ಉಪನ್ಯಾಸ ಮಾಲಿಕೆಯಲ್ಲಿ 'ಏಕಾತ್ಮ ಮಾನವವಾದ' ಕುರಿತಂತೆ ನನ್ನ ಆಲೋಚನೆಗಳನ್ನು ಮಂಡಿಸಲು ಕೋರಿದ್ದಾರೆ. ಕಳೆದ ಜನವರಿಯಲ್ಲಿ ವಿಜಯವಾಡಾದಲ್ಲಿ ನಡೆದ ಸಮಾವೇಶದಲ್ಲಿ ಭಾರತೀಯ ಜನಸಂಘ 'ನೀತಿ – ತತ್ತ್ವಗಳ' ನಿರೂಪಣೆಯ ಹೇಳಿಕೆಯೊಂದನ್ನು ಅಂಗೀಕರಿಸಿತು. ಈ ಹೇಳಿಕೆಯಲ್ಲಿ 'ಏಕಾತ್ಮ ಮಾನವವಾದ' ಪಾರಿಭಾಷಿಕ ಪದವನ್ನು ಒಪ್ಪಿಕೊಳ್ಳಲಾಗಿದೆ. ಅಲ್ಲಲ್ಲಿ ಈ ವಿಷಯದ ಮೇಲೆ ವಿರಳವಾದ ಚರ್ಚೆಗಳೂ ನಡೆದಿವೆ. ಏಕಾತ್ಮ ಮಾನವ ಸಿದ್ಧಾಂತವನ್ನು ಎಲ್ಲ ದೃಷ್ಟಿಕೋನಗಳಿಂದಲು ಚರ್ಚಿಸುವುದು ಅಗತ್ಯ. ಭಾರತ ಬ್ರಿಟಿಷರ ದಾಸ್ಯದ ನೊಗಕ್ಕೆ ಕೊರಳು ಕೊಟ್ಟಿದ್ದಷ್ಟು ಕಾಲವೂ ಎಲ್ಲ ಚಳವಳಿಗಳೂ, ಎಲ್ಲ ನೀತಿ ಕಾರ್ಯಕ್ರಮಗಳ ಮುಖ್ಯ ಗುರಿ ಒಂದೇ ಆಗಿತ್ತು. ಅದೆಂದರೆ ಈ ದಾಸ್ಯದಿಂದ ವಿಮೋಚನೆ ಹೊಂದುವುದು. ವಿದೇಶಿ ಆಡಳಿತಗಾರರನ್ನು ಹೊರದಬ್ಬಿ ಸ್ವಾತಂತ್ರ್ಯ ನಂತರ ನವಭಾರತ ಹೇಗಿರುವುದು? ಯಾವ ದಿಕ್ಕು ದಿಸೆಯಲ್ಲಿ ನಡೆದು ನಾವು ಪ್ರಗತಿ ಸಾಧಿಸಬೇಕು? ಈ ಪ್ರಶ್ನೆಗಳ ಬಗ್ಗೆ ನಿಖರವಾಗಿ ಯೋಚಿಸಿರಲಿಲ್ಲ, ಈ ವಿಷಯದ ಬಗ್ಗೆ ಈ ಎಲ್ಲ ದೃಷ್ಟಿಕೋನಗಳ ಬಗ್ಗೆ ಚಿಂತನಮಂಥನ ನಡೆದೇ ಇರಲಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ. ಆ ಕಾಲದಲ್ಲೂ ಈ ಪ್ರಶ್ನೆಗಳ ಬಗ್ಗೆ ಚಿಂತನ ಮಂಥನಗಳನ್ನು ನಡೆಸಿದವರಿದ್ದರು. ಗಾಂಧೀಜಿಯವರೇ ತಮ್ಮ 'ಹಿಂದ್ ಸ್ವರಾಜ್' ಗ್ರಂಥದಲ್ಲಿ ಸ್ವತಂತ್ರ ಭಾರತ ಕುರಿತ ತಮ್ಮ ಕಲ್ಪನೆಗಳನ್ನು ಹರಿಬಿಟ್ಟಿದ್ದಾರೆ. ಇದಕ್ಕೂ ಮುನ್ನ ಲೋಕಮಾನ್ಯ ಬಾಲಗಂಗಾಧರ ತಿಲಕರು ತಮ್ಮ 'ಗೀತಾರಹಸ್ಯ' ದಲ್ಲಿ ತತ್ತ್ವಾಧಾರಿತ ಭಾರತ ಪುನರುಜ್ಜೀವನ ಕುರಿತು ಚರ್ಚಿಸಿದ್ದಾರೆ. ಆಕಾಲದಲ್ಲಿ ವಿಶ್ವದ ವಿವಿಧ ಭಾಗಗಳಲ್ಲಿದ್ದ ಹಲವಾರು ಪಂಥಗಳ ತೌಲನಿಕ ಚಿತ್ರವನ್ನು ತಿಲಕರು ನೀಡಿದ್ದಾರೆ.

ಇದಲ್ಲದೆ ಕಾಂಗ್ರೆಸ್ ಮತ್ತು ಇತರ ರಾಜಕೀಯ ಪಕ್ಷಗಳು ಈ ವಿಷಯ ಪ್ರಸ್ತಾಪಿಸಿರುವ ಹಲವಾರು ನಿರ್ಣಯಗಳನ್ನು ಆಗಿಂದಾಗ್ಗೆ ಅಂಗೀಕರಿಸಿವೆ. ಆದರೆ

ಆ ಕಾಲದಲ್ಲಿ ನೀಡಲಾದುದಕ್ಕಿಂತ ಹೆಚ್ಚಿನ ಗಾಢಚಿಂತನೆ ಈ ಬಗ್ಗೆ ನಡೆಯಬೇಕಿದೆ. ಬ್ರಿಟಿಷರನ್ನು ಭಾರತದಿಂದ ತೊಲಗಿಸುವುದೇ ಈಗಿನ ಮುಖ್ಯ ವಿಷಯ, ಮುಖ್ಯಗುರಿ, ಉಳಿದ ವಿಚಾರಗಳನ್ನು ನಂತರ ಪರ್ಯಾಲೋಚಿಸಬಹುದು ಎನ್ನುವುದು ಆ ಕಾಲದ ನಂಬಿಕೆಯಾಗಿತ್ತು. ವಿದೇಶಿಯರ ದಬ್ಬಾಳಿಕೆ ನಡೆದಿರುವಾಗ ಅಂತರಿಕ ವಿಷಯಗಳ ಚರ್ಚೆಯಲ್ಲಿ ಕಾಲಕಳೆಯುವುದು ವಿಹಿತವಲ್ಲ ಎಂದು ಆಗ ಭಾವಿಸಲಾಗಿತ್ತು. ಆದ್ದರಿಂದ ಆಗ ಅಭಿಪ್ರಾಯ ಬೇಧಗಳಿದ್ದರೂ ಅವುಗಳನ್ನು ಬದಿಗೊತ್ತಲಾಗಿತ್ತು.

ಸಮಾಜವಾದ ಭವಿಷ್ಯ ಭಾರತದ ಬುನಾದಿಯಾಗಬೇಕೆಂದು ಭಾವಿಸಿದ್ದವರೂ ಕಾಂಗ್ರೆಸ್ ಪಕ್ಷದೊಳಗೇ ಸಮಾಜವಾದಿ ಬಣವಾಗಿ ಕೆಲಸ ಮಾಡುತ್ತಿದ್ದರು. ಅವರು ಪ್ರತ್ಯೇಕ ಪಕ್ಷ ಕಟ್ಟುವ ಪ್ರಯತ್ನ ಮಾಡಲಿಲ್ಲ. ಕ್ರಾಂತಿಕಾರಿಗಳೂ ತಮ್ಮದೇ ಆದ ಮಾರ್ಗದಲ್ಲಿ ಸ್ವಾತಂತ್ರ್ಯಕ್ಕಾಗಿ ಕೆಲಸ ಮಾಡುತ್ತಿದ್ದರು. ಸ್ವಾತಂತ್ರ್ಯ ಪಡೆಯುವುದು ಮೊದಲ ಕೆಲಸ ಎಂಬುದನ್ನು ಎಲ್ಲರೂ ಒಪ್ಪಿದ್ದರು.

**ಎಂಥ ಭಾರತ?**

ಸ್ವಾತಂತ್ರ್ಯ ಬಂತು. ಸ್ವಾತಂತ್ರ್ಯ ಬಂದ ನಂತರ ಸಹಜವಾಗಿ ನಾವೆಲ್ಲ ಕೇಳಿಕೊಳ್ಳಬೇಕಾಗಿತ್ತು; "ನಾವೀಗ ಸ್ವತಂತ್ರರು, ನಮ್ಮ ಪ್ರಗತಿಯ ದಿಕ್ಕುದೆಸೆ ಯಾವುದಾಗಬೇಕು? ಈ ಪ್ರಶ್ನೆ ನಮ್ಮಲ್ಲಿ ಉದ್ಭವಿಸಬೇಕಾಗಿತ್ತು. ಆದರೆ ಆಶ್ಚರ್ಯವೆಂದರೆ ಇಂಥದೊಂದು ಪ್ರಶ್ನೆ ಬಗ್ಗೆ ಯಾರೂ ಗಂಭೀರವಾಗಿ ಯೋಚಿಸಲೇ ಇಲ್ಲ. ಇವತ್ತಿಗೂ ಸಹ, ಹದಿನೇಳು ವರ್ಷಗಳ ಸ್ವಾತಂತ್ರ್ಯಾ ನಂತರವೂ ನಿರ್ದಿಷ್ಟವಾದ ದಿಕ್ಕುದೆಸೆ –ಗೊತ್ತುಗುರಿಗಳನ್ನು ನಿರ್ಧರಿಸಲಾಗಿದೆ ಎಂದು ನಾವು ಖಚಿತವಾಗಿ ಹೇಳಲಾರೆವು.

ಕಾಲಕಾಲಕ್ಕೆ ಕಾಂಗ್ರೆಸ್ಸಿಗರು ಅಥವಾ ಬೇರೆಯವರು ಸುಖೀರಾಜ್ಯ, ಸಮಾಜವಾದ ಉದಾರನೀತಿ ಇತ್ಯಾದಿ ಗುರಿ ಉದ್ದೇಶಗಳ ಬಗ್ಗೆ ಮಾತನಾಡಿದ್ದಾರೆ. ಘೋಷಣೆಗಳನ್ನೂ ಕೂಗಲಾಗಿದೆ. ಘೋಷಣೆಗಳ ಹೊರತಾಗಿ ಅವರು ಸಿದ್ಧಾಂತಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿಲ್ಲ ಅಥವಾ ಅನುಸರಿಸಬೇಕಾದ ಮಾರ್ಗ, ದಿಕ್ಕುದೆಸೆಗಳನ್ನು ನಿರ್ಧರಿಸುವಂಥ ಸಮಗ್ರ ಚಿಂತನ ಮಂಥನ ನಡೆಸಿಲ್ಲ. ಆಲೋಚನಾ ವ್ಯವಸ್ಥೆಗಳನ್ನು ರೂಪಿಸಿಲ್ಲ. ವೈಯಕ್ತಿಕವಾಗಿ ನಡೆಸಿದ ಚರ್ಚೆಗಳ ಆಧಾರದ ಮೇಲೆ ನಾನು ಈ ಮಾತನ್ನು ಆಡುತ್ತಿದ್ದೇನೆ. ಕಾಂಗ್ರೆಸ್ ವಿರೋಧಿ ಸಂಯುಕ್ತ ರಂಗವೊಂದನ್ನು ರಚಿಸಬೇಕು. ಆಗ ನಾವು ಕಾಂಗ್ರೆಸ್ಸಿಗೆ ಒಳ್ಳೆ ಹೋರಾಟ ನೀಡುವುದು ಸಾಧ್ಯವಾದೀತು ಎಂದು ಜನಪ್ರಿಯ ಮುಖಂಡರೊಬ್ಬರು ಸಲಹೆ ಮಾಡಿದರು. ಈಚಿನ ದಿನಗಳಲ್ಲಿ ರಾಜಕೀಯ ಪಕ್ಷಗಳು ಇಂಥ ಯುಕ್ತಿಗಳನ್ನು ರೂಪಿಸುತ್ತಿವೆ. ಆದ್ದರಿಂದ ಮೇಲಿನ



ಸಲಹೆಯಿಂದ ನನಗೆ ಆಶ್ಚರ್ಯವೇನು ಆಗಲಿಲ್ಲ. ಆದರೆ ನಾನು ಅವರನ್ನು ಕೇಳಿದೆ. "ನಮ್ಮ ಕಾರ್ಯಕ್ರಮಗಳೇನು? ಇಂಥದೊಂದು ಸಂಯುಕ್ತ ರಂಗ ರಚಿಸಿದಲ್ಲಿ ಏನಾದರೊಂದು ಕಾರ್ಯಸೂಚಿಯ ಕಲ್ಪನೆಯಾದರೂ ಇರಬೇಕಾಗುತ್ತದೆ. ನಮ್ಮ ಆರ್ಥಿಕ ನೀತಿ ಏನು? ಯಾವ ತೆರನಾದದ್ದು? ನಮ್ಮ ವಿದೇಶಾಂಗ ನೀತಿ ಏನು? ಈ ಪ್ರಶ್ನೆಗಳನ್ನು ಕುರಿತು ಸ್ಥೂಲವಾಗಿಯಾದರು ನಾವು ಯೋಚಿಸಬೇಕಾಗುತ್ತದೆ."

ಆ ಬಗ್ಗೆ ಎಲ್ಲ ಚಿಂತೆ ಬೇಡ. ನಿಮಗೇನು ಬೇಕೋ ಅದನ್ನು ಅಳವಡಿಸಿಕೊಳ್ಳಬಹುದು. ತೀವ್ರ ವಾಮಪಂಥೀಯ ಕಾರ್ಯಕ್ರಮದಿಂದ ಹಿಡಿದು ಬಲ ಪಂಥೀಯ ಬಂಡವಾಳಶಾಹಿ ಕಾರ್ಯಕ್ರಮಕ್ಕೂ ನಾವು ಸಿದ್ಧರಿದ್ದೇವೆ"

ನನ್ನ ಪ್ರಶ್ನೆಗೆ ಆ ಮಹಾನುಭಾವರಿಂದ ಇಂಥದೊಂದು ಮಾಮೂಲಿನ, ಇದೆಲ್ಲ ಸಹಜ ಎನ್ನುವಂಥ ಉತ್ತರ ಬಂತು. ಯಾವುದೇ ಕಾರ್ಯಕ್ರಮ, ನೀತಿಗಳ ಅಳವಡಿಕೆಯಲ್ಲಿ ಅವರಿಗೆ ಏನೂ ಸಮಸ್ಯೆ ಇರಲಿಲ್ಲ. ಕಾಂಗ್ರೆಸ್ಸನ್ನು ಪರಾಜಯಗೊಳಿಸುವುದೊಂದೇ ಗುರಿ. ಕಮ್ಯುನಿಸ್ಟರು ಮತ್ತು ಇತರೆ ಎಲ್ಲರ ಸಹಕಾರದಿಂದ ಕಾಂಗ್ರೆಸ್ಸನ್ನು ಸೋಲಿಸಬೇಕೆಂದು ಈಗಲೂ ಕೆಲವರು ಘೋಷಿಸುತ್ತಲೇ ಇರುತ್ತಾರೆ.

ಇತ್ತೀಚೆಗೆ ಕೇರಳದಲ್ಲಿ ಚುನಾವಣೆ ನಡೆಯಿತು. ಈ ಚುನಾವಣೆಯಲ್ಲಿ ಕಮ್ಯುನಿಸ್ಟರು. ಮುಸ್ಲಿಂಲೀಗ್, ಸ್ವತಂತ್ರ ಪಕ್ಷ, ಎಸ್.ಎಸ್.ಪಿ, ಕೇರಳ ಕಾಂಗ್ರೆಸ್ ಹೆಸರಿನ ಬಂಡಾಯ ಕಾಂಗ್ರೆಸ್ಸಿಗರು, ಕ್ರಾಂತಿಕಾರಿ ಸಮಾಜವಾದಿ ಪಕ್ಷ ಇವರೆಲ್ಲರೂ ವಿವಿಧ ಬಗೆಯ ಚುನಾವಣಾ ಮೈತ್ರಿ ಮಾಡಿಕೊಂಡರು. ದ್ವಿಪಕ್ಷೀಯ ಬಹುಪಕ್ಷೀಯ ಚುನಾವಣಾ ಮೈತ್ರಿಗಳನ್ನು ಮಾಡಿಕೊಂಡರು. ಈ ಪಕ್ಷಗಳಿಗೆ ನಿರ್ದಿಷ್ಟ ತತ್ತ್ವಸಿದ್ಧಾಂತ ಮತ್ತು ಧ್ಯೇಯಗಳಿವೆಯೆ ಎನ್ನುವುದನ್ನು ಊಹಿಸಲೂ ಕಷ್ಟವಾಗಿತ್ತು.

ಕಾಂಗ್ರೆಸ್ ಸಹ ಇದೇ ಸ್ಥಿತಿಯಲ್ಲಿದೆ. ಪ್ರಜಾಸತ್ತಾತ್ಮಕ ಸಮಾಜವಾದ ತನ್ನ ಗುರಿ ಎಂದು ಕಾಂಗ್ರೆಸ್ ಪಕ್ಷ ಘೋಷಿಸಿದೆಯಾದರೂ ಕಾಂಗ್ರೆಸ್ಸಿನಲ್ಲಿ ನಿರ್ದಿಷ್ಟ ತತ್ವಸಿದ್ಧಾಂತಗಳಿಲ್ಲ, ಒಂದು ನಿರ್ದಿಷ್ಟ ದಿಕ್ಕುದೆಸೆ, ಗೊತ್ತುಗುರಿಗಳಿಲ್ಲ ಎನ್ನುವುದು ಆ ಪಕ್ಷದ ನಾಯಕರುಗಳ ನಡವಳಿಕೆಯಿಂದ ಗೊತ್ತಾಗುತ್ತದೆ. ಕಾಂಗ್ರೆಸ್ಸಿನಲ್ಲಿ ಕಟ್ಟಾ ಕಮ್ಯುನಿಸ್ಟರಿದ್ದಾರೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ನಂಬಿಕೆಯುಳ್ಳವರೂ ಇದ್ದಾರೆ. ಕಮ್ಯುನಿಸ್ಟ ಪಕ್ಷದ ಉಗ್ರ ವಿರೋಧಿಗಳೂ ಇದ್ದಾರೆ. ಕಾಂಗ್ರೆಸ್ ವೇದಿಕೆಯಲ್ಲಿ ಎಲ್ಲ ಬಗೆಯ ಜನರೂ ಮಿಂಚುತ್ತಿದ್ದಾರೆ. ಹಾವು ಮತ್ತು ಮುಂಗುಸಿ ಎರಡೂ ಸಹಬಾಳ್ವೆ ನಡೆಸುತ್ತಿರುವಂಥ ಇಂದ್ರಜಾಲ ಏನಾದರೂ ಇದ್ದಲ್ಲಿ ಅದು ಕಾಂಗ್ರೆಸ್ಸೇ ಸರಿ.

ಇಂಥ ಸ್ಥಿತಿಯಲ್ಲಿ ನಮ್ಮಿಂದ ಪ್ರಗತಿ ಸಾಧಿಸುವುದು ಸಾಧ್ಯವಾದೀತೆ ಎನ್ನುವುದನ್ನು ನಾವು ಯೋಚಿಸಬೇಕಾಗಿದೆ. ದೇಶ ಎದುರಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಿಸತೊಡಗಿದಾಗ, ನಮ್ಮ ದಿಕ್ಕುದೆಸೆ –ಗೊತ್ತು ಗುರಿಗಳಲ್ಲಿರುವ ಗೊಂದಲವೇ

ಈ ಅಸ್ತವ್ಯಸ್ತತೆಗೆ ಕಾರಣ ಎನ್ನುವುದು ಗೊತ್ತಾಗುತ್ತದೆ. ಎಲ್ಲ ವಿಷಯಗಳ ಮಾತು ಹಾಗಿರಲಿ, ಒಂದೇ ಒಂದು ಸಮಸ್ಯೆ ಬಗ್ಗೆಯೂ ೪೫೦ ದಶಲಕ್ಷ ಭಾರತೀಯರಲ್ಲಿ ಸಹಮತ ಇರುವುದಿಲ್ಲ ಎನ್ನುವುದು ನನಗೆ ಗೊತ್ತಿದೆ. ಆದಾಗ್ಯೂ ಯಾವುದೇ ದೇಶದ ಜನರಲ್ಲಿ ಸಮಾನವಾದ ಆಸೆ–ಆಕಾಂಕ್ಷೆಗಳು ಇದ್ದೇ ಇರುತ್ತವೆ. ಈ ಜನಪ್ರಿಯವಾದ ಆಸೆ– ಆಕಾಂಕ್ಷೆಗಳನ್ನು ನಮ್ಮ ಗುರಿಯಾಗಿಸಿಕೊಂಡಲ್ಲಿ, ದೇಶ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಜನ ಸಾಮಾನ್ಯರು ಭಾವಿಸುತ್ತಾರೆ. ರಾಷ್ಟ್ರದ ಕಾಯಕಗಳಲ್ಲಿ ತನ್ನ ಆಶೋತ್ತರಗಳನ್ನು ಬಿಂಬಿಸಲಾಗುತ್ತಿದೆ ಎಂದು ಸಾಮಾನ್ಯ ಮನುಷ್ಯ ನಂಬುತ್ತಾನೆ. ಇದು ಏಕತೆಯ ಮನೋಭಾವವನ್ನು ಉಂಟುಮಾಡುತ್ತದೆ. ೧೯೬೨ರ ಅಕ್ಟೋಬರ್ – ನವೆಂಬರ್‌ನಲ್ಲಿ ಚೀನ ಆಕ್ರಮಣ ನಡೆಸಿದಾಗ ಜನ ತೋರಿದ ಪ್ರತಿಕ್ರಿಯೆಯಲ್ಲಿ ಮೇಲಿನ ಮಾತಿನ ಸತ್ಯ ಅಡಗಿದೆ. ಮೇಲಿನ ಮಾತು ನಿಜ ಎಂಬುದಕ್ಕೆ ಜನ ಆಗ ಸ್ಪಂದಿಸಿದ ಬಗೆಯೇ ಸಾಕ್ಷಿ. ಆಗ ದೇಶದುದ್ದಗಲ ರಾಷ್ಟ್ರಾಭಿಮಾನದ, ಉತ್ಸಾಹದ ಅಲೆ ಎದ್ದಿತ್ತು. ಕಾಯಕದಲ್ಲಿ, ತ್ಯಾಗದಲ್ಲಿ ಒಂದು ಅಭೂತಪೂರ್ವಕ ಪ್ರತಿಕ್ರಿಯೆ ಕಂಡುಬಂದಿತ್ತು. ಆಗ ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಅಡೆತಡೆಗಳಿರಲಿಲ್ಲ, ರಾಜಕೀಯ ಪಕ್ಷಗಳ ನಡುವೆಯೂ ಇರಲಿಲ್ಲ. ಇದು ಹೇಗೆ ಸಾಧ್ಯವಾಯಿತು? ವಿದೇಶಿ ಆಕ್ರಮಣ ನಮ್ಮಲ್ಲಿ ಆತ್ಮಜಾಗೃತಿವುಂಟು ಮಾಡಿತು. ನಮ್ಮನ್ನು ನಾವೇ ಕಂಡುಕೊಳ್ಳುವಂತಾಯಿತು. ಜನರಲ್ಲಿ ವ್ಯಾಪಕವಾಗಿದ್ದ ಭಾವನೆಗಳನ್ನೇ ಸರ್ಕಾರ ತನ್ನ ಕಾರ್ಯಕ್ರಮಗಳಲ್ಲಿ, ನೇರ ನಿರೂಪಣೆಗಳಲ್ಲಿ ಅಳವಡಿಸಿಕೊಂಡಿತು. ತ್ಯಾಗದ ಕರೆಯಿಂದ ಆತ್ಮಗೌರವದ ಅರಿವು ಜಾಗೃತಗೊಂಡಿತು. ಇದೆಲ್ಲದರ ಪರಿಣಾಮವಾಗಿ ದೇಶ ಏಕದೇಹಿಯಂತೆ ಎದ್ದು ನಿಂತುಕೊಂಡಿತು.

**ನಮ್ಮ ಸಮಸ್ಯೆಗಳ ಮೂಲ**

ನಮ್ಮ ರಾಷ್ಟ್ರೀಯ ಅಸ್ಮಿತೆ ಬಗ್ಗೆ ನಾವು ಯೋಚಿಸಬೇಕಾದ್ದು ಅತ್ಯಗತ್ಯ. ರಾಷ್ಟ್ರೀಯ ಅಸ್ಮಿತೆ ಇಲ್ಲದೆ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ. ಅಥವಾ ಸ್ವಾತಂತ್ರ್ಯ ಪ್ರಗತಿ ಮತ್ತು ಸುಖಸಂತೋಷಗಳ ಸಾಧನವಾಗದು. ನಮ್ಮ ರಾಷ್ಟ್ರೀಯ ಅಸ್ಮಿತೆಯ ಅರಿವಿಲ್ಲದೆ ನಾವು ನಮ್ಮ ಶಕ್ತಿಸಾಮರ್ಥ್ಯಗಳನ್ನು ಗುರುತಿಸಲಾರೆವು ಹಾಗೂ ಆ ಶಕ್ತಿಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲಾಗದು. ಅನ್ಯರ ಆಳ್ವಿಕೆಯಡಿಯಲ್ಲಿ ನಮ್ಮ ಅಸ್ಮಿತೆ, ಅನನ್ಯತೆಗಳು ದಮನಕ್ಕೊಳಗಾಗಿದ್ದವು. ಆದ್ದರಿಂದಲೇ ರಾಷ್ಟ್ರಗಳು ಸ್ವಾತಂತ್ರ್ಯವನ್ನು ಬಯಸುವುದು. ಸ್ವತಂತ್ರ ರಾಷ್ಟ್ರವಾದಲ್ಲಿ ತಮ್ಮ ಸಹಜ ಆಸೆ – ಆಕಾಂಕ್ಷೆಗಳಿಗನುಗುಣವಾಗಿ ಅಭಿವೃದ್ಧಿ ಹೊಂದಬಹುದು ಹಾಗೂ ಈ ಅಭಿವೃದ್ಧಿ ಕಾರ್ಯಗಳಲ್ಲಿ ಸುಖ–ಸಂತೋಷಗಳನ್ನು ಅನುಭವಿಸಬಹುದು. ಪ್ರಕೃತಿ ತುಂಬ



ಶಕ್ತಿಶಾಲಿಯಾದದ್ದು. ಪ್ರಕೃತಿಯನ್ನು ಅಲಕ್ಷಿಸುವುದು ಅಥವಾ ಪ್ರಕೃತಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಕಷ್ಟಗಳಿಗೆಡೆ ಮಾಡಿಕೊಡುತ್ತದೆ. ನೈಸರ್ಗಿಕ ಪ್ರವೃತ್ತಿಗಳನ್ನು ಅಲಕ್ಷಿಸಲಾಗದು ಆದರೆ ಇದನ್ನು ಸಂಸ್ಕೃತಿಯ ಮಟ್ಟಕ್ಕೆ ಉನ್ನತೀಕರಿಸುವುದು ಸಾಧ್ಯ. ನೈಸರ್ಗಿಕ ಪ್ರವೃತ್ತಿಗಳನ್ನು ಅದುಮಿಟ್ಟಾಗ ವ್ಯಕ್ತಿ ಹಲವಾರು ಬಗೆಯ ಮಾನಸಿಕ ವ್ಯಾಧಿಗಳಿಂದ ಪೀಡಿತನಾಗುತ್ತಾನೆ ಎಂಬುದನ್ನು ಆಧುನಿಕ ಮನಃಶಾಸ್ತ್ರ ನಮಗೆ ತಿಳಿಸಿಕೊಟ್ಟಿದೆ. ಇಂಥ ವ್ಯಕ್ತಿಗಳು ಅಶಾಂತರಾಗುತ್ತಾರೆ. ಹತಾಶರಾಗುತ್ತಾರೆ. ಅವನ ಶಕ್ತಿಸಾಮರ್ಥ್ಯಗಳ ಹ್ರಾಸವಾಗಿ ಆ ವ್ಯಕ್ತಿ ವಿಕೃತನಾಗುತ್ತಾನೆ. ವ್ಯಕ್ತಿಯಂತೆ ರಾಷ್ಟ್ರವೂ, ರಾಷ್ಟ್ರದ ನೈಸರ್ಗಿಕ ಪ್ರವೃತ್ತಿಗಳನ್ನು ಅಲಕ್ಷಿಸಿದಾಗ ಅದೂ ಹಲವಾರು ವ್ಯಾಧಿಗಳಿಗೆ ಬಲಿಯಾಗುತ್ತದೆ. ಭಾರತ ಇಂದು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಅದರ ರಾಷ್ಟ್ರೀಯ ಅಸ್ಮಿತೆಯನ್ನು ಕಡೆಗಾಣಿಸಿರುವುದೇ ಆಗಿದೆ.

ಇಂದು ರಾಷ್ಟ್ರದ ನಾಯಕತ್ವ ವಹಿಸಿರುವ ಬಹುತೇಕ ಮಂದಿಗೆ ಹಾಗೂ ರಾಷ್ಟ್ರದ ವಿದ್ಯಮಾನಗಳಲ್ಲಿ ಸಕ್ರಿಯ ಕಾಯಕದಲ್ಲಿ ತೊಡಗಿರುವವರಲ್ಲಿ ಬಹುತೇಕ ಜನರಿಗೆ ಈ ಮೂಲ ಕಾರಣದ ಅರಿವಿಲ್ಲ. ಪರಿಣಾಮವಾಗಿ ತತ್ತ್ವಸಿದ್ಧಾಂತಗಳಿಗೆ ಬದ್ಧರಾಗಿಲ್ಲದ ಸಮಯಸಾಧಕರು ಇಂದು ನಮ್ಮ ದೇಶದ ರಾಜಕೀಯ ಸೂತ್ರಗಳನ್ನು ಹಿಡಿದಿದ್ದಾರೆ. ಪಕ್ಷಗಳಿಗೆ ಮತ್ತು ರಾಜಕಾರಣಿಗಳಿಗೆ ತತ್ತ್ವ, ಆದರ್ಶಗಳಿಲ್ಲ, ಸಿದ್ಧಾಂತಗಳಿಲ್ಲ, ಗೊತ್ತು ಗುರಿಗಳಿಲ್ಲ ಅಥವಾ ನೀತಿ ಸಂಹಿತೆಯೂ ಇಲ್ಲ. ಒಂದು ಪಕ್ಷ ತ್ಯಜಿಸಿ ಇನ್ನೊಂದು ಪಕ್ಷವನ್ನು ಸೇರುವುದರಲ್ಲಿ ತಪ್ಪೇನೂ ಇಲ್ಲವೆಂದೇ ಜನ ಭಾವಿಸಿದ್ದಾರೆ. ರಾಜಕೀಯ ಪಕ್ಷಗಳ ವಿಲೀನ ಅಥವಾ ರಾಜಕೀಯ ಪಕ್ಷಗಳ ನಡುವಣ ಸ್ನೇಹ ಮೈತ್ರಿಗಳೂ ಒಪ್ಪಂದ ಅಥವಾ ತಾತ್ವಿಕ ಸಹಮತ –ಭಿನ್ನಮತಗಳ ಆಧಾರದ ಮೇಲೆ ನಡೆಯುತ್ತಿಲ್ಲ. ಕೇವಲ ರಾಜಕೀಯ ಲಾಭಗಳಿಗಾಗಿ ಅಥವಾ ಅಧಿಕಾರದಲ್ಲಿ ಉಳಿಯುವ ಏಕೈಕ ಕಾರಣದಿಂದ ಇವೆಲ್ಲ ನಡೆಯುತ್ತಿವೆ. ೧೯೩೭ರಲ್ಲಿ ಶ್ರೀ ಹಫೀಜ್ ಮೊಹಮದ್ ಇಬ್ರಾಹಿಂ ಅವರು ಮುಸ್ಲಿಂ ಲೀಗ್ ಟಿಕೆಟ್ ಮೇಲೆ ಗೆದ್ದರು. ಆನಂತರ ಅವರು ಕಾಂಗ್ರೆಸ್ ಸೇರಿದರು. ಸಾರ್ವಜನಿಕ ನಡಾವಳಿಗೆ ಅನುಗುಣವಾಗಿ ಅವರು ರಾಜೀನಾಮೆ ಇತ್ತು ಕಾಂಗ್ರೆಸ್ ವತಿಯಿಂದ ಮತ್ತೊಮ್ಮೆ ಚುನಾವಣೆಯಲ್ಲಿ ಆರಿಸಿಬಂದರು. ೧೯೪೮ರಲ್ಲಿ ಸಮಾಜವಾದಿಗಳು ಕಾಂಗ್ರೆಸ್ ತೊರೆದು ಸಮಾಜವಾದಿ ಪಕ್ಷ ರಚಿಸಿದರು. ಇವರಲ್ಲಿ ಶಾಸಕರಾಗಿದ್ದವರು ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಸಮಾಜವಾದಿ ಪಕ್ಷದ ವತಿಯಿಂದ ಮತ್ತೆ ಚುನಾವಣೆ ಎದುರಿಸಿದರು. ಆದರೆ ಆನಂತರ ಇಂಥ ಆರೋಗ್ಯಕರ ಸಂಪ್ರದಾಯವನ್ನು ಮರೆಯಲಾಯಿತು. ಈಗ ರಾಜಕಾರಣದಲ್ಲಿ ಸಂಪೂರ್ಣ ವಿನಾಯಿತಿ ಇದೆ. ಮುಕ್ತ ಸ್ವಾತಂತ್ರವಿದೆ. ಇದರ ಪರಿಣಾಮವಾಗಿ ಜನರಲ್ಲಿ ರಾಜಕಾರಣಿಗಳಲ್ಲಿ ನಂಬಿಕೆ ಹೋಗಿದೆ ಅಪನಂಬಿಕೆವುಂಟಾಗಿದೆ. ಸಾರ್ವಜನಿಕರ ಕಣ್ಣಲ್ಲಿ ಇಂದು ಯಾರೂ

ಪ್ರಾಮಾಣಿಕರಾಗಿ ಕಾಣುತ್ತಿಲ್ಲ. ಪ್ರಾಮಾಣಿಕ ವ್ಯಕ್ತಿಗಳ ಸಂಖ್ಯೆ ವಿರಳವಾಗಿದೆ. ಈ ಪರಿಸ್ಥಿತಿ ಬದಲಾಗಬೇಕು. ಇಲ್ಲವಾದಲ್ಲಿ ಸಮಾಜದಲ್ಲಿ ಶಿಸ್ತು ಮತ್ತು ಏಕತೆಗಳನ್ನು ಐಕಮತ್ಯವನ್ನು ಸ್ಥಾಪಿಸಲಾಗದು.

**ಎಲ್ಲಿಂದ ಶುರುವಾಗಬೇಕು?**

ರಾಷ್ಟ್ರ ಹೊರಳು ದಾರಿಯಲ್ಲಿದೆ. ಒಂದು ಸಾವಿರ ವರ್ಷದ ಹಿಂದೆ ವಿದೇಶಿ ಆಕ್ರಮಣಕಾರರು ನಮ್ಮ ಬದುಕಿಗೆ ಭಂಗ ತಂದ ದಿನಗಳಲ್ಲಿ ನಾವು ಎಲ್ಲಿದ್ದೆವೋ ಅಲ್ಲಿಂದಲೇ ಮತ್ತೆ ಎಲ್ಲ ಶುರುವಾಗಬೇಕು ಎಂಬುದು ಕೆಲವರ ಅಂಬೋಣ. ಆದರೆ ರಾಷ್ಟ್ರ ಜಡವಸ್ತುವಲ್ಲ, ಅಚೇತನ ಪ್ರಕೃತಿಯದಲ್ಲ. ಬಟ್ಟೆಯ ನೇಯ್ಗೆಯನ್ನು ಹಲವು ವರ್ಷಗಳ ಕಾಲ ಬಿಟ್ಟು ಮತ್ತೆ ಆರಂಭಿಸಬಹುದು. ಆದರೆ ರಾಷ್ಟ್ರದ ವಿಚಾರ ಹಾಗಲ್ಲ. ಅಲ್ಲದೆ ಸಾವಿರ ವರ್ಷಗಳ ಅನ್ಯರ ಆಳ್ವಿಕೆ ನಮ್ಮ ರಾಷ್ಟ್ರ ಜೀವನ ವಾಹಿನಿಗೆ ಸಂಪೂರ್ಣವಾಗಿ ಭಂಗವುಂಟು ಮಾಡಿದ್ದು ಅಂದಿನಿಂದ ಇಂದಿನವರೆಗೆ ನಾವು ಜಡರಾಗಿದ್ದೇವೆ, ನಿಷ್ಕ್ರಿಯರಾಗಿದ್ದೇವೆ. ನಮ್ಮ ಬದುಕು ನಿಂತ ನೀರಾಗಿದೆ ಎಂದು ಹೇಳುವುದು ಅವೈಚಾರಿಕವಾಗುತ್ತದೆ. ತರ್ಕರಹಿತ ಮಾತಾಗುತ್ತದೆ. ಬದಲಾದ ಸಂದರ್ಭ, ಸನ್ನಿವೇಶಗಳಲ್ಲಿ ಉದ್ಭವಿಸಿದ ಸಮಸ್ಯೆಗಳನ್ನು ಎದುರಿಸುವಲ್ಲಿ ನಿಶ್ಚಯವಾಗಿಯೂ ರಾಷ್ಟ್ರದ ವಿವೇಕ ಬುದ್ಧಿಮತ್ತೆ ಕ್ರಿಯಾಶೀಲವಾಗಿದೆ. ಬದುಕಿನಲ್ಲಿ ಮುನ್ನುಗ್ಗಲು, ವಿದೇಶಿಯರಿಂದ ಸ್ವಾತಂತ್ರ್ಯ ಪಡೆಯಲು ನಾವು ಹೋರಾಡಿದ್ದೇವೆ. ನಮ್ಮ ರಾಷ್ಟ್ರಜೀವನ ವಾಹಿನಿಗೆ ಭಂಗವುಂಟಾಗಿಲ್ಲ ಅದು ನಿರಂತರವಾಗಿ ಚಲನಶೀಲವಾಗಿದೆ. ಗಂಗಾನದಿಯ ಹರಿವನ್ನು ಹಿಂದಿನ ಘಟ್ಟಕ್ಕೆ ತಿರುಗಿಸುವುದು ವಿವೇಕದ ಕೆಲಸವಾಗದು. ಬನಾರಸ್‌ನಲ್ಲಿ ಗಂಗೆಯ ನೀರು ಹರದ್ವಾರದಲ್ಲಿರುವಷ್ಟು ಸ್ಫಟಿಕ ಶುಭ್ರವಾಗಿಲ್ಲದಿರಬಹುದು. ಆದಾಗೂ ಅದು ನಮಗೆ ಪವಿತ್ರ ಗಂಗಾಜಲ. ಅದು ಅಸಂಖ್ಯಾತ ಕಿರುತೊರೆ ಹೊಳೆಗಳನ್ನು ಅವುಗಳ ತ್ಯಾಜ್ಯದೊಂದಿಗೆ ತನ್ನೊಳಗೆ ಲೀನಮಾಡಿಕೊಂಡಿದೆ. ಈ ಕಿರುತೊರೆ, ಹೊಳೆಗಳಿಗೆ ಪ್ರತ್ಯೇಕ ಅಸ್ತಿತ್ವ ಇಲ್ಲ, ಅವು ಈಗ ಗಂಗಾನದಿಯಾಗಿಬಿಟ್ಟಿದೆ. ಗಂಗಾನದಿಯ ಪ್ರವಾಹ ಮುಂದೆ ಮುಂದೆ ಹರಿಯಲೇಬೇಕು. ಅದು ಅನಿವಾರ್ಯ ಇದಿಷ್ಟೇ ಆದರೆ ಅದೇನೂ ದೊಡ್ಡ ಸಮಸ್ಯೆಯಲ್ಲ. ಕಿರುಹಳ್ಳ ತೊರೆಗಳ ಸಂಗಮ ಆದಲ್ಲಿ ಅದು ದೊಡ್ಡ ಸಮಸ್ಯೆಯಲ್ಲ. ಆದರೆ ಪ್ರಪಂಚದಲ್ಲಿ ಬೇರೆಬೇರೆ ರಾಷ್ಟ್ರಗಳು ಇವೆ. ಕಳೆದ ಒಂದು ಸಾವಿರ ವರ್ಷಗಳಲ್ಲಿ ಈ ರಾಷ್ಟ್ರಗಳು ಅದ್ಭುತ ಪ್ರಗತಿ ಸಾಧಿಸಿವೆ. ನಮ್ಮ ಇಡೀ ದೇಶ ಸ್ವಾತಂತ್ರ್ಯ ಹೋರಾಟದಲ್ಲಿ ನಿರತವಾಗಿತ್ತು; ಹೊಸ ಹೊಸ ಆಕ್ರಮಣಕಾರರನ್ನು ಹೊರದಬ್ಬುವ ಹೋರಾಟದಲ್ಲಿ ತೊಡಗಿತ್ತು. ವಿಶ್ವದ ಪ್ರಗತಿಗೆ ನಮ್ಮಿಂದ ಏನೊಂದು ಕೊಡುಗೆಯನ್ನು ನೀಡಲಾಗಲಿಲ್ಲ. ಈಗ ನಾವು ಸ್ವತಂತ್ರರು. ಈ ಕೊರತೆಯನ್ನು



ಆದಷ್ಟು ಬೇಗ ತುಂಬುವುದು ಹಾಗೂ ಅಭ್ಯುದಯ ಹೊಂದಿದ ರಾಷ್ಟ್ರಗಳಿಗೆ ಹೆಗಲೆಣೆಯಾಗಿ ನಿಲ್ಲುವುದು ಈಗ ನಮ್ಮ ಪರಮ ಗುರಿಯಾಗಬೇಕಲ್ಲವೆ? ಪರಮ ಕರ್ತವ್ಯವಾಗಬೇಕಲ್ಲವೆ?

**ಬ್ರಿಟಿಷರ ಆಳ್ವಿಕೆಯ ದುಷ್ಪರಿಣಾಮಗಳು**

ಇಲ್ಲಿಯವರೆಗೆ ಭಿನ್ನಾಭಿಪ್ರಾಯಗಳಿಗೆ ಅವಕಾಶವಿಲ್ಲ. ಪಶ್ಚಿಮದ ಅಭೂತಪೂರ್ವವಾದ ಅದ್ಭುತವಾದ ಪ್ರಗತಿಗೆ ಕಾರಣಗಳನ್ನು ಹುಡುಕುವುದರಲ್ಲಿ ನಾವು ಸೋತಾಗ ಸಮಸ್ಯೆ ಉದ್ಭವಿಸುತ್ತದೆ. ಪಾಶ್ಚಾತ್ಯ ರಾಷ್ಟ್ರಗಳ ಕಣ್ಣು ಕುಕ್ಕುವ ಪ್ರಗತಿ ಮತ್ತು ಅದರ ಪರಿಣಾಮಗಳು ಕಟುವಾಸ್ತವ. ದೃಗ್ಗೋಚರವಾದ ಸತ್ಯ. ಪಾಶ್ಚಾತ್ಯ ಪ್ರಪಂಚದ ಪ್ರತಿನಿಧಿಯಾದ ಬ್ರಿಟಿಷರು ಒಂದು ಶತಮಾನ ನಮ್ಮನ್ನು ಆಳಿದರು. ತಮ್ಮ ಆಳ್ವಿಕೆಯಲ್ಲಿ ಅವರು ಅಳವಡಿಸಿದ ಅನೇಕ ಕಾರ್ಯಕ್ರಮಗಳು, ನೀತಿಗಳು ಭಾರತೀಯ ವಸ್ತುಗಳ ಬಗ್ಗೆ ನಮ್ಮ ಜನಮನದಲ್ಲಿ ತಿರಸ್ಕಾರ ಭಾವನೆಯನ್ನು ಮೂಡಿಸಿದವು. ಇದು ಪಾಶ್ಚಾತ್ಯವಾದುದೆಲ್ಲವೂ ಗೌರವಾರ್ಹವಾದದ್ದು ಎಂಬ ಭಾವನೆಯನ್ನು ಹುಟ್ಟಿಸಿತು. ಇಂಥ ಭಾವನೆಗಳಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ವೈಜ್ಞಾನಿಕ ಪ್ರಗತಿಯೊಂದಿಗೆ ಪಾಶ್ಚಾತ್ಯ ಮಾದರಿಯ ರೀತಿನೀತಿ, ಊಟ–ತಿಂಡಿ, ಮೊದಲ್ಗೊಂಡು ಅವರ ಜೀವನ ಶೈಲಿಯೂ ನಮ್ಮ ದೇಶವನ್ನು ಪ್ರವೇಶಿಸಿತು. ಐಹಿಕ ವಿಜ್ಞಾನಗಳು ಮಾತ್ರವಲ್ಲ ಅವರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಿದ್ಧಾಂತಗಳೂ ನಮ್ಮ ಗುಣಮಟ್ಟಗಳಾದವು, ಮಾನದಂಡಗಳಾದವು. ಇವೆಲ್ಲದರ ಪರಿಣಾಮ ನಮ್ಮ ದೇಶದ 'ಸುಶಿಕ್ಷಿತ' ಜನರಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಪರಿಣಾಮ ನಮಗೆ ಒಳ್ಳೆಯದೇ ಅಥವಾ ಕೆಟ್ಟದ್ದೇ ಎಂಬುದನ್ನು ನಾವು ತೀರ್ಮಾನಿಸಬೇಕಾಗಿದೆ. ಬ್ರಿಟಿಷ್ ಸರಕುಗಳನ್ನು ವಿರೋಧಿಸುವುದು ನಮಗೆ ಹೆಮ್ಮೆಯ ಸಂಗತಿಯಾಗಿತ್ತು. ಆದರೆ, ವಿಚಿತ್ರವೆಂದರೆ ಬ್ರಿಟಿಷರ ನಿರ್ಗಮನದ ನಂತರ ಈಗ ಪಾಶ್ಚಾತ್ಯೀಕರಣ ಪ್ರಗತಿಯ ಕುರುಹಾಗಿದೆ. ರಾಷ್ಟ್ರೀಯತೆಯ ಸಂಕುಚಿತ ಮನೋಭಾವ ರಾಷ್ಟ್ರದ ಪ್ರಗತಿಗೆ ತೊಡಕಾಗಬಾರದು ಎನ್ನುವುದು ಸರಿಯೇ. ಅದು ನಿಜ. ಆದರೆ ಪಾಶ್ಚಿಮಾತ್ಯ ವಿಜ್ಞಾನ ಮತ್ತು ಪಾಶ್ಚಾತ್ಯ ಜೀವನ ಶೈಲಿ ಇವೆರಡೂ ಬೇರೆಬೇರೆಯಾದವು. ವಿಭಿನ್ನ ಸಂಗತಿಗಳು ಪಾಶ್ಚಾತ್ಯ ವಿಜ್ಞಾನ ವಿಶ್ವವ್ಯಾಪಿಯಾದದ್ದು ಪ್ರಗತಿ ನಮ್ಮ ಇಚ್ಛೆಯಾಗಿದ್ದಲ್ಲಿ ಅದನ್ನು ನಾವು ಅಳವಡಿಸಿಕೊಳ್ಳಲೇಬೇಕು. ಆದರೆ ಪಾಶ್ಚಾತ್ಯ ಜೀವನ ಮೌಲ್ಯಗಳು ಮತ್ತು ಜೀವನಶೈಲಿ ಬಗ್ಗೆ ಇದೇ ಮಾತನ್ನು ಹೇಳಲಾಗದು. ಆ ವಿಷಯದಲ್ಲಿ ಈ ಮಾತು ಸತ್ಯವಲ್ಲ. ಹಿಂದೆ ಮುಂದೆ ಯೋಚಿಸದೇ ಅವೈಚಾರಿಕವಾಗಿ ಪಶ್ಚಿಮದ ಅನುಕರಣೆಯನ್ನು ನಿಲ್ಲಿಸಬೇಕಾಗಿದೆ. ಪಾಪಪ್ರಜ್ಞೆಯಿಂದ ಇಂಥ ಅನುಕರಣೆಯನ್ನು ವರ್ಜಿಸಬೇಕಾಗಿದೆ. ಪಶ್ಚಿಮದ ರಾಜಕೀಯ ಹಾಗೂ

ಆರ್ಥಿಕ ಸಿದ್ಧಾಂತಗಳು ಪ್ರಗತಿಯ ಸಾಕಾರವೆಂದು ಪರಿಗಣಿಸುವವರು ಹಾಗೂ ಅದನ್ನು ನಮ್ಮ ನೆಲದಲ್ಲಿ ಬಿತ್ತಿಬೆಳೆಯಬೇಕೆಂದು ಹಂಬಲಿಸುವವರೂ ಇದ್ದಾರೆ. ಆದ್ದರಿಂದ ನಮ್ಮ ದೇಶವನ್ನು ಯಾವ ದಿಕ್ಕಿನಲ್ಲಿ ಒಯ್ಯಬೇಕು? ಅದರ ಗೊತ್ತುಗುರಿಗಳೇನಾಗಬೇಕು? ಎಂಬುದನ್ನು ನಿರ್ಧರಿಸುವ ಪ್ರಯತ್ನ ಮಾಡುವಾಗ ನಾವು ಪಾಶ್ಚಾತ್ಯ ಪ್ರಪಂಚದ ವಿವಿಧ ರಾಜಕೀಯ ಹಾಗೂ ಆರ್ಥಿಕ ಸಿದ್ಧಾಂತಗಳ ಆಧಾರವನ್ನು ಮತ್ತು ಅವುಗಳ ಇಂದಿನ ಸ್ಥಿತಿಗತಿಗಳನ್ನೂ, ಸ್ಥಾನಮಾನಗಳನ್ನೂ, ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

## ಐರೋಪ್ಯ ರಾಷ್ಟ್ರಗಳ ಉದಯ

ಪಾಶ್ಚಾತ್ಯ ಪ್ರಪಂಚವನ್ನು ಆವರಿಸಿಕೊಂಡಿರುವ ಹಲವಾರು ಸಿದ್ಧಾಂತಗಳಲ್ಲಿ ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದ ಮುಖ್ಯವಾದವು. ಇವಲ್ಲದೆ ವಿಶ್ವದ ಏಕತೆ, ವಿಶ್ವಶಾಂತಿಗಳಿಗಾಗಿ ಹಂಬಲಿಸುವ ಮಂದಿಯೂ ಇದ್ದಾರೆ. ಈ ದಿಕ್ಕಿನಲ್ಲಿ ಕೆಲವೊಂದು ಪ್ರಯತ್ನಗಳನ್ನು ಮಾಡಿದ್ದಾರೆ.

ಇವುಗಳಲ್ಲಿ ರಾಷ್ಟ್ರೀಯತೆ ಅತಿ ಪುರಾತನವಾದದ್ದು ಹಾಗೂ ಅತಿ ಪ್ರಬಲವಾದದ್ದು. ರೋಮ್ ಚಕ್ರಾಧಿಪತ್ಯದ ಪತನದ ನಂತರ ಹಾಗೂ ಕ್ಯಾಥೊಲಿಕ್ ಚರ್ಚ್‌ನ ಪ್ರಭಾವ ಇಳಿಮುಖವಾದ ನಂತರ ಯುರೋಪ್ ಹಲವಾರು ರಾಷ್ಟ್ರಗಳ ಉದಯವನ್ನು ಕಂಡಿತು. ಕಳೆದ ಒಂದು ಸಾವಿರ ವರ್ಷಗಳ ಯೂರೋಪ್ ಇತಿಹಾಸ ಹಲವಾರು ರಾಷ್ಟ್ರಗಳ ಉದಯದ ಹಾಗೂ ಹಲವಾರು ರಾಷ್ಟ್ರಗಳ ನಡುವಣ ಸಂಘರ್ಷದ ಇತಿಹಾಸ. ಈ ರಾಷ್ಟ್ರಗಳು ಯೂರೋಪ್ ಖಂಡದಾಚೆಗೂ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದವು ಹಾಗೂ ಇತರ ಸ್ವತಂತ್ರ ರಾಷ್ಟ್ರಗಳನ್ನು ತಮ್ಮ ಅಧೀನ ರಾಷ್ಟ್ರಗಳನ್ನಾಗಿ ಮಾಡಿಕೊಂಡವು. ರಾಷ್ಟ್ರೀಯತೆ ದೇಶ ಮತ್ತು ಸರ್ಕಾರವನ್ನು ಒಂದುಗೂಡಿಸಿತು. ಇದರಿಂದ ರಾಷ್ಟ್ರೀಯ ಸರ್ಕಾರಗಳು ತಲೆ ಎತ್ತಿದವು. ಇದೇ ಕಾಲದಲ್ಲಿ ರೋಮನ್ ಕ್ಯಾಥೋಲಿಕ್ ಚರ್ಚ್‌ನ ಪ್ರಭಾವ ಇಳಿಮುಖವಾದದ್ದು ರಾಷ್ಟ್ರೀಯ ಚರ್ಚುಗಳ ಉದಯಕ್ಕೆ ಇಂಬುಕೊಟ್ಟವು. ರಾಜಕೀಯದ ಮೇಲೆ ಧರ್ಮದ ಪ್ರಭಾವವನ್ನು ಸಂಪೂರ್ಣವಾಗಿ ಅಳಿಸಿಹಾಕಿದವು. ಏನೇ ಇದ್ದರೂ, ಪರಿಸ್ಥಿತಿ ಜಾತ್ಯತೀತ ಸರ್ಕಾರದ ಪರಿಕಲ್ಪನೆಯ ಹುಟ್ಟಿಗೆ ನಾಂದಿ ಹಾಡಿತು.

## ಯೂರೋಪಿನಲ್ಲಿ ಪ್ರಜಾಪ್ರಭುತ್ವದ ಉದಯ

ಯುರೋಪಿನ ರಾಜಕೀಯ ಜೀವನದ ಮೇಲೆ ಗಾಢಪರಿಣಾಮ ಬೀರಿದ ಪರಿಕಲ್ಪನೆ ಎಂದರೆ ಪ್ರಜಾಪ್ರಭುತ್ವ. ಪ್ರಾರಂಭದಲ್ಲಿ ಪ್ರತಿಯೊಂದು ದೇಶಕ್ಕೂ ಒಬ್ಬ ಮಹಾರಾಜನಿದ್ದ. ಕ್ರಮೇಣ ರಾಜಮಹಾರಾಜರುಗಳ ನಿರಂಕುಶ ಪ್ರಭುತ್ವದ ವಿರುದ್ಧ



ಜನಮನದಲ್ಲಿ ಜಾಗೃತಿ ಮೂಡಲಾರಂಭಿಸಿತು. ಕೈಗಾರಿಕಾ ಕ್ರಾಂತಿ ಹಾಗೂ ಅಂತರರಾಷ್ಟ್ರೀಯ ವ್ಯಾಪಾರ ವಾಣಿಜ್ಯಗಳ ಫಲವಾಗಿ ಎಲ್ಲ ರಾಷ್ಟ್ರಗಳಲ್ಲೂ ವಾಣಿಜ್ಯ ಸಮುದಾಯ ತಲೆ ಎತ್ತಿತು. ಸಹಜವಾಗಿಯೇ ಹೊಸ ಅಧಿಕಾರ ಕೇಂದ್ರಗಳು ಮತ್ತು ಸ್ಥಾಪಿತ ದೊರೆಗಳು ಹಾಗೂ ಊಳಿಗಮಾನ್ಯ ದಣಿಗಳ ನಡುವೆ ಘರ್ಷಣೆ, ತಿಕ್ಕಾಟಗಳು ಪ್ರಾರಂಭವಾದವು. ಪ್ರಜಾಪ್ರಭುತ್ವದ ಮೂಲ ತತ್ತ್ವಗಳು ಕೇಂದ್ರ ಬಿಂದುವಾದವು. ಇದರ ಸುತ್ತ ಘರ್ಷಣೆಯ ಪರಿಭ್ರಮಣ. ಗ್ರೀಕ್ ನಗರ ಗಣರಾಜ್ಯಗಳಲ್ಲಿ ಪ್ರಜಾಪ್ರಭುತ್ವದ ಕೂಗು ಶುರುವಾಯಿತು. ಸಮಾನತೆ, ಸೋದರತ್ವ, ಪ್ರತಿ ನಾಗರಿಕನ ವ್ಯಕ್ತಿಸ್ವಾತಂತ್ರ್ಯ ಮೊದಲಾದ ಅತ್ಯುನ್ನತ ಆದರ್ಶಗಳು ಜನಸಾಮಾನ್ಯರನ್ನು ಆಕರ್ಷಿಸಿದವು. ಫ್ರಾನ್ಸ್‌ನಲ್ಲಿ ರಕ್ತಕ್ರಾಂತಿಯಾಯಿತು. ಇಂಗ್ಲೆಂಡಿನಲ್ಲಿ ಆಗಿಂದಾಗ್ಗೆ ಆಂದೋಲನಗಳು ನಡೆದವು. ಜನಸಾಮಾನ್ಯರ ಮನದಲ್ಲಿ ಪ್ರಜಾಪ್ರಭುತ್ವದ ಪರಿಕಲ್ಪನೆ ನೆಲೆಯೂರಿತು. ರಾಜಮಹಾರಾಜರುಗಳನ್ನು ಪದಚ್ಯುತಿಗೊಳಿಸಲಾಯಿತು. ಇಲ್ಲವೇ ಅವರ ಅಧಿಕಾರವನ್ನು ಮೊಟಕುಗೊಳಿಸಲಾಯಿತು. ಸಂವಿಧಾನಾತ್ಮಕ ಸರ್ಕಾರಗಳನ್ನು ರಚಿಸಲಾಯಿತು. ಇವತ್ತು ಯೂರೋಪಿನಲ್ಲಿ ಪ್ರಜಾಪ್ರಭುತ್ವ ಅಂಗೀಕೃತ ವ್ಯವಸ್ಥೆಯಾಗಿದೆ. ಪ್ರಜಾಸತ್ತೆಯನ್ನು ಅದುಮಿಡಲು ಪ್ರಯತ್ನಿಸಿದವರು ಇಂದು ಅದನ್ನು ಖಂಡಿಸುತ್ತಿಲ್ಲ. ಹಿಟ್ಲರ್, ಮುಸೋಲಿನಿ, ಸ್ಟಾಲಿನ್‌ನಂಥ ಸರ್ವಾಧಿಕಾರಿಗಳು ಪ್ರಜಾಸತ್ತೆಯನ್ನು ನಾಲಿಗೆಯ ತುದಿಯಲ್ಲಿ ಪ್ರಶಂಸಿದ್ದಾರೆ.

## ಬಂಡವಾಳಶಾಹಿಗಳ ಶೋಷಣೆ ಮತ್ತು ಮಾರ್ಕ್ಸ್‌ವಾದ

ಪ್ರಜಾಪ್ರಭುತ್ವದಲ್ಲಿ ಪ್ರತಿವ್ಯಕ್ತಿಗೂ ಮತದಾನದ ಹಕ್ಕಿದೆ. ಆದರೆ ನಿಜವಾದ ಅಧಿಕಾರ ಇರುವುದು ಕ್ರಾಂತಿ ನಾಯಕತ್ವದಲ್ಲಿ. ಕೈಗಾರಿಕೀಕರಣದಿಂದಾಗಿ ಉತ್ಪಾದನೆಯ ಹೊಸ ಮಾದರಿಗಳು, ಪದ್ಧತಿಗಳು, ಮಾರ್ಗಗಳು ಹುಟ್ಟಿಕೊಂಡವು. ಮನೆಯ ಸ್ವಾತಂತ್ರ್ಯದಲ್ಲಿ ಬಿಡುಬೀಸಾಗಿ ಕೆಲಸ ಮಾಡುತ್ತಿದ್ದವರು ಕಾರ್ಖಾನೆಗಳಿಗೆ ಹೋಗಿ ದುಡಿಯಲಾರಂಭಿಸಿದರು. ಕಾರ್ಖಾನೆಗಳ ಮಾಲೀಕರುಗಳ ಆದೇಶದನ್ವಯ ಕೆಲಸ ಮಾಡತೊಡಗಿದರು. ಕಾರ್ಮಿಕರು ಹಳ್ಳಿಗಳಿಂದ ಜನಭರಿತ ನಗರಗಳಿಗೆ ವಲಸೆಬಂದರು. ಇವರಿಗೆಲ್ಲ ಸೂಕ್ತ ವಸತಿ ಸೌಕರ್ಯವಿರಲಿಲ್ಲ. ಕಾರ್ಖಾನೆಗಳಲ್ಲಿ ಕಾರ್ಮಿಕರ ಹಿತರಕ್ಷಣಾ ಕಾನೂನುಗಳಿರಲಿಲ್ಲ; ಕಾರ್ಮಿಕರು ಆರ್ಥಿಕವಾಗಿ ದುರ್ಬಲರಾಗಿದ್ದರು ಮತ್ತು ಅಸಂಘಟಿತರಾಗಿದ್ದರು. ಕಾರ್ಮಿಕ ಶೋಷಣೆ, ಅನ್ಯಾಯ ಮತ್ತು ಕಿರುಕುಳಗಳಿಗೆ ಗುರಿಯಾದ ಅಧಿಕಾರದಲ್ಲಿದ್ದವರೆಲ್ಲ ಕಾರ್ಮಿಕರನ್ನು ಶೋಷಿಸುವವರ ಬಣಕ್ಕೆ ಸೇರಿದವರಾಗಿದ್ದರು. ಹೀಗಾಗಿ ಸರ್ಕಾರದಿಂದ ಪರಿಹಾರದ ಭರವಸೆ ಇರಲಿಲ್ಲ, ನ್ಯಾಯ ಸಿಗುವುದೆಂಬ ಭರವಸೆ ಇರಲಿಲ್ಲ.

ಶೋಷಣೆ ವಿರುದ್ಧ ಹಾಗೂ ಕಾರ್ಮಿಕರ ಸ್ಥಿತಿಗತಿ ಸುಧಾರಣೆಗಾಗಿ ಹಲವಾರು

ನೇತಾರರ ನಾಯಕತ್ವದಲ್ಲಿ ಕಾರ್ಮಿಕ ಚಳವಳಿಗಳು ನಡೆದವು. ಈ ನೇತಾರರು ತಮ್ಮನ್ನು ಸಮಾಜವಾದಿಗಳೆಂದು ಕರೆದುಕೊಂಡರು. ಇವರ ಪೈಕಿ ಕಾರ್ಲ್‌ಮಾರ್ಕ್ಸ್‌ನೂ ಒಬ್ಬ. ಈ ಎಲ್ಲ ಅನ್ಯಾಯಗಳ ವಿರುದ್ಧ ಚಳವಳಿಯ ನಾಯಕತ್ವ ವಹಿಸಿಕೊಳ್ಳಲು ಮಾರ್ಕ್ಸ್ ಇಡೀ ಇತಿಹಾಸದ ಅಧ್ಯಯನ ಕೈಗೊಂಡ ಹಾಗೂ ಶ್ರೇಣಿಕೃತ ವ್ಯವಸ್ಥೆಯನ್ನು ವಿಶ್ಲೇಷಿಸಿ ಜನರ ಮುಂದೆ ಮಂಡಿಸಿದ. ತನ್ನ ಸಿದ್ಧಾಂತಗಳಿಗೆ ವೈಜ್ಞಾನಿಕ ಆಧಾರಗಳಿವೆಯೆಂದು ಮಾರ್ಕ್ಸ್ ಹೇಳಿಕೊಂಡ. ನಂತರ ಬಂದ ಸಮಾಜವಾದಿಗಳು ಮಾರ್ಕ್ಸ್‌ನ ಈ ಎಲ್ಲ ಪ್ರತಿಪಾದನೆಗಳನ್ನು ಒಪ್ಪದಿದ್ದರೂ ಅವನ ವಿಚಾರಧಾರೆಯಿಂದ ಪ್ರಭಾವಿತರಾದರು.

ಮಾರ್ಕ್ಸ್‌ನ ವಿಶ್ಲೇಷಣೆಯ ಪ್ರಕಾರ ದ್ವಂದ್ವಾತ್ಮಕ ವಸ್ತುವಾದವೇ (ಡಯಲೆಕ್ಟಿಕಲ್ ಮೆಟೀರಿಯಲಿಸಂ) ಶೋಷಣೆಗೆ ಮೂಲಕಾರಣ. ಉತ್ಪಾದನಾ ಸಾಧನ ಸಂಪತ್ತುಗಳೆಲ್ಲ ಖಾಸಗಿ ಮಾಲೀಕತ್ವದ ಕೈಗಳಲ್ಲಿ ಕೇಂದ್ರಿತವಾಗಿರುವುದೇ ಶೋಷಣೆಗೆ ಮೂಲ ಕಾರಣ ಎಂದ ಮಾರ್ಕ್ಸ್. ಈ ಸಾಧನ ಸಂಪತ್ತುಗಳು ಸಮಾಜದ ಆಸ್ತಿಯಾದಲ್ಲಿ (ಮಾರ್ಕ್ಸ್ ಪ್ರಕಾರ ಸಮಾಜ ಸರ್ಕಾರದೊಂದಿಗೆ ಸಮಾನಾರ್ಥಕವಾದದ್ದು) ಶೋಷಣೆಗೆ ಅವಕಾಶವಿರುವುದಿಲ್ಲ. ಇದಕ್ಕೂ ಮೊದಲು ಸರ್ಕಾರವನ್ನು ಶೋಷಕರ ಕೈಗಳಿಂದ ಮುಕ್ತಗೊಳಿಸಬೇಕು ಹಾಗೂ ಮುಂದೆ ಇವರ ಪ್ರಭಾವ ನಡೆಯದಂತೆ ವ್ಯವಸ್ಥೆ ಮಾಡಬೇಕು. ಈ ನಿಟ್ಟಿನಲ್ಲಿ ಶ್ರಮಜೀವಿಗಳ ಸರ್ವಾಧಿಕಾರ ಸ್ಥಾಪನೆಯಾಗಬೇಕು. ಶ್ರಮಜೀವಿಗಳ ಸರ್ವಾಧಿಕಾರ ತಾಳಿಕೊಳ್ಳಲು ಶೋಷಕರ ವರ್ಗವನ್ನು ಆಖೈರಾಗಿ ನಿರ್ನಾಮಗೊಳಿಸಬೇಕು. ಆಗ ಬಂಡಾಯ ಏಳುವ ಸಾಧ್ಯತೆಗಳಿರುವುದಿಲ್ಲ. ವರ್ಗರಹಿತ ಸಮಾಜ, ಸ್ಥಾನಮಾನರಹಿತ ಸಮಾಜ ಸರ್ಕಾರದ ಜಾಗಕ್ಕೆ ಬರುವುದು. ಬಂಡವಾಳಶಾಹಿಯಲ್ಲಿ ಸ್ವಯಂನಾಶದ ಬೀಜಗಳು ಅಂತರ್ಗತವಾಗಿವೆಯೆಂದೂ ಆದ್ದರಿಂದ ಸಮಾಜವಾದ ಅನಿವಾರ್ಯವೆಂದು ಹೇಳಲೂ ಮಾರ್ಕ್ಸ್ ಪ್ರಯತ್ನಿಸಿದ.

**ಮೂರು ಅಸಮ್ಮತ ಕಲ್ಪನೆಗಳು**

ಯೂರೋಪಿನ ಕೆಲವು ರಾಷ್ಟ್ರಗಳಲ್ಲಿ ಸಮಾಜವಾದಿ ಕ್ರಾಂತಿಯಾಯಿತು. ಸಮಾಜವಾದ ಅಂಗೀಕಾರ ಪಡೆಯದ ದೇಶಗಳಲ್ಲೂ ರಾಜಕಾರಣಿಗಳು ಕಾರ್ಮಿಕರ ಹಕ್ಕುಗಳನ್ನು ಒಪ್ಪಿಕೊಳ್ಳಬೇಕಾಯಿತು. "ಸುಖೀ ರಾಜ್ಯ" ವನ್ನು ಒಂದು ಆದರ್ಶವಾಗಿ ಅಂಗೀಕರಿಸಲಾಗಿತ್ತು. ರಾಷ್ಟ್ರೀಯತೆ, ಪ್ರಜಾಪ್ರಭುತ್ವ, ಸಮಾಜವಾದ ಅಥವಾ ಸಮಾನತೆ (ಸಮಾನತೆ ಸಮಾಜವಾದದ ಮೂಲ ಆಶಯ. ಸಮಾನತೆ ಸಮಾನ ಸಾಧ್ಯತೆಗಿಂತ ಭಿನ್ನವಾದದ್ದು) – ಈ ಮೂರು ಸಿದ್ಧಾಂತಗಳು ಐರೋಪ್ಯ ಸಾಮಾಜಿಕ ಮತ್ತು ರಾಜಕೀಯ ಚಿಂತನ ಮಂಥನಗಳಲ್ಲಿ ಮೇಲುಗೈ ಸಾಧಿಸಿದ್ದವು. ಇವುಗಳ ಮಧ್ಯೆ



ಆಗಿಂದಾಗ್ಗೆ ವಿಶ್ವಶಾಂತಿ ಮತ್ತು ವಿಶ್ವ ಏಕತೆಯ ಪ್ರತಿಪಾದನೆಯೂ ನಡೆಯುತ್ತಿತ್ತು.

ಇವೆಲ್ಲವೂ ಒಳ್ಳೆಯ ಆದರ್ಶಗಳೇ. ಇವು ಮಾನವಕುಲದ ಶ್ರೇಷ್ಠ ಆಶಯಗಳನ್ನು, ಆಶೋತ್ತರಗಳನ್ನು ಬಿಂಬಿಸುತ್ತವೆ. ಆದರೆ ನಡವಳಿಕೆಯಲ್ಲಿ, ವ್ಯವಹಾರದಲ್ಲಿ ಒಂದು ಮತ್ತೊಂದಕ್ಕೆ ವಿರೋಧಿಯೇ ಆಗಿವೆ. ರಾಷ್ಟ್ರೀಯತೆ ವಿಶ್ವಶಾಂತಿಗೆ ಧಕ್ಕೆ ತರುತ್ತದೆ. ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿ ಶೋಷಕರ ಆಳ್ವಿಕೆಗೆ ಮುಕ್ತ ಅವಕಾಶಗಳನ್ನು ಕಲ್ಪಿಸುತ್ತವೆ. ಬಂಡವಾಳಶಾಹಿ ಜಾಗಕ್ಕೆ ಸಮಾಜವಾದ ಬಂದಲ್ಲಿ ಪ್ರಜಾಪ್ರಭುತ್ವ ಮತ್ತು ವ್ಯಕ್ತಿ ಸ್ವಾತಂತ್ರ್ಯಗಳಿಗೆ ಕುತ್ತು ತಪ್ಪಿದ್ದಲ್ಲ. ಆದ್ದರಿಂದ ಪಾಶ್ಚಿಮಾತ್ಯ ಪ್ರಪಂಚ ಈಗ ಈ ಉನ್ನತ ಆದರ್ಶಗಳೊಂದಿಗೆ ರಾಜಿ ಮಾಡಿಕೊಳ್ಳುವ ಕಾಯಕದಲ್ಲಿ ತೊಡಗಿದೆ. ಆದರೆ ಈ ಪ್ರಯತ್ನದಲ್ಲಿ ಅವರು ಇಂದಿನವರೆಗೆ ಯಶಸ್ಸು ಕಂಡಿಲ್ಲ. ಒಂದಲ್ಲ ಒಂದು ಸಿದ್ಧಾಂತಕ್ಕೆ ಮಹತ್ವ ಕೊಟ್ಟು ಮಣೆ ಹಾಕಿ ಅವರು ಹಲವು ಹನ್ನೊಂದು ಬಗೆಯ ಕ್ರಮಗಳನ್ನು ಕೈಗೊಂಡರು. ಬದಲಾವಣೆಗೆ ಪ್ರಯತ್ನಿಸಿದರು. ಇಂಗ್ಲೆಂಡ್ ರಾಷ್ಟ್ರೀಯತೆ ಮತ್ತು ಪ್ರಜಾಸತ್ತೆಗೆ ಪ್ರಾಶಸ್ತ್ಯ ನೀಡಿ ಈ ಮಾರ್ಗದಲ್ಲಿ ತನ್ನ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆಗಳನ್ನು, ನಡಾವಳಿ–ಪದ್ಧತಿಗಳನ್ನು ರೂಪಿಸಿಕೊಂಡಿತು. ಫ್ರಾನ್ಸ್‌ಗೆ ಇದೇ ಮಾರ್ಗ ಅನುಸರಿಸಲು ಸಾಧ್ಯವಾಗಲಿಲ್ಲ. ಅಲ್ಲಿ ಪ್ರಜಾಪ್ರಭುತ್ವ ರಾಜಕೀಯ ಅಸ್ಥಿರತೆಗೆಡೆ ಮಾಡಿಕೊಟ್ಟಿತು. ಬ್ರಿಟಿಷ್ ಲೇಬರ್ ಪಕ್ಷ ಪ್ರಜಾಸತ್ತೆಯೊಂದಿಗೆ ಸಮಾಜವಾದದ ಹೊಂದಾಣಿಕೆ ಉಂಟು ಮಾಡಲು ಪ್ರಯತ್ನಿಸಿತು. ಸಮಾಜವಾದ ಬಲಗೊಂಡಲ್ಲಿ ಪ್ರಜಾಪ್ರಭುತ್ವ ಉಳಿಯುವುದೇ ಎಂದು ಜನ ಸಂಶಯ ವ್ಯಕ್ತಪಡಿಸಿದರು. ಆದ್ದರಿಂದ ಮಾರ್ಕ್ಸ್‌ವಾದಿ ಸಿದ್ಧಾಂತಗಳನ್ನು ಪ್ರಬಲವಾಗಿ ಸಮರ್ಥಿಸಿಕೊಳ್ಳುವ ಸಮಾಜವಾದವನ್ನು ಲೇಬರ್ ಪಕ್ಷ ಬೆಂಬಲಿಸುತ್ತಿಲ್ಲ. ಹೀಗಾಗಿ ಸಮಾಜವಾದ ದುರ್ಬಲಗೊಂಡಿತು. ಹಿಟ್ಲರ್ ಮತ್ತು ಮುಸೋಲಿನಿ ರಾಷ್ಟ್ರೀಯ ಸಮಾಜವಾದವನ್ನು ಅಳವಡಿಸಿಕೊಂಡರು. ಪ್ರಜಾಪ್ರಭುತ್ವದ ಸಮಾಧಿ ಮಾಡಿದರು. ಆಖೈರಾಗಿ ವಿಶ್ವಶಾಂತಿ, ವಿಶ್ವ ಏಕತೆಗಳಿಗೆ ಬೆದರಿಕೆ ಒಡ್ಡಿದ್ದ ಸಮಾಜವಾದ ಅವರ ರಾಷ್ಟ್ರೀಯತೆಗೆ ಒಂದು ಸಾಧನವಾಯಿತು ಅಷ್ಟೇ.

ನಾವು ಕೆಲವೊಂದು ಮಾರ್ಗದರ್ಶನಕ್ಕಾಗಿ ಪಶ್ಚಿಮದತ್ತ ಮುಖ ಮಾಡಬಹುದಾದರೂ ಅವರಲ್ಲಿ ನಮಗೆ ಕೊಡಮಾಡಬಹುದಾದಂಥ ನಿರ್ದಿಷ್ಟವಾದ, ವಾಸ್ತವಿಕವಾದ ಸಲಹೆಗಳಿಲ್ಲ, ಪರಿಹಾರಗಳಿಲ್ಲ. ಪಾಶ್ಚಾತ್ಯ ರಾಷ್ಟ್ರಗಳೇ ಹೊರಳು ದಾರಿಯಲ್ಲಿವೆ. ಯಾವುದು ಹಿತಕರ, ಯಾವುದು ಒಳ್ಳೆಯದು ಎಂಬುದನ್ನು ನಿರ್ಧರಿಸಲು ಅಸಮರ್ಥವಾಗಿವೆ. ಇಂಥ ಪರಿಸ್ಥಿತಿಯಲ್ಲಿ ನಾವು ಪಶ್ಚಿಮದಿಂದ ಯಾವುದೇ ರೀತಿಯ ಮಾರ್ಗದರ್ಶನವನ್ನೂ ನಿರೀಕ್ಷಿಸಲಾಗದು. ಪ್ರತಿಯಾಗಿ, ವಿಶ್ವದ ಇಂದಿನ ಈ ಪರಿಸ್ಥಿತಿಯಲ್ಲಿ ಈ ಸಂಕಟ, ಸಂದಿಗ್ಧತೆಗಳ ನಿವಾರಣೆಗೆ ನಾವೇ ಏನಾದರೂ ಮಾಡಬಹುದೆ ಎಂಬುದನ್ನು ಪರಿಶೀಲಿಸಬೇಕಾಗಿದೆ. ವಿಶ್ವದ

ಪ್ರಗತಿಯನ್ನು ಗಮನದಲ್ಲಿರಿಸಿಕೊಂಡು, ಸಮಾನವಾದ ವಿವೇಕ–ಜ್ಞಾನಗಳ ಭಂಡಾರಕ್ಕೆ ನಾವು ಏನಾದರು ಕಾಣಿಕೆ ಸಲ್ಲಿಸಬಹುದೆ? ಸಲ್ಲಿಸಲಾದೀತೆ? ವಿಶ್ವ ಸಮುದಾಯದ ಸದಸ್ಯ ರಾಷ್ಟ್ರವಾಗಿ ನಾವು ನಮ್ಮ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗಿದೆ. ವಿಶ್ವದ ಪ್ರಗತಿಗೆ ಸಹಾಯಕವಾದೀತು ಎನ್ನುವಂಥಾದ್ದು ಏನಾದರೂ ನಮ್ಮಲ್ಲಿದ್ದಲ್ಲಿ ಅದನ್ನು ಪ್ರಪಂಚಕ್ಕೆ ಧಾರೆ ಎರೆದು ಕೊಡಲು ನಾವು ಹಿಂಜರಿಯಬಾರದು. ಇದು ಕಲಬೆರಕೆಯ ಯುಗ. ಆದರ್ಶಗಳ, ಆಲೋಚನೆಗಳ, ಕಲ್ಪನೆಗಳ ಕಲಬೆರಕೆ, ಕಲಸುಮೇಲೋಗರ ಸರಿಯಲ್ಲ. ಸಾರಾಸಗಟಾಗಿ ಎಲ್ಲವನ್ನೂ ಒಪ್ಪಿಕೊಳ್ಳುವುದಕ್ಕೆ ಬದಲಾಗಿ ನಾವು ಅವೆಲ್ಲವನ್ನೂ ಕೂಲಂಕಶವಾಗಿ ಪರಿಶೀಲಿಸಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಅವುಗಳಲ್ಲಿ ಸುಧಾರಣೆ ಉಂಟುಮಾಡಲು ಅವನ್ನು ಉತ್ತಮಗೊಳಿಸಲು ನಾವು ಪ್ರಯತ್ನಿಸಬೇಕು. ನಾವು ವಿಶ್ವಕ್ಕೆ ಹೊರೆಯಾಗಬಾರದು. ಸಾಧ್ಯವಾದಲ್ಲಿ ವಿಶ್ವ ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆಗೆ ಪ್ರಯತ್ನಿಸಬೇಕು. ನಮ್ಮ ನಾಗರಿಕತೆ, ಸಂಪ್ರದಾಯ, ಪರಂಪರೆಗಳು ವಿಶ್ವ ಸಂಸ್ಕೃತಿಗೆ ಏನನ್ನು ಕೊಡಬಹುದು? ವಿಶ್ವ ಸಂಸ್ಕೃತಿಗೆ ನಮ್ಮ ಕೊಡುಗೆ ಏನು? ಎಂಬುದನ್ನು ನಾವು ಪರಿಶೀಲಿಸಬೇಕು. ನಾಳೆ ಸಂಜೆ ನಾವು ಈ ವಿಷಯ ಪರಿಶೀಲಿಸೋಣ.

೨೨ ಏಪ್ರಿಲ್ ೧೯೬೫



# ೨ ಪಾಶ್ಚಾತ್ಯ ಮತ್ತು ಭಾರತೀಯ ದರ್ಶನಗಳು

ನಮ್ಮ ದೇಶ ಬಾಂಧವರ ಬದುಕಿನಲ್ಲಿ ಸರ್ವಾಂಗೀಣ ಪ್ರಗತಿ ಸಾಧಿಸಬೇಕೆನ್ನುವ ಕನಸನ್ನು ನನಸಾಗಿಸಲು ನಾವು ಯಾವ ದಿಕ್ಕಿನಲ್ಲಿ ಸಾಗಬೇಕು? ಸ್ವಾತಂತ್ರ್ಯ ಬಂದು ಹದಿನೇಳು ವರ್ಷಗಳಾದ ನಂತರವೂ ನಾವು ಇನ್ನೂ ನಮ್ಮ ದಿಕ್ಕುದಿಸೆ, ಗೊತ್ತುಗುರಿಗಳನ್ನು ನಿರ್ಧರಿಸಬೇಕಾಗಿದೆ ಎಂಬುದನ್ನು ನಿನ್ನೆ ನಾವು ಪರ್ಯಾಲೋಚಿಸಿದೆವು. ಸಾಮಾನ್ಯವಾಗಿ ಜನ ಈ ಪ್ರಶ್ನೆಯನ್ನು ಗಂಭೀರವಾಗಿ ಆಲೋಚಿಸಲು ಸಿದ್ಧರಿಲ್ಲ. ಅವರು ಆಯಾಕಾಲದ ಆಗಾಗಿನ ಸಮಸ್ಯೆಗಳ ಬಗ್ಗೆಯಷ್ಟೇ ಯೋಚಿಸುತ್ತಾರೆ. ಕೆಲವೊಮ್ಮೆ ಆರ್ಥಿಕ ಸಮಸ್ಯೆಗಳನ್ನು ತುಂಬ ಕಾಳಜಿಯಿಂದ ಪರಿಗಣಿಸುತ್ತಾರೆ. ಅವುಗಳಿಗೆ ಪರಿಹಾರ ಕಂಡುಹಿಡಿಯುವ ಪ್ರಯತ್ನ ಮಾಡಲಾಗುತ್ತದೆ. ಇನ್ನು ಕೆಲವೊಮ್ಮೆ ಸಾಮಾಜಿಕ ಅಥವಾ ರಾಜಕೀಯ ಸಮಸ್ಯೆಗಳು ಮುಂಚೂಣಿಗೆ ಬಂದು ಗಮನ ಸೆಳೆಯುತ್ತವೆ. ಮೂಲಭೂತವಾಗಿ ಯಾವ ದಿಕ್ಕಿನಲ್ಲಿ ಸಾಗಬೇಕೆಂಬುದು ಗೊತ್ತಿಲ್ಲ. ಆದ್ದರಿಂದ ಇಂಥ ಪ್ರಯತ್ನಗಳೊಟ್ಟಿಗೆ ಉತ್ಸಾಹ ಇರುವುದಿಲ್ಲ. ಅಥವಾ ಇಂಥ ಪ್ರಯತ್ನಗಳಲ್ಲಿ ತೊಡಗಿದವರಲ್ಲಿ ತೃಪ್ತಿಯ ಭಾವನೆಯೂ ಇರುವುದಿಲ್ಲ. ಇಂಥ ಪ್ರಯತ್ನಗಳು ನಿರೀಕ್ಷಿತ ಫಲಿತಾಂಶದಲ್ಲಿ ಆಂಶಿಕ ಸಾಧನೆಯಲ್ಲಿ ಮಾತ್ರ ಯಶಸ್ವಿಯಾಗುತ್ತವೆ. ಪೂರ್ಣಫಲ ಸಾಧ್ಯವಾಗಿಲ್ಲ.

**ಆಧುನಿಕ – ಪುರಾತನ**

ಆದರೆ ಕೆಲವೊಂದು ನಿರ್ದಿಷ್ಟ ದಿಕ್ಕುದಿಸೆಗಳನ್ನು, ಗೊತ್ತುಗುರಿಗಳ ಬಗ್ಗೆ ಸಲಹೆ ನೀಡಬಲ್ಲ ಎರಡು ಬಗೆಯ ವಿಶಿಷ್ಟ ಜನರು ನಮ್ಮಲ್ಲಿದ್ದಾರೆ. ನಾವು ಸ್ವಾತಂತ್ರ್ಯ ಕಳೆದುಕೊಂಡಾಗ ಯಾವ ಸ್ಥಿತಿಯಲ್ಲಿದ್ದೆವೊ ಆ ಪೂರ್ವಸ್ಥಿತಿಗೆ ಮರಳಬೇಕೆಂದೂ ಆ ಹಂತದಿಂದಲೇ ಮತ್ತೆ ಎಲ್ಲ ಪ್ರಾರಂಭವಾಗಬೇಕೆಂದು ಕೆಲವರ ಸಲಹೆ. ಭಾರತದಲ್ಲಿ ಜನ್ಮವೆತ್ತಿದ್ದೆಲ್ಲವನ್ನೂ ತ್ಯಜಿಸಬೇಕೆಂಬುದು ಇನ್ನು ಕೆಲವರ ಸಲಹೆ. ಈ ಬಗ್ಗೆ ಮರು ಆಲೋಚನೆಗೆ ಇವರು ಸಿದ್ಧರಿಲ್ಲ. ಪ್ರಗತಿಯ ನಿಟ್ಟಿನಲ್ಲಿ ಪಾಶ್ಚಾತ್ಯ ಜೀವನ ಶೈಲಿ ಮತ್ತು ಪಾಶ್ಚಾತ್ಯ ಚಿಂತನೆಗಳೇ ಆಖೈರಾದವು, ಪ್ರಗತಿ ಸಾಧಿಸಬೇಕಾದರೆ ನಾವು ಅವೆಲ್ಲವನ್ನೂ ಆಮದು ಮಾಡಿಕೊಳ್ಳಬೇಕು ಎಂಬುದು ಇವರ ನಿಲುವು. ಆದರೆ ಈ ಯೋಚನೆಯ ಧಾಟಿ ಸರಿಯಿಲ್ಲ. ಆದರೆ ಇವರ ಆಲೋಚನೆಯಲ್ಲಿ ಆಂಶಿಕ

ಸತ್ಯವಿದೆ. ಆದ್ದರಿಂದ ಅವುಗಳನ್ನು ಸಂಪೂರ್ಣವಾಗಿ ನಿರಾಕರಿಸುವುದೂ ಸರಿಯಲ್ಲ.

ಸಾವಿರ ವರ್ಷಗಳ ಹಿಂದೆ ನಾವು ಎಲ್ಲಿದ್ದೆವೋ ಅಲ್ಲಿಂದಲೇ ಎಲ್ಲವನ್ನು ಪುನರಾರಂಭಿಸಬೇಕೆಂಬ ಸಲಹೆ. ಇದರ ಇಷ್ಟಾನಿಷ್ಟಗಳೇನೇ ಇರಲಿ ನಿಶ್ಚಿಯವಾಗಿಯೂ ಇದು ಅಸಾಧ್ಯ. ಕಾಲಪ್ರವಾಹವನ್ನು ಹಿಮ್ಮುಖಗೊಳಿಸಲಾಗದು. ಕಳೆದ ಒಂದು ಸಾವಿರ ವರ್ಷಗಳಲ್ಲಿ ನಾವು ಏನೆಲ್ಲವನ್ನೂ ಪಡೆದುಕೊಂಡಿದ್ದೇವೋ, ಏನೆಲ್ಲವನ್ನೂ ಮೈಗೂಡಿಸಿಕೊಂಡಿದ್ದೇವೆಯೋ ಅವುಗಳನ್ನು ಈಗ ವರ್ಜಿಸಲಾಗದು. ನಾವು ಮನಸ್ವಿ ಒಪ್ಪಿ ಪಡೆದುಕೊಂಡೆವೋ ಅಥವಾ ಅವುಗಳನ್ನು ನಮ್ಮ ಮೇಲೆ ಹೇರಲಾಯಿತೋ – ಈ ಮಾತು ಏನೇ ಇರಲಿ ಈಗ ವಿರೋಧ, ಅಪಸ್ವರಗಳನ್ನೆತ್ತಲಾಗದು. ಅಲ್ಲದೆ ನಮ್ಮ ಸಾಮಾಜಿಕ ಜೀವನದಲ್ಲೂ ನಮ್ಮ ಸ್ವಂತ ಸೃಷ್ಟಿಗಳಿವೆ. ನಾವು ಯಾವಾಗಲೂ ನಿಷ್ಕ್ರಿಯರಾಗಿ ಕೈಕಟ್ಟಿ ಕುಳಿತಿರಲಿಲ್ಲ. ಹೊಸ ಸವಾಲುಗಳು ಎದುರಾದಾಗ ಅಂಥ ಸನ್ನಿವೇಶಗಳು ಉದ್ಭವಿಸಿದಾಗ ನಾವು ಮೂಕ ಸಾಕ್ಷಿಗಳಾಗಿ ಕುಳಿತಿರಲಿಲ್ಲ ಅಥವಾ ಅನ್ಯ ಕ್ರಿಯೆಗಳಿಗೆ ನಾವು ಸುಮ್ಮನೆ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ನಮ್ಮ ಸ್ಪಂದನಗಳು ಕೇವಲ ಸ್ಪಂದನಗಳಾಗಿರಲಿಲ್ಲ. ಹೊಸ ಪರಿಸ್ಥಿತಿಯನ್ನು, ಹೊಸ ಸನ್ನಿವೇಶವನ್ನು ಎದುರಿಸಲು ಅನುಗುಣವಾಗುವಂತೆ ನಾವು ನಮ್ಮ ಬದುಕನ್ನು ಪುನರ್ ರೂಪಿಸಿಕೊಳ್ಳುವ ಪ್ರಯತ್ನ ಮಾಡಿದ್ದೇವೆ. ಆದ್ದರಿಂದ, ಕಳೆದ ಒಂದು ಸಾವಿರ ವರ್ಷಗಳಲ್ಲಿ ಸಂಭವಿಸಿರುವುದಕ್ಕೆ ನಾವು ಕಣ್ಣು ಮುಚ್ಚಲಾಗದು.

ಅಂತೆಯೇ, ನಮ್ಮೆಲ್ಲ ಪ್ರಗತಿಗೆ ಪಾಶ್ಚಿಮಾತ್ಯ ಸಿದ್ಧಾಂತಗಳೇ ಅಡಿಪಾಯ ಎಂದು ಹೇಳುವವರು ಈ ಸಿದ್ಧಾಂತಗಳು ಕೆಲವೊಂದು ವಿಶೇಷ ಸಂದರ್ಭ – ಪರಿಸ್ಥಿತಿಗಳಲ್ಲಿ ಕೆಲವೊಂದು ಕಾಲಘಟ್ಟದಲ್ಲಿ ಹುಟ್ಟಿದವು ಎಂಬುದನ್ನು ಮರೆತುಬಿಡುತ್ತಾರೆ. ಇವು ಸರ್ವಾನ್ವಯವಾಗುವ ಅಗತ್ಯವೇನಿಲ್ಲ. ಈ ಸಿದ್ಧಾಂತಗಳು ತಮಗೆ ಜನ್ಮಕೊಟ್ಟ ಜನ ಮತ್ತು ಅವರ ಸಂಸ್ಕೃತಿಯ ಇತಿಮಿತಿಗಳಿಂದ ಮುಕ್ತವಾಗಿರಲು ಸಾಧ್ಯವಿಲ್ಲ. ಜೊತೆಗೆ ಇವುಗಳಲ್ಲಿ ಬಹುತೇಕ ಹಳತಾದವು. ಕಾಲ ಮೀರಿದವು. ಮಾರ್ಕ್ಸ್‌ನ ತತ್ವಸಿದ್ಧಾಂತಗಳು ಬದಲಾಗುತ್ತಿರುವ ಕಾಲದೊಂದಿಗೆ ಬದಲಾಗಿವೆ. ಬದಲಾದ ಪರಿಸ್ಥಿತಿಗನುಗುಣವಾಗಿ ಬದಲಾಗಿವೆ. ನಮ್ಮ ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ಮಾರ್ಕ್ಸ್ ಸಿದ್ಧಾಂತದ ಗಿಳಿಪಾಠ ವೈಜ್ಞಾನಿಕ ಪರಿಹಾರವಾಗದ ಪ್ರತಿಗಾಮಿ ಧೋರಣೆಯಂತೆ ಕಾಣಬಹುದು. ಸತ್ತ ಸಂಪ್ರದಾಯಗಳನ್ನು ವರ್ಜಿಸುವ ಮೂಲಕ ಸಮಾಜ ಸುಧಾರಣೆಯ ಮಾತನ್ನಾಡುವ ಮಂದಿ ಸ್ವತಃ ತಾವೇ ಪುರಾತನವಾದ ವಿದೇಶಿ ಸಂಪ್ರದಾಯಗಳಿಗೆ ಬಲಿಪಶುವಾಗುತ್ತಿರುವುದು ಆಶ್ಚರ್ಯದ ಸಂಗತಿಯೇ ಸರಿ.



**ಕಲಿಯಿರಿ ಆದರೆ ಅಂಧ ಅನುಕರಣೆ ಬೇಡ**

ಪ್ರತಿ ರಾಷ್ಟ್ರಕ್ಕೂ ಅದರದೇ ಆದ ವಿಶಿಷ್ಟ ಚಾರಿತ್ರಿಕ, ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳಿರುತ್ತವೆ ಹಾಗೂ ನಾಯಕರುಗಳು ತಮ್ಮ ರಾಷ್ಟ್ರಗಳ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಕಾಲಕಾಲಕ್ಕೆ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ನಿರ್ಧರಿಸುತ್ತಾರೆ. ಒಂದು ದೇಶದ ನಾಯಕರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ನಿರ್ಧರಿಸುವ ನಿವಾರಣೋಪಾಯಗಳು ಇತರೆ ಎಲ್ಲ ಜನರಿಗೆ ಪರಿಣಾಮಕಾರಿಯಾದೀತು, ಸಾಧುವಾದೀತು ಎಂದು ಹೇಳುವುದು ಕುತರ್ಕವಾಗುತ್ತದೆ. ಇದಕ್ಕೆ ಒಂದೇ ಒಂದು ಸಣ್ಣ ನಿದರ್ಶನ ಸಾಕು. ಜೈವಿಕ ಚಟುವಟಿಕೆಗಳು ಎಲ್ಲ ಮಾನವರಲ್ಲೂ ಒಂದೇ ರೀತಿಯವು. ಆದರೆ ಇಂಗ್ಲೆಂಡಿನಲ್ಲಿ ಕಾಯಿಲೆ ಗುಣಪಡಿಸುವಂಥ ಔಷಧಿ ಭಾರತಕ್ಕೆ ಸಹಾಯಕವಲ್ಲ. ಅಷ್ಟೇ ಪರಿಣಾಮಕಾರಿಯಲ್ಲ ಎಂದು ಸಿದ್ಧವಾಗಬಹುದು. ಕಾಯಿಲೆಗಳು ವಂಶದಾರಭ್ಯವಾಗಿರುತ್ತವೆ, ವಾತಾವರಣ, ಆಹಾರ ಪದ್ಧತಿ ಇತ್ಯಾದಿಗಳಿಂದಲೂ ಕಾಯಿಲೆಗಳು ಬರುತ್ತವೆ. ಕಾಯಿಲೆಯ ಬಾಹ್ಯ ಲಕ್ಷಣಗಳು ಏಕರೀತಿಯದಿರಬಹುದಾದರೂ ಒಂದೇ ಬಗೆಯ ಔಷಧಿ ಎಲ್ಲರ ವ್ಯಾಧಿಗಳನ್ನು ವಾಸಿಮಾಡುತ್ತದೆ ಎಂದು ಹೇಳಲಿಕ್ಕಾಗದು. ಎಲ್ಲಾ ರೋಗಗಳಿಗೂ ಒಂದೇ ಮದ್ದನ್ನು ರಾಮಬಾಣ ಎಂದು ಬಳಸುವವರನ್ನು ಅಳಲೇಕಾಯಿ ಪಂಡಿತರೆಂದೇ ಕರೆಯಬೇಕಾಗುತ್ತದೆ. ಅಂಥವರು ವೈದ್ಯರಲ್ಲ, ಆದ್ದರಿಂದಲೇ ಆಯುರ್ವೇದ ಹೇಳುತ್ತದೆ. “ಕಾಯಿಲೆಗೆ ಆಯಾ ಪ್ರದೇಶದಲ್ಲೇ ಆಯಾ ಪ್ರದೇಶಕ್ಕೆ ಸೂಕ್ತವಾಗುವಂತೆ ಚಿಕಿತ್ಸೆ ಮಾಡಬೇಕು” (ಯಾದ್ದೇಶಸ್ಯ ಜಂತುಹ್ಯೈ ತದ್ದೇಶಸ್ಯೌಷಧಂ)

ಆದ್ದರಿಂದ ನಮ್ಮ ದೇಶದಲ್ಲಿ ವಿದೇಶಿ ಸಿದ್ಧಾಂತಗಳನ್ನು ಅವು ಇದ್ದಂತೆಯೇ ಅಳವಡಿಸಿಕೊಳ್ಳುವುದು ಸಾಧ್ಯವಿಲ್ಲ. ಅದು ವಿವೇಕವೂ ಅಲ್ಲ, ಅದ್ದರಿಂದ ನಮ್ಮ ದೇಶದಲ್ಲಿ ಸುಖಸಂತೋಷ ಅಭಿವೃದ್ಧಿಗಳನ್ನು ಸಾಧಿಸಲಾಗದು.

ಬೇರೆಡೆಗಳಲ್ಲಿ ಹುಟ್ಟಿದ ಎಲ್ಲ ಚಿಂತನೆಗಳು, ದರ್ಶನಗಳು ಮತ್ತು ತತ್ತ್ವಗಳು ಆಯಾ ಕಾಲದೇಶಗಳಿಗನುಗುಣವಾಗಿರುತ್ತವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಒಂದು ನಿರ್ದಿಷ್ಟ ಪ್ರದೇಶದಲ್ಲಿ, ಕಾಲಾವಧಿಯಲ್ಲಿ ಹಾಗೂ ಸಾಮಾಜಿಕ ವಾತಾವರಣದಲ್ಲಿನ ಮಾನವ ಜೀವಿಗಳ ಪ್ರತಿಕ್ರಿಯೆ, ಸ್ಪಂದನಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆಬೇರೆ ಕಾಲಘಟ್ಟಗಳಲ್ಲಿನ ಜನರೊಂದಿಗೆ ಸಂವಾದಿಯಾಗಿರಬಹುದು, ಸಂಬಂಧ ಹೊಂದಿರಬಹುದು. ಬೇರೆ ಜನರಿಗೆ ತಿಳಿದಿರಲಿಕ್ಕೆ ಸಾಕು. ಆದ್ದರಿಂದಲೇ ಉಳಿದ ಸಮಾಜಗಳಲ್ಲಿನ ಗತಕಾಲದ ಅಥವಾ ವರ್ತಮಾನ ಕಾಲದ ಪ್ರಗತಿಯನ್ನು, ಬೆಳವಣಿಗೆಗಳನ್ನು ಅಲಕ್ಷಿಸುವುದು ಬುದ್ಧಿವಂತಿಕೆಯ ಲಕ್ಷಣವಲ್ಲ. ಈ ಪ್ರಗತಿಗಳಲ್ಲಿನ, ಈ ಬೆಳವಣಿಗೆಗಳಲ್ಲಿನ ಸತ್ಯವನ್ನು

ಗಮನಿಸಬೇಕು ಹಾಗೂ ಒಪ್ಪಿಕೊಳ್ಳಬೇಕು. ಉಳಿದವುಗಳನ್ನು ಎಚ್ಚರಿಕೆಯಿಂದ ದೂರವಿಡಬೇಕು. ಬೇರೆ ಸಮಾಜಗಳ ವಿವೇಕವನ್ನು ಗ್ರಹಿಸುವಾಗ ಅವರ ತಪ್ಪುಗಳನ್ನು, ವಿಕಾರಗಳನ್ನು ತಿರಸ್ಕರಿಸುವುದು ಸೂಕ್ತ. ಅವರ ವಿವೇಕವನ್ನು ಸಹ ಒಂದು ನಿರ್ದಿಷ್ಟ ಸನ್ನಿವೇಶ, ಸಂದರ್ಭ, ಪರಿಸ್ಥಿತಿಯಲ್ಲಿ ಮಾತ್ರ ಅಳವಡಿಸಿಕೊಳ್ಳಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ, ಶಾಶ್ವತ ತತ್ತ್ವಗಳು ಮತ್ತು ಸತ್ಯಕ್ಕೆ ಸಂಬಂಧಿಸಿದಂತೆ ಮಾನವ ಕುಲದ ಜ್ಞಾನ ಮತ್ತು ಫಲಗಳನ್ನು ಮಾತ್ರ ನಾವು ಅಂಗೀಕರಿಸಬೇಕು. ಇವುಗಳ ಪೈಕಿ ನಮ್ಮ ಮಧ್ಯೆ ಹುಟ್ಟಿದವುಗಳನ್ನು ಸ್ಪಷ್ಟೀಕರಿಸಬೇಕು ಹಾಗೂ ಬದಲಾದ ಕಾಲಘಟ್ಟಗಳಲ್ಲಿ ಅಳವಡಿಸಿಕೊಳ್ಳಬೇಕು. ಬೇರೆ ಸಮಾಜಗಳಿಂದ ಪಡೆದುಕೊಂಡವುಗಳನ್ನು ನಮ್ಮ ಪರಿಸ್ಥಿತಿಗೆ ಹೊಂದಿಸಿಕೊಳ್ಳಬೇಕು.

**ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದ**

ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದ ಅಥವಾ ಸಮಾನತೆಗಳನ್ನು ಪಾಶ್ಚಾತ್ಯ ರಾಜಕೀಯ ಚಿಂತನೆ ಆದರ್ಶಗಳೆಂದು ಒಪ್ಪಿಕೊಂಡಿದೆ. ಇದರ ಜೊತೆಗೆ ಆಗಿಂದಾಗ್ಗ್ಯೆ ವಿಶ್ವ ಏಕತೆಯ ಪ್ರಯತ್ನಗಳೂ ನಡೆದವು. ಇಂಥ ಪ್ರಯತ್ನಗಳಿಂದಾಗಿ ಲೀಗ್ ಆಫ್ ನೇಷನ್ಸ್ ಹುಟ್ಟಿಕೊಂಡಿತು. ಎರಡನೇ ವಿಶ್ವಸಮರದ ನಂತರ ಇದು ವಿಶ್ವಸಂಸ್ಥೆಯಾಯಿತು. ಹಲವಾರು ಕಾರಣಗಳಿಂದಾಗಿ ಇವು ಯಶಸ್ವಿಯಾಗಿಲ್ಲ. ಆದರೆ ನಿಶ್ಚಿತವಾಗಿಯೂ ಇವು ಆ ನಿಟ್ಟಿನ ಪ್ರಯತ್ನಗಳಾಗಿವೆ. ಈ ಎಲ್ಲ ಆದರ್ಶಗಳೂ ಕಾರ್ಯತಃ ಅಪರಿಪೂರ್ಣವಾಗಿವೆ ಹಾಗೂ ಪರಸ್ಪರ ವಿರೋಧಿಯಾಗಿವೆ.

ರಾಷ್ಟ್ರೀಯತೆ, ರಾಷ್ಟ್ರ–ರಾಷ್ಟ್ರಗಳ ನಡುವೆ ಘರ್ಷಣೆಗೆಡೆ ಮಾಡಿಕೊಟ್ಟಿತು. ಇದರಿಂದ ಪ್ರಾಪಂಚಿಕ ಸಂಘರ್ಷ ಶುರುವಾಯಿತು. ಯಥಾಸ್ಥಿತಿಯನ್ನೇ ವಿಶ್ವಶಾಂತಿ ಎಂದು ಸಮಾನಾರ್ಥದಲ್ಲಿ ಕಾಣುವುದಾದಲ್ಲಿ ಅನೇಕ ಸಣ್ಣಪುಟ್ಟ ರಾಷ್ಟ್ರಗಳ ಸ್ವಾತಂತ್ರ್ಯದ ಬಯಕೆ ಈಡೇರುವುದೇ ಇಲ್ಲ. ವಿಶ್ವ ಏಕತೆ ಮತ್ತು ರಾಷ್ಟ್ರೀಯತೆ ಮಧ್ಯೆ ಪರಸ್ಪರ ತಿಕ್ಕಾಟ ಇದ್ದದ್ದೇ ಆಗಿದೆ. ವಿಶ್ವ ಏಕತೆಗಾಗಿ ರಾಷ್ಟ್ರೀಯತೆಯನ್ನು ನಿಗ್ರಹಿಸಬೇಕೆಂದು ಕೆಲವರು ಪ್ರತಿಪಾದಿಸುತ್ತಾರೆ. ಇನ್ನು ಕೆಲವರ ದೃಷ್ಟಿಯಲ್ಲಿ ವಿಶ್ವ ಏಕತೆ ಎನ್ನುವುದು ಒಂದು ಆದರ್ಶ, ಆದರ್ಶದ ಪರಿಕಲ್ಪನೆ. ಇವರು ರಾಷ್ಟ್ರೀಯತೆಗೆ ಹೆಚ್ಚಿನ ಪ್ರಾಮುಖ್ಯ ನೀಡುತ್ತಾರೆ.

ಸಮಾಜವಾದ ಮತ್ತು ಪ್ರಜಾಪ್ರಭುತ್ವದ ನಡುವಣ ಹೊಂದಾಣಿಕೆಯಲ್ಲೂ ಇಂಥದೇ ಸಮಸ್ಯೆಗಳು ಉದ್ಭವಿಸಿದ್ದುಂಟು. ಪ್ರಜಾಪ್ರಭುತ್ವ ವ್ಯಕ್ತಿ ಸ್ವಾತಂತ್ರ್ಯವನ್ನು ದಯಪಾಲಿಸುತ್ತದೆ. ಆದರೆ ಈ ವ್ಯಕ್ತಿ ಸ್ವಾತಂತ್ರ್ಯವನ್ನು ಬಂಡವಾಳಶಾಹಿ ವ್ಯವಸ್ಥೆ ಶೋಷಣೆಗೆ ಮತ್ತು ಏಕಸ್ವಾಮ್ಯತೆಗೆ ಬಳಸಿಕೊಳ್ಳುತ್ತದೆ. ಶೋಷಣೆಗೆ ಇತಿಶ್ರೀ ಹಾಡಲು ಸಮಾಜವಾದವನ್ನು ತರಲಾಯಿತು. ಆದರೆ ಇದು ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಘನತೆಯನ್ನು ಹಾಳುಗೆಡವಿತು.



ಮಾನವಕುಲ ಗೊಂದಲದ ಗೂಡಾಗಿದೆ. ಭವಿಷ್ಯದ ಪ್ರಗತಿಗೆ ಸರಿಯಾದ ಮಾರ್ಗ ಯಾವುದೆಂದು ನಿರ್ಧರಿಸುವಲ್ಲಿ ಮನುಕುಲ ಅಸಮರ್ಥವಾಗಿದೆ. ಪಶ್ಚಿಮ ಇದು, "ಇದೇ ಸರಿಯಾದ ಮಾರ್ಗ, ಬೇರೊಂದಿಲ್ಲ" ಎಂದು ಆತ್ಮವಿಶ್ವಾಸದಿಂದ ಹೇಳುವ ಸ್ಥಿತಿಯಲ್ಲಿಲ್ಲ. ಅದೇ ಕತ್ತಲೆಯಲ್ಲಿ ತಡಕಾಡುತ್ತಿದೆ. ಆದ್ದರಿಂದ ಸುಲಭವಾಗಿ ಪಶ್ಚಿಮದ ಅನುಕರಣೆ, ಒಬ್ಬ ಕುರುಡ ಇನ್ನೊಬ್ಬ ಕುರುಡನ ಹೆಗಲು ಹಿಡಿದು ಸಾಗಿದಂತಾಗುತ್ತದೆ ಅಷ್ಟೇ.

**ಭಾರತೀಯ ಸಂಸ್ಕೃತಿಯ ಪ್ರತಿಪಾದನೆ**

ಈ ಪರಿಸ್ಥಿತಿಯಲ್ಲಿ ಭಾರತೀಯ ಸಂಸ್ಕೃತಿ ನಮ್ಮ ಗಮನವನ್ನು ಸೆಳೆಯುತ್ತದೆ. ವಿಶ್ವಕ್ಕೊಂದು ದಿಕ್ಕು ತೋರಿಸುವುದು ನಮ್ಮ ಸಂಸ್ಕೃತಿಯಿಂದ ಸಾಧ್ಯವಾದೀತೆ? ನಮ್ಮ ರಾಷ್ಟ್ರೀಯ ದೃಷ್ಟಿಕೋನದಿಂದಲೇ ನಮ್ಮ ಸಂಸ್ಕೃತಿಯನ್ನು ನೋಡಬೇಕಾಗುತ್ತದೆ. ಏಕೆಂದರೆ ಇದೇ ನಮ್ಮ ಗುಣಶೀಲ. ಸ್ವಾತಂತ್ರ್ಯಕ್ಕೂ ಸಂಸ್ಕೃತಿಗೂ ನಿಕಟ ಬಾಂಧವ್ಯವಿದೆ. ಸಂಸ್ಕೃತಿ ಸ್ವಾತಂತ್ರ್ಯದ ಅಡಿಪಾಯ ಆಗದೇ ಹೋದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆಸುವ ರಾಜಕೀಯ ಚಳವಳಿ ಸ್ವಾರ್ಥಿಗಳ ಹಾಗೂ ಅಧಿಕಾರಶಾಹಿ ವ್ಯಕ್ತಿಗಳ ಒಂದು ಕೂಟವಾಗಿಬಿಡುತ್ತದೆ. ಸ್ವಾತಂತ್ರ್ಯ ಸಂಸ್ಕೃತಿಯ ಅಭಿವ್ಯಕ್ತಿ ನಮ್ಮ ಪ್ರಗತಿಗೆ ಕೊಡುಗೆ ನೀಡಲಿದೆ. ಹಾಗೂ ಪ್ರಯತ್ನದಿಂದ ಸಂತೋಷಾನುಭವವೂ ಆಗುತ್ತದೆ. ಆದ್ದರಿಂದ ಭಾರತೀಯ ಸಂಸ್ಕೃತಿಯ ತತ್ವಗಳ ಬಗ್ಗೆ ನಾವು ಯೋಚಿಸುವುದು ಅಗತ್ಯ. ಅದರ ಸಹಾಯದಿಂದ ವಿವಿಧ ಪಾಶ್ಚಾತ್ಯ ರಾಜಕೀಯ ಚಿಂತನೆಗಳ ವಿವಿಧ ಕಲ್ಪನೆಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದರಿಂದ ನಮಗೆ ಹೆಚ್ಚಿನ ಲಾಭವಾದೀತು. ಪಾಶ್ಚಾತ್ಯ ತತ್ವಗಳೂ ಮಾನವನ ಚಿಂತನಕ್ರಾಂತಿ ಹಾಗೂ ಸಾಮಾಜಿಕ ಸಂಘರ್ಷದ ಫಲವಾಗಿ ಹುಟ್ಟಿದವು. ಅವು ಒಂದಲ್ಲ ಒಂದು ಬಗೆಯ ಮಾನವ ಕುಲದ ಆಶೋತ್ತರಗಳನ್ನು ಪ್ರತಿನಿಧಿಸುತ್ತವೆ. ಅವುಗಳನ್ನು ಅಲಕ್ಷಿಸುವುದು ಸರಿಯಲ್ಲ.

**ಭಾರತೀಯ ಸಂಸ್ಕೃತಿ ಸಮಗ್ರವಾದದ್ದು**

ಬದುಕನ್ನು ಸಮಗ್ರವಾಗಿ ಕಾಣುವ ಅದರ ದೃಷ್ಟಿಕೋನವೇ ಭಾರತೀಯ ಸಂಸ್ಕೃತಿಯ ವಿಶೇಷ ಗುಣಲಕ್ಷಣ. ಅದು ಅಖಂಡತೆಯ ದೃಷ್ಟಿಕೋನ. ಬಿಡಿಬಿಡಿಯಾಗಿ ನೋಡುವುದು ತಜ್ಞರ ದೃಷ್ಟಿಯಿಂದ ಸರಿಯಾದೀತೇನೋ. ಆದರೆ ವಾಸ್ತವಿಕ ದೃಷ್ಟಿಕೋನದಿಂದ ಅದು ಸರಿಯಾಗದು. ಬದುಕನ್ನು ಬಿಡಿಬಿಡಿಯಾಗಿ, ಅದರ ಭಾಗ–ವಿಭಾಗಗಳಲ್ಲಿ ನೋಡುವುದೇ ಪಶ್ಚಿಮದ ಎಲ್ಲ ಗೊಂದಲಗಳು ಮೂಲ. ಬಿಡಿಬಿಡಿಯಾಗಿ ವಿಭಾಗಿಸಿ ನೋಡಿ ನಂತರ ಅವುಗಳನ್ನೆಲ್ಲ ತೇಪೆಹಾಕಿ ಒಟ್ಟುಗೂಡಿಸುವ ಧೋರಣೆಯೇ ಪಾಶ್ಚಾತ್ಯ ದೃಷ್ಟಿಕೋನದಲ್ಲಿರುವ ಗೊಂದಲಗಳಿಗೆ ಕಾರಣ. ಬದುಕಿನಲ್ಲಿ ವೈವಿಧ್ಯತೆ ಇದೆ. ಬಹುತ್ವ ಇದೆ ಎಂಬುದನ್ನು ನಾವೂ

ಒಪ್ಪಿಕೊಳ್ಳುತ್ತೇವೆ. ಆದರೆ ಆದರ ಹಿಂದಿನ ಏಕತೆ ನಮ್ಮ ಸತತ ಅನ್ವೇಷಣೆಯಾಗಿದೆ. ಇಂಥ ಪ್ರಯತ್ನ ಸಂಪೂರ್ಣವಾಗಿ ವೈಜ್ಞಾನಿಕವಾದದ್ದು. ಅವ್ಯವಸ್ಥೆಯ ಗೂಡಾದ ಪ್ರಪಂಚದಲ್ಲಿ ಸುವ್ಯವಸ್ಥೆ ಕಂಡುಹಿಡಿಯಲು ವಿಜ್ಞಾನಿಗಳು ಸದಾ ಪ್ರಯತ್ನಿಸುತ್ತಿರುತ್ತಾರೆ. ಪ್ರಪಂಚವನ್ನು ನಡೆಸುತ್ತಿರುವ, ಆಳುತ್ತಿರುವ ತತ್ವಗಳನ್ನು ಕಂಡುಹಿಡಿದು ಅವುಗಳ ಆಧಾರದ ಮೇಲೆ ವ್ಯಾವಹಾರಿಕ ನಿಯಮಗಳನ್ನು ರೂಪಿಸುವುದೇ ವಿಜ್ಞಾನಿಗಳ ಈ ಪ್ರಯತ್ನಗಳ ಹಿಂದಿನ ಉದ್ದೇಶವಾಗಿದೆ. ಕೆಲವು ಮೂಲಧಾತುಗಳಿಂದ ಈ ಭೌತ ಪ್ರಪಂಚ ಕೂಡಿದೆ ಎಂಬುದನ್ನು ರಸಾಯನ ಶಾಸ್ತ್ರಜ್ಞರು ಶೋಧಿಸಿದರು. ಭೌತಶಾಸ್ತ್ರಜ್ಞರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ಧಾತುಗಳೂ ಶಕ್ತಿಯೊಂದಿಗೆ ಸ್ಪಂದಿಸುತ್ತವೆ ಎಂಬುದನ್ನು ತೋರಿಸಿಕೊಟ್ಟರು. ಇಡೀ ಬ್ರಹ್ಮಾಂಡವೇ ಶಕ್ತಿಸ್ವರೂಪದ್ದಾಗಿದೆ ಎಂಬುದನ್ನು ನಾವಿಂದು ಅರಿತಿದ್ದೇವೆ.

ತತ್ವಶಾಸ್ತ್ರಜ್ಞರು, ದಾರ್ಶನಿಕರೂ ಮೂಲದಲ್ಲಿ ವಿಜ್ಞಾನಿಗಳೇ. ಪಾಶ್ಚಾತ್ಯ ದಾರ್ಶನಿಕರು ಉಭಯತ್ವ ಸಿದ್ಧಾಂತದವರೆಗೆ ಮುನ್ನಡೆ ಸಾಧಿಸಿದ್ದರು. ಹೆಗಲ್, ಪ್ರಮೇಯ, ಪ್ರತಿಪ್ರಮೇಯ ಮತ್ತು ಸಮನ್ವಯ ಸಿದ್ಧಾಂತಗಳನ್ನು ಮಂಡಿಸಿದ. ಕಾರ್ಲ್ ಮಾರ್ಕ್ಸ್ ಈ ಸಿದ್ಧಾಂತವನ್ನು ಆಧಾರವಾಗಿಟ್ಟುಕೊಂಡು ಚರಿತ್ರೆ ಮತ್ತು ಅರ್ಥ ವ್ಯವಸ್ಥೆಯ ವಿಶ್ಲೇಷಣೆ ನಡೆಸಿದ 'ಉಳಿಯುವ ಸಾಮರ್ಥ್ಯ ಉಳ್ಳವರೇ ಉಳಿಯುತ್ತಾರೆ' ಎಂಬ ತತ್ತ್ವವೇ ಬದುಕಿನ ಮೂಲಾಧಾರವೆಂದು ಡಾರ್ವಿನ್ ಹೇಳಿದ. ಆದರೆ ಈ ದೇಶದ ನಾವು ಎಲ್ಲ ಜೀವಿಗಳಲ್ಲಿನ ಮೂಲಭೂತ ಅಖಂಡತೆಯನ್ನು ಗ್ರಹಿಸಿದೆವು. ಉಭಯತ್ವ ವಾದಿಗಳೂ ಪ್ರಕೃತಿ ಮತ್ತು ಚೈತನ್ಯ ವಿರುದ್ಧವಾದುವಲ್ಲ, ಪರಸ್ಪರ ಪೂರಕವಾದವುವೆಂದು ನಂಬಿದ್ದರು. ಜೀವನದಲ್ಲಿನ ವೈವಿಧ್ಯತೆ ಏನಿದ್ದರೂ ಅದು ಆಂತರಿಕ ಏಕತೆಯ ಅಭಿವ್ಯಕ್ತಿಯಷ್ಟೆ. ವೈವಿಧ್ಯತೆಯನ್ನು ಮೂಲಾಧಾರವಾಗುಳ್ಳ ದ್ವಂದ್ವತ್ವವಿದೆ. ಬೀಜದಲ್ಲಿನ ಅಖಂಡತೆ ಹಲವು ರೂಪುಗಳಲ್ಲಿ – ಬೇರು, ಟಿಸಿಲು, ಕೊಂಬೆ, ಎಲೆಗಳು, ಹೂವುಗಳು, ಹಣ್ಣುಗಳು – ಹೀಗೆ ಮರದಲ್ಲಿ ವಿವಿಧ ರೂಪುಗಳಲ್ಲಿ ಪ್ರಕಟಗೊಳ್ಳುತ್ತದೆ. ಇವೆಲ್ಲದಕ್ಕೂ ಬೇರೆ ಬೇರೆ ರೂಪಗಳಿವೆ, ಬಣ್ಣಗಳಿವೆ, ಕೆಲಮಟ್ಟಿಗೆ ಬೇರೆಬೇರೆಯಾದ ಗುಣಗಳೂ ಇವೆ. ಆದಾಗ್ಯೂ ನಾವು ಬೀಜದ ಮುಖೇನ ಅವುಗಳ ಅಖಂಡತೆಯ ಸಂಬಂಧವನ್ನು ಮಾನ್ಯ ಮಾಡುತ್ತೇವೆ.

### ಸಂಘರ್ಷ –ಸಾಂಸ್ಕೃತಿಕ ಹಿನ್ನಡೆಯ ಸೂಚನೆ

ವೈವಿಧ್ಯತೆಯಲ್ಲಿ ಏಕತೆ ಹಾಗೂ ವಿವಿಧ ರೂಪಗಳಲ್ಲಿ ಏಕತೆಯ ಪ್ರದರ್ಶನ ಭಾರತೀಯ ಸಂಸ್ಕೃತಿಯ ಚಿಂತನೆಯ ಕೇಂದ್ರಬಿಂದುವಾಗಿದೆ. ಈ ಸತ್ಯವನ್ನು ಹೃತ್ಪೂರ್ವಕವಾಗಿ ಒಪ್ಪಿಕೊಂಡಲ್ಲಿ ವಿವಿಧ ಶಕ್ತಿಗಳ ನಡುವೆ ಯಾವುದೇ ರೀತಿಯ



ಸಂಘರ್ಷ, ತಿಕ್ಕಾಟಗಳು ಇರುವುದಿಲ್ಲ. ಸಂಘರ್ಷ ಸಂಸ್ಕೃತಿಯ ಲಕ್ಷಣವೂ ಅಲ್ಲ, ಸ್ವಭಾವವೂ ಅಲ್ಲ; ಬದಲಾಗಿ ಅದು ವಿಕಾರದ, ವಿಕೃತಿಯ ಲಕ್ಷಣ. ಪಾಶ್ಚಾತ್ಯರು ಇತ್ತೀಚೆಗೆ ಅನ್ವೇಷಿಸಲಾದ ಅರಣ್ಯ ಶಾಸನ "ಉಳಿಯುವ ಸಾಮರ್ಥ್ಯ ಉಳ್ಳವರೇ ಉಳಿಯುತ್ತಾರೆ" – ನಮ್ಮ ದಾರ್ಶನಿಕರಿಗೆ ತಿಳಿದಿತ್ತು. ಆಸೆ, ಕೋಪ ಇತ್ಯಾದಿಗಳು ಮನುಷ್ಯ ಸ್ವಭಾವದಲ್ಲಿನ ಕೀಳು ಪ್ರವೃತ್ತಿಗಳೆಂದು ನಾವು ಗುರುತಿಸಿದ್ದೆವು. ಆದರೆ ನಾವು ಇವುಗಳನ್ನು ನಾಗರಿಕ ಜೀವನದ ಅಥವಾ ಸಂಸ್ಕೃತಿಯ ಆಧಾರವಾಗಿ ಬಳಸಲಿಲ್ಲ. ಸಮಾಜದಲ್ಲಿ ಕಳ್ಳಕಾಕರು, ದರೋಡೆಕೋರರು ಇದ್ದಾರೆ. ಈ ಶಕ್ತಿಗಳಿಂದ ನಮ್ಮನ್ನು ಮತ್ತು ಸಮಾಜವನ್ನು ರಕ್ಷಿಸಿಕೊಳ್ಳಬೇಕಾದ್ದು ಅಗತ್ಯ. ಅವರುಗಳನ್ನು ನಾವು ಮನುಷ್ಯ ನಡವಳಿಕೆಯ ಪ್ರಮಾಣ ಅಥವಾ ಆದರ್ಶವೆಂದು ಪರಿಗಣಿಸಲಾಗದು. "ಉಳಿಯುವ ಸಾಮರ್ಥ್ಯ ಉಳ್ಳವನು ಉಳಿಯುತ್ತಾನೆ" ಎಂಬುದು ಅರಣ್ಯ ಶಾಸನ. ಈ ಶಾಸನದ ಅಸ್ತಿವಾರದ ಮೇಲೆ ನಾಗರಿಕತೆಗಳು ಬೆಳೆದಿಲ್ಲ. ಮನುಷ್ಯ ಜೀವನದಲ್ಲಿ ಇಂಥ ನಿಯಮವನ್ನು ಕನಿಷ್ಠತಮಕ್ಕಿಳಿಸುವುದು, ಇದರ ಪಾಲನೆಯನ್ನು ಕನಿಷ್ಠಗೊಳಿಸುವುದಕ್ಕೆ ಸಾಧ್ಯ ಎನ್ನುವ ಪರ್ಯಾಲೋಚನೆಯ ಆಧಾರದ ಮೇಲೆ ನಾಗರಿಕತೆಗಳು ಬೆಳೆದಿವೆ. ಪ್ರಗತಿ ಸಾಧನೆ ನಮ್ಮ ಆಶಯವಾದಲ್ಲಿ ನಾವು ನಾಗರಿಕತೆಯ ಇತಿಹಾಸವನ್ನು ನಮ್ಮ ಮನಸ್ಸುಗಳ ಮುಂದೆ ಇಟ್ಟುಕೊಳ್ಳಬೇಕಾಗುತ್ತದೆ.

### ಪರಸ್ಪರ ಸಹಕಾರ

ಸಂಘರ್ಷ, ಸ್ಪರ್ಧೆಗಳಿರುವಂತೆ ಈ ಪ್ರಪಂಚದಲ್ಲಿ ಸಹಕಾರವೂ ಹೇರಳವಾಗಿದೆ. ಸಸ್ಯ ಮತ್ತು ಪ್ರಾಣಿಸಂಕುಲಗಳು ಪರಸ್ಪರ ಸಹಕಾರದಿಂದಲೇ ಬದುಕಿವೆ. ನಾವು ಉಸಿರಾಡುವ ಆಮ್ಲಜನಕವನ್ನು ಸಸ್ಯಗಳಿಂದ ಪಡೆಯುತ್ತೇವೆ. ಸಸ್ಯ ಜೀವನದ ಬೆಳವಣಿಗೆಗೆ ಅಗತ್ಯವಾದ ಇಂಗಾಲಾಮ್ಲವನ್ನು ನಾವು ಒದಗಿಸುತ್ತೇವೆ. ಇಂಥ ಪರಸ್ಪರ ಸಹಕಾರ ಪೋಷಣೆಯಿಂದ ಭೂಮಿಯ ಮೇಲೆ ಬದುಕು ಸಾಗಿದೆ.

ವಿವಿಧ ಜೀವಿಗಳಲ್ಲಿನ ಪರಸ್ಪರ ಪೋಷಣೆಯ ಸಂಗತಿಯನ್ನು, ಮುಖ್ಯಲಕ್ಷಣವನ್ನು ಮಾನ್ಯ ಮಾಡುವುದು ಹಾಗೂ ಮಾನವ ಜೀವನದಲ್ಲೂ ಪರಸ್ಪರ ಪಾಲನೆ ಪೋಷಣೆಗೆ ಇದನ್ನು ಆಧಾರವಾಗಿಟ್ಟುಕೊಂಡಿರುವುದೇ ನಾಗರಿಕತೆಯ ಗುಣಲಕ್ಷಣದ ಹೆಗ್ಗುರುತಾಗಿದೆ. ಸಾಮಾಜಿಕ ಗುರಿಗಳನ್ನು, ಧ್ಯೇಯಗಳನ್ನು ಸಾಧಿಸುವ ಸಲುವಾಗಿ ಗುಣ–ಶೀಲ–ಸ್ವಭಾವಗಳನ್ನು ರೂಪಿಸುವುದನ್ನೇ ನಾಗರಿಕತೆ ಎಂದು ಕರೆಯಲಾಗುತ್ತದೆ. ಆದರೆ ಈ ಗುಣಶೀಲ ಸ್ವಭಾವಗಳು ಸಾಮಾಜಿಕ ಸಂಘರ್ಷಕ್ಕೆ ಮಾಡಿಕೊಟ್ಟಲ್ಲಿ ಅದು ವಿಕೃತಿಯಾಗುತ್ತದೆ. ವಿಕಾರವಾಗುತ್ತದೆ. ಸಂಸ್ಕೃತಿ ಪ್ರವೃತ್ತಿಗಳನ್ನು ನಿರಾಕರಿಸುವುದಿಲ್ಲ ಅಥವಾ ಕಡೆಗಾಣಿಸುವುದೂ ಇಲ್ಲ. ಈ ಪ್ರಪಂಚದಲ್ಲಿ ಬದುಕಿನ ಪಾಲನೆ ಪೋಷಣೆಗಳಿಗೆ

ಸಹಾಯಕವಾಗವಂಥ ಪ್ರವೃತ್ತಿಯಲ್ಲಿನ ಗುಣಾಂಶಗಳನ್ನು ಸಂಸ್ಕೃತಿ ವೃದ್ಧಿಗೊಳಿಸುತ್ತದೆ. ಪ್ರವೃತ್ತಿಯಲ್ಲಿನ ಜೀವಪರ ದ್ರವ್ಯಗಳನ್ನು ವೃದ್ಧಿಸುವ ಮೂಲಕ ಬದುಕನ್ನು ಶ್ರೀಮಂತಗೊಳಿಸುತ್ತದೆ. ಪರಿಪೂರ್ಣಗೊಳಿಸುತ್ತದೆ ಹಾಗೂ ಬದುಕಿಗೆ ಮಾರಕವಾದುದನ್ನು, ಬದುಕಿನ ಅಡೆತಡೆಗಳನ್ನು ನಿಗ್ರಹಿಸುತ್ತದೆ. ಒಂದು ಸಣ್ಣ ಉದಾಹರಣೆಯನ್ನು ತೆಗೆದುಕೊಳ್ಳೋಣ. ಅಣ್ಣ–ತಂಗಿ, ತಾಯಿ–ಮಗ, ತಂದೆ–ಮಗ ಇವರ ನಡುವಣ ಸಂಬಂಧ ಪ್ರಕೃತಿ ಸಹಜವಾದದ್ದು. ಇದು ಮನುಷ್ಯರಲ್ಲೂ ಪ್ರಾಣಿಗಳಲ್ಲೂ ಒಂದೇ, ಭಿನ್ನವಲ್ಲ. ಇಬ್ಬರು ಸಹೋದರರೂ ಒಬ್ಬಳೇ ತಾಯಿಯ ಮಕ್ಕಳಾಗಿರುವಂತೆ ಎರಡು ಕರುಗಳೂ ಒಂದೇ ಹಸುವಿನ ಸಂತಾನವಾಗಿರುತ್ತವೆ. ಹೀಗಿರುವಾಗ ವ್ಯತ್ಯಾಸ ಎಲ್ಲಿದೆ? ಪ್ರಾಣಿಗಳು ಈ ಸಹಜ ಸಂಬಂಧವನ್ನು ಮರೆತು ಬಿಡುತ್ತವೆ. ಈ ಸಂಬಂಧಗಳ ಆಧಾರದ ಮೇಲೆ ನಾಗರಿಕತೆಯ ಪ್ರಜ್ಞೆ, ನೀತಿಗಳನ್ನು ರೂಪಿಸುವುದು ಪ್ರಾಣಿಗಳಿಂದ ಸಾಧ್ಯವಿಲ್ಲ. ಆದರೆ ಮನುಷ್ಯ ಬದುಕಿನಲ್ಲಿ ಸಾಮರಸ್ಯದಿಂದ ಕೂಡಿದ ವ್ಯವಸ್ಥೆಯನ್ನು ನಿರ್ಮಿಸಲು ಈ ಪ್ರಕೃತಿ ಸಹಜ ಸಂಬಂಧಗಳನ್ನು ಅಡಿಪಾಯವಾಗಿ ಬಳಸಿಕೊಳ್ಳುತ್ತಾನೆ. ಈ ಮೂಲ ಸಂಬಂಧಗಳಿಂದ ಹುಟ್ಟುವ ಇತರ ಸಂಬಂಧಗಳನ್ನು ಸ್ಥಾಪಿಸುತ್ತಾನೆ. ಈ ಪ್ರಕ್ರಿಯೆಯಲ್ಲಿ ಇಡೀ ಸಮಾಜವನ್ನು ಸಹಕಾರದ ಒಂದು ಘಟಕವನ್ನಾಗಿ ಹೆಣೆದಿರುತ್ತಾನೆ. ಈ ರೀತಿ ಹಲವಾರು ಸಂಪ್ರದಾಯಗಳನ್ನು, ಮೌಲ್ಯಗಳನ್ನು ರೂಪಿಸಲಾಗುತ್ತದೆ. ಈ ಪ್ರಕಾರವಾಗಿಯೇ ಒಳಿತು–ಕೆಡಕುಗಳ ಪ್ರಮಾಣಗಳನ್ನು, ಮಾನದಂಡಗಳನ್ನು ನಿರ್ಧರಿಸಲಾಗುತ್ತದೆ. ಸೋದರರ ಮಧ್ಯೆ ಪ್ರೀತಿವಾತ್ಸಲ್ಯ ಮತ್ತು ಹಗೆತನ ಇವರೆಡೂ ಇರುವುದನ್ನು ನಾವು ಸಮಾಜದಲ್ಲಿ ಕಾಣುತ್ತಿದ್ದೇವೆ. ಆದರೆ ಪ್ರೀತಿ ವಾತ್ಸಲ್ಯವನ್ನು ನಾವು ಒಳ್ಳೆಯದೆಂದು ಪರಿಗಣಿಸುತ್ತೇವೆ ಹಾಗೂ ವಾತ್ಸಲ್ಯಪೂರ್ಣವಾದ ಭ್ರಾತೃತ್ವ ಸಂಬಂಧಗಳನ್ನು ವೃದ್ಧಿಸಲು ಪ್ರಯತ್ನಿಸುತ್ತೇವೆ. ಕೆಟ್ಟಗುಣವನ್ನು ನಾವು ಸಮ್ಮತಿಸುವುದಿಲ್ಲ. ಹಗೆತನವನ್ನು ಪ್ರೋತ್ಸಾಹಿಸುವುದಿಲ್ಲ. ಸಂಘರ್ಷ ಮತ್ತು ಹಗೆತನಗಳನ್ನು ಮಾನವ ಸಂಬಂಧಗಳ ಅಸ್ತಿವಾರವಾಗಿ ಪರಿಗಣಿಸಿದಲ್ಲಿ, ಇಂಥ ಪರಿಗಣನೆಯ ಆಧಾರದ ಮೇಲೆ ಇತಿಹಾಸವನ್ನು ವಿಶ್ಲೇಷಿಸುವುದಾದಲ್ಲಿ ವಿಶ್ವಶಾಂತಿ ಎನ್ನುವುದು ಕನಸಿನ ಗಂಟೇ ಆಗಿ ಉಳಿಯುತ್ತದೆ. ಇಂಥ ಕ್ರಿಯೆ–ಪ್ರಕ್ರಿಯೆಗಳ ಮೂಲಕ ವಿಶ್ವಶಾಂತಿಗೆ ಪ್ರಯತ್ನಿಸುವುದು ಒಂದು ನಿರರ್ಥಕ ಕಸರತ್ತೇ ಸರಿ.

## ಪ್ರಕೃತಿಯಿಂದ ಸಂಸ್ಕೃತಿಗೆ

ತಾಯಿಯಾದವಳು ಮಕ್ಕಳನ್ನು ಲಾಲನೆ–ಪಾಲನೆ–ಪೋಷಣೆಗಳಿಂದ ಬೆಳೆಸುತ್ತಾಳೆ. ತಾಯಿಯ ಮಮತೆ, ಪ್ರೀತಿವಾತ್ಸಲ್ಯಗಳಿಗಿಂತ ಶ್ರೇಷ್ಠವಾದದ್ದು ಮತ್ತೊಂದಿರಲಾರದು. ಈ ಒಂದು ಮಾತೃವಾತ್ಸಲ್ಯದ ಆಧಾರದ ಮೇಲೆ ನಾವು



ಮನುಕುಲದ ಬದುಕನ್ನು ಕಟ್ಟುಪಾಡುಗಳಿಗೊಳಪಡಿಸುವಂಥ ನಿಯಮಗಳನ್ನು ರೂಪಿಸಬಹುದು. ಕೆಲವೊಮ್ಮೆ ತಾಯಿ ತನ್ನ ಮಗುವಿನ ಬಗ್ಗೆ ಕ್ರೂರವಾಗಿ ನಡೆದುಕೊಂಡ, ಸ್ವಾರ್ಥದಿಂದ ನಡೆದುಕೊಂಡ ನಿದರ್ಶನಗಳು ಗೋಚರಿಸುತ್ತವೆ. ಪ್ರಾಣಿವರ್ಗದಲ್ಲಿ ಕೆಲವೊಂದು ತಾಯಿ ಮೃಗಗಳು ಹಸಿವು ನೀಗಿಸಿಕೊಳ್ಳಲು ತಮ್ಮ ಸಂತಾನವನ್ನೇ ತಿಂದುಬಿಡುತ್ತವೆ. ಕಪಿಗಳ ಸಂಕುಲದಲ್ಲಿ ತಾಯಿಯಾದ ಕಪಿ ಸತ್ತ ಶಿಶುಕಪಿಯನ್ನು ತನ್ನೊಡನೇ ಒಯ್ಯುತ್ತದೆ. ಜೀವಿಗಳಲ್ಲಿ ನಾವು ಈ ಎರಡೂ ಬಗೆಯ ವರ್ತನೆಗಳನ್ನು ಕಾಣುತ್ತೇವೆ. ಪ್ರಕೃತಿಯ ಈ ಎರಡು ತತ್ವಗಳಲ್ಲಿ ಯಾವುದು ನಾಗರಿಕ ಜೀವನಕ್ಕೆ ಆಧಾರವಾದೀತು? ಜೀವನ ಪೋಷಣೆಗೆ ಸಹಾಯಕವಾಗುವಂಥಾದ್ದನ್ನು ಮಾತ್ರ ಆರಿಸಿಕೊಳ್ಳಬೇಕೆಂಬುದು ನಮ್ಮ ಅನಿವಾರ್ಯ ತೀರ್ಮಾನವಾಗುತ್ತದೆ. ಜೀವವಿರೋಧಿಯಾದದ್ದು ನಾಗರಿಕ ಜೀವನಕ್ಕೆ ಆಧಾರವಾಗುವುದು ಸಾಧ್ಯವಿಲ್ಲ. ಕೋಪ ಮತ್ತು ದುರಾಸೆ, ಪ್ರೀತಿ ಮತ್ತು ತ್ಯಾಗ ಎರಡು ಪ್ರವೃತ್ತಿಗಳನ್ನು ನಾವು ಮಾನವ ಜೀವನದಲ್ಲಿ ಕಾಣುತ್ತೇವೆ. ಇವೆಲ್ಲ ನಮ್ಮ ಪ್ರಕೃತಿಯಲ್ಲಿರುವಂಥಾದ್ದೇ. ಕೋಪ, ದುರಾಸೆ, ಲೋಭ ಇತ್ಯಾದಿಗಳು ಮನುಷ್ಯ – ಪ್ರಾಣಿಗಳೆರಡಕ್ಕೂ ಸಹಜವಾದದ್ದೇ. ಆದರೆ ಇದನ್ನೇ ಸಮಜಾಯಿಷಿಯಾಗಿ ಮುಂದಿಟ್ಟುಕೊಂಡು, ಕೋಪವನ್ನೇ ನಮ್ಮ ಬದುಕಿನ ಬಂಡವಾಳ ಮಾಡಿಕೊಂಡು ನಾವು ಕಾಯಕದಲ್ಲಿ ತೊಡಗಲಾದೀತೆ? ಹಾಗಾದಲ್ಲಿ ಬದುಕಿನಲ್ಲಿ ಸಾಮರಸ್ಯ ಇಲ್ಲವಾಗುತ್ತದೆ ಎಂದೇ "ಕೋಪಕ್ಕೆ ಅಡಿಯಾಳಾಗಬೇಡಿ" ಎಂದು ಬುದ್ಧಿಮಾತು ಹೇಳಲಾಗುತ್ತದೆ. ಕೋಪ ಬಂದಾಗಲೂ ಬುದ್ಧಿ ಅದನ್ನು ನಿಯಂತ್ರಿಸಬಲ್ಲದು ಎಂದೇ ಕೋಪದ ಕೈಗೆ ಬುದ್ಧಿಯನ್ನು ಕೊಡದೆ ಬುದ್ಧಿವಂತರಾಗಿ ಕೋಪವನ್ನು ಹತೋಟಿಯಲ್ಲಿಡಬೇಕು. ಹೀಗೆ ನಿಗ್ರಹ, ನಿಯಂತ್ರಣಗಳು ನಮ್ಮ ಬದುಕಿನ ಗುಣಪ್ರಮಾಣ ಮಾನದಂಡಗಳಾಗುತ್ತವೆ ಕೋಪವಲ್ಲ.

ಇಂಥ ನಿಯಮಗಳೇ ನೀತಿಶಾಸ್ತ್ರ ತತ್ತ್ವಗಳೆಂದು ಸರ್ವವಿದಿತವಾಗಿವೆ. ಈ ತತ್ತ್ವಗಳನ್ನು ಯಾರೊಬ್ಬರೂ ರಚಿಸಿಲ್ಲ. ಇವು ಆವಿಷ್ಕಾರಗೊಂಡವು ಅನ್ವೇಷಣೆಗೊಂಡವು. ಇದಕ್ಕೆ ಸೂಕ್ತವಾದ ಹೋಲಿಕೆಯೆಂದರೆ ಗುರುತ್ವಾಕರ್ಷಣೆಯ ನಿಯಮಗಳು. ನಾವು ಮೇಲಕ್ಕೆ ಕಲ್ಲನ್ನೆಸೆದರೆ ಅದು ನೆಲಕ್ಕೆ ಬೀಳುತ್ತದೆ. ಈ ಗುರುತ್ವಾಕರ್ಷಣ ನಿಯಮ ನ್ಯೂಟನ್ ರೂಪಿಸಿದ್ದಲ್ಲ. ಅದನ್ನು ಆತ ಅನ್ವೇಷಿಸಿದ. ಮರದ ಕೊಂಬೆಯಿಂದ ಸೇಬಿನ ಹಣ್ಣು ನೆಲಕ್ಕೆ ಬೀಳುವುದನ್ನು ಕಂಡಾಗ ಅವನಿಗೆ ಅಂಥದೊಂದು ನಿಯಮವಿರಬೇಕೆಂದು ಹೊಳೆಯಿತು. ಹೀಗೆ ಅವನು ಈ ನಿಯಮವನ್ನು ಅನ್ವೇಷಿಸಿದ; ಅವನೇ ಸ್ವಂತ ಅದನ್ನು ರಚಿಸಲಿಲ್ಲ. ಇದೇ ರೀತಿ ಮಾನವ ಸಂಬಂಧದ ಕೆಲವೊಂದು ನಿಯಮಗಳಿವೆ. ಉದಾಹರಣೆಗೆ ಯಾರಿಗಾದರೂ ಕೋಪ ಬಂದರೆ ಅವರು ಅದನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಬೇಕು. ಇಂಥ

ಕ್ರಮದಿಂದ ಸರ್ವರಿಗೂ ಹಿತ. ಈ ತತ್ವಗಳನ್ನು ಹೀಗೆ ಅನ್ವೇಷಿಸಲಾಯಿತು.

"ಒಬ್ಬರಿಗೊಬ್ಬರು ಸುಳ್ಳು ಹೇಳಬೇಡಿ. ನಿಮಗೆ ನಿಜವೆಂದು ತಿಳಿದಿದ್ದನ್ನು ಹೇಳಿ" ಇದೊಂದು ನಿಯಮ, ತತ್ವ, ಬದುಕಿನ ಪ್ರತಿ ಹೆಜ್ಜೆಯನ್ನು ಅದರ ಉಪಯುಕ್ತತೆ ನಮಗೆ ಕಾಣಸಿಗುತ್ತದೆ. ಅದರ ಪ್ರಯೋಜನವಾಗುತ್ತದೆ. ನಾವು ನಿಜ ಹೇಳುವವರನ್ನು, ಸತ್ಯವಂತರನ್ನು ಮೆಚ್ಚಿಕೊಳ್ಳುತ್ತೇವೆ. ಸುಳ್ಳು ಹೇಳಿದರೆ ನಮಗೇ ಮುಜುಗರವಾಗುತ್ತದೆ. ಆಗ ಜೀವನ ದುಸ್ತರವಾಗುತ್ತದೆ. ಗೊಂದಲವುಂಟಾಗುತ್ತದೆ. ಪ್ರಕೃತಿ ಸಹಜವಾಗಿಯೇ ಮಕ್ಕಳು ಸುಳ್ಳನ್ನಾಡುವುದಿಲ್ಲ. ಎಷ್ಟೋ ತಂದೆ ತಾಯಿಯರೇ ಮಕ್ಕಳಿಗೆ ಸುಳ್ಳು ಹೇಳುವುದನ್ನು ಕಲಿಸುತ್ತಾರೆ. ಮಗು ಏನನ್ನಾದರೂ ಬಯಸುತ್ತದೆ. ಬಯಸಿದ್ದನ್ನು ಮಗುವಿಗೆ ಕೊಡುವುದು ಹಿತಕರವಲ್ಲ ಎಂದು ತಂದೆ ತಾಯಿಯರ ಆಲೋಚನೆ. ಹೀಗಾಗಿ ಮಗು ಬಯಸಿದ್ದನ್ನು ಬಚ್ಚಿಟ್ಟು ಅದು ಕಣ್ಮರೆಯಾಯಿತೆಂದು ತಂದೆ–ತಾಯಿ ಹೇಳುತ್ತಾರೆ. ಮಕ್ಕಳಿಗೆ ಹೀಗೆ ಒಂದೆರಡು ಬಾರಿ ಮರುಳು ಮಾಡಬಹುದು. ಆದರೆ ಬಲು ಬೇಗ ಮಕ್ಕಳಿಗೆ ನಿಜಸ್ಥಿತಿಯ ಅರಿವಾಗುತ್ತದೆ. ಮಕ್ಕಳೂ ಸುಳ್ಳು ಹೇಳಲಾರಂಭಿಸುತ್ತಾರೆ. ಸ್ವಭಾವತಃ ಮನುಷ್ಯ ಸತ್ಯವಂತ ಎನ್ನುವುದು ನಿಯಮ. ಈ ನಿಯಮವನ್ನು ಕಂಡುಹಿಡಿಯಲಾಗಿದೆ. ನೀತಿ ಶಾಸ್ತ್ರದ ಇತರ ನಿಯಮಗಳನ್ನು ಇದೇ ರೀತಿ ಅನ್ವೇಷಿಸಲಾಗಿದೆ. ಇವೆಲ್ಲ ಏಕಪಕ್ಷೀಯವಾಗಿ ಯಾರೋ ಒಬ್ಬರು ರಚಿಸಿದವಲ್ಲ. ಭಾರತದಲ್ಲಿ ಈ ನಿಯಮಗಳನ್ನು ಧರ್ಮ ಎಂದು ಕರೆಯಲಾಗಿದೆ. ಮಾನವನ ಜೀವನದಲ್ಲಿ ಶಾಂತಿ–ಸಾಮರಸ್ಯ–ಪ್ರಗತಿಗಳನ್ನು ತರುವ ಈ ನಿಯಮಗಳು 'ಧರ್ಮ' ಪದಪ್ರಯೋಗದಲ್ಲಿ ಅಡಕಗೊಂಡಿವೆ. ಧರ್ಮದ ಸ್ವಸ್ಥ ನೆಲಗಟ್ಟಿನ ಮೇಲೆ ನಾವು ಜೀವನವನ್ನು ವಿಶ್ಲೇಷಿಸಬೇಕು, ಇಡೀ ಬದುಕು ಅಖಂಡವಾದುದೆಂಬುದನ್ನು ಮನಗಾಣಿಸುವ ಪ್ರಕ್ರಿಯೆಯಲ್ಲಿ ಸಾಗಬೇಕು.

ಪ್ರಕೃತಿಯನ್ನು ಧರ್ಮ ತತ್ತ್ವಗಳಿಗನುಸಾರವಾಗಿ ನಿರ್ದೇಶಿಸಿದಾಗ ನಾವು ನಾಗರಿಕರಾಗುತ್ತೇವೆ. ಸುಸಂಸ್ಕೃತರಾಗುತ್ತೇವೆ. ನಾಗರಿಕತೆ–ಸಂಸ್ಕೃತಿಗಳು ನಮ್ಮದಾಗುತ್ತವೆ. ಈ ಸಂಸ್ಕೃತಿಯಿಂದಲೇ ಮನುಕುಲದ ಬದುಕು ಪೋಷಿತ. ಇದರಿಂದಲೇ ಮನುಕುಲದ ಉದ್ಧಾರ. ಇದರಿಂದಲೇ ಮಾನವಜೀವನ ಉದಾತ್ತ. ಧರ್ಮ ಇಲ್ಲಿ ಕಾನೂನಾಗಿ ನಿಯಮವಾಗಿ ಅರ್ಥಾಂತರ ಹೊಂದಿದೆ. ಇಂಗ್ಲಿಷಿನ Religion–ರಿಲಿಜನ್ ಎನ್ನುವುದು 'ಧರ್ಮ'ಕ್ಕೆ ಸರಿಯಾದ ಭಾಷಾಂತರವಲ್ಲ.

ಈ ಮೊದಲು ಹೇಳಿದಂತೆ ಅಖಂಡವಾದ ಸಮಗ್ರವಾದ ಬದುಕು ನಮ್ಮ ಸಂಸ್ಕೃತಿಯ ಬುನಾದಿ ಮಾತ್ರವಲ್ಲ ಮೂಲಾಧಾರ ತತ್ತ್ವ. ಅಖಂಡತೆಯ ಗುರಿ, ಆದರ್ಶಗಳೂ ನಮ್ಮ ಸಂಸ್ಕೃತಿಯ ಮೂಲಾಧಾರಗಳು.



**ಸುಖ, ಸಂತೋಷ ಮತ್ತು ವ್ಯಕ್ತಿ**

ಬದುಕು ಸಾಮಾಜಿಕವಾಗಿ ಅಥವಾ ಸಾಮುದಾಯಿಕವಾಗಷ್ಟೇ ಅಖಂಡವಾದುದಲ್ಲ. ವ್ಯಕ್ತಿಗತ ಜೀವನದಲ್ಲೂ ಅದು ಅಖಂಡವಾದದ್ದು, ಏಕೀಕೃತವಾದದ್ದು ಎನ್ನುವುದನ್ನು ನಾವು ಪರ್ಯಾಲೋಚಿಸಿಯಾಗಿದೆ. ಸಾಮಾನ್ಯವಾಗಿ ವ್ಯಕ್ತಿ ಎಂದರೆ ನಮ್ಮ ಕಣ್ಣಿಗೆ ಗೋಚರಿಸುವುದು ಭೌತಿಕ ಶರೀರದ ರೂಪ. ದೈಹಿಕ ಭೋಗಭಾಗ್ಯಗಳನ್ನೇ ಸಂತೋಷವೆಂದು, ಪರಮಾನಂದವೆಂದು ಗ್ರಹಿಸಲಾಗಿದೆ, ಪರಿಗಣಿಸಲಾಗಿದೆ. ಆದರೆ ಮಾನಸಿಕ ಚಿಂತೆಗಳು, ಕೊರಗುಗಳು ದೈಹಿಕ ಸುಖ–ಸಂತೋಷಗಳನ್ನು ಹಾಳು ಮಾಡುತ್ತವೆ ಎನ್ನುವುದೂ ನಮಗೆ ಗೊತ್ತು. ಪ್ರತಿಯೊಬ್ಬರಿಗೂ ದೈಹಿಕ ಸುಖ–ಸಂತೋಷಗಳ ಅಪೇಕ್ಷೆ ಇರುತ್ತದೆ. ಆದರೆ ವ್ಯಕ್ತಿಯೊಬ್ಬನನ್ನು ಜೈಲಿನಲ್ಲಿ ಕೂಡಿ ಹಾಕಿ ಅಲ್ಲಿ ಅವನಿಗೆ ಮೃಷ್ಟಾನ್ನ ಭೋಜನವನ್ನು ಉಣಬಡಿಸಿದರೆ ಅವನು ಸುಖಿಯಾಗುವನೆ? ಬೈಗುಳಗಳೊಂದಿಗೆ ಬಡಿಸಿದ ಮೃಷ್ಟಾನ್ನ ಭೋಜನ ಮಾಡುವುದರಿಂದ ಯಾರಿಗೂ ಹಿತವೆನಿಸದು, ಸಂತೋಷವಾಗದು. ಮಹಾಭಾರತದ ಒಂದು ಸುವಿಖ್ಯಾತ ಘಟನೆ ಇದೆ. ಭಗವಾನ್ ಶ್ರೀಕೃಷ್ಣ ಪಾಂಡವರ ದೂತನಾಗಿ ಹಸ್ತಿನಾವತಿಗೆ ಹೋದಾಗ ದುರ್ಯೋಧನ ಅವನಿಗೆ ಆತಿಥ್ಯದ ಆಮಂತ್ರಣ ನೀಡಿದ. ಭಗವಂತ ಈ ಆತಿಥ್ಯವನ್ನು ನಿರಾಕರಿಸಿ ವಿದುರನ ಮನೆಗೆ ಹೋದ. ಪರಮಪೂಜನೀಯ ಅತಿಥಿಯ ಆಗಮನದಿಂದ ಸಂತೋಷಭರಿತಳಾದ ವಿದುರನ ಪತ್ನಿ, ಸಂತೋಷದ ಭರದಲ್ಲಿ ಬಾಳೆಹಣ್ಣಿನ ತಿರುಳನ್ನು ಬಿಸಾಡಿ ಸಿಪ್ಪೆಯನ್ನು ಕೃಷ್ಣನಿಗೆ ಉಣಬಡಿಸಿದಳು. ಕೃಷ್ಣ ಸಂತೋಷದಿಂದ ಸಿಪ್ಪೆಯನ್ನೇ ಸ್ವೀಕರಿಸಿದ. "ಪ್ರೀತಿಗೌರವಗಳಿಂದ ಬಡಿಸಿದ ಗೊಡ್ಡುಸಾರು ಅನ್ನವು ಗೌರವಾದರಗಳಿಲ್ಲದೆ ಬಡಿಸಿದ ಭೂರಿ ಭೋಜನಕ್ಕಿಂತ ರುಚಿಕರವಾಗಿರುತ್ತದೆ." ಎನ್ನುವ ಮಾತು ಹುಟ್ಟಿದ್ದು ಹೀಗೆಯೇ. ಅದರಿಂದ ಮನಸ್ಸಂತೋಷವನ್ನು ಮುಖ್ಯವಾಗಿ ಗಮನಿಸಬೇಕು.

ಇದರಂತೆಯೇ ಬೌದ್ಧಿಕ ಸಂತೋಷ ಎನ್ನುವುದನ್ನೂ ಪರಿಗಣಿಸಬೇಕು. ಒಬ್ಬ ವ್ಯಕ್ತಿಗೆ ದೈಹಿಕ ಸುಖ–ಸಂತೋಷ, ಪ್ರೀತಿವಾತ್ಸಲ್ಯ ಗೌರವ ಇತ್ಯಾದಿ ಮಾನಸಿಕ ಸಂತೋಷ ನೆಮ್ಮದಿಗಳೂ ದೊರೆಯಬಹುದು. ಇಷ್ಟೆಲ್ಲ ಇದ್ದೂ ಅವನು ಬೌದ್ಧಿಕ ಗೊಂದಲಗಳಿಂದ ಪೀಡಿತನಾಗಿದ್ದರೆ ಅವನ ಸ್ಥಿತಿ ಮತಿವಿಕಲನಿಗಿಂತ ಭಿನ್ನವಲ್ಲ. ಮತಿ ವಿಕಲ್ಪ ಎಂದರೇನು? ಬುದ್ಧಿಭ್ರಮಣೆ ಹೊಂದಿದವನಿಗೆ ಎಲ್ಲ ದೈಹಿಕ ಸುಖಗಳೂ ಒದಗಬಹುದು. ಅವನು ಆರೋಗ್ಯಶಾಲಿಯಾಗಿರಬಹುದು. ಬಂಧುಗಳು ಅವನ ಬಗ್ಗೆ ಸೂಕ್ತಕಾಳಜಿ ವಹಿಸಬಹುದು. ಆದಾಗ್ಯೂ ಅವನಿಗೆ ಮನಸ್ಸಂತೋಷ ಇರುವುದಿಲ್ಲ. ಬೌದ್ಧಿಕ ಸಂತೋಷ ಇರುವುದಿಲ್ಲ. ಬೌದ್ಧಿಕ ಶಾಂತಿಯೂ ಅತ್ಯಗತ್ಯವಾದದ್ದು. ನಾವು ಇದೆಲ್ಲವನ್ನೂ ಪರಿಗಣಿಸಬೇಕಾಗುತ್ತದೆ.

**ಓಟು–ಅನ್ನ – ಸಂತೋಷ**

ದೇಹ–ಮನಸ್ಸು–ಬುದ್ಧಿ ಮತ್ತು ಆತ್ಮ ಈ ನಾಲ್ಕೂ ಸೇರಿ ವ್ಯಕ್ತಿ ಮೂರ್ತಿಮಂತನಾಗುತ್ತಾನೆ. ಆದರೆ ಇವೆಲ್ಲ ಒಂದರೊಳಗೊಂದು ಅಂತರ್ಗತವಾಗಿ ಸಮಗ್ರವಾದವು. ಇವುಗಳನ್ನು ನಾವು ಬೇರೆಬೇರೆಯಾಗಿ ನೋಡಲಾಗದು. ಮನುಷ್ಯನ ಈ ನಾಲ್ಕೂ ಅಂಶಗಳನ್ನು ಪ್ರತ್ಯೇಕವೆಂದು, ಒಂದು ಮತ್ತೊಂದಕ್ಕೆ ಸಂಬಂಧಿಸಿದ್ದಲ್ಲವೆಂದು ಪರಿಗಣಿಸಿದ್ದರಿಂದ ಪಾಶ್ಚಾತ್ಯರಲ್ಲಿ ಈಗ ಗೊಂದಲ ತಲೆದೋರಿದೆ. ಪ್ರಜಾಪ್ರಭುತ್ವಕ್ಕಾಗಿ ಚಳವಳಿ ನಡೆದಾಗ ಅವರು "ಮನುಷ್ಯ ಒಂದು ರಾಜಕೀಯ ಪ್ರಾಣಿ" ಎಂದು ಘೋಷಣೆ ಮಾಡಿದರು. ಆದ್ದರಿಂದ ಅವನ ರಾಜಕೀಯ ಆಶೋತ್ತರಗಳನ್ನು ಈಡೇರಿಸಬೇಕೆಂದು ಚಳವಳಿಗಾರರ ವಾದವಾಗಿತ್ತು. ಏಕೆ ಯಾರೊಬ್ಬ ದೊರೆಯಾಗಬೇಕು? ಉಳಿದವರೇಕೆ ಅವನ ಅಧೀನರಾಗಿರಬೇಕು? ಎಲ್ಲರೂ ರಾಜ್ಯವನ್ನಾಳಲಿ. ಈ ರಾಜಕೀಯ ಮಾನವನನ್ನು ತೃಪ್ತಿಪಡಿಸಲು ಅವನಿಗೆ ಮತದಾನದ ಹಕ್ಕನ್ನು ನೀಡಲಾಯಿತು. ಈಗ ಮತದಾನದ ಹಕ್ಕೇನೋ ದೊರೆಯಿತು. ಇದೇ ಕಾಲದಲ್ಲಿ ಅವನ ಇತರ ಹಕ್ಕುಗಳು ಮಾಯವಾದವು. ಆಗ ಇನ್ನೊಂದು ಪ್ರಶ್ನೆ ಉದ್ಭವಿಸಿತು; "ಮತದಾನದ ಹಕ್ಕು ಒಳ್ಳೆಯದೆ, ಆದರೆ ಊಟದ ವ್ಯವಸ್ಥೆ ಹೇಗೆ? ಅನ್ನದ ಗತಿ ಯಾವುದು? ತಿನ್ನಲೂ ಏನೂ ಸಿಗದಂತಾದಾಗ ಏನು ಮಾಡಬೇಕು?"

ಅವರು ಆಶ್ಚರ್ಯ ಚಕಿತರಾದರು "ಈಗ ನಿಮಗೆ ಓಟಿನ ಹಕ್ಕು ಇದೆ. ನೀವೇ ಈಗ ಪ್ರಭುಗಳು. ಇನ್ನೇಕೆ ಚಿಂತೆ?" ಇದಕ್ಕೆ ಮತದಾರ ಮಾನವನ ಪ್ರತಿಕ್ರಿಯೆ; "ಹೊಟ್ಟೆಗೆ ಹೊಟ್ಟಿಲ್ಲದೆ ರಾಜ್ಯ ಕಟ್ಟಿಕೊಂಡು ಏನು ಮಾಡಲಿ? ನನಗೆ ಈ ಮತದಾನದ ಹಕ್ಕಿನಿಂದ ಏನೂ ಪ್ರಯೋಜನವಿಲ್ಲ. ನನಗೆ ಮೊದಲು ಬೇಕಾಗಿರುವುದು ಊಟ" ಆಗ ಕಾರ್ಲ್‌ಮಾರ್ಕ್ಸ್‌ನ ಅವತಾರವಾಯಿತು ಮಾರ್ಕ್ಸ್ ಹೇಳಿದ:

"ಹೌದು ಊಟ ಅತಿಮುಖ್ಯವಾದದ್ದು. ರಾಜ್ಯ ಸರ್ಕಾರಗಳು ಉಳ್ಳವರ ಸೊತ್ತು. ಆದ್ದರಿಂದ ನಾವು ಅನ್ನಕ್ಕಾಗಿ ಹೋರಾಡೋಣ".

ಮಾರ್ಕ್ಸ್ ಮನುಷ್ಯನನ್ನು ಹಸಿದ ಹುಲುಮಾನವನನ್ನಾಗಿ ಕಂಡ. ಹಸಿವು ಅನ್ನಕ್ಕಾಗಿ ದೇಹದ ಹಾಹಾಕಾರ ಇದೇ ಅವನಿಗೆ ಮುಖ್ಯವೆನಿಸಿತು. ಆದರೆ ಮಾರ್ಕ್ಸ್ ತೋರಿದ ಪಥದಲ್ಲಿ ನಡೆದವರಿಗೆ ನಂತರ ಜ್ಞಾನೋದಯವಾಯಿತು. ತಮಗೆ ಹೊಟ್ಟೆ ಅನ್ನವೂ ಇಲ್ಲ ಮತದಾನದ ಹಕ್ಕೂ ಇಲ್ಲ ಎಂಬುದು ಅವರಿಗೆ ಮನವರಿಕೆಯಾಯಿತು.

ಇದರ ಇನ್ನೊಂದು ತುದಿ ಅಮೆರಿಕ. ಅಲ್ಲಿ ಹೊಟ್ಟೆಗೆ ಅನ್ನವೂ ಉಂಟು ಮತದಾನದ ಹಕ್ಕೂ ಉಂಟು. ಆದಾಗ್ಯೂ ಅಲ್ಲಿ ಸುಖಶಾಂತಿಗಳಿಲ್ಲ. ಆತ್ಮಹತ್ಯೆ



ಪ್ರಕರಣಗಳಲ್ಲಿ ಅಮೆರಿಕ ಮೊದಲಸ್ಥಾನದಲ್ಲಿದೆ. ಅಲ್ಲಿ ಮನೋವಿಕಲರ ಸಂಖ್ಯೆ ಹೆಚ್ಚು. ಅಲ್ಲಿ ಅನೇಕ ಮಂದಿ ನಿದ್ದೆಬಾರದೆ ನಿದ್ದೆ ಮಾತ್ರೆ ಚಟ ಬೆಳೆಸಿಕೊಂಡಿದ್ದಾರೆ. ಈ ಹೊಸ ಸ್ಥಿತಿಯಿಂದ ಜನ ಕಂಗಾಲಾಗಿದ್ದಾರೆ. ದಿಕ್ಕು ತೋಚದವರಾಗಿದ್ದಾರೆ. ಮನುಷ್ಯನಿಗೆ ಹೊಟ್ಟೆಗೆ ಊಟ ಸಿಗುತ್ತೆ. ಅವನಿಗೆ ಓಟಿನ ಹಕ್ಕು ಇದೆ. ಆದಾಗ್ಯೂ ನೆಮ್ಮದಿ ಇಲ್ಲ. ಸಂತೋಷ ಇಲ್ಲ. ಅವರಿಗೀಗ ಬೇಕಾಗಿರುವುದು ನೆಮ್ಮದಿಯ ನಿದ್ರೆ. ಇವತ್ತಿನ ಅಮೆರಿಕದಲ್ಲಿ ನೆಮ್ಮದಿಯ ನಿದ್ರೆ ದುರ್ಲಭ ವಸ್ತುವಿನಂತಾಗಿದೆ. ತಮ್ಮ ಜೀವನ ವ್ಯವಸ್ಥೆಯಲ್ಲೇ ಏನೋ ಮೂಲಭೂತ ಕೊರತೆ, ದೋಷಗಳಿವೆ ಎಂದು ಈಗ ಆ ದೇಶದ ಚಿಂತಕರಿಗೆ ಕ್ರಮೇಣ ಮನವರಿಕೆಯಾಗುತ್ತಿದೆ. ಇಷ್ಟೊಂದು ಭಾರಿ ಪ್ರಮಾಣದ ಅಭ್ಯುದಯ, ಸಂಪತ್ತುಗಳನ್ನು ಸಾಧಿಸಿದ ನಂತರವೂ ಸುಖಶಾಂತಿ ನೆಮ್ಮದಿಗಳಿಲ್ಲದಿರುವುದಕ್ಕೆ ಈ ನ್ಯೂನತೆಯೇ ಕಾರಣವಿದ್ದೀತು ಎಂಬ ಅರಿವು ಅವರಲ್ಲಿ ಮೂಡಿದೆ.

**ಭಾರತೀಯ ಜೀವನ ಮಾರ್ಗ**

ಕಾರಣ ಏನೆಂದರೆ ಅವರು ಅಖಂಡ ಮಾನವನ ಬಗ್ಗೆ ಯೋಚಿಸಿಲ್ಲ. ನಮ್ಮ ದೇಶದಲ್ಲಿ ನಾವು ಇದರ ಬಗ್ಗೆ ಕೂಲಂಕಶವಾಗಿ ಚಿಂತನ ಮಂಥನ ಮಾಡಿದ್ದೇವೆ. ಆದ್ದರಿಂದಲೇ ನಾವು ಹೇಳಿರುವುದು; ಮಾನವನ ಪ್ರಗತಿ ಎಂದರೆ ಏಕಕಾಲದಲ್ಲಿ ಮಾನವನ ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಗಳ ಪ್ರಗತಿ.

ಭಾರತೀಯ ಸಂಸ್ಕೃತಿ ಮುಕ್ತಿ ಬಿಟ್ಟು ಬೇರೆ ವಿಷಯಗಳ ಬಗ್ಗೆ ಚಿಂತಿಸುವುದಿಲ್ಲ ಎಂದು ಅನೇಕ ವೇಳೆ ಪ್ರಚಾರ ಮಾಡಲಾಗಿದೆ. ಇದು ತಪ್ಪು. ನಾವು ಆತ್ಮದ ಬಗ್ಗೆ ಚಿಂತನೆ ಮಾಡುತ್ತೇವೆ ಎನ್ನುವುದು ದಿಟ. ಆದರೆ ನಾವು ದೇಹದ ಬಗ್ಗೆ ಪರಿಗಣನೆ ಮಾಡುವುದಿಲ್ಲ, ಮನಸು – ಬುದ್ಧಿಗಳಿಗೆ ಹೆಚ್ಚಿನ ಮಹತ್ವ ನೀಡಿಲ್ಲ ಎನ್ನುವುದು ನಿಜವಲ್ಲ. ಬೇರೆಯವರು ಶರೀರಕ್ಕೆ ಮಾತ್ರ ಪ್ರಾಮುಖ್ಯ ನೀಡುತ್ತಾರೆ. ಆದ್ದರಿಂದ ಆತ್ಮಕ್ಕೆ ನಾವು ನೀಡುವ ಮಹತ್ವ ಅಪೂರ್ವವಾದುದೆನ್ನಿಸುತ್ತದೆ. ಕಾಲಕಳೆದಂತೆ ಇದು ನಾವು ಆತ್ಮದ ಬಗ್ಗೆ ಮಾತ್ರ ಕಾಳಜಿ ಹೊಂದಿದ್ದೇವೆ ಮನುಷ್ಯನ ಇತರ ವಿಷಯಗಳಲ್ಲಿ ನಾವು ಆಸಕ್ತರಲ್ಲ ಎನ್ನುವ ಭಾವನೆಯನ್ನುಂಟುಮಾಡಿತು. ಅವಿವಾಹಿತ ಯುವಕ ತನ್ನ ತಾಯಿ ಬಗ್ಗೆ ಹೆಚ್ಚು ಕಾಳಜಿ ತೋರುತ್ತಾನೆ. ಆದರೆ ವಿವಾಹದ ನಂತರ ಅವನು ತಾಯಿ ಮತ್ತು ಹೆಂಡತಿ ಇಬ್ಬರ ಬಗ್ಗೆಯೂ ಆಸ್ಥೆ ವಹಿಸುತ್ತಾನೆ. ಹಾಗೂ ಇವರಿಬ್ಬರ ಬಗ್ಗೆಯೂ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸುತ್ತಾನೆ. ಆದ್ದರಿಂದ ಅವನಿಗೆ ತಾಯಿ ಬಗ್ಗೆ ಪ್ರೀತಿಗೌರವಗಳಿಲ್ಲ ಎಂದು ಯಾರಾದರೂ ಹೇಳಿದರೆ ಅದು ಸುಳ್ಳಾಗುತ್ತದೆ. ಹೆಂಡತಿಯಾದವಳು ಮೊದಲು ಗಂಡನನ್ನು ಮಾತ್ರ ಪ್ರೀತಿಸುತ್ತಾಳೆ, ತಾಯಿಯಾದ ನಂತರ ಅವಳು ಗಂಡ–ಮಕ್ಕಳಿಬ್ಬರನ್ನೂ

ಪ್ರೀತಿಸುತ್ತಾಳೆ. ಕೆಲವೊಮ್ಮೆ ದುಡುಕಿನ ಗಂಡ, ಮಗುವಿನ ಜನನದ ನಂತರ ಹೆಂಡತಿ ತನ್ನನ್ನು ಉಪೇಕ್ಷಿಸುತ್ತಿದ್ದಾಳೆ ಎಂದು ಭಾವಿಸುವುದುಂಟು. ಆದರೆ ಸಾಮಾನ್ಯವಾಗಿ ಇದು ತಪ್ಪು ಕಲ್ಪನೆ. ಅದು ನಿಜವಾದಲ್ಲಿ ಹೆಂಡತಿ ತನ್ನ ಕರ್ತವ್ಯದಿಂದ ವಿಮುಖಳಾಗಿದ್ದಾಳೆ ಎಂದು ಅರ್ಥ.

### ನಾಲ್ಕು ಪುರುಷಾರ್ಥಗಳು

ಇದೇ ರೀತಿ ಆತ್ಮಕ್ಕೆ ಗಮನ ಕೊಡಬೇಕಾದ ಅವಶ್ಯಕತೆಯನ್ನು ನಾವು ಮಾನ್ಯ ಮಾಡುತ್ತೇವೆ. ಅಂದಾಕ್ಷಣ ಶರೀರವನ್ನು ಅಲಕ್ಷಿಸುವುದಿಲ್ಲ. ದುರ್ಬಲ ಮನುಷ್ಯನಿಂದ ಆತ್ಮಸಾಧನೆ ಸಾಧ್ಯವಿಲ್ಲ. ಆತ್ಮಸಾಕ್ಷಾತ್ಕಾರ ಸಾಧ್ಯವಿಲ್ಲ ಎಂದು ಉಪನಿಷತ್ತುಗಳು ಘೋಷಿಸಿವೆ. ಧರ್ಮ ವಿಧಿಸುವ ಜವಾಬ್ದಾರಿಗಳನ್ನು ನಿರ್ವಹಿಸುವುದರಲ್ಲಿ ಶರೀರವೇ ಮುಖ್ಯ ಸಾಧನ. ಪಾಶ್ಚಾತ್ಯರು ಮತ್ತು ನಮ್ಮ ನಿಲುವುಗಳಲ್ಲಿ ಮೂಲಭೂತವಾದ ವ್ಯತ್ಯಾಸವೆಂದರೆ ಅವರು ದೇಹ ಮತ್ತು ಕಾಮನಗಳನ್ನು ತೃಪ್ತಿ ಪಡಿಸುವುದೇ ಮುಖ್ಯಗುರಿ ಎಂದು ಭಾವಿಸಿದ್ದಾರೆ. ನಾವು ನಮ್ಮ ಗುರಿಸಾಧನೆಯಲ್ಲಿ ದೇಹ ಮುಖ್ಯಸಾಧನವೆಂದು ಪರಿಗಣಿಸಿದ್ದೇವೆ. ಇದೇ ಮುಖ್ಯ ವ್ಯತ್ಯಾಸ. ಈ ಬೆಳಕಿನಲ್ಲಿ ನಾವು ದೇಹದ ಮಹತ್ವವನ್ನು ಮಾನ್ಯ ಮಾಡಿದ್ದೇವೆ. ನಮಗೆ ಶರೀರದ ಅಗತ್ಯಗಳನ್ನು ತೃಪ್ತಿಪಡಿಸಬೇಕಾದ ಅರಿವು ಇದೆ. ಆದರೆ ಇದೇ ನಮ್ಮೆಲ್ಲ ಪ್ರಯತ್ನಗಳ ಪರಮಗುರಿ ಎಂದು ನಾವು ತಿಳಿದಿಲ್ಲ. ಇಲ್ಲಿ ಭಾರತದಲ್ಲಿ ನಾವು ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಗಳ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ನಾಲ್ಕು ವಿಧದ ಹೊಣೆಗಾರಿಕೆಗಳನ್ನು ಹೊಂದಿದ್ದೇವೆ. ಮಾನವನ ಸಮಗ್ರ ಪ್ರಗತಿಯ ದರ್ಶನ ಇಲ್ಲಿದೆ. ಧರ್ಮ, ಅರ್ಥ ಕಾಮ ಮತ್ತು ಮೋಕ್ಷ ನಾಲ್ಕು ವಿಧದ ಪುರುಷಾರ್ಥಗಳು ಮಾನವನ ಕಾಯಕಗಳು. ಪುರುಷಾರ್ಥ ಎಂದರೆ ಮನುಷ್ಯ ಪ್ರಯತ್ನಗಳು ಎಂದು ಅರ್ಥ. ಧರ್ಮ, ಅರ್ಥ, ಕಾಮ ಮೋಕ್ಷಗಳ ಹಂಬಲ ಮನುಷ್ಯನಲ್ಲಿ ಜನ್ಮಸಿದ್ಧವಾದವು ಹಾಗೂ ಇವುಗಳ ಈಡೇರಿಕೆಯಿಂದ ಅವನಿಗೆ ಸುಖ ಸಂತೋಷಗಳು ಪ್ರಾಪ್ತವಾಗುತ್ತವೆ. ಈ ನಾಲ್ಕು ಪುರುಷಾರ್ಥಗಳ ಬಗ್ಗೆಯೂ ನಮ್ಮ ಅಖಂಡತೆಯ ಚಿಂತನೆ ಸಾಗಿದೆ. ಪುರುಷಾರ್ಥಗಳಲ್ಲಿ ಮೋಕ್ಷ ಪರಮಶ್ರೇಷ್ಠವಾದದ್ದು ಎಂದು ಪರಿಗಣಿಸಲಾಗಿದೆ. ಆದಾಗ್ಯೂ ಮೋಕ್ಷಸಾಧನೆಗೆ ನಡೆಸುವ ಪ್ರಯತ್ನಗಳಿಂದ ಆತ್ಮಕ್ಕೇನೂ ಲಾಭವಿಲ್ಲ ಎಂದೂ ಭಾವಿಸಲಾಗಿದೆ. ಅಲ್ಲದೆ ಫಲಾಫಲಗಳ ಬಗ್ಗೆ ನಿರಾಸಕ್ತನಾಗಿ, ಅವುಗಳಿಂದ ನಿರ್ಲಿಪ್ತನಾದವನಿಗೆ ಮೋಕ್ಷ ಶತಃಸಿದ್ಧ ಹಾಗೂ ಮೋಕ್ಷ ಬೇಗ ಸಿಗುತ್ತದೆ.

ರಾಜಕೀಯ ಮತ್ತು ಆರ್ಥಿಕ ನೀತಿಗಳು 'ಅರ್ಥ' ದ ವ್ಯಾಪ್ತಿಯೊಳಗೆ ಬರುತ್ತವೆ. ಪ್ರಾಚೀನರ ಪ್ರಕಾರ 'ಅರ್ಥ'ದಲ್ಲಿ ನ್ಯಾಯ, ಶಿಕ್ಷೆಗಳೂ, ವಿತ್ತವೂ ಸೇರಿತ್ತು. ಕಾಮ ಲೌಕಿಕ ಕಾಮನೆಗಳ ತುಷ್ಟಿಗೆ ಸಂಬಂಧಿಸಿದ್ದು. ಧರ್ಮ ಮೂಲಭೂತ ತತ್ತ್ವಗಳು, ನೀತಿಸಂಹಿತೆಗಳು ಸೇರಿದಂತೆ ಸಕಲವನ್ನೂ ಒಳಗೊಂಡಿದೆ. ಧರ್ಮದ ಪ್ರಕಾರವಾಗಿಯೇ ಅರ್ಥ ಮತ್ತು ಕಾಮ ಸಂಬಂಧಿತ ಚಟುವಟಿಕೆಗಳು ನಡೆಯಬೇಕು ಹಾಗೂ ಧರ್ಮದ ಚೌಕಟ್ಟಿನೊಳಗೇ ಇವೆಲ್ಲವನ್ನೂ ಸಾಧಿಸಬೇಕು. ಈ ಮಾರ್ಗದಿಂದ ಮಾತ್ರ ಸಮಗ್ರತೆ – ಸಾಮರಸ್ಯಗಳಿಂದ ಪ್ರಗತಿ ಸಾಧನೆ ಸಾಧ್ಯ. ಇದೇ ಆಖೈರಾಗಿ ಮೋಕ್ಷಕ್ಕೆ ಒಯ್ಯುವುದು.



### ಧರ್ಮದ ಮಹತ್ವ

ಧರ್ಮ, ಅರ್ಥ ಮತ್ತು ಕಾಮಗಳನ್ನು ನಿಯಂತ್ರಿಸುತ್ತದೆ. ಆದಾಗ್ಯೂ ಇವು ಮೂರೂ ಅಂತರಸಂಬಂಧ ಹೊಂದಿದ್ದು ಪರಸ್ಪರ ಪೂರಕವಾದವು. ವಾಣಿಜ್ಯ ವ್ಯಾಪಾರಗಳಲ್ಲೂ ಪ್ರಾಮಾಣಿಕತೆ, ಸಂಯಮ ಮತ್ತು ಸತ್ಯನಿಷ್ಠೆ ಅಗತ್ಯ. ಇವೆಲ್ಲವೂ ಧರ್ಮದ ವಿಶೇಷ ಗುಣಗಳು. ಈ ಗುಣಗಳಿಲ್ಲದೆ ಹಣವನ್ನು ಸಂಪಾದಿಸಲಾಗದು. ಅರ್ಥ ಮತ್ತು ಕಾಮಗಳ ಸಾಧನೆಯಲ್ಲಿ ಧರ್ಮ ನಿಮಿತ್ತವಾದದ್ದು. "ಪ್ರಾಮಾಣಿಕತೆ ವಾಣಿಜ್ಯ ವ್ಯಾಪಾರದ ಶ್ರೇಷ್ಠ ನೀತಿ" ಎಂದು ಅಮೆರಿಕನ್ನರು ಘೋಷಿಸಿದರು. ಯೂರೋಪಿನಲ್ಲಿ "ಪ್ರಾಮಾಣಿಕತೆಯೇ ಶ್ರೇಷ್ಠ ನೀತಿ" ಎಂದು ಹೇಳಿದರು. ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಪ್ರಾಮಾಣಿಕತೆ ಒಂದು ನೀತಿಯಲ್ಲ, ತತ್ತ್ವ" ಎಂದು ಪ್ರತಿಪಾದಿಸಿದೆವು. ಅಂದರೆ ಅರ್ಥ ಸಾಧನೆಗೆ ನಿಮಿತ್ತ ಎನ್ನುವ ಕಾರಣದಿಂದಾಗಿ ನಾವು ಧರ್ಮವನ್ನು ನಂಬುವುದಿಲ್ಲ. ಅದು ನಾಗರಿಕ ಜೀವನದ ಮೂಲ ತತ್ವ ಎನ್ನುವ ಕಾರಣದಿಂದಾಗಿ ನಂಬುತ್ತೇವೆ.

ಕಾಮವನ್ನೂ ಧರ್ಮದ ಮುಖೇನವೇ ಸಾಧಿಸಬೇಕು. ಒಳ್ಳೆಯ ಆಹಾರ ಇತ್ಯಾದಿ ಐಹಿಕ ಭೋಗ ಭಾಗ್ಯಗಳನ್ನು ಸೃಷ್ಟಿಸಿದ ನಂತರ ಅವುಗಳನ್ನು ಹೇಗೆ ಎಲ್ಲಿ, ಯಾವ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕೆಂಬುದನ್ನು ಧರ್ಮವೇ ನಿರ್ಧರಿಸುತ್ತದೆ. ರೋಗಿಯು ಆರೋಗ್ಯವಂತನಿಗಾಗಿ ಸಿದ್ಧಪಡಿಸಿದ ಆಹಾರವನ್ನೂ, ಆರೋಗ್ಯವಂತನು ಪಥ್ಯದ ಊಟವನ್ನು ಸೇವಿಸಿದರೆ ಇಬ್ಬರಿಗೂ ತೊಂದರೆ ತಪ್ಪಿದ್ದಲ್ಲ. ಮನುಷ್ಯನ ಸಹಜ ಪ್ರವೃತ್ತಿಗಳನ್ನು ನಿಯಂತ್ರಿಸುವುದರಲ್ಲಿ ಧರ್ಮ ನೆರವಿಗೆ ಬರುತ್ತದೆ. ಧರ್ಮದ ಸಹಾಯದಿಂದ ವ್ಯಕ್ತಿ ಯಾವುದು ತನಗೆ ಹಿತಕರ, ಅನುಕೂಲಕರ ಹಾಗೂ ಸಂತೋಷದಾಯಕ ಎಂಬುದನ್ನು ನಿರ್ಧರಿಸಬಲ್ಲ. ಆದ್ದರಿಂದ ನಮ್ಮ ಸಂಸ್ಕೃತಿಯಲ್ಲಿ ಧರ್ಮಕ್ಕೆ ಅಗ್ರಸ್ಥಾನ ನೀಡಲಾಗಿದೆ.

ಧರ್ಮಕ್ಕೆ ಆದ್ಯ ಮಹತ್ವ ನೀಡಬೇಕು. ಆದರೆ ಅರ್ಥ ಇಲ್ಲದೆ ಧರ್ಮವನ್ನು ಆಚರಿಸಲಾಗದು ಎಂಬುದನ್ನು ನಾವು ಮರೆಯುವಂತಿಲ್ಲ. "ಹಸಿವಿನಿಂದ ಬಳಲುತ್ತಿರುವನು ಎಂಥ ಪಾಪ ಮಾಡಲು ಹಿಂಜರಿಯಲಾರ" ಎನ್ನುವ

ನಾಣ್ಣುಡಿಯೊಂದಿದೆ. ಎಲ್ಲವನ್ನೂ ಕಳೆದುಕೊಂಡು ಬರಿಗೈ ಆದವರು ನಿಷ್ಕರುಣಿಗಳಾಗುತ್ತಾರೆ. ಕ್ರೂರಿಗಳಾಗುತ್ತಾರೆ. ಹಸಿವನ್ನು ತಡೆದುಕೊಳ್ಳಲಾಗದೆ ವಿಶ್ವಾಮಿತ್ರ ಬೇಡನ ಮನೆಗೆ ಕನ್ನ ಹಾಕಿ ನಾಯಿಮಾಂಸ ತಿಂದರು. ಆದ್ದರಿಂದಲೇ ನಮಗೆ ಸಾಕಷ್ಟು ಸಂಪತ್ತನ್ನು ಸತತವಾಗಿ ಅರ್ಜಿಸಬೇಕೆನ್ನುವ ಕಟ್ಟುಪಾಡಿದೆ. ಏಕೆಂದರೆ ಸಂಪತ್ತು ಧರ್ಮವನ್ನು ಬಲಗೊಳಿಸುತ್ತದೆ. ಅಂತೆಯೇ ಸರ್ಕಾರ ಧರ್ಮವನ್ನು ಬಲಗೊಳಿಸುತ್ತದೆ. ಅಂತೆಯೇ ಸರ್ಕಾರ ಧರ್ಮವನ್ನು ಹಾಳುಗೆಡಹುವಂಥ ದೊಂಬಿಗಳನ್ನು ತಡೆಗಟ್ಟಿ ಕಾಯಿದೆ ಸುವ್ಯವಸ್ಥೆಯನ್ನು ಪಾಲಿಸಬೇಕಾಗುತ್ತದೆ. ದೊಂಬಿ ಘರ್ಷಣೆಗಳಲ್ಲಿ ಅರಣ್ಯ ನಿಯಮ ಪಾಲಿಸಬೇಕಾಗುತ್ತದೆ. ಸಬಲರು ದುರ್ಬಲರನ್ನು ಚಚ್ಚಿ ಹಾಕುತ್ತಾರೆ. ಆದ್ದರಿಂದ ಧರ್ಮ ರಕ್ಷಣೆಗಾಗಿ ಸುಭದ್ರ ಸುಸ್ಥಿರ ಸರ್ಕಾರ ಅಗತ್ಯವಿದೆ.

ಇದನ್ನೆಲ್ಲ ಮಾಡಲು ಶಿಕ್ಷಣ, ಸಚ್ಚಾರಿತ್ರ್ಯ ನಿರ್ಮಾಣ, ಆದರ್ಶಗಳ ಪ್ರಚಾರ, ಸೂಕ್ತ ಆರ್ಥಿಕ ವ್ಯವಸ್ಥೆ ಅತ್ಯಗತ್ಯ.

## ಧರ್ಮದ ಮೂಲಕ ಅರ್ಥ ಮತ್ತು ಕಾಮ

ಅರ್ಥದಲ್ಲಿ ಜೀವನದಲ್ಲಿನ ರಾಜಕೀಯ ವಿಷಯಗಳ ಒಳಪಟ್ಟಿವೆ. ಸರ್ಕಾರದ ಕೈಯ್ಯಲ್ಲಿ ಅತ್ಯಧಿಕ ಅಧಿಕಾರ ಕೇಂದ್ರೀಕರಣವು ಧರ್ಮಕ್ಕೆ ಹಾನಿಯುಂಟು ಮಾಡುತ್ತದೆ. ದೊರೆಯಾದವನು ಜನರ ಬಗ್ಗೆ ಅತ್ಯಾದರವುಳ್ಳವನೂ ಆಗಿರಬಾರದು. ಅತಿಕ್ರೂರಿಯೂ ಆಗಿರಬಾರದು ಎಂದು ಹೇಳಲಾಗುತ್ತಿತ್ತು. ಕಠಿಣ ಕ್ರಮಗಳ ಮೇಲೆ ಅತಿಯಾದ ಅವಲಂಬನೆಯಿಂದಾಗಿ ಜನರಲ್ಲಿ ದಂಗೆ ಏಳುವ ಮನೋಭಾವ ಉಂಟಾಗಬಹುದು. ಸರ್ಕಾರ ಧರ್ಮದ ನ್ಯಾಯೋಚಿತ ಸ್ಥಾನವನ್ನು ಆಕ್ರಮಿಸಿದಲ್ಲಿ ಸರ್ಕಾರದ ಅಧಿಕಾರ ಪ್ರಾಬಲ್ಯ ಕೇಡಾಗಿ ಪರಿಣಮಿಸಬಹುದು. ಆಗ ಧರ್ಮಕ್ಕೆ ಹಾನಿಯಾಗುತ್ತದೆ. ಆದ್ದರಿಂದಲೇ ನಿರ್ದಯ, ನಿಷ್ಕರುಣಿ ಸರ್ಕಾರಗಳಿರುವಲ್ಲಿ ಧರ್ಮದ ಅವನತಿಯಾಗುತ್ತದೆ.

ಸರ್ಕಾರ, ರಾಜಕೀಯ, ಆರ್ಥಿಕ ಇತ್ಯಾದಿ ಎಲ್ಲ ಅಧಿಕಾರವನ್ನು ತನ್ನ ಕೈಯಲ್ಲೇ ಇಟ್ಟುಕೊಂಡಲ್ಲಿ ಧರ್ಮ ಅವನತಿ ಹೊಂದುವುದು. ಸರ್ಕಾರ ಅಮಿತ ಅಧಿಕಾರವನ್ನು ಹೊಂದಿದ್ದಲ್ಲಿ ಇಡೀ ಸಮಾಜ ಎಲ್ಲದಕ್ಕೂ ಸರ್ಕಾರದತ್ತಲೇ ನೋಡುತ್ತದೆ. ಅಧಿಕಾರಿಗಳು ಕರ್ತವ್ಯ ಮರೆತು ಪಟ್ಟಭದ್ರ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುತ್ತಾರೆ. ಇವೆಲ್ಲ ಸರ್ಕಾರದ ಅಧಿಕಾರ ಮೇಲುಗೈ ಪಡೆಯುತ್ತಿರುವುದರ ಸೂಚನೆ. ಇದರಿಂದಾಗಿ ಧರ್ಮಕ್ಕೆ ಹಿನ್ನಡೆಯುಂಟಾಗುತ್ತದೆ. ಧರ್ಮಕ್ಕೆ ಧಕ್ಕೆ ತಗುಲುತ್ತದೆ. ಆದ್ದರಿಂದ ಅರ್ಥವನ್ನು ಈ ಎರಡೂ ರೀತಿಯಲ್ಲಿ ಅರ್ಜಿಸಲು ಅವಕಾಶ ಮಾಡಿಕೊಡಬಾರದು.



ಕಾಮವನ್ನೂ ಇದೇ ನಿಟ್ಟಿನಿಂದ ನೋಡಬೇಕು. ಮನುಷ್ಯನ ದೈಹಿಕ ಅಗತ್ಯಗಳನ್ನು ಉಪೇಕ್ಷಿಸಿದಲ್ಲಿ, ಕಾಮನೆಗಳನ್ನು ಹತ್ತಿಕ್ಕಿದಲ್ಲಿ ಧರ್ಮ ಬೆಳೆಯುವುದಿಲ್ಲ. ಜನರಿಗೆ ತಿನ್ನಲು ಆಹಾರ ಇಲ್ಲದಿದ್ದರೆ ಧರ್ಮವನ್ನು ಪಾಲಿಸಲಾಗದು. ಮನಸ್ಸನ್ನು ತೃಪ್ತಿಪಡಿಸುವ ಲಲಿತಕಲೆಗಳನ್ನು ನಿಲ್ಲಿಸಿದಲ್ಲಿ ಜನರನ್ನು ನಾಗರಿಕರನ್ನಾಗಿಸುವ ಪ್ರಭಾವ ಕಣ್ಮರೆಯಾಗುತ್ತದೆ. ಮನಸ್ಸು ವಿಕೃತವಾಗುತ್ತದೆ. ಧರ್ಮವನ್ನು ಉಪೇಕ್ಷಿಸಲಾಗುತ್ತದೆ. ರೋಮಿನ ಹೊಟ್ಟೆಬಾಕರ ಆಸೆಬುರುಕುತನ, ಯಯಾತಿಯ ಕಾಮುಕತೆಗಳಿಗೆ ಅವಕಾಶ ಕೊಟ್ಟಲ್ಲಿ ಜನ ತಮ್ಮ ಕರ್ತವ್ಯಗಳನ್ನು ಮರೆಯುತ್ತಾರೆ. ಆದ್ದರಿಂದ ಕಾಮವನ್ನು ಧರ್ಮದ ಸಾಮರಸ್ಯದೊಂದಿಗೆ ಅನುಸರಣೆ ಮಾಡಬೇಕು.

ಈ ರೀತಿಯಾಗಿ ನಾವು ವ್ಯಕ್ತಿ ಜೀವನವನ್ನು ಕೂಲಂಕಶವಾಗಿ, ಸಮಗ್ರವಾಗಿ ಪರಾಮರ್ಶಿಸಿದ್ದೇವೆ. ಒಂದು ಸಮತೋಲದಲ್ಲಿ ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಗಳ ಉನ್ನತಿಗೆ ಗುರಿಯೊಂದನ್ನು ರೂಪಿಸಿದ್ದೇವೆ. ಮನುಷ್ಯನ ತೆರತೆರನ ಆಸೆ ಆಕಾಂಕ್ಷೆಗಳನ್ನು ತೃಪ್ತಿಪಡಿಸಲು ಪ್ರಯತ್ನಿಸಿದ್ದೇವೆ. ತೃಪ್ತಿ ಪಡಿಸುವ ಪ್ರಕ್ರಿಯೆಯಲ್ಲಿ ಎರಡು ವಿಭಿನ್ನ ಆಸೆ ಆಕಾಂಕ್ಷೆಗಳ ಮಧ್ಯೆ ಪರಸ್ಪರ ಘರ್ಷಣೆ ತಿಕ್ಕಾಟಗಳು ಸಂಭವಿಸದಂತೆ ನೋಡಿಕೊಂಡಿದ್ದೇವೆ. ಇದು ವ್ಯಕ್ತಿಯ ಚತುರ್ಗುಣ ಆಸೆ ಆಕಾಂಕ್ಷೆಗಳ ಸಮಗ್ರ ಚಿತ್ರ. ಪರಿಪೂರ್ಣ ಮಾನವ, ಸಮಗ್ರ ವ್ಯಕ್ತಿಯ ಈ ಪರಿಕಲ್ಪನೆ ನಮ್ಮ ಪಥವೂ ಹೌದು, ಗುರಿಯೂ ಹೌದು.

ಸಮಾಜದೊಂದಿಗೆ ಈ ಸಮಗ್ರ ಮಾನವನ ಸಂಬಂಧ ಏನಾಗಿರಬೇಕು? ಹೇಗಿರಬೇಕು? ಸಮಾಜದ ಹಿತಾಸಕ್ತಿಗಳನ್ನು ಹೇಗೆ ಪ್ರೋತ್ಸಾಹಿಸಬೇಕು? ಇದೆಲ್ಲವನ್ನೂ ನಾಳೆ ಚರ್ಚಿಸೋಣ.

೨೩ ಏಪ್ರಿಲ್ ೧೯೬೫

## ೩ ವ್ಯಕ್ತಿ – ಸಮಷ್ಟಿ ನಡುವೆ ಸಾಮರಸ್ಯ

ನಿನ್ನೆ ನಾವು ಮಾನವನನ್ನು ಒಬ್ಬ ವ್ಯಕ್ತಿಯನ್ನಾಗಿ ನೋಡಿದೆವು. ಒಬ್ಬ ವ್ಯಕ್ತಿಯ ವ್ಯಕ್ತಿತ್ವಕ್ಕೆ ವಿವಿಧ ಮಗ್ಗುಲುಗಳಿರುತ್ತವೆ. ವ್ಯಕ್ತಿಯ ಅಗತ್ಯಗಳೂ ಬೇರೆ ಬೇರೆ ಗುಣಮಟ್ಟದವಾಗಿರುತ್ತವೆ. ಬೇರೆ ಬೇರೆ ಹಂತಗಳಿರುತ್ತವೆ. ಸಮಗ್ರ ವ್ಯಕ್ತಿತ್ವದ ಬೆಳವಣಿಗೆಗಾಗಿ, ಎಲ್ಲ ಹಂತಗಳಲ್ಲೂ ಕ್ರಮಕ್ರಮವಾಗಿ ಏಕಕಾಲದಲ್ಲಿ ವ್ಯಕ್ತಿಯ ಅಗತ್ಯಗಳನ್ನು ಪೂರೈಸಲು ನಿರ್ದಿಷ್ಟ ಬಗೆಯ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಇವುಗಳನ್ನೂ ಪರಿಶೀಲಿಸಲಾಗಿದೆ. ಆದರೆ ಮಾನವ ಕೇವಲ ಒಬ್ಬ ವ್ಯಕ್ತಿಯಾಗಿ ಮಾತ್ರ ಇರುವುದಿಲ್ಲ. ದೇಹ, ಮನಸ್ಸು, ಬುದ್ಧಿಮತ್ತೆ, ಆತ್ಮ ಇವೆಲ್ಲವುಗಳನ್ನೊಳಗೊಂಡ ವ್ಯಕ್ತಿ ಕೇವಲ ಏಕವಚನದ "ನಾನು" ಮಾತ್ರ ಆಗಿರುವುದಿಲ್ಲ. ಬಹುವಚನದ "ನಾವು" ಎನ್ನುವುದರೊಟ್ಟಿಗೆ ವ್ಯಕ್ತಿಗೆ ಬಿಡಿಸಲಾಗದ ಬಂಧುತ್ವ ಇರುತ್ತದೆ. ಆದ್ದರಿಂದ ನಾವು ಸಮಾಜ ಅಥವಾ ಸಮುದಾಯ ಕುರಿತೂ ಯೋಚಿಸಬೇಕಾಗುತ್ತದೆ.

### ಸಮಾಜ ಕುರಿತ ಸಿದ್ಧಾಂತಗಳು

ಸಮಾಜ ಎನ್ನುವುದು ನೂರಾರು ಸಾವಿರಾರು ವ್ಯಕ್ತಿಗಳ ಗುಂಪು ಎನ್ನುವುದು ಸರಳ ಸತ್ಯ. ಆದರೆ ಸಮಾಜ ಹೇಗೆ ಅಸ್ತಿತ್ವಕ್ಕೆ ಬಂತು? ಈ ಬಗ್ಗೆ ತತ್ತ್ವಶಾಸ್ತ್ರಜ್ಞರು ಹಲವಾರು ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರತಿಪಾದಿಸಲಾದ ಅಭಿಪ್ರಾಯಗಳನ್ನು ಅಲ್ಲಿನ ರಾಜಕೀಯ ಸಾಮಾಜಿಕ ವ್ಯವಸ್ಥೆ ಆಧರಿಸಿದೆ. ಅವರ ಸಮಾಜದ ಪರಿಕಲ್ಪನೆಯನ್ನು ಸ್ಥೂಲವಾಗಿ ಹೀಗೆ ಸಂಕ್ಷೇಪಿಸಿ ಹೇಳಬಹುದು. 'ಸಮಾಜ ವ್ಯಕ್ತಿಗಳನ್ನೊಳಗೊಂಡ ಒಂದು ಸಮುದಾಯ. ವ್ಯಕ್ತಿಗಳು ತಮ್ಮೊಳಗೇ ಒಂದು ಒಪ್ಪಂದ ಮಾಡಿಕೊಳ್ಳುವುದರೊಂದಿಗೆ ಇದು ಅಸ್ತಿತ್ವಕ್ಕೆ ಬಂದಿದೆ' ಈ ಅಭಿಪ್ರಾಯವನ್ನು 'ಸಾಮಾಜಿಕ ಒಪ್ಪಂದ ತತ್ತ್ವ' ಎಂದು ಕರೆಯಲಾಗಿದೆ. ಈ ತತ್ತ್ವದಲ್ಲಿ ವ್ಯಕ್ತಿಗೆ ಹೆಚ್ಚಿನ ಪ್ರಾಮುಖ್ಯ ನೀಡಲಾಗಿದೆ. ಈ ಪಾಶ್ಚಾತ್ಯ ತತ್ತ್ವದಲ್ಲಿ ಕೆಲವು ಪ್ರಶ್ನೆಗಳನ್ನು ಎತ್ತಲಾಗಿದ್ದು ಆ ಪ್ರಶ್ನೆಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ" ವ್ಯಕ್ತಿ ಸಮಾಜವನ್ನು ರೂಪಿಸಿದ್ದಾದಲ್ಲಿ ಶೇಷಾತ್ಮಕ ಅಧಿಕಾರಗಳು ಯಾರ ಕೈಯಲ್ಲಿರುತ್ತದೆ? ವ್ಯಕ್ತಿಯ ಕೈಯ್ಯಲ್ಲೇ ಸಮಾಜದ ಕೈಯ್ಯಲ್ಲೇ? ವ್ಯಕ್ತಿಗೆ ಸಮಾಜದಲ್ಲಿ ಬದಲಾವಣೆ ಉಂಟು ಮಾಡುವ ಹಕ್ಕಿದೆಯೆ? ಸಮಾಜ ವ್ಯಕ್ತಿಯ ಮೇಲೆ ವಿವಿಧ ಬಗೆಯ



ನಿಯಂತ್ರಣಗಳನ್ನು ಕಟ್ಟುಪಾಡುಗಳನ್ನು ಹೇರಬಹುದೆ? ವ್ಯಕ್ತಿ ತನಗೆ ನಿಷ್ಠನಾಗಿರಬೇಕೆಂದು ಅದು ಆಗ್ರಹಪಡಿಸಬಹುದೆ? ಅಥವಾ ಈ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಸ್ವತಂತ್ರನೆ?

### ವ್ಯಕ್ತಿ –ಸಮಾಜ

ಈ ವಿಷಯದ ಬಗ್ಗೆ ಪಶ್ಚಿಮದಲ್ಲಿ ವಾದ ವಿವಾದಗಳಿವೆ. ಕೆಲವರು ಸಮಾಜದ ಪಾರಮ್ಯತೆಯನ್ನು ಪ್ರತಿಪಾದಿಸಿದರು. ಇಲ್ಲಿಂದ ಸಂಘರ್ಷ ಶುರುವಾಯಿತು. ವ್ಯಕ್ತಿಗಳು ಸೇರಿ ಸಮಾಜವನ್ನು ಅಸ್ತಿತ್ವಕ್ಕೆ ತಂದರೆಂಬ ಅಭಿಪ್ರಾಯ ಮೂಲಭೂತವಾಗಿ ಸರಿಯಲ್ಲ. ಸಮಾಜ ನೂರಾರು ಮಂದಿಯಿಂದ ಕೂಡಿದೆ ಎಂಬುದು ನಿಜ. ಆದಾಗ್ಯೂ ವ್ಯಕ್ತಿಗಳು ಇದನ್ನು ಸೃಷ್ಟಿಸಿಲ್ಲ ಅಥವಾ ಕೇವಲ ಹಲವಾರು ಮಂದಿ ಒಟ್ಟುಗೂಡಿದ್ದರ ಫಲವಾಗಿ ಸಮಾಜ ಅಸ್ತಿತ್ವಕ್ಕೆ ಬಂದಿಲ್ಲ.

ನಮ್ಮ ಅಭಿಪ್ರಾಯದಲ್ಲಿ ಸಮಾಜ ಸ್ವಯಂಭು. ವ್ಯಕ್ತಿಯಂತೆ ಸಮಾಜವೂ ಸುಸಂಯೋಜಿತವಾಗಿ ಅಸ್ತಿತ್ವಕ್ಕೆ ಬರುತ್ತದೆ. ಜನ ಸಮಾಜವನ್ನು ಸೃಷ್ಟಿಸಿಲ್ಲ. ಸಮಾಜ ಎನ್ನುವುದು ಒಂದು ಕ್ಲಬ್ ಅಥವಾ ಜಾಯಿಂಟ್ ಸ್ಟಾಕ್ ಕಂಪನಿಯಲ್ಲ ಅಥವಾ ನೋಂದಾಯಿತ ಸಹಕಾರ ಸಂಘವೂ ಅಲ್ಲ. ವಾಸ್ತವವಾಗಿ ಸಮಾಜಕ್ಕೆ ಅದರದೇ ಆದ ಅಸ್ತಿತ್ವ ಇದೆ. ಅದು ಸ್ವಯಂಭು. ಅದಕ್ಕೆ ಅದರದೇ ಆದ ಜೀವ ಇದೆ. ವ್ಯಕ್ತಿಯಂತೆ ಅದು ಸಾರ್ವಭೌಮವಾದದ್ದು. ಅದೊಂದು ಸಂಯೋಜಿತ ಅಸ್ತಿತ್ವ. ಸಮಾಜ ಎನ್ನುವುದು ಏಕಪಕ್ಷೀಯ ಸಂಘ ಎನ್ನುವ ವಾದವನ್ನು ನಾವು ಅಂಗೀಕರಿಸಿಲ್ಲ. ಸಮಾಜಕ್ಕೆ ಅದರದೇ ಆದ ಜೀವನವಿದೆ. ಸಮಾಜಕ್ಕೂ ಅಂಗಾಂಗಳಿವೆ. ಮನಸ್ಸಿದೆ, ಬುದ್ಧಿಮತ್ತೆ ಇದೆ ಮತ್ತು ಆತ್ಮ ಇದೆ. ಪಾಶ್ಚಾತ್ಯ ಮನೋವಿಜ್ಞಾನಿಗಳು ಕೆಲವರು ಈಗೀಗ ಇದನ್ನು ಒಪ್ಪಿಕೊಳ್ಳುತ್ತಿದ್ದಾರೆ. ಮೆಕ್ ಡೊಗಾಲ್ 'ಸಮುದಾಯ ಮನೋಭಾವ' ಎನ್ನುವ ಹೊಸ ಮನೋವೈಜ್ಞಾನಿಕ ಸಿದ್ಧಾಂತವೊಂದನ್ನು ಮಂಡಿಸಿದ್ದಾರೆ. ಸಮುದಾಯಕ್ಕೆ ಅದರದೇ ಆದ ಮನಸ್ಸಿದೆ. ಮನೋವೃತ್ತಿಯಿದೆ. ಅದರದೇ ಆದ ಮನಶ್ಶಾಸ್ತ್ರವಿದೆ. ಅದು ತನ್ನದೇ ಆದ ಆಲೋಚನಾ ಕ್ರಮವನ್ನು ಹೊಂದಿದೆ. ಕ್ರಿಯೆಯನ್ನು ಹೊಂದಿದೆ ಎಂಬುದನ್ನು ಈ ಮನೋವಿಜ್ಞಾನಿ ಒಪ್ಪಿದ್ದಾರೆ.

ಸಮುದಾಯಕ್ಕೆ ಅದರದೇ ಆದ ಭಾವನೆಗಳಿರುತ್ತವೆ. ಅವು ವ್ಯಕ್ತಿಯೊಬ್ಬನ ಭಾವನೆಗಳಂತಲ್ಲ. ವ್ಯಕ್ತಿಗಳ ಅನ್ನಿಸಿಕೆಗಳನ್ನು ಗಣಿತದಂತೆ ಸಂಕಲಿಸಿದರೆ ಅದೇ ಸಮುದಾಯದ ಭಾವನೆಗಳಾಗುತ್ತದೆ ಎಂದು ಹೇಳಲಾಗದು. ಸಮುದಾಯದ ಶಕ್ತಿಯು ವ್ಯಕ್ತಿಗಳ ಸಂಕಲಿತ ಶಕ್ತಿಯಲ್ಲ; ಸಮುದಾಯದ ಬುದ್ಧಿಮತ್ತೆ, ಭಾವನೆಗಳು, ಬಲಾಬಲಗಳು, ಶಕ್ತಿಗಳು ಇವೆಲ್ಲವೂ ವ್ಯಕ್ತಿಗಿಂತ ಮೂಲಭೂತವಾಗಿ ಭಿನ್ನವಾದವು. ಆದ್ದರಿಂದಲೇ ಕೆಲವೊಮ್ಮೆ ದೇಹದಾರ್ಢ್ಯತೆಯಲ್ಲಿ ಬಲಹೀನನಾದ ದುರ್ಬಲ

ವ್ಯಕ್ತಿಯೂ ಸಮಾಜದ ವೀರಾಧಿವೀರನಾಗಿ ತೋರುತ್ತಾನೆ. ಕೆಲವು ಸಲ ವ್ಯಕ್ತಿಗಳು ತಮ್ಮ ಸ್ವಂತ ಅಪಮಾನವನ್ನು ಸಹಿಸಿಕೊಳ್ಳುತ್ತಾರೆ. ಆದರೆ ತನ್ನ ಸಮಾಜಕ್ಕಾದ ಅಪಮಾನವನ್ನು ಸಹಿಸಿಕೊಳ್ಳಲಾರ. ಒಬ್ಬ ವ್ಯಕ್ತಿ ಯಾರಾದರೂ ತನ್ನ ಬಯ್ದರೆ ಸುಮ್ಮನಿರಬಹುದು ಆದರೆ ತಾನಿರುವ ಸಮಾಜವನ್ನು ಬಯ್ದರೆ ಸಹನೆಯನ್ನು ಕಳೆದುಕೊಳ್ಳುತ್ತಾನೆ. ಖಾಸಗಿ ಜೀವನದಲ್ಲಿ ಅತ್ಯಂತ ಸಚ್ಚಾರಿತ್ರ್ಯನಾದವನು, ಸನ್ನಡತೆಯುಳ್ಳವನು ಸಮಾಜದ ನಿರ್ಲಜ್ಜ ಸದಸ್ಯನಾಗಿರಲು ಸಾಧ್ಯ. ಇದು ತುಂಬ ಮುಖ್ಯವಾದ ಅಂಶ.

ವ್ಯಕ್ತಿ ಮತ್ತು ಸಮಾಜದ ಆಲೋಚನಾ ಕ್ರಮಗಳು, ಆಲೋಚನಾವಿಧಿಗಳು ಯಾವ ಕಾಲಕ್ಕೂ ಒಂದೇ ಆಗಿರುವುದಿಲ್ಲ ಎಂಬುದು ಮೇಲಿನ ಸಂದರ್ಭದ ವಿಶ್ಲೇಷಣೆಯಿಂದ ಗೊತ್ತಾಗುತ್ತದೆ. ವ್ಯಕ್ತಿ ಮತ್ತು ಸಮಾಜದ ನಡುವೆ ಲೆಕ್ಕಾಚಾರದ ಸಂಬಂಧ ಇರುವುದಿಲ್ಲ. ಸಾವಿರ ಜನ ಒಂದು ಕಡೆ ಸೇರಿದರೆ ಇವರೆಲ್ಲರೂ ಒಳ್ಳೆಯದನ್ನೇ ಯೋಚಿಸುತ್ತಿರುತ್ತಾರೆ ಎಂದು ಹೇಳಲಾಗದು.

**ಸಮಷ್ಟಿ ಮನೋಭಾವ**

ಸರಾಸರಿ ಭಾರತೀಯ ವಿದ್ಯಾರ್ಥಿ ಮೃದು ಸ್ವಭಾವದ ಸೌಮ್ಯ ಯುವಕ. ಇಪ್ಪತ್ತು ವರ್ಷದ ಸರಾಸರಿ ವಿದ್ಯಾರ್ಥಿಗೆ ಹೋಲಿಸಿದಲ್ಲಿ ಇಂದಿನ ವಿದ್ಯಾರ್ಥಿ ಎಲ್ಲ ರೀತಿಯಲ್ಲೂ ದುರ್ಬಲ, ಮೃದು. ಆದರೆ ಇಂಥ ನೂರಾರು ವಿದ್ಯಾರ್ಥಿಗಳು ಒಟ್ಟುಗೂಡಿದಾಗ ಪರಿಸ್ಥಿತಿ ಬೇರೆ ತೆರನದ್ದೇ ಆಗುತ್ತದೆ. ಅವರು ಎಲ್ಲ ಬಗೆಯ ಬೇಜವಾಬ್ದಾರಿ ಕಾರ್ಯಗಳಲ್ಲೂ ತೊಡಗುವರು. ಹೀಗೆ ವಿದ್ಯಾರ್ಥಿ ಒಬ್ಬನೇ ಇದ್ದಾಗ ಶಿಸ್ತಿನ ಸಿಪಾಯಿಯಂತೆ ಕಾಣುತ್ತಾನೆ. ಆದರೆ ಹಲವಾರು ವಿದ್ಯಾರ್ಥಿಗಳು ಒಂದೆಡೆ ಸೇರಿದಾಗ ಆ ಶಿಸ್ತು ಹದ್ದು ಮೀರುತ್ತದೆ. ಇಂಥದೊಂದು ಬದಲಾವಣೆ ಹೇಗೆ ಉಂಟಾಗುತ್ತದೆ. ಎಂಬುದನ್ನು ನಾವು ಯೋಚಿಸಬೇಕಾಗುತ್ತದೆ. ಈ ಮನೋಭಾವವನ್ನು ಸಮೂಹ ಮನೋಭಾವ ಎಂದು ಕರೆಯಲಾಗುತ್ತದೆ. ಸಮೂಹ ಮನೋಭಾವ ಏಕವ್ಯಕ್ತಿ ಮನೋಭಾವಕ್ಕಿಂತ ವಿಶಿಷ್ಟವಾದದ್ದು. ಈ ಸಮೂಹ ಮನೋಭಾವ ಎನ್ನುವುದು ಮನಸ್ಸಿನ ಒಂದು ಸಣ್ಣ ಅಂಶ ಅಷ್ಟೆ. ಒಂದಷ್ಟು ಜನರ ಗುಂಪು, ಸ್ವಲ್ಪ ಸಮಯ ಎಲ್ಲಾದರೂ ಸೇರಿದಾಗ ಕಂಡುಬರುವ ಗುಂಪಿನ ಸಂಘಟಿತ ಮನೋಭಾವವೇ ಗುಂಪು ಮನೋಭಾವ. ಆದರೆ ಸಮಾಜ ಮತ್ತು ಸಾಮಾಜಿಕ ಮನೋಭಾವ ಅಲ್ಪಾವಧಿಯದಲ್ಲ. ಅದು ದೀರ್ಘಕಾಲದ್ದು. ಜನರು ಐತಿಹಾಸಿಕ ಸಂಪ್ರದಾಯ ಮತ್ತು ಸಂಬಂಧಗಳ ಅನುಸಾರವಾಗಿ ಒಟ್ಟಿಗೆ ಬದುಕಲಾರಂಭಿಸಿದರೆ, ಅವರೆಲ್ಲ ನಿರಂತರವಾದ ವ್ಯವಹಾರಗಳಿಂದಾಗಿ ಒಂದೇ ರೀತಿ ಯೋಚಿಸಲಾರಂಭಿಸುತ್ತಾರೆ. ಒಂದೇ ರೀತಿಯ ಪದ್ಧತಿಗಳನ್ನು, ಆಚಾರಗಳನ್ನು



ಅನುಸರಿಸುತ್ತಾರೆ ಎನ್ನುವ ಸಿದ್ಧಾಂತವೊಂದಿದೆ. ಒಟ್ಟಿಗೆ ಬದುಕುವುದರಿಂದ ಸ್ವಲ್ಪಮಟ್ಟಿಗೆ ಏಕರೂಪತೆ, ಏಕಪ್ರಕಾರತೆಗಳು ಉಂಟಾಗುತ್ತವೆ ಎನ್ನುವುದು ನಿಜ. ಒಂದೇ ರೀತಿಯ ಇಷ್ಟ–ಅನಿಷ್ಟಗಳಿಂದಾಗಿ ಇಬ್ಬರ ನಡುವೆ ಸ್ನೇಹ ಸಂಬಂಧವುಂಟಾಗುತ್ತದೆ. ಆದಾಗ್ಯೂ ಕೇವಲ ಕೂಡುಬಾಳುವೆ ಮಾಡುವುದರಿಂದಲೇ ಒಂದು ರಾಷ್ಟ್ರ ಅಥವಾ ಒಂದು ಸಮಾಜ ಹುಟ್ಟುವುದಿಲ್ಲ.

**ಪ್ರಬಲ ರಾಷ್ಟ್ರಗಳು ಪ್ರಾಚೀನಾವಶೇಷಗಳಾದದ್ದು ಹೇಗೆ?**

ಪ್ರಾಚೀನ ರಾಷ್ಟ್ರಗಳು ಕೆಲವು ಕಣ್ಮರೆಯಾಗಿವೆ ಎಂಬುದು ನಮ್ಮ ತಿಳುವಳಿಕೆ. ಪುರಾತನ ಗ್ರೀಕ್ ಅವಸಾನಗೊಂಡಿತ್ತು. ಆದೇ ರೀತಿ ಈಜಿಪ್ಟ್ ನಾಗರಿಕತೆ ಮಾಯವಾಯಿತು. ಬೆಬಿಲ್ಲೋನಿಯಾ ಸಿರಿಯಾ ನಾಗರಿಕತೆಗಳು ಈಗ ಚರಿತ್ರೆಯ ಪುಟಗಳನ್ನು ಸೇರಿವೆ. ಸಿಂಥಿಯನ್ನರು ನಾಶವಾದರು. ಆ ದೇಶದ ಜನರು ಯಾವಾಗಲಾದರೂ ಸಹಬಾಳ್ವೆ ನಿಲ್ಲಿಸಿದ್ದರೆ? ಆದರೆ ವಾಸ್ತವದ ಸಂಗತಿ ಎಂದರೆ ಆ ಜನರ ನಡುವಣ ಭಿನ್ನಾಭಿಪ್ರಾಯಗಳೇ ಆ ರಾಷ್ಟ್ರಗಳ ಪತನಕ್ಕೆ ಕಾರಣ.

ಗತಕಾಲದ ಗ್ರೀಸ್, ಅಲೆಕ್ಸಾಂಡರ್, ಹೆರೋಡಟಸ್, ಯೂಲಿಸಿಸ್, ಅರಿಸ್ಟಾಟಲ್, ಸಾಕ್ರಟೀಸ್, ಪ್ಲೇಟೋ ಮೊದಲಾದ ಮಹಾನುಭಾವರನ್ನು ಕೊಟ್ಟಿತು. ಇವತ್ತಿನ ಗ್ರೀಸ್‌ನಲ್ಲಿ ಅದೇ ವಂಶಸ್ಥರ, ಕುಲೀನರ ಸಂತಾನವಿದೆ. ಅವರ ವಂಶವಾಹಿಗೆ ಅಡೆತಡೆ ಇರಲಿಲ್ಲ. ಏಕೆಂದರೆ ಗ್ರೀಸ್ ಯಾವತ್ತೂ ಮಾನವ ಜನಾಂಗರಹಿತ ರಾಷ್ಟ್ರವಾಗಿರಲಿಲ್ಲ. ಗ್ರೀಸ್‌ನಲ್ಲಿ ಹೊಸ ಜನಾಂಗದ ಬಾಳ್ವೆ ಶುರುವಾದದ್ದು ಯಾವಾಗ? ಇಂಥಾದ್ದು ಏನೂ ಅಲ್ಲಿ ನಡೆಯಲೇ ಇಲ್ಲ. ಪುರಾತನ ಗ್ರೀಸ್‌ನ ತಂದೆ–ಮಕ್ಕಳ ಬಾಂಧವ್ಯ ಅಬಾಧಿತವಾಗಿ ನಡೆದಿತ್ತು. ಅದಕ್ಕೆ ಆತಂಕಗಳಿರಲಿಲ್ಲ. ಇವತ್ತಿನ ಗ್ರೀಕರ ಪೂರ್ವಿಕರು ೨೫೦ ರಿಂದ ೫೦೦ ತಲೆಮಾರುಗಳಷ್ಟು ಹಳಬರು. ಇಷ್ಟೆಲ್ಲ ಆದಾಗ್ಯೂ ಇವತ್ತು ಗ್ರೀಸ್ ರಾಷ್ಟ್ರ ಅಸ್ತಿತ್ವದಲ್ಲಿಲ್ಲ. ಅದೇ ರೀತಿ ಈಜಿಪ್ಟ್ ರಾಷ್ಟ್ರವೂ. ಆ ರಾಷ್ಟ್ರಗಳ ಜಾಗದಲ್ಲಿ ಹೊಸ ರಾಷ್ಟ್ರಗಳು ತಲೆಎತ್ತಿವೆ. ಇದು ಹೇಗಾಯಿತು? ರಾಷ್ಟ್ರಗಳು ಕೇವಲ ಜನರ ಕೂಡುಬಾಳ್ವೆಯಿಂದ ಹುಟ್ಟಲಿಲ್ಲ. ಇದೊಂದು ಸರಳವಾದ, ನಿರ್ವಿವಾದಾತ್ಮಕವಾದ ಸಂಗತಿ. ಅವನತಿ ಹೊಂದಿದ ಈ ರಾಷ್ಟ್ರಗಳ ಯಾವತ್ತೂ ಜನರ ಸಾಮಾಜಿಕ –ಸಾಮುದಾಯಿಕ ಸಹಬಾಳ್ವೆ ಕೊನೆಗೊಂಡಿರಲಿಲ್ಲ. ಅಂಥ ಕಾಲವೇ ಇರಲಿಲ್ಲ. ಇಸ್ರೇಲಿನ ಯೆಹೂದ್ಯರು ಶತಮಾನಗಳ ಕಾಲ ದೂರದೂರದ ಪ್ರದೇಶಗಳಿಗೆ ಚದುರಿಹೋಗಿ ಬೇರೆಯವರೊಟ್ಟಿಗೆ ಬಾಳ್ವೆ ಮಾಡಿದರು. ಆದಾಗ್ಯೂ ಅವರು ತಾವು ಬಾಳ್ವೆ ಮಾಡಿದ ಸಮಾಜಗಳಲ್ಲಿ ತಮ್ಮ ಅಸ್ಮಿತೆಯನ್ನು ಕಳೆದುಕೊಳ್ಳಲಿಲ್ಲ. ಇದರಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ರಾಷ್ಟ್ರೀಯ ಭಾವನೆಯ ಮೂಲ ಬಾಳ್ವೆ ಮಾಡಿದ ಚೂರು ನೆಲದಲ್ಲಿಲ್ಲ. ಅದು ಬೇರೆಯದೇ ಆಗಿದೆ.

**ರಾಷ್ಟ್ರ ಎಂದರೇನು?**

ರಾಷ್ಟ್ರೀಯತೆಯ ಮೂಲ ಜನತೆಯ ಮುಂದಿರುವ ಧ್ಯೇಯದಲ್ಲಿದೆ. ಗುರಿಯಲ್ಲಿದೆ. ಒಂದು ಧ್ಯೇಯ, ಒಂದು ಆದರ್ಶ, ಒಂದು ಗುರಿ, ಒಂದು ಕಾರ್ಯಭಾರ, ಒಂದು ಜೀವಿತೋದ್ದೇಶ ಇವುಗಳನ್ನಿಟ್ಟು ಒಂದಷ್ಟು ಜನ ಒಂದು ಪ್ರದೇಶವನ್ನು ತಾಯ್ನಾಡೆಂದು ಪರಿಗಣಿಸಿ ಬಾಳ್ವೆ ಮಾಡಲಿಚ್ಛಿಸಿದಾಗ ಇಂಥ ಜನಸಮುದಾಯವೇ ರಾಷ್ಟ್ರವಾಗುತ್ತದೆ. ಆದರ್ಶ ಅಥವಾ ತಾಯ್ನಾಡು ಇವೆರಡರಲ್ಲಿ ಯಾವುದೊಂದು ಇಲ್ಲವಾದರೂ ಅದು ರಾಷ್ಟ್ರವಲ್ಲ. ದೇಹದಲ್ಲಿ ಆತ್ಮ ಇದೆ. ವ್ಯಕ್ತಿಯ ಮೂಲಗುಣ ಆತ್ಮ. ಆತ್ಮ ದೇಹದೊಂದಿಗೆ ಸಂಬಂಧ ಕಳಚಿಕೊಂಡ ಕೂಡಲೇ ವ್ಯಕ್ತಿ ಮರಣ ಹೊಂದುವನೆಂದು ಹೇಳಲಾಗಿದೆ. ಇದೇ ರೀತಿ ಧ್ಯೇಯ, ಆದರ್ಶ, ಮೂಲಭೂತ ತತ್ವಗಳು ಇವೇ ರಾಷ್ಟ್ರದ ಆತ್ಮ. ಮನುಷ್ಯ ಮತ್ತೆ ಮತ್ತೆ ಜನ್ಮವೆತ್ತುತ್ತಾನಾದರೂ ಪುನರ್ಜನ್ಮ ಪಡೆದವನು ಬೇರೆಯೇ ಆದ ವ್ಯಕ್ತಿ. ಅವರನ್ನು ಪ್ರತ್ಯೇಕ ವ್ಯಕ್ತಿಗಳೆಂದೇ ಪರಿಗಣಿಸಲಾಗುತ್ತದೆ. ಆದೇ ಆತ್ಮ ಒಂದು ದೇಹವನ್ನು ತ್ಯಜಿಸಿ ಇನ್ನೊಂದನ್ನು ಪ್ರವೇಶಿಸುತ್ತದೆ. ಆದರ ಹಿಂದಿನ ಮತ್ತು ನಂತರದ ಜನ್ಮಗಳ ವ್ಯಕ್ತಿಗಳು ಬೇರೆ ಬೇರೆ ವ್ಯಕ್ತಿಗಳೇ. ವ್ಯಕ್ತಿಯ ಅಂತ್ಯವೆಂದರೆ ಆತ್ಮ ಅವನಿಂದ ನಿರ್ಗಮಿಸಿತು ಎಂದೇ ಅರ್ಥ. ದೇಹದ ಇತರ ಅಂಗಗಳೂ ಬದಲಾವಣೆ ಹೊಂದುತ್ತವೆ. ಬಾಲ್ಯದಿಂದ ವೃದ್ಧಾಪ್ಯದವರೆಗೆ ಎಷ್ಟೊಂದು ತೀವ್ರ ಬದಲಾವಣೆಗಳಾಗುತ್ತವೆ. ಕೆಲವು ವರ್ಷಗಳ ಅವಧಿಯಲ್ಲಿ ನಮ್ಮ ದೇಹದ ಜೀವಕಣಗಳ ಜಾಗದಲ್ಲಿ ಹೊಸ ಜೀವಕಣಗಳು ಹುಟ್ಟಿಕೊಳ್ಳುತ್ತವೆ ಎಂದು ಜೀವಶಾಸ್ತ್ರಜ್ಞರು ಹೇಳುತ್ತಾರೆ. ವಿವಿಧ ಬಗೆಯ ಬದಲಾವಣೆಗಳಾಗುತ್ತವೆ. ಆದರೆ ಆತ್ಮ ಅಬಾಧಿತವಾಗಿರುತ್ತದೆಯಾದ್ದರಿಂದ ದೇಹಕ್ಕೆ ಏನೂ ತೊಂದರೆಯಾಗುವುದಿಲ್ಲ. ಈ ಒಂದು ಸಂಬಂಧವನ್ನು ತರ್ಕಶಾಸ್ತ್ರದಲ್ಲಿ "ತಾದಾತ್ಮ್ಯ ನಿಯಮ" ಎಂದು ಕರೆಯಲಾಗಿದೆ. ಅನನ್ಯತೆ, ಅಸ್ಮಿತೆಗಳಿಂದಾಗಿಯೇ ನಾವು ವ್ಯಕ್ತಿಯೊಬ್ಬನ ಅಸ್ತಿತ್ವವನ್ನು ಅದರ ಸಾತತ್ಯವನ್ನು ಮಾನ್ಯ ಮಾಡುತ್ತೇವೆ. ಕೆಲವೊಮ್ಮೆ ಇದಕ್ಕೆ ಕ್ಷೌರಿಕನ ಕತ್ತಿಯ ಉದಾಹರಣೆ ಕೊಡಲಾಗುತ್ತದೆ.

ಒಮ್ಮೆ ಕ್ಷೌರಿಕನೊಬ್ಬ ತನ್ನ ಕ್ಷೌರದ ಕತ್ತಿ ಅರವತ್ತು ವರ್ಷಗಳಷ್ಟು ಹಳೆಯದೆಂದು ಗಿರಾಕಿಯ ಮುಂದೆ ಜಂಬ ಕೊಚ್ಚಿಕೊಂಡ. ಅವನ ತಂದೆಯೂ ಇದೇ ಕ್ಷೌರಕತ್ತಿಯನ್ನು ಬಳಸುತ್ತಿದ್ದರಂತೆ. ಗಿರಾಕಿಗೆ ಆಶ್ಚರ್ಯ. ವಿಶೇಷವಾಗಿ ಕತ್ತಿಯ ಹಿಡಿ ಫಳಫಳ ಹೊಳೆಯುತ್ತಿದ್ದು ನೋಡಲಿಕ್ಕೆ ಹೊಸದರಂತೆ ಕಾಣುತ್ತಿದ್ದುದರಿಂದ ಗಿರಾಕಿ ಅಚ್ಚರಿಗೊಂಡಿದ್ದ "ಹಿಡಿಕೆ ಇನ್ನೂ ಫಳಫಳ ಹೊಳೆಯುತ್ತಿರುವುದರ ಗುಟ್ಟೇನು? ಆ ಹೊಳಪನ್ನು ಅರವತ್ತು ವರ್ಷಗಳಿಂದ ಹೇಗೆ ಉಳಿಸಿಕೊಂಡು ಬಂದಿದ್ದೀಯ? ಎನ್ನುವುದು ಗಿರಾಕಿಯ ಪ್ರಶ್ನೆ. ಕ್ಷೌರಿಕನಿಗೆ ಈ ಪ್ರಶ್ನೆ ಕೇಳಿ ನಗು ಬಂತು." "ಅರವತ್ತು ವರ್ಷಗಳ ಕಾಲ ಹೊಚ್ಚ ಹೊಸದರಂತೆ ಹೊಳಪನ್ನು ಉಳಿಸಿಕೊಳ್ಳುವುದು



ಸಾಧ್ಯವೆ? ಆರು ತಿಂಗಳ ಹಿಂದೆಯಷ್ಟೆ ಹಿಡಿಯನ್ನು ಬದಲಾಯಿಸಿದೆ." ಎಂದ ಕ್ಷೌರಿಕ. ಹಾಗಿದ್ದಲ್ಲಿ ಕತ್ತಿಯ ಅಲಗು ಎಷ್ಟು ಹಳೆಯದು ಎಂದು ಗಿರಾಕಿಯ ಮರುಪ್ರಶ್ನೆ. "ಮೂರು ವರ್ಷಗಳಷ್ಟು" ಎಂದು ಕ್ಷೌರಿಕನ ಉತ್ತರ. ಸಂಕ್ಷಿಪ್ತವಾಗಿ ಹೇಳುವುದಾದರೆ ಹಿಡಿಯನ್ನು ಬದಲಾಯಿಸಲಾಗಿತ್ತು. ಅಲುಗನ್ನು ಬದಲಾಯಿಸಲಾಗಿತ್ತು. ಆದರೂ ಕ್ಷೌರದ ಕತ್ತಿ ಹಳೆಯದೇ. ಅದರ ಅನನ್ಯತೆಗೆ ಏನೂ ಕುಂದು ಬಂದಿರಲಿಲ್ಲ. ಅಂತೆಯೇ ರಾಷ್ಟ್ರಕ್ಕೂ ಒಂದು ಆತ್ಮ ಇದೆ. ಅದಕ್ಕೊಂದು ತಾಂತ್ರಿಕ ಹೆಸರೂ ಇದೆ. ಜನಸಂಘ ಅಂಗೀಕರಿಸಿರುವ "ತತ್ವಗಳು ಮತ್ತು ನೀತಿಗಳಲ್ಲಿ" ಆ ಹೆಸರನ್ನು ನಮೂದಿಸಲಾಗಿದೆ. ಚಿತಿ ಎನ್ನುವುದು ಆ ಹೆಸರು. ಮೆಕ್ ಡೊಗಾಲ್ ಪ್ರಕಾರ ಸಮುದಾಯವೊಂದರ ಜನ್ಮಸಿದ್ಧ ಸ್ವಭಾವ ಅದು. ಪ್ರತಿಯೊಂದು ಜನ ಸಮುದಾಯಕ್ಕೂ ಅದರದೇ ಆದ ಜನ್ಮಸಿದ್ಧ ಸ್ವಭಾವ ಇರುತ್ತದೆ. ಆದೇ ರೀತಿ ಪ್ರತಿಯೊಂದು ಸಮಾಜವೂ ಜನ್ಮಸಿದ್ಧ ಸ್ವಭಾವವನ್ನು ಹೊಂದಿರುತ್ತದೆ. ಅದು ಚಾರಿತ್ರಿಕ ಪರಿಸ್ಥಿತಿಯ ಫಲವಲ್ಲ.

ಮಾನವ ಆತ್ಮದೊಂದಿಗೆ ಹುಟ್ಟುತ್ತಾನೆ. ಮಾನವನ ವ್ಯಕ್ತಿತ್ವ, ಆತ್ಮ, ಸ್ವಭಾವ–ನಡಾವಳಿ ಎಲ್ಲವೂ ಒಂದಕ್ಕಿಂತ ಬೇರೆಯಾದವು. ವಿಶಿಷ್ಟವಾದವು. ಕ್ರಿಯೆ, ಆಲೋಚನೆ, ವರ್ಚಸ್ಸು, ಪ್ರಭಾವ ಇವೆಲ್ಲದರ ಸಂಘಟಿತ ಪರಿಣಾಮವಾಗಿ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಆದರೆ ಆತ್ಮ ಚರಿತ್ರೆಯಿಂದ ಅಬಾಧಿತ. ಅಂತೆಯೇ ರಾಷ್ಟ್ರೀಯ ಸಂಸ್ಕೃತಿ ಸತತವಾಗಿ ಮಾರ್ಪಾಟು ಹೊಂದುತ್ತಿರುತ್ತದೆ. ಚಾರಿತ್ರಿಕ ಪರಿಸ್ಥಿತಿ ಮತ್ತು ಕಾರಣಗಳಿಂದಾಗಿ ವಿಸ್ತಾರಗೊಳ್ಳುತ್ತಾ ಹೋಗುತ್ತದೆ. ಸಮಾಜದ ಚರಿತ್ರೆ, ಸಂಬಂಧಗಳು, ಪ್ರಯತ್ನಗಳು ಎಲ್ಲವನ್ನೂ ಒಳಗೊಂಡ ಸಂಸ್ಕೃತಿ ಶ್ರೇಷ್ಠವಾದದ್ದು. ಪ್ರಶಂಸನೀಯವಾದು ಇವೆಲ್ಲ ಚಿತಿಯಲ್ಲಿ ಸೇರುವುದಿಲ್ಲ. ಚಿತಿ ಮೂಲಭೂತವಾದದ್ದು, ಅದು ಶುರುವಿನಿಂದಲೂ ಇರುವ ರಾಷ್ಟ್ರದ ಕೇಂದ್ರ. ರಾಷ್ಟ್ರ ಸಾಂಸ್ಕೃತಿಕವಾಗಿ ಯಾವ ದಿಕ್ಕಿನಲ್ಲಿ ಸಾಗಬೇಕು ಎನ್ನುವುದನ್ನು ಚಿತಿ ನಿರ್ಧರಿಸುತ್ತದೆ. ಚಿತಿ ಪ್ರಕಾರ ಅನುಮೋದಿಸಲಾದುದೆಲ್ಲವೂ ಸಂಸ್ಕೃತಿಯಲ್ಲಿರುತ್ತದೆ.

**ಚಿತಿ–ಸಂಸ್ಕೃತಿ–ಧರ್ಮ**

ಈಗ ಮಹಾಭಾರತದ ಕಥೆಯೊಂದನ್ನು ಉದಾಹರಣೆಯಾಗಿ ನೋಡೋಣ. ಕೌರವರು ಸೋತಿದ್ದಾರೆ. ಪಾಂಡವರು ಗೆದ್ದಿದ್ದಾರೆ. ಪಾಂಡವರ ನಡತೆಯನ್ನು ನಾವು ಧರ್ಮ ಎಂದೇಕೆ ಪರಿಗಣಿಸುತ್ತೇವೆ? ಅಥವಾ ಕುರುಕ್ಷೇತ್ರ ಯುದ್ಧವನ್ನು ಸಾಮ್ರಾಜ್ಯಕ್ಕಾಗಿ ನಡೆದ ಯುದ್ಧವೆಂದು ನಾವೇಕೆ ಪರಿಗಣಿಸುವುದಿಲ್ಲ? ಯುಧಿಷ್ಠಿರನ ಬಗ್ಗೆ ಪ್ರಶಂಸೆಯಾಗಲೀ ದ್ರೌಪದಿಗಾದ ಅಪಮಾನವನ್ನಾಗಲಿ ನಾವು ರಾಜಕೀಯ ಕಾರಣಗಳ ಫಲವೆಂದು ನಾವು ಪರಿಗಣಿಸುವುದಿಲ್ಲ. ಕೃಷ್ಣ ಸೋದರಮಾವ ಕಂಸನ

ವಧೆಮಾಡಿದ. ಕಂಸ ಆ ಕಾಲದ ಪ್ರತಿಷ್ಠಿತ ಮಹಾರಾಜನಾಗಿದ್ದ. ಇದನ್ನು ನಾವು ಬಂಡಾಯ ಎಂದು ಕರೆಯುವುದಿಲ್ಲ. ಕೃಷ್ಣನನ್ನು ದೇವರ ಅವತಾರವೆಂದೂ ಕಂಸನನ್ನು ಅಸುರನೆಂದೂ ಪರಿಗಣಿಸಿದ್ದೇವೆ.

ರಾಮ ಲಂಕೆಯ ಮೇಲೆ ಆಕ್ರಮಣ ನಡೆಸಿದಾಗ ರಾವಣನ ತಮ್ಮ ವಿಭೀಷಣ ಅವನಿಗೆ ಸಹಾಯ ಮಾಡಿದ. ವಿಭೀಷಣನ ಈ ವರ್ತನೆಯನ್ನು ನಾವು ದ್ರೋಹವೆಂದು ಪರಿಗಣಿಸುವುದಿಲ್ಲ. ಸದ್ವರ್ತನೆ, ಮಾದರಿಯ ವರ್ತನೆ ಎಂದು ಪ್ರಶಂಸಿಸುತ್ತೇವೆ. ಅವನು ತನ್ನ ಅಣ್ಣನಿಗೆ, ದೊರೆಗೆ ದ್ರೋಹ ಬಗೆದಿದ್ದ. ನಂತರ ಜಯಚಂದನೂ ಹೀಗೇ ಮಾಡಿದ. ಜಯಚಂದನನ್ನು ವಿಶ್ವಾಸಘಾತುಕ ಎಂದು ಕರೆಯಲಾಯಿತು. ಆದರೆ ವಿಭೀಷಣನಿಗೆ ನಾವು ವಿಶ್ವಾಸಘಾತುಕ ಎಂದು ಹಣೆಪಟ್ಟಿ ಹಚ್ಚಲಿಲ್ಲ. ವಿಭೀಷಣನ ಪ್ರಶಂಸೆ ಮಾಡಿದೆವು. ರಾವಣನ ಕೃತ್ಯಗಳಿಗೆ ಅಸಮ್ಮತಿ ಸೂಚಿಸಿದೆವು. ಹೀಗೇಕೆ? ಇದರ ಹಿಂದಿನ ಕಾರಣ ರಾಜಕೀಯವಲ್ಲ.

ಒಂದು ಕ್ರಿಯೆಯ ಗುಣಾವಗುಣಗಳನ್ನು ಕುಂದುಕೊರತೆಗಳನ್ನು ನಿರ್ಧರಿಸುವುದಕ್ಕೆ ಏನಾದರೂ ಒಂದು ಮಾನದಂಡ, ಪ್ರಮಾಣಕವಿದ್ದಲ್ಲಿ, ಅದು ಆತ್ಮ. ನಮ್ಮ ಪ್ರಕೃತಿ ಹಾಗೂ ಆತ್ಮಕ್ಕೆ ಸಮ್ಮತಾರ್ಹವಾದುದೆಲ್ಲವನ್ನೂ ಸಂಸ್ಕೃತಿಗೆ ಸೇರಿಸಲಾಗುತ್ತದೆ. ಇವೆಲ್ಲವನ್ನೂ ಸಂಸ್ಕರಿಸಬೇಕು. ಆತ್ಮಕ್ಕೆ ವಿರುದ್ಧವಾದುದನ್ನು ವಿಕೃತಿ ಎಂದು ತಳ್ಳಿಹಾಕಬೇಕು. ಅನಪೇಕ್ಷಿತವಾದುದನ್ನು ತ್ಯಜಿಸಬೇಕು. ಆತ್ಮ ಒಂದು ನಿಕಶವಿದ್ದಂತೆ. ಪ್ರತಿಯೊಂದು ಕ್ರಿಯೆ, ಕಾರ್ಯಗಳನ್ನು ಈ ನಿಕಷಕ್ಕೊಡ್ಡಬೇಕು. ನಂತರ ಅಂಗೀಕಾರಾರ್ಹವೇ ಇಲ್ಲವೇ ಎನ್ನುವುದನ್ನು ನಿರ್ಧರಿಸಬೇಕು. ಆತ್ಮದ ಅಸ್ತಿಭಾರದ ಮೇಲೆ ರಾಷ್ಟ್ರವೊಂದು ತಲೆ ಎತ್ತುತ್ತದೆ. ಪ್ರಬಲ ರಾಷ್ಟ್ರವಾಗುತ್ತದೆ. ಓಜಸ್ವಿಯಾಗುತ್ತದೆ. ರಾಷ್ಟ್ರದ ಮಹಾನ್ ಪುರುಷರ ಕ್ರಿಯೆಗಳಲ್ಲಿ ಆತ್ಮ ಅಭಿವ್ಯಕ್ತಗೊಳ್ಳುತ್ತದೆ.

ರಾಷ್ಟ್ರದ ಆತ್ಮೋದ್ಧಾರ ಕಾಯಕದಲ್ಲಿ ಪ್ರತಿವ್ಯಕ್ತಿಯೂ ಒಂದು ಸಾಧನವಿದ್ದಂತೆ. ಹೀಗೆ ವ್ಯಕ್ತಿ ತಾನಷ್ಟೇ ಅಲ್ಲದೇ ರಾಷ್ಟ್ರದ ಪ್ರತಿನಿಧಿಯೂ ಆಗಿರುತ್ತಾನೆ. ರಾಷ್ಟ್ರದ ಗೊತ್ತುಗುರಿಗಳನ್ನು ಈಡೇರಿಸಲು ಸೃಷ್ಟಿಸಲಾದ ಹಲವಾರು ಸಂಸ್ಥೆಗಳನ್ನು ವ್ಯಕ್ತಿ ನಿರ್ವಹಿಸುತ್ತಾನೆ. ಆದ್ದರಿಂದ ಅವನು ಈ ಸಂಸ್ಥೆಗಳ ಪ್ರತಿನಿಧಿಯೂ ಹೌದು. ರಾಷ್ಟ್ರಕ್ಕಿಂತ ದೊಡ್ಡದಾದ ಮನುಕುಲದಂಥವುಗಳನ್ನು ವ್ಯಕ್ತಿ ಪ್ರತಿನಿಧಿಸುತ್ತಾನೆ. ಸಂಕ್ಷಿಪ್ತದಲ್ಲಿ ಹೇಳುವುದಾದರೆ ವ್ಯಕ್ತಿಗೆ ಬಹಳಷ್ಟು ದರ್ಶನಗಳು, ದೃಷ್ಟಿಕೋನಗಳು ಇರುತ್ತವೆ. ಆದರೆ ಇವುಗಳ ನಡುವೆ ಘರ್ಷಣೆ ಇರುವುದಿಲ್ಲ. ಪ್ರತಿಯಾಗಿ ಇವು ಪರಸ್ಪರ ಸಹಕಾರಿಗಳು. ಇವುಗಳ ನಡುವೆ ಸಾಮರಸ್ಯ ಇದೆ. ಮಾನವಕುಲದಲ್ಲಿನ ಪರಸ್ಪರ ಪೂರಕವಾದ ವಿವಿಧ ಆದರ್ಶಗಳನ್ನು ಪರಿಪೂರ್ಣಕಲ್ಪನೆಗಳಿಂದ ಮಾನ್ಯತೆ ಪಡೆದಂಥ ವ್ಯವಸ್ಥೆಯೊಂದು ಇರಬೇಕು. ಈ ವ್ಯವಸ್ಥೆ ಮಾನವಕುಲದಲ್ಲಿನ



ಆ ಸಾಮರಸ್ಯವನ್ನು, ಅಸಾಂಗತ್ಯಗಳನ್ನು ನಿವಾರಿಸುವಂಥ, ಪರಸ್ಪರ ಸಹಕಾರ ಸಮನ್ವಯತೆಗಳನ್ನು ಹೆಚ್ಚಿಸುವಂಥ ನಿಯಮಗಳನ್ನು, ಕಾನೂನುಗಳನ್ನು ರೂಪಿಸಬೇಕು. ಹಾಗೂ ಮನುಕುಲದ ಶಾಂತಿ, ಸುಖಸಂತೋಷ ಮತ್ತು ಅಭಿವೃದ್ಧಿಗಳನ್ನು ಈ ವ್ಯವಸ್ಥೆ ಸಾಧಿಸಬೇಕು. ಕ್ರಮಬದ್ಧವಾದ ಅಭಿವೃದ್ಧಿಯಾಗುವಂತೆ ನೋಡಿಕೊಳ್ಳಬೇಕು.

## ಪ್ರತಿಷ್ಠಾನ – ರಾಷ್ಟ್ರೀಯ ಅಗತ್ಯಗಳನ್ನು ಈಡೇರಿಸುವ ಸಾಧನ

ಡಾರ್ವಿನ್ನನ ಸಿದ್ಧಾಂತದ ಪ್ರಕಾರ ಸಂದರ್ಭಗಳ ಒತ್ತಡಗಳಿಗನುಸಾರವಾಗಿ ಜೀವಿಗಳು ವಿವಿಧ ಅಂಗಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತವೆ. ನಮ್ಮ ಶಾಸ್ತ್ರಗಳು ಇದನ್ನೇ ಕೊಂಚ ಭಿನ್ನವಾಗಿ ಹೇಳಿವೆ. ಆತ್ಮ, ಪ್ರಾಣಶಕ್ತಿಯನ್ನು ಬಳಸಿ ಬದುಕಿನ ಸಾತತ್ಯತೆಗೆ ಅಗತ್ಯವೆನಿಸಿದ ಅಂಗಗಳನ್ನು ರೂಪಿಸುತ್ತದೆ ಎಂದು ನಮ್ಮ ಶಾಸ್ತ್ರ ಹೇಳುತ್ತದೆ. ಆತ್ಮ ದೇಹದಲ್ಲಿ ಬೇರೆಬೇರೆ ಅಂಗಗಳನ್ನು ಸೃಷ್ಟಿಸುವಂತೆಯೇ ರಾಷ್ಟ್ರೀಯ ಗೊತ್ತುಗುರಿಗಳ ಸಾಧನೆಯ ಉಪಕರಣವಾಗಿ ರಾಷ್ಟ್ರ ಹಲವಾರು ಸಂಸ್ಥೆಗಳನ್ನು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತದೆ. ಕಟ್ಟಡ, ಯಂತ್ರೋಪಕರಣ, ಉತ್ಪಾದನೆ, ಮಾರಾಟ, ನಿರ್ವಹಣೆ– ಹೀಗೆ ಕಾರ್ಖಾನೆಯೊಂದರಲ್ಲಿ ಹಲವಾರು ಇಲಾಖೆಗಳಿರುವಂತೆ ರಾಷ್ಟ್ರವೂ ಹಲವಾರು ಇಲಾಖೆಗಳನ್ನು ಸೃಷ್ಟಿಸುತ್ತದೆ. ಇವನ್ನೇ ಸಂಸ್ಥೆಗಳು ಅಥವಾ ಪ್ರತಿಷ್ಠಾನಗಳೆಂದು ಕರೆಯಲಾಗುತ್ತದೆ. ರಾಷ್ಟ್ರದ ಅಗತ್ಯಗಳನ್ನು ಈಡೇರಿಸುವ ಸಲುವಾಗಿ ಇವುಗಳನ್ನು ಸ್ಥಾಪಿಸಲಾಗುತ್ತದೆ. ಕುಟುಂಬ, ಜಾತಿ, ಕಾರ್ಮಿಕಸಂಘಟನೆ, ಮೊದಲಾದ ಪದ್ಧತಿಗಳು ಇಂಥ ಪ್ರತಿಷ್ಠಾನಗಳು. ಆಸ್ತಿ ಮತ್ತು ವಿವಾಹ ಪದ್ಧತಿಗಳೂ ಪ್ರತಿಷ್ಠಾನಗಳೇ. ಮೊದಲು ವಿವಾಹಗಳು ಇರಲಿಲ್ಲ. ಆನಂತರ ಕೆಲವು ಋಷಿಗಳು ವಿವಾಹ ಪದ್ಧತಿಯನ್ನು ಅನುಷ್ಠಾನಕ್ಕೆ ತಂದರು. ಅಂತೆಯೇ ಗುರುಕುಲ, ಋಷಿಕುಲಗಳು ಪ್ರತಿಷ್ಠಾನಗಳು ಇದೇ ಬಗೆಯಲ್ಲಿ ಸರ್ಕಾರವೂ ಒಂದು ಪ್ರತಿಷ್ಠಾನವೇ ಒಂದು ಸಂಸ್ಥೆಯೇ. ರಾಷ್ಟ್ರ ಇದನ್ನು ಸೃಷ್ಟಿಸುತ್ತದೆ. ಪಾಶ್ಚಾತ್ಯ ಪ್ರಪಂಚದಲ್ಲಿ ಸರ್ಕಾರವನ್ನೇ ರಾಷ್ಟ್ರವೆಂದು ಭಾವಿಸಿದ್ದರಿಂದಾಗಿಯೇ ಅನೇಕ ತೊಂದರೆಗಳು ಉದ್ಭವಿಸಿದ್ದವು. ಸರ್ಕಾರ ರಾಷ್ಟ್ರದೊಂದಿಗೆ ಸಮಾನಾರ್ಥಕವೆಂದು ಅವರು ಪರಿಗಣಿಸುತ್ತಾರೆ. ನಿಜವಾಗಿ ಹೇಳುವುದಾದರೆ ರಾಷ್ಟ್ರ ಮತ್ತು ಸರ್ಕಾರ ಒಂದೇ ಅಲ್ಲ. ನಮ್ಮ ರಾಷ್ಟ್ರದಲ್ಲಿ ಸಾಮಾಜಿಕ ಕರಾರು ಸಿದ್ಧಾಂತದನ್ವಯ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಕೃತಯುಗದಲ್ಲಿ ಸರ್ಕಾರವೆಂಬುದು ಇರಲಿಲ್ಲವೆಂದು ಮಹಾಭಾರತ ಹೇಳುತ್ತದೆ. ಆಗ ಧರ್ಮಾಚರಣೆಯ ಮೂಲಕ ಸಮಾಜವನ್ನು ನಡೆಸಲಾಗುತ್ತಿತ್ತು ಮತ್ತು ರಕ್ಷಿಸಲಾಗುತ್ತಿತ್ತು.

**ಸರ್ಕಾರ ಮತ್ತು ಸಮಾಜ**

ಆನಂತರದ ದಿನಗಳಲ್ಲಿ ಅಡೆತಡೆಗಳು, ಅವ್ಯವಸ್ಥೆಗಳು ತಲೆದೋರಿದವು. ದುರಾಸೆ ಮತ್ತು ಕೋಪತಾಪಗಳು ಮೇಲುಗೈ ಪಡೆದವು. ಧರ್ಮದ ಪ್ರಭಾವ ಇಳಿಮುಖವಾಯಿತು. ಬಲಶಾಲಿಗಳು ಮಾಡಿದ್ದೇ ಸರಿ ಎನ್ನುವಂಥ ಶಕ್ತಿವಂತರ ಪ್ರಾಬಲ್ಯದ ಆಡಳಿತ ಶುರುವಾಯಿತು. ಈ ಎಲ್ಲ ವಿದ್ಯಮಾನಗಳಿಂದ ಋಷಿಗಳು ವಿಚಲಿತರಾದರು. ಅವರೆಲ್ಲ ಬ್ರಹ್ಮನ ಮೊರೆ ಹೊಕ್ಕರು. ಅವನ ಹಿತವಚನ ಕೇಳಿದರು. ಬ್ರಹ್ಮ ಅವರಿಗೆ "ಸರ್ಕಾರದ ಕರ್ತವ್ಯಗಳು ಮತ್ತು ಕಾನೂನುಗಳನ್ನು" ನಿರೂಪಿಸುವ ಪ್ರಕರಣ ಗ್ರಂಥವೊಂದನ್ನಿತ್ತ. ಈ ಗ್ರಂಥವನ್ನು ಸ್ವತಃ ಬ್ರಹ್ಮನೇ ಬರೆದಿದ್ದ. ಜೊತೆಗೆ ಆಗಲೇ ಅವನು ಮೊದಲ ಮಹಾರಾಜನಾಗಿ ಅಧಿಕಾರ ವಹಿಸಿಕೊಳ್ಳುವಂತೆ ಮನುವಿಗೆ ಆಜ್ಞಾಪಿಸಿದ. ದೊರೆಯಾದವನು ಪ್ರಜೆಗಳನ್ನು ದಂಡಿಸಬೇಕಾಗುತ್ತದೆ. ಜೈಲಿಗೆ ತಳ್ಳಬೇಕಾಗುತ್ತದೆ ಇಂಥ ಪಾಪದ ಕೆಲಸಗಳನ್ನೆಲ್ಲ ಮಾಡಲು ತಾನು ಸಿದ್ಧವಿಲ್ಲವೆಂದು ಮನು ದೊರೆ ಪದವಿಯನ್ನು ನಿರಾಕರಿಸಿದ. ಆಗ ಬ್ರಹ್ಮ ಹೇಳಿದ.

> **"ದೊರೆಯಾಗಿ ನೀನು ಕೈಗೊಳ್ಳುವ ಕ್ರಮಗಳು, ಮಾಡುವ ಕೆಲಸಗಳು ಎಲ್ಲಿಯವರೆಗೆ ಸಮಾಜದ ಸುಭದ್ರತೆಯ ಉದ್ದೇಶಗಳಿಂದ ಕೂಡಿದ್ದು ಧರ್ಮ ಪ್ರಕಾರವಾಗಿರುತ್ತದೆಯೋ ಅಲ್ಲಿಯವರೆಗೆ ಅವು ಪಾಪ ಕಾರ್ಯಗಳಾಗುವುದಿಲ್ಲ. ಇದು ನಿನ್ನ ಕರ್ತವ್ಯ. ಇದು ನಿನ್ನ ಧರ್ಮ. ಇದಿಷ್ಟೇ ಅಲ್ಲದೆ ನೀನು ನಿನ್ನ ಪ್ರಜೆಗಳ ಕರ್ಮದಲ್ಲಿ ಪಾಲುದಾರನಾಗಿರುವಿ. ನಿನ್ನ ಪ್ರಜೆಗಳು ಧರ್ಮಾನುಸಾರ ನಡೆದುಕೊಂಡರೆ ನೀನು ಧರ್ಮದಿಂದ ಗಮನಾರ್ಹ ಲಾಭ ಪಡೆಯುತ್ತೀಯ ಅದರ ಪುಣ್ಯಗಳ ಪಾಲುದಾರನಾಗುತ್ತೀಯ"**

ದೊರೆಯ ಆಳ್ವಿಕೆಯಲ್ಲಿರುವ ಸಮಾಜ ಪಾಪಕಾರ್ಯಗಳಲ್ಲಿ ತೊಡಗಿದರೆ ಆ ಪಾಪದ ಫಲದಲ್ಲಿ ಒಂದು ಪಾಲು ತನ್ನಷ್ಟಕ್ಕೆ ರಾಜನದಾಗುತ್ತದೆ. ರಾಜನೂ ಪಾಪದಲ್ಲಿ ಭಾಗಿಯಾಗುತ್ತಾನೆ. ಈ ಮಾತನ್ನು ಸ್ಪಷ್ಟವಾಗಿ ಹೇಳಿಲ್ಲವಾದರೂ ಬ್ರಹ್ಮನ ಮೇಲಿನ ಮಾತುಗಳ ಅರ್ಥ ಇದೇ ಎಂದು ನನ್ನ ನಂಬಿಕೆ. ದೊರೆಯಾದವನು ಪುಣ್ಯದಲ್ಲಿ ಪಾಲುಬೇಕು. ಪಾಪದಲ್ಲಿ ಬೇಡ ಎನ್ನುವುದು ಉಚಿತವಲ್ಲ. ಪಾಪ–ಪುಣ್ಯಗಳೆರಡನ್ನೂ ಸೂಕ್ತ ಪ್ರಮಾಣದಲ್ಲಿ ಹಂಚಿಕೊಳ್ಳಬೇಕಾಗುತ್ತದೆ. ಹೀಗೆ ಪ್ರಜೆಗಳಲ್ಲಿ ಪಾಪಪುಣ್ಯಗಳಲ್ಲಿ ದೊರೆಯಾದವನು ಪಾಲುದಾರ. ಹೀಗೆ ಒಂದು ಕರಾರಿನ ರೂಪದಲ್ಲಿ ಆಳ್ವಿಕೆ ಅಸ್ತಿತ್ವಕ್ಕೆ ಬಂತು. ದೊರೆಯ ಸರ್ಕಾರ ಅಸ್ತಿತ್ವಕ್ಕೆ ಬಂತು. ಈ ಕರಾರನ್ನು ಸರ್ಕಾರಕ್ಕೆ ಅನ್ವಯಿಸಬಹುದೇ ವಿನಃ ರಾಷ್ಟ್ರಕ್ಕಲ್ಲ. ಪಶ್ಚಿಮ ರಾಷ್ಟ್ರಗಳಲ್ಲಿ ವ್ಯವಸ್ಥೆ ಇದಕ್ಕೆ ತದ್ವಿರುದ್ಧವಾಗಿತ್ತು. ಅವರ ಪ್ರಕಾರ ಸಮಾಜ ಒಂದು ರಾಷ್ಟ್ರವಾಗಿ ಒಂದು ಕರಾರಿಗೊಳಪಟ್ಟ ವ್ಯವಸ್ಥೆ ದೊರೆ ತಾನು ದೈವಯೋಗ್ಯನಾದವನು, ತಾನು ಸರ್ವೋತ್ಕೃಷ್ಟ ಎಂದೂ ತಾನು ದೇವರ ಪ್ರತಿನಿಧಿಯೆಂದು ಘೋಷಿಸಿಕೊಂಡ ಎಲ್ಲ



ದಿವ್ಯಗಳ ಹಕ್ಕುದಾರ ತಾನೆಂದು ಘೋಷಿಸಿಕೊಂಡ. ಇದು ಸರಿಯಲ್ಲ. ನಮ್ಮ ದೇಶದಲ್ಲಿ ಪ್ರಾಚೀನ ಕಾಲದಲ್ಲಿ ದೊರೆಗೆ ಪ್ರಥಮ ಮಾನ್ಯತೆ ದೊರೆತಿತ್ತಾದರೂ ಒಂದು ರಾಷ್ಟ್ರವಾಗಿ ಸಮಾಜ ಸ್ವಯಂಭೂ ಎಂದೇ ಪರಿಗಣಿಸಲಾಗಿತ್ತು. ಸರ್ಕಾರ ಒಂದು ಪ್ರತಿಷ್ಠಾನವಷ್ಟೇ.

**ಬಹುರೂಪಿ ಸಮುದಾಯ ನಿಷ್ಠೆಗಳು**

ಕಾಲಕಾಲಕ್ಕೆ ಅಗತ್ಯವೆಂದು ಕಂಡು ಬಂದಾಗಲೆಲ್ಲ ಸರ್ಕಾರದಂಥ ಬೇರೆ ಬೇರೆ ಪ್ರತಿಷ್ಠಾನಗಳನ್ನು ಸ್ಥಾಪಿಸಲಾಗುತ್ತದೆ. ಪದ್ಧತಿಗಳನ್ನು ಜಾರಿಗೆ ತರಲಾಗುತ್ತದೆ. ಪ್ರತಿ ವ್ಯಕ್ತಿಯೂ ಇಂಥ ಪ್ರತಿಷ್ಠಾನಗಳ ಒಂದು ಅವಯವ ಇದ್ದಂತೆ. ಒಬ್ಬ ವ್ಯಕ್ತಿ ಕುಟುಂಬದ ಸದಸ್ಯನಿದ್ದಂತೆ ಸಮುದಾಯದ ಸದಸ್ಯನೂ ಹೌದು. ಜೊತೆಗೆ ತನ್ನ ವೃತ್ತಿಸಂಬಂಧ ಸಂಘಸಂಸ್ಥೆಗಳ ಸದಸ್ಯನೂ ಆಗಿರುತ್ತಾನೆ. ಇವೆಲ್ಲಕ್ಕಿಂತ ಮಿಗಿಲಾಗಿ ಅವನು ಒಂದು ರಾಷ್ಟ್ರದ ಮತ್ತು ಒಂದು ಸಮಾಜದ ಸದಸ್ಯ. ಇನ್ನೂ ಹೆಚ್ಚು ವ್ಯಾಪಕವಾದ ವಲಯದಲ್ಲಿ ಗಮನಿಸಿದರೆ ಆತ ಇಡೀ ಮನುಕುಲದ ಹಾಗೂ ಒಟ್ಟು ಬ್ರಹ್ಮಾಂಡದ ಸದಸ್ಯನಾಗಿರುತ್ತಾನೆ. ನಿಜವಾಗಿ ಹೇಳಿದರೆ ಒಬ್ಬ ವ್ಯಕ್ತಿ ಒಂದೇ ಒಂದು ಅಸ್ತಿತ್ವ ಇರುವುದಿಲ್ಲ. ಅವನಿಗೆ ಬಹುರೂಪಿ ಅಸ್ತಿತ್ವ ಇರುತ್ತದೆ. ಅವನು ಒಂದು ಪ್ರತಿಷ್ಠಾನ ಅಥವಾ ಸಂಸ್ಥೆಯ ಸದಸ್ಯ ಮಾತ್ರವಲ್ಲ. ಹಲವಾರು ಪ್ರತಿಷ್ಠಾನಗಳು ಸಂಘಸಂಸ್ಥೆಗಳ ಸದಸ್ಯ, ಈ ವ್ಯಕ್ತಿ ವಿವಿಧ ರೀತಿಯ ಬದುಕಗಳಲ್ಲಿ ಜೀವಿಸುತ್ತಿರುತ್ತಾನೆ. ತನ್ನ ಬದುಕಿನ ವಿವಿಧ ಅಂಶಗಳು, ವಿವಿಧ ದೃಷ್ಟಿಕೋನಗಳ ನಡುವೆ ಪರಸ್ಪರ ತಿಕ್ಕಾಟವಾಗದಂತೆ ಜೀವಿಸುವುದು ಆತನಿಂದ ಸಾಧ್ಯ. ಪ್ರತಿಯಾಗಿ ಈ ವಿವಿಧ ಅಂಶಗಳು, ಆಸಕ್ತಿಗಳು ದೃಷ್ಟಿಕೋನಗಳು ಪರಸ್ಪರ ಪೂರಕವೂ ಪೋಷಕವೂ ಆಗಿರುತ್ತದೆ.

ತನ್ನ ಗುಣವಿಶೇಷಗಳನ್ನು ಸೂಕ್ತರೀತಿಯಲ್ಲಿ ಬಳಸಿಕೊಂಡವನು ಸುಖಿಯಾಗಿರುತ್ತಾನೆ. ಇಲ್ಲವಾದಲ್ಲಿ ಅವನು ಅಸುಖಿ, ಅವನಿಗೆ ಬದುಕಿನಲ್ಲಿ ನೆಮ್ಮದಿ ಇಲ್ಲ. ಇಂಥ ವ್ಯಕ್ತಿ ಬದುಕಿನಲ್ಲಿ ಸಮತೂಕದ ಅಭಿವೃದ್ಧಿಯನ್ನು ಸಾಧಿಸಲಾರ. ಒಂದು ಉದಾಹರಣೆ ನೋಡೋಣ. ಒಬ್ಬ ಪುರುಷ. ಇವನು ತಾಯಿಗೆ ಮಗ, ಹೆಂಡತಿಗೆ ಗಂಡ, ತಂಗಿಗೆ ಅಣ್ಣ, ಮಗನಿಗೆ ತಂದೆ, ಒಬ್ಬನೇ ವ್ಯಕ್ತಿ ತಂದೆ ಮಾತ್ರವಲ್ಲ ಮಗನೂ ಹೌದು, ಅವನು ಅಣ್ಣನೂ ಹೌದು, ಗಂಡನೂ ಹೌದು, ಅವನು ಈ ಎಲ್ಲ ಸಂಬಂಧಗಳನ್ನೂ ಬುದ್ಧಿವಂತಿಕೆಯಿಂದ ನಿರ್ವಹಿಸಬೇಕಾಗುತ್ತದೆ. ಸಂಬಂಧಗಳನ್ನು ಅರ್ಥಮಾಡಿಕೊಂಡು, ಚಾಕಚಕ್ಯತೆಯಿಂದ ವ್ಯವಹರಿಸಬೇಕಾಗುತ್ತದೆ. ಇದರಲ್ಲಿ ವಿಫಲನಾದಲ್ಲಿ ಘರ್ಷಣೆ ಶತಃಸಿದ್ಧ. ಅವನು ಸಂಬಂಧಿಕರಲ್ಲಿ ಒಬ್ಬರ ಪರವಹಿಸಿದರೆ ಇನ್ನೊಬ್ಬರು ತಪ್ಪಾಗಿ ಗ್ರಹಿಸುತ್ತಾರೆ. ಅವನ ಪತ್ನಿ ಮತ್ತು ತಂಗಿ

ನಡುವಣ ಜಗಳ. ಪತ್ನಿ ಮತ್ತು ತಾಯಿ ನಡುವಣ ಜಗಳ ಇವೆಲ್ಲವೂ ಸೂಕ್ತರೀತಿಯಲ್ಲಿ ವ್ಯವಹರಿಸಲಾಗದ ಅವನ ಅಸಾಮರ್ಥ್ಯದ ಫಲ. ಅವನಿಗೆ ನೋವಾಗುತ್ತದೆ. ಏಕೆಂದರೆ ತಾಯಿ ಬಗ್ಗೆ ಅವನ ಕರ್ತವ್ಯಗಳು ಹಾಗೂ ಹೆಂಡತಿ ಬಗೆಗಿನ ಕರ್ತವ್ಯಗಳ ನಡುವೆ ಘರ್ಷಣೆ ಶುರುವಾಗುತ್ತದೆ. ಆದರೆ ಈ ಘರ್ಷಣೆಗಳನ್ನು ನಿವಾರಿಸಿ ತನ್ನ ಕರ್ತವ್ಯಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿದಲ್ಲಿ ಆಗ ಅವನನ್ನು ಸಮಗ್ರ ವ್ಯಕ್ತಿ ಎಂದು ಕರೆಯಬಹುದು. ಆಗ ಅವನ ಬೆಳವಣಿಗೆ ಸಮನ್ವಯಿತ ಬೆಳವಣಿಗೆ ಸಂಯೋಜಿತ ಬೆಳವಣಿಗೆ ಆಗುತ್ತದೆ.

ಬಹುರೂಪಿ ವ್ಯಕ್ತಿತ್ವವನ್ನುಳ್ಳ ವ್ಯಕ್ತಿಗೆ ಸದಾ ತಂಟೆ ತಕರಾರುಗಳು, ಘರ್ಷಣೆಗಳು ಇದ್ದೇ ಇರುತ್ತವೆ. ಹಾಗೆಯೇ ಸಮಾಜದ ಪ್ರತಿಷ್ಠಾನಗಳಲ್ಲಿ. ಸಂಸ್ಥೆಗಳಲ್ಲಿ ನಿರಂತರವಾಗಿ ಘರ್ಷಣೆ. ತಾಕಲಾಟಗಳು ಇರುತ್ತವೆ ಎನ್ನುವ ಅಭಿಪ್ರಾಯವಿದೆ. ಈ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳಲಾಗದು. ಘರ್ಷಣೆ ಇದ್ದಲ್ಲಿ ಅದು ಅವನತಿಯ ಸೂಚನೆ. ಅದು ವಿಕೃತಿಯ ಸೂಚನೆ. ಇದಕ್ಕೂ ಪ್ರಕೃತಿಗೂ ಸಂಸ್ಕೃತಿಗೂ ಸಂಬಂಧವಿಲ್ಲ. ಅವನತಿ ಪ್ರಕೃತಿ ಸಂಸ್ಕೃತಿಯದಲ್ಲ. ಮೂಲಭೂತ ಘರ್ಷಣೆ, ತಿಕ್ಕಾಟಗಳಲ್ಲೇ ಮಾನವನ ಪ್ರಗತಿ ಸಾಧನೆ ಸಾಧ್ಯ ಎಂದು ಪಾಶ್ಚಾತ್ಯ ಚಿಂತನೆ. ಇದು ತಪ್ಪು. ಆದ್ದರಿಂದ ವ್ಯಕ್ತಿ ಮತ್ತು ಸರ್ಕಾರದ ನಡುವಣ ಘರ್ಷಣೆ–ತಿಕ್ಕಾಟಗಳನ್ನು ಸಹಜ ಪ್ರಕ್ರಿಯೆ ಎಂದು ಭಾವಿಸಬೇಕು. ಇದೇ ಆಧಾರದ ಮೇಲೆಯೇ ವರ್ಗಸಂಘರ್ಷ ಸಿದ್ಧಾಂತವನ್ನೂ ಮಂಡಿಸಬಹುದು.

## ವರ್ಣ ಪದ್ಧತಿಯ ವಿಕಸನ

ಸಮಾಜದಲ್ಲಿ ವರ್ಗಗಳು ಇವೆ. ಇಲ್ಲೂ ಜಾತಿಗಳಿವೆ. ಆದರೆ ಜಾತಿ–ಜಾತಿಗಳ ನಡುವಣ ಘರ್ಷಣೆಗಳನ್ನು ನಾವು ಮಾನ್ಯ ಮಾಡಿಲ್ಲ. ನಾಲ್ಕು ವರ್ಣಗಳನ್ನು ವಿರಾಟಪುರುಷನ ವಿವಿಧ ಅಂಗಗಳಿಗೆ ಹೋಲಿಸಲಾಗಿದೆ. ಬ್ರಾಹ್ಮಣರು ವಿರಾಟ ಪುರುಷನ ಶಿರದಿಂದಲೂ, ಕ್ಷತ್ರಿಯರು ತೋಳುಗಳಿಂದಲೂ, ವೈಶ್ಯರು ಉದರದಿಂದಲೂ ಶೂದ್ರರು ಪಾದಗಳಿಂದಲೂ ಜನಿಸಿದರೆಂದು ಹೇಳಲಾಗುತ್ತದೆ. ಈ ಪರಿಕಲ್ಪನೆಯನ್ನು ವಿಶ್ಲೇಷಿಸಿದಾಗ ನಮ್ಮಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ. ಅದು ವಿರಾಟಪುರುಷನ ಶಿರ, ತೋಳು, ಹೊಟ್ಟೆ ಮತ್ತು ಪಾದಗಳ ನಡುವೆ ಘರ್ಷಣೆ ಸಾಧ್ಯವೆ? ಘರ್ಷಣೆ ಮೂಲಭೂತವಾದದ್ದು ಎಂದಾದಲ್ಲಿ ಶರೀರ ಪಾಲನೆಯಾದರೂ ಹೇಗೆ ಸಾಧ್ಯವಾದೀತು? ಒಂದೇ ಶರೀರದ ವಿವಿಧ ಅವಯವಗಳ ನಡುವೆ ಘರ್ಷಣೆ ಸಾಧ್ಯವಿಲ್ಲ. ಇರುವ ವ್ಯಕ್ತ ಒಬ್ಬನೇ, "ಒಬ್ಬನೇ ಪುರುಷ" ಇನ್ನು ಅವಯವಗಳಾದರೋ ಒಂದಕ್ಕೊಂದು ಪೂರಕ. ವ್ಯಕ್ತಿತ್ವವಿದೆ, ಅಖಂಡತೆ ಇದೆ, ಅಸ್ಮಿತೆಯ ಆಸಕ್ತಿಗಳಿವೆ, ಸಂಬಂಧಗಳ ಅನನ್ಯತೆ ಇದೆ. ವರ್ಣಪದ್ಧತಿ, ಜಾತಿಪದ್ಧತಿಗಳು



ಮೇಲಿನ ಆಧಾರದ ಮೇಲೆ ಹುಟ್ಟಿಕೊಂಡವು. ಇದನ್ನು ನಾವು ಮುಂದುವರಿಸಿಕೊಂಡು ಹೋದಲ್ಲಿ ಜಾತಿಗಳು ಪರಸ್ಪರ ಪೂರಕವಾಗಿರುವುದರ ಬದಲು ಘರ್ಷಣೆ ತಲೆದೋರಬಹುದು. ಜೊತೆಗೆ ಇವೆಲ್ಲ ವಿರೂಪ ಹೊಂದಿವೆ. ಇದೊಂದು ಸುವ್ಯವಸ್ಥೆಯಲ್ಲ. ಇಲ್ಲಿ ಯೋಜನೆ, ಸುವ್ಯವಸ್ಥೆ ಏನೂ ಇಲ್ಲ. ಇದು ನಮ್ಮ ಇಂದಿನ ಸಮಾಜದ ಸ್ಥಿತಿ.

ಸಮಾಜದ ವಿವಿಧ ಅಂಗಗಳಲ್ಲಿ, ಸಂಸ್ಥೆಗಳಲ್ಲಿ ಹಲವು ಹನ್ನೊಂದು ಕಾರಣಗಳಿಂದಾಗಿ ಕ್ಷೀಣಿಸುವ ಪ್ರಕ್ರಿಯೆ ಪ್ರಾರಂಭವಾಗಬಹುದು. ಸಮಾಜದ ಆತ್ಮ ದುರ್ಬಲವಾದಲ್ಲಿ ಉಳಿದ ಅವಯುವಗಳು ಕ್ಷೀಣಿಸುತ್ತವೆ, ನಿಷ್ಪರಿಣಾಮಕಾರಿಯಾಗುತ್ತವೆ. ಯಾವುದೇ ಒಂದು ಅಂಗ ಅಥವಾ ಸಂಸ್ಥೆ, ಪ್ರತಿಷ್ಠಾನ ನಿಷ್ಪ್ರಯೋಜಕವಾಗಬಹುದು. ಅಥವಾ ಹಾನಿಕಾರಕವೂ ಆಗಬಹುದು. ಜೊತೆಗೆ ಕಾಲಕಾಲಕ್ಕೆ ಅನುಗುಣವಾಗಿ, ಸಂದರ್ಭಾನುಸಾರವಾಗಿ ಯಾವುದೇ ಒಂದು ಅಂಗದಲ್ಲಿ ಅಥವಾ ಸಂಸ್ಥೆಯಲ್ಲಿ ಬದಲಾವಣೆಯಾಗಬಹುದು. ಯಾವುದೇ ಸಂಸ್ಥೆಯ ಇಂದಿನ ಸ್ಥಿತಿಯನ್ನು ನಾವು ಪರಿಶೀಲಿಸುವಾಗ, ಅದು ಯಾವ ರೀತಿ ಇರಬೇಕು ಎಂಬುದನ್ನೂ ಆಲೋಚಿಸಬೇಕಾಗುತ್ತದೆ. ಪರಸ್ಪರ ಸಹಕಾರ, ಏಕತೆಯ ಭಾವನೆ ಇವೆ ಸೂಕ್ತ ನಡಾವಳಿಯ ಮಾನದಂಡಗಳು. ಕುಟುಂಬ, ಸಮುದಾಯ, ಕಾರ್ಮಿಕಸಂಘ, ಗ್ರಾಮಪಂಚಾಯಿತಿ, ಜನಪದ, ಸರ್ಕಾರ ಇವೇ ಮೊದಲಾದವು ಒಂದು ರಾಷ್ಟ್ರದ ವಿವಿಧ ಅಂಗಗಳು. ಅಷ್ಟೇಕೆ ಮನುಕುಲದ ವಿವಿಧ ಅವಯವಗಳು ಅವು ಪರಸ್ಪರ ಅವಲಂಬಿತ. ಪರಸ್ಪರ ಪೂರಕವಾದವು.ಇವೆಲ್ಲದರಲ್ಲೂ ಏಕತೆಯ ಭಾವನೆ. ಅಖಂಡತೆಯ ಪ್ರಜ್ಞೆ ಇರಬೇಕು. ಆದ್ದರಿಂದಲೇ ಪರಸ್ಪರ ವಿರೋಧಿಸುವ ಪರಸ್ಪರ ಸಹಕಾರದ ಧೋರಣೆ ಇರಬೇಕು.

## ಸರ್ಕಾರವೇ ಪರಮವಲ್ಲ

ಹಲವು ಹನ್ನೊಂದು ಪ್ರತಿಷ್ಠಾನಗಳಲ್ಲಿ ಅಥವಾ ಸಂಸ್ಥೆಗಳಲ್ಲಿ ಸರ್ಕಾರ ಪ್ರಮುಖವಾದದ್ದು. ಆದರೆ ಉಳಿದೆಲ್ಲವುಗಳ ಮೇಲುಗಡೆ ಇಲ್ಲ. ಸರ್ಕಾರ ಸಮಾಜಕ್ಕೆ ಸಮಾನಾರ್ಥಕವಾದದ್ದು ಎಂಬುದು ಬಹುತೇಕ ಜನರ ಭಾವನೆ. ಪ್ರಪಂಚ ಇಂದು ಎದುರಿಸುತ್ತಿರುವ ಸಮಸ್ಯೆಗಳಿಗೆ ಮುಖ್ಯ ಕಾರಣ. ಈ ಬಗೆಯ ಆಲೋಚನೆ. ವ್ಯವಹಾರಿಕವಾಗಿ ಸರ್ಕಾರವನ್ನು ಸಮಾಜದ ಪ್ರತಿನಿಧಿ ಎಂದೇ ತಿಳಿಯಲಾಗುತ್ತದೆ. ಸರ್ಕಾರ ಎಷ್ಟರಮಟ್ಟಿಗೆ ಪ್ರಬಲವಾಗಿದೆಯೆಂದರೆ ಎಲ್ಲ ಅಧಿಕಾರಗಳೂ ಅದರ ಕೈಯ್ಯಲ್ಲೇ ಕೇಂದ್ರಿಕೃತವಾಗಿದೆ. ಹೀಗಾಗಿ ಉಳಿದ ಪ್ರತಿಷ್ಠಾನಗಳು, ಅಂಗಸಂಸ್ಥೆಗಳ ಪ್ರಭಾವ, ಪರಿಣಾಮಗಳು ಕ್ಷೀಣಿಸಿವೆ.

ಸರ್ಕಾರ ರಾಷ್ಟ್ರದ ಏಕಮೇವ ಪ್ರತಿನಿಧಿಯೆಂದು ನಾವು ಪರಿಗಣಿಸಿಲ್ಲ.

ಸರ್ಕಾರ ವಿದೇಶಿಯರ ಕೈಯಲ್ಲಿದ್ದಾಗಲೂ ನಮ್ಮ ರಾಷ್ಟ್ರೀಯ ಜೀವನ ಅಬಾಧಿತವಾಗಿ ಮುಂದುವರಿದಿತ್ತು. ಸ್ವಾತಂತ್ರ್ಯ ಹರಣದೊಂದಿಗೆ ಪರ್ಷಿಯನ್ ರಾಷ್ಟ್ರ ಪರಿಸಮಾಪ್ತಿ ಹೊಂದಿತು. ನಮ್ಮ ರಾಷ್ಟ್ರದಲ್ಲಿ ಆಗಿದಾಂಗ್ಯೆ ದೇಶದ ವಿವಿಧ ಭಾಗಗಳಲ್ಲಿ ವಿದೇಶೀಯರ ಆಳ್ವಿಕೆ ಇತ್ತು. ಸ್ವಲ್ಪಕಾಲ ಪಠಾಣರು ದೆಹಲಿ ಸಿಂಹಾಸನವನ್ನು ಆಕ್ರಮಿಸಿಕೊಂಡಿದ್ದರು. ನಂತರ ತುರ್ಕರು, ಮುಘಲರು ಮತ್ತು ಬ್ರಿಟಿಷರು ತಮ್ಮ ಆಳ್ವಿಕೆ ಸ್ಥಾಪಿಸಿದರು. ಇವೆಲ್ಲದರ ಮಧ್ಯೆಯೂ ನಮ್ಮ ರಾಷ್ಟ್ರೀಯ ಜೀವನ ಸಾಗಿತ್ತು. ಏಕೆಂದರೆ ಸರ್ಕಾರ ಅದರ ಕೇಂದ್ರವಾಗಿರಲಿಲ್ಲ. ನಾವು ಸರ್ಕಾರವನ್ನೇ ಕೇಂದ್ರವೆಂದು ಪರಿಗಣಿಸಿದ್ದಲ್ಲಿ ಬಹಳಷ್ಟು ಹಿಂದೆಯೇ ಒಂದು ರಾಷ್ಟ್ರವಾಗಿ ನಮ್ಮ ಕಥೆ ಮುಗಿದುಹೋಗುತ್ತಿತ್ತು. ದುಷ್ಟಶಕ್ತಿಗಳು ಗಿಳಿಯ ಹೃದಯದಲ್ಲಿರುತ್ತದೆ. ದುಷ್ಟಶಕ್ತಿಗಳನ್ನು ಹತ್ಯೆ ಮಾಡಬೇಕಾದರೆ ಗಿಳಿಯ ಪ್ರಾಣ ತೆಗೆಯಬೇಕಾಗುತ್ತದೆ ಎಂದು ಮಕ್ಕಳ ಕಥೆಗಳಲ್ಲಿ ಹೇಳಲಾಗುತ್ತದೆಯಷ್ಟೇ ಹಾಗೆಯೇ ಸರ್ಕಾರವನ್ನೇ ಜೀವನ ಕೇಂದ್ರವಾಗಿರಿಸಿಕೊಂಡಿದ್ದ ರಾಷ್ಟ್ರಗಳು ಸರ್ಕಾರದ ಅಂತ್ಯದೊಂದಿಗೆ ಅವೂ ಅಂತ್ಯಗೊಂಡವು. ಆದರೆ ಸರ್ಕಾರವೇ ಬದುಕಿನ ಕೇಂದ್ರವಲ್ಲ ಎಂದು ನಂಬಿದ್ದ ರಾಷ್ಟ್ರಗಳು ರಾಜಕೀಯ ಅಧಿಕಾರ ಹಸ್ತಾಂತರದ ನಂತರವೂ ಬದುಕಿ ಉಳಿದವು. ಅವುಗಳ ಅಸ್ತಿತ್ವಕ್ಕೆ ಧಕ್ಕೆ ಬರಲಿಲ್ಲ.

ಇದರ ದುಷ್ಪರಿಣಾಗಳೂ ಇದ್ದವು. ದಿವಂಗತ ಡಾ.ಅಂಬೇಡ್ಕರ್ ಅವರು ಹೇಳಿರುವಂತೆ ನಮ್ಮ ಗ್ರಾಮ ಪಂಚಾಯಿತಿಗಳು ಎಷ್ಟು ಪ್ರಬಲವಾಗಿದ್ದವೆಂದರೆ ನಾವು ದೆಹಲಿ ಸಿಂಹಾಸನವನ್ನೇ ಉಪೇಕ್ಷೆ ಮಾಡಿದೆವು. ಸರ್ಕಾರಕ್ಕೆ ಸಂಬಂಧಿಸಿದಂತೆ ನಾವು ಎಷ್ಟು ಎಚ್ಚರಿಕೆಯಿಂದಿರಬೇಕಾಗಿತ್ತೋ ಅಷ್ಟು ಎಚ್ಚರಿಕೆಯಿಂದಿರಲಿಲ್ಲ. ರಾಷ್ಟ್ರಜೀವನ ಸರ್ಕಾರವನ್ನು ಅವಲಂಬಿಸಿಲ್ಲ ಎನ್ನುವ ಚಿಂತನೆಯೇ ಇದಕ್ಕೆ ಕಾರಣವಾಗಿತ್ತು. ಸರ್ಕಾರ ರಾಷ್ಟ್ರಜೀವನದ ಕೇಂದ್ರವಲ್ಲವಾದರೂ ಅದು ನಿಶ್ಚಯವಾಗಿಯೂ ತುಂಬ ಮಹತ್ವದ ಪ್ರತಿಷ್ಠಾನ ಎನ್ನುವುದನ್ನು ನಾವು ಮರೆತೆವು. ಅವಯವಗಳು ದೇಹದ ಅಗತ್ಯಗಳನ್ನು ಪೂರೈಸುವಂತೆ ಸರ್ಕಾರ ರಾಷ್ಟ್ರದ ಅಗತ್ಯಗಳನ್ನು ಪೂರೈಸುತ್ತದೆ. ಒಂದು ಕೂದಲನ್ನು ಕೀಳುವುದು ಸುಲಭ. ಕೂದಲ ಜೊತೆಗೆ ಚರ್ಮವೂ ಹರಿದುಬಂದರೆ? ತಲೆಯನ್ನೂ ಕಡಿದರೆ? ಆಗ ದೇಹಕ್ಕೆ ಅಪಾರ ಹಾನಿಯಾಗುತ್ತದೆ. ಆದ್ದರಿಂದ ದೇಹವನ್ನು ರಕ್ಷಿಸಿಕೊಳ್ಳಬೇಕು. ದೇಹದ ವಿವಿಧ ಅಂಗಾಂಗಗಳು ಅನಿವಾರ್ಯವಲ್ಲವಾದರೂ ಅವುಗಳಲ್ಲಿ ಪ್ರತಿಯೊಂದು ಕೆಲವು ಮುಖ್ಯ ಉದ್ದೇಶಗಳನ್ನು ಈಡೇರಿಸುತ್ತವೆ. ಇದೇ ದೃಷ್ಟಿಕೋನದಿಂದ ಸರ್ಕಾರವೂ ರಾಷ್ಟ್ರಜೀವನದಲ್ಲಿ ಅತಿಮುಖ್ಯವಾದದ್ದು. ಕೆಲವರು ಮಹಾನುಭಾವರು ಈ ಅಂಶಗಳ ಬಗ್ಗೆ ಗಮನಹರಿಸಿದ್ದರು. ಈ ಕಾರಣದಿಂದಾಗಿಯೇ ಶಿವಾಜಿಯ ಮಹೋಪಾಧ್ಯಾಯರಾಗಿದ್ದ ಸ್ವಾಮಿ ಸಮರ್ಥ ರಾಮದಾಸರು ಸಾಮ್ರಾಜ್ಯ ಸ್ಥಾಪಿಸುವಂತೆ ಅವನಿಗೆ ಆದೇಶಿಸಿದ್ದರು. ಬದುಕಿನಲ್ಲಿ ಧರ್ಮ ತುಂಬ



ಮಹತ್ವಪೂರ್ಣವಾದದ್ದು. ಬೈರಾಗಿಯಾಗಿ ಧರ್ಮಪ್ರಚಾರ ಮಾಡುವಂತೆ ರಾಮದಾಸರು ಶಿವಾಜಿಗೆ ಉಪದೇಶ ಮಾಡಬಹುದಿತ್ತು. ಆದರೆ ಅವರು ತನ್ನ ಆಳ್ವಿಕೆ ವಿಸ್ತರಿಸುವಂತೆ ಶಿವಾಜಿಗೆ ಉಪದೇಶ ಮಾಡಿದ್ದರು. ಏಕೆಂದರೆ ಆಡಳಿತ ನಡೆಸುವ ಸರ್ಕಾರವು ಸಮಾಜಕ್ಕೆ ಮುಖ್ಯವಾದದ್ದು. ಸರ್ಕಾರವೇ ಪರಮೋಚ್ಚವಲ್ಲ. ಹಾಗಿದ್ದಲ್ಲಿ ಸರ್ಕಾರಕ್ಕೆ ಮೂಲಭೂತ ಪ್ರಾಮುಖ್ಯ ಇಲ್ಲವೆಂದಾದಲ್ಲಿ ಅದು ಅತ್ಯವಶ್ಯಕವಾಗಿ ಮುಖ್ಯವಾದದ್ದು ಹೇಗಾಗುತ್ತದೆ ಎನ್ನುವ ಪ್ರಶ್ನೆ ಏಳುತ್ತದೆ. ಈ ಪ್ರಶ್ನೆಯನ್ನು ಪರಿಶೀಲಿಸೋಣ.

### ಧರ್ಮ ಸಮಾಜವನ್ನು ಪೋಷಿಸುತ್ತದೆ

ಸರ್ಕಾರವನ್ನು ಏಕೆ ಸ್ಥಾಪಿಸಲಾಯಿತು? ಇದಕ್ಕೆ ಕಾರಣಗಳಾದರೂ ಏನು ಎಂಬುದನ್ನು ನಾವು ಪರಾಮರ್ಶಿಸಬೇಕಾಗುತ್ತದೆ. ಸರ್ಕಾರಕ್ಕೆ ಗೊತ್ತು–ಗುರಿ ಆದರ್ಶಗಳಿರಬೇಕು ಎನ್ನುವುದು ಎಲ್ಲರೂ ಒಪ್ಪತಕ್ಕಂಥ ಮಾತೇ. ಹಾಗಿದ್ದಲ್ಲಿ ಈ ಗೊತ್ತುಗಳಿಗೆ–ಆದರ್ಶಗಳಿಗೆ ಅವುಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಸೃಷ್ಟಿಸಲಾಗಿರುವ ಸರ್ಕಾರಕ್ಕಿಂತ ಹೆಚ್ಚಿನ ಮಹತ್ವ ನೀಡಬೇಕಾಗುತ್ತದೆ. ಕಾವಲುಗಾರ, ಅವನು ರಕ್ಷಿಸಬೇಕಾಗಿರುವ ಸಂಪತ್ತಿಗಿಂತ–ಖಜಾನೆಗಿಂತ ದೊಡ್ಡವನಲ್ಲ. ಹಾಗೆಯೇ ಖಜಾಂಚಿಯೂ. ರಾಷ್ಟ್ರ ರಕ್ಷಣೆಯ ಉದ್ದೇಶದಿಂದ ಸರ್ಕಾರವನ್ನು ಸೃಷ್ಟಿಸಲಾಯಿತು. ರಾಷ್ಟ್ರದ ಆದರ್ಶಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುವಂಥ ಪರಿಸ್ಥಿತಿ ಉಂಟುಮಾಡುವುದು ಹಾಗೂ ಅನುಷ್ಠಾನಗೊಳಿಸುವುದು ಸರ್ಕಾರದ ಕರ್ತವ್ಯ. ರಾಷ್ಟ್ರದ ಆದರ್ಶಗಳು ಆತ್ಮವಿದ್ದಂತೆ. ಇದನ್ನು ವ್ಯಕ್ತಿಯ ಆತ್ಮಕ್ಕೆ ಹೋಲಿಸಬಹುದು. ಆತ್ಮವನ್ನು ಗ್ರಹಿಸಿ ಅರ್ಥಮಾಡಿಕೊಳ್ಳಲು ಪ್ರಯತ್ನ ಪಡಬೇಕಾಗುತ್ತದೆ. ಆತ್ಮ ನಿರ್ವಹಣೆಯೇ ಕಾನೂನಿನ ಉದ್ದೇಶ. ರಾಷ್ಟ್ರದ ಆತ್ಮವನ್ನು ಪೋಷಿಸುವ ಕಾನೂನುಗಳನ್ನೇ ಧರ್ಮ ಎಂದು ಕರೆಯಲಾಗುತ್ತದೆ. ಆದ್ದರಿಂದ ಧರ್ಮವೇ ಪರಮೋಚ್ಚವಾದದ್ದು. ಧರ್ಮ ರಾಷ್ಟ್ರದ ಆತ್ಮದ ಉಸಿರಿದ್ದಂತೆ. ಧರ್ಮ ನಾಶವಾದಲ್ಲಿ ರಾಷ್ಟ್ರವೂ ನಾಶವಾಗುತ್ತದೆ. ಧರ್ಮ ಪಾಲಿಸದವರು ರಾಷ್ಟ್ರದ್ರೋಹಿಗಳು.

ಧರ್ಮ, ದೇವಾಲಯ–ಮಸೀದಿಗಳಿಗೆ ಸೀಮಿತವಾದುದಲ್ಲ. ದೇವರ ಪೂಜೆ, ಆರಾಧನೆಗಳು ಧರ್ಮದ ಒಂದು ಅಂಗ. ಧರ್ಮ ಇದಕ್ಕಿಂತ ಹೆಚ್ಚು ವ್ಯಾಪಕವಾದದ್ದು. ಹಿಂದೆಲ್ಲ ದೇವಾಲಯಗಳು ಜನತೆಗೆ ಅವರ ಧರ್ಮವನ್ನು ಬೋಧಿಸುವ ಮಾಧ್ಯಮಗಳಾಗಿದ್ದವು. ಶಾಲೆಗಳೇ ಜ್ಞಾನವಲ್ಲ ಹಾಗೆಯೇ ದೇವಾಲಯಗಳೇ ಧರ್ಮವಲ್ಲ. ಮಗು ಶಾಲೆಗೆ ಹೋಗಿಯೂ ಅಶಿಕ್ಷಿತವಾಗಿಯೇ ಇರಬಹುದು. ಹಾಗೆಯೇ ವ್ಯಕ್ತಿಯೊಬ್ಬ ದೇವಸ್ಥಾನ ಅಥವಾ ಮಸೀದಿಗೆ ತಪ್ಪದೇ ಹೋಗಬಹುದು. ಆದಾಗ್ಯೂ ಅವನಲ್ಲಿ ಧರ್ಮದ ಅರಿವು ಇಲ್ಲದೇ ಇರಬಹುದು. ದೇವಸ್ಥಾನ

ಅಥವಾ ಮಸೀದಿಗಳಿಗೆ ಹೋಗುವುದು, ಜಾತಿ-ಮತಗಳ ಕಟ್ಟಳೆಯೇ ವಿನಃ ಅದು ಧರ್ಮವಾಗದು. ತಪ್ಪು ತಪ್ಪಾದ ಇಂಗ್ಲೀಷ್ ಭಾಷಾಂತರಗಳಿಂದಾಗಿ ಅನೇಕ ತಪ್ಪು ಕಲ್ಪನೆಗಳು. ತಪ್ಪುಗ್ರಹಿಕೆಗಳು ಉಂಟಾಗಿವೆ. ಧರ್ಮವನ್ನು ಜಾತಿಯೊಂದಿಗೆ ಸಮೀಕರಿಸಿರುವ ತಪ್ಪಿನಿಂದ ಆಗಿರುವ ಪರಿಣಾಮ ಇದು.

**ಧರ್ಮ ಮತ್ತು ಜಾತಿಮತಗಳು ಬೇರೆಬೇರೆ**

ಒಂದು ಕಡೆ ನಾವು ಜಾತಿಮತಗಳನ್ನು ಧರ್ಮಕ್ಕೆ ಸಮಾನಾರ್ಥಕವಾಗಿ ಬಳಸಿದವು. ಮತ್ತೊಂದು ಕಡೆ ಅಜ್ಞಾನ ಹೆಚ್ಚಿತು, ಸಮಾಜ ಮತ್ತು ಧರ್ಮವನ್ನು ಅಲಕ್ಷಿಸಿದೆವು ಹಾಗೂ ಐರೋಪ್ಯ ಜೀವನವನ್ನು ಹೆಚ್ಚು ಹೆಚ್ಚಾಗಿ ಒಪ್ಪಿಕೊಳ್ಳುವ ಪ್ರವೃತ್ತಿ ನಮ್ಮ ಶಿಕ್ಷಣದ ಗುಣಲಕ್ಷಣಗಳ ಹೆಗ್ಗುರುತಾಯಿತು. ಇದೆಲ್ಲದರ ಪರಿಣಾಮವಾಗಿ ಪಶ್ಚಿಮದಲ್ಲಿ ಆಚರಿಸಲಾಗುತ್ತಿದ್ದ ಸಂಕುಚಿತ ಜಾತಿ-ಮತ ದೃಷ್ಟಿಕೋನವನ್ನು ಧಾರ್ಮಿಕ ಪರಿಕಲ್ಪನೆಗೂ ಅನ್ವಯಿಸಲಾಯಿತು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅನ್ಯಾಯ, ದುರಾಚಾರ, ದುಷ್ಕೃತ್ಯಗಳನ್ನು ಎಸಗುತ್ತಿದ್ದು ಧರ್ಮದ ಹೆಸರಿನಲ್ಲಿ ತೀವ್ರ ಹೋರಾಟಗಳು, ಸಂಘರ್ಷಗಳು ನಡೆದವು. ಇಂಥ ಕೃತ್ಯಗಳೆಲ್ಲವನ್ನೂ ಸಾರಾಸಗಟಾಗಿ ಧರ್ಮದ ಖಾತೆಗೆ ಜಮಾ ಮಾಡಲಾಯಿತು. ಧರ್ಮದ ಹೆಸರಿನಲ್ಲಿ ಸಮರಗಳು ನಡೆಯುತ್ತಿವೆ ಎನ್ನುವ ಭಾವನೆ ನಮ್ಮಲ್ಲಿ ಮೂಡಿತು. ಆದರೆ ಜಾತಿಮತಗಳ ಹೋರಾಟ ಹಾಗೂ ಧರ್ಮಕ್ಕಾಗಿ ನಡೆಸುವ ಹೋರಾಟ ಇವೆರಡೂ ಭಿನ್ನವಾದವು. ಜಾತಿ-ಮತ ಎಂದರೆ ಕುಲ, ಪಂಗಡ, ಪಂಥ, ನಂಬಿಕೆಗಳು ಅಷ್ಟೇ ಹೊರತು ಅದು ಧರ್ಮವಲ್ಲ. ಧರ್ಮದ ಪರಿಕಲ್ಪನೆ ವ್ಯಾಪಕವಾದದ್ದು. ವಿಸ್ತಾರವಾದದ್ದು. ಅದು ಬದುಕಿನ ಸಕಲ ವಿಷಯಗಳಿಗೂ ಸಂಬಂಧಿಸಿದ್ದು. ಸಕಲ ವಿಷಯಗಳ ಬಗ್ಗೆಯೂ ಕಾಳಜಿ ಹೊಂದಿರುವಂಥಾದ್ದು. ಧರ್ಮ ಸಮಾಜವನ್ನು ಪೋಷಿಸುತ್ತದೆ. ಅಷ್ಟೇಕೆ ಅದು ಇಡೀ ವಿಶ್ವವನ್ನೂ ಪೋಷಿಸುತ್ತದೆ, ಸಲಹುತ್ತದೆ. ಯಾವುದು ಪೋಷಿಸಿ, ಪೊರೆಯುವುದೋ ಅದೇ ಧರ್ಮ.

ಧರ್ಮದ ಮೂಲಭೂತ ತತ್ವಗಳು ಶಾಶ್ವತವಾದವು ಹಾಗೂ ವಿಶ್ವವ್ಯಾಪಿಯಾದವು. ಆದಾಗೂ ಇವುಗಳ ಆಚರಣೆ, ಅನುಷ್ಠಾನಗಳಲ್ಲಿ ಕಾಲ ದೇಶಾನುಸಾರ ವ್ಯತ್ಯಾಸಗಳಿರಬಹುದು. ಮನುಷ್ಯನಿಗೆ ತನ್ನ ದೇಹದ ಪೋಷಣೆಗೆ ಅನ್ನ ಆಹಾರಗಳ ಅಗತ್ಯವಿದೆ ಎನ್ನುವುದು ಸತ್ಯ. ಆದರೆ ಒಬ್ಬ ವ್ಯಕ್ತಿ ಎಷ್ಟು ಆಹಾರ ಸೇವಿಸಬೇಕು ಎಷ್ಟು ಸಮಯಾಂತರದಲ್ಲಿ ಯಾವ ಹೊತ್ತಿನಲ್ಲಿ ಊಟ ಮಾಡಬೇಕು ಇತ್ಯಾದಿಗಳೆಲ್ಲ ಸಂದರ್ಭಾನುಸಾರಿಯಾದವು. ಕೆಲವೊಮ್ಮೆ ಉಪವಾಸ ಮಾಡುವಂತೆಯೂ ಹೇಳಬೇಕಾಗುತ್ತದೆ. ವಿಷಮಶೀತಜ್ವರದಿಂದ ನರಳುತ್ತಿರುವ ರೋಗಿಗೆ ಮಾಮೂಲಿನಂತೆ ಅನ್ನ ಆಹಾರ ನೀಡಿದರೆ ಪರಿಣಾಮ



ವಿಷತ್ಕಾರಿಯಾಗುತ್ತದೆ. ಇಂಥ ವ್ಯಕ್ತಿಗೆ ಮಾಮೂಲಿನಂತೆ ಅನ್ನ ಆಹಾರ ನಿಷಿದ್ಧ. ಅಂತೆಯೇ ಧರ್ಮವನ್ನೂ ಬದಲಾಗುತ್ತಿರುವ ಕಾಲದೇಶಗಳಿಗನುಗುಣವಾಗಿ ಅಳವಡಿಸಿಕೊಳ್ಳಬೇಕು.

ಕೆಲವು ನಿಯಮಗಳು ತಾತ್ಕಾಲಿಕವಾದವು. ಉಳಿದವು ದೀರ್ಘಕಾಲಿಕವಾದವು. ಈ ಸಭೆಯಲ್ಲಿ ನಮ್ಮನ್ನು ಹದ್ದುಬಸ್ತಿಗೊಳಪಡಿಸುವಂಥ ಕೆಲವು ನಿಯಮಗಳಿವೆ. ನಾನು ಉಪನ್ಯಾಸ ನೀಡಬೇಕು, ನೀವು ಅದನ್ನು ಮಗ್ನರಾಗಿ ಕೇಳಬೇಕು ಎನ್ನುವುದು ಅಂಥ ಒಂದು ನಿಯುಮ. ಇದಕ್ಕೆ ತದ್ವಿರುದ್ಧವಾಗಿ ನೀವು ಪರಸ್ಪರ ಮಾತನಾಡಿಕೊಳ್ಳಲಾರಂಭಿಸಿದರೆ ಅಥವಾ ಏಕಕಾಲದಲ್ಲಿ ಎಲ್ಲರೂ ಸಭೆಯನ್ನುದ್ದೇಶಿಸಿ ಮಾತನಾಡಲು ಶುರುಮಾಡಿದರೆ ಅವ್ಯವಸ್ಥೆ ಉಂಟಾಗುತ್ತದೆ. ಕೆಲಸದಲ್ಲಿ ಪ್ರಗತಿಯಾಗುವುದಿಲ್ಲ. ಸಭೆ ಊರ್ಜಿತವಾಗುವುದಿಲ್ಲ. ಆಗ ನೀವು ನಿಮ್ಮ ಧರ್ಮವನ್ನು ಪಾಲಿಸಿಲ್ಲ ಎಂದು ಹೇಳಬಹುದು. ಆದ್ದರಿಂದ ಸಭೆ ಸುಸೂತ್ರವಾಗಿ ನಡೆಯುವಂತೆ ನಿಯಮಗಳನ್ನು ಅನುಸರಿಸುವುದು ನಮ್ಮ ಧರ್ಮ. ಆದರೆ ಈ ನಿಯಮ ಸಭೆ ನಡೆಯುವವರೆಗೆ ಮಾತ್ರ. ಸಭೆ ಮುಗಿದು ಮನೆಗೆ ವಾಪಸಾದ ನಂತರವೂ ನೀವು ಮಾತನಾಡದೇ ಮೌನಿಯಾಗಿದ್ದರೆ ಆಗ ಬೇರೊಂದು ಸಮಸ್ಯೆಯೇ ಉದ್ಭವಿಸುತ್ತದೆ. ನಿಮ್ಮ ಮನೆಯವರು ವೈದ್ಯರನ್ನು ಕರೆಸಬೇಕಾಗಬಹುದು. ಮನೆ ತಲುಪಿದ ನಂತರ ಮನೆಯ ನಿಯಮಗಳನ್ನು ಪಾಲಿಸಬೇಕಾದ್ದು ಅತ್ಯಗತ್ಯ. ನಿಯಮಗಳ ಸಾಮಾನ್ಯ ನಿರೂಪಣೆ ಹಾಗೂ ಅವುಗಳ ತಾತ್ವಿಕ ಆಧಾರವೇ ಧರ್ಮ. ಈ ನಿಯಮಗಳು ಏಕಪಕ್ಷೀಯವಾಗಿರಬಾರದು. ಅವು ತಾವು ನಿರ್ವಹಿಸಲಿರುವ ಮಾನವ ಕುಲದ ಅಸ್ತಿತ್ವ ಮತ್ತು ಪ್ರಗತಿಗಳಿಗೆ ಪೋಷಕದ್ರವ್ಯವಾಗಿರಬೇಕು. ಇದೇ ಕಾಲಕ್ಕೆ ಧರ್ಮದ ಅಂಗವಾಗಿರುವ ನಿಯಮಗಳು ಧರ್ಮದ ವ್ಯಾಪಕತೆಯನ್ನು ಮಾನ್ಯ ಮಾಡಬೇಕು. ಧರ್ಮದ ವಿಸ್ತೃತ ಚೌಕಟ್ಟನ್ನು ಮಾನ್ಯ ಮಾಡಬೇಕು ಹಾಗೂ ಇಂಥ ಧರ್ಮಕ್ಕೆ ಪೂರಕವಾಗಿರಬೇಕು. ಉದಾಹರಣೆಗಾಗಿ, ನಾವು ಒಂದು ಸಹಕಾರ ಸಂಘವನ್ನು ನೋಂದಾಯಿಸುತ್ತೇವೆ ಎಂದಿಟ್ಟುಕೊಳ್ಳೋಣ. ಈ ಸಂಘದ ನಿಯಮಾವಳಿಗಳನ್ನು ರೂಪಿಸುವ ಹಕ್ಕು ನಮಗಿದೆ. ಆದರೆ ಸಂಘದ ನಿಯಮಾವಳಿಗಳು ಸಮಾಜದ ಸಂವಿಧಾನಕ್ಕೆ ತದ್ವಿರುದ್ಧವಾಗಿರಬಾರದು. ಸಂಘಗಳ ರಚನೆ-ಸ್ಥಾಪನೆಗಳೂ ನೋಂದಾವಣೆ ಶಾಸನವನ್ನು ಉಲ್ಲಂಘಿಸುವಂತಿಲ್ಲ. ಈ ಶಾಸನವೂ ರಾಷ್ಟ್ರದ ಸಂವಿಧಾನಕ್ಕನುಗುಣವಾಗಿರಬೇಕು. ಅಂದರೆ ರಾಷ್ಟ್ರದ ಸಂವಿಧಾನವೂ ಮೂಲಭೂತ ದಸ್ತಾವೇಜು ಇದ್ದಂತೆ. ಇದು ರಾಷ್ಟ್ರದೊಳಗೆ ಮಾಡಲಾಗುವ ಎಲ್ಲ ಶಾಸನಗಳ ಮೇಲೂ ಹತೋಟಿ ಹೊಂದಿರುತ್ತದೆ. ಜರ್ಮನಿಯಲ್ಲಿ ಸಂವಿಧಾನವನ್ನು 'ಮೂಲಶಾಸನ' ಎಂದು ಕರೆಯಲಾಗುತ್ತದೆ.

**ಸಂವಿಧಾನ ಸ್ವೇಚ್ಛಾನುಸಾರಿಯಾಗಿರಬಾರದು**

ಸಂವಿಧಾನವೂ ಕೆಲವೊಂದು ಮೂಲತತ್ತ್ವಗಳಿಗೆ ಅಧೀನವಾಗಿರಬೇಕಲ್ಲವೆ? ಅಥವಾ ಅದು ಸಂವಿಧಾನ ರಚನಾಸಭೆಯ ಸ್ವೇಚ್ಛಾನುಸಾರಿಯಾದ, ಏಕಪಕ್ಷೀಯವಾದ ನಿರ್ಧಾರಗಳ ಫಲವೇ? ಗಂಭೀರವಾಗಿ ಪರ್ಯಾಲೋಚಿಸಿ ನೋಡಿದರೆ, ಸಂವಿಧಾನವೂ ಸಹ ಪ್ರಕೃತಿಯ ಮೂಲತತ್ತ್ವಗಳನ್ನು ಅನುಸರಿಸಬೇಕಾಗುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಸಂವಿಧಾನ ಇರುವುದು ರಾಷ್ಟ್ರದ ಪೋಷಕದಾಯಿಯಾಗಿ. ಪ್ರತಿಯಾಗಿ ಸಂವಿಧಾನವೇ ಅವನತಿಯ ಸಾಧನವಾದಲ್ಲಿ ಅದು ಸರಿಯಲ್ಲ ಎಂದು ಹೇಳಲೇಬೇಕಾಗುತ್ತದೆ. ಆಗ ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕಾಗುತ್ತದೆ. ತಿದ್ದುಪಡಿ ಬಹುಮತದ ಅಭಿಪ್ರಾಯವನ್ನೇ ಅವಲಂಬಿಸಿರಬೇಕಾಗಿಲ್ಲ ಈಚಿನ ದಿನಗಳಲ್ಲಿ ಬಹುಮತದ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಬಹುಮತದಿಂದ ಏನನ್ನು ಬೇಕಾದರೂ ಸಾಧಿಸುವುದು ಸಾಧ್ಯವೆ? ಸರ್ವಸ್ವವನ್ನೂ ಸಾಧಿಸುವುದು ಸಾಧ್ಯವೆ? ಬಹುಮತದ ನಿರ್ಣಯಗಳು, ಕ್ರಮಗಳು ಸರ್ವದಾ ಸರಿಯಾಗಿರುತ್ತವೆಯೆ? ಇಲ್ಲ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ದೊರೆಯೇ ಸಾರ್ವಭೌಮನಾಗಿರುತ್ತಿದ್ದ. ಆನಂತರ ರಾಜಪ್ರಭುತ್ವ ತನ್ನ ದಿವ್ಯಹಕ್ಕುಗಳಿಂದ ವಂಚಿತವಾದಾಗ ಪ್ರಜೆಗಳೇ ಸಾರ್ವಭೌಮರೆಂದು ಘೋಷಿಸಲಾಯಿತು. ಇಲ್ಲಿ ನಮ್ಮ ದೇಶದಲ್ಲಿ, ದೊರೆಯಾಗಲೀ, ಪ್ರಜೆಗಳಾಗಲೀ ಅಥವಾ ಸಂಸತ್ತಾಗಲೀ ಸರ್ವಸ್ವತಂತ್ರ ಸಾರ್ವಭೌಮರಲ್ಲ. ಸಂಸತ್ತು ಏಕಪಕ್ಷೀಯವಾಗಿ ಸ್ವೇಚ್ಛಾನುಸಾರ ನಿರ್ಣಯಗಳನ್ನು ಕೈಗೊಳ್ಳಲಾಗದು.

ಬ್ರಿಟಿಷ್ ಸಂಸತ್ ಸಾರ್ವಭೌಮವೆಂದೂ ಅದು ಏನನ್ನು ಬೇಕಾದರೂ ಮಾಡಬಹುದೆಂದು ಹೇಳಲಾಗುತ್ತದೆ. "ಬ್ರಿಟಿಷ್ ಪಾರ್ಲಿಮೆಂಟ್ ಪುರುಷನನ್ನು ಸ್ತ್ರೀಯಾಗಿ, ಸ್ತ್ರೀಯನ್ನು ಪುರುಷನನ್ನಾಗಿ ಪರಿವರ್ತಿಸುವುದು ಹೊರತು ಬೇರೆ ಏನನ್ನೂ ಬೇಕಾದರೂ ಮಾಡಬಹುದು" ಎಂದು ಅಲ್ಲಿಯ ಜನ ಹೇಳುತ್ತಾರೆ. ಆದರೆ, ಪ್ರತಿಯೊಬ್ಬ ಇಂಗ್ಲಿಷ್ ಪ್ರಜೆಯು ತಲೆಯ ಮೇಲೆ ನಡೆಯಬೇಕೆಂದು ಬ್ರಿಟಿಷ್ ಪಾರ್ಲಿಮೆಂಟ್ ಶಾಸನ ಮಾಡಲು ಸಾಧ್ಯವಾದೀತೆ? ಅದು ಸಾಧ್ಯವಿಲ್ಲ. ಅದು ಬೇಡ. ಇಂಗ್ಲೆಂಡಿನ ಪ್ರತಿಯೊಬ್ಬ ಪ್ರಜೆಯೂ ದಿನಕ್ಕೆ ಒಮ್ಮೆಯಾದರೂ ಸ್ಥಳೀಯ ಅಧಿಕಾರಗಳ ಸಮ್ಮುಖ ಹಾಜರಾಗಬೇಕೆಂದು ಶಾಸನ ಮಾಡಲು ಅದರಿಂದ ಸಾಧ್ಯವಾದೀತೆ?ಇಲ್ಲ ಅದೂ ಸಾಧ್ಯವಿಲ್ಲ. ಇಂಗ್ಲೆಂಡಿನಲ್ಲಿ ಲಿಖಿತ ಸಂವಿಧಾನವಿಲ್ಲ. ಅವರಿಗೆ ತಮ್ಮ ಸಂಪ್ರದಾಯಗಳ ಬಗ್ಗೆ ಅತಿಯಾದ ಗೌರವವಿದೆ. ಆದರೆ ಅವರ ಸಂಪ್ರದಾಯಗಳಲ್ಲೂ ಬದಲಾವಣೆಗಳಾಗಿವೆ. ಅವರ ಸಂಪ್ರದಾಯಗಳಲ್ಲಿ ಆಗಿರುವ ಬದಲಾವಣೆಗಳಿಗೆ ಆಧಾರವಾದರೂ ಏನು? ಇಂಗ್ಲೆಂಡಿನ ಪ್ರಗತಿಗೆ ಯಾವುದು ಅಡ್ಡಿಯೋ ಅಂಥ ಸಂಪ್ರದಾಯವನ್ನು ಕಿತ್ತೊಗೆದರು. ಪ್ರಗತಿಗೆ ಸಹಾಯಕವಾದುದನ್ನು ಬಲಪಡಿಸಿದರು.



ಇಂಗ್ಲೆಂಡಿನಂತೆ ಎಲ್ಲ ಕಡೆಯೂ ಸಂಪ್ರದಾಯಗಳನ್ನು ಗೌರವಿಸಲಾಗುತ್ತಿದೆ. ನಮ್ಮಲ್ಲಿ ಲಿಖಿತ ಸಂವಿಧಾನವಿದೆ. ಆದರೆ ಈ ಲಿಖಿತ ಸಂವಿಧಾನವೂ ರಾಷ್ಟ್ರದ ಸಂಪ್ರದಾಯಗಳಿಗೆ ವಿರುದ್ಧವಾಗಿರುವಂತಿಲ್ಲ. ಅದು ನಮ್ಮ ಸಂಪ್ರದಾಯಗಳಿಗೆ ವಿರುದ್ಧವಾಗಿ ಹೋದರೆ ಧರ್ಮವನ್ನು ಪಾಲಿಸಿಲ್ಲ ಎಂದೇ ಅರ್ಥ. ರಾಷ್ಟ್ರವನ್ನು ಪೋಷಿಸುವ ಸಂವಿಧಾನ ಧರ್ಮದ ಶ್ರುತಿಗನುಗುಣವಾಗಿಯೇ ಇದೆ. ಧರ್ಮ ರಾಷ್ಟ್ರವನ್ನು ಪೋಷಿಸುತ್ತದೆ. ಆದ್ದರಿಂದ ನಾವು ಸರ್ವದಾ ಧರ್ಮಕ್ಕೆ ಆದ್ಯ ಪ್ರಾಮುಖ್ಯ ನೀಡುತ್ತೇವೆ. ಧರ್ಮವೇ ಸಾರ್ವಭೌಮ ಎಂದು ನಮ್ಮ ಎಣಿಕೆ. ಎಲ್ಲ ಪ್ರಜೆಗಳೂ, ಸಂಘಸಂಸ್ಥೆಗಳೂ, ಅಧಿಕಾರಯುತ ಸ್ಥಾನಗಳೂ ಧರ್ಮದಿಂದಲೇ ಅಧಿಕಾರ ಪಡೆಯುತ್ತವೆ. ಇವೆಲ್ಲವೂ ಧರ್ಮದ ಅಧೀನ.

**ನಮಗೆ ಬೇಕು ಏಕೀಕೃತ ಸಂವಿಧಾನ**

ರಾಷ್ಟ್ರದ ಪ್ರಗತಿ, ಬೆಳವಣಿಗೆಗಳ ದೃಷ್ಟಿಯಿಂದ ನಾವು ನಮ್ಮ ಸಂವಿಧಾನವನ್ನು ಪರಾಮರ್ಶಿಸಿದಲ್ಲಿ ನಮ್ಮ ಸಂವಿಧಾನಕ್ಕೆ ಕೆಲವೊಂದು ತಿದ್ದುಪಡಿಗಳನ್ನು ಮಾಡುವುದು ಅಗತ್ಯವೆನ್ನಿಸುತ್ತದೆ. ನಾವು ಒಂದೇ ರಾಷ್ಟ್ರ, ಒಂದೇ ಜನ. ಆದ್ದರಿಂದಲೇ ನಾವು ಭಾಷೆ, ಪ್ರಾಂತ್ಯ, ಜಾತಿ ಮತಗಳ ಆಧಾರದ ಮೇಲೆ ವಿಶೇಷ ಹಕ್ಕುಗಳನ್ನು ನೀಡಲಿಲ್ಲ. ಆದರೆ ಪ್ರತಿಯೊಬ್ಬರಿಗೂ ಸಮಾನ ಪೌರತ್ವ ನೀಡಲಾಗಿದೆ. ಪ್ರತ್ಯೇಕ ಪೌರತ್ವ ಇಲ್ಲ. ನಾವೆಲ್ಲ ಭಾರತದ ಪ್ರಜೆಗಳು. ಅದೇ ರೀತಿ ರಾಜ್ಯಗಳಿಗೆ ಪ್ರತ್ಯೇಕಗೊಳ್ಳುವ ಹಕ್ಕನ್ನು ನಿರಾಕರಿಸಲಾಗಿದೆ. ಅಷ್ಟೇ ಅಲ್ಲ ರಾಜ್ಯಗಳ ಗಡಿಗಳನ್ನು ಗುರುತಿಸುವಿಕೆ ಮತ್ತು ರಾಜ್ಯಗಳಿಗೆ ಹೆಸರು ಕೊಡುವ ಅಧಿಕಾರ ಸಂಸತ್ತಿನ ಕೈಯ್ಯಲ್ಲಿದೆ, ವಿಧಾನಸಭೆಗಳ ಕೈಯ್ಯಲ್ಲಿಲ್ಲ. ಇದು ರಾಷ್ಟ್ರೀಯತೆ ಮತ್ತು ಭಾರತದ ಸಂಪ್ರದಾಯಕ್ಕನುಗುಣವಾಗಿಯೇ ಇದೆ. ಇಷ್ಟೆಲ್ಲ ಇದ್ದಾಗ್ಯೂ ನಾವು ನಮ್ಮ ಸಂವಿಧಾನಕ್ಕೆ ಒಕ್ಕೂಟದ ಸ್ವರೂಪ ನೀಡಿದೆವು. ಈ ಮೂಲಕ ಕಾರ್ಯತಃ ನಾವು ಏನನ್ನು ಅಳವಡಿಸಿಕೊಂಡಿದ್ದೆವೋ ಅದನ್ನು ತಾತ್ವಿಕವಾಗಿ ನಿರಾಕರಿಸಿದೆವು. ಒಕ್ಕೂಟ ವ್ಯವಸ್ಥೆಯಲ್ಲಿ ಒಕ್ಕೂಟದ ಅಂಗವಾದ ಘಟಕಗಳಿಗೆ ತಮ್ಮದೇ ಆದ ಸಾರ್ವಭೌಮತ್ವ ಇದೆ. ಅವು ಒಪ್ಪಂದವೊಂದರ ಮೂಲಕ ಸ್ವಯಂಪ್ರೇರಣೆಯಿಂದ ತಮ್ಮ ಸಾರ್ವಭೌಮತ್ವವನ್ನು ತ್ಯಜಿಸುತ್ತದೆ. ಅವು ತಮ್ಮ ಎಲ್ಲ ಹಕ್ಕುಗಳನ್ನೂ ಬಿಟ್ಟು ಕೊಡಬಹುದು ಇದರ ಮುಖೇನ ಕೇಂದ್ರ ಸಾರ್ವಭೌಮತ್ವವನ್ನು ಪಡೆಯುತ್ತದೆ. ಆದರೆ ಈ ಅಧಿಕಾರ ಕೇಂದ್ರಕ್ಕೆ ರಾಜ್ಯಗಳಿಂದ ಕೊಡಮಾಡಲ್ಪಟ್ಟಿದ್ದು. ಅದಕ್ಕೆ ತನ್ನದೇ ಆದ ಅಧಿಕಾರವಿಲ್ಲ. ಒಕ್ಕೂಟ ವ್ಯವಸ್ಥೆಯ ಸಂವಿಧಾನ ರಾಜ್ಯಗಳನ್ನು ಮೂಲಾಧಿಕಾರವೆಂದು ಪರಿಗಣಿಸುತ್ತದೆ ಹಾಗೂ ಕೇಂದ್ರ ರಾಜ್ಯಗಳ ಒಂದು ಒಕ್ಕೂಟವಷ್ಟೇ. ಇದು ಸತ್ಯಕ್ಕೆ ತದ್ವಿರುದ್ಧವಾದದ್ದು. ಇದು ಭಾರತದ ಏಕತೆಗೆ ಹಾಗೂ ಅವಿಭಾಜ್ಯತೆಗೆ ಪ್ರತಿಕೂಲವಾದದ್ದು. ಭಾರತ ಮಾತಾ ಕಲ್ಪನೆಗೆ

ಮಾನ್ಯತೆ ಇಲ್ಲ. ಜನರ ಹೃದಯ ಸಿಂಹಾಸನದಲ್ಲಿ ರಾರಾಜಿಸುವ ಭಾರತಮಾತೆಗೆ ಮಾನ್ಯತೆ ಇಲ್ಲ. ಸಂವಿಧಾನದ ಮೊದಲನೆಯ ಪ್ಯಾರ ಪ್ರಕಾರ " ಇಂಡಿಯಾ ಅಂದರೆ ಭಾರತ ರಾಜ್ಯಗಳ ಒಕ್ಕೂಟವಾಗಿರುತ್ತದೆ" ಅಂದರೆ ಇದರ ಅರ್ಥ ಬಿಹಾರ್ ಮಾತೆ, ಬಂಗಮಾತೆ, ಪಂಜಾಬ್ ಮಾತೆ, ಕನ್ನಡಮಾತೆ, ತಮಿಳುಮಾತೆ ಇವರೆಲ್ಲ ಒಗ್ಗೂಡುವ ಮೂಲಕ ಭಾರತ ಮಾತೆಯ ಸೃಷ್ಟಿಯಾಗುತ್ತದೆ. ಇದು ಹಾಸ್ಯಾಸ್ಪದವಾದದ್ದು. ನಾವು ರಾಜ್ಯಗಳನ್ನು ಭಾರತಮಾತೆಯ ಅವಯವಗಳೆಂದು ಪರಿಗಣಿಸಿದ್ದೇವೆಯೇ ಹೊರತು ಪ್ರತ್ಯೇಕ ಮಾತೆಯೆಂದಲ್ಲ. ಆದ್ದರಿಂದ ನಮ್ಮ ಸಂವಿಧಾನ ಒಕ್ಕೂಟದ ಸಂವಿಧಾನವಾಗಿರಬಾರದು, ಏಕೀಕೃತ ಸಂವಿಧಾನವಾಗಬೇಕು.

## ಅಧಿಕಾರ ವಿಕೇಂದ್ರೀಕರಣ

ಏಕೀಕೃತ ವ್ಯವಸ್ಥೆ ಅಥವಾ ಏಕೀಕೃತ ಸರ್ಕಾರ ಎಂದಾಕ್ಷಣ ಎಲ್ಲ ಅಧಿಕಾರಗಳೂ ಕೇಂದ್ರ ಸರ್ಕಾರದ ಕೈಯ್ಯಲ್ಲೇ ಇರಬೇಕು ಎಂದರ್ಥವಲ್ಲ. ಒಂದು ಅವಿಭಕ್ತ ಕುಟುಂಬದಲ್ಲಿ ಮನೆಯ ಯಜಮಾನನ ಕೈಯ್ಯಲ್ಲೇ ಎಲ್ಲ ಅಧಿಕಾರಗಳೂ ಇರುವುದಿಲ್ಲ. ಆದಾಗ್ಯೂ ಎಲ್ಲ ವ್ಯವಹಾರಗಳೂ ಅವನ ಹೆಸರಿನಲ್ಲೇ ನಡೆಯುತ್ತವೆ. ಕುಟುಂಬದಲ್ಲಿ ಉಳಿದವರಿಗೂ ಕಾರ್ಯ ನಿರ್ವಹಣಾಧಿಕಾರಗಳಿರುತ್ತವೆ. ನಮ್ಮ ದೇಹದಲ್ಲಿ ಅಷ್ಟೇ. ಎಲ್ಲ ಅಧಿಕಾರಿಗಳೂ ಆತ್ಮಕೇಂದ್ರಿತವೇ? ಹೀಗಾಗಿ ಏಕೀಕೃತ ಸರ್ಕಾರವೆಂದರೆ ಸರ್ವಾಧಿಕಾರವುಳ್ಳ ಕೇಂದ್ರ ಎಂದು ಅರ್ಥವಲ್ಲ ಅಥವಾ ಏಕೀಕೃತ ಕೇಂದ್ರ ಸರ್ಕಾರ ರಾಜ್ಯಗಳನ್ನು ತೊಡೆದುಹಾಕುತ್ತದೆ ಎಂದೂ ಅರ್ಥವಲ್ಲ. ರಾಜ್ಯಗಳಲ್ಲಿ ಹಲವಾರು ಕಾರ್ಯಾಂಗ ಅಧಿಕಾರಗಳಿರುತ್ತವೆ. ರಾಜ್ಯಸರ್ಕಾರದ ಕೆಳಗಿರುವ ಜನಪದಗಳಂಥವೂ ಸೂಕ್ತ ಅಧಿಕಾರಗಳನ್ನು ಹೊಂದಿರಬೇಕು ಹಿಂದೆ ಪಂಚಾಯಿತಿಗಳು ಮಹತ್ವದ ಸ್ಥಾನಮಾನ ಹೊಂದಿದ್ದವು, ಪಂಚಾಯಿತಿಗಳ ಸ್ಥಾನಮಾನವಂತೂ ತುಂಬ ಮುಖ್ಯವಾದದ್ದು. ಆದರೆ ಇಂದು ನಮ್ಮ ಸಂವಿಧಾನದಲ್ಲಿ ಪಂಚಾಯಿತಿಗಳಿಗೆ ಸ್ಥಾನವೇ ಇಲ್ಲ. ಪಂಚಾಯಿತಿಗಳಿಗೆ ಅವುಗಳ ಹಕ್ಕಿನನ್ವಯ ಅಧಿಕಾರಗಳಿಲ್ಲ. ಅವು ರಾಜ್ಯಗಳ ಕೃಪಾಛತ್ರದಲ್ಲಿದ್ದು ಕೇವಲ ದತ್ತಕ ಅಧಿಕಾರಗಳನ್ನು ಮಾತ್ರ ಹೊಂದಿವೆ. ಪಂಚಾಯಿತಿಗಳ ಅಧಿಕಾರವನ್ನು ಮೂಲಭೂತವಾದುದೆಂದು ಪರಿಗಣಿಸಬೇಕಾದ ಅಗತ್ಯವಿದೆ. ಅಧಿಕಾರ ಕೆಳಹಂತದವರೆಗೂ ವಿಕೇಂದ್ರೀಕರಣಗೊಳ್ಳಬೇಕು. ಆದರೆ ಅಧಿಕಾರ ಹೊಂದಿರುವ ಎಲ್ಲ ಅಂಗಗಳೂ ಏಕೀಕೃತ ವ್ಯವಸ್ಥೆಯ ಕೇಂದ್ರದಲ್ಲೇ ಇರಬೇಕು. ಇಂಥದೊಂದು ವ್ಯವಸ್ಥೆ ಧರ್ಮದ ಮೂರ್ತರೂಪವಾಗಿರುತ್ತದೆ.

ಧರ್ಮದ ಈ ಪರಿಕಲ್ಪನೆಯನ್ನು ಸರ್ಕಾರ, ರಾಷ್ಟ್ರ, ರಾಜ್ಯಗಳ ಆಚೆಗೂ ವಿಸ್ತರಿಸುವುದಾದಲ್ಲಿ ಇಡೀ ಮನುಕುಲದ ಪ್ರಕೃತಿಯನ್ನೇ ಪರಿಗಣಿಸಬೇಕಾಗುತ್ತದೆ.



ಅಂದರೆ, ರಾಷ್ಟ್ರದ ಸಂವಿಧಾನವು ಪ್ರಕೃತಿಯ ನಿಯಮಗಳಿಗೆ ವಿರುದ್ಧವಾಗಿರುವಂತಿಲ್ಲ. ಕಾನೂನಿನ ಗ್ರಂಥದಲ್ಲಿ ಕಾಣಸಿಗದಂಥ ಹಲವಾರು ನಡಾವಳಿಗಳಿವೆ. ಕೆಲವೊಮ್ಮೆ ಈ ನಡಾವಳಿಗಳು ಸಂವಿಧಾನಬದ್ಧ ಶಾಸನಗಳಿಗಿಂತ ಶಕ್ತಿಯುತವಾದವು. ನಾವು ನಮ್ಮ ತಂದೆತಾಯಿಯರಿಗೆ ಗೌರವ ತೋರಬೇಕೆಂಬ ನಡಾವಳಿಯನ್ನು ಯಾವ ಕಾನೂನಿನಲ್ಲೂ ಬರೆದಿಲ್ಲ. ದಿನಬೆಳಗಾದರೆ ಹಲವಾರು ಶಾಸನಗಳನ್ನು ಮಾಡುತ್ತಿರುವ ಇಂದಿನ ಸರ್ಕಾರ ಈ ಬಗ್ಗೆ ಶಾಸನವೊಂದನ್ನು ಮಾಡಿಲ್ಲ. ಆದಾಗ್ಯೂ ಜನ ತಮ್ಮ ಮಾತಾಪಿತೃಗಳನ್ನು ಗೌರವಿಸುತ್ತಾರೆ. ಯಾರು ಮಾತಾಪಿತೃಗಳನ್ನು ಗೌರವಿಸುವುದಿಲ್ಲವೋ ಅಂಥವರು ಟೀಕೆಗೆ, ಭರ್ತ್ಸನೆಗೆ ಒಳಗಾಗುತ್ತಾರೆ. ನಾಳೆ ನ್ಯಾಯಾಲಯದ ಮುಂದೆ ಈ ವಿಷಯ ಚರ್ಚೆಗೆ ಬಂದರೂ ವಯಸ್ಕರಾಗುವವರೆಗೆ ಮಕ್ಕಳು ತಂದೆತಾಯಿಯರ ನಿರ್ಧಾರಗಳಿಗೆ ತಲೆಬಾಗಬೇಕೆಂಬುದನ್ನು ನ್ಯಾಯಾಲಯವೂ ಅಂಗೀಕಾರ ಮಾಡುತ್ತದೆ.

## ಧರ್ಮ ಎಂದರೆ ಜನ್ಮಸಿದ್ಧ ಶಾಸನ

ವಿವಿಧ ಸಂದರ್ಭ ಸನ್ನಿವೇಶಗಳಲ್ಲಿನ ನಡಾವಳಿಯ ಔಚಿತ್ಯವನ್ನು ನಿರ್ಧರಿಸುವುದಕ್ಕೆ ಮನುಷ್ಯ ಸ್ವಭಾವದ ಮೂಲಭೂತ ನಿಯಮವೇ ಮಾನದಂಡ. ಈ ನಿಯಮವನ್ನೇ ನಾವು ಧರ್ಮ ಎಂದು ಕರೆದಿದ್ದೇವೆ. ಧರ್ಮ ಎನ್ನುವುದಕ್ಕೆ "ಜನ್ಮಸಿದ್ಧ ಶಾಸನ–Innate Law" ಎನ್ನುವುದು ಇಂಗ್ಲಿಷ್ ಸಮಾನಾರ್ಥಕ ಪದವಾದೀತು. ಆದರೆ ಇದರಿಂದ ಧರ್ಮದ ಸಂಪೂರ್ಣ ಅರ್ಥ ಹೊರಹೊಮ್ಮುವುದಿಲ್ಲ. ಧರ್ಮ ಪರಮೋಚ್ಚ. ಆದ್ದರಿಂದ ನಮ್ಮ ಸರ್ಕಾರದ ಆದರ್ಶ "ಧರ್ಮರಾಜ್ಯ" ದೊರೆಯಾದವನು ಧರ್ಮವನ್ನು ರಕ್ಷಿಸಬೇಕು. ಪುರಾತನ ಕಾಲದಲ್ಲಿ, ದೊರೆಗಳು ಪಟ್ಟಾಭಿಷೇಕ ಸಮಯದಲ್ಲಿ " ಯಾವ ಅಧಿಕಾರ ಶಕ್ತಿಯಿಂದಲೂ ನನ್ನನ್ನು ಶಿಕ್ಷಿಸಲಾಗದು" ಎಂದ ಮೂರು ಸಲ ಘೋಷಿಸುತ್ತಿದ್ದರಂತೆ. (ಪಾಶ್ಚಾತ್ಯ ರಾಷ್ಟ್ರಗಳಲ್ಲೂ ದೊರೆಗಳು ಇಂಥದೇ ಸಮರ್ಥನೆಗಳನ್ನು ಘೋಷಿಸುತ್ತಿದ್ದರು; 'ದೊರೆ ತಪ್ಪು ಮಾಡುವುದೇ ಇಲ್ಲ' ಆದ್ದರಿಂದ ಅಲ್ಲೂ ಸಹ ದೊರೆಯನ್ನು ಯಾರೂ ಶಿಕ್ಷಿಸುವಂತಿಲ್ಲ) ಆಗ ಪುರೋಹಿತರು ದೊರೆಯ ಬೆನ್ನಿನ ಮೇಲೆ ದಂಡ ಪ್ರಯೋಗಿಸಿ ಇಲ್ಲ ನೀನು ಧರ್ಮದ ನಿಯಮಗಳಿಗೆ ಅಧೀನನಾದವನು ನೀನು ಸಾರ್ವಭೌಮನಲ್ಲ" ಎಂದು ಹೇಳುತ್ತಿದ್ದರಂತೆ. ದೊರೆ ಪವಿತ್ರಾಗ್ನಿಯ ಪ್ರದಕ್ಷಿಣೆ ಮಾಡಿದಂತೆ ಪುರೋಹಿತರು ಅವನ ಮೇಲೆ ದಂಡ ಪ್ರಯೋಗ ಮಾಡುತ್ತಿದ್ದರಂತೆ. ಹೀಗೆ ಮೂರು ಸಲ ದೊರೆ ಅಗ್ನಿಗೆ ಪ್ರದಕ್ಷಿಣೆ ಹಾಕುವುದರೊಂದಿಗೆ ಪಟ್ಟಾಭಿಷೇಕ ಮುಕ್ತಾಯಗೊಳ್ಳುತ್ತಿತ್ತು. ಹೀಗೆ 'ನೀನು ದಂಡಿಸಲಾಗದ ಸಾರ್ವಭೌಮನಲ್ಲ" ಎಂದು ದೊರೆಗೆ ಸ್ಪಷ್ಟವಾಗಿ ಮನವರಿಕೆ ಮಾಡಿಕೊಡಲಾಗುತ್ತಿತ್ತು.

ದೊರೆಯ ಮೇಲೆ ಧರ್ಮ ಇರುತ್ತಿತ್ತು. ಅಂದರೆ ದೊರೆಯೂ ಧರ್ಮಾಧೀನನಾಗಿದ್ದನು. ಹೀಗಿರುವಾಗ ಜನ ಸ್ವೇಚ್ಛಾನುಸಾರವಾಗಿ ನಡೆದುಕೊಳ್ಳಲಾದೀತೆ? ಜನ ತಮಗೆ ಬೇಕಾದ್ದನ್ನು ಮಾಡಬಹುದು ಎಂದು ಹೇಳುತ್ತದೆ ಪ್ರಜಾಪ್ರಭುತ್ವ. ಆದರೆ ನಮ್ಮ ದೇಶದಲ್ಲಿ ಜನ ಬಯಸಿದರೂ ಅವರು ಧರ್ಮಕ್ಕೆ ವಿರುದ್ಧವಾಗಿ ವರ್ತಿಸುವ ಸ್ವಾತಂತ್ರ್ಯ ಅವರಿಗಿಲ್ಲ. ಒಮ್ಮೆ ಒಬ್ಬ ಅರ್ಚಕನಿಗೆ ಈ ಒಂದು ಪ್ರಶ್ನೆಯನ್ನು ಕೇಳಲಾಯಿತು. “ಭಗವಂತ ಸರ್ವಶಕ್ತನಾದಲ್ಲಿ ಅವನು ಧರ್ಮಕ್ಕೆ ವಿರುದ್ಧವಾಗಿ ವರ್ತಿಸಬಹುದೆ. ಇಲ್ಲ ಎಂದಾದಲ್ಲಿ ದೇವರು ಸರ್ವಶಕ್ತನಲ್ಲ” ಇದು ಸಂದಿಗ್ಧತೆ. ದೇವರು ಅಧರ್ಮ ಪಾಲಿಸಬಹುದೆ? ಇಲ್ಲವಾದಲ್ಲಿ ಅವನು ಸರ್ವಶಕ್ತ ಹೇಗಾಗುತ್ತಾನೆ? ವಾಸ್ತವವಾಗಿ ದೇವರೂ ಧರ್ಮಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುವಂತಿಲ್ಲ. ಹಾಗೆ ಮಾಡಿದಲ್ಲಿ ಅವನು ಸರ್ವಶಕ್ತನಲ್ಲ. ಅಧರ್ಮ ಎನ್ನುವುದು ದೌರ್ಬಲ್ಯದ ಒಂದು ಲಕ್ಷಣ. ಅದು ಶಕ್ತಿಯಲ್ಲ. ಅಗ್ನಿ ಪ್ರಜ್ವಲಿಸದೆ ಆರಿ ಹೋದಲ್ಲಿ ಅದರ ಶಕ್ತಿ ಕ್ಷೀಣಿಸಿತು ಎಂದೇ ಅರ್ಥ. ಶಕ್ತಿ ಅನಿಯಂತ್ರಿತ ವರ್ತನೆ, ನಡವಳಿಕೆಗಳಲ್ಲಿಲ್ಲ. ಆದರೆ ಸುನಿಯಂತ್ರಿತ ಕ್ರಿಯೆಯಲ್ಲಿದೆ. ಆದ್ದರಿಂದ ಸರ್ವಶಕ್ತನಾದ ಭಗವಂತನು ಸ್ವಯಂ ನಿಯಂತ್ರಿತ ಹಾಗೂ ತತ್ಪರಿಣಾಮವಾಗಿ ಅವನು ಧರ್ಮಕ್ಕೆ ಅನುಗುಣವಾಗಿದ್ದಾನೆ. ಅಧರ್ಮನಾಶಕ್ಕಾಗಿ ಭಗವಂತ ಮನುಷ್ಯರೂಪದಲ್ಲಿ ಅವತರಿಸಿ ಧರ್ಮ ಸಂಸ್ಥಾಪನೆ ಮಾಡುತ್ತಾನೆ. ಸ್ವೇಚ್ಛಾನುಸಾರ ನಡವಳಿಕೆಗಳನ್ನು ತಡೆಗಟ್ಟುತ್ತಾನೆ. ಸ್ವಯಂ ಸ್ವೇಚ್ಛಾನುಸಾರಿಯಾಗಿ ಭಗವಂತನೂ ವರ್ತಿಸುವುದಿಲ್ಲ. ಆದ್ದರಿಂದ ಸಕಲವನ್ನೂ ಮಾಡಬಹುದಾದ ಸರ್ವಶಕ್ತನಾದ ಭಗವಂತನೂ ಧರ್ಮಕ್ಕೆ ತದ್ವಿರುದ್ಧವಾಗಿ ನಡೆಯುವಂತಿಲ್ಲ. ಧರ್ಮ ದೇವರಿಗಿಂತ ದೊಡ್ಡದು ಎಂಬ ತಪ್ಪುಗ್ರಹಿಕೆಯ ಅಪಾಯವೂ ಇದೆ. ಹೀಗೆ ಯಾರಾದರೂ ಹೇಳಬಹುದು. ಆದರೆ ದೇವರು ಧರ್ಮದ ಪ್ರಕಾರ ನಡೆದುಕೊಳ್ಳುತ್ತಿರುವುದರಿಂದ ಈ ಬ್ರಹ್ಮಾಂಡ ಇನ್ನೂ ಉಳಿದಿದೆ. ದೊರೆ ವಿಷ್ಣುವಿನ ಸಂಕೇತ ಆದ್ದರಿಂದ ದೊರೆ ಧರ್ಮರಾಜ್ಯದ ಮುಖ್ಯಸಂರಕ್ಷಕ.

## ಧರ್ಮರಾಜ್ಯವೆಂದರೆ ಪುರೋಹಿತಶಾಹಿಯಲ್ಲ

ಧರ್ಮರಾಜ್ಯ ಎಂದರೆ ದೇವಪ್ರಭುತ್ವದ ಅಥವಾ ಪುರೋಹಿತಶಾಹಿ ರಾಷ್ಟ್ರ ಅಥವಾ ಸರ್ಕಾರ ಎಂದು ಅರ್ಥವಲ್ಲ. ಈ ಅಂಶವನ್ನು ಖಚಿತ ಮಾಡಿಕೊಳ್ಳೋಣ. ಈ ವಿಚಾರದಲ್ಲಿ ಸ್ಪಷ್ಟತೆ ಇರಲಿ. ಎಲ್ಲಿ ಒಂದು ನಿರ್ದಿಷ್ಟ ಪಂಥ ಮತ್ತು ಅದರ ಪ್ರವಾದಿ ಅಥವಾ ಗುರುವಿನ ಆಳ್ವಿಕೆಯೇ ಪರಮೋಚ್ಚವಾಗಿರುತ್ತದೋ ಅಂಥ ದೇಶವನ್ನು – ಸರ್ಕಾರವನ್ನು ಪುರೋಹಿತಶಾಹಿ ದೇಶ ಸರ್ಕಾರ ಎಂದು ಕರೆಯಲಾಗುತ್ತದೆ. ಈ ನಿರ್ದಿಷ್ಟ ಪಂಥಾನುಯಾಯಿಗಳಿಗೆ ಸಕಲ ಹಕ್ಕುಗಳೂ ಇವೆ. ಉಳಿದವರು ಇಂಥ ರಾಜ್ಯಗಳಲ್ಲಿ ಬದುಕಲಸಾಧ್ಯ. ಅಥವಾ ಅವರು



ಗುಲಾಮರಂತೆ ಬದುಕಬೇಕಾಗುತ್ತದೆ, ಎರಡನೆ ದರ್ಜೆಯ ಪೌರರಂತೆ ಬದುಕಬೇಕಾಗುತ್ತದೆ. ಪವಿತ್ರ ರೋಮ್ ಸಾಮ್ರಾಜ್ಯಕ್ಕೆ ಇದೇ ಆಧಾರವಾಗಿತ್ತು. “ಖಿಲಾಫತ್’ ಬೆನ್ನಿಗಿದ್ದದ್ದೂ ಇದೇ ಪರಿಕಲ್ಪನೆಯೇ. ವಿಶ್ವದಾದ್ಯಂತ ಮುಸ್ಲಿಂ ದೊರೆಗಳು ಖಲೀಫಾನ ಹೆಸರಿನಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಮೊದಲನೆ ವಿಶ್ವಸಮರದ ನಂತರ ಇದು ಅಂತ್ಯಗೊಂಡಿತು. ಈಗ ಇದನ್ನು ಪುನುರುಜ್ಜೀವಗೊಳಿಸುವ ಪ್ರಯತ್ನಗಳು ನಡೆದಿವೆ. ಪುರೋಹಿತಶಾಹಿ ಆಳ್ವಿಕೆಯ ರಾಷ್ಟ್ರಕ್ಕೆ ಪಾಕಿಸ್ತಾನ ಇತ್ತೀಚಿನ ನಿದರ್ಶನವಾದೀತು. ಅವರು ತಮ್ಮ ದೇಶವನ್ನು ಇಸ್ಲಾಮಿಕ್ ರಾಷ್ಟ್ರವೆಂದು ಕರೆದುಕೊಂಡಿದ್ದಾರೆ. ಅಲ್ಲಿ ಮುಸ್ಲಿಮರು  ಹೊರತಾಗಿ ಉಳಿದವರು ಎರಡನೆ ದರ್ಜೆಯ ಪೌರರು. ಇದು ಹೊರತಾಗಿ ಪಾಕಿಸ್ತಾನದ ಆಡಳಿತದಲ್ಲಿ ಇಸ್ಲಾಮಿನ ಬೇರಾದ ಲಕ್ಷಣವೂ ಇಲ್ಲ. ಕುರಾನ್, ಮಸೀದಿ, ರೋಜ್ ಈದ್, ನಮಾಜ್ ಇತ್ಯಾದಿಗಳೆಲ್ಲ ಭಾರತ ಮತ್ತು ಪಾಕಿಸ್ತಾನಗಳಲ್ಲಿ ಏಕರೀತಿಯವೇ ಆಗಿವೆ. ರಾಷ್ಟ್ರವೊಂದನ್ನು ಧರ್ಮದ ಜೊತೆಗೆ ಗಂಟುಹಾಕುವ ಅಗತ್ಯ ಇಲ್ಲ. ಇಂಥ ನಂಟಿನಿಂದ ವ್ಯಕ್ತಿಯ ದೇವತಾರಾಧನ ಶಕ್ತಿ ಸಾಮರ್ಥ್ಯಗಳೇನೂ ಹೆಚ್ಚುವುದಿಲ್ಲ. ಇದರ ಏಕೈಕ ಫಲವೆಂದರೆ ಇಂಥ ಸರ್ಕಾರ ತನ್ನ ಕಾರ್ಯದಿಂದ ವಿಮುಖವಾಗುವುದು. ಧರ್ಮರಾಜ್ಯದಲ್ಲಿ ಹೀಗಾಗುವುದಿಲ್ಲ. ಬದಲಾಗಿ ಪ್ರತಿಯೊಬ್ಬ ಪ್ರಜೆಗೂ ತಮ್ಮ ಧರ್ಮಾನುಸಾರ, ಜಾತಿಮತಗಳನುಸಾರ ಆರಾಧಿಸುವ ಪೂಜಿಸುವ ಸ್ವಾತಂತ್ರ್ಯವಿರುತ್ತದೆ. ಪುರೋಹಿತಶಾಹಿ ರಾಷ್ಟ್ರದಲ್ಲಿ ಒಂದು ಧರ್ಮದವರಿಗೆ ಎಲ್ಲ ಹಕ್ಕುಗಳು ಬಾಧ್ಯತೆಗಳು –ಸೌಲಭ್ಯಗಳು ಇರುತ್ತವೆ ಹಾಗೂ ಉಳಿದೆಲ್ಲ ಧರ್ಮಗಳ ಜನರ ಮೇಲೆ ಪರೋಕ್ಷ ಅಥವಾ ಪ್ರತ್ಯಕ್ಷ  ನಿಯಂತ್ರಣಗಳು, ಪ್ರತಿಬಂಧಕಗಳು ಇರುತ್ತವೆ. ಧರ್ಮರಾಜ್ಯ ವ್ಯಕ್ತಿಯ ಸುಖಶಾಂತಿ– ಪ್ರಗತಿಗಳಿಗಾಗಿ ಜಾತಿಮತ ಪಂಥಗಳನ್ನು ಮಾನ್ಯ ಮಾಡುತ್ತದೆ. ಆದ್ದರಿಂದ ಪ್ರತಿಯೊಬ್ಬ ಪ್ರಜೆಯೂ ತನಗೆ ಬೇಕಾದ ಜಾತಿಮತಪಂಥವನ್ನು ಅನುಸರಿಸುತ್ತಾ ಶಾಂತಿಯಿಂದ ಬಾಳ್ವೆಮಾಡಲು ಅಗತ್ಯವಾದಂಥ ವಾತಾವರಣವನ್ನುಂಟುಮಾಡುವುದು ಸರ್ಕಾರದ ಹೊಣೆಗಾರಿಕೆ. ಧಾರ್ಮಿಕ ಸ್ವಾತಂತ್ರ್ಯ ಅಥವಾ ಜಾತಿಮತಪಂಥ ಸ್ವಾತಂತ್ರಕ್ಕೆ ಉಳಿದ ಜಾತಿಮತ ಪಂಥಗಳ ಸಹಿಷ್ಣುತೆ ಅತ್ಯಗತ್ಯ. ಎಲ್ಲ ಬಗೆಯ ಸ್ವಾತಂತ್ರ್ಯಗಳಿಗೂ ಅವುಗಳದೇ ಇತಿಮಿತಿಗಳು ಅವುಗಳಲ್ಲೇ ಅಂತರ್ಗತವಾಗಿರುತ್ತವೆ ಎನ್ನುವುದನ್ನು ನಾವೆಲ್ಲ ಬಲ್ಲೆವು. ನನಗೆ ಕೈ ಆಡಿಸುವ ಸ್ವಾತಂತ್ರ್ಯವಿದೆ. ಆದರೆ ನನ್ನ  ಕೈ ಮತ್ತು  ಇನ್ನೊಬ್ಬರ ಮೂಗಿನ ನಡುವೆ ಘರ್ಷಣೆಯುಂಟಾದಾಗ ನನ್ನ ಸ್ವಾತಂತ್ರ್ಯವನ್ನು ಪ್ರತಿಬಂಧಿಸಬೇಕಾಗುತ್ತದೆ. ಇನ್ನೊಬ್ಬನ ಕಪಾಳಕ್ಕೆ ಹೊಡೆಯುವಂತೆ ಕೈ ಎತ್ತುವ ಸ್ವಾತಂತ್ರ್ಯ ನನಗಿಲ್ಲ. ಎಲ್ಲಿ ಇನ್ನೊಬ್ಬನ ಸ್ವಾತಂತ್ರ್ಯವನ್ನು ಅತಿಕ್ರಮಿಸುವ ಸಂಭಾವ್ಯತೆಯಿದೆಯೋ ಅಲ್ಲಿ ನನ್ನ ಸ್ವಾತಂತ್ರ್ಯ ಕೊನೆಗೊಳ್ಳುತ್ತದೆ. ಇಬ್ಬರ

ಸ್ವಾತಂತ್ರ್ಯವನ್ನೂ ಕಾಪಾಡಬೇಕಾದ್ದು, ಖಾತ್ರಿಯಾಗಿಸಬೇಕಾದ್ದು ಅತ್ಯಗತ್ಯ. ಅಂತೆಯೇ ಪ್ರತಿಯೊಂದು ಧರ್ಮಪಂಥಕ್ಕೂ ಅಸ್ತಿತ್ವದ ಸ್ವಾತಂತ್ರ್ಯವಿದೆ. ಅದರೆ ಎಲ್ಲಿಯವರೆಗೆ ಇನ್ನೊಂದು ಧರ್ಮಪಂಥವನ್ನು ಆಕ್ರಮಿಸುವುದಿಲ್ಲವೋ ಅಲ್ಲಿಯವರೆಗೆ ಈ ಸ್ವಾತಂತ್ರ್ಯವಿರುತ್ತದೆ. ಇನ್ನೊಂದು ಧರ್ಮ ಅಥವಾ ಪಂಥದ ಮೇಲೆ, ಜಾತಿಮತಗಳ ಮೇಲೆ ಆಕ್ರಮಣ ನಡೆಸಿದಲ್ಲಿ ಆಗ ಅದನ್ನು ಸ್ವಾತಂತ್ರ್ಯದ ದುರುಪಯೋಗ ಎಂದು ಖಂಡಿಸಬೇಕಾಗುತ್ತದೆ. ಬದುಕಿನ ಉಳಿದ ವಿಷಯಗಳಲ್ಲೂ, ದೃಷ್ಟಿಕೋನಗಳ್ಲೂ ಇಂಥ ಹದ್ದುಬಸ್ತುಗಳು ಇರುವುದು ಅತ್ಯವಶ್ಯಕ. ಧರ್ಮ ರಾಜ್ಯದಲ್ಲಿ ಜಾತಿ-ಮತ-ಪಂಥೀಯ ಸ್ವಾತಂತ್ರ್ಯವಿದೆ. ಆದರೆ ಪುರೋಹಿತಶಾಹಿಯಲ್ಲಿ ಈ ಸ್ವಾತಂತ್ರ್ಯ ಇಲ್ಲ.

**ಜಾತ್ಯತೀತ ರಾಷ್ಟ್ರ ಒಂದು ಭ್ರಮೆ**

ಈಚಿನ ದಿನಗಳಲ್ಲಿ "ಜಾತ್ಯತೀತ ರಾಷ್ಟ್ರ" ಎಂಬ ಪದ ಪ್ರಯೋಗವನ್ನು "ಪುರೋಹಿತಶಾಹಿ ರಾಷ್ಟ್ರ "ಕ್ಕೆ ಪ್ರತಿಯಾಗಿ ಬಳಸಲಾಗುತ್ತಿದೆ. ಈ ಪದ ಪಾಶ್ಚಾತ್ಯ ಚಿಂತನೆಯ ಮಾದರಿಯ ಅನುಕರಣೆಯಷ್ಟೆ. ನಮಗೆ ಈ ಆಮದಿನ ಅಗತ್ಯ ಇರಲಿಲ್ಲ. ಪಾಕಿಸ್ತಾನಕ್ಕೆ ವೈದೃಶ್ಯವಾಗಿ ನಾವು ಜಾತ್ಯತೀತ ರಾಷ್ಟ್ರವೆಂದು ಕರೆದುಕೊಂಡಿವು. ಇದರಿಂದಾಗಿ ಕೆಲವು ತಪ್ಪುಗ್ರಹಿಕೆಗಳು ಉದ್ಭವಿಸಿವೆ. ಜಾತಿಮತ ಪಂಥಗಳನ್ನು ಧರ್ಮದೊಂದಿಗೆ ಸಮೀಕರಿಸಲಾಯಿತು. ನಂತರ ಜಾತ್ಯತೀತ ರಾಷ್ಟ್ರವೆಂದರೆ ಧರ್ಮರಹಿತ ರಾಷ್ಟ್ರವೆಂದು ಅರ್ಥೈಸಲಾಯಿತು. ಕೆಲವರು ನಮ್ಮದು ಧರ್ಮರಹಿತ ರಾಷ್ಟ್ರವೆಂದು ಹೇಳಿದರು. ಇನ್ನು ಕೆಲವರು ಧರ್ಮ ನಿರಪೇಕ್ಷಿತ ಎನ್ನುವ ಪದವನ್ನು ಕಂಡುಹಿಡಿದರು. ಆದರೆ ಈ ಎಲ್ಲ ಪದ ಪ್ರಯೋಗಗಳೂ ಮೂಲಭೂತವಾಗಿ ದೋಷಪೂರಿತವಾದವು. ಶಾಖವಿಲ್ಲದೆ ಬೆಂಕಿಯಿರುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ರಾಷ್ಟ್ರವೊಂದು ಧರ್ಮರಹಿತವಾಗಿರುವುದು ಅಥವಾ ಧರ್ಮನಿರಪೇಕ್ಷಿತವಾಗಿರುವುದು ಸಾಧ್ಯವಿಲ್ಲ. ಬೆಂಕಿ ಶಾಖವನ್ನು ಕಳೆದುಕೊಂಡನಂತರ ಅದು ಬೆಂಕಿಯಾಗಿರುವುದಿಲ್ಲ. ಮೂಲತಃ ಧರ್ಮಪಾಲನೆಗಾಗಿ ಅಸ್ತಿತ್ವದಲ್ಲಿರುವ, ಕಾಯಿದೆ ಸುವ್ಯವಸ್ಥೆ ಪಾಲನೆಗಾಗಿ ಇರುವ ರಾಷ್ಟ್ರ ಸರ್ಕಾರಗಳು ಧರ್ಮರಹಿತವೂ ಧರ್ಮನಿರಪೇಕ್ಷಿತವೂ ಆಗಿರಲು ಸಾಧ್ಯವಿಲ್ಲ. ಹಾಗಿದ್ದಲ್ಲಿ ಅರಾಜಕ ರಾಷ್ಟ್ರವಾಗುತ್ತದೆ, ಸ್ವೇಚ್ಛಾಚಾರದ ಕಾನೂನು ರಹಿತ ರಾಷ್ಟ್ರವಾಗುತ್ತದೆ. ಕಾನೂನೇ ಇಲ್ಲ ಎಂದ ಮೇಲೆ ಯಾವುದೇ ರಾಷ್ಟ್ರದ, ಸರ್ಕಾರ ಅಸ್ತಿತ್ವ ಎಲ್ಲಿರುತ್ತದೆ? ಹೀಗಾಗಿ ಧರ್ಮರಹಿತ-ಧರ್ಮನಿರಪೇಕ್ಷಿತ ಪರಿಕಲ್ಪನೆಗಳೇ ಸ್ವವಿರೋಧಿ. ರಾಷ್ಟ್ರ-ಸರ್ಕಾರ ಧರ್ಮರಾಜ್ಯ ಮಾತ್ರ ಆಗಿರಲು ಸಾಧ್ಯ. ಧರ್ಮರಾಜ್ಯವಲ್ಲದೇ ರಾಷ್ಟ್ರ ಬೇರೇನೂ ಆಗಲು ಸಾಧ್ಯವಿಲ್ಲ. ಬೇರೆ ಯಾವುದೇ ಅರ್ಥವಿವರಣೆಯೂ ರಾಷ್ಟ್ರದ ಮೂಲೋದ್ದೇಶಕ್ಕೆ ಭಂಗವುಂಟು ಮಾಡುತ್ತದೆ.

**ಶಾಸಕಾಂಗ V/s ನ್ಯಾಯಾಂಗ**



ಧರ್ಮರಾಜ್ಯದಲ್ಲಿ ಸರ್ಕಾರಕ್ಕೆ ನಿರುಪಾಧಿಕ ಅಧಿಕಾರವಿರುವುದಿಲ್ಲ. ಸರ್ಕಾರ ಧರ್ಮದ ಅಧೀನ. ನಾವು ಧರ್ಮಕ್ಕೆ ಸಾರ್ವಭೌಮತ್ವವನ್ನು ನೀಡಿದ್ದೇವೆ. ಈಗೊಂದು ವಿವಾದ ಉದ್ಭವಿಸಿದೆ. ಸಂಸತ್ತು ಸಾರ್ವಭೌಮವೇ ಅಥವಾ ಸರ್ವೋಚ್ಚ ನ್ಯಾಯಾಲಯ(ಸುಪ್ರೀಂಕೋರ್ಟ್) ಸಾರ್ವಭೌಮವೇ? ಶಾಸಕಾಂಗ ಹೆಚ್ಚೇ ಅಥವಾ ನ್ಯಾಯಾಂಗ ಹೆಚ್ಚೇ? ಶಾಸಕಾಂಗ ಮತ್ತು ನ್ಯಾಯಾಂಗ ಇವೆರಡೂ ಸರ್ಕಾರದ ಅಂಗಗಳು. ಇವೆರಡಕ್ಕೂ ವಿಶಿಷ್ಟವಾದ ಕರ್ತವ್ಯಗಳಿವೆ. ಎರಡೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪರಮೋಚ್ಚವೇ. ಒಂದು ಇನ್ನೊಂದಕ್ಕಿಂತ ಹೆಚ್ಚು, ಒಂದು ಇನ್ನೊಂದರ ಮೇಲಿದೆ ಎಂದು ಭಾವಿಸುವುದೇ ತಪ್ಪು. ಆದಾಗ್ಯೂ ಶಾಸಕರು ನಾವೇ ಉಚ್ಚ - ತಮ ಎಂದು ಹೇಳುತ್ತಾರೆ. ತಾವು ಶಾಸಕಾಂಗ ರಚಿಸುವ ಕಾನುನುಗಳನ್ನು ಅರ್ಥೈಸುವುದರಿಂದ, ವ್ಯಾಖ್ಯಾನಿಸುವುದರಿಂದ ತಮಗೆ ಹೆಚ್ಚಿನ ಅಧಿಕಾರವಿದೆ ಎಂದು ನ್ಯಾಯಾಂಗದ ಸದಸ್ಯರು ಸಮರ್ಥಿಸಿಕೊಳ್ಳುತ್ತಾರೆ. ನ್ಯಾಯಾಂಗಕ್ಕೆ ಅಧಿಕಾರ ಕೊಟ್ಟಿರುವುದೇ ತಾನೆಂದು ಶಾಸಕಾಂಗ ಹೇಳುತ್ತದೆ. ಆದ್ದರಿಂದ ತಾನೇ ಸಾರ್ವಭೌಮ ಎಂದು ಅದರ ವಾದ. ಅಧಿಕಾರ ದತ್ತವಾಗಿರುವುದು ಸಂವಿಧಾನದಿಂದ. ಆದ್ದರಿಂದ ಈಗ ಸಂವಿಧಾನಕ್ಕೆ ತಿದ್ದುಪಡಿಮಾಡುವ ಮಾತನ್ನಾಡುತ್ತಿದ್ದಾರೆ. ಬಹುಮತದಿಂದ ಸಂವಿಧಾನಕ್ಕೆ ತಿದ್ದುಪಡಿ ಮಾಡಿದರೂ ಅದು ಧರ್ಮ ವಿರೋಧಿಯಾಗುತ್ತದೆ ಎಂದು ನನ್ನ ನಂಬಿಕೆ. ವಾಸ್ತವವಾಗಿ ನ್ಯಾಯಾಂಗ ಮತ್ತು ಕಾರ್ಯಾಂಗಗಳೆರಡೂ ಸಮತಲದಲ್ಲಿವೆ. ನ್ಯಾಯಾಂಗವೂ ಮೇಲಿಲ್ಲ ಶಾಸಕಾಂಗವೂ ಮೇಲಿಲ್ಲ. ಇವೆರಡರ ಮೇಲಿರುವುದು ಧರ್ಮ. ನ್ಯಾಯಾಂಗ ಶಾಸಕಾಂಗಗಳೆರಡೂ ಧರ್ಮದ ಪ್ರಕಾರ ಕೆಲಸಮಾಡಬೇಕು. ಧರ್ಮ ಇವೆರಡರ ಮಿತಿಗಳನ್ನು ಗೊತ್ತುಪಡಿಸುತ್ತದೆ. ನ್ಯಾಯಾಂಗವಾಗಲಿ, ಶಾಸಕಾಂಗವಾಗಲೀ ಜನತೆಯಾಗಲೀ ಯಾರೂ ಪರಮೋಚ್ಚವಲ್ಲ; ಕೆಲವರು ಹೇಳುತ್ತಾರೆ.

" ಜನತೆಯೇ ಸರ್ವೋಚ್ಚ. ಅವರು ಚುನಾಯಿಸುತ್ತಾರೆ" ಆದರೆ ಜನತೆಯೂ ಪರಮೋಚ್ಚವಲ್ಲ. ಏಕೆಂದರೆ ಧರ್ಮದ ವಿರುದ್ಧ ನಡೆಯುವ ಹಕ್ಕು ಅವರಿಗಿಲ್ಲ. ಚುನಾಯಿತ ಸರ್ಕಾರ ಜನತೆ ಧರ್ಮದ ವಿರುದ್ಧ ನಡೆಯಲು ಅವಕಾಶ ಮಾಡಿಕೊಟ್ಟಲ್ಲಿ, ಹಾಗೂ ಧರ್ಮದ ವಿರುದ್ಧ ಹೋಗುವವರನ್ನು ಶಿಕ್ಷಿಸದೇ ಹೋದಲ್ಲಿ ಅಂಥ ಸರ್ಕಾರ ವಾಸ್ತವವಾಗಿ ಕಳ್ಳರ ಸರ್ಕಾರವಾಗಿರುತ್ತದೆ. ಸೇನಾ ಪ್ರಧಾನ ದಂಡನಾಯಕನೂ ಧರ್ಮಕ್ಕೆ ವಿರುದ್ಧವಾಗಿ ನಡೆಯುವಂತಿಲ್ಲ. ಊಹಿಸಿಕೊಳ್ಳಿ, ಒಂದು ವೇಳೆ ಕೈಚಳಕ-ತಂತ್ರಗಳಿಂದಾಗಿ ಕಳ್ಳರೇ ಸರ್ಕಾರದಲ್ಲಿ ಬಹುಮತ ಪಡೆದು ತಮ್ಮಲ್ಲಿ ಒಬ್ಬರನ್ನು ಕಾರ್ಯಾಂಗದ ಮುಖ್ಯಸ್ಥನನ್ನಾಗಿ ನೇಮಿಸಿದರೆ ಏನಾಗಬಹುದು? ಕಳ್ಳರೇ ಬಹುಮತ ಪಡೆದು, ಕಳ್ಳನ ಕೈಗೇ ಅಧಿಕಾರ ಕೊಟ್ಟರೆ ಅಲ್ಪಸಂಖ್ಯಾತರ ಕರ್ತವ್ಯಗಳೇನಾಗಬಹುದು? ಬಹುಮತದಿಂದ ಚುನಾಯಿತರಾದ ಪ್ರತಿನಿಧಿಗಳನ್ನು

ಕಿತ್ತೊಗೆಯುವುದೇ ಅಲ್ಪಸಂಖ್ಯಾತರ ಕರ್ತವ್ಯವಾಗುತ್ತದೆ.

**ಯಾವಾಗಲೂ ಬಹುಮತವೇ ಯುಕ್ತವಲ್ಲ**

ಎರಡನೇ ವಿಶ್ವಸಮರದಲ್ಲಿ ಹಿಟ್ಲರ್ ಫ್ರಾನ್ಸ್ ಮೇಲೆ ದಾಳಿ ನಡೆಸಿದ. ನಾಜಿ ಪಡೆಗಳ ಮುನ್ನಡೆಯನ್ನು ಫ್ರೆಂಚರಿಂದ ತಡೆಯಲಾಗಲಿಲ್ಲ. ಫ್ರೆಂಚ್ ಪ್ರಧಾನಮಂತ್ರಿ ಮಾರ್ಷಲ್ ಪೆಟೈನ್ ಶರಣಾಗತರಾಗಲು ನಿರ್ಧರಿಸಿದರು. ಫ್ರೆಂಚ್ ಸಾರ್ವಜನಿಕರು ಈ ನಿರ್ಧಾರವನ್ನು ಬೆಂಬಲಿಸಿದರು. ಆದರೆ ಡಿಗಾಲೆ ಲಂಡನ್‌ಗೆ ಪರಾರಿಯಾಗಿ, ತಾವು ಶರಣಾಗತಿಯನ್ನು ಒಪ್ಪುವುದಿಲ್ಲವೆಂದು ಅಲ್ಲಿಂದ ಘೋಷಿಸಿದರು. ಫ್ರಾನ್ಸ್ ಸ್ವತಂತ್ರ ರಾಷ್ಟ್ರ, ಸ್ವತಂತ್ರವಾಗಿಯೇ ಉಳಿಯುತ್ತದೆ ಎಂದು ಘೋಷಿಸಿದ ಡಿಗಾಲೆ ಲಂಡನ್ನಿನಲ್ಲಿ ನೆಲೆತಪ್ಪಿದ ಸರ್ಕಾರವನ್ನು ರಚಿಸಿದರು. ಅಂತಿಮವಾಗಿ ಫ್ರಾನ್ಸನ್ನು ವಿಮುಕ್ತಗೊಳಿಸಿದರು. ಇಲ್ಲಿ ನೋಡಿ, ನಾವು ಬಹುಮತದ ಆಡಳಿತವೇ ಪರಮೋಚ್ಚ ಎಂದು ಪರಿಗಣಿಸಿದಲ್ಲಿ ಡಿಗಾಲೆಯವರ ಕ್ರಮವನ್ನು ಖಂಡಿಸಬೇಕಾಗುತ್ತದೆ. ಸ್ವಾತಂತ್ರ್ಯದ ಹೆಸರಿನಲ್ಲಿ ಹೋರಾಡುವ ಹಕ್ಕು ಅವರಿಗಿಲ್ಲ. ಫ್ರೆಂಚ್ ರಾಷ್ಟ್ರ ಬಹುಮತದ ಸಾರ್ವಜನಿಕ ಅಭಿಪ್ರಾಯಕ್ಕಿಂತ ಮಿಗಿಲಾದುದು ಎಂಬ ವಾಸ್ತವಾಂಶದಿಂದ ಡಿಗಾಲೇ ತಮ್ಮ ಹಕ್ಕನ್ನು ಪಡೆದರು. ಈ ವಾಸ್ತವಾಂಶವೇ ಅವರ ಬಲವಾಗಿತ್ತು. ರಾಷ್ಟ್ರಧರ್ಮ ಎಲ್ಲಕ್ಕಿಂತ ಪರಮೋಚ್ಚವಾದದ್ದು. ಸ್ವಾತಂತ್ರ್ಯವನ್ನು ಕಾಪಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಅದನ್ನು ಕಳೆದುಕೊಂಡಾಗ ಮರಳಿ ಪಡೆಯಲು ಹೋರಾಟ ನಡೆಸುವುದೂ ಪ್ರಜೆಯ ಕರ್ತವ್ಯ. ನಮ್ಮ ರಾಷ್ಟ್ರದಲ್ಲೂ ಬಹುಮಟ್ಟಿನ ಜನ ಬ್ರಿಟಿಷರ ವಿರುದ್ಧ ಎದ್ದು ನಿಲ್ಲಲಿಲ್ಲ. ಕೆಲವರು ಮಾತ್ರ ಎದ್ದು ನಿಂತರು. ಕ್ರಾಂತಿಕಾರಿಗಳು ಹುಟ್ಟಿಕೊಂಡರು. ವೀರರು ಎದ್ದು ನಿಂತರು. ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದರು. "ಸ್ವಾತಂತ್ರ್ಯ ಜನ್ಮಸಿದ್ಧ ಹಕ್ಕು" ಎಂದು ಲೋಕಮಾನ್ಯ ತಿಲಕರು ಘೋಷಿಸಿದರು. ಅವರು ಬಹುಜನರ ಬೆಂಬಲದಿಂದಾಗಲಿ, ಜನಮತಗಣನೆಯ ಬೆಂಬಲದಿಂದಾಗಿ ಈ ಜನ್ಮಸಿದ್ಧ ಹಕ್ಕನ್ನು ಘೋಷಿಸಲಿಲ್ಲ. ಈಚಿನ ದಿನಗಳಲ್ಲಿ ಗೋವೆಯ ವಿಲೀನವನ್ನು ಜನಮತ ಗಣನೆಯಿಂದ ನಿರ್ಧರಿಸಬೇಕೆಂದು ಕೆಲವರು ಪ್ರತಿಪಾದಿಸುತ್ತಿದ್ದಾರೆ. ಕಾಶ್ಮೀರದಲ್ಲೂ ಜನಾಭಿಪ್ರಾಯ ಸಂಗ್ರಹಿಸಬೇಕು ಇತ್ಯಾದಿ ಇತ್ಯಾದಿ ಮಾತುಗಳನ್ನಾಡಲಾಗುತ್ತಿದೆ. ಇದು ಸರಿಯಲ್ಲ. ತಪ್ಪು–ರಾಷ್ಟ್ರದ ಏಕತೆಯೇ ನಮ್ಮ ಧರ್ಮ. ರಾಷ್ಟ್ರದ ಏಕತೆಗೆ ಸಂಬಂಧಿಸಿದ ನಿರ್ಧಾರವನ್ನು ಜನಮತ ಸಂಗ್ರಹದಿಂದ ಕೈಗೊಳ್ಳಲಾಗದು. ಈ ರೀತಿಯ ನಿರ್ಧಾರವನ್ನು ಪ್ರಕೃತಿ ಈಗಾಗಲೇ ಕೈಗೊಂಡಾಗಿದೆ. ಚುನಾವಣೆಗಳು ಮತ್ತು ಬಹುಮತ ಯಾರು ಸರ್ಕಾರವನ್ನು ರಚಿಸಬಹುದು ಎಂಬುದನ್ನು ಮಾತ್ರ ನಿರ್ಧರಿಸುತ್ತದೆ. ಸತ್ಯವನ್ನು ಬಹುಮತದಿಂದ ನಿರ್ಧರಿಸಲಾಗದು. ಸರ್ಕಾರ ಏನು ಮಾಡಬೇಕೆಂಬುದನ್ನು ಧರ್ಮ ನಿಶ್ಚಯಿಸುತ್ತದೆ.



ಪ್ರಜಾಪ್ರಭುತ್ವದ ಬಗ್ಗೆ ಆಣೆ ಪ್ರಮಾಣ ಮಾಡುವ ಅಮೇರಿಕದಲ್ಲಿ, ಗುಲಾಮಗಿರಿ ಬಹಿಷ್ಕರಿಸುವ ಬಗ್ಗೆ ಸಾರ್ವಜನಿಕ ತಪ್ಪು ಅಭಿಪ್ರಾಯವನ್ನು ಲಿಂಕನ್ ಒಪ್ಪಿಕೊಳ್ಳಲಿಲ್ಲ ಎನ್ನುವುದು ನಿಮಗೆ ಗೊತ್ತೆ? ದಕ್ಷಿಣ ಪ್ರಾಂತ್ಯಗಳು ಬೇರ್ಪಡೆ ಹೊಂದುವ ಉದ್ದೇಶವನ್ನು ಘೋಷಿಸಿದಾಗ ಲಿಂಕನ್ ದೃಢನಿರ್ಧಾರ ತಾಳಿ, ಅಚಲವಾಗಿ ನಿಂತು ಅವರಿಗೆ ಹೇಳಿದರು. "ಪ್ರಜಾಪ್ರಭುತ್ವದಲ್ಲೂ ನಿಮಗೆ ಬೇರ್ಪಡೆಯಾಗುವ ಹಕ್ಕಿಲ್ಲ" ಅವರು ಇದರ ವಿರುದ್ಧ ಹೋರಾಡಿದರು, ಬೇರೆಯಾಗಲು ಬಿಡಲಿಲ್ಲ. ಅಥವಾ ಅವರು ಗುಲಾಮಗಿರಿಯನ್ನೂ ಸಹಿಸಿಕೊಳ್ಳಲಿಲ್ಲ. ದಕ್ಷಿಣ ಪ್ರಾಂತ್ಯಗಳ ಸೇರ್ಪಡೆಗಾಗಿ ಅವರು ಭಾಗಶಃ ಗುಲಾಮಗಿರಿಯ ರಾಜಿಗೂ ಸಿದ್ಧರಿರಲಿಲ್ಲ. ರಾಜಿ ನೀತಿಗೆ ಅವರ ಒಲವಿರಲಿಲ್ಲ. ಗುಲಾಮಿ ಪದ್ಧತಿ ಯಾವತ್ತೂ ಸಂಪ್ರದಾಯಕ್ಕೆ, ಧರ್ಮಕ್ಕೆ ಅಮೇರಿಕದ ತತ್ವಗಳಿಗೇ ವಿರುದ್ಧವಾದದ್ದು ಎಂದು ಅವರು ಘೋಷಿಸಿದರು. ಲಿಂಕನ್ ದೃಢನಿಲುವಿನಿಂದಾಗಿ ಗುಲಾಮಗಿರಿ ರದ್ದಾಯಿತು. ದಕ್ಷಿಣ ಪ್ರಾಂತ್ಯಗಳಿಗೆ ನೀವು ಬೇರೆಯಾಗಲಾಗದು ಎಂದು ಖಚಿತವಾಗಿ ಹೇಳಿದರು. ಈ ವಿಷಯದಲ್ಲಿ ಅಂತರ್ಯುದ್ಧವಾಯಿತು. ಆದರೂ ಲಿಂಕನ್ ಅಧರ್ಮದೊಂದಿಗೆ ರಾಜಿಸಂಧಾನ ಮಾಡಿಕೊಳ್ಳಲಿಲ್ಲ.

ಈ ವಿಚಾರದಲ್ಲಿ ನಮ್ಮ ದೇಶದಲ್ಲಿ ಪರಿಸ್ಥಿತಿ ಹೇಗಿದೆ ಎನ್ನುವುದಕ್ಕೆ ಒಂದು ದೃಷ್ಟಾಂತ ನೋಡಬಹುದು. ಪ್ರಾಚೀನ ಹಿಂದೂ ವಿವಾಹದಲ್ಲಿ ದಂಪತಿಗಳು ಇಬ್ಬರೂ ಇಚ್ಛೆಪಟ್ಟರೂ ವಿಚ್ಛೇದನ ಮಾಡಿಕೊಳ್ಳುವಂತಿಲ್ಲ. ದಂಪತಿಗಳ ನಡವಳಿಕೆ ಧರ್ಮದಿಂದ ನಿಯಂತ್ರಿತವಾದದ್ದು ಅವರ ಇಷ್ಟಾನಿಷ್ಟಗಳಿಂದಲ್ಲ. ರಾಷ್ಟ್ರದ ವಿಷಯದಲ್ಲೂ ಅಷ್ಟೇ. ಕಾಶ್ಮೀರದ ನಲವತ್ತು ಲಕ್ಷ ಜನರು ನಾವು ಬೇರೆಯಾಗುತ್ತೇವೆ ಎನ್ನುವುದು ಧರ್ಮ ವಿರೋಧಿಯಾಗುವುದು. ಗೋವೆಯ ಜನರು ನಾವು ಬೇರೆಯಾಗುತ್ತೇವೆ ಎನ್ನುವುದು ಧರ್ಮ ವಿರೋಧಿಯಾದದ್ದು. ಭಾರತದ ೪೫ ಕೋಟಿ ಜನರಲ್ಲಿ ೪೪ ಕೋಟಿ ೯೯ ಸಾವಿರ ೯೯೯. ಮಂದಿ ಧರ್ಮದ ವಿರುದ್ಧ ಮಾತನಾಡಿದರೆ ಅದು ಸತ್ಯವಾಗುವುದಿಲ್ಲ. ಆದರೇ ಒಬ್ಬನೇ ಒಬ್ಬ ವ್ಯಕ್ತಿ ಧರ್ಮ ಪ್ರಕಾರವಾಗಿರುವುದನ್ನು ಬೆಂಬಲಿಸಿದಲ್ಲಿ ಅದು ಸತ್ಯವಾಗುತ್ತದೆ. ಏಕೆಂದರೆ ಸತ್ಯ ಧರ್ಮದೊಟ್ಟಿಗೇ ಇರುತ್ತದೆ. ಸತ್ಯಮಾರ್ಗದಲ್ಲಿ ನಡೆದು ಜನರಲ್ಲಿ ಪರಿವರ್ತನೆ ಉಂಟುಮಾಡುವುದು ವ್ಯಕ್ತಿಯ ಕರ್ತವ್ಯ. ಈ ಆಧಾರದ ಮೇಲೆ ವ್ಯಕ್ತಿಗೆ ಧರ್ಮ ಪ್ರಕಾರವಾಗಿ ನಡೆದುಕೊಳ್ಳುವ ಹಕ್ಕು ಪ್ರಾಪ್ತವಾಗುತ್ತದೆ.

ಧರ್ಮ ಬಹುಮತದ ಜೊತೆ ಇಲ್ಲ ಅಥವಾ ಜನರ ಜೊತೆಯೂ ಇಲ್ಲ ಎನ್ನುವುದನ್ನು ನಾವು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಆದ್ದರಿಂದ ಪ್ರಜಾಪ್ರಭುತ್ವದ ಅರ್ಥವಿವರಣೆ ನೀಡುವಾಗ ಅದು ಜನರ ಸರ್ಕಾರ ಎಂದಷ್ಟೇ ಹೇಳಿದರೆ ಸಾಲದು. ಅದು ಜನರ ಒಳಿತಿಗಾಗಿ ಕೆಲಸಮಾಡುವ ಸರ್ಕಾರವಾಗಿರಬೇಕು. ಜನರ ಒಳಿತು

ಯಾವುದು? ಜನರ ಒಳಿತು, ಕಲ್ಯಾಣಗಳು ಏನೆಲ್ಲವನ್ನು ಒಳಗೊಂಡಿರುತ್ತದೆ? ಅದನ್ನು ಧರ್ಮ ಮಾತ್ರ ನಿರ್ಧರಿಸಬಲ್ಲದು. ಆದ್ದರಿಂದ ಪ್ರಜಾಸತ್ತಾತ್ಮಕ ಸರ್ಕಾರವಾದ ಜನರಾಜ್ಯವೂ ಧರ್ಮದಲ್ಲಿ ಬೇರುಬಿಟ್ಟಿರಬೇಕು. ಅದು ಧರ್ಮರಾಜ್ಯವಾಗಿರಬೇಕು. ಪ್ರಜಾಪ್ರಭುತ್ವವನ್ನು ಅರ್ಥೈಸುವಾಗ "ಜನರ ಸರ್ಕಾರ, ಜನರಿಂದ ಸರ್ಕಾರ, ಜನರಿಗಾಗಿ ಸರ್ಕಾರ" ಎಂದು ಹೇಳಲಾಗುತ್ತದೆ. ಜನರ ಸರ್ಕಾರ ಎಂದಾಗ ಸ್ವಾತಂತ್ರ್ಯವನ್ನೂ ಜನರಿಂದ ಎಂದಾಗ ಪ್ರಜಾಸತ್ತೆಯನ್ನೂ ಜನರಿಗಾಗಿ ಎಂದಾಗ ಧರ್ಮವನ್ನೂ ಈ ಅರ್ಥವಿವರಣೆ ಸೂಚಿಸುತ್ತದೆ. ಆದ್ದರಿಂದ ಎಲ್ಲ ಸ್ವಾತಂತ್ರ್ಯ ಮತ್ತು ಧರ್ಮ ಇವೆರಡೂ ಇರುವುದೋ ಅಲ್ಲಿ ನಿಜವಾದ ಪ್ರಜಾಪ್ರಭುತ್ವ ಇರುತ್ತದೆ. ನಿಜವಾದ ಪ್ರಜಾಪ್ರಭುತ್ವ ಎಂದರೆ ಸ್ವಾತಂತ್ರ್ಯ ಮತ್ತು ಧರ್ಮಗಳ ಸಂಗಮ.



# ೪ ರಾಷ್ಟ್ರೀಯ ಮನೋಧರ್ಮಕ್ಕೆ ಹೊಂದುವ ಅರ್ಥವ್ಯವಸ್ಥೆ

ನಿನ್ನೆ ನಾವು ರಾಷ್ಟ್ರವೊಂದರಲ್ಲಿ ಸರ್ಕಾರದ ಕಾರ್ಯನಿರ್ವಹಣೆ, ಕಾರ್ಯಭಾರಗಳನ್ನು ಕುರಿತು ಚರ್ಚಿಸಿದೆವು. ಭಾರತೀಯ ಸಂಪ್ರದಾಯಗಳ ಪ್ರಕಾರ ರಾಷ್ಟ್ರ ಎನ್ನುವುದು ಒಂದು ಸಾವಯವ, ಒಂದು ಜೀವಂತ ಅಸ್ತಿತ್ವ, ಅದು ಸ್ವಯಂಭೂ. ಅದು ಯಾರು ಮಾಡಿದ್ದಲ್ಲ ಅಥವಾ ಕೆಲವು ವ್ಯಕ್ತಿಗಳು ಒಂದುಗೂಡಿ ಸೃಷ್ಟಿಸಿದ್ದಲ್ಲ. ರಾಷ್ಟ್ರವೊಂದು ತನ್ನ ಅಗತ್ಯಗಳ ಈಡೇರಿಕೆಗಾಗಿ ಹಾಗೂ ತನ್ನೊಳಗಣ ಮೂಲಪ್ರಕೃತಿಗೆ ನಿರ್ದಿಷ್ಟ ರೂಪಕೊಡುವ ಸಲುವಾಗಿ ಹಲವಾರು ಸಂಸ್ಥೆಗಳನ್ನು ಸೃಷ್ಟಿಸುತ್ತದೆ. ಸರ್ಕಾರ ಇಂಥ ಸಂಸ್ಥೆ/ಪ್ರತಿಷ್ಠಾನಗಳಲ್ಲಿ ಒಂದು. ಇದು ಮುಖ್ಯ ಸಂಸ್ಥೆಯಾದರೂ ಪರಮೋಚ್ಚವಲ್ಲ. ನಮ್ಮ ಸಾಹಿತ್ಯದಲ್ಲಿ ದೊರೆಗಳ ಕರ್ತವ್ಯಗಳು ಪ್ರಸ್ತಾಪಕ್ಕೆ ಬಂದಲ್ಲೆಲ್ಲ ದೊರೆಯ ಮಹತ್ವವನ್ನು ಮಾನ್ಯ ಮಾಡಲಾಗಿದೆ. ಬಹುಶಃ ಇದು ದೊರೆಯ ಅಗಾಧ ಹೊಣೆಗಾರಿಕೆಯನ್ನು ಮನವರಿಕೆ ಮಾಡಿಕೊಡುವ ಉದ್ದೇಶದಿಂದಲೇ ಇರಬೇಕು. ದೊರೆ ಜನರ ಬದುಕು ಮತ್ತು ಚಾರಿತ್ರ್ಯದ ಮೇಲೆ ಮಹತ್ತರವಾದ ಪ್ರಭಾವ ಬೀರುತ್ತಾನೆ. ಆದ್ದರಿಂದ ಅವನು ಮೊದಲು ಸ್ವತಃ ತನ್ನ ನಡವಳಿಕೆಗೆ ಸೂಕ್ತ ಗಮನ ಕೊಡಬೇಕು. ಭೀಷ್ಮ ಮಹಾಭಾರತದಲ್ಲಿ ಇದೇ ಮಾತನ್ನು ಹೇಳಿದ್ದಾನೆ. ಪರಿಸ್ಥಿತಿ ದೊರೆಯನ್ನು ಸೃಷ್ಟಿಸುತ್ತದೋ ಅಥವಾ ದೊರೆಯೇ ಪರಿಸ್ಥಿತಿಯನ್ನು ಸೃಷ್ಟಿಸುತ್ತಾನೋ ಎಂದು ಕೇಳಿದಾಗ ಪರಿಸ್ಥಿತಿಯನ್ನು ದೊರೆ ರೂಪಿಸುತ್ತಾನೆಂದು ಭೀಷ್ಮ ಸ್ಪಷ್ಟವಾಗಿ ತಿಳಿಸುತ್ತಾನೆ. ಇದರ ಅರ್ಥ ದೊರೆಯೇ ಎಲ್ಲರಿಗಿಂತ ಹೆಚ್ಚು, ಎಲ್ಲರಿಗಿಂತ ಮೇಲಿನವನು ಎಂದು ಕೆಲವರು ವ್ಯಾಖ್ಯಾನ ಮಾಡುತ್ತಾರೆ. ಆದರೆ ಇದು ನಿಜವಲ್ಲ. ದೊರೆ ಧರ್ಮಕ್ಕೂ ಹೆಚ್ಚಿನವನು. ಧರ್ಮವನ್ನು ಮೀರಿದವನು ಎಂದು ಭೀಷ್ಮ ಹೇಳಿಲ್ಲ. ದೊರೆಯಾದವನು ತುಂಬಾ ಪ್ರಭಾವಶಾಲಿ. ಅವನು ಸಮಾಜದಲ್ಲಿ ಧರ್ಮವನ್ನು ರಕ್ಷಿಸುತ್ತಾನೆ ಎನ್ನುವುದು ನಿಜ. ಆದರೆ ಧರ್ಮ ಏನೆಲ್ಲವನ್ನೂ ಒಳಗೊಂಡಿರುತ್ತದೆ ಎನ್ನುವುದನ್ನು ದೊರೆ ನಿರ್ಧರಿಸಲಾರ. ಧರ್ಮದ ಪ್ರಕಾರ ಜನ ಬಾಳ್ವೆ ಮಾಡಬೇಕು ಎನ್ನುವುದು ಆಗುಮಾಡಿಸುವುದು ದೊರೆಯ ಕೆಲಸ. ಒಂದು ರೀತಿಯಲ್ಲಿ ದೊರೆ ಇಂದಿನ ನಮ್ಮ ಕಾರ್ಯಾಂಗಕ್ಕೆ ಸಮನಾದವನು.

**ದೊರೆ ಧರ್ಮಾತೀತನಲ್ಲ**

ಆಧುನಿಕ ರಾಷ್ಟ್ರದಲ್ಲಿ ಶಾಸನ–ಕಾನೂನುಗಳನ್ನು ಜಾರಿಗೆ ತರುವುದು ಕಾರ್ಯಾಂಗದ ಕೆಲಸ. ಕಾರ್ಯಾಂಗವೇ ಶಾಸನಗಳನ್ನು ಮಾಡುವುದಿಲ್ಲ. ಕಾರ್ಯಾಂಗ ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ಕೆಲಸ ಮಾಡದಿದ್ದಲ್ಲಿ ಕಾನೂನುಗಳನ್ನು ಸಂಪೂರ್ಣವಾಗಿ ಅಲಕ್ಷಿಸಲಾಗುತ್ತದೆ. ನಾವೀಗ ನಮ್ಮ ಸುತ್ತ ಇದನ್ನೇ ಕಾಣುತ್ತಿದ್ದೇವೆ. "ಇವತ್ತಿನ ಎಲ್ಲ ಕೇಡುಗಳಿಗೂ ಬಹುತೇಕ ಕಾರ್ಯಾಂಗವೇ ಹೊಣೆ" ಎಂದು ನಾವಿಂದು ಹೇಳಬಹುದು. ಪಾನನಿಷೇಧ ಏಕೆ ವಿಫಲಗೊಂಡಿತ್ತು? ಈ ಕಾರ್ಯಕ್ರಮದ ವೈಫಲ್ಯಕ್ಕೆ ಯಾರು ಹೊಣೆ? ಪಾನನಿಷೇಧವನ್ನು ಜಾರಿಗೆ ತರುವ ಹೊಣೆಯನ್ನು ಯಾರಿಗೆ ವಹಿಸಲಾಗಿತ್ತೋ ಅವರೇ ಮದ್ಯ ಕಳ್ಳಸಾಗಣೆದಾರರಿಂದ ಪ್ರತಿತಿಂಗಳೂ ಲಂಚ ಪಡೆಯುತ್ತಿದ್ದರು. ಹೀಗಿರುವಾಗ ಪಾನನಿಷೇಧ ನೀತಿ ಯಶಸ್ವಿಯಾಗುವುದು ಹೇಗೆ ಸಾಧ್ಯ? ಆದ್ದರಿಂದ ಕಾನೂನುಗಳನ್ನು ಸೂಕ್ತರೀತಿಯಲ್ಲಿ ಜಾರಿಗೊಳಿಸುವುದು ಕಾರ್ಯಾಂಗದ ಹೊಣೆ. ಭೀಷ್ಮನ ಮಾತಿನ ಅರ್ಥ ಇದು. ದೊರೆಯ ಪ್ರಮಾಣೀಕೃತ ಪಾರಮ್ಯವನ್ನು ಒಪ್ಪಿಕೊಳ್ಳುವುದೇ ಭೀಷ್ಮನ ಮಾತಿನ ಅರ್ಥವೆಂದು ವ್ಯಾಖ್ಯಾನಿಸುವುದು ತಪ್ಪಾಗುತ್ತದೆ. ದೊರೆಯೇ ಪರಮೋಚ್ಚ ಎಂದಾದಲ್ಲಿ ಪ್ರಜಾಪೀಡಕನಾಗಿದ್ದ ವೇನಾನನ್ನು ಸಿಂಹಾಸನದಿಂದ ಪದಚ್ಯುತಿಗೊಳಿಸಿ ಪೃಥುವಿಗೆ ಪಟ್ಟಾಭಿಷೇಕ ಮಾಡುವುದು ಋಷಿಗಳಿಗೆ ಹೇಗೆ ಸಾಧ್ಯವಾಯಿತು? ಋಷಿಗಳ ಈ ಕಾರ್ಯವನ್ನು ಇತಿಹಾಸದಲ್ಲಿ ಯಾರೂ ಖಂಡಿಸಿಲ್ಲ. ಪ್ರತಿಯಾಗಿ ಪ್ರಶಂಸಿಸಲಾಗಿದೆ. ಧರ್ಮವೇ ಪರಮೋಚ್ಚ ಎಂಬ ತತ್ತ್ವವನ್ನು ಒಪ್ಪಿಕೊಂಡಾಗ ಋಷಿಗಳಿಗೆ ಕರ್ತವ್ಯ ವಿಫಲನಾದ ದೊರೆಯನ್ನು ಪದಚ್ಯುತಿಗೊಳಿಸುವ ಹಕ್ಕುಪ್ರಾಪ್ತವಾಗುತ್ತದೆ. ಇಲ್ಲವಾದಲ್ಲಿ ದೊರೆಯ ಪದಚ್ಯುತಿ ಅಕ್ರಮವಾಗುತ್ತಿತ್ತು. ಹೀಗಾಗಿ ದೊರೆಯೊಬ್ಬ ಧರ್ಮದ ಪ್ರಕಾರ ನಡೆದುಕೊಳ್ಳದಿದ್ದಲ್ಲಿ ಅವನ ಪದಚ್ಯುತಿ ಎಲ್ಲರ ಕರ್ತವ್ಯವಾಗುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿ ಒಬ್ಬ ದೊರೆ ಇನ್ನೊಬ್ಬ ದೊರೆಯನ್ನು ಪದಚ್ಯುತಿಗೊಳಿಸುತ್ತಾನೆ. ಇಲ್ಲವೇ ಜನ ದೊರೆಯ ಸಾರ್ವಭೌಮತ್ವವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ. ಅಲ್ಲಿ ದೊರೆ ದೇವರ ಪ್ರತಿನಿಧಿ. ತತ್ವಶಃ ನೋಡಿದಲ್ಲಿ ಯಾವುದೇ ಸಂದರ್ಭದಲ್ಲೂ ದೊರೆಯನ್ನು ಪದಚ್ಯುತಿಗೊಳಿಸಲಾಗದು.

**ಪ್ರಾಚೀನ ಭಾರತದಲ್ಲಿ ಸ್ವಾಯತ್ತ ಸಂಸ್ಥೆಗಳು**

ನಮ್ಮ ಸಾಮಾಜಿಕ ರಾಜಕೀಯ ವ್ಯವಸ್ಥೆಯಲ್ಲಿ ಯಾವತ್ತೂ ನಾವು ದೊರೆಯನ್ನು ಪರಮೋಚ್ಚವೆಂದು ಪರಿಗಣಿಸಿಯೇ ಇಲ್ಲ. ಅಷ್ಟೇ ಅಲ್ಲದೆ, ಸಾಮಾಜಿಕ ಜೀವನ ನಿರ್ವಹಣೆ ಹಾಗೂ ನಿಯಂತ್ರಣ ಕಾರ್ಯಗಳನ್ನು ನೋಡಿಕೊಳ್ಳಲು ಹಲವಾರು ಪ್ರಮುಖ ಸಂಸ್ಥೆಗಳು, ಪ್ರತಿಷ್ಠಾನಗಳು ಇದ್ದವು. ಇವುಗಳಲ್ಲಿ ಸರ್ಕಾರವೂ ಒಂದು.



ಈ ಸಂಸ್ಥೆಗಳನ್ನು ಪ್ರಾದೇಶಿಕ ಹಾಗೂ ವೃತ್ತಿಗಳ ಆಧಾರದ ಮೇಲೆ ವ್ಯವಸ್ಥೆಗೊಳಿಸಲಾಗಿತ್ತು. ನಾವು ಪಂಚಾಯಿತಿಗಳು ಹಾಗೂ ಜನಪದ ಸಭಾಗಳನ್ನು ರಚಿಸಿದ್ದೆವು. ಪ್ರಬಲನಾದ ದೊರೆ ಯಾವತ್ತೂ ಪಂಚಾಯಿತಿಗಳಿಗೆ ತೊಂದರೆ ಕೊಡಲಿಲ್ಲ, ಧಕ್ಕೆಯುಂಟು ಮಾಡಲಿಲ್ಲ. ಅಂತೆಯೇ ವಾಣಿಜ್ಯ ಆಧಾರಿತ ಸಂಘಗಳಿದ್ದವು. ಸರ್ಕಾರ ಈ ಎರಡು ವ್ಯವಸ್ಥೆಗಳಿಗೆ ಭಂಗವುಂಟು ಮಾಡಲಿಲ್ಲ. ಪ್ರತಿಯಾಗಿ ಇವುಗಳ ಸ್ವಾಯತ್ತತೆಯನ್ನು ಮಾನ್ಯ ಮಾಡಲಾಗಿತ್ತು. ಈ ಸಂಸ್ಥೆಗಳು ತಮ್ಮ ಕ್ಷೇತ್ರಗಳಲ್ಲಿ ತಮ್ಮದೇ ಆದ ನೀತಿ ನಿಯಮಗಳನ್ನು ರೂಢಿಸಿಕೊಂಡಿದ್ದವು. ವಿವಿಧ ಸಮುದಾಯಗಳ ಪಂಚಾಯಿತಿಗಳು. ಶ್ರೇಣಿಗಳು, ನಿಗಮಗಳು, ಗ್ರಾಮ ಪಂಚಾಯಿತಿಗಳು, ಜನಪದ ಸಭಾಗಳು ತಮ್ಮದೇ ಆದ ನೀತಿ ನಿಯಮಗಳನ್ನು, ಕಟ್ಟುಪಾಡುಗಳನ್ನು ರೂಪಿಸಿಕೊಳ್ಳುತ್ತಿದ್ದವು. ಸಂಬಂಧಪಟ್ಟ ವ್ಯಕ್ತಿಗಳು ಈ ನೀತಿನಿಯಮಗಳನ್ನು ಪಾಲಿಸುತ್ತಿದ್ದಾರೆಯೇ ಎಂಬುದನ್ನು ಗಮನಿಸುವದಷ್ಟೇ ಸರ್ಕಾರದ ಕೆಲಸವಾಗಿತ್ತು. ಸರ್ಕಾರ ಈ ಸಂಘಸಂಸ್ಥೆಗಳ ವ್ಯವಹಾರದಲ್ಲಿ ಯಾವತ್ತೂ ಹಸ್ತಕ್ಷೇಪ ನಡೆಸಿದ್ದಿಲ್ಲ. ಸಾಮಾಜಿಕ ಜೀವನದ ಕೆಲವು ವಿಷಯಗಳಲ್ಲಿ ಮಾತ್ರ ಸರ್ಕಾರ ಕಾಳಜಿ ಹೊಂದಿತ್ತು.

ಇದೇ ರೀತಿ ಆರ್ಥಿಕ ಕ್ಷೇತ್ರದಲ್ಲೂ ಹಲವಾರು ಸಂಸ್ಥೆಗಳನ್ನು ಸೃಷ್ಟಿಸಲಾಯಿತು. ನಮ್ಮ ಅರ್ಥವ್ಯವಸ್ಥೆಯ ಸ್ವರೂಪ, ಗುಣಲಕ್ಷಣಗಳು ಹೇಗಿರಬೇಕು ಎಂಬುದನ್ನು ನಾವು ಪರ್ಯಾಲೋಚಿಸಬೇಕು. ನಮ್ಮ ಮಾನವೀಯ ಗುಣಗಳು ಅಥವಾ ನಾಗರಿಕತೆಯ ಅಭಿವೃದ್ಧಿಗೆ ಸಹಾಯಕವಾಗುವಂಥ ಅರ್ಥ ತನ್ಮೂಲಕ ಸರ್ವಾಂಗೀಣ ಪರಿಪೂರ್ಣತೆಯನ್ನು ಸಾಧಿಸಲು ಸಾಧ್ಯವಾಗುವಂಥ ಅರ್ಥವ್ಯವಸ್ಥೆಯನ್ನು ನಾವು ಹೊಂದಿರಬೇಕು. ನಮ್ಮ ಮಾನವೀಯ ಗುಣಗಳ ಮೇಲೆ ಸವಾರಿ ಮಾಡದಂಥ, ತನ್ನ ಗಾಣಕ್ಕೆ ನಮ್ಮನ್ನು ಗುಲಾಮರನ್ನಾಗಿ ಮಾಡಿಕೊಳ್ಳದಂಥ ವ್ಯವಸ್ಥೆ ನಮಗೆ ಬೇಕು. ಮಾನವ ಪ್ರಗತಿಯ ಫಲವಾಗಿ ದೇವರಂಥ ಪರಿಪೂರ್ಣತೆಯನ್ನು ಸಾಧಿಸುತ್ತಾನೆ ಎನ್ನುವುದು ನಮ್ಮ ಪರಿಕಲ್ಪನೆ. ಆದ್ದರಿಂದ ನಾವು ಮೂಲಸೌಕರ್ಯಗಳನ್ನು ಕಲ್ಪಿಸುವಂಥ ಹಾಗೂ ಮನುಷ್ಯನಲ್ಲಿ ಅಂತರ್ಗತವಾಗಿರುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಸಾಂಗಗೊಳಿಸಲು ಅಗತ್ಯವಾದ ನಿಬಂಧನೆಗಳನ್ನು ವಿಧಾಯಕಗಳನ್ನು ರಚಿಸುವಂಥ ಅರ್ಥವ್ಯವಸ್ಥೆಯೊಂದನ್ನು ಸೃಷ್ಟಿಸಬೇಕಾಗಿದೆ. ಈ ಅಂಶವನ್ನು ಪರ್ಯಾಲೋಚಿಸೋಣ.

**ಅರ್ಥವ್ಯವಸ್ಥೆ ಏತಕ್ಕಾಗಿ?**

ಜನರ ಅಭಿವೃದ್ಧಿ ಜನಜೀವನದ ನಿರ್ವಹಣೆ ರಾಷ್ಟ್ರದ ಅಭಿವೃದ್ಧಿ, ರಾಷ್ಟ್ರರಕ್ಷಣೆ – ಇವುಗಳನ್ನು ಸಾಧಿಸುವಂಥ ಅರ್ಥವ್ಯವಸ್ಥೆ ನಮಗೆ ಬೇಕು. ಈ ಕನಿಷ್ಠ ಅಗತ್ಯಗಳನ್ನು

ಸಾಧಿಸಿದ ನಂತರ, ಹೆಚ್ಚಿನ ಅಭ್ಯುದಯ ಮತ್ತು ಹೆಚ್ಚಿನ ಸುಖಸಂತೋಷಗಳಿಗಾಗಿ ಉತ್ಪಾದನೆಯನ್ನು ಹೆಚ್ಚಿಸಬೇಕೆ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಮನುಷ್ಯನ ಅಗತ್ಯಗಳನ್ನು, ಆಸೆ ಆಕಾಂಕ್ಷೆಗಳನ್ನು, ಕಾಮನೆಗಳನ್ನು ಸತತವಾಗಿ, ಕ್ರಮಬದ್ಧವಾಗಿ ಹೆಚ್ಚಿಸುತ್ತಾ ಹೋಗಬೇಕು. ಇದು ಅತ್ಯಗತ್ಯ ಎಂದು ಪಾಶ್ಚಾತ್ಯ ಸಮಾಜ ಪರಿಗಣಿಸಿದೆ ಇದರಲ್ಲಿ ಮೇಲ್ಮಿತಿ ಎನ್ನುವುದೇ ಇಲ್ಲ. ಸಾಮಾನ್ಯವಾಗಿ ಕಾಮನೆಗಳು ಉತ್ಪಾದನೆಯ ಪ್ರಯತ್ನಗಳಿಗೆ ಪೂರ್ವಭಾವಿಯಾಗಿ ಬರುತ್ತವೆ. ಆದರೆ ಈಗ ಇದು ತಿರುಗು ಮುರುಗಾಗಿದೆ. ಜನರಲ್ಲಿ ಈಗಾಗಲೇ ಉತ್ಪಾದಿಸಲಾಗಿರುವ ಅಥವಾ ಉತ್ಪಾದನೆಯಾಗಲಿರುವ ವಸ್ತುಗಳನ್ನು ಬಳಸುವಂತೆ ಕಾಮನೆಗಳನ್ನು ಬಿತ್ತಲಾಗುತ್ತದೆ. ಜನರ ಬೇಡಿಕೆಗಳನ್ನು ಅಗತ್ಯಗಳನ್ನು ಪೂರೈಸಲು ವಸ್ತುಸಾಮಗ್ರಿಗಳನ್ನು ಉತ್ಪಾದಿಸಬೇಕು. ಆದರೆ ಈಗ ಹಾಗಿಲ್ಲ. ಉತ್ಪಾದಿಸಲಾಗಿರುವ ಉತ್ಪನ್ನಗಳಿಗೆ ಗ್ರಾಹಕರನ್ನು ಶೋಧಿಸುವ, ಮಾರುಕಟ್ಟೆ ರೂಪಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಬೇಡಿಕೆ ಇಲ್ಲವಾದಲ್ಲಿ ಬೇಡಿಕೆಯನ್ನು ಸೃಷ್ಟಿಸಲು ವ್ಯವಸ್ಥಿತ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇದು ಪಾಶ್ಚಾತ್ಯ ಅರ್ಥವ್ಯವಸ್ಥೆಯ ಮುಖ್ಯ ಗುಣಲಕ್ಷಣ. ಮೊದಲು ಬೇಡಿಕೆಯನ್ನು ಅನುಸರಿಸಿ ಉತ್ಪಾದನೆ ಕೈಗೊಳ್ಳಲಾಗುತ್ತಿತ್ತು. ಈಗ ಉತ್ಪಾದನೆಯ ಅನುಸಾರವಾಗಿ ಬೇಡಿಕೆಗಳು ಹುಟ್ಟಿಕೊಳ್ಳುತ್ತವೆ. ಉದಾಹರಣೆಗೆ ಚಹಾ ತೆಗೆದುಕೊಳ್ಳೋಣ. ಮೊದಲು ಟೀ ಸೊಪ್ಪಿನ ಉತ್ಪಾದನೆ ಇರಲಿಲ್ಲ. ಏಕೆಂದರೆ ಜನಕ್ಕೆ ಅದು ಬೇಕಿರಲಿಲ್ಲ. ಆದರೆ ಚಹಾ ಪುಡಿಯನ್ನು ತಯಾರಿಸಲಾಯಿತು ಹಾಗೂ ನಮ್ಮಲ್ಲಿ ಚಹಾದ ರುಚಿಯನ್ನು ಬೆಳೆಸಲಾಯಿತು. ಹೀಗಾಗಿ ಈಗ ಚಹಾ ಸಾಮಾನ್ಯರ ಪಾನೀಯವಾಗಿದೆ. ಅದು ನಮ್ಮ ಜೀವನದ ಒಂದು ಅಂಗವಾಗಿ ಬಿಟ್ಟಿದೆ. ಇದೇ ರೀತಿ ವನಸ್ಪತಿ ಎಣ್ಣೆಗಳು, ತುಪ್ಪಗಳು ಯಾರಾದರೂ ಎಂದಿಗಾದರೂ ಇವುಗಳನ್ನು ಬಯಸಿದ್ದರೆ? ವನಸ್ಪತಿ ಎಣ್ಣೆ ತುಪ್ಪಗಳನ್ನು ತಯಾರಿಸಿ ಅವುಗಳ ಬಳಕೆಯನ್ನು ನಮಗೆ ಕಲಿಸಿಕೊಟ್ಟರು. ತಯಾರಿಸಲಾದ ವಸ್ತುಗಳನ್ನು ಬಳಸದೇ ಹೋದಲ್ಲಿ ಹಿನ್ನಡೆ ಶುರುವಾಗುತ್ತದೆ. ೧೯೩೦–೩೨ರ ಮಹಾನ್ ಆರ್ಥಿಕ ಕುಸಿತ ನೆನಪಿರಬೇಕಲ್ಲವೆ? ಆಗ ಸಮೃದ್ಧವಾಗಿ ಉತ್ಪನ್ನಗಳು ದೊರಕುತ್ತಿದ್ದವು. ಆದರೆ ಬೇಡಿಕೆಯೇ ಇರಲಿಲ್ಲ. ಆದ್ದರಿಂದ ಕಾರ್ಖಾನೆಗಳನ್ನು ಮುಚ್ಚಬೇಕಾಯಿತು. ದಿವಾಳಿತನ ಮತ್ತು ನಿರುದ್ಯೋಗ ವ್ಯಾಪಕವಾಗಿತ್ತು. ಆದ್ದರಿಂದಲೇ ಈಚಿನ ದಿನಗಳಲ್ಲಿ ಉತ್ಪಾದಿಸಲಾದ ವಸ್ತು ಸಾಮಗ್ರಿಗಳನ್ನು ಕಡ್ಡಾಯವಾಗಿ ಬಳಸಲೇ ಬೇಕು ಎನ್ನುವುದು ಮಹತ್ವದ ವಿಚಾರವಾಗಿದೆ.

**ಹೊಸ ಬೇಡಿಕೆಯ ಪತ್ತೆ**

'ಆರ್ಗನೈಸರ್' ಇಂಗ್ಲಿಷ್ ಸಾಪ್ತಾಹಿಕದ ಸಂಪಾದಕರು ಸ್ವಲ್ಪಕಾಲದ ಹಿಂದೆ ಅಮೆರಿಕಕ್ಕೆ ಭೇಟಿಕೊಟ್ಟಿದ್ದರು. ಅಲ್ಲಿಂದ ವಾಪಸಾದ ನಂತರ ಅವರು



ಕುತೂಹಲಕರವಾದ ಪ್ರಸಂಗವೊಂದನ್ನು ಹೇಳಿದರು. ಅಲ್ಲೊಂದು ಕಾರ್ಖಾನೆ ಇದೆ. ಇದು ಅಲೂಗೆಡ್ಡೆ ಸಿಪ್ಪೆ ಸುಲಿಯುವ ಉಪಕರಣವೊಂದನ್ನು ತಯಾರಿಸುವ ಕಾರ್ಖಾನೆ. ಈ ಕಾರ್ಖಾನೆಯ ಉತ್ಪಾದನೆ ಬೇಡಿಕೆಗಿಂತ ಇಮ್ಮಡಿಯಾಯಿತು. ಆಲೂಗೆಡ್ಡೆ ಸಿಪ್ಪೆ ಸುಲಿಯುವ ಉಪಕರಣವನ್ನು ಖರೀದಿಸುವಂತೆ ಜನರನ್ನು ಪ್ರೇರೇಪಿಸುವ ಸಮಸ್ಯೆಯನ್ನು ಕಾರ್ಖಾನೆ ಆಡಳಿತ ವರ್ಗ ಎದುರಿಸಬೇಕಾಯಿತು. ಆಡಳಿತ ವರ್ಗ ತನ್ನ ಮಾರಾಟ ಪ್ರತಿನಿಧಿಗಳ ಸಭೆ ಕರೆಯಿತು. ಉಪಕರಣದ ಹಿಡಿಕೆಯ ಬಣ್ಣವನ್ನು ಆಲೂಗೆಡ್ಡೆ ಸಿಪ್ಪೆಯ ಬಣ್ಣಕ್ಕೇ ಬದಲಾಯಿಸಬೇಕು. ಹಿಡಿಕೆ ಸಿಪ್ಪೆ ಬಣ್ಣದ್ದೇ ಆಗಿದ್ದಲ್ಲಿ ಗ್ರಾಹಕರು ಸಿಪ್ಪೆಯೊಂದಿಗೆ ಉಪಕರಣವನ್ನು ತಪ್ಪು ಗ್ರಹಿಕೆಯಿಂದಾಗಿ ಕಸದ ಬುಟ್ಟಿಗೆ ಎಸೆಯುತ್ತಾರೆ. ಇದರಿಂದ ಉಪಕರಣಕ್ಕೆ ಬೇಡಿಕೆ ಹೆಚ್ಚಬಹುದು ಎನ್ನುವುದು ಮಾರಾಟ ಪ್ರತಿನಿಧಿಯೊಬ್ಬನ ಸಲಹೆಯಾಗಿತ್ತು. ಉಪಕರಣ ಹಿಡಿಕೆ ಬಣ್ಣ ಬದಲಾಯಿಸಿದ್ದರ ಜೊತೆ ಅದನ್ನು ಮತ್ತಷ್ಟು ಆಕರ್ಷಣೀಯವನ್ನಾಗಿಸಲಾಯಿತು.

**ಪರಿಸರ ವಿನಾಶಿ ಬಳಕೆದಾರರ ಹಿತರಕ್ಷಣೆ**

ಈ ಅರ್ಥ ವ್ಯವಸ್ಥೆ ಬಳಕೆ ಪ್ರಧಾನವಾದುದಷ್ಟೇ ಅಲ್ಲದೆ ಪರಿಸರ ನಾಶಕ್ಕೂ ಎಡೆಮಾಡಿಕೊಡುತ್ತದೆ. ಹಳೆಯದನ್ನು ಬಿಸಾಡಿ, ಹೊಸದನ್ನು ಖರೀದಿಸಿ ಜನತೆಯ ಅಗತ್ಯ ಮತ್ತು ಬೇಡಿಕೆಗಳನ್ನು ಈಡೇರಿಸುವ ಬದಲು ಹೊಸ ಬೇಡಿಕೆ ಸೃಷ್ಟಿಸುವುದು ಆಧುನಿಕ ಅರ್ಥ ವ್ಯವಸ್ಥೆಯ ಗುರಿಯಾಗಿದೆ. ನೈಸರ್ಗಿಕ ಸಂಪನ್ಮೂಲಗಳ ಮಿತ ಸರಬರಾಜಿನ ಬಗ್ಗೆ ನಾವು ಚಿಂತೆ ಮಾಡಬೇಕಾಗಿದೆಯಾದರೂ ನೈಸರ್ಗಿಕ ಸಮತೋಲ ಕಾಯ್ದುಕೊಳ್ಳಬೇಕಾದ ಪ್ರಶ್ನೆಯನ್ನು ಎದುರಿಸಬೇಕಾಗಿದೆ. ಪ್ರಕೃತಿಯ ವಿವಿಧ ಅಂಗಗಳ ನಡುವೆ ಒಂದು ಬಗೆಯ ಆವರ್ತನೀಯ ಸಂಬಂಧವಿದೆ. ಪರಸ್ಪರ ಅವಲಂಬನೆ ಆಧಾರದ ಮೇಲೆ ಮೂರು ಕಡ್ಡಿಗಳು ನಿಂತಿರುವಾಗ ಒಂದು ಕಡ್ಡಿಯನ್ನು ಎಳೆದರೆ ಉಳಿದೆರಡೂ ತಾವಾಗಿ ನೆಲಕಚ್ಚುತ್ತವೆ. ಈಗಿನ ಅರ್ಥವ್ಯವಸ್ಥೆ ಮತ್ತು ಉತ್ಪಾದನಾ ಪದ್ಧತಿ ಪ್ರಕೃತಿಯ ಸಮತೋಲನಕ್ಕೆ ಭಂಗ ತರುತ್ತಿವೆ. ಇದರ ಫಲವಾಗಿ, ಒಂದು ಕಡೆ ಜನರ ಆಸೆ–ಆಕಾಂಕ್ಷೆಗಳನ್ನು ತಣಿಸಲು ಹೊಸ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ. ಮತ್ತೊಂದೆಡೆ ಮನುಕುಲ ಹಾಗೂ ನಾಗರಿಕತೆಯ ಅಸ್ತಿತ್ವಕ್ಕೆ ಬೆದರಿಕೆಯೊಡ್ಡುವಂಥ ಹೊಸ ಸಮಸ್ಯೆಗಳು ಪ್ರತಿದಿನ ಉದ್ಭವಿಸುತ್ತಿವೆ.

ಆದ್ದರಿಂದ ನೈಸರ್ಗಿಕ ಸಂಪನ್ಮೂಲ ಬಳಸುವಾಗ ಪ್ರಕೃತಿ ತನ್ನಷ್ಟಕ್ಕೆ ಸುಲಭವಾಗಿ ತುಂಬಿಕೊಳ್ಳುವಂಥ ಭಾಗಗಳನ್ನು ಮಾತ್ರ ನಾವು ಬಳಸಬೇಕು. ಗಿಡದಿಂದ ಹಣ್ಣುಗಳನ್ನು ಕೀಳುವಾಗ ಗಿಡಕ್ಕೆ ಹಾನಿಯಾಗುವುದಿಲ್ಲ. ಅದ್ದರಿಂದ ಗಿಡಕ್ಕೆ ಉಪಕಾರವೇ

ಆಗಬಹುದು. ಆದರೆ ಭೂಮಿ ಬಗ್ಗೆ ಇದೇ ಮಾತನ್ನು ಹೇಳಲಾಗದು. ಜಮೀನಿನಿಂದ ಹೆಚ್ಚಿನ ಇಳುವರಿ ಪಡೆಯಲು ರಾಸಾಯನಿಕ ಗೊಬ್ಬರಗಳನ್ನು ಬಳಸಲಾಗುತ್ತದೆ. ಈ ರಾಸಾಯನಿಕಗಳು ಕೆಲವೇ ವರ್ಷಗಳಲ್ಲಿ ಜಮೀನನ್ನು ಬಂಜರಾಗಿಸುತ್ತವೆ. ಇದರಿಂದಾಗಿ ಅಮೆರಿಕದಲ್ಲಿ ಲಕ್ಷಾಂತರ ಎಕರೆ ಜಮೀನು ಬಂಜರು ಭೂಮಿಯಾಗಿಬಿಟ್ಟಿದೆ. ಎಲ್ಲಿತನಕ ಈ ಭಸ್ಮಾಸುರ ನೃತ್ಯ?

ಯಂತ್ರೋಪಕರಣಗಳು ಸವಕಳಿಯಾದಾಗ ಕೈಗಾರಿಕೋದ್ಯಮಿಗಳ ನೆರವಿಗೆ ಸವಕಳಿ ನಿಧಿ ಇದೆ. ಆದರೆ ನಿಸರ್ಗಕ್ಕೆ ಏಕೆ ಇಂಥ ಸವಕಳಿ ನಿಧಿ ಇಲ್ಲ? ಇದನ್ನು ನಾವು ಹೇಗೆ ಉಪೇಕ್ಷಿಸಲಾದೀತು? ಈ ದೃಷ್ಟಿಕೋನದಿಂದ ನಮ್ಮ ಅರ್ಥವ್ಯವಸ್ಥೆ ಬಗ್ಗೆ ನಾವು ಒಂದು ಅಂಶವನ್ನು ಮನವರಿಕೆ ಮಾಡಿಕೊಳ್ಳಬೇಕು. ನಮ್ಮ ಅರ್ಥವ್ಯವಸ್ಥೆಯ ಗುರಿ ದುಂದುಗಾರಿಕೆಯದಾಗಬಾರದು. ಬದಲಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ನಿಯಂತ್ರಿತವಾಗಿ ಬಳಸುವುದು ಗುರಿಯಾಗಬೇಕು. ಧ್ಯೇಯೋದ್ದೇಶಗಳಿಂದ ಕೂಡಿದ ಪ್ರಗತಿಶೀಲ ಸಂತಸ ಬಾಳ್ವೆಗೆ ಅಗತ್ಯವಾದಂಥ ಶಾರೀರಿಕ ಅಗತ್ಯಗಳನ್ನು ಪೂರೈಸುವಂತಾಬೇಕು. ಭಗವಂತ ಬೇಕಾದಷ್ಟು ಕೊಟ್ಟಿದ್ದಾನೆ. ಆದರೆ ಕಣ್ಣು ಮುಚ್ಚಿಕೊಂಡು ಜಿದ್ದಾಜಿದ್ದಿನಿಂದ ಬಳಸುವುದಾಗಲೀ ಅಥವಾ ಮನುಷ್ಯ ಹುಟ್ಟಿರುವುದೇ ಭೋಗಿಸುವುದಕ್ಕಾಗಿ ಎಂದು ಸಿಕ್ಕಾಪಟ್ಟೆ ಉತ್ಪನ್ನಗಳನ್ನು ತಯಾರಿಸುವುದಾಗಲೀ ಬುದ್ಧಿವಂತಿಕೆಯಲ್ಲ ಎಂಜಿನ್‌ಗೆ ಅದು ಸರಿಯಾಗಿ ಕೆಲಸ ಮಾಡಲು ಕಲ್ಲಿದ್ದಲು ಅಗತ್ಯವಿದೆ. ಆದರೆ ಕಲ್ಲಿದ್ದಲನ್ನು ಭಕ್ಷಿಸಲೆಂದೇ ಎಂಜಿನನ್ನು ತಯಾರಿಸಿಲ್ಲ. ಇದಕ್ಕೆ ಪ್ರತಿಯಾಗಿ, ಕಡಿಮೆ ಕಲ್ಲಿದ್ದಲು ಬಳಕೆಯಿಂದ ಗರಿಷ್ಠ ಪ್ರಮಾಣದಲ್ಲಿ ಶಕ್ತಿ ಉತ್ಪಾದಿಸಲು ಆಲೋಚಿಸುವುದು ಸರಿಯಾದ ಕ್ರಮವಾದೀತು. ಇದು ಮಿತವ್ಯಯದ ದೃಷ್ಟಿಕೋನ, ಇದನ್ನು ಗಮನದಲ್ಲಿಟ್ಟುಕೊಂಡೇ ಮಾನವ ಕುಲ, ಕಡಿಮೆ ಇಂದನ ಬಳಸಿ ಗರಿಷ್ಠ ವೇಗದಲ್ಲಿ ಗುರಿಮುಟ್ಟುವ ಪ್ರಯತ್ನ ಮಾಡಬೇಕು. ಇಂಥ ವ್ಯವಸ್ಥೆಯನ್ನು ಮಾತ್ರ ನಾಗರಿಕತೆ ಎಂದು ಕರೆಯಬಹುದು. ಇಂಥ ವ್ಯವಸ್ಥೆ ಮಾನವ ಜೀವನದ ಒಂದು ವಿಷಯ ಅಥವಾ ಒಂದೇ ಒಂದು ದೃಷ್ಟಿಕೋನ ಕುರಿತು ಚಿಂತಿಸುವುದಿಲ್ಲ. ಆಖೈರು ಗುರಿಯೂ ಸೇರಿದಂತೆ ಬದುಕಿನ ಸಕಲಾಂಶಗಳ್ನು ಸಕಲ ದೃಷ್ಟಿಕೋನಗಳನ್ನೂ ಅದು ಪರ್ಯಾಲೋಚಿಸುತ್ತದೆ. ಇಂಥ ವ್ಯವಸ್ಥೆ ವಿನಾಶಕಾರಿಯಾಗುವ ಬದಲು ರಚನಾತ್ಮಕವಾಗುತ್ತದೆ. ಈ ವ್ಯವಸ್ಥೆ ಪ್ರಕೃತಿಯನ್ನು ಶೋಷಿಸಿ ಉದ್ಧಾರವಾಗುವ ಪ್ರಯತ್ನ ಮಾಡುವುದಿಲ್ಲ. ಅದು ಪ್ರಕೃತಿಯ ಪಾಲನೆ ಪೋಷಣೆ ಮಾಡುತ್ತದೆ. ತನ್ಮೂಲಕ ಪ್ರಕೃತಿಯಿಂದ ಶಕ್ತಿಸಾಮರ್ಥ್ಯಗಳನ್ನು ಗಳಿಸುತ್ತದೆ. ಶೋಷಣೆಗೆ ಬದಲು ಸ್ವಪ್ರಯೋಜನಕ್ಕಾಗಿ ಪ್ರಕೃತಿಯನ್ನು ಹಾನಿಯಾಗದಂತೆ ಬಳಸಿಕೊಳ್ಳುವ ಮಾರ್ಗ ಉತ್ತಮ. ಪ್ರಕೃತಿಯ ಸಮೃದ್ಧಿಯಿಂದ ದೊರೆಯುವುದನ್ನು ನಮ್ಮ ಬದುಕಿನ ಪಾಲನೆ –ಪೋಷಣೆಗೆ ಬಳಸಿಕೊಳ್ಳುವಂಥ ವ್ಯವಸ್ಥೆಯಿರಬೇಕು.



**ಪಾಶ್ಚಾತ್ಯ ಆರ್ಥಿಕ ಸಿದ್ಧಾಂತಗಳು**

ಮಾನವನ ಧ್ಯೇಯೋದ್ದೇಶಗಳು, ಗುರಿಲಕ್ಷ್ಯಗಳು ಅರ್ಥವ್ಯವಸ್ಥೆಗೆ ಸ್ಫೂರ್ತಿದಾಯಕ ಎಂದಾದಲ್ಲಿ ಆರ್ಥಿಕ ಪ್ರಶ್ನೆಗಳಿಗೆ ಸಂಬಂಧಿಸಿದ ಚಿಂತನೆಗಳಲ್ಲಿ ಆಮೂಲಾಗ್ರ ಮಾರ್ಪಾಡುಗಳು ಸಾಧ್ಯ. ಪಾಶ್ಚಾತ್ಯ ಅರ್ಥವ್ಯವಸ್ಥೆಗಳಲ್ಲಿ. ಅದು ಬಂಡವಾಳಶಾಹಿ ಅಥವಾ ಸಮಾಜವಾದಿ ಯಾವುದೇ ಇರಲಿ ಮೌಲ್ಯ ಅತಿಮುಖ್ಯವಾದದ್ದು. ಮೌಲ್ಯ ಕೇಂದ್ರಸ್ಥಾನದಲ್ಲಿದೆ. ಎಲ್ಲ ಆರ್ಥಿಕ ಸಿದ್ಧಾಂತಗಳು ಮೌಲ್ಯದ ಸುತ್ತ ಇವೆ. ಅರ್ಥಶಾಸ್ತ್ರಜ್ಞಾನ ದೃಷ್ಟಿಯಿಂದ ಮೌಲ್ಯ ವಿಶ್ಲೇಷಣೆ ತುಂಬ ಮಹತ್ವದ್ದಿರಬಹುದು. ಆದರೆ ಸಂಪೂರ್ಣವಾಗಿ ಮೌಲ್ಯವನ್ನೇ ಆಧರಿಸಿರುವ ಸಮಾಜವಾದಿ ತತ್ವಸಿದ್ಧಾಂತಗಳು ಅಪೂರ್ಣ, ಅಮಾನವೀಯ ಹಾಗೂ ಅನೈತಿಕ. ಉದಾಹರಣೆಗೆ ಇತ್ತೀಚೆಗೆ ಸಾಮಾನ್ಯವಾಗಿ ಕೇಳಿಬರುತ್ತಿರುವ "ಅವರ ಅನ್ನ ಅವರೇ ಸಂಪಾದಿಸಬೇಕು" ಎನ್ನುವ ಘೋಷಣೆಯನ್ನು ತೆಗೆದುಕೊಳ್ಳಿ. ಸಾಮಾನ್ಯವಾಗಿ ಕಮ್ಯುನಿಸ್ಟರು ಈ ಘೋಷಣೆಯನ್ನು ಬಳಸುತ್ತಾರೆ. ಆದರೆ ಬಂಡವಾಳಶಾಹಿಗಳಿಗೆ ಮೂಲತಃ ಇದರಲ್ಲಿ ಅಸಮ್ಮತಿ ಏನಿಲ್ಲ. ಇವರಿಬ್ಬರಲ್ಲಿ ಏನಾದರೂ ಭಿನ್ನಮತ ಇದ್ದರೆ, ಅದು ಯಾರು ಸಂಪಾದಿಸುತ್ತಾರೆ, ಎಷ್ಟು ಸಂಪಾದಿಸುತ್ತಾರೆ ಎನ್ನುವ ವಿಚಾರದಲ್ಲಿ ಮಾತ್ರ. ಬಂಡವಾಳ ಮತ್ತು ಉದ್ಯಮ ಉತ್ಪಾದನೆಯ ಪ್ರಮುಖ ಅಂಗಗಳೆಂದು ಬಂಡವಾಳಶಾಹಿಗಳು ಪರಿಗಣಿಸುತ್ತಾರೆ. ಆದ್ದರಿಂದಲೇ ಅವರು ಲಾಭದಲ್ಲಿ ಹೆಚ್ಚಿನ ಅಂಶವನ್ನು ತೆಗೆದುಕೊಳ್ಳುವುದು ಅವರ ಹಕ್ಕು. ಆದರೆ ಉತ್ಪಾದನೆಯಲ್ಲಿ ವಾಸ್ತವವಾಗಿ ಕಾರ್ಮಿಕರೇ ಮುಖ್ಯ ಕಾರಣ ಎನ್ನುವುದು ಕಮ್ಯುನಿಸ್ಟರ ನಂಬಿಕೆ. ಆದ್ದರಿಂದ ಲಾಭದಲ್ಲಿ ಹೆಚ್ಚಿನ ಪಾಲು ಕಾರ್ಮಿಕರಿಗೆ ಸಂದಾಯವಾಗಬೇಕೆಂದು ಕಮ್ಯುನಿಸ್ಟರ ಅಂಬೋಣ. ಈ ಎರಡು ಕಲ್ಪನೆಗಳೂ ಸರಿಯಲ್ಲ.

**ಮೂಲಭೂತ ಅಗತ್ಯಗಳನ್ನು ಪೂರೈಸಬೇಕು**

ನಿಜವಾಗಿ ಹೇಳುವುದಾದರೆ, "ಯಾರು ಸಂಪಾದನೆ ಮಾಡುತ್ತಾರೋ ಅವರು ಅನ್ನದಾನ ಮಾಡಬೇಕು ಹಾಗೂ ಪ್ರತಿಯೊಬ್ಬರಿಗೂ ಹೊಟ್ಟೆ ತುಂಬ ಊಟ ಸಿಗಬೇಕು" ಎನ್ನುವುದು ನಮ್ಮ ಘೋಷಣೆಯಾಗಬೇಕು. ಊಟದ ಹಕ್ಕು ಜನ್ಮಸಿದ್ಧ ಹಕ್ಕು. ಶಿಕ್ಷಣ ಮತ್ತು ತರಬೇತಿಗಳಿಂದ ಸಂಪಾದಿಸುವ ಸಾಮರ್ಥ್ಯ ಬರುತ್ತದೆ. ಸಮಾಜದಲ್ಲಿ ಸಂಪಾದಿಸದೇ ಇರುವವರಿಗೂ ಅನ್ನ ಆಹಾರ ದೊರಕಬೇಕು. ಮಕ್ಕಳು, ವೃದ್ಧರು, ಅನಾರೋಗ್ಯಪೀಡಿತರು ಅಶಕ್ತರು ಇವರೆಲ್ಲರ ಯೋಗಕ್ಷೇಮವನ್ನು ಸಮಾಜ ನೋಡಿಕೊಳ್ಳಬೇಕು. ಸಾಮನ್ಯವಾಗಿ ಪ್ರತಿಯೊಂದು ಸಮಾಜವೂ ಈ ಜವಾಬ್ದಾರಿಯನ್ನು ನಿರ್ವಹಿಸುತ್ತದೆ.ಈ ಹೊಣೆಗಾರಿಕೆಯನ್ನು ಈಡೇರಿಸುವುದರಲ್ಲಿ

ಮನುಕುಲದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಗತಿ ಇದೆ. ಅರ್ಥ ವ್ಯವಸ್ಥೆ ಇಂಥ ಹೊಣೆಗಾರಿಕೆ ನಿರ್ವಹಣೆಗೆ, ಈ ಕೆಲಸಕ್ಕೆ ನಿಬಂಧನೆಗಳನ್ನು ಮಾಡಬೇಕು. ಏರ್ಪಾಟುಗಳನ್ನು ಮಾಡಬೇಕು. ಅರ್ಥಶಾಸ್ತ್ರ ಒಂದು ವಿಜ್ಞಾನವಾಗಿ ಈ ಹೊಣೆಗಾರಿಕೆಗೆ ಉತ್ತರದಾಯಿಯಾಗಿಲ್ಲ. ಮನುಷ್ಯ ಕೇವಲ ಅನ್ನಕ್ಕಾಗಿ ದುಡಿಯುವುದಿಲ್ಲ. ತನ್ನ ಜವಾಬ್ದಾರಿಗಳ ಭಾರ ಹೊರಲು ದುಡಿಯುತ್ತಾನೆ. ಇಲ್ಲವಾದಲ್ಲಿ ಹೊಟ್ಟೆ ತುಂಬಿದವರು ದುಡಿಯುವುದೇ ಇಲ್ಲ.

ಯಾವುದೇ ಅರ್ಥವ್ಯವಸ್ಥೆ ಇರಲಿ ಅದು ಪ್ರತಿಯೊಬ್ಬರಿಗೂ ಕನಿಷ್ಠ ಮೂಲಭೂತ ಅಗತ್ಯಗಳನ್ನು ಪೂರೈಸುವ ಏರ್ಪಾಟು ಮಾಡಬೇಕು. ಅನ್ನ, ಆಹಾರ, ಬಟ್ಟೆ, ವಸತಿ ಇವು ಮೂಲಭೂತ ಅಗತ್ಯಗಳು. ಇದೇ ರೀತಿ ಸಮಾಜವೂ ಸೂಕ್ತ ಶಿಕ್ಷಣ ನೀಡುವ ಮೂಲಕ ವ್ಯಕ್ತಿಗಳಿಗೆ ತನ್ನ ಸಾಮಾಜಿಕ ಹಂಗು–ಹೊಣೆಗಾರಿಕೆಗಳನ್ನು ನಿರ್ವಹಿಸಲು ಅವಕಾಶಗಳನ್ನು ಕಲ್ಪಿಸಬೇಕು. ಕೊನೆಯದಾಗಿ ವ್ಯಕ್ತಿ ರೋಗರುಜಿನಗಳಲ್ಲಿ ಬಲಿಯಾದಲ್ಲಿ ಸಮಾಜ ಅವನ ಚಿಕಿತ್ಸೆ, ಶುಶ್ರೂಷೆಗಳಿಗೆ ವ್ಯವಸ್ಥೆ ಮಾಡಬೇಕು. ಸರ್ಕಾರ ಈ ಕನಿಷ್ಠ ಅಗತ್ಯಗಳನ್ನು ಈಡೇರಿಸಿದಲ್ಲಿ ಆಗ ಅದು ಧರ್ಮದ ಆಳ್ವಿಕೆ ಎನ್ನಿಸಿಕೊಳ್ಳುತ್ತದೆ. ಇಲ್ಲವಾದಲ್ಲಿ ಅಧರ್ಮದ ಆಳ್ವಿಕೆಯಾಗುತ್ತದೆ. ದೊರೆ ದಿಲೀಪನನ್ನು ವರ್ಣಿಸುತ್ತ, ಕಾಳಿದಾಸ ರಘುವಂಶ ದಲ್ಲಿ ಹೀಗೆ ಹೇಳಿದ್ದಾನೆ.

"ತನ್ನ ಪ್ರಜೆಗಳ ಪೋಷಣೆ, ರಕ್ಷಣೆ ಮತ್ತು ಶಿಕ್ಷಣಗಳ ಜವಾಬ್ದಾರಿಯನ್ನು ಹೊತ್ತಿದ್ದ ಅವನು ನಿಜವಾಗಿ ಅವರ ತಂದೆಯಾಗಿದ್ದ. ಉಳಿದವರು ಕೇವಲ ಜನ್ಮ ಕೊಟ್ಟವರಾಗಿದ್ದರು."

ನಮ್ಮ ದೇಶಕ್ಕೆ 'ಭಾರತ' ಎನ್ನುವ ಹೆಸರನ್ನು ತಂದುಕೊಟ್ಟಿರುವ ಭರತ ಚಕ್ರವರ್ತಿಯ ವರ್ಣನೆಯೂ ಹೆಚ್ಚು ಕಡಿಮೆ ಹೀಗೇ ಇದೆ "ಪ್ರಜೆಗಳ ಲಾಲನೆ ಪಾಲನೆ ಪೋಷಣೆ ರಕ್ಷಣೆಗಳಿಂದಾಗಿ ಅವನನ್ನು ಭರತ ಎಂದು ಕರೆಯುತ್ತಿದ್ದರು" ಇದು ಅವನ ದೇಶ, ಭಾರತ. ಈ ಭಾರತದಲ್ಲಿ ಪಾಲನೆ ಪೋಷಣೆ ರಕ್ಷಣೆಗಳ ಖಾತ್ರಿ ಇಲ್ಲ ಎಂದಂತಾದಲ್ಲಿ ಭಾರತ ಅರ್ಥರಹಿತವಾಗುತ್ತದೆ.

## ಶಿಕ್ಷಣ– ಸಾಮಾಜಿಕ ಹೊಣೆ

ಸಮಾಜದ ಹಿತದೃಷ್ಟಿಯಿಂದಲೇ ಮಕ್ಕಳಿಗೆ ಶಿಕ್ಷಣದ ಏರ್ಪಾಟಾಗಬೇಕು. ಮಕ್ಕಳನ್ನು ಸುಶಿಕ್ಷಿತರನ್ನಾಗಿಸುವುದರಲ್ಲಿ ಸಮಾಜದ ಹಿತವಿದೆ. ಶಿಕ್ಷಣ, ಸಂಸ್ಕೃತಿಗಳ ಮೂಲಕ ಅವನು ಸಮಾಜದ ಜವಾಬ್ದಾರಿಯುತ ಸದಸ್ಯನಾಗುತ್ತಾನೆ. ಸಮಾಜದ ಹಿತಕ್ಕಾಗಿ ಉದ್ದೇಶಿಸಿರುವುದಕ್ಕೆ ಶುಲ್ಕ ವಿಧಿಸುವುದು ಸ್ವಲ್ಪ ವಿಚಿತ್ರವಾದದ್ದೇ. ಶುಲ್ಕ ಕೊಡುವ ಸಾಮರ್ಥ್ಯವಿಲ್ಲದ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ. ಎಷ್ಟು ಕಾಲ ಸಮಾಜ ಇಂಥ ಪರಿಸ್ಥಿತಿಯನ್ನು ತಾಳಿಕೊಂಡಿರಲು ಸಾಧ್ಯ? ಬೀಜ ಬಿತ್ತಿ



ಸಸಿಯನ್ನು ಬೆಳೆಸಿದ್ದಕ್ಕಾಗಿ ನಾವು ವೃಕ್ಷಗಳಿಗೆ ಶುಲ್ಕ ವಿಧಿಸುವುದಿಲ್ಲ. ಗಿಡವಾಗಿ ಬೆಳೆದಾಗ ಸಸಿಗಳು ಹಣ್ಣುಗಳನ್ನು ಕೊಡುತ್ತವೆ. ನಾವು ಆ ಫಲವನ್ನು ಉಣ್ಣುತ್ತೇವೆ. ಶಿಕ್ಷಣವೂ ಇದೇ ರೀತಿಯ ಬಂಡವಾಳ ಶಿಕ್ಷಣ ಪಡೆದ ವ್ಯಕ್ತಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಾನೆ. ಅದೇ ಜನ ಸಮಾಜದ ಬಗ್ಗೆ ತಾತ್ಸಾರದಿಂದ ವರ್ತಿಸಿದಲ್ಲಿ ಸಮಾಜ ಅವರನ್ನು ದೂರವಿಡುತ್ತದೆ. ಅವರ ದಾರಿಗೆ ಅವರು ಹೋಗಲು ಬಿಡುತ್ತದೆ. ೧೯೪೭ಕ್ಕೆ ಮುಂಚೆ ಭಾರತದ ಮಹಾರಾಜರುಗಳ ಸಂಸ್ಥಾನಗಳಲ್ಲಿ ಉಚಿತ ಶಿಕ್ಷಣ ನೀಡಲಾಗುತ್ತಿತ್ತು. ಉನ್ನತ ಶಿಕ್ಷಣಕ್ಕೂ ಶುಲ್ಕ ವಸೂಲಿ ಮಾಡುತ್ತಿರಲಿಲ್ಲ. ಗುರುಕುಲಗಳಲ್ಲಿ ಶುಲ್ಕ ವಿಧಿಸದೇ ಊಟ ವಸತಿ ಕಲ್ಪಿಸಲಾಗುತ್ತಿತ್ತು. ವಿದ್ಯಾರ್ಥಿಯಾದವನು ಸಮಾಜದೆದುರು ಭಿಕ್ಷಾಂದೇಹಿ ಎಂದು ಭಿಕ್ಷಾ ಪಾತ್ರೆ ಹಿಡಿಯುತ್ತಿದ್ದ. ಗೃಹಸ್ಥರು ಯಾರೂ ವಿದ್ಯಾರ್ಥಿಗಳಿಗೆ ಭಿಕ್ಷೆ ನಿರಾಕರಿಸುತ್ತಿರಲಿಲ್ಲ. ಅಂದರೆ ಶಿಕ್ಷಣದ ಜವಾಬ್ದಾರಿಯನ್ನು ಸಮಾಜ ಭರಿಸುತ್ತಿತ್ತು.

ಇದೇ ರೀತಿ ನಾವು ವೈದ್ಯಕೀಯ ಚಿಕಿತ್ಸೆಗೂ ಶುಲ್ಕ ನೀಡಬೇಕು ಎನ್ನುವುದು ಸೋಜಿಗದ ಸಂಗತಿ. ವೈದ್ಯಕೀಯ ಚಿಕಿತ್ಸೆಯನ್ನು ಉಚಿತವಾಗಿ ನೀಡಬೇಕು. ಹಿಂದೆ ಈ ದೇಶದಲ್ಲಿ ಉಚಿತ ಚಿಕಿತ್ಸೆ ರೂಢಿಯಲ್ಲಿತ್ತು. ಈಚಿನ ದಿನಗಳಲ್ಲಿ ದೇವಾಲಯ ಪ್ರವೇಶಕ್ಕೂ ಶುಲ್ಕ ಪಾವತಿಸಬೇಕಾಗಿದೆ. ತಿರುಪತಿಯಲ್ಲಿ ಬಾಲಾಜಿ ದೇವಾಲಯ ಪ್ರವೇಶಕ್ಕೆ ಇಪ್ಪತ್ತೈದು ಪೈಸೆ ತೆರಬೇಕು. ಆದರೆ ಮಧ್ಯಾಹ್ನ ಒಂದು ಗಂಟೆ ಕಾಲ ಧರ್ಮದರ್ಶನಕ್ಕೆ ಅವಕಾಶವಿದೆ. ಧರ್ಮದರ್ಶನ ಅವಧಿಯಲ್ಲಿ ಶುಲ್ಕ ಪಾವತಿಸಬೇಕಾಗಿಲ್ಲ. ಉಳಿದ ವೇಳೆ, ಶುಲ್ಕ ತೆರಬೇಕಾಗಿ ಬಂದಾಗ ಅದು ಅಧರ್ಮ ದರ್ಶನ. ಪ್ರತಿವ್ಯಕ್ತಿಯ ಪ್ರಗತಿ ಮತ್ತು ಜೀವನ ನಿರ್ವಹಣೆಗೆ ಬೇಕಾದ ಕನಿಷ್ಠ ಅಗತ್ಯಗಳನ್ನು ತನ್ನೆಲ್ಲ ಸದಸ್ಯರಿಗೂ ಸಮಾಜ ಖಾತ್ರಿಯಾಗಿ ಪೂರೈಸಬೇಕು. ಪ್ರತಿಯೊಬ್ಬರಿಗೂ ಕನಿಷ್ಠ ಅಗತ್ಯಗಳನ್ನು ಖಾತ್ರಿಯಾಗಿ ಪೂರೈಸಲು ಇದಕ್ಕೆ ಸಂಪನ್ಮೂಲ ಎಲ್ಲಿಂದ ಬರುತ್ತದೆ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ.

## ಉದ್ಯೋಗ ಖಾತರಿ

ಸ್ವಂತ ಪ್ರಯತ್ನಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕು ಎನ್ನುವುದು ಸ್ಪಷ್ಟ. ಆದ್ದರಿಂದ ಕನಿಷ್ಠ ಅಗತ್ಯಗಳ ಖಾತರಿಯ ಹಕ್ಕನ್ನು ಪಡೆದ ವ್ಯಕ್ತಿ ಸಂಪನ್ಮೂಲ ಕ್ರೋಢೀಕರಿಸುವ ಪ್ರಯತ್ನಗಳಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ ಅವನು ಸಮಾಜಕ್ಕೆ ಹೊರೆಯಾಗುತ್ತಾನೆ. ಇದೇ ರೀತಿ ಜನತೆಯ ಉತ್ಪಾದನಾ ಚಟುವಟಿಕೆಗಳಿಗೆ ಅಡ್ಡಿಪಡಿಸುವ ವ್ಯವಸ್ಥೆ ಆತ್ಮಘಾತುಕವಾಗುತ್ತದೆ. ಇಂಥ ವ್ಯವಸ್ಥೆಯಿಂದ ಪ್ರಜೆಗಳಿಗೆ ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಅಷ್ಟೇ ಅಲ್ಲ. ಪ್ರಜೆಗಳ ಅಗತ್ಯವನ್ನು ಪೂರೈಸಿಯೂ ಉತ್ಪಾದನಾ ಪ್ರಯತ್ನಗಳಲ್ಲಿ ಅವರು

ಭಾಗಿಯಾಗದಿದ್ದಲ್ಲಿ ಅವರ ವ್ಯಕ್ತಿತ್ವ ಪೂರ್ಣವಾಗಿ ವಿಕಸನ ಹೊಂದುವುದಿಲ್ಲ. ಮನುಷ್ಯರಾಗಿ ಅವರ ಬೆಳವಣಿಗೆ ವಿಕೃತವಾಗಿರುತ್ತದೆ, ಏರುಪೇರಾಗಿರುತ್ತದೆ. ಮನುಷ್ಯನಿಗೆ ಹೊಟ್ಟೆಯೂ ಇದೆ. ಕೈಗಳೂ ಇವೆ. ಕೈಗಳಿಗೆ ಕೆಲಸವಿಲ್ಲದೆ ಹೊಟ್ಟೆ ತುಂಬಿಸಿಕೊಳ್ಳುವುದರಿಂದ ಅವನು ಅಸುಖಿಯಾಗುತ್ತಾನೆ. ಹಸಿವನ್ನು ಹಿಂಗಿಸಿಕೊಳ್ಳುವುದಷ್ಟರಿಂದಲೇ ಅವನಿಗೆ ಸಂತೋಷ ಸಿಗುವುದಿಲ್ಲ. ಅವನ ಪ್ರಗತಿಗೆ ಧಕ್ಕೆಯಾಗುತ್ತದೆ. ಬಂಜೆಯಾದ ಹೆಂಗಸಿಗೆ ಬದುಕು ಹೇಗೆ ಅರ್ಥರಹಿತವಾಗುತ್ತದೋ ಅತೃಪ್ತಿಕರವಾಗುತ್ತದೆಯೋ ಹಾಗೆಯೇ ನಿರುದ್ಯೋಗಿ ಪುರುಷನ ಸ್ಥಿತಿಯೂ.

ಸಮರ್ಥ ದೇಹಧಾರ್ಢ್ಯತೆ ಉಳ್ಳವರಿಗೆಲ್ಲ ಉದ್ಯೋಗ ಖಾತರಿ ನಮ್ಮ ಅರ್ಥವ್ಯವಸ್ಥೆಯ ಗುರಿಯಾಗಬೇಕು. ನಾವಿಂದು ಒಂದು ವಿಚಿತ್ರ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಒಂದು ಕಡೆ ಹತ್ತು ವರ್ಷದ ಅಣುಗರು ಹಾಗೂ ಎಪ್ಪತ್ತು ವರ್ಷದ ವೃದ್ಧರು ದುಡಿಯುತ್ತಿದ್ದರೆ ಮತ್ತೊಂದು ಕಡೆ ಉದ್ಯೋಗವಿಲ್ಲದೆ ಇಪ್ಪತ್ತೈದು ವರ್ಷದ ಯುವಕರು ಆತ್ಮಹತ್ಯೆಗೆ ಮೊರೆಹೋಗುತ್ತಿದ್ದಾರೆ. ಈ ಕೆಟ್ಟ ನಿರ್ವಹಣೆಯನ್ನು ನಾವು ಕಿತ್ತುಹಾಕಬೇಕು. ದೇವರು ಪ್ರತಿಯೊಬ್ಬರಿಗೂ ಕೈಗಳನ್ನು ಕೊಟ್ಟಿದ್ದಾನೆ. ಆದರೆ ಕೈಗಳ ಉತ್ಪಾದನಾ ಸಾಮರ್ಥ್ಯ ಮಿತವಾದದ್ದು. ಅವರಿಗೆ ಯಂತ್ರರೂಪದ ಬಂಡವಾಳದ ನೆರವು ಬೇಕಾಗಿದೆ. ಮನುಷ್ಯ ನಿಸರ್ಗದ ನಡುವಣ ಬಾಂಧವ್ಯದಂತೆಯೇ ದುಡಿಮೆ ಮತ್ತು ಬಂಡವಾಳದ ನಡುವಣ ಸಂಬಂಧವೂ. ಪ್ರಪಂಚ ಇವೆರಡರ ಸೃಷ್ಟಿ. ಇವೆರಡನ್ನೂ ನಿರ್ಲಕ್ಷಿಸುವಂತಿಲ್ಲ.

## ಬಂಡವಾಳ ಕ್ರೋಢೀಕರಣ

ಬಂಡವಾಳ ಕ್ರೋಢೀಕರಿಸಲು ಸುಲಭಮಾರ್ಗವೊಂದಿದೆ. ಉತ್ಪಾದನೆ ಮಾಡಿದ್ದೆಲ್ಲವನ್ನೂ ತಕ್ಷಣ ಉಪಯೋಗಿಸದೇ ಅದರಲ್ಲಿ ಒಂದು ಭಾಗವನ್ನು ಮುಂದಿನ ಉತ್ಪಾದನೆಗಾಗಿ ಉಳಿತಾಯ ಮಾಡಬೇಕು. ಬಳಕೆಯಲ್ಲಿ ಸಂಯಮ ಸಾಧಿಸುವುದರಿಂದ ಬಂಡವಾಳ ಕ್ರೋಢೀಕರಿಸಬಹುದು. ಇದು ಬಂಡವಾಳ ಕ್ರೋಢೀಕರಣದ ಅಡಿಪಾಯ. ಇದನ್ನು ಕಾರ್ಲ್‌ಮಾರ್ಕ್ಸ್ "ಹೆಚ್ಚುವರಿ ಮೌಲ್ಯ" ಎಂದು ಪ್ರಸ್ತಾಪಿಸಿದ್ದಾನೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕೈಗಾರಿಕೋದ್ಯಮಿ ಈ ಹೆಚ್ಚುವರಿ ಮೌಲ್ಯದ ನೆರವಿನಿಂದ ಬಂಡವಾಳ ಸೃಷ್ಟಿಸುತ್ತಾನೆ. ಸಮಾಜವಾದಿ ವ್ಯವಸ್ಥೆಯಲ್ಲಿ ಸರ್ಕಾರ ಈ ಕೆಲಸವನ್ನು ಮಾಡುತ್ತದೆ. ಈ ಎರಡೂ ವ್ಯವಸ್ಥೆಗಳಲ್ಲಿ ಇಡೀ ಉತ್ಪಾದನೆಯನ್ನು ಕಾರ್ಮಿಕರಿಗೆ ವಿತರಣೆ ಮಾಡಲಾಗುವುದು. ಕೇಂದ್ರೀಕೃತ ಬೃಹತ್ ಉದ್ಯಮಗಳ ಉತ್ಪಾದನೆಯಲ್ಲಿ ಬಂಡವಾಳ ಸೃಷ್ಟಿಯಲ್ಲಿ ಕಾರ್ಮಿಕರು ಮಾಡುವ ತ್ಯಾಗಕ್ಕೆ ಸೂಕ್ತ ಮಾನ್ಯತೆ ನೀಡುವುದಿಲ್ಲ. ಅದೇ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಕಾರ್ಮಿಕರಿಗೆ ಆಡಳಿತದಲ್ಲಿ ಪ್ರತ್ಯಕ್ಷ ಪಾಲುದಾರರಾಗಿರುವ ಪ್ರಜ್ಞೆ ಇರುತ್ತದೆ. ಆದ್ದರಿಂದ



ಹೆಚ್ಚುವರಿ ಮೌಲ್ಯ ಅಥವಾ ಬಂಡವಾಳದಲ್ಲಿ ತಮ್ಮ ಪಾಲುದಾರಿಕೆಯೂ ಇದೆ ಎನ್ನುವ ತೃಪ್ತಿ ಕಾರ್ಮಿಕರಿಗಿರುತ್ತದೆ.

## ಯಂತ್ರ ಮತ್ತು ಮಾನವ

ಯಂತ್ರ ಬಂಡವಾಳದ ಸಾಮಾನ್ಯ ರೂಪ. ಉತ್ಪಾದನೆಯಲ್ಲಿ ದೈಹಿಕ ಶ್ರಮವನ್ನು ತಗ್ಗಿಸಲು ಹಾಗೂ ಕಾರ್ಮಿಕರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಯಂತ್ರವನ್ನು ಸೃಷ್ಟಿಸಲಾಯಿತು. ಆದ್ದರಿಂದ ಯಂತ್ರ ಕಾರ್ಮಿಕರಿಗೆ ಸಹಾಯಕವೇ ಹೊರತು ಪ್ರತಿಸ್ಪರ್ಧಿಯಲ್ಲ. ಆದರೆ ಮಾನವ ಶ್ರಮ ದುಡಿಮೆಗಳು ಹಣದಿಂದ ಖರೀದಿಸಬಹುದಾದ ಒಂದು ಪದಾರ್ಥ ಎಂದು ಎಲ್ಲೆಲ್ಲಿ ಪರಿಗಣಿಸಲಾಯಿತೋ ಅಲ್ಲೆಲ್ಲ ಯಂತ್ರ ಮಾನವನಿಗೆ ಪ್ರತಿಸ್ಪರ್ಧಿಯಾಯಿತು. ಯಂತ್ರವನ್ನು ಮಾನವ ದುಡಿಮೆಗೆ ಪ್ರತಿಸ್ಪರ್ಧಿಯನ್ನಾಗಿಸಿದ್ದರಲ್ಲಿ ಹಾಗೂ ಇದರ ಮೂಲಕ ಮಾನವನನ್ನು ನಿರುದ್ಯೋಗಿಯನ್ನಾಗಿ ಮಾಡಿ ಬಡತನಕ್ಕೆ ದೂಡಿದ್ದರಲ್ಲಿ ಬಂಡವಾಳಶಾಹಿ ಚಿಂತನೆಯಲ್ಲಿನ ನ್ಯೂನತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಇದರಿಂದಾಗಿ ಯಂತ್ರವನ್ನು ಸೃಷ್ಟಿಸಿದ ಮುಖ್ಯ ಉದ್ದೇಶವೇ ವಿಫಲಗೊಂಡಿತು. ಈ ವೈಫಲ್ಯಕ್ಕಾಗಿ ಯಂತ್ರವನ್ನು ದೂಷಿಸಲಾಗದು. ಇದು ವಸ್ತು ಮತ್ತು ಉಪಕರಣಗಳ ನಡುವಣ ವ್ಯತ್ಯಾಸ ಗುರುತಿಸಲಾಗದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿರುವ ದೋಷ. ಯಂತ್ರದ ಮಿತಿಗಳನ್ನು ಪರಿಶೀಲಿಸಿದ ನಂತರವೇ ಅದರ ಉಪಯುಕ್ತತೆ ಬಗ್ಗೆ ನಿರ್ಧಾರಕ್ಕೆ ಬರಬೇಕಾಗುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಾನವ ಸಂಪನ್ಮೂಲದ ಕೊರತೆ ಇದ್ದದ್ದೇ ಯಂತ್ರಗಳ ವಿನ್ಯಾಸ ಸೃಷ್ಟಿಯ ಹಿಂದಿನ ಮಾರ್ಗದರ್ಶಕ ಸಂಗತಿಯಾಗಿತ್ತು. ನಾವು ಪಾಶ್ಚಾತ್ಯ ರಾಷ್ಟ್ರಗಳಿಂದ ಯಂತ್ರಗಳನ್ನು ಆಮದು ಮಾಡಿಕೊಳ್ಳುವುದು ಗಂಭೀರವಾದ ಪ್ರಮಾದವಾಗುತ್ತದೆ. ಯಂತ್ರದ ಯೋಗ್ಯತೆ–ಸಾಮರ್ಥ್ಯಗಳು ದೇಶಕಾಲಗಳಿಗನುಗುಣವಾಗಿರುತ್ತದೆ. ಯಂತ್ರಗಳು ದೇಶಕಾಲಗಳಿಂದ ಮುಕ್ತವಲ್ಲ. ಯಂತ್ರಗಳು ಆಧುನಿಕ ವಿಜ್ಞಾನದ ಉತ್ಪನ್ನಗಳೇ ಹೊರತು ಅದರ ಪ್ರತಿನಿಧಿಯಲ್ಲ. ವೈಜ್ಞಾನಿಕ ಅರಿವು ತಿಳುವಳಿಕೆಗಳು ಯಾವುದೇ ಒಂದು ರಾಷ್ಟ್ರದ ಏಕಸ್ವಾಮ್ಯ ಸ್ವತ್ತಲ್ಲ. ಆದರೆ ವಿಜ್ಞಾನವನ್ನು ಅನ್ವಯಿಸುವಾಗ ಆಯಾ ರಾಷ್ಟ್ರದ ಪರಿಸ್ಥಿತಿ ಮತ್ತು ಅಗತ್ಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ನಿರ್ದಿಷ್ಟ ಆರ್ಥಿಕ ಅಗತ್ಯಗಳಿಗನುಗುಣವಾಗಿ ನಾವು ಯಂತ್ರಗಳನ್ನು ರೂಪಿಸಿಕೊಳ್ಳಬೇಕು. ಹೀಗೆ ಯಂತ್ರಗಳನ್ನು ರೂಪಿಸುವಾಗ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಉದ್ದೇಶಗಳಿಗೆ, ಗುರಿಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು.

**ಏಳು 'M' ಗಳು**

ಉತ್ಪಾದನಾ ವ್ಯವಸ್ಥೆಯನ್ನು ಪರಾಮರ್ಶಿಸುವಾಗ ಏಳು ' ಎಮ್' ಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ಸರ್.ಎಂ.ವಿಶ್ವೇಶ್ವರಯ್ಯನವರು ತಮ್ಮ ಒಂದು ಪುಸ್ತಕದಲ್ಲಿ ಬರೆದಿದ್ದಾರೆ. ಏಳು 'ಎಮ್'ಗಳು ಮಾನವ (Man) ಮೂಲದ್ರವ್ಯ (Material) ಹಣ(Money) ಆಡಳಿತ ನಿರ್ವಹಣೆ(Management) ಪ್ರೇರಕ ಶಕ್ತಿ (Motive Power) ಮಾರುಕಟ್ಟೆ (Market) ಮತ್ತು ಯಂತ್ರ (Machine) ಯಾರಿಗೆ ಕೆಲಸವನ್ನು ವಹಿಸುವ ಉದ್ದೇಶವಿರುತ್ತದೋ ಮೊದಲು ಅಂಥ ಕೆಲಸಗಾರರ ಕೌಶಲ ಮತ್ತು ಸಾಮರ್ಥ್ಯವನ್ನು ಪರಿಶೀಲಿಸಬೇಕು. ಕಚ್ಚಾ ವಸ್ತುಗಳ ಸುಲಭ ಲಭ್ಯತೆ ಮತ್ತು ಲಭ್ಯವಿರುವ ಕಚ್ಚಾ ವಸ್ತುಗಳ ಗುಣಮಟ್ಟ ಹಾಗೂ ಗುಣಲಕ್ಷಣಗಳನ್ನು ಉಪೇಕ್ಷಿಸಲಾಗದು. ಜೊತೆಗೆ ಬಂಡವಾಳರೂಪದಲ್ಲಿ ಎಷ್ಟು ಹಣ ಲಭ್ಯವಿದೆ ಎನ್ನುವುದನ್ನೂ ಆಲೋಚಿಸಬೇಕು. ಈ ಬಂಡವಾಳವನ್ನು ವೃದ್ಧಿಸುವುದು ಹೇಗೆ? ಯಾವ ಪ್ರಮಾಣದಲ್ಲಿ ವೃದ್ಧಿಸಬೇಕು? ಗರಿಷ್ಠ ಉತ್ಪಾದನೆ ಪಡೆಯಲು ಬಂಡವಾಳವನ್ನು ಎಷ್ಟು ಚೆನ್ನಾಗಿ ಬಳಸಿಕೊಳ್ಳಬಹುದು? ಬಂಡವಾಳದಲ್ಲಿ ಎಷ್ಟನ್ನು ಸ್ಥಿರ ಆಸ್ತಿಗಳಲ್ಲಿ ತೊಡಗಿಸಬಹುದು? ಎಷ್ಟು ಹಣವನ್ನು ಚಲಾವಣೆಯಲ್ಲಿ ತೊಡಗಿಸಬಹುದು? ಇವೆಲ್ಲದರ ಜೊತೆಗೆ ದೇಶದಲ್ಲಿನ ವಿದ್ಯುಚ್ಛಕ್ತಿ ಲಭ್ಯತೆ, ಮಾನವ ಸಂಪನ್ಮೂಲ, ಪಶುಸಂಪನ್ಮೂಲ ಇವೆಲ್ಲವನ್ನೂ ಪರಿಗಣಿಸಬೇಕಾಗುತ್ತದೆ. ಗಾಳಿ, ನೀರು ಆವಿ, ತೈಲ ಅನಿಲ, ವಿದ್ಯುಚ್ಛಕ್ತಿ, ಅಣು ವಿದ್ಯುತ್ ಇವೆಲ್ಲ ಪ್ರಚೋದನಾ ಶಕ್ತಿಯನ್ನು ಒದಗಿಸಬಲ್ಲವು. ಇವುಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳುವುದು ಉಚಿತ? ಎಷ್ಟು ಪ್ರಮಾಣದಲ್ಲಿ ಪೋಲಾಗಲು ಅವಕಾಶವಿಲ್ಲದಂತೆ ಪಡೆಯಬೇಕು? ಉತ್ಪಾದನಾ ವಿಧಾನಗಳನ್ನು ನಿರ್ಧರಿಸುವ ಮುನ್ನ ಈ ಎಲ್ಲ ಅಂಶಗಳ ಬಗ್ಗೆ ಪರ್ಯಾಲೋಚಿಸಬೇಕು. ಇದೇ ರೀತಿ ಆಡಳಿತ ವಿಚಕ್ಷಣೆಯೂ ಮುಖ್ಯವಾಗಿದ್ದು ಅದಕ್ಕೂ ಗಮನಕೊಡಬೇಕು. ಹನ್ನೆರಡು ಮಂದಿ ಕಾರ್ಮಿಕರ ನಡುವೆ ಸಮನ್ವಯ ಸಾಧಿಸುವ ಸಾಮರ್ಥ್ಯ ಇಲ್ಲವಾದರೆ ಈ ಹನ್ನೆರಡು ಜನ ಸುಮ್ಮನೆ ಕಾಲಹರಣ ಮಾಡುತ್ತಿರುತ್ತಾರೆ. ಉತ್ಪಾದಿಸಲಾಗುತ್ತಿರುವ ಪದಾರ್ಥಗಳ ಸಾಮಾಜಿಕ ಉಪಯುಕ್ತತೆ ಬಗ್ಗೆಯೂ ಆಲೋಚಿಸಬೇಕು. ಮಾರುಕಟ್ಟೆಯಲ್ಲಿರುವ ಬೇಡಿಕೆಯನ್ನು ಗಮನಿಸಬೇಕು. ಬೇಡಿಕೆ ಅಲಕ್ಷಿಸಿ ಒಂದು ನಿರ್ದಿಷ್ಟ ಪದಾರ್ಥದ ಆರ್ಥಿಕ ಲಾಭವನ್ನು ಸಮರ್ಥಿಸಿಕೊಳ್ಳಲಾಗದು. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದ ನಂತರವೇ ನಾವು ಸೂಕ್ತ ಯಂತ್ರೋಪಕರಣಗಳನ್ನು ವಿನ್ಯಾಸಗೊಳಿಸಬೇಕು. ಆದರೆ ಈಚಿನ ದಿನಗಳಲ್ಲಿ ಮೊದಲು ಯಂತ್ರಸ್ಥಾವರವನ್ನು ಸ್ಥಾಪಿಸಿ ನಂತರ ಉಳಿದ ವಿಷಯಗಳ ಬಗ್ಗೆ ಆಲೋಚಿಸುವ ಪ್ರವೃತ್ತಿಯನ್ನು ನಾವು ಕಾಣುತ್ತಿದ್ದೇವೆ. ಪ್ರಪಂಚದ ಇತರ ರಾಷ್ಟ್ರಗಳು ಈ ನಮೂನೆಯಲ್ಲಿ ಪ್ರಗತಿಯನ್ನು ಸಾಧಿಸಲಿಲ್ಲ. ನಾವು



ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಆದ್ದರಿಂದ ನಮ್ಮ ತಿಳುವಳಿಕೆ ಕಡಿಮೆ. ನಾವು ಭಾರತೀಯ ತಂತ್ರಜ್ಞಾನವನ್ನು ರೂಪಿಸಬೇಕು.

**ಪೂರ್ಣ ಉದ್ಯೋಗ ಕಡ್ಡಾಯ**

ಮೇಲಿನ ಏಳು ಸಂಗತಿಗಳೂ ಅಪರಿವರ್ತನೀಯವಾದವುಗಳಲ್ಲ. ವಾಸ್ತವವಾಗಿ ಪ್ರತಿಯೊಂದೂ ಸತತವಾಗಿ ಬದಲಾವಣೆ ಹೊಂದುತ್ತಿರುತ್ತವೆ. ಯೋಜನೆಯನ್ನು ರೂಪಿಸುವ ಹೊಣೆ ಹೊತ್ತವರು ಬದಲಾವಣೆ ಹೇಗೆ ಪ್ರಗತಿಮುಖಿಯಾಗಿದೆ? ಹೇಗೆ ಶ್ರಮವನ್ನು ಕಡಿಮೆ ಮಾಡಬಹುದು? ಶಕ್ತಿ ಪೋಲಾಗುವುದನ್ನು ಕನಿಷ್ಠತಮಗೊಳಿಸಬಹುದು ಇತ್ಯಾದಿಗಳನ್ನು ಕುರಿತು ಆಲೋಚಿಸಬೇಕು. ಉದಾಹರಣೆಗೆ ನಮ್ಮ ಕಾರ್ಮಿಕರ ಉತ್ಪಾದನಾ ಸಾಮರ್ಥ್ಯದಲ್ಲಿನ ಕೊರತೆ, ಇಳಿತಗಳನ್ನು ನೋಡಬಹುದು. ಯಂತ್ರಗಳನ್ನು ಬಳಸುವ ಮೂಲಕ ಉತ್ಪಾದನಾ ಸಾಮರ್ಥ್ಯವನ್ನು ಅಧಿಕಗೊಳಿಸಬಹುದು. ಆದರೆ ಈ ಉದ್ದೇಶಕ್ಕಾಗಿ ಬಳಸಲಿರುವ ಯಂತ್ರದ ನಿರ್ವಹಣೆಗೆ ಕೆಲವೇ ಮಂದಿ ಸಾಕು ಎಂದಾದಲ್ಲಿ ಉಳಿದ ಕಾರ್ಮಿಕರು ನಿರುದ್ಯೋಗಿಗಳಾಗುತ್ತಾರೆ. ಭಾರಿ ಬೆಲೆ ತೆತ್ತು ವಿದೇಶದಿಂದ ಯಂತ್ರವನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಈ ಯಂತ್ರ ಕೊಡುವ ಹೆಚ್ಚುವರಿ ಉತ್ಪಾದನೆ ಲಾಭ ತರುವ ಪ್ರಮಾಣದಲ್ಲಿಲ್ಲವಾದಲ್ಲಿ ಏನು ಪ್ರಯೋಜನ? ಇಂಥ ಯಂತ್ರಗಳು ನಮಗೆ ಸೂಕ್ತವಲ್ಲ. ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯವನ್ನು ಪೂರ್ತಿಯಾಗಿ ದುಡಿಸಿಕೊಳ್ಳದಿದ್ದಲ್ಲಿ ಅದರಿಂದ ನಷ್ಟವೇ ಆಗುತ್ತದೆ. ಜೊತೆಗೆ ದೇಶದ ಜನರೂ ನಿರುದ್ಯೋಗಿಗಳಾಗಿಯೇ ಇರುತ್ತಾರೆ. ಇದು ಇನ್ನೂ ಹೀನಾಯವಾದದ್ದು. ಯಂತ್ರ ಹೂಡಿದ ಬಂಡವಾಳವನ್ನು ನುಂಗಿ ಹಾಕುತ್ತದೆ. ನಿರುದ್ಯೋಗಿಗಳಿಗೆ ಊಟ ವಸತಿ ಒದಗಿಸಲೇಬೇಕು. ಇವುಗಳಿಂದಾಗಿ ದುಪ್ಪಟ್ಟು ವೇಗದಲ್ಲಿ ಸಂಪನ್ಮೂಲಗಳು ಬರಿದಾಗುತ್ತವೆ. ಆದ್ದರಿಂದ "ಪ್ರತಿ ಕಾರ್ಮಿಕನಿಗೂ ಊಟ ಸಿಗಲೇಬೇಕು" ಎಂದು ಭಾಷಣ ಬಿಗಿಯುವವರು "ಊಟ ಮಾಡುವವರೆಲ್ಲರಿಗೂ ಉದ್ಯೋಗ ದೊರೆಯಲೇಬೇಕು" ಎಂದು ತಮ್ಮ ಘೋಷಣೆಯನ್ನು ಬದಲಾಯಿಸಿಕೊಳ್ಳಬೇಕು. ಎಲ್ಲರಿಗೂ ಉದ್ಯೋಗ ನಮ್ಮ ಅರ್ಥವ್ಯವಸ್ಥೆಯ ಅಡಿಪಾಯವಾಗಬೇಕು. ಚರಕದ ಜಾಗಕ್ಕೆ ಯಂತ್ರಗಳು ಬರುತ್ತಿರುವುದು ಅನಿವಾರ್ಯ. ಆದರೆ ಈ ಯಂತ್ರಗಳು ಸ್ವಯಂಚಾಲಿತಗಳಾಗ ಬಾರದು. ಎಲ್ಲ ಕಡೆಯಲ್ಲೂ ಸ್ವಯಂಚಾಲಿತ ಯಂತ್ರಗಳ ಅವಶ್ಯಕತೆ ಇಲ್ಲ. ಪೂರ್ಣ ಉದ್ಯೋಗಾವಕಾಶ ಮುಖ್ಯ ಕಾಳಜಿಯಾಗಬೇಕು ಆಗ ಉಳಿದ ಆರು ಸಂಗತಿಗಳು ಇದಕ್ಕೆ ಅನುಗುಣವಾಗಿರುತ್ತವೆ.

**ಬಂಡವಾಳಶಾಹಿಯಲ್ಲಿ ಮಾನವನ ಸ್ಥಾನ**

ಮಾನವ ಕುಲವನ್ನು ಇಡಿಯಾಗಿ, ಸಮಗ್ರವಾಗಿ ಪರಿಗಣಿಸಬೇಕು. ಈ ಸಮಗ್ರತೆಯ ಹಿನ್ನೆಲೆಯಲ್ಲಿ ಮಾನವ ಸಂಪನ್ಮೂಲದ ಬಳಕೆ ಮತ್ತು ಉದ್ಯೋಗಾವಕಾಶಗಳ ಪ್ರಶ್ನೆಯನ್ನು ಪರಿಶೀಲಿಸಬೇಕು. ಕಳೆದ ಕೆಲವು ಶತಮಾನಗಳ ಆರ್ಥಿಕ ಸಿದ್ಧಾಂತಗಳು ಹಾಗೂ ಈ ಸಿದ್ಧಾಂತಗಳನ್ನು ಆಧರಿಸಿದ ಸಾಮಾಜಿಕ ವಿನ್ಯಾಸಗಳಿಂದಾಗಿ ಮಾನವನ ಅಪಮೌಲ್ಯವಾಗಿದೆ. ಅರ್ಥವ್ಯವಸ್ಥೆಯಲ್ಲಿ ಮಾನವ ವ್ಯಕ್ತಿತ್ವ ಅಸಂಗತವಾಗಿದೆ. ಅಸಂಬದ್ಧವಾಗಿದೆ. ಬಂಡವಾಳಶಾಹಿ ಅರ್ಥವ್ಯವಸ್ಥೆ "ಆರ್ಥಿಕ ಮಾನವ" ನನ್ನು ಮಾತ್ರ ಮಾನ್ಯಮಾಡುತ್ತದೆ. ಬಂಡವಾಳ ಶಾಹಿಯ ಎಲ್ಲ ಲೆಕ್ಕಾಚಾರಗಳೂ ಲಾಭ–ನಷ್ಟಗಳ ಮೇಲೆ, ಲೌಕಿಕ ಸಂಪತ್ತಿನ ಮೇಲೆ ಕಣ್ಣಿಟ್ಟಿರುತ್ತವೆ. ಈ "ಆರ್ಥಿಕ ಮಾನವನಿಗೆ" ಐದು ರೂಪಾಯಿ ಯಾವತ್ತೂ ನಾಲ್ಕು ರೂಪಾಯಿಗಿಂತ ಅಧಿಕವಾದುದ್ದು. ಅವನು ಅಧಿಕ ಸಂಪತ್ತು ಗಳಿಸಲೆಂದೇ ಕೆಲಸಮಾಡುತ್ತಾನೆ. ಗರಿಷ್ಠ ಲಾಭಗಳಿಸಲು ತನ್ನ ಶಕ್ತಿಯನ್ನೆಲ್ಲ ವಿನಿಯೋಗಿಸುತ್ತಾನೆ. ಇವನ ದೃಷ್ಟಿಯಲ್ಲಿ ಪೇಟೆಯಲ್ಲಿ ಲಭ್ಯವಿರುವ ಎಲ್ಲ ಪದಾರ್ಥಗಳಂತೆ ಮಾನವ ಶಕ್ತಿಯೂ ಮಾರುಕಟ್ಟೆಯಲ್ಲಿ ಖರೀದಿಸಬಹುದಾದ ಮಾರಾಟ ಮಾಡಬಹುದಾದ ಒಂದು ಸರಕು. ಇದು ಖಾಸಗಿ ಉದ್ಯಮ ಖಾಸಗಿ ಉದ್ಯಮ ಎಲ್ಲ ನಿಯಂತ್ರಣಗಳು, ಎಲ್ಲ ಬಗೆಯ ಕಟ್ಟುಪಾಡುಗಳನ್ನು ತರವಲ್ಲದವು. ನ್ಯಾಯಯುಕ್ತವಲ್ಲದವು ಎಂದು ಭಾವಿಸುತ್ತದೆ ಹಾಗೂ ಸ್ಪರ್ಧೆಯನ್ನು ಅನಿರ್ಬಂಧಿತವಾಗಿಸುತ್ತದೆ. ಸ್ಪರ್ಧೆ, ಪೈಪೋಟಿಗಳಲ್ಲಿ ಯಾರೂ ಹಿಂದೆ ಬೀಳಲು ಇಚ್ಛಿಸುವುದಿಲ್ಲ. ಪಂದ್ಯದಲ್ಲೂ ಅಷ್ಟೇ. ಓಟದ ಪಂದ್ಯದಲ್ಲಿ ಮಧ್ಯೆ ನಿಂತು ಹಿಂದೆ ಬಿದ್ದ ದುರ್ಬಲನಿಗೆ ಸಹಾಯಹಸ್ತ ಚಾಚಲು ಯಾರೂ ಸಿದ್ಧರಿರುವುದಿಲ್ಲ. ದುರ್ಬಲನನ್ನು ಪಂದ್ಯದಿಂದ ಹೊರಕ್ಕೆ ಹಾಕುವುದೇ ನ್ಯಾಯಯುತ, ಸಹಜ ಎಂದೂ ಭಾವಿಸಲಾಗುತ್ತದೆ. ಈ ದುರ್ಬಲ ವ್ಯಕ್ತಿ ಲಾಭದಾಯಕನಲ್ಲ. ನಿರ್ಣಾಯಕನಲ್ಲ ಆದ್ದರಿಂದ ಬದುಕಲು ಯೋಗ್ಯನಲ್ಲ. ಇದನ್ನೇ ಖಾಸಗಿ ಘಟಕಗಳನ್ನು ವ್ಯಕ್ತಿಗಳನ್ನು ವರ್ಜಿಸುವ ಮೂಲಕ ಕೆಲವೇ ವ್ಯಕ್ತಿಗಳ ಕೈಯಲ್ಲಿ ಆರ್ಥಿಕ ಶಕ್ತಿ ಸಂಚಯವಾಗುತ್ತದೆ. ಇದನ್ನು ಸಹಜವಾದ ಕ್ರಿಯೆ ಸಾಮಾನ್ಯವಾದದ್ದು ಎಂದೂ ಬಂಡವಾಳಶಾಹಿ ಪರಿಗಣಿಸುತ್ತದೆ. ಆದರೆ ಏಕಸ್ವಾಮ್ಯ ಸ್ಥಾಪನೆಯಾದಾಗ ಸ್ಪರ್ಧೆಯ ಮೇಲಿನ ಕಟ್ಟುಪಾಡುಗಳು ಹಿಡಿತಗಳು, ಕಾರ್ಯಾಚರಣೆ ಇವೆಲ್ಲ ಮಾಯವಾಗುತ್ತದೆ. ಇಂಥ ಸನ್ನಿವೇಶದಲ್ಲಿ ಸ್ಪರ್ಧೆ–ಪೈಪೋಟಿಗಳ ಫಲವಾದ ಪ್ರೇರಣೆ–ಪ್ರೋತ್ಸಾಹಗಳು–ಅನುಕೂಲಗಳು ಸಿಗುವುದಿಲ್ಲ. ಬೆಲೆಗಳನ್ನು ಏಕಪಕ್ಷೀಯವಾಗಿ ನಿಗದಿಮಾಡಲಾಗುತ್ತದೆ ಹಾಗೂ ಉತ್ಪನ್ನಗಳ ಗುಣಮಟ್ಟವೂ ಕ್ಷೀಣಿಸುತ್ತದೆ.

ಗ್ರಾಹಕರ ಅಗತ್ಯಗಳ ಬಗ್ಗೆಯೂ ಅಷ್ಟೆ. ಬಂಡವಾಳಶಾಹಿಗೆ ಗ್ರಾಹಕನ ಅಗತ್ಯಗಳು ಮತ್ತು ಅಪೇಕ್ಷೆಗಳ ಬಗ್ಗೆ ಹೆಚ್ಚಿನ ಕಾಳಜಿ ಇಲ್ಲ. ಬಂಡವಾಳ ಶಾಹಿಯ



ಕಣ್ಣೆಲ್ಲ ಗ್ರಾಹಕನ ಖರೀದಿಸುವ ಶಕ್ತಿಯ ಮೇಲೆ ಕೇಂದ್ರೀಕೃತವಾಗಿರುತ್ತದೆ. ಬಡವರ ಮತ್ತು ಹಸಿದವರ ಅಗತ್ಯಗಳು, ಬೇಡಿಕೆಗಳಿಗಿಂತ ಹೆಚ್ಚಾಗಿ ಶ್ರೀಮಂತರ ಮತ್ತು ಹೊಟ್ಟೆ ತುಂಬಿದವರ ಅಗತ್ಯಗಳಿಗೇ ಹೆಚ್ಚು ಪ್ರಾಮುಖ್ಯ. ಇದರ ಪರಿಣಾಮವಾಗಿ ಶ್ರೀಮಂತರ ಅಗತ್ಯಗಳನ್ನು ಪೂರೈಸಲು ಅಸಂಖ್ಯಾತ ಪ್ರಮಾಣದಲ್ಲಿ ವೈವಿಧ್ಯಮಯ ಪದಾರ್ಥಗಳನ್ನು ವಸ್ತುಗಳನ್ನು ತಯಾರಿಸಲಾಗುತ್ತದೆ. ಬಡವರ ಮೂಲಭೂತ ಅಗತ್ಯ ವಸ್ತುಗಳಿಗೂ ಅಭಾವವುಂಟಾಗುತ್ತದೆ. ಉತ್ಪಾದನೆಯ ಕೇಂದ್ರೀಕರಣ ಮತ್ತು ಏಕಸ್ವಾಮ್ಯತೆ ಸಂಪೂರ್ಣವಾಗಿ ಗ್ರಾಹಕರ ಪ್ರಭಾವವನ್ನು ಕಡೆಗಣಿಸುತ್ತದೆ. ಗ್ರಾಹಕರು ಮಾದರಿ ದರ್ಜೆಯ ವಸ್ತುಗಳನ್ನೇ ಅನಿವಾರ್ಯವಾಗಿ ಕೊಳ್ಳಬೇಕಾದಂಥ ಪರಿಸ್ಥಿತಿಯನ್ನು ಮಾರುಕಟ್ಟೆಯಲ್ಲಿ ರೂಪಿಸಲಾಗಿರುತ್ತದೆ. ಉತ್ಪನ್ನಗಳ ಗುಣಮಟ್ಟದ ಮಾನಕೀಕರಣ ತೀವಗತಿಯಲ್ಲಿ ಹೆಚ್ಚುತ್ತಿದ್ದು ಗ್ರಾಹಕರ ಸ್ವಂತ ಅಪೇಕ್ಷೆಗಳನ್ನು ಅಲಕ್ಷಿಸಲಾಗುತ್ತಿದೆ. ಗ್ರಂಥಾಲಯದಲ್ಲಿನ ಗ್ರಂಥಗಳಂತೆ ಬಳಕೆದಾರರಿಗೂ ಅಂಕಿಗಳ ಹಣೆಪಟ್ಟಿ ಹಚ್ಚಲಾಗುತ್ತಿದೆ. ಪ್ರಜೆಗಳಿಗೆ ಗರಿಷ್ಠ ಮಹತ್ವ ನೀಡುವುದಾಗಿ ಹೇಳಿಕೊಳ್ಳುವ ವ್ಯವಸ್ಥೆ ಪ್ರಜೆಯ ಅಸ್ಮಿತೆ, ಅನನ್ಯತೆಗಳನ್ನು ನಾಶಗೊಳಿಸಿದೆ. ಖಚಿತವಾಗಿಯೂ ಬಂಡವಾಳಶಾಹಿಯಿಂದ ಅಖಂಡ ಮಾನವನ ಅಭಿವೃದ್ಧಿ ಅಸಾಧ್ಯ. ಇಂಥ ಅಭಿವೃದ್ಧಿಗೆ ಅದರಿಂದ ಸಹಾಯವಾಗದು.

**ಸಮಾಜವಾದಿ ವ್ಯವಸ್ಥೆ ಒಂದು ಪ್ರತಿಕ್ರಿಯೆಯಷ್ಟೆ**

ಸಮಾಜವಾದ ಬಂಡವಾಳಶಾಹಿಗೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡದ್ದು. ಆದರೆ ಸಮಾಜವಾದವೂ ಮಾನವನ ಮಹತ್ವವನ್ನು ಸ್ಥಾಪಿಸುವುದರಲ್ಲಿ ವಿಫಲವಾಗಿದೆ. ಬಂಡವಾಳವನ್ನು ಸರ್ಕಾರದ ಕೈಗೆ ವರ್ಗಾಯಿಸುವುದಷ್ಟರಲ್ಲೇ ಸಮಾಜವಾದಿಗಳು ತೃಪ್ತರಾಗಬೇಕಾಯಿತು. ಆದರೆ ಸರ್ಕಾರ ಒಂದು ನಿರಾಕಾರ ಸಂಸ್ಥೆ. ಕಠಿಣ ಕಾನೂನು ನಿಯಮಾಗಳಿಗಳ ಮೂಲಕವೇ ಸರ್ಕಾರದ ಎಲ್ಲ ವ್ಯವಹಾರಗಳನ್ನೂ ನಡೆಸಲಾಗುತ್ತದೆ. ಸಾಮಾನ್ಯವಾಗಿ ಸರ್ಕಾರದಲ್ಲಿ ವ್ಯಕ್ತಿಗತ ವಿವೇಚನೆಗೆ ಅವಕಾಶವಿಲ್ಲ. ವಿವೇಚನಾಯುತ ಅಧಿಕಾರ ಬಳಕೆ ಅವಕಾಶ ಮಾಡಿಕೊಟ್ಟ ಸಂದರ್ಭಗಳಲ್ಲೂ ಆಡಳಿತಗಾರರು ಸಾಮಾಜಿಕ ಹೊಣೆಗಾರಿಕೆ ನಿರ್ವಹಣೆಯಲ್ಲಿ ಕಿಂಚಿತ್ತು ಅಸಡ್ಡೆ–ಅಲಕ್ಷ್ಯಗಳನ್ನು ತೋರಿದರೆ ಭ್ರಷ್ಟಾಚಾರ ಮತ್ತು ಪಕ್ಷಪಾತಗಳು ಮೆರೆಯುತ್ತವೆ. ಬಂಡವಾಳಶಾಹಿ ಕೇವಲ ಆರ್ಥಿಕ ಮಾನವನ ಬಗ್ಗೆ ಮಾತ್ರ ವಿಚಾರ ಮಾಡಿತು. ಆದರೆ ಉಳಿದ ಕ್ಷೇತ್ರಗಳಲ್ಲಿ ವ್ಯಕ್ತಿತ್ವ ಚಲಾವಣೆಗೆ ಅವಕಾಶ ಮಾಡಿಕೊಟ್ಟಿತು. ಸಮಾಜವಾದಿ ವ್ಯವಸ್ಥೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಮೂರ್ತ ಮಾನವನ ಬಗ್ಗೆ ಮಾತ್ರ ವಿಚಾರ ಮಾಡಿತು. ಇದರ ನಂತರ ವ್ಯಕ್ತಿಯ ಅಸ್ಮಿತೆಯ ಬೆಳವಣಿಗೆಗೆ ಅವಕಾಶವೇ ಇಲ್ಲ. ವಿವಿಧ ಅಭಿರುಚಿ, ವಿವಿಧ ಬಗೆಯ

ಸಾಮರ್ಥ್ಯಗಳನ್ನುಳ್ಳ ವ್ಯಕ್ತಿತ್ವದ ಬೆಳವಣಿಗೆಗೆ ಅವಕಾಶವೇ ಇಲ್ಲದಂತಾಯಿತು. ಸಮಾಜವಾದಿ ವ್ಯವಸ್ಥೆಯಲ್ಲಿ ವ್ಯಕ್ತಿಗಳಿಗೂ ಜೈಲಿನ ಕೈದಿಗಳಿಗೆ ಸಿಗುವಷ್ಟೇ ಮಹತ್ವ, ಮಾನ್ಯತೆ, ಸಮಾಜವಾದಿ ವ್ಯವಸ್ಥೆಯಲ್ಲಿ ವ್ಯಕ್ತಿಗತ ಸ್ವಾತಂತ್ರ್ಯ ಎನ್ನುವುದು ಇಲ್ಲವೇ ಇಲ್ಲ.

ಸಮಾಜವಾದಿ ಸಮಾಜದಲ್ಲಿ ಖಾಸಗಿ ಆಸ್ತಿ ಇಲ್ಲ. ಹೀಗಾಗಿ ಖಾಸಗಿ ಆಸ್ತಿ ಸಂಬಂಧಿತ ವ್ಯವಸ್ಥೆಗಳನ್ನೆಲ್ಲ ತೆಗೆದುಹಾಕಲಾಗುತ್ತದೆ. ಆದರೆ ಉತ್ಪಾದನೆ, ಸಂಪನ್ಮೂಲಗಳ ಸಂರಕ್ಷಣೆ, ಮಿತವ್ಯಯ ಇವುಗಳನ್ನು ಪ್ರೋತ್ಸಾಹಿಸಲು ಖಾಸಗಿ ಆಸ್ತಿ ವ್ಯವಸ್ಥೆಯ ಉಪಯೋಗಕ್ಕೆ ಅವಕಾಶವಿದೆ. ಎಲ್ಲ ವಿಷಯಗಳಲ್ಲೂ ಸರ್ಕಾರದ್ದೇ ಪರಮಾಧಿಕಾರ. ಪ್ರಜೆ ಒಂದು ಬೃಹತ್ ಚಕ್ರದಲ್ಲಿ ಕಂಬ ಇದ್ದಂತೆ ಅಷ್ಟೇ. ತಮ್ಮ ಕರ್ತವ್ಯಗಳನ್ನು ನೆರವೇರಿಸುವಂತೆ ಪ್ರಜೆಗಳಿಗೆ ಪ್ರೇರಣೆ–ಪ್ರೋತ್ಸಾಹಗಳು ಈ ವ್ಯವಸ್ಥೆಯಲ್ಲಿಲ್ಲ. ದಿಲಾಸ್ ಹೇಳುವಂತೆ. "ಹಳೆ ಮಾದರಿಯ ಶೋಷಕ ವರ್ಗ ಹೋಗಿ ಅಧಿಕಾರಿಶಾಹಿ ಶೋಷಕ ಎಂಬ ಹೊಸವರ್ಗವೊಂದು ಹುಟ್ಟಿಕೊಂಡಿದೆ". ಬಂಡವಾಳಶಾಹಿಯಲ್ಲಿ ಸ್ವಯಂನಾಶದ ಬೀಜಗಳಿವೆ. ಕಮ್ಯುನಿಸಂ ಸಹಜವಾದ ಹಾಗೂ ಅನಿವಾರ್ಯವಾದ ಉತ್ತರಾಧಿಕಾರಿ ಎಂದೂ ಕಾರ್ಲ್ ಮಾರ್ಕ್ಸ್ ಚರಿತ್ರೆಯನ್ನು ವಿಶ್ಲೇಷಿಸುತ್ತ ಹೇಳಿದ್ದಾನೆ. ಈ ಪರಿಕಲ್ಪನೆ ಅಂತಿಮ ವಿಜಯಕ್ಕಾಗಿ ಕಮ್ಯುನಿಸ್ಟರಲ್ಲಿ ಧೈರ್ಯ ನಂಬಿಕೆಗಳನ್ನು ತುಂಬಲು ಸಹಾಯಕವಾದೀತಷ್ಟೆ. ಆದರೆ ನಿಶ್ಚಯವಾಗಿಯೂ ಸಂಕಲ್ಪಬಲವನ್ನೂ, ಸುಧಾರಣಾ ಮನೋಭಾವವನ್ನು ನಾಶಗೊಳಿಸುತ್ತದೆ. ಹೊಸ ವ್ಯವಸ್ಥೆಯಲ್ಲಿ ಪ್ರಜೆ ಸೃಷ್ಟಿಕರ್ತನಲ್ಲ ಅವನೇನಿದ್ದರೂ ಪೂರ್ವನಿಶ್ಚಿತ ಐತಿಹಾಸಿಕ ಪ್ರಕ್ರಿಯೆಯಲ್ಲಿ ಅನುಷಂಗಿಕವಷ್ಟೆ, ಅವನ ಕೆಲಸವೇನಿದ್ದರೂ ಪ್ರಕ್ರಿಯೆಯನ್ನು ತ್ವರಗೊಳಿಸುವುದು. ಆದ್ದರಿಂದ ಪ್ರಜೆಯಾದವನು ಕಾರ್ಮಿಕರನ್ನು ಸಂಘಟಿಸಿದರೂ ಅದರ ಕಲ್ಯಾಣ, ಕ್ಷೇಮಸಮಾಚಾರಗಳ ಬಗ್ಗೆ ಕಿಂಚಿತ್ತು ಕಾಳಜಿಯನ್ನೂ ತೋರುವುದಿಲ್ಲ. ಆದರೆ ಅದೇ ಕಾರ್ಮಿಕರನ್ನು ಕ್ರಾಂತಿಯ ಸಾಧನವಾಗಿ ಬಳಸಿಕೊಳ್ಳುತ್ತಾನೆ. ಮಾರ್ಕ್ಸ್‌ನ ದ್ವಂದ್ವಾತ್ಮಕ ವಸ್ತುವಾದವೂ ಬಂಡವಾಳಶಾಹಿಯ ನಾಶದ ನಂತರ ಎಲ್ಲಿಯವರೆಗೆ ಪರಮೋಚ್ಚ ಸರ್ಕಾರ ಸ್ಥಾಪನೆಯಾಗುವುದಿಲ್ಲವೂ ಅಲ್ಲಿಯವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ. ಪರಮೋಚ್ಚ ಸರ್ಕಾರ ಬಂದನಂತರ ದ್ವಂದ್ವಾತ್ಮಕ ವಸ್ತುವಾದಕ್ಕೆ ಇತಿ ಹಾಡಲಾಗುತ್ತದೆ. ಪ್ರತಿ ಕ್ರಾಂತಿಕಾರರನ್ನು ಬಗ್ಗು ಬಡಿಯಲು ಸರ್ಕಾರ ಹೆಚ್ಚುಹೆಚ್ಚಾಗಿ ಸರ್ವಾಧಿಕಾರ ಪ್ರಭುತ್ವದತ್ತ ವಾಲುತ್ತದೆ. ಪ್ರಜೆಗೆ ಗೌರವ ಸ್ಥಾನಮಾನಗಳಿಲ್ಲದ ಸಮಾಜ ಒಂದು ಕನಸಷ್ಟೆ. ಮಾರ್ಕ್ಸ್‌ನ ಈ ಪ್ರತಿ ಪ್ರಮೇಯವೇ ಪ್ರತಿಗಾಮಿಯಾದದ್ದು. ತನ್ನ ಮಾನದಂಡಗಳಿಂದಲೆ ಅಳೆದು ನೋಡಿದಾಗಲೂ ಮಾರ್ಕ್ಸ್ ದೋಷಪೂರಿತ.



**ಬಂಡವಾಳಶಾಹಿ ಮತ್ತು ಸಮಾಜವಾದಕ್ಕೆ ಪರ್ಯಾಯ**

ಬಂಡವಾಳಶಾಹಿ ಮತ್ತು ಕಮ್ಯುನಿಸ್ಟ್ ವ್ಯವಸ್ಥೆಗಳೆರಡೂ ಅಖಂಡ ಮಾನವನನ್ನು ಗಣನೆಗೆ ತೆಗೆದುಕೊಳ್ಳುವುದರಲ್ಲಿ ವಿಫಲವಾಗಿದೆ. ಅಖಂಡ ಮಾನವನ ಸಂಪೂರ್ಣ ವ್ಯಕ್ತಿತ್ವ ಮತ್ತು ಅವನ ಆಸೆ ಆಕಾಂಕ್ಷೆಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಮಾನವನನ್ನು ಹಣಕ್ಕಾಗಿ ಹಂಬಲಿಸುವ ಧನದಾಹಿ ಸ್ವಾರ್ಥಿ ಎಂದೇ ಪರಿಗಣಿಸಲಾಗಿದೆ. ಈ ಪೈಕಿಯಲ್ಲಿ ಇರುವುದು ಒಂದೇ ಕಾನೂನು. ಅದು ತುರುಸಿನ ಪೈಪೋಟಿಯ, ಸ್ಪರ್ಧೆಯ ಕಾನೂನು. ಸಾರಾಂಶದಲ್ಲಿ ಹೇಳುವುದಾದರೆ ಅರಣ್ಯಶಾಸನ. ಇನ್ನೊಂದು ವ್ಯವಸ್ಥೆ ಮಾನವನನ್ನು ಒಟ್ಟು ಪ್ರಪಂಚದಲ್ಲಿ ಮಾನವ ಒಬ್ಬ ದುರ್ಬಲನಾದ, ಜಡ ಚೇತನನಾದ ಒಂದು ತಂತು ಎಂದು ಪರಿಗಣಿಸಿದೆ. ಮಾನವನನ್ನು ಕಠಿಣ ನಿಯಮಗಳಿಂದ ನಿಯಂತ್ರಿಸಬಹುದು ಹಾಗೂ ಮಾರ್ಗದರ್ಶನವಿಲ್ಲದೆ ಅವನಿಂದ ಒಳ್ಳೆಯದನ್ನು ಏನನ್ನೂ ಸಾಧಿಸಲಾಗದು ಎಂದೂ ಈ ವ್ಯವಸ್ಥೆಯ ಅಭಿಪ್ರಾಯ. ಈ ಎರಡೂ ವ್ಯವಸ್ಥೆಗಳಲ್ಲಿ ಆರ್ಥಿಕ ಹಾಗು ರಾಜಕೀಯ ಅಧಿಕಾರ ಕೇಂದ್ರೀಕೃತ. ಹೀಗಾಗಿ ಈ ಎರಡೂ ವ್ಯವಸ್ಥೆಗಳು ಮಾನವನನ್ನು ಅಪಮಾನುಷಗೊಳಿಸುತ್ತವೆ. ಯಾಂತ್ರೀಕೃತವಾಗಿಸುತ್ತವೆ.

ದೈವ ಸೃಷ್ಟಿಯಲ್ಲಿ ಪರಮೋಚ್ಚನಾದ ಮಾನವ ತನ್ನ ಅನನ್ಯತೆಯನ್ನು ತನ್ನ ಗುರುತನ್ನು ಕಳೆದುಕೊಳ್ಳುತ್ತಿದ್ದಾನೆ. ನಾವೀಗ ಮಾನವನನ್ನು ಅವನ ನ್ಯಾಯಯುತ ಸ್ಥಾನದಲ್ಲಿ ಪುನರ್ ಪ್ರತಿಷ್ಠಾಪಿಸಬೇಕಾಗಿದೆ. ಅವನಿಗೆ ತನ್ನ ಮಹತ್ವವನ್ನು ಮನಗಾಣಿಸಬೇಕಾಗಿದೆ. ಅವನಲ್ಲಿನ ಸಾಮರ್ಥ್ಯಗಳನ್ನು ಪುನಶ್ಚೇತನಗೊಳಿಸಿ ಅವನಿಗೆ ಉತ್ತೇಜನ ನೀಡಬೇಕಾಗಿದೆ. ತನ್ನ ಸುಪ್ತ ವ್ಯಕ್ತಿತ್ವವನ್ನು ದಿವ್ಯಶೃಂಗದಲ್ಲಿ ಪ್ರಕಾಶಮಾನಗೊಳಿಸಲು ಪ್ರಯತ್ನಿಸುವಂತೆ ಪ್ರೇರೇಪಿಸಬೇಕಾಗಿದೆ. ಇದು ವಿಕೇಂದ್ರೀಕೃತ ಅರ್ಥ ವ್ಯವಸ್ಥೆಯಿಂದ ಮಾತ್ರ ಸಾಧ್ಯ.

ನಮಗೆ ಬಂಡವಾಳಶಾಹಿಯೂ ಬೇಡ. ಸಮಾಜವಾದವೂ ಬೇಡ. ನಮ್ಮ ಗುರಿ ಮನುಷ್ಯನ ಪ್ರಗತಿ, ಸುಖಸಂತೋಷ. ಅಖಂಡ ಮಾನವನ ಪ್ರಗತಿ. ಎರಡೂ ವ್ಯವಸ್ಥೆಗಳ ನಾಯಕರುಗಳು ಮನುಷ್ಯನನ್ನು ಪಣಕ್ಕಿಟ್ಟು, ಮನುಷ್ಯನೊಂದಿಗೆ ಹೋರಾಟ ನಡೆಸಿದ್ದಾರೆ. ಇವರಿಬ್ಬರಿಗೂ ಮಾನವನನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಾಗಿಲ್ಲ ಅಥವಾ ಅವರಿಗೆ ಮಾನವನ ಹಿತಾಸಕ್ತಿಗಳ ಬಗ್ಗೆ ಕಾಳಜಿಯೂ ಇಲ್ಲ.

**ನಮ್ಮ ಅರ್ಥ ವ್ಯವಸ್ಥೆ**

ನಮ್ಮ ಅರ್ಥ ವ್ಯವಸ್ಥೆಯ ಧ್ಯೇಯ–ಉದ್ದೇಶಗಳು ಹೀಗಿರಬೇಕು.

೧. ಪ್ರತಿಯೊಬ್ಬರಿಗೂ ಕನಿಷ್ಠ ಜೀವನ ಮಟ್ಟದ ಭರವಸೆ ನೀಡುವುದು ಹಾಗೂ

ರಾಷ್ಟ್ರರಕ್ಷಣೆಗಾಗಿ ಸಜ್ಜಾಗಿರುವುದು.

೨. ಕನಿಷ್ಠ ಜೀವನ ಮಟ್ಟವನ್ನು ಸುಧಾರಿಸುವುದು ಈ ಮೂಲಕ ರಾಷ್ಟ್ರಕ್ಕೆ ಮತ್ತು ವ್ಯಕ್ತಿಗೆ ಪ್ರಪಂಚದ ಪ್ರಗತಿಗೆ ಕೊಡುಗೆ ನೀಡುವ ಶಕ್ತಿ ತಂದುಕೊಡುವುದು.

೩. ದೇಹಧಾರ್ಢ್ಯತೆಯುಳ್ಳ ಸಮರ್ಥರೆಲ್ಲರಿಗೂ ಅರ್ಥಪೂರ್ಣವಾದ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು. ಉದ್ಯೋಗಾವಕಾಶ ಕಲ್ಪಿಸುವ ಮೂಲಕ ಮೇಲಿನ ಎರಡು ಉದ್ದೇಶಗಳನ್ನು ಸಾಧಿಸಬಹುದು ಹಾಗೂ ನೈಸರ್ಗಿಕ ಸಂಪತ್ತಿನ ದುರ್ಬಳಕೆಯನ್ನು, ದುಂದುಗಾರಿಕೆಯನ್ನು, ಪೋಲುಗಾರಿಕೆಯನ್ನು ತಪ್ಪಿಸುವುದು.

೪. ಭಾರತೀಯ ಪರಿಸ್ಥಿತಿಗನುಗುಣವಾದ ಯಂತ್ರಗಳನ್ನು ಅಭಿವೃದ್ಧಿಪಡಿಸುವುದು. ಭಾರತೀಯ ತಂತ್ರಜ್ಞಾನವನ್ನು ರೂಪಿಸುವುದು. ಏಳು 'ಎಂ'ಗಳೂ ಸೇರಿದಂತೆ ಉತ್ಪಾದನೆಯ ವಿವಿಧ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ತಂತ್ರಜ್ಞಾನ ರೂಪಿಸುವುದು.

೫. ಈ ವ್ಯವಸ್ಥೆ ವ್ಯಕ್ತಿಯನ್ನು ಕಡೆಗಾಣಿಸದೆ ಅವನಿಗೆ ಸಹಾಯ ಮಾಡಬೇಕು. ಇದು ಬದುಕಿನ ಸಾಂಸ್ಕೃತಿಕ ವ್ಯಕ್ತಿತರ ಮೌಲ್ಯಗಳನ್ನು ಕಾಪಾಡಬೇಕು. ವಿನಾಶದಂಥ ಆಪತ್ತು ಹೊರತಾಗಿ ಬೇರಾವ ಸಂದರ್ಭದಲ್ಲೂ ಈ ಅಗತ್ಯವನ್ನು ಉಲ್ಲಂಘಿಸಬಾರದು. ಇದಕ್ಕೆ ಬದ್ಧವಾಗಿರಬೇಕು.

**ಸ್ವದೇಶಿ ಮತ್ತು ವಿಕೇಂದ್ರೀಕರಣ**

ನಮ್ಮ ಅರ್ಥ ವ್ಯವಸ್ಥೆಯನ್ನು ರೂಪಿಸುವಾಗ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸ್ವದೇಶಿ ಮತ್ತು ವಿಕೇಂದ್ರೀಕರಣ ಇವು ಈಗಿನ ಸಂದರ್ಭಕ್ಕೆ ಸೂಕ್ತವಾದ ಆರ್ಥಿಕ ನೀತಿಯನ್ನು ವಿಶದಪಡಿಸುವ ಪದಪ್ರಯೋಗಗಳು. ಇಷ್ಟೂ ವರ್ಷಗಳು ಕೇಂದ್ರೀಕರಣ ಮತ್ತು ಏಕಸ್ವಾಮ್ಯಗಳದೇ ದರ್ಬಾರಾಗಿತ್ತು. ಗೊತ್ತಿದ್ದೋ ಗೊತ್ತಿಲ್ಲದೆಯೋ ಇದು ನಡೆದಿತ್ತು. ಯೋಜಕರು, ಬೃಹತ್ ಪ್ರಮಾಣದ, ಕೇಂದ್ರೀಕೃತ ಉದ್ಯಮವೇ ಅರ್ಥ ವ್ಯವಸ್ಥೆ ಎನ್ನುವ ಚಿಂತನೆಯ ಬಂದಿಗಳಾಗಿದ್ದರು. ಹೀಗೆ ಇಂಥ ವ್ಯವಸ್ಥೆಯ ದುಷ್ಪರಿಣಾಮಗಳ ಬಗ್ಗೆ ಚಿಂತೆ ಮಾಡಲಿಲ್ಲ. ಅಥವಾ ದುಷ್ಪರಿಣಾಮಗಳು ತಿಳಿದೂ ಅಸಹಾಯಕತೆಯಿಂದಾಗಿ ಅದೇ ದಿಕ್ಕಿನಲ್ಲಿ ಮುಂದುವರಿದಿದ್ದರು. ಸ್ವದೇಶಿಯದೂ ಇದೇ ಹಣೆಬರಹ. ಸ್ವದೇಶಿಯನ್ನು ಪುರಾತನ ಪ್ರತಿಗಾಮಿ ಎಂದು ಅಪಹಾಸ್ಯ ಮಾಡಲಾಯಿತು. ನಾವು ಬಹಳ ಹೆಮ್ಮೆಯಿಂದ ವಿದೇಶಿ ವಸ್ತುಗಳನ್ನು ಬಳಸುತ್ತೇವೆ. ಚಿಂತನೆ, ಆಡಳಿತ, ಬಂಡವಾಳ, ಉತ್ಪಾದನೆಯ ವಿಧಾನಗಳು, ತಂತ್ರಜ್ಞಾನ ಇತ್ಯಾದಿಯಾಗಿ ಎಲ್ಲದರಲ್ಲೂ ನಾವು ವಿದೇಶವನ್ನು ಅತಿಯಾಗಿ ಅವಲಂಬಿಸಿದ್ದೇವೆ. ಮಟ್ಟ, ಮಾನದಂಡ, ಬಳಕೆಯ ರೀತಿ ನೀತಿ ಇವುಗಳಲ್ಲೂ ವಿದೇಶವನ್ನೇ ಅವಲಂಬಿಸಿದ್ದೇವೆ. ಇದು ಪ್ರಗತಿಯ ಪಥವಲ್ಲ. ಅಭಿವೃದ್ಧಿ



ಮಾರ್ಗವಲ್ಲ. ನಾವು ನಮ್ಮ ಅಸ್ಮಿತೆಯನ್ನು ಮರೆತು ಮತ್ತೊಮ್ಮೆ ಅಕ್ಷರಶಃ ಗುಲಾಮರಾಗಲಿದ್ದೇವೆ. ಸ್ವದೇಶಿಯಲ್ಲಿ ಸಕಾರಾತ್ಮಕ ಗುಣಸತ್ತ್ವಗಳನ್ನು ನಮ್ಮ ಅರ್ಥ ವ್ಯವಸ್ಥೆಯ ಪುನರ್ ನಿರ್ಮಾಣಕ್ಕೆ ಬುನಾದಿಯಾಗಿ ಬಳಸಬೇಕು.

**ಯಥಾಸ್ಥಿತಿ ಮನೋಭಾವ ಕಿತ್ತೊಗೆಯಿರಿ**

ಸಮಯ ಇಲ್ಲದ ಕಾರಣದಿಂದಾಗಿ ನಾನು ಅರ್ಥವ್ಯವಸ್ಥೆಯ ಕೆಲವೊಂದು ಪ್ರಾಕೃತಿಕವಾದ, ಸ್ವಾಭಾವಿಕವಾದ ವಿಷಯಗಳ ಬಗ್ಗೆ, ಅಭಿಪ್ರಾಯಗಳ ಬಗ್ಗೆ ಮಾತನಾಡಲು ಸಾಧ್ಯವಾಗಿಲ್ಲ. ಆದರೆ ಒಂದು ಅಂಶವಂತೂ ಸತ್ಯ. ಅದೆಂದರೆ ಅನೇಕ ಹಳೆಯ ಸಂಸ್ಥೆಗಳು ಹೊಸದಕ್ಕೆ ಜಾಗ ತೆರವು ಮಾಡಿಕೊಡುತ್ತವೆ. ಹಳೆಯ ಸಂಸ್ಥೆಗಳಲ್ಲಿ ಪಟ್ಟಭದ್ರ ಹಿತಾಸಕ್ತಿಯುಳ್ಳವರಿಗೆ ಇದರಿಂದ ತೊಂದರೆಯಾಗುವುದು. ಸ್ವಭಾವತಃ ಬದಲಾವಣೆಯನ್ನು ಒಲ್ಲದವರಿಗೆ ಅರ್ಥ ವ್ಯವಸ್ಥೆಯ ಪುನರ್ ನಿರ್ಮಾಣ ಪ್ರಯತ್ನಗಳಿಂದ ತೊಂದರೆಯಾಗಲಿದೆ. ಇಂಥವರು ಕಷ್ಟಗಳನ್ನು ಅನುಭವಿಸಬೇಕಾದೀತು. ಆದರೆ ರೋಗಕ್ಕೆ ಔಷಧಿ ಚಿಕಿತ್ಸೆ ಆಗಲೇಬೇಕು. ಶ್ರಮದ ದುಡಿಮೆ ಮತ್ತು ವ್ಯಾಯಮಗಳಿಂದ ಬಲವೃದ್ಧಿ ಸಾಧ್ಯ. ಆದ್ದರಿಂದ ನಾವು ಯಥಾಸ್ಥಿತಿ ಮನೋಭಾವ ತೊರೆದು ಹೊಸ ಯುಗದಲ್ಲಿ ಹೆಜ್ಜೆ ಇಡಬೇಕು. ನಮ್ಮ ಪುನರ್ ನಿರ್ಮಾಣ ಪ್ರಯತ್ನಗಳಿಗೆ ಪೂರ್ವಾಗ್ರಹದ ಮೋಡಗಳು ಕವಿಯಬಾರದು. ಗತಕಾಲದಿಂದ ನಾವು ಪಾರಂಪರ್ಯವಾಗಿ ಪಡೆದುದರ ಬಗ್ಗೆ ಅಸಡ್ಡೆ ಮಾಡಬಾರದು. ಪ್ರಯೋಜನ–ಉಪಯುಕ್ತತೆಗಳು ತೀರಿಹೋಗಿರುವಂಥ ಹಳೆಯ ಸಂಸ್ಥೆಗಳು, ಪದ್ಧತಿಗಳು ಸಂಪ್ರದಾಯಗಳು ಇವುಗಳಲ್ಲಿ ಜೋತುಬೀಳುವ ಅಗತ್ಯವಿಲ್ಲ. ಬದಲಾವಣೆಯ ದಿಕ್ಕುದಿಸೆ ಯಾವುದಿರಬೇಕೆಂಬುದನ್ನು ನಾವು ಇಲ್ಲಿಯವರೆಗೆ ಪರಿಶೀಲಿಸಿದ್ದೇವೆ.

ಕಳೆದ ನಾಲ್ಕು ದಿನಗಳಲ್ಲಿ ನಾವು ಮಾನವತಾವಾದದ, ಮಾನವ ಧರ್ಮದ ಅಖಂಡತೆಯ, ಸಮಗ್ರತೆಯ ಸ್ವರೂಪ ಕುರಿತು ಚಿಂತನ–ಮಂಥನ ನಡೆಸಿದ್ದೇವೆ. ಇದರ ಆಧಾರದ ಮೇಲೆ ರಾಷ್ಟ್ರೀಯತೆ, ಪ್ರಜಾಪ್ರಭುತ್ವ, ಸಮಾಜವಾದಗಳಲ್ಲಿ ಮರುಹೊಂದಾಣಿಕೆ, ಪುನರ್ ಸಾಮರಸ್ಯ ಸಾಧಿಸುವುದು ನಮಗೆ ಸಾಧ್ಯವಾಗಬೇಕು. ಹಾಗೆಯೇ ಭಾರತೀಯ ಸಾಂಸ್ಕೃತಿಕ ಮೌಲ್ಯಗಳಿಗನುಸಾರವಾಗಿ ವಿಶ್ವಶಾಂತಿ ಸಾಧಿಸುವುದು ಸಾಧ್ಯವಾಗಬೇಕು. ಹಾಗೂ ಈ ಅಖಂಡತೆಯಲ್ಲಿನ ಆದರ್ಶಗಳ ಬಗ್ಗೆ ಜಿಜ್ಞಾಸೆ ನಡೆಯಬೇಕು. ಈ ಆದರ್ಶಗಳ ಮಧ್ಯೆ ಇರುವ ತಕರಾರುಗಳನ್ನು ಘರ್ಷಣೆಗಳನ್ನು ನಿವಾರಿಸಿ ಪರಸ್ಪರ ಪೂರಕವಾಗುವಂತೆ ಮಾಡಬೇಕು. ಇದೆಲ್ಲದರ ಮೂಲಕ 'ಮಾನವ' ಕಳೆದುಕೊಂಡಿರುವ ಸ್ಥಾನಮಾನ ಗೌರವಗಳನ್ನು ಮರಳಿ ಪಡೆಯಬಹುದು ಹಾಗೂ ಜೀವನದಲ್ಲಿ ಗುರಿ ಸಾಧಿಸಬಹುದು.

ನಾವಿಲ್ಲಿ ತತ್ತ್ವಸಿದ್ಧಾಂತಗಳನ್ನು ಚರ್ಚಿಸಿದ್ದೇವೆ. ಆದರೆ ಭಾರತೀಯ ಜನಸಂಘದ ಸದಸ್ಯರು ತತ್ವ ಶಾಸ್ತ್ರಜ್ಞರಲ್ಲ ಅಥವಾ ವಿದ್ವಾಂಸರಲ್ಲ. ರಾಷ್ಟ್ರವನ್ನು ಸಶಕ್ತಗೊಳಿಸುವ ಸಂಕಲ್ಪದಿಂದ ನಾವು ಮುಂದೆ ಅಡಿ ಇಟ್ಟಿದ್ದೇವೆ. ಭಾರತೀಯ ಜನಸಂಘದ ಮೂಲಕ ಸಶಕ್ತ, ಸಮೃದ್ಧ, ಸುಖೀ ಭಾರತದ ನಿರ್ಮಾಣ ನಮ್ಮ ಸಂಕಲ್ಪ ಆದ್ದರಿಂದ ನಾವು ಈ ಅಸ್ತಿಭಾರದ ಮೇಲೆ ರಾಷ್ಟ್ರ ಪುನರ್ ನಿರ್ಮಾಣಕ್ಕಾಗಿ ಕಾರ್ಯಸಾಧ್ಯವಾದ, ವ್ಯಾವಹಾರಿಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ನಮ್ಮ ಪ್ರಾಚೀನ ಸಂಸ್ಕೃತಿಯನ್ನು ನಾವು ಮನನ ಮಾಡಿದ್ದೇವೆ. ಆದರೆ ನಾವು ಪ್ರಾಕ್ತನ ಶಾಸ್ತ್ರಜ್ಞರಲ್ಲ. ಬೃಹತ್ತಾದ ಪ್ರಾಚ್ಯವಸ್ತು ಸಂಗ್ರಹಾಲಯದ ಸುಫರ್ದುದಾರರಾಗುವುದು ನಮ್ಮ ಉದ್ದೇಶವಲ್ಲ. ನಮ್ಮ ಗುರಿ ಕೇವಲ ಸಂಸ್ಕೃತಿ ರಕ್ಷಣೆಯಲ್ಲ. ಕಾಲಕ್ಕನುಗುಣವಾಗಿ ಚುರುಕುಗೊಳಿಸಿ ನಮ್ಮ ಸಂಸ್ಕೃತಿಯನ್ನು ಪುನರುಜ್ಜೀವಗೊಳಿಸುವುದು, ನಮ್ಮ ಸಂಸ್ಕೃತಿಯಲ್ಲಿ ನವಚೈತನ್ಯವುಂಟು ಮಾಡುವುದು ನಮ್ಮ ಗುರಿ. ಈ ಅಸ್ತಿಭಾರದ ಮೇಲೆ ರಾಷ್ಟ್ರ ಭದ್ರವಾಗಿ ನಿಲ್ಲುವಂತೆ ನಾವು ಖಾತ್ರಿ ಪಡಿಸಬೇಕಾಗಿದೆ. ನಮ್ಮ ಸಮಾಜ ಆರೋಗ್ಯ ಪೂರ್ಣವಾದ, ಪ್ರಗತಿಪರವಾದ, ಅರ್ಥಪೂರ್ಣ ಬದುಕನ್ನು ನಡೆಸುವಂತೆ ನಾವು ಖಾತ್ರಿ ಪಡಿಸಬೇಕಾಗಿದೆ. ಸುಧಾರಣೆಗಳನ್ನು ತರುವಾಗ ನಾವು ಅನೇಕ ಸಂಪ್ರದಾಯಗಳಿಗೆ ಮಂಗಳ ಹಾಡಬೇಕಾಗುತ್ತದೆ. ಈ ಒಂದು ಪ್ರಕ್ರಿಯೆಯಲ್ಲಿ ಅಡಚಣೆವುಂಟು ಮಾಡುವ ಸಂಪ್ರದಾಯಗಳನ್ನು ನಾವು ಕಿತ್ತೊಗೆಯಬೇಕಾಗುತ್ತದೆ. ಮಾನವ ದೇಹದ ಇತಿಮಿತಿಗಳ ಬಗ್ಗೆ ಯಾರೂ ದುಃಖಪಡಬೇಕಾಗಿಲ್ಲ. ಕ್ಯಾನ್ಸರ್ ನಿವಾರಣೆಗಾಗಿ ಶಸ್ತ್ರಚಿಕಿತ್ಸೆ ಅನಿವಾರ್ಯವಾದರೆ ಶಸ್ತ್ರಚಿಕಿತ್ಸೆಗೊಳಪಡಬೇಕಾಗುತ್ತದೆ. ಆದರೆ ಆರೋಗ್ಯ–ಪೂರ್ಣವಾದ ಅಂಗಗಳನ್ನು ಕತ್ತರಿಸಿಹಾಕುವ ಅಗತ್ಯವಿಲ್ಲ. ಇವತ್ತಿನ ದಿನ ಮನುಷ್ಯ ತನ್ನಂತೆಯೇ ಮನುಷ್ಯರಾದ ಉಳಿದವರನ್ನು ತನಗಿಂತ ಕೀಳು ಎನ್ನುವ ಭಾವನೆಗೆಡೆ ಮಾಡಿಕೊಡುವ ಅಸ್ಪೃಶ್ಯತೆಯಂಥ ದುಷ್ಟಪದ್ಧತಿಗಳಿಂದ ನಮ್ಮ ಸಮಾಜ ತತ್ತರಿಸುತ್ತಿದೆ. ಇದರಿಂದಾಗಿ ರಾಷ್ಟ್ರದ ಏಕತೆಗೆ ಬೆದರಿಕೆಯುಂಟಾಗಿದೆ. ಇಂಥ ಅನಿಷ್ಟಗಳಿಗೆ, ದುಷ್ಟ ಪದ್ಧತಿಗಳಿಗೆ ನಾವು ಮಂಗಳ ಹಾಡಲೇಬೇಕು.

ನಮ್ಮೊಳಗೆ ಕ್ರಿಯಾಶೀಲತೆಯ ಚೈತನ್ಯ ತುಂಬುವಂಥ, ನಮ್ಮ ಸ್ವಾರ್ಥ ಪರತೆಯ ಜಾಗದಲ್ಲಿ ರಾಷ್ಟ್ರಸೇವೆಯ ಆಕಾಂಕ್ಷೆಯನ್ನು ತುಂಬುವಂಥ, ನಮ್ಮ ಸಹೋದರರಲ್ಲಿ ಸಹಾನುಭೂತಿಯನ್ನುಂಟುಮಾಡುವಂಥ, ಪ್ರೀತಿ ಸೌಹಾರ್ದತೆಗಳನ್ನೂ ಏಕತೆಯನ್ನೂ ಮೂಡಿಸುವಂಥ ಸಂಸ್ಥೆಗಳನ್ನು ನಾವು ಕಟ್ಟಬೇಕು. ಇಂಥ ಪದ್ಧತಿಗಳನ್ನು ನಾವು ರೂಢಿಸಬೇಕು. ಇಂಥ ಸಂಸ್ಥೆಗಳು ಮಾತ್ರ ನಮ್ಮ ಆತ್ಮವನ್ನು ಬಿಂಬಿಸುತ್ತವೆ.

ಆತ್ಮಧರ್ಮ, ಆತ್ಮಜ್ಞಾನವೇ ನಮ್ಮ ರಾಷ್ಟ್ರದ ಆತ್ಮ. ರಾಷ್ಟ್ರವನ್ನು



ಶಕ್ತಿಶಾಲಿಯನ್ನಾಗಿಸುವ, ಚೈತನ್ಯಶಾಲಿಯನ್ನಾಗಿಸುವ ಹಾಗೂ ಕ್ರಿಯಾಶೀಲವನ್ನಾಗಿಸುವ ಶಕ್ತಿಯನ್ನು ನಾವು ವಿರಾಟ್ ಎಂದು ಕರೆಯುತ್ತೇವೆ. ಆತ್ಮಜ್ಞಾನ ವಿರಾಟ್ ಅನ್ನು ಜಾಗೃತಗೊಳಿಸುತ್ತದೆ. ದೇಹಕ್ಕೆ ಪ್ರಾಣ ಹೇಗೋ ಹಾಗೆ ರಾಷ್ಟ್ರಜೀವನದಲ್ಲಿ ವಿರಾಟ್. ಪ್ರಾಣ ದೇಹದ ವಿವಿಧ ಅಂಗಗಳಿಗೆ ಶಕ್ತಿಯನ್ನು ತುಂಬುವಂತೆ, ಬುದ್ಧಿಯನ್ನು ಚುರುಕುಗೊಳಿಸುವಂತೆ, ದೇಹಾತ್ಮಗಳನ್ನು ಒಂದುಗೂಡಿಸುವಂತೆ, ವಿರಾಟ್ ರಾಷ್ಟ್ರವನ್ನು ಶಕ್ತಿಶಾಲಿಯನ್ನಾಗಿಸುತ್ತದೆ. ಕ್ರಿಯಾಶಾಲಿಯನ್ನಾಗಿಸುತ್ತದೆ. ನಮ್ಮ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ, ಸರ್ಕಾರ ಪರಿಣಾಮಕಾರಿಯಾಗಬೇಕಾದರೆ ಅದು ಪ್ರಬಲವಾದ ವಿರಾಟ್‌ನಿಂದ ಮಾತ್ರ ಸಾಧ್ಯ. ಆಗ ನಮ್ಮ ರಾಷ್ಟ್ರದಲ್ಲಿನ ವೈವಿಧ್ಯತೆ ರಾಷ್ಟ್ರದ ಏಕತೆಗೆ, ಐಕಮತ್ಯಕ್ಕೆ ಭಂಗ ತರುವುದಿಲ್ಲ. ಭಾಷೆ, ಉದ್ಯೋಗ ಇತ್ಯಾದಿಗಳಲ್ಲಿ ವ್ಯತ್ಯಾಸಗಳು, ವಿಭಿನ್ನತೆಗಳು, ಭಿನ್ನಾಭಿಪ್ರಾಯಗಳು ಎಲ್ಲ ಕಡೆಯೂ ಇವೆ. ಆದರೆ ವಿರಾಟ್ ಜಾಗೃತವಾಗಿದ್ದಾಗ ವೈವಿಧ್ಯತೆ–ಭಿನ್ನತೆಗಳು ಘರ್ಷಣೆಗೆಡೆ ಮಾಡಿಕೊಡುವುದಿಲ್ಲ. ದೇಹದ ಅಂಗಾಂಗಗಳಂತೆ ಅಥವಾ ಕುಟುಂಬದ ಸದಸ್ಯರಂತೆ ಜನ ಪರಸ್ಪರ ಸಹಕಾರದಿಂದ ಬಾಳ್ವೆಮಾಡುತ್ತಾರೆ.

ನಮ್ಮ ರಾಷ್ಟ್ರದ ವಿರಾಟ್‌ಅನ್ನು ಜಾಗೃತಗೊಳಿಸುವ ಕಾರ್ಯವನ್ನು ನಾವೀಗ ಕೈಗೊಳ್ಳಬೇಕಾಗಿದೆ. ನಮ್ಮ ಭವ್ಯಪರಂಪರೆ, ಭವ್ಯ ಇತಿಹಾಸಗಳ ಬಗ್ಗೆ ಹೆಮ್ಮೆ ಪಡುತ್ತ, ವರ್ತಮಾನದ ವಾಸ್ತವಿಕ ಪರಿಸ್ಥಿತಿಯನ್ನು ಮನಗಾಣುತ್ತ, ಭವಿಷ್ಯದ ಮಹತ್ವಾಕಾಂಕ್ಷೆಯಿಂದ ರಾಷ್ಟ್ರದ ವಿರಾಟನ್ನು ಜಾಗೃತಗೊಳ್ಳಿಸುವ ಕಾಯಕವನ್ನು ಆರಂಭಿಸೋಣ. ಈ ರಾಷ್ಟ್ರವನ್ನು ಗತಕಾಲದ ಛಾಯೆಯನ್ನಾಗಿಸುವುದು ಬೇಡ; ಹಾಗೆಯೇ ನಮ್ಮ ರಾಷ್ಟ್ರ ರಷ್ಯ ಅಮೆರಿಕಗಳ ಅನುಕರಣೆ ಮಾಡುವುದೂ ಬೇಡ ಎಂದು ನಾವು ಆಶಿಸೋಣ.

ನಮ್ಮ ಭವ್ಯಪರಂಪರೆ ಮತ್ತು ಸಾರ್ವತ್ರಿಕ ಜ್ಞಾನಗಳ ಬೆಂಬಲದಿಂದ ಗತಕಾಲದ ಭವ್ಯತೆಯನ್ನು ಪ್ರಕಾಶಿಸುವಂಥ ಭಾರತವನ್ನು ಕಟ್ಟೋಣ. ಪ್ರತಿಯೊಬ್ಬ ಪ್ರಜೆಗೂ ತನ್ನ ಶಕ್ತಿ ಸಾಮರ್ಥ್ಯಗಳಿಂದ ಅಭಿವೃದ್ಧಿ ಸಾಧಿಸಲು ಅವಕಾಶಗಳನ್ನೊದಗಿಸುವಂಥ, ಏಕತೆಯ ಪ್ರಜ್ಞೆಯನ್ನು ಮೂಡಿಸುವಂಥ, ಸಮಗ್ರ ಮಾನವನನ್ನು ಮೀರಿದ ಅತಿಶಯ ಸ್ಥಾನಮಾನ ಸಾಧಿಸುವಂಥ ಭಾರತವನ್ನು ಕಟ್ಟೋಣ. ಅತಿಶಯ ಸ್ಥಾನಮಾನ ಎಂದರೆ ನರನು ನಾರಾಯಣನಾಗುವುದು. ಇದು ನಮ್ಮ ಸಂಸ್ಕೃತಿಯ ದಿವ್ಯ ಸ್ವರೂಪ. ಇದು ಚಿರಂತನವಾದ ನಮ್ಮ ದಿವ್ಯ ಸಂಸ್ಕೃತಿಯ ರೂಪ. ಕೂಡು ಹಾದಿಯಲ್ಲಿರುವ ಮನುಕುಲಕ್ಕೆ ಇದೇ ನಮ್ಮ ಸಂದೇಶ. ಈ ಕಾರ್ಯದಲ್ಲಿ ಯಶಸ್ವಿಯಾಗುವ ಶಕ್ತಿಯನ್ನು ದೇವರು ನಮಗೆ ಕರುಣಿಸಲಿ.

ಭಾರತ್ ಮಾತಾ ಕೀ ಜೈ

೨೫ ಏಪ್ರಿಲ್ ೧೯೬೫

**BLANK PAGE**



## ಭಾಗ – ೨

# ಏಕಾತ್ಮ ಮಾನವದರ್ಶನ : ಚಿಂತನೆಗಳು :

ಎಂ.ಎಸ್. ಗೋಳ್ವಾಳ್ಕರ್, 'ಗುರೂಜಿ'
ಡಿ.ಬಿ. ಠೇಂಗಡಿ
ಚಂದ್ರ ಪಿ. ಅಗರ್ವಾಲ್
ಮಹೇಶ ಮೆಹ್ತಾ
ಅಮಿತ್ ಕುಮಾರ್ ಮಿತ್ರ

**BLANK PAGE**

# ಏಕಾತ್ಮ ಮಾನವದರ್ಶನ

## ೫. ಭಾರತೀಯ ಪರಿಕಲ್ಪನೆ

**ಎಂ.ಎಸ್. ಗೋಳ್ವಾಳ್ಕರ್ 'ಗುರೂಜಿ' ***

ಈ ಪರ್ವ ಕಾಲದಲ್ಲಿ ಮತ್ತೊಮ್ಮೆ ಭಾರತೀಯ ಜೀವನ ಮೌಲ್ಯಗಳನ್ನು ಬಿಂಬಿಸುವ, ಪರ್ಯಾಲೋಚಿಸುವ ಅಗತ್ಯ ಈಗ ಕಂಡುಬಂದಿದೆ. ಇಂಥದೊಂದು ಚಿಂತನೆ ಈಗ ಅತ್ಯಗತ್ಯವಾಗಿದೆ. ಇದಕ್ಕೆ ಕಾರಣಗಳೂ ಸ್ಪಷ್ಟ. ಎಲ್ಲಿಯವರೆಗೆ ನಾವು ದಾಸ್ಯರಾಷ್ಟ್ರವಾಗಿದ್ದೆವೋ ಅಲ್ಲಿಯವರೆಗೆ ಭಾರತೀಯ ಮನಸ್ಸುಗಳಲ್ಲಿ ನಮ್ಮ ದೇಶ, ನಮ್ಮ ರಾಷ್ಟ್ರ, ನಮ್ಮ ಅಸ್ಮಿತೆ ಇವೇ ಪ್ರಧಾನ ಕಾಳಜಿಯಾಗಿದ್ದವು. ನಮ್ಮ ರಾಷ್ಟ್ರ ಸ್ವಾತಂತ್ರ್ಯ ಗಳಿಸಲು ಮತ್ತು ಅದರ ಪುನರ್ ನಿರ್ಮಾಣಕ್ಕಾಗಿ ಗುಣಾಢ್ಯ ವ್ಯಕ್ತಿಗಳ ಸೇವೆಯ ಅಗತ್ಯವಿದೆ ಎಂಬುದು ಸಾಮಾನ್ಯ ನಂಬಿಕೆಯಾಗಿತ್ತು. ಕಳಂಕರಹಿತ, ಸ್ವಾರ್ಥರಹಿತ, ನಿಷ್ಠಾವಂತ ತ್ಯಾಗಮಯಿ ವ್ಯಕ್ತಿಗಳ ಅಗತ್ಯವಿದೆ ಎಂದು ಜನ ಭಾವಿಸಿದ್ದರು. ಆ ದಿನಗಳಲ್ಲಿ ರಾಜಕೀಯ ಪಕ್ಷಗಳ ಕಾರ್ಯಕರ್ತರು ಸರಳಜೀವನ ನಡೆಸುತ್ತಿದ್ದರು. ತ್ಯಾಗಬುದ್ಧಿಯುಳ್ಳವರಾಗಿದ್ದರು. ಈ ಸಂಪ್ರದಾಯದಿಂದ ನಾವು ವಿಮುಖರಾಗುತ್ತೇವೆ ಎಂದು ಯಾರೂ ಕನಸಿನಲ್ಲೂ ಭಾವಿಸಿರಲಿಲ್ಲ. ರಾಷ್ಟ್ರದ ನಾಯಕತ್ವ ಸುಶೀಲರೂ ಸಜ್ಜನರೂ ನಿಸ್ವಾರ್ಥಿಗಳೂ ಆದಂಥ ಉತ್ಕೃಷ್ಟ ವ್ಯಕ್ತಿಗಳ ಕೈಯ್ಯಲಿದೆ. ತನ್ನ ಪವಿತ್ರವೂ ಭವ್ಯವೂ ಆದ ಸಂಪ್ರದಾಯವನ್ನು ಪ್ರಕಾಶಿಸುವ ಮೂಲಕ ರಾಷ್ಟ್ರ ಅಭ್ಯುದಯದ ಶೃಂಗವನ್ನು ಮುಟ್ಟಲಿದೆ ಎಂದು ನಂಬಲಾಗಿತ್ತು. ಆದರೆ ಲಂಗುಲಗಾಮಿಲ್ಲದ ಅಧಿಕಾರ ಚುರುಕಾದಾಗ ಅದರೊಟ್ಟಿಗೆ ಹಲವಾರು ದುರಾಚಾರ, ದುರ್ಗುಣಗಳೂ ಬರುತ್ತವೆ. ಎಲ್ಲ ಅಮಲುಗಳಲ್ಲಿ ಅಧಿಕಾರದ ಅಮಲೇ ತುಂಬ ಹಾನಿಕಾರಕ ಎಂದು ಹೇಳಲಾಗುತ್ತದೆ. ಇವತ್ತಿನ ಸಾರ್ವತ್ರಿಕ ಜೀವನದಲ್ಲಿ ಸರಳತೆ, ನಿಸ್ವಾರ್ಥತೆ, ತ್ಯಾಗಮನೋಭಾವ ಇವೆಲ್ಲ ಢಾಳವಾಗಿ ಕಣ್ಮರೆಯಾಗಿ

---

* ಶ್ರೀ ಗುರೂಜಿಯವರು ೧೯೭೨ರ ಡಿಸೆಂಬರ್ ೨೨ ರಂದು ಕಾನ್ಪುರದ ದೀನ್ ದಯಾಳ್ ಉಪಾಧ್ಯಾಯ ಸನಾತನ ಧರ್ಮ ವಿದ್ಯಾಲಯದಲ್ಲಿ ಮಾಡಿದ ಭಾಷಣದ ಆಧಾರಿತ.

ಹೋಗಿವೆ. ಭ್ರಷ್ಟಾಚಾರ ಅತಿರೇಕವಾಗಿದೆ. ಸಾರ್ವಜನಿಕ ಜೀವನದಲ್ಲಿ ಕ್ರಿಯಶೀಲವಾಗಿರುವ ವ್ಯಕ್ತಿಗಳ ಸಾರ್ವತ್ರಿಕ ಚಟುವಟಿಕೆಗಳು ಅಂಗೀಕೃತ ಗುಣಮಟ್ಟಗಳಿಗಿಂತ ತೀರಾ ಭಿನ್ನವಾಗಿವೆ. ನಿರ್ದಿಷ್ಟವಾಗಿ ವ್ಯಕ್ತಿಗಳನ್ನು ಹೆಸರಿಸದೇ ಸಾಮಾನ್ಯವಾಗಿ ಅನ್ವಯಿಸುವಂತೆಯೇ ಈ ಮಾತನ್ನು ಹೇಳಬಹುದು.

ನಮ್ಮ ದೇಶದಲ್ಲಿ 'ಚಾರಿತ್ರ್ಯದ ಬಿಕ್ಕಟ್ಟು' ತಲೆದೋರಿದೆ ಎಂದು ಕೆಲವು ವರ್ಷಗಳ ಹಿಂದೆ ಹೇಳಲಾಗುತ್ತಿತ್ತು. ಆದರೆ ಚಾರಿತ್ರ್ಯ ರೂಪಿಸುವ ಕೆಲಸವನ್ನು ಯಾರು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಸಾಮಾನ್ಯ ಮನುಷ್ಯ ಸನ್ನಡತೆಯುಳ್ಳವನಾಗಿರಬೇಕು. ನಿಸ್ವಾರ್ಥಿಯಾಗಿರಬೇಕು. ಗುಣಾಢ್ಯನಾಗಿರಬೇಕು ಎಂದು ನಾವು ನಿರೀಕ್ಷಿಸುತ್ತೇವೆ. ಆದ್ದರಿಂದಲೇ ಇರಬೇಕು ಸಣ್ಣಪುಟ್ಟ ಅನ್ಯಾಯಗಳನ್ನೂ ಪೀನಲ್ ಕೋಡ್ ಅನ್ವಯ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಿದ್ದು. ಆದರೆ ಉನ್ನತಾಧಿಕಾರ ಸ್ಥಾನಗಳಲ್ಲಿರುವವರ ದೊಡ್ಡದೊಡ್ಡ ಹಗರಣಗಳ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ. ಇದೊಂದು, ವಿಪರ್ಯಾಸ!

ಶ್ರೀಸಾಮಾನ್ಯರು ಎಂದಿನಂತೆ ಮಾಮೂಲಿ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡು ತಮ್ಮ ಕುಟುಂಬ ಮತ್ತು ಸಮಾಜದ ಪಾಲನೆ–ಪೋಷಣೆ ನೋಡಿಕೊಳ್ಳಲು ಅನುವಾಗುವಂತೆ ಅವರ ಪ್ರಾಥಮಿಕ ಅಗತ್ಯಗಳನ್ನು ಖಾತ್ರಿಯಾಗಿ ಪೂರೈಸಬೇಕು ಲೌಕಿಕ ಅಭ್ಯುದಯ ಸಾಧನೆಗೆ ಅಗತ್ಯವಾದ ಅವಶ್ಯಕತೆಗಳನ್ನು ಪೂರೈಸುವ ಕಾರ್ಯ ಕೆಳಹಂತದಲ್ಲಿರುವವರಿಂದಲೇ ಪ್ರಾರಂಭವಾಗಬೇಕು. ಸಮಾಜದ ಕೆಳಸ್ತರದಲ್ಲಿರುವ ಜನರ ಅಗತ್ಯಗಳನ್ನು ಪೂರೈಸಿದ ನಂತರವೇ ನಾವು ಮೇಲ್ವರ್ಗದತ್ತ ಗಮನ ಹರಿಸಬೇಕು. ಇದನ್ನು ಸಾಧಿಸಲು ಬೇಕಾದರೆ ಮೇಲ್ವರ್ಗದಲ್ಲಿರುವವರು ತಮ್ಮ ವೈಭೋಗಗಳನ್ನು ಕಡಿತಗೊಳಿಸಬೇಕು. ಮಾಮೂಲಿ ಅಗತ್ಯಗಳಲ್ಲೂ ಕಡಿತ ಉಂಟುಮಾಡಬೇಕು. ಇದನ್ನು ಗೊಣಗದೆ ಮಾಡಬೇಕು. ಸಾಮಾನ್ಯರ ಒಳಿತಿಗಾಗಿ ತಮ್ಮ ಬಳಕೆಯ ಮೇಲೆ ಮನಃಪೂರ್ವಕವಾಗಿ ಸ್ವಯಂಪ್ರೇರಿತ ನಿಯಂತ್ರಣವನ್ನು ಒಪ್ಪಿಕೊಳ್ಳಬೇಕು. ಆದರೆ ಚಾರಿತ್ರ್ಯ ರೂಪಿಸುವ ಬಾಬಿನಲ್ಲಿ ಇದು ತಿರುಗುಮುರುಗಾಗುತ್ತದೆ. ಮೇಲ್ವರ್ಗದಲ್ಲಿರುವ ಜನರು ಸ್ವಯಂ ನಿಯಂತ್ರಣ ಸರಳತೆ ಮತ್ತು ಸಚ್ಚಾರಿತ್ರ್ಯದ ನಡವಳಿಕೆಯಲ್ಲಿ ಮೇಲ್ಪಂಕ್ತಿಯಾಗಬೇಕಾದ, ಮಾದರಿಯಾಗಬೇಕಾದ ಅಗತ್ಯವಿದೆ. ಆಗ ಈ ಗುಣಾಢ್ಯತೆಗಳು ಅಡಿಪಾಯದವರೆಗೂ ಹರಿದುಬಂದು ಕೆಳಸ್ತರದಲ್ಲಿ ಸಂಪೂರಣಗೊಳ್ಳುತ್ತದೆ. ಆದರೆ ಇಂದು ಮೇಲ್ವರ್ಗದ ಜನರು ಎಲ್ಲ ಬಗೆಯ ವೈಭೋಗಗಳಲ್ಲಿ ನಿರತರಾಗಿದ್ದು ಕೆಳಸ್ತರದಲ್ಲಿರುವವವರು ಮಾತ್ರ ಗುಣಾಢ್ಯರಾಗಿರಬೇಕು, ಸ್ವಯಂ ನಿಯಂತ್ರಣ ಹೊಂದಿರಬೇಕೆಂದು ನಿರೀಕ್ಷಿಸಲಾಗುತ್ತಿದೆ. ಇದು ಹೇಗಿರಬೇಕೋ ಅದಕ್ಕೆ ತದ್ವಿರುದ್ಧವಾಗಿದೆ. ಈ ರೀತಿಯಲ್ಲಿ ನಮ್ಮಿಂದ ನಿಜವಾದ ಪ್ರಗತಿ ಸಾಧ್ಯವಿಲ್ಲ. ಸಮಾಜದ ಪೋಷಣೆ ಸಾಧ್ಯವಿಲ್ಲ.



ನಾವು ದಾಸ್ಯದಲ್ಲಿದ್ದಾಗ ರಾಷ್ಟ್ರದ ಆತ್ಮಗೌರವದ ಸಲುವಾಗಿ ನಮ್ಮ ಬದುಕನ್ನು ಸಂಪ್ರದಾಯಾನುಸಾರ ರೂಪಿಸಿಕೊಂಡೆವು. ಆಗ ನಮಗೆ ಪರಿಸ್ಥಿತಿಯ ಒತ್ತಡಗಳಿಂದಾಗಿ ವಿದೇಶೀಯರ ಜೊತೆ ಸಂಪರ್ಕವಾಯಿತು. ಇದರಿಂದ ನಮ್ಮ ಮನಸ್ಸುಗಳ ಮೇಲೆ ಆದ ಪರಿಣಾಮ ವಿದೇಶಿ ಆಳ್ವಿಕೆಗೆ ಪ್ರತಿರೋಧವನ್ನು ಸೃಷ್ಟಿಸಿತು. ಆದರೆ ವಿದೇಶಿ ಆಳ್ವಿಕೆ ಅಂತ್ಯಗೊಂಡ ಕೂಡಲೇ ವಿದೇಶಿ ಪ್ರಭಾವವನ್ನು ಹತ್ತಿಕ್ಕಿದ್ದ ಮಹಾಸ್ಫೂರ್ತಿ ಮಾಯವಾಯಿತು. ನಮ್ಮ ಇಡೀ ಜೀವನ ಶೈಲಿಯಲ್ಲಿ ಪರಿವರ್ತನೆಯಾಯಿತು. ಪ್ರಪಂಚದ ವಿವಿಧ ಜನರ ಜೊತೆ ವ್ಯವಹರಿಸುವಾಗ ಒಂದಲ್ಲ ಒಂದು ಬಗೆಯ 'ಕೊಡು–ಕೊಳುವಿಕೆ' ವ್ಯಾಪಾರ ವ್ಯವಹಾರಗಳಲ್ಲಿ ಅನಿವಾರ್ಯವಾಗುತ್ತದೆ ಎನ್ನುವುದು ಅರ್ಥವಾಗುವಂಥಾದ್ದೆ. ಆದರೆ ನಮ್ಮ ವಿಷಯದಲ್ಲಿ ಅದು ಏಕಮುಖ ಸಂಚಾರವಾಯಿತು. ನಾವು ಸ್ವೀಕರಿಸುವ ತುದಿಯಲ್ಲಿದ್ದೆವು. ತಾರತಮ್ಯ ಜ್ಞಾನವಿಲ್ಲದೆ ಎಲ್ಲವನ್ನೂ ಸ್ವೀಕರಿಸಿದೆವು. ಅಯೋಗ್ಯವಾದವುಗಳನ್ನೂ ನಾವು ತಿರಸ್ಕರಿಸಲಿಲ್ಲ. ಆಂಗ್ಲರ ದೇಶಭಕ್ತಿ, ಕರ್ತವ್ಯನಿಷ್ಠೆ, ಕರ್ತವ್ಯ ಪ್ರಜ್ಞೆ, ಅವರ ಅಮಿತ ಶಕ್ತಿ ಇತ್ಯಾದಿಗಳನ್ನು ಅನುಸರಿಸುವುದರಲ್ಲಿ ತಪ್ಪೇನಿಲ್ಲ. ಆದರೆ ಬಹಿರಂಗ ಜೀವನ ಶೈಲಿಯಂಥ ಅನಪೇಕ್ಷಿತವಾದವುಗಳನ್ನು ಮಾತ್ರ ಅನುಸರಿಸಿದೆವು. ಇದರ ಫಲವಾಗಿ ನಮ್ಮದೆಲ್ಲವನ್ನೂ ಖಂಡಿಸಲಾರಂಭಿಸಿದೆವು ನಮ್ಮ 'ಆತ್ಮ'ವನ್ನು ಬಿಂಬಿಸುವ ನಮ್ಮದೆಲ್ಲವನ್ನೂ ಖಂಡಿಸತೊಡಗಿದೆವು. ಈ ತಾರತಮ್ಯ ಜ್ಞಾನವಿಲ್ಲದ ಅನುಸರಣೆ ಇಂದು ಇಡೀ ಸಮಾಜವನ್ನು ಮಲಿನಗೊಳಿಸುತ್ತಿದೆ. ಈ ಪರಿವರ್ತನೆ ನಮ್ಮ ಜೀವನ ಪದ್ಧತಿಗೆ ಹಾನಿಕಾರವಾದದ್ದು. ಚಾರಿತ್ರ್ಯ ರೂಪಣೆಗೆ ಕರ್ತವ್ಯ ಪ್ರಜ್ಞೆಗೆ ಹಾನಿಕಾರಕವಾದದ್ದು. ಇಂಥ ಪರಿಸ್ಥಿತಿಯಲ್ಲಿ ಅಸ್ಮಿತೆಯನ್ನು ನೆನಪುಮಾಡಿಕೊಡುವುದು ಅತ್ಯವಶ್ಯಕವಾಗಿ ಆಗಬೇಕಾಗಿದೆ.

ಆದರೆ ಸ್ವಪ್ರಜ್ಞೆಯನ್ನು ಮರಳಿ ಜಾಗೃತಗೊಳಿಸುವುದು ಸುಲಭದ ಕಾರ್ಯವಲ್ಲ. ಈ ಮಾರ್ಗದಲ್ಲಿ ಹಲವಾರು ತೊಂದರೆ ತೊಡಕುಗಳಿವೆ. ಅದರಲ್ಲಿ ಒಂದು ಗತಕಾಲದ ಶಿಕ್ಷಣ ಪದ್ಧತಿ. ಈ ಶಿಕ್ಷಣಪದ್ಧತಿಯನ್ನು ನಮ್ಮಲ್ಲಿ ಜಾರಿಗೆ ತಂದ ಕುಟಿಲ ಆಂಗ್ಲರು "ಇಲ್ಲಿ, ಭಾರತದಲ್ಲಿ ನಾವು ಕಪ್ಪು ಇಂಗ್ಲಿಷರನ್ನು ಹೊಂದಿರುತ್ತೇವೆ" ಎಂದೂ ಹೇಳಿದ್ದರು. ನಮ್ಮಲ್ಲಿ 'ಬಹುತೇಕ ಮಂದಿ ಈ ವರ್ಣನೆಗೆ ಉತ್ತರರೂಪದಂತಿದ್ದಾರೆ. ಅವರು ಭಾರತೀಯವಾದುದೆಲ್ಲವನ್ನೂ ನಿಕೃಷ್ಟವಾಗಿ ಕಾಣುತ್ತಾರೆ, ಭಾರತದಲ್ಲಿ ಇಡೀ ಮನುಕುಲಕ್ಕೆ ಲಾಭದಾಯಕವಾಗಬಲ್ಲಂಥ ಮಹಾನ್ ತತ್ತ್ವಸಿದ್ಧಾಂತಗಳಿವೆ. ಸ್ವಂತ ಅಭ್ಯುದಯದಲ್ಲಿ ಮಾತ್ರ ಆಸಕ್ತರಾಗಿರುವ ಸುಶಿಕ್ಷಿತರು ಇದನ್ನು ನಂಬಲೂ ಸಿದ್ಧರಿಲ್ಲ. ಕೆಲವು ಸಂದರ್ಭಗಳಲ್ಲಾದರೂ ನಮ್ಮ ನಾಯಕರುಗಳು ನಮ್ಮ ರಾಷ್ಟ್ರಜೀವನ ಶತಮಾನಗಳಷ್ಟು ಪ್ರಾಚೀನವಾದದ್ದು ಎಂದು ಹೇಳುತ್ತಾರೆ. ಇದಕ್ಕಾಗಿ ನಾವು ದೇವರಿಗೆ ಅಭಾರಿಯಾಗಿರಬೇಕು. ಆದರೆ ಇದು ಕೇವಲ ಮಾತಿಗೆ

ಸೀಮಿತವಾದದ್ದು, ಮಾತಷ್ಟೇ. ಈ ಮಾತುಗಳ ಹಿಂದೆ ಪ್ರಾಮಾಣಿಕತೆ ಇಲ್ಲ. ಅಥವಾ ಈ ಉಜ್ವಲ ಚಿಂತನೆಗಳನ್ನು ಜನರ ಮುಂದಿರಿಸುವ ಸಂಕಲ್ಪ ಇಲ್ಲ ಅಥವಾ ತಮ್ಮ ಬದುಕಿನಲ್ಲೇ ಪ್ರಕಟಗೊಳಿಸುವ ಇರಾದೆ ಇಲ್ಲ. ಆದ್ದರಿಂದ ಅವೆಲ್ಲ ಪೊಳ್ಳ ಮಾತುಗಳು. ಮುಸುಕು, ಮುಖವಾಡವಷ್ಟೆ.

"ನನಗೆ ದೇವರಲ್ಲಿ ನಂಬಿಕೆ ಇಲ್ಲ, ಧರ್ಮದಲ್ಲಿ ನಂಬಿಕೆ ಇಲ್ಲ. ಇವುಗಳನ್ನೆಲ್ಲ ನಂಬುವ ಅವಶ್ಯಕ ಇಲ್ಲ" ಪಾಶ್ಚಾತ್ಯ ಪ್ರಭಾವದಿಂದಾಗಿ ಇಂಥ ಮಾತುಗಳನ್ನಾಡುವುದೂ ಒಂದು ಶೋಕಿಯಾಯಿತು. ನಮ್ಮ ಜೀವನ ಪದ್ಧತಿಯ ಮೂಲಾಧಾರಗಳನ್ನೇ ತಿರಸ್ಕರಿಸುವುದೂ ಒಂದು ಶೋಕಿಯಾಯಿತು. ನಮ್ಮ ಮನಸ್ಸಿನ ಮೇಲೆ ಇಂಥ ಆಲೋಚನೆಗಳನ್ನು ಬಿಂಬಿಸಿದ ಈ ಜನರು–ಇಂಗ್ಲಿಷರು ಇನ್ನೂ ಉನ್ನತವಾದ ತತ್ವಸಿದ್ಧಾಂತಗಳನ್ನು ಹೊಂದಿರುವರೆ ಅಥವಾ ನೀಡಬಹುದಾದಂಥ ತತ್ತ್ವಸಿದ್ಧಾಂತ ಯಾವುದಾದರೂ ಅವರಲ್ಲಿದೆಯೆ ಎಂದು ನಾವು ಯೋಚಿಸುವುದು ಅಗತ್ಯವಾಗಿದೆ.

ಸೈದ್ಧಾಂತಿಕ ದೃಷ್ಟಿಕೋನದಿಂದ ನೋಡಿದಾಗ ಇವತ್ತು ಕಮ್ಯುನಿಸ್ಟ್ ಸಿದ್ಧಾಂತದ ಬಗ್ಗೆ ಹೆಚ್ಚು ಚರ್ಚೆಯಾಗುತ್ತಿದೆ. ಅದರ ಅರ್ಥ ಏನಿರಬಹುದು? ಅದರಿಂದ ನಮಗೇನು ಪ್ರಯೋಜನವಾದೀತು ಎಂಬುದನ್ನು ನೋಡೋಣ. ಅದು ಕೆಲವೊಂದು ಸಿದ್ಧಾಂತಗಳನ್ನು ಪ್ರತಿಪಾದಿಸುತ್ತದೆ. ಅದು ಸಮಾಜ ವ್ಯವಸ್ಥೆ ಕುರಿತಂತೆ ಕೆಲವು ಕಲ್ಪನೆಗಳನ್ನು ಆಲೋಚನೆಗಳನ್ನು ಮಂಡಿಸಿದೆ. ಹಾಗೂ ಈ ಕಲ್ಪನೆಗಳ ಬಗ್ಗೆ ಬಾಜಾಭಜಂತ್ರಿಯಿಂದ ಪ್ರಚಾರ ಮಾಡಲಾಗುತ್ತಿದೆ. ಸುಖಸಂತೋಷಗಳನ್ನು ಸಮಾನವಾಗಿ ವಿತರಿಸುವ ವ್ಯವಸ್ಥೆಯೊಂದನ್ನು ಸೃಷ್ಟಿಸುವ ಅಗತ್ಯವಿದೆ ಎಂದು ಕಮ್ಯುನಿಸ್ಟ್ ಸಿದ್ಧಾಂತ ಹೇಳುತ್ತದೆ. ಪಶ್ಚಿಮದ ಕಮ್ಯುನಿಸ್ಟೇತರ ರಾಷ್ಟ್ರಗಳಲ್ಲಿ ಇಂಥ ಪರಿಕಲ್ಪನೆಗಳೇನಿಲ್ಲ. ಬಹುಶಃ, ಹೆಚ್ಚು ಚರ್ಚಿಸಲ್ಪಟ್ಟಿರುವ ಫ್ರೆಂಚ್ ಕ್ರಾಂತಿ, ಪ್ರಜಾಪ್ರಭುತ್ವ, ಸಮಾನತೆ, ಭ್ರಾತೃತ್ವ ಇಂಥ ಕೆಲವು ವಿಚಾರಗಳು ಇದೆ. ತಮ್ಮ ರಾಜಕೀಯ, ಸಾಮಾಜಿಕ ಮತ್ತು ಅರ್ಥ ವ್ಯವಸ್ಥೆಗಳನ್ನು ಇವುಗಳ ಮಾದರಿಯಲ್ಲಿ ರೂಪಿಸಿಕೊಳ್ಳುವುದು ಅವರ ಅಪೇಕ್ಷೆಯಾಗಿದೆ. ಆದರೆ ಎಲ್ಲ ಮನುಷ್ಯರು ಸಮಾನರು ಎನ್ನುವ ಹೇಳಿಕೆ ನಮ್ಮ ಅನುಭವಕ್ಕೆ ತದ್ವಿರುದ್ಧವಾದದ್ದು. ನಾವು ಕಾಣುವಂತೆ ಯಾರೇ ಇಬ್ಬರು ವ್ಯಕ್ತಿಗಳು ತದ್ರೂಪವಾಗಿರುವುದಿಲ್ಲ. ಅವರ ಭೌತಿಕ ಅಗತ್ಯಗಳಲ್ಲಿ ಏಕರೂಪತೆ ಇರಬಹುದು. ಆದರೆ ಅವರ ದೈಹಿಕ, ಬೌದ್ಧಿಕ, ಮಾನಸಿಕ ಗುಣಗಳು ತದ್ವಿರುದ್ಧವಾಗಿರುತ್ತವೆ. ಇದು ಅನುಭವಸಿದ್ಧವಾದದ್ದು ಎಂದೇ ಅವರ ಸಿದ್ಧಾಂತದಲ್ಲಿ ದೋಷವಿದೆ. ಅದೊಂದು ಕುತರ್ಕವಷ್ಟೆ.

ಸಮಾನತೆ ಘೋಷಣೆಗೆ ಸಂಬಂಧಿಸಿದಂತೆ ಅವರಿಂದ ಪ್ರೇರಿತರಾದ ಕಮ್ಯುನಿಸ್ಟರು ಸಮಾನತೆ ಇರುವಂಥ ವ್ಯವಸ್ಥೆಯೊಂದನ್ನು ಅಸ್ತಿತ್ವಕ್ಕೆ ತರುವ ಪ್ರಯತ್ನ ನಡೆಸಿದ್ದಾರೆ. ಈ ಸಂಬಂಧವಾಗಿ ನಾವೊಂದು ಪ್ರಶ್ನೆ ಕೇಳಬಹುದು. ಮಾನವ



ಜೀವನ ಈ ಪ್ರಪಂಚಕ್ಕಷ್ಟೇ ಸೀಮಿತವಾದುದೆ? ಮನುಷ್ಯನಿಗೆ ಮನಸ್ಸನ್ನು ಮುದಗೊಳಿಸುವ ಅನ್ನ–ವಸತಿ ಇಷ್ಟಾದರೆ ಸಾಕೆ? ಅನ್ನ–ವಸತಿಗಳ ಉತ್ಪಾದನೆಯಷ್ಟೆ ಅವನ ಜೀವನದ ಗುರಿ ಏನು? ಪಶ್ಚಿಮ ರಾಷ್ಟ್ರಗಳ ಪ್ರಜಾಪ್ರಭುತ್ವವಾದಿಗಳು ಹಾಗೂ ಕಮ್ಯುನಿಸ್ಟರು ಪರಿಭಾಷೆಯಲ್ಲಿ ಮಾತ್ರ ಭಿನ್ನ. ಬೇರಾವುದರಲ್ಲಿ ಅವರ ನಡುವೆ ಭಿನ್ನತೆ, ವ್ಯತ್ಯಾಸಗಳಿಲ್ಲ. ಬದುಕು ಈ ಪ್ರಪಂಚದ ಐಹಿಕ ಭೋಗಗಳಿಗೆ ಸೀಮಿತವಾಗಿದೆ ಎಂದು ಇಬ್ಬರೂ ಘೋಷಿಸುತ್ತಾರೆ. ಇವತ್ತು ಬದುಕಿನಲ್ಲಿ ಸಂಪತ್ತೇ ಮುಖ್ಯವಾಗಿದೆ. ಅರ್ಥಕಾಮಗಳೇ ಪ್ರಧಾನವಾಗಿದೆ. ಐಶ್ವರ್ಯಗಳಿಸಿದ ಮೇಲೆ ಅದನ್ನು ಕಾಪಾಡಿಕೊಳ್ಳುವುದು ಹಾಗೂ ವೃದ್ಧಿಗೊಳಿಸುವುದು ಅತ್ಯವಶ್ಯಕ. ಏಕೆಂದರೆ ಆಸೆ ಆಕಾಂಕ್ಷೆ ಕಾಮನೆಗಳಿಗೆ ತೃಪ್ತಿ ಎಂಬುದೇ ಇಲ್ಲ.

ಇವತ್ತಿನ ಬದುಕು ಐಶ್ವರ್ಯ ಸಂಪಾದನೆಯ ಕಾರ್ಯ ಚಟುವಟಿಕೆಗಳಲ್ಲಿ ನಿರತವಾಗಿದೆ. ಐಶ್ವರ್ಯ ಕಾಪಾಡಿಕೊಳ್ಳುವುದು ಹಾಗೂ ಹೆಚ್ಚು ಹೆಚ್ಚು ಸಂಪತ್ತನ್ನು ಕ್ರೋಢೀಕರಿಸುವುದು ಅತ್ಯಗತ್ಯವಾಗಿದೆ. ಏಕೆಂದರೆ ಆಸೆ–ಆಕಾಂಕ್ಷೆಗಳು ಒಮ್ಮೆಗೇ ಮುಗಿಯುವಂಥವಲ್ಲ. ಒಂದು ಸಲ ಬಯಕೆಗಳನ್ನು ತಣಿಸಿಕೊಂಡ ನಂತರ ಮನುಷ್ಯ ಅಷ್ಟಕ್ಕೇ ತೃಪ್ತನಾಗುವುದಿಲ್ಲ. ಆದ್ದರಿಂದಲೇ 'ನ ಜಾತೋ ಕಾಮ: ಕಾಮಮ್ ಉಪಭೋಗೇನ ಶ್ಯಮತಿ" ಎಂದು ಹೇಳಲಾಗಿದೆ. ಅಗ್ನಿಗೆ ಕಾಷ್ಠವನ್ನು ಹಾಕಿದಾಗ ಅದು ಬೆಂಕಿಯಾಗಿ ಹೊತ್ತಿ ಉರಿಯುತ್ತದೆ. ಅಂತೆಯೇ ಕಾಮನೆಗಳನ್ನು ತೃಪ್ತಿಪಡಿಸಿದಾಗ ಅವು ಮತ್ತೆ ಪುಟಿದೇಳುತ್ತವೆ. ಹಲವು ಹನ್ನೊಂದು ಬಗೆಯ ಸುಖಸಂತೋಷಗಳನ್ನು ಅನುಭವಿಸಲು ದೈಹಿಕವಾಗಿ ಅಸಮರ್ಥನಿದ್ದಾಗಲೂ ಅವುಗಳ ದಾಹ ಇಂಗುವುದಿಲ್ಲ. ಕಾಮನೆಗಳ ದಾಹ ಅವನಲ್ಲಿದ್ದೇ ಇರುತ್ತದೆ. ಆದ್ದರಿಂದಲೇ, "ಏನು ಮಾಡೋದು ಸ್ವಾಮಿ ನಾವು ಮುದುಕರಾದರೂ ನಮ್ಮ ಕಾಮನೆಗಳಿಗೆ ವಯಸ್ಸಾಗಿಲ್ಲ" ಎಂದು ಹೇಳಲಾಗುತ್ತದೆ. "ತೃಷ್ಣನ ಜೀರ್ಣ ವಯಮೇವ ಜೀರ್ಣ:" ಕಾಮಕ್ಕೆ ಸಂಪೂರ್ಣ ತೃಪ್ತಿ ಇಲ್ಲವೇ ಇಲ್ಲ. ಆದರಿಂದ ಕಾಮನೆಗಳನ್ನು ತಣಿಸಲು ಹಲವಾರು ಸಾಧನ ಸಂಪತ್ತುಗಳನ್ನು ಗಳಿಸಲಾಗುತ್ತದೆ. ಸಂಗ್ರಹಿಸಿಡಲಾಗುತ್ತದೆ. ತನ್ನದು ಸಾಲದೆನ್ನಿಸಿದಾಗ ಬೇರೆಯವರ ಆಸ್ತಿಯನ್ನೂ ಆಕ್ರಮಿಸಲಾಗುತ್ತದೆ. ಸಮಕಾಲೀನ ಪ್ರಪಂಚದಲ್ಲಿ ನಾವು ಈಗ ಕಾಣುತ್ತಿರುವ ಸಾಮ್ರಾಜ್ಯಶಾಹಿ ಮನುಷ್ಯನ ವಿಷಯಲೋಲುಪತೆಯ ಫಲ, ಸ್ವೇಚ್ಛಾಕಾಮದ ಪರಾಕಾಷ್ಠೆ. ಈ ಪ್ರವೃತ್ತಿಯೇ ಬಲಪ್ರಯೋಗದಿಂದ ಅನ್ಯರಾಷ್ಟ್ರಗಳನ್ನು ಆಕ್ರಮಿಸಿಕೊಳ್ಳಬೇಕೆಂಬ ಕಾಮನೆಗೆ ಪ್ರೇರಣೆ. ಹೀಗಾಗಿ ವಿಶ್ವಶಾಂತಿಯ ಭರವಸೆಯೇ ಇಲ್ಲದಂತಾಗಿದೆ. ಮನುಷ್ಯನ ಮನದೊಳಗಣ ಅಶಾಂತಿ, ಚಡಪಡಿಕೆಗಳು ಅವನ ಬಹಿರಂಗ ಚಟುವಟಿಕೆಗಳಲ್ಲಿ ಪ್ರಕಟಗೊಳ್ಳುವುದು ಅನಿವಾರ್ಯ. ಈಡೇರದ ಕಾಮನೆಗಳು ಮನಸ್ಸಿನ ಅಶಾಂತಿಗೆಡೆ ಮಾಡಿಕೊಡುತ್ತವೆ. ವಿಶ್ವದೊಳಗಣ ಕ್ಷೋಭೆ,

ಸಂಘರ್ಷಗಳಿಗೆ ಇದೂ ಒಂದು ಕಾರಣ ಮನುಷ್ಯನ ಎಲ್ಲ ಬಗೆಯ ಕಾಮನೆಗಳನ್ನು ತಣಿಸುವ ಮೂಲಕ ಅಥವಾ ಅವನ ಭೋಗದಾಹವನ್ನು ತಣಿಸುವ ಮೂಲಕ ಶಾಂತಿ ಸಾಧಿಸುವುದು ಎಂದಿಗೂ ಸಾಧ್ಯವಾಗದು.

ಭಗವದ್ಗೀತೆಯ ಹದಿನಾರನೆ ಅಧ್ಯಾಯದಲ್ಲಿ ಪುರುಷರ ಎರಡು ಬಗೆಯನ್ನು ವರ್ಣಿಸಲಾಗಿದೆ. ದೈವೀ ಪ್ರವೃತ್ತಿಯ ಪುರುಷರದು ಒಂದು ಬಗೆಯಾದರೆ ಇನ್ನೊಂದು ಬಗೆ ಪೈಶಾಚಿಕ ಪ್ರವೃತ್ತಿಯದು. ಸಂಪತ್ತಿನ ದುರಾಸೆಯಿಂದ ಮನುಷ್ಯರು ಪರಸ್ಪರ ಹೋರಾಡುವುದನ್ನು ನಾವಿಂದು ಕಾಣುತ್ತಿದ್ದೇವೆ. ಇದೇ ರೀತಿ ರಾಷ್ಟ್ರಗಳೂ ಮತ್ತೊಂದು ರಾಷ್ಟ್ರದ ಸಂಪತ್ತನ್ನು ಲೂಟಿಮಾಡಲು, ಬೇರೆಯವರ ಮೇಲೆ ತಮ್ಮ ಸೌರ್ವಭೌಮತ್ವ ಸ್ಥಾಪಿಸಲು ಆಕ್ರಮಣ ನಡೆಸುತ್ತಿರುವುದನ್ನೂ ನಾವು ಕಾಣುತ್ತಿದ್ದೇವೆ. ಇದು ಪೈಶಾಚಿಕ ಪ್ರವೃತ್ತಿ "ನಾನು ಇವತ್ತು ಇವನನ್ನು ಕೊಂದೆ, ನಾಳೆ ಮತ್ತೊಬ್ಬನನ್ನು ಕೊಲ್ಲುತ್ತೇನೆ. ನಾನು ಇಂದು ಇವರ ಆಸ್ತಿ ಕಬಳಿಸಿದೆ, ನಾಳೆ ಮತ್ತೊಬ್ಬರ ಸಂಪತ್ತನ್ನು ಕಸಿಯುತ್ತೇನೆ. ನಾನು ಮಹಾನ್ ವ್ಯಕ್ತಿ. ನನ್ನ ಮೀರಿಸುವವರು ಯಾರು ಇಲ್ಲ. ನನಗೆ ಸರಿಸಮಾನರು ಯಾರೂ ಇಲ್ಲ".

ಇಂದಿಗೂ ಸಹ ಅರ್ಥ ಮತ್ತು ಕಾಮಗಳ ಪ್ರಭಾವದಿಂದಾಗಿ ಜನ ತಾವು ಸಮಾಜವಾದಿಗಳು, ಕಮ್ಯುನಿಸ್ಟರು. ಪ್ರಜಾಪ್ರಭುತ್ವವಾದಿಗಳು ಎಂದು ಅಹಂಕಾರದಿಂದ ಘೋಷಿಸಿಕೊಳ್ಳುತ್ತಾರೆ.

ಮಾನವರಲ್ಲಿರುವ ದೈವೀ ಪ್ರವೃತ್ತಿ ಮತ್ತು ರಾಕ್ಷಸ ಪ್ರವೃತ್ತಿಗಳ ಜೀವಂತ ಚಿತ್ರಣವನ್ನು ನಾವು ಭಗವದ್ಗೀತೆಯ ಹದಿನಾರನೆ ಅಧ್ಯಾಯದಲ್ಲಿ ಕಾಣುತ್ತೇವೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ದೈವೀ ಶಕ್ತಿಯನ್ನಾಗಲೀ ಅಥವ ದೈವೀ ಗುಣಗಳಾಗಲೀ ನಮಗೆ ಕಾಣಸಿಗುವುದಿಲ್ಲ. ಈ ಬಗೆಯ ಪ್ರಪಂಚದಲ್ಲಿ ನಾವೀಗ ನಮ್ಮ ಮಾರ್ಗವನ್ನು ರೂಪಿಸಿಕೊಳ್ಳಬೇಕಾಗಿದೆ. ಹಲವಾರು ಮಂದಿ ಹಲವು ಬಗೆಯ ಮಾರ್ಗಗಳನ್ನು ಕಂಡುಕೊಳ್ಳುವ ಪ್ರಯತ್ನಗಳನ್ನು ನಡೆಸಿದ್ದಾರೆ. ತಮ್ಮ ಧಾರ್ಮಿಕ ಸಿದ್ಧಾಂತಗಳ ಅನ್ವಯ ಬದುಕನ್ನು ರೂಪಿಸಿಕೊಳ್ಳುವುದು ಕೆಲವರ ಇಚ್ಛೆಯಾಗಿತ್ತು. ಆದರೆ ಅವರ ಧರ್ಮಗಳ ಮೂಲ ತತ್ತ್ವಗಳಾಗಲಿ. ಮೂಲಸಿದ್ಧಾಂತಗಳಾಗಲೀ, ಮೂಲನೀತಿಗಳಾಗಲೀ ಇರಲಿಲ್ಲ. "ದೇವನೊಬ್ಬನೇ. ಅವನಿಗೊಬ್ಬ ದೂತನಿದ್ದಾನೆ. ದೂತನಲ್ಲಿ ನಂಬಿಕೆ ಇಡಿ. ಶ್ರದ್ಧಾ ಭಕ್ತಿಗಳಿಂದ ದೇವರಲ್ಲಿ ಪಾಪಗಳ ವಿಮೋಚನೆಗಾಗಿ ಪ್ರಾರ್ಥನೆ ಮಾಡಿ" ಎಂದು ಅವರು ಹೇಳುತ್ತಾರೆ. ಆದರೆ ಅರ್ಥ ಕಾಮನೆಗಳ ಬೆನ್ನಟ್ಟಿಹೋಗುವುದರಲ್ಲೇ ಪೂರ್ಣ ಮಗ್ನನಾಗಿರುವ ವ್ಯಕ್ತಿ, ದೇವರಲ್ಲಿ ನಂಬಿಕೆ ಇರದ ವ್ಯಕ್ತಿ ಕ್ಷಮೆ ಯಾಚಿಸಬೇಕೇಕೆ? ಇಷ್ಟೆಲ್ಲದರ ಮಧ್ಯೆಯೂ ದೇವರನ್ನು ನಂಬುವಂತೆ ಅವನಿಗೆ ಬೋಧಿಸಲಾಗುತ್ತದೆ. ಸಾಮಾನ್ಯವಾಗಿ, ಬುದ್ಧಿವಂತನಾದವನಿಗೆ ಇಂಥ ನಂಬಿಕೆ ಅಸಾಧ್ಯ. ಮೊದಲಿಗೆ ಅವನ ಬುದ್ಧಿಮತ್ತೆಯನ್ನು ತೃಪ್ತಿಪಡಿಸಬೇಕು.



ಅನಂತರ ನಂಬಿಕೆ ಬಗ್ಗೆ ಮಾತನಾಡಬೇಕು. "ನಮ್ಮೆಲ್ಲ ಬೌದ್ಧಿಕ ಕಸರತ್ತುಗಳೂ ಕೊನೆ ಮುಟ್ಟಿವೆ. ಬುದ್ಧಿಮತ್ತೆ ಇನ್ನು ಹೆಚ್ಚು ದೂರ ಸಾಗಲಾರದು". ಇದು ಮಾರ್ಗೋಪಾಯ. ಬೌದ್ಧಿಕವಾಗಿ ಬೆಂಬಲಿಸುವಂಥಾದ್ದನ್ನು ಮಾತ್ರ ಈ ಬುದ್ಧಿವಂತ ಮಹಾಶಯ ಒಪ್ಪುತ್ತಾನೆ. ಪ್ರಾರಂಭದಲ್ಲಿ ದೇವರನ್ನು ನಂಬುವಂತೆ ಹೇಳಿದಾಗ ಬುದ್ಧಿಜೀವಿಗಳಿಗ ಇದು ಅಂಗೀಕಾರಾರ್ಹವೆನ್ನಿಸಲಿಲ್ಲ. ಅವರ ಬುದ್ಧಿಶಕ್ತಿ ತಣಿದಾಗಲೇ ಹಾಗೂ ಅದರಿಂದ ಮುನ್ನಡೆ, ಮತ್ತಷ್ಟು ಪ್ರಗತಿ ಸಾಧ್ಯವಿಲ್ಲ ಎಂದು ಮನವರಿಕೆಯಾದಾಗಲೇ ಅವರಿಗೆ ದೇವರಲ್ಲಿ ನಂಬಿಕೆ ಹುಟ್ಟಬಹುದು.

ಪಾಶ್ಚಾತ್ಯ ರಾಷ್ಟ್ರಗಳ ವಿವಿಧ ಜನರು ಭಾರತದಲ್ಲಿ ಮತಾಂತರ ಚಟುವಟಿಕೆಗಳಲ್ಲಿ ನಿರತರಾಗಿರುವುದನ್ನು ನಾವು ಕಾಣತ್ತಿದ್ದೇವೆ. ಅವರ ರಾಷ್ಟ್ರಗಳಲ್ಲೇ ಚರ್ಚುಗಳು ಬಿಕೋ ಎನ್ನುತ್ತಿರುತ್ತವೆ. ಅವರಲ್ಲಿ ಎಲ್ಲೋ ಕೆಲವು ಮಂದಿ ಮಾತ್ರ ಚರ್ಚುಗಳಿಗೆ ಹೋಗುತ್ತಾರೆ. ಜನರಿಗೆ ಚರ್ಚುಗಳಲ್ಲಿ ನಂಬಿಕೆ ಇಲ್ಲ. ತಮ್ಮ ಆತ್ಮೀಯರ ಬಗ್ಗೆಯೂ ಅವರು ನಿರ್ಭಾವುಕರಾಗಿರುತ್ತಾರೆ. ಅವರಲ್ಲಿ ಅಂತರ್ಬೋಧೆ ಇಲ್ಲ. ಸ್ಫೂರ್ತಿ, ಪ್ರೇರಣೆಗಳಿಲ್ಲ. ಅರ್ಥಕಾಮ ಆಧಾರಿತ ಪೈಶಾಚಿಕ ಪ್ರವೃತ್ತಿಯ ಜೀವನಶೈಲಿ ನಿಯಂತ್ರಿಸಲು ನಾವು ಅವರಿಗೆ ಸಲಹೆ ಸೂತ್ರಗಳನ್ನು ನೀಡಬೇಕಾಗಿದೆ. ನಮ್ಮ ರಾಷ್ಟ್ರೀಯ ಹಾಗೂ ಸಾಮಾಜಿಕ ಸಂಪ್ರದಾಯಗಳು ಅವರಿಗೊಂದು ದಾರಿ ತೋರಬಹುದೇ? ದಾರಿದೀಪವಾಗಬಹುದೆ? ನನ್ನ ಪ್ರಕಾರ ನಿಶ್ಚಯವಾಗಿಯೂ ನಮ್ಮ ಸಂಪ್ರದಾಯಗಳು ಅವರಿಗೆ ಮಾರ್ಗದರ್ಶಕವಾಗಬಲ್ಲವು. ನಮ್ಮ ಪ್ರಾಚೀನ ಕಾಲದ ಋಷಿಗಳು, ಸಾಧುಸಂತರು ಈ ಸಮಸ್ಯೆಗಳ ಬಗ್ಗೆ ಸಮಗ್ರ ಚಿಂತನ ನಡೆಸಿ. ಕೇವಲ ಅರ್ಥ–ಕಾಮಗಳನ್ನೇ ಆಧರಿಸಿದ ಜೀವನ ಮೃಗಸದೃಶವಾದದ್ದು ಮತ್ತು ಪೈಶಾಚಿಕವಾದದ್ದು ಎಂದು ಘೋಷಿಸಿದ್ದಾರೆ. ಆದ್ದರಿಂದ ಇಂಥ ಬದುಕನ್ನು ತ್ಯಜಿಸುವಂತೆ ತಿಳುವಳಿಕೆ ಹೇಳಿದ್ದಾರೆ. ಅರ್ಥಕಾಮಗಳಿಂದ ಸಂಪೂರ್ಣ ಬಿಡುಗಡೆ ಅಸಾಧ್ಯವೆನ್ನುವುದೂ ಅವರಿಗೆ ಗೊತ್ತಿತ್ತು. ಅರ್ಥಆಕಾಮಗಳ ಬಯಕೆ ಕೆಲಮಟ್ಟಿಗೆ ಮಾನವರ ಮನಸ್ಸನ್ನು ಆವರಿಸಿರುತ್ತದೆ. ಲಂಗುಲಗಾಮಿಲ್ಲದೆ ಅರ್ಥ ಕಾಮಗಳು ನಮ್ಮ ಮೇಲೆ ಸವಾರಿ ಮಾಡಲು ಅವಕಾಶಗಳನ್ನು ನೀಡುವುದರ ಮೂಲಕ ಮಾನವ ಪೈಶಾಚಿಕ ಪ್ರವೃತ್ತಿ ಬೆಳಸಿಕೊಳ್ಳಬಾರದು. ಮಾನವನಲ್ಲಿನ ಈ ಪೈಶಾಚಿಕ ಪ್ರವೃತ್ತಿ ತಡೆಗಟ್ಟಲು ನಾವು ಮಾರ್ಗೋಪಾಯಗಳನ್ನು ಕಂಡುಹಿಡಿಯಬೇಕಾಗಿದೆ. ಆದ್ದರಿಂದಲೇ, ಅರ್ಥಕಾಮಗಳಲ್ಲಿ ತೊಡಗುವಿಕೆಯಿಂದ ಅವುಗಳನ್ನು ತೃಪ್ತಿಗೊಳಿಸಲಾಗದು ಎಂದು ಹೇಳಿರುವುದು. ಎರಡನೆಯದಾಗಿ ಅರ್ಜನೆಯಿಂದ ಸುಖಸಂತೋಷಗಳಿವೆ ಎನ್ನುವುದು ಒಂದು ಭ್ರಮೆಯಷ್ಟೆ. ಏಕೆಂದರೆ ಕೇವಲ ಅರ್ಥಕಾಮಗಳೇ ಸುಖ ಸಂತೋಷಗಳನ್ನು ನೀಡುವುದಿಲ್ಲ. ಸಂತೋಷ ವ್ಯಕ್ತಿಯೊಳಗೇ ಅಂತರ್ಗತವಾಗಿರುವಂಥಾದ್ದು. ಅದು ಹೊರಗಿನದಲ್ಲ. ಸುಖಸಂತೋಷಗಳು

ಹೊರಗಿನಿಂದ ಪ್ರಾಪ್ತವಾಗುತ್ತವೆ ಎಂದು ನಾವು ಅಜ್ಞಾನದಿಂದ ಬಾಹ್ಯ ಪ್ರಪಂಚಕ್ಕೆ ಈ ಗುಣಲಕ್ಷಣಗಳನ್ನು ಆರೋಪಿಸುತ್ತೇವೆ. ಆದರೆ ವಾಸ್ತವವಾಗಿ ನಮ್ಮೊಳಗೇ ಅನಂತಾನಂತವಾಗಿರುವ ಪರಮಾನಂದ, ಪರಮಸುಖಗಳನ್ನು ಸವಿಯುವ ಮಾಧ್ಯಮವಾಗಿ ಬಾಹ್ಯಪ್ರಪಂಚದ ವಸ್ತುಗಳನ್ನು ಬಳಸುತ್ತೇವೆ.

ತನ್ನೊಳಗಣ ಈ ಪರಮಾನಂದವನ್ನು ಅನುಭವಿಸಬೇಕಾದ್ದು ಮಾನವ ಕುಲದ ವಿಧಿಯೇ ಆಗಿದೆ. ಇದು ನಮ್ಮ ಋಷಿಗಳು ಪ್ರತಿಪಾದಿಸಿರುವ ಮೂಲತತ್ವ. ಯಾರು ಲೌಕಿಕ ಬಂಧನಗಳಿಂದ ಮುಕ್ತರಾಗುವರೋ, ಯಾರು ಬಾಹ್ಯ ಪ್ರಪಂಚದ ಆಕರ್ಷಣೆಗಳಿಂದ ಪ್ರಭಾವಿತರಾಗದೆ ಉಳಿಯುವರೋ ಅಂಥವರಿಂದ ಶಾಶ್ವತವಾದ ಪರಮಾನಂದ ಸ್ಥಿತಿಯನ್ನು ಮುಟ್ಟುವುದು ಸಾಧ್ಯ. ಅಂಥವರು ಮುಕ್ತಾತ್ಮರು ಇದು ಮಾನವನ ಅಂತಿಮಗುರಿ. ಆದರೆ ಈ ಗುರಿ ತಲುಪುವವರೆಗೆ ಮಾನವ ಪ್ರಾಪಂಚಿಕ ಬಯಕೆಗಳನ್ನು ತಣಿಸಲು ಏನಾದರೂ ಮಾಡುತ್ತಲಿರಬೇಕಾಗುತ್ತದೆ. ಆದರೆ ಇಂಥ ಪ್ರಯತ್ನಗಳಲ್ಲಿ ಮಾನವ ತನ್ನ ಇತಿಮಿತಿಗಳನ್ನು ಅರ್ಥ ಮಾಡಿಕೊಳ್ಳಬೇಕಾದ್ದು ಅಗತ್ಯ ಹಾಗೂ ಇಂಥ ತಣಿಸುವ ಪ್ರಯತ್ನಗಳು ಸಭ್ಯತೆಯ ಎಲ್ಲೆಯನ್ನು ಮೀರಬಾರದು.

ಈ ಗುರಿ ತಲುಪಲು ಧರ್ಮ ಮಾರ್ಗ ಅನುಸರಿಸುವಂತೆ ನಮಗೆ ಬೋಧಿಸಲಾಗಿದೆ. ಧರ್ಮಕ್ಕೆ ಹಲವಾರು ಅರ್ಥ ವ್ಯಾಖ್ಯಾನಗಳುಂಟು. ಹೆಚ್ಚು ವ್ಯಾಪಕವಾಗಿ ಅಂಗೀಕರಿಸಲ್ಪಟ್ಟಿರುವ ಒಂದು ವ್ಯಾಖ್ಯಾನ ಹೀಗೆ ಹೇಳುತ್ತದೆ:

> ಮನುಷ್ಯನಿಗೆ ಸುಖಸಂತೋಷಗಳನ್ನು ಅನುಭವಿಸಲು ಮನಸ್ಸಿನ ತನ್ಮಯತೆ ಹಾಗೂ ಮನಶ್ಶಾಂತಿ ಹೇಗೆ ಅಗತ್ಯವೋ ಹಾಗೇಯೇ ಮನುಷ್ಯ ಸುರಕ್ಷಿತವಾದ, ಸುಭದ್ರತೆಯಿಂದ ಕೂಡಿದ ಬಾಳ್ವೆ ನಡೆಸಲು ಸುವ್ಯವಸ್ಥಿತ ಸಮಾಜವೊಂದರ ಅಗತ್ಯವಿದೆ. ಸಮಾಜ ಸುವ್ಯವಸ್ಥಿತವಾಗಿದ್ದರೆ. ಸುಸಂಘಟಿತವಾಗಿದ್ದರೆ ವಿವಿಧ ಬಗೆಯ ಜನರು ತಮ್ಮ ವೃತ್ತಿಗಳನ್ನು ಮುಂದುವರಿಸಿಕೊಂಡು ಹೋಗುವುದು ಸಾಧ್ಯವಾಗುತ್ತದೆ. ಹಾಗೆಯೇ ಅಭಿವೃದ್ಧಿ ಭದ್ರತೆಗಳಿಂದ ಕೂಡಿದ ಉದಾತ್ತ ಜೀವನಕ್ಕೆ ಪ್ರೇರಣೆ–ಪ್ರಚೋದನೆಗಳನ್ನು ನೀಡಲು ಸಾಧ್ಯವಾಗುತ್ತದೆ. ಪರಸ್ಪರ ಸಹಕಾರ ಮನೋಭಾವದಿಂದ ಇಡೀ ಸಮಾಜ ಘನತೆಯಿಂದ ಉದಾತ್ತ ಜೀವನ ನಡೆಸುವುದು ಸಾಧ್ಯವಾಗಬೇಕು. ಅದೇ ಧರ್ಮ.

ಸಮಾಜದ ಪಾಲನೆ ಪೋಷಣೆಗೆ ಅಗತ್ಯವಾದಂಥ ಪರಿಸ್ಥಿತಿಯನ್ನು, ವಾತಾವರಣವನ್ನು ಸೃಷ್ಟಿಸುವುದು ಧರ್ಮದ ಮೊದಲ ಕರ್ತವ್ಯ. ಧರ್ಮದ ಪ್ರಕಾರ ನಡೆದುಕೊಳ್ಳುವಂತೆ ಮನುಷ್ಯರನ್ನು ಪ್ರೇರೇಪಿಸುವುದು ಎರಡನೆಯ ಕರ್ತವ್ಯ.

ನಮ್ಮ ಪವಿತ್ರ ಗ್ರಂಥಗಳು ಹೇಳುತ್ತವೆ :



> **"ವೇದಗಳನ್ನು ಅನುಸರಿಸುವ ಮೂಲಕ ನಮ್ಮ ಪವಿತ್ರಗ್ರಂಥಗಳಲ್ಲಿನ ಮೂಲತತ್ತ್ವಗಳನ್ನು ಆಚರಿಸುವುದರ ಮೂಲಕ, ನಿಜವಾದ ನಿಷ್ಕಪಟವಾದ ಶ್ರದ್ಧಾಭಕ್ತಿಗಳ ಚಿಂತನೆಯ ಮೂಲಕ ಧರ್ಮದ ಸುಶೀಲ, ಸದ್ಗುಣಗಳನ್ನು ಬೆಳೆಸಿಕೊಳ್ಳಬಹುದು."**

ಚಿರಂತನ ಸತ್ಯದ ಸಾಕ್ಷಾತ್ಕಾರಕ್ಕಾಗಿ ಅಗತ್ಯವಾದ ಚಟುವಟಿಕೆಗಳಲ್ಲಿ ತೊಡಗುವ ನಮ್ಮೊಳಗಿನ ಆತ್ಮವೂ ಧರ್ಮವೇ.

ಇದನ್ನು ಸಾಧಿಸಲು ನಾವು ಹಲವಾರು ಸದ್ಗುಣಗಳನ್ನು, ಋಜುತ್ವವನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಹಾಗೂ ಅವುಗಳನ್ನು ನಿತ್ಯಜೀವನದಲ್ಲಿ ಪ್ರತ್ಯಕ್ಷವಾಗಿ ನಡೆದು ತೋರಿಸುವ ಪ್ರಯತ್ನ ಮಾಡಬೇಕಾಗುತ್ತದೆ. ನಮ್ಮ ಧರ್ಮಗ್ರಂಥಗಳಲ್ಲಿ ಈ ಸದ್ಗುಣಗಳನ್ನು ದೀರ್ಘವಾಗಿ ವಿವರಿಸಲಾಗಿದೆ. ಸದಾಚಾರದ ನಡವಳಿಕೆಗೆ ಹತ್ತು ದಿವ್ಯಗುಣಗಳನ್ನು ರೂಢಿಸಿಕೊಳ್ಳುವಂತೆ ನಮಗೆ ಉಪದೇಶಿಸಲಾಗಿದೆ. ನಾವು ಸಾಧಿಸಬೇಕಾದ ವಿವಿಧ ಸದ್ಗುಣಗಳನ್ನು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಇದನ್ನು ನಾವು ಓದಬೇಕು, ಮನನಮಾಡಬೇಕು ಮತ್ತು ಅವುಗಳನ್ನು ಕುರಿತು ಧ್ಯಾನಮಾಡಬೇಕು. ಈ ಸದ್ಗುಣಗಳು ನಮ್ಮಲ್ಲಿವೆಯೇ ಎಂದು ಆತ್ಮಾವ ಲೋಕನ–ಮಾಡಿಕೊಳ್ಳಬೇಕು. ಕೊರತೆ ಏನಾದರೂ ಇದ್ದಲ್ಲಿ ಕೊರತೆ ನೀಗಲು ಪ್ರಯತ್ನಿಸಬೇಕು. ಕೊರತೆಯನ್ನು ತುಂಬಿಕೊಳ್ಳಬೇಕು. ಕೆಟ್ಟದ್ದಕ್ಕೆ ನಾವು ಬೆನ್ನುತಿರುಗಿಸೋಣ. ನಮ್ಮ ಬುದ್ಧಿಶಕ್ತಿಯನ್ನು ಶಿಸ್ತಿಗೊಳಪಡಿಸೋಣ. ಈ ರೀತಿ ಸಮಗ್ರವಾದ ಸುವ್ಯವಸ್ಥಿತವಾದ ಬಾಳ್ವೆ ನಡೆಸುವಂತೆ ಎಲ್ಲರಿಗೂ ಉಪದೇಶಿಸಲಾಗಿದೆ.

ನಮ್ಮ ಭಾವನೆಗಳನ್ನು, ರಾಗೋದ್ವೇಗಗಳನ್ನು, ದುಷ್ಟ ಪ್ರವೃತ್ತಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ಮೂಲಕ ಆರೋಗ್ಯಪೂರ್ಣವಾದ, ಸಮತೂಕದ ಮನಃಸ್ಥಿತಿಯನ್ನು ಹೊಂದಿರುವುದೂ 'ಧರ್ಮ' ನಿರ್ವಹಣೆಯೇ. ಧರ್ಮದ ಅರ್ಥವೂ ಇದೇ ಆಗಿದೆ. ಧರ್ಮವನ್ನು ಬದುಕಿನ ಮೂಲ, ಅಸ್ತಿಭಾರ ಎಂದು ಪರಿಗಣಿಸಿ ಅದರ ಪ್ರಕಾರ 'ಅರ್ಥ' ಮತ್ತು 'ಕಾಮ'ಗಳಿಗೆ ಆದೇಶಿಸಬೇಕು. ಸದ್ಗುಣಗಳನ್ನು, ಋಜುತ್ವವನ್ನು ಅಳವಡಿಸಿಕೊಂಡು ನಮ್ಮ ನಡಾವಳಿ ಮೂಲಕ ಅವನ್ನು ಪ್ರಕಟಗೊಳಿಸಬೇಕು ಹಾಗೂ ಅಂತಿಮ ಗುರಿಯಾದ ಮೋಕ್ಷದ ಮಾರ್ಗದಲ್ಲಿ ನಡೆಯಬೇಕು. ಮೋಕ್ಷ ಬದುಕಿನ ಪುರುಷಾರ್ಥಗಳಲ್ಲಿ ಕೊನೆಯದು. ಇದಿಷ್ಟು ಬದುಕಿನ ಒಂದು ಸಚಿತ್ರನೋಟ. ಸಂಕ್ಷಿಪ್ತವಾಗಿ ಹೇಳುವುದಾದರೆ ಇದೇ ಅಖಂಡ ಮಾನವನ ಪರಿಕಲ್ಪನೆ. ಇದನ್ನು ಸಾಧಿಸಲು ದೃಢಮನೋಭಾವ ಇರಬೇಕು. ದೃಢತೆಯಿಂದ ಮಾಡಬೇಕಾದ ಕಾರ್ಯವಿದು. ಅರ್ಥ ಕಾಮಗಳಲ್ಲೇ ಮುಳುಗಿ ಹೋದ ವ್ಯಕ್ತಿ ವಿಷಯ ಲೋಲುಪ, ವ್ಯಸನಿ. ಏಕಾತ್ಮ ಮಾನವ ಪರಿಕಲ್ಪನೆ ಎಂದರೇನು? ನೋಡೋಣ:

- **ಸಮಾಜದ ಪಾಲನೆ ಪೋಷಣೆ ಕುರಿತು ಚಿಂತಿಸುವವನು;**
- **ಸಮಾಜದ ಏಕತೆ, ಸಮಗ್ರತೆಗಳಿಗೆ ಅಗತ್ಯವಾದ ಗುಣಗಳನ್ನು ಹೊಂದಿರುವವನು;**
- **ಸಮಾಜದ ಸಮತೋಲಕ್ಕೆ ಧಕ್ಕೆಯಾಗದಂತೆ ಐಶ್ವರ್ಯ ಗಳಿಸಿ ಸುಖ–ಸಂತೋಷಗಳ ಬದುಕನ್ನು ನಡೆಸುವವನು;**
- **ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ತನ್ನಿಚ್ಛೆಗನುಗುಣವಾದ ಭಕ್ತಿಮಾರ್ಗವನ್ನು ಅನುಸರಿಸುವವನು.**
- **ಯಾವುದೇ ರೂಪದಲ್ಲಿ ಭಗವಂತನ ಆರಾಧನೆ ಮಾಡುವವನು.**
- **ಬದುಕಿನ ಅಂತಿಮ ಗುರಿಗಾಗಿ ಪ್ರಯತ್ನಿಸುವವನು.**

– ಇದು ಏಕಾತ್ಮ ಮಾನವ ಪರಿಕಲ್ಪನೆ ಯಾರು ಇದನ್ನೆಲ್ಲ ಪಾಲಿಸುತ್ತಾರೋ ಅವನೇ ಏಕಾತ್ಮ ಮಾನವ.

ಸ್ಪರ್ಧೆ, ಪೈಪೋಟಿ, ಕಲಹ, ಘರ್ಷಣೆಗಳಿಂದ ಛಿದ್ರಛಿದ್ರವಾಗಿರುವ ಇಂದಿನ ಪ್ರಪಂಚದಲ್ಲಿ ಭ್ರಾತೃತ್ವ ಭಾವನೆ ಸಂಪೂರ್ಣವಾಗಿ ಮಾಯವಾಗಿದೆ. ಈ ವಿಷಾದನೀಯ ಪರಿಸ್ಥಿತಿಯನ್ನು ಕೊನೆಗಾಣಿಸಿ, ಪ್ರಪಂಚದಲ್ಲಿ ಶಾಂತಿ ಸ್ಥಾಪಿಸಲು ನಾವು ನಾಲ್ಕು ಪುರುಷಾರ್ಥಗಳ ಮಾರ್ಗವನ್ನೇ ಅನುಸರಿಸಬೇಕಾಗುತ್ತದೆ. ಇದು ಹೊರತು ಅನ್ಯಮಾರ್ಗವಿಲ್ಲ. ಇದನ್ನು ಸಾಧಿಸಲು ನಾವು ಮಾಡಬೇಕಾದ ಮೊದಲ ಕೆಲಸವೆಂದರೆ ನಾವು ಯೋಗ್ಯರಾಗುವುದು. ನಾಲ್ಕು ಪುರುಷಾರ್ಥಗಳಲ್ಲೇ ಚಿರಂತನ ಸತ್ಯ ಅಡಗಿದೆ ಎಂದು ಜಗತ್ತಿಗೆ ಬೋಧಿಸುವ ಯೋಗ್ಯತೆಯನ್ನು ಪಡೆದುಕೊಳ್ಳುವುದು. ನಮ್ಮ ನಡೆ–ನುಡಿಗಳೇ ದೃಷ್ಟಾಂತವಾಗಬೇಕು. ನಮ್ಮ ನಡೆ–ನುಡಿ, ಆಚಾರ–ವಿಚಾರಗಳ ಮೂಲಕವೇ ಚಿರಂತನ ಸತ್ಯವನ್ನು ಕುರಿತು ಇಡೀ ಮನುಕುಲಕ್ಕೆ ಬೋಧನೆಮಾಡಬೇಕು.

ಇದು ಅತ್ಯವಶ್ಯಕವಾಗಿ ಆಗಬೇಕಾಗಿರುವ ಕೆಲಸ. ಪಾಶ್ಚಾತ್ಯ ರಾಷ್ಟ್ರಗಳನ್ನು ಮನಸೋಇಚ್ಛೆ ಕಪಿಗಳಂತೆ ಅನುಕರಣೆ ಮಾಡುವುದರಿಂದ ಈ ವಿಷಯದಲ್ಲಿ ಪ್ರಗತಿ ಸಾಧಿಸುವುದು ಸಾಧ್ಯವಾಗದು ಅಥವಾ ಲಂಗುಲಗಾಮಿಲ್ಲದೆ ಅರ್ಥಕಾಮಗಳ ತುಷ್ಟೀಕರಣದಲ್ಲಿ ತೊಡಗುವುದರಿಂದಲೂ ಇದನ್ನು ಸಾಧಿಸಲಾಗದು. ಈ ಎರಡು ಪ್ರವೃತ್ತಿಗಳನ್ನು ಹದ್ದುಬಸ್ತಿನಲ್ಲಿಡಲು ನಾವು ಮಾರ್ಗೋಪಾಯಗಳನ್ನು ರೂಪಿಸಬೇಕಾಗಿದೆ. ಆಗ ನಾಲ್ಕು ಪುರುಷಾರ್ಥಗಳ ಅಡಿಪಾಯದ ಮೇಲೆ ನಿಂತ ಸುವ್ಯವಸ್ಥಿತ ಸಮಾಜದಲ್ಲಿ ಅವಕಾಶಗಳು ಒದಗಿಬರುತ್ತವೆ. ಇದರಿಂದ ಮಾತ್ರ ಇಡೀ ಪ್ರಪಂಚಕ್ಕೆ ಶುಭ ಸಾಧ್ಯವಾಗುತ್ತದೆ.

ತಮ್ಮಲ್ಲಿ ಮಾತ್ರ ವಿಶ್ವಸಿದ್ಧಾಂತವೊಂದಿದೆಯೆಂದು ಕಮ್ಯುನಿಸ್ಟರು ಕೊಚ್ಚಿಕೊಳ್ಳುತ್ತಿದ್ದಾರೆ. ಅದರ ಬಲದ ಮೇಲೆ ವಿಶ್ವದ ಶ್ರಮಜೀವಿಗಳೆಲ್ಲ ಒಗ್ಗೂಡಬೇಕೆಂದು ಕರೆನೀಡಿದ್ದಾರೆ. ಭಾರತೀಯ ತತ್ತ್ವಶಾಸ್ತ್ರ ದುಡಿಯುವ ವರ್ಗ.



ದುಡಿಯದ ವರ್ಗ ಎಂದು ಭೇದ ಭಾವ ಮಾಡುವುದಿಲ್ಲ. ಚತುರ್ವಿಧ ಪುರುಷಾರ್ಥಗಳನ್ನು ಅನುಸರಿಸುವ ಮೂಲಕ ಏಕಾತ್ಮ ಮಾನವನಾಗಿ ಬೆಳೆಯುವಂತೆ ಭಾರತೀಯ ತತ್ವಶಾಸ್ತ್ರ ಪ್ರತಿಯೊಬ್ಬ ವ್ಯಕ್ತಿಗೂ ಕರೆನೀಡುತ್ತದೆ. ಆದ್ದರಿಂದಲೇ, ನಮ್ಮ ಸಾಂಪ್ರದಾಯಿಕ ಮೌಲ್ಯಗಳು ಮತ್ತು ಸಂಸ್ಕೃತಿಯಲ್ಲಿ ಭೇದ ಭಾವ ಮಾಡದೆ ಇಡೀ ಮನುಕುಲಕ್ಕೆ ಉಪದೇಶಿಸುವ ಅಂತರ್ಗತ ಶಕ್ತಿ ಇದೆಯೆಂದು ನಾವು ಹೇಳುತ್ತಿರುವುದು. ನಮ್ಮಲ್ಲಿ ಪ್ರತಿಯೊಬ್ಬರೂ ಈ ಸಾಮರ್ಥ್ಯವನ್ನು ಗಳಿಸಲು, ಈ ಉದಾತ್ತ ಕೆಲಸಕ್ಕಾಗಿ, ವಿಶ್ವ ಕಲ್ಯಾಣದ ಕಾರ್ಯಕ್ಕಾಗಿ ಸಜ್ಜಾಗಬೇಕು. ಆಗ ಮಾತ್ರ ಸುವ್ಯವಸ್ಥಿತವಾದ, ಸುಸಂಗತವಾದ, ಸುದೃಢವಾದ ಸಮಾಜ ನಿರ್ಮಿಸುವ ದಿವ್ಯ ಕಾಯಕದಲ್ಲಿ ನಾವು ಉತ್ತಮ ಸಾಧನವಾಗುತ್ತೇವೆ, ನಿಮಿತ್ತವಾಗುತ್ತೇವೆ. ಇಂಥ ಸಮಾಜದಲ್ಲಿ ಮಾನವರು ಸತ್ಯನಿಷ್ಠರಾಗಿರುತ್ತಾರೆ. ಆತ್ಮವಿಶ್ವಾಸ ಹೊಂದಿರುತ್ತಾರೆ ಹಾಗೂ ಇವತ್ತಿನ ಅಗತ್ಯವಾದ ಚತುರ್ವಿಧ ಪುರುಷಾರ್ಥಗಳ ಸಮರ್ಥ ಅನುಚರರಾಗಿರುತ್ತಾರೆ.

ನಮ್ಮ ತತ್ವಸಿದ್ಧಾಂತಗಳು ವಿಚಾರಗಳು, ಕಲ್ಪನೆಗಳು ಎಷ್ಟೇ ಘನವಾದುದಾದರೂ ಕೇವಲ ಘೋಷಣೆಯಿಂದ, ನಾವು ಅವುಗಳನ್ನು ಜಗಜ್ಜಾಹೀರಗೊಳಿಸುವದಷ್ಟರಿಂದಲೇ ವಿಶ್ವ ಅದನ್ನು ಅನುಸರಿಸುವುದಿಲ್ಲ ಅಧಿಕಾರ ಮದದಿಂದಾಗಿ ಹಾಗೂ ಮಿತಿಮೀರಿದ ಐಶ್ವರ್ಯ, ಸುಖ–ಭೋಗಗಳಿಂದಾಗಿ ಮಾನವ ಕುಲದ ಸದ್ಗುಣಗಳು ಹಾಗೂ ಸಂಭಾವಿತತನಗಳನ್ನು ಸಂಪೂರ್ಣವಾಗಿ ಅಲಕ್ಷಿಸಿರುವ ವಿಶ್ವಕ್ಕೆ ನಮ್ಮ ಉದಾತ್ತ ತತ್ತ್ವಗಳನ್ನು ವಿವರಿಸಿ ಹೇಳುವುದರಿಂದ ಏನೂ ಪ್ರಯೋಜನವಾಗದು. ಸತ್ಯವನ್ನು ಪಾಲಿಸುವಂತೆ ಅವರ ಮನ ಒಲಿಸುವ ಪ್ರಯತ್ನದಲ್ಲಿ ಶಕ್ತಿ ಪ್ರಯೋಗವನ್ನೂ ಮಾಡಬೇಕಾಗಬಹುದು. ಇದರಿಂದ ಅವರಲ್ಲಿನ ಮೃಗೀಯ ಪ್ರವೃತ್ತಿಗಳನ್ನು ದಮನಗೊಳಿಸುವುದು ಸಾಧ್ಯವಾದೀತು. ಮನುಷ್ಯರಲ್ಲಿ ಇಂದು ಮೃಗೀಯ ಪ್ರವೃತ್ತಿ ಮೇಲುಗೈಯ್ಯಾಗಿರುವುದನ್ನು ನಾವು ನೋಡುತ್ತಿದ್ದೇವೆ. ಮನುಷ್ಯ ಇಂದು ಸಾಕು ಪ್ರಾಣಿಯನ್ನೂ ಮೀರಿದವನಾಗಿದ್ದಾನೆ. ಯಾರಲ್ಲಿ ಆತ್ಮಶಕ್ತಿ, ಅಂತರ ಬಹಿರಂಗ ಶಕ್ತಿ ಸಾಮರ್ಥ್ಯಗಳಿವೆಯೋ ಅಂಥವರಿಗೆ ಮಾತ್ರ ಇಂದ್ರಿಯಗಳ ಮೇಲೆ ಋಜುತ್ವ ಬೆಳೆಸಿಕೊಳ್ಳುವುದು, ಬೇರೆಯವರ ಮೇಲೆ ಪ್ರಭಾವ ಬೀರುವುದು ಸಾಧ್ಯ. ಅಂಥವರು ಆತ್ಮಶಕ್ತಿಯಿಂದಾಗಿ ಮಾರ್ಗದರ್ಶನ ಮಾಡಬಲ್ಲರು. ಇಂಥ ಋಜುತ್ವ, ಗುಣಾಢ್ಯತೆಗಳನ್ನುಳ್ಳ ವ್ಯಕ್ತಿಗಳನ್ನು ನಾವು ರೂಪಿಸಬೇಕು. ಇದು ನಮ್ಮ ಅಂತಿಮ ಗುರಿಯಾಗಬೇಕು. ಇದನ್ನು ಗುರಿಯಾಗಿಟ್ಟುಕೊಂಡು ಸಮಾಜವನ್ನು ಸಬಲವಾಗಿಸಬೇಕು, ಸಶಕ್ತವನ್ನಾಗಿಸಬೇಕು. ಸುವ್ಯವಸ್ಥಿತ ಸಮಾಜವನ್ನು ಕಟ್ಟಬೇಕು. ಈ ಮಾರ್ಗದಲ್ಲಿ ಮಾತ್ರ ಭೋಗರಹಿತವಾದ, ಸಂಪದ್ಯುಕ್ತವಾದ ಸಂತಸಭರಿತ ಸಮಾಜ ನಿರ್ಮಾಣ ಸಾಧ್ಯ. ಸಮಾಜ ಅಭಿವೃದ್ಧಿಶೀಲವಾಗಿರಬೇಕು ಆದರೆ ಗುರಿಗಮ್ಯತೆಗಳಿಲ್ಲದಿರಬಾರದು.

ಇಂಥ ಉದಾತ್ತ ತತ್ವಸಿದ್ಧಾಂತಗಳಿಂದ ಪ್ರೇರಿತರಾಗಿ ನಾವು ಜನರನ್ನು ಪೈಶಾಚಿಕ ಪ್ರವೃತ್ತಿಗಳಿಂದ ಮುಕ್ತರನ್ನಾಗಿಸಬೇಕು; ಕಪಿಗಳಂತೆ ಪಾಶ್ಚಾತ್ಯರನ್ನು ಅನುಕರಿಸುವ ಪ್ರವೃತ್ತಿಯಿಂದ ಮುಕ್ತರನ್ನಾಗಿಸಬೇಕು. ಇಂಥ ಪ್ರೇರಣೆ ಪ್ರೋತ್ಸಾಹಗಳಿಂದ ತಮ್ಮದೇ ಆದ ದಿವ್ಯ ಪ್ರಕೃತಿಯನ್ನು ದೈವೀಪ್ರಕೃತಿ–ಪ್ರವೃತ್ತಿಗಳನ್ನು ಬೆಳಸಿಕೊಳ್ಳುವಂತೆ ಮಾರ್ಗದರ್ಶನ ಮಾಡಬೇಕು. ಆಗ ಮಾತ್ರ ಅವರೂ ನಮ್ಮ ದೇಶಕ್ಕೆ, ಸಮಾಜಕ್ಕೆ ಮತ್ತು ಮನುಕುಲಕ್ಕೆ ದಾರಿ ತೋರಿಸುವ ವಿವೇಕ ಸಾಮರ್ಥ್ಯಗಳನ್ನು ಗಳಿಸುತ್ತಾರೆ. ಯಾರು ಈ ಕಾಯಕವನ್ನು ತಮ್ಮ ಜೀವಿತದ ಧ್ಯೇಯವನ್ನಾಗಿ ಅಂಗೀಕರಿಸುವರೋ ಅಂಥವರು ಮಾತ್ರ ಮನುಕುಲದ ಸೇವಕರಾಗುವುದು ಸಾಧ್ಯ. ಅಂಥವರು ದೇಶಕ್ಕೆ ಮಹಾನ್ ಉಪಕಾರಿಗಳಾಗುತ್ತಾರೆ. ನಾವೆಲ್ಲ ಇಂಥ ಪ್ರಯತ್ನದಲ್ಲಿ ತೊಡಗಿದಲ್ಲಿ ಅದು ಆದರ್ಶಪ್ರಾಯವಾಗುತ್ತದೆ. ಏಕಾತ್ಮ ಮಾನವದರ್ಶನದ ಪ್ರತಿಪಾದಕರಾದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು ಘನ ಚಿಂತಕರಾಗಿದ್ದರು. ತತ್ವಜ್ಞಾನಿಯಾಗಿದ್ದರು. ಇಂಥ ಏಕಾತ್ಮ ಮಾನವನ ಸೃಷ್ಟಿ ಅವರ ಧ್ಯೇಯವಾಗಿತ್ತು. ಪವಿತ್ರ ಕಾರ್ಯಭಾರವಾಗಿತ್ತು.



# ೬. ಏಕಾತ್ಮ ಮಾನವದರ್ಶನ

## ಒಂದು ಅಧ್ಯಯನ

**– ಡಿ.ಬಿ. ಠೇಂಗಡಿ***

ಏಕಾತ್ಮಮಾನವದರ್ಶನದ ಪರಿಕಲ್ಪನೆ–ಮನುಕುಲಕ್ಕೆ ಪಂಡಿತ್‌ಜೀ ಅವರ ಮೌಲಿಕ ಕೊಡುಗೆ. ರಾಜಕೀಯದಲ್ಲಿ ಕಟ್ಟುವ–ಕೆಡಹುವ ಕಾರ್ಯಚಟುವಟಿಕೆಗಳಲ್ಲಿ ನಿರತರಾಗಿರುವವರು ಪಂಡಿತಜೀ ಅವರ ಅಖಂಡ ಮಾನವತಾವಾದವನ್ನು ಮತ್ತೊಂದು ಹೊಸ ಇಸಂ ಅಥವಾ ಒಂದು ಸಿದ್ಧಾಂತ ಅಥವಾ ಹಾಲಿ ಇರುವ ಎಲ್ಲ ಇಸಂಗಳಿಗೆ ಪ್ರತಿಯಾಗಿ ನಿರೂಪಿಸುತ್ತಿರುವ ಇನ್ನೊಂದು ತತ್ತ್ವಸಿದ್ಧಾಂತ ಎಂದು ಹುಬ್ಬೇರಿಸಬಹುದು. ಸಿದ್ಧಾಂತವೊಂದರ ಅಥವಾ ರಾಜಕೀಯ ಚಿಂತನೆಯೊಂದರ ಪ್ರತಿಪಾದಕರು ಅದರ ಸ್ವಂತಿಕೆ, ಸ್ವೋಪಜ್ಞತೆಗಳನ್ನು ಸಮರ್ಥಿಸಿಕೊಳ್ಳುತ್ತಾರೆಂಬುದು ಎಲ್ಲರಿಗೂ ತಿಳಿದ ವಿಷಯ. ಪಶ್ಚಿಮದಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ಪ್ರಸ್ತುತ ಚಿಂತನೆಗಿಂತ ಸ್ವಲ್ಪ ವಿಭಿನ್ನವಾಗಿದ್ದರೂ ಅದು ಹೊಸ ಸಿದ್ಧಾಂತವೆಂದೂ ಅದರ ಸೃಷ್ಟಿಕರ್ತ ತಾನೆಂದೂ ಜನ ಹೇಳಿಕೊಳ್ಳುತ್ತಾರೆ. ಆದರೆ ಇಂಥ ಯಾವ ಅಲೋಚನೆಗಳೂ ಪಂಡಿತ್‌ಜಿ ಅವರ ಮನಸ್ಸಿನಲ್ಲಿ ಸುಳಿಯಲಿಲ್ಲ. ಸಂಸ್ಕೃತಿಯ ಕಟ್ಟಾ ಸಮರ್ಥಕರಾಗಿದ್ದ ಅವರು ಇಂಥ ಸಂಕುಚಿತ ಭಾವನೆಗಳಿಗೆಡೆ ಕೊಟ್ಟಿರಲಿಲ್ಲ. ನಿಜವಾದ ಜ್ಞಾನ ಕಾಲಾತೀತವಾದದ್ದು, ಶಾಶ್ವತವಾದದ್ದು ಎಂದು ಭಗವದ್ಗಿತೆಯಲ್ಲಿ ಶ್ರೀಕೃಷ್ಣ ಹೇಳಿರುವುದನ್ನು ಅವರು ನಂಬಿದ್ದರು. ಸಂದರ್ಭ ಸನ್ನಿವೇಶಗಳಿಗನುಸಾರವಾಗಿ ಕೆಲವೊಮ್ಮೆ ವ್ಯಕ್ತವಾದ ಅಭಿಪ್ರಾಯಗಳಲ್ಲಿ ಭಿನ್ನತೆ ಇರಬಹುದು. ಅಂದ ಮಾತ್ರಕ್ಕೆ ಅಂಥ ಭಿನ್ನತೆಯನ್ನೇ ಹೊಸಜ್ಞಾನದ ಸೃಷ್ಟಿ ಎಂದು ಕರೆಯಲಾಗದು. ತಮ್ಮ ಸೃಜನಶೀಲ ಸಾಮರ್ಥ್ಯ ಮತ್ತು ಸಕಾರಾತ್ಮಕ ದೃಷ್ಟಿಕೋನಗಳಿಂದಾಗಿ ಪಂಡಿತ್‌ಜಿ ಸತ್ಯ ಹಾಗೂ ಚಿರಂತನವಾದ ಚಿಂತನೆಗಳಿಗೆ ಹೊಸ ಕಾಂತಿ ತಂದುಕೊಟ್ಟರು ಹಾಗೂ ಸತ್ಯ ಮತ್ತು ಚಿರಂತನವಾದ ಚಿಂತನೆಗಳನ್ನು

---

* ದೀನ್ ದಯಾಳ್ ಉಪಾಧ್ಯಾಯ ಸ್ಮಾರಕ ಶಿಕ್ಷಣ ಸಮಿತಿ ೧೯೭೭೦ರ ಫೆಬ್ರುವರಿಯಲ್ಲಿ ಕಾನ್ಪುರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಠೇಂಗಡಿಯವರ ಉಪನ್ಯಾಸದ ಭಾಷಾಂತರ.

ಬದಲಾದ ಸಮಕಾಲೀನ ವಿಶ್ವಕ್ಕೆ ಹೊಂದಿಕೊಳ್ಳುವಂತೆ ವ್ಯಾಖ್ಯಾನಿಸಿದರು. ಸವಾಲುಗಳನ್ನು ಎದುರಿಸಲು ಸಮರ್ಥವಾಗುವಂತೆ ಅಥವಾ ಸಿದ್ಧಾಂತಗಳನ್ನು ಪರಿಪೂರ್ಣಗೊಳಿಸುವ ಉದ್ದೇಶದಿಂದ ಅಖಂಡ ಮಾನವತಾವಾದದ ಪರಿಕಲ್ಪನೆಯನ್ನು ನಿರೂಪಿಸಲಾಯಿತು ಎನ್ನುವುದು ಸ್ಪಷ್ಟವಾಗುತ್ತದೆ. ಸಮಾಜದಲ್ಲಿರುವ ಸೈದ್ಧಾಂತಿಕ ಕಡುಕೋಪ ತಾಪಗಳಿಗೆ ಆಜ್ಯ ಹೊಯ್ಯುವುದಾಗಲೀ ಅಥವಾ ಅವುಗಳನ್ನು ಅನಾಮತ್ತಾಗಿ ತಿರಸ್ಕರಿಸುವುದಾಗಲೀ ಅವರ ಉದ್ದೇಶವಾಗಿರಲಿಲ್ಲ ಅಥವಾ ತಮ್ಮ ವಾದವನ್ನು ಮಂಡಿಸುವಾಗ ಸಮಕಾಲೀನ ಸಿದ್ಧಾಂತಗಳನ್ನು ಖಂಡಿಸುವ ಉದ್ದೇಶವೂ ಅವರಿಗಿರಲಿಲ್ಲ. ಇವೆಲ್ಲ ಅವರ ಆಲೋಚನಾಕ್ರಮದಿಂದ ಗಾವುದ ದೂರದಲ್ಲಿದ್ದವು.

**ಇಸಂ ಅಂದರೆ ಏನು? ಅಥವಾ ಅದು....**

ಪಂಡಿತ್‌ಜಿ ಎಲ್ಲ ಇಸಂಗಳನ್ನೂ ವಿರೋಧಿಸುತ್ತಿದ್ದರು. ಯಾವುದು ಸತ್ಯವೋ ಯಾವುದು ಚಿರಂತನವೋ ಅವುಗಳಿಂದ ಮಾತ್ರ ಬದಲಾವಣೆಯ ಸವಾಲುಗಳನ್ನು ಎದುರಿಸುವುದು ಸಾಧ್ಯ ಎಂದು ಅವರು ನಂಬಿದ್ದರು. ಇವುಗಳಿಂದ ಮಾತ್ರ ಯಾವುದೇ ಇಸಂನ ಉಕ್ಕಿನ ಚೌಕಟ್ಟಿಗೆ ಹೊಂದಿಕೊಳ್ಳುವುದು ಸಾಧ್ಯ ಎನ್ನುವುದು ಅವರ ಅನ್ನಿಸಿಕೆಯಾಗಿತ್ತು ಅಂದರೆ ಯಾವುದೇ ಇಸಂ ಎಲ್ಲ ರಾಷ್ಟ್ರಗಳ, ಎಲ್ಲ ಕಾಲದ ಪರಿಸ್ಥಿತಿಗೆ ಅನುರೂಪವೆನಿಸದೇ ಹೋಗಬಹುದು. ಹೀಗೆಂದೇ ಅವರು ಭಾವಿಸಿದ್ದರು. ಆದರೆ ಆಧುನಿಕ ಯುಗದಲ್ಲಿ ಜನ ಇಸಂ ಇಲ್ಲದೇ ಯೋಚಿಸಲಾರರು. ಇಸ್‌ಂ ಬಿಟ್ಟು ಮಾತನಾಡಲಾರರು. ಹೀಗಾಗಿ ಪಂಡಿತ್‌ಜಿ ತಮ್ಮ ಸಹೃದಯಿಗಳ ಅನುಕೂಲಕ್ಕಾಗಿ ಪ್ರಚಲಿತ ಇಸಂನ ಅಳವಡಿಸಿಕೊಂಡರು.

ಈ ಸಂಬಂಧದಲ್ಲಿ ಉದ್ಭವಿಸಬಹುದಾದ ಸಂದೇಹಗಳನ್ನು ನಿವಾರಿಸಲು ಪಂಡಿತ್‌ಜಿ ನಿರ್ಗುಣ ನಿರಾಕಾರ ಬ್ರಹ್ಮನ ವಿವರಣೆ ನೀಡುತ್ತಿದ್ದರು. ನಿರ್ಗುಣ ಅಥವಾ ನಿರಾಕಾರ ಬ್ರಹ್ಮನಲ್ಲಿ ಮನಸ್ಸನ್ನು ಸುಲಭದಲ್ಲಿ ಕೇಂದ್ರೀಕರಿಸಲಾಗದು. ಶುರುವಿಗೆ ಸಗುಣ ಸಾಕಾರಬ್ರಹ್ಮನಲ್ಲಿ ಮನಸ್ಸನ್ನು ಸ್ಥಿರಗೊಳಿಸಬೇಕು. ಸಗುಣ ಸಾಕಾರ ಬ್ರಹ್ಮನಲ್ಲಿ ಮನಸ್ಸನ್ನು ಕೇಂದ್ರೀಕರಿಸುವುದಕ್ಕೆ ಹೊಂದಿಕೊಂಡನಂತರ ನಿರ್ಗುಣನಿರಾಕಾರ ಬ್ರಹ್ಮನಲ್ಲಿ ಮನಸ್ಸನ್ನು ಕೇಂದ್ರೀಕರಿಸುವುದು ಸಾಧ್ಯವಾಗುತ್ತದೆ. ಆದ್ದರಿಂದ ಎಲ್ಲ ಇಸಂಗಳನ್ನೂ ಮೀರಿದ ವಾಸ್ತವವಾದ, ಚಿರಂತನವಾದ ಸತ್ಯವನ್ನು ಗ್ರಹಿಸಲು ಅಖಂಡ ಮಾನವತಾ ವಾದದ ಮಾಧ್ಯಮದ ಮೂಲಕ ಈ ಪ್ರಪಂಚದ ವಾಸ್ತವತೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

**ದ್ರಷ್ಟಾರ ತತ್ತ್ವಜ್ಞಾನಿಯಲ್ಲ**

ನಿರಂತರ ಚರ್ಚೆ, ಜಿಜ್ಞಾಸೆ, ಉಪನ್ಯಾಸ, ಸಂವಾದ ಇವು ತತ್ತ್ವಶಾಸ್ತ್ರಜ್ಞರ ಕರ್ತವ್ಯಗಳು. ಈ ಅರ್ಥದಲ್ಲಿ ಪಂಡಿತ್‌ಜಿ ತತ್ತ್ವಶಾಸ್ತ್ರಜ್ಞರಾಗಿರಲಿಲ್ಲ. ಆ ರೀತಿ



ಕರೆಯುವುದರಿಂದ ಅವರನ್ನು ತೃಣೀಕರಿಸಿದಂತಾಗುತ್ತದೆ. ಪ್ರಾಚೀನ ಕಾಲದ ಭಾರತೀಯ ಋಷಿ ಪರಂಪರೆಯಲ್ಲಿ ಅವರೊಬ್ಬ ತತ್ತ್ವದರ್ಶಿ, ದ್ರಷ್ಟಾರ. ಆದ್ದರಿಂದ ಅವರು ಏನೆಲ್ಲವನ್ನೂ ಗ್ರಹಿಸಿದರೋ ಏನೆಲ್ಲವನ್ನೂ ಕಂಡರೋ ಅವುಗಳನ್ನು ದರ್ಶನ ಎಂದು ಕರೆಯಬೇಕಾಗುತ್ತದೆ. ತತ್ತ್ವಶಾಸ್ತ್ರ ಎನ್ನುವ ಪದ ಭಾರತೀಯ ಪರಿಕಲ್ಪನೆಯ ತತ್ತ್ವಶಾಸ್ತ್ರದ ಪೂರ್ಣ ಅರ್ಥವನ್ನು, ಪೂರ್ಣ ಸಂದೇಶವನ್ನು ತಲುಪಿಸುತ್ತಿಲ್ಲ. ಈ ರೀತಿಯ ದರ್ಶನ ನಮಗೆ ಹೊಸತೇನೂ ಅಲ್ಲ ಅಥವಾ ನಮಗೆ ಅಪರಿಚಿತವಾದುದೂ ಅಲ್ಲ. ಅದು ನಮ್ಮ ನೆಲದಲ್ಲೇ ಉಚ್ಛ್ರಾಯವನ್ನು ಕಂಡಿದೆ. ಆದ್ದರಿಂದ ತತ್ತ್ವಶಾಸ್ತ್ರಜ್ಞ, ತತ್ತ್ವಜ್ಞಾನಿ ಈ ಪ್ರತ್ಯಯವನ್ನು ಹೆಸರಿಗೆ ಅಂಟಿಸುವ ಮುನ್ನ ಅದರ ಮೂಲಾರ್ಥವನ್ನು ತಿಳಿದುಕೊಳ್ಳುವುದು ಉಚಿತವಾದೀತು.

ಈ ಕಾಲಘಟ್ಟದಲ್ಲಿ, ಅಖಂಡ ಮಾನವೀಯತೆ ಎನ್ನುವ ಪರಿಕಲ್ಪನೆಯಾದರೂ ಏಕೆ ಬೇಕಿತ್ತು? ಅದರಲ್ಲೂ ಪಶ್ಚಿಮದಲ್ಲಿ ಹಲವಾರು ಇಸಂಗಳು ಜನ್ಮತಾಳಿ, ಅವು ಪ್ರಗತಿಶೀಲವಾದವು, ಪ್ರಗತಿಪರವಾದವು ಪ್ರಚುರಗೊಳ್ಳುತ್ತಿರುವ ಈ ಕಾಲ ಘಟ್ಟದಲ್ಲಿ ಇಂಥದೊಂದು ಪರಿಕಲ್ಪನೆಯ ಅವಶ್ಯಕತೆ ಇತ್ತೆ? ಇಡಿಯಾಗಿ ಇಸಂಗಳನ್ನು ಆಯಾತ ಮಾಡಿಕೊಂಡು ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು. ಹೀಗಿರುವಾಗ ಅನಗತ್ಯವಾಗಿ ತಲೆಕೆಡಿಸಿಕೊಳ್ಳುವುದೇಕೆ ಎಂದು ನಮ್ಮ ಜನರು ಹುಬ್ಬೇರಿಸುತ್ತಿದ್ದಾರೆ. ಪಾಶ್ಚಾತ್ಯ ಮೂಲವಾದುದೆಲ್ಲವನ್ನೂ ತಿರಸ್ಕರಿಸುವುದು ನ್ಯಾಯಯುತವಲ್ಲ. ಆದ್ದರಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕಳೆದ ಮೂರು ನಾಲ್ಕು ಶತಮಾನಗಳಲ್ಲಿ ಕೇಳಿಬಂದಿರುವ ಅದಕ್ಕೆ ವಿರುದ್ಧವಾಗಿ ಹುಟ್ಟಿಕೊಂಡಿರುವ ವಿಚಾರಸರಣಿಗಳನ್ನು ಸಂಕ್ಷಿಪ್ತವಾಗಿಯಾದರೂ ಪರಾಮರ್ಶಿಸಿ ನೋಡುವುದು ಉಪಯುಕ್ತ.

**ಪಾಶ್ಚಾತ್ಯ ಚಿಂತನೆ**

ಮೊದಲಿಗೆ ನಾವು ಜಾತಿ–ಪಂಗಡ– ಧರ್ಮಗಳ ಬಗ್ಗೆ ಪರ್ಯಾಲೋಚಿ–ಸೋಣ. ಐರೋಪ್ಯ ರಂಗದಲ್ಲಿ ಧರ್ಮದ ನಾಟಕಾಭಿನಯವಾಗುತ್ತಿದ್ದಾಗ ಇಡೀ ವ್ಯವಸ್ಥೆ ಅಥವಾ ಪದ್ಧತಿ ಕೇಂದ್ರಾಪಗಾಮಿಯಾಗಿತ್ತು. ಪೋಪ್ ಕೇಂದ್ರಬಿಂದುವಾಗಿದ್ದರು. ಇಡೀ ಕ್ರಿಶ್ಚಿಯನ್ ಪ್ರಪಂಚ ಪೋಪ್ ಸುತ್ತ ಸುತ್ತುತ್ತಿತ್ತು. ಆನಂತರ ಪೋಪ್ ಅವರ ಕೇಂದ್ರೀಕೃತ ಅಧಿಕಾರದ ವಿರುದ್ಧ ಎರಡು ಬಂಡಾಯಗಳಾದವು. ಧರ್ಮದ ಎರಡನೆಯ ಹಂತದಲ್ಲಿ ಸಾಧಕ–ಭಕ್ತ ಮತ್ತು ದೇವರ ನಡುವೆ ಪೋಪ್‌ರಂಥ ಮಧ್ಯಸ್ಥಿಕೆದಾರರ ಅಗತ್ಯವಿಲ್ಲ ಎನ್ನುವ ಪ್ರತಿಪಾದನೆ ಪ್ರಬಲಗೊಂಡಿತು. ಇದು ಪ್ರಾಟಸ್ಟೆಂಟರಂಥ ಒಳಪಂಗಡ ಹುಟ್ಟಿಕೊಳ್ಳಲು ಕಾರಣವಾಯಿತು. ಧಾರ್ಮಿಕ ವಿಷಯಗಳಿಗೆ ಸೀಮಿತಗೊಂಡ ಬಾಹ್ಯ ಶಕ್ತಿಗಳು ಸರ್ಕಾರದ ವಿದ್ಯಮಾನಗಳಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಎನ್ನುವ ಜನಾಭಿಪ್ರಾಯ ರೂಪುಗೊಂಡಿತು. ಹೀಗೆ

ರಾಷ್ಟ್ರೀಯತೆಯ ಪರಿಕಲ್ಪನೆಯ ಉದಯಿಸಿತು. ಮೂರನೆಯ ಹಂತದಲ್ಲಿ ಧರ್ಮದ ಅಸ್ತಿತ್ವವನ್ನೇ ಪ್ರಶ್ನಿಸುವುದನ್ನು, ಧರ್ಮದ ವಿರುದ್ಧ ಆಕ್ರಮಣವನ್ನು ನಾವು ಕಾಣುತ್ತೇವೆ. ಧರ್ಮಕ್ಕೆ ಅರ್ಥವಿಲ್ಲ, ಅದೊಂದು ಮನುಷ್ಯರನ್ನು ನಿಷ್ಕ್ರಿಯಗೊಳಿಸುವ ಅಫೀಮು ಇದ್ದಂತೆ ಎಂದು ಈ ಹಂತದಲ್ಲಿ ಧರ್ಮವನ್ನು ಜನ ತರಾಟೆಗೆ ತೆಗೆದುಕೊಂಡರು. ಮಾನವ ಶಕ್ತಿಗೆ ಅತೀತವಾದ ಅತಿಮಾನುಷ ಶಕ್ತಿ ಸತ್ಯಶೂನ್ಯವಾದದ್ದು, ಅದೊಂದು ಕಲ್ಪನೆಯಷ್ಟೆ ಎನ್ನುವ ತರ್ಕ ಶುರುವಾಯಿತು. ಪ್ರಪಂಚದ ಆದಿ–ಅಂತ್ಯ–ಮಧ್ಯ ಇವೆಲ್ಲವೂ ದೇವರಿಲ್ಲದ ಒಂದು ಭೌತ ದ್ರವ್ಯವಷ್ಟೆ. ಧರ್ಮ ಎನ್ನುವುದು ಭ್ರಮೆ ಹೊರತು ಬೇರೇನೂ ಅಲ್ಲ. ಭೌತದ್ರವ್ಯಗಳು ಮತ್ತು ಮೂಲಧಾತುಗಳು ನಿಸರ್ಗಜನ್ಯವಾದವು. ಮನಸ್ಸು ಕೂಡ ಭೌತದ್ರವ್ಯದ ತಳಹದಿಯ ಮೇಲಿನ ಒಂದು ನಿರ್ಮಾಣ ಎಂದು ಪರಿಗಣಿಸಲಾಗಿತ್ತು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಧರ್ಮ, ಸಂಸ್ಕೃತಿ, ನೀತಿ ಶಾಸ್ತ್ರ, ಇತ್ಯಾದಿಗಳಿಗೆಲ್ಲ ಸ್ವತಂತ್ರ ಅಸ್ತಿತ್ವ ಇಲ್ಲ. ಅವೆಲ್ಲ ಏನಿದ್ದರೂ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಬಿಂಬಗಳಷ್ಟೆ. ಹೀಗೆ ಮೂರನೆಯ ಹಂತದಲ್ಲಿ ಭೌತದ್ರವ್ಯವೇ ಮೂಲವಾಯಿತು. ಧರ್ಮವನ್ನು ಸಂಪೂರ್ಣವಾಗಿ ತಿರಸ್ಕರಿಸಲಾಯಿತು.

**ನಿರೀಶ್ವರವಾದಕ್ಕೆ ಪ್ರತಿಕ್ರಿಯೆ**

ಯೂರೋಪಿನಲ್ಲಿ ಐಹಿಕ ನಿರೀಶ್ವರವಾದಕ್ಕೆ ಉಂಟಾದ ಪ್ರತಿಕ್ರಿಯೆ ಮುಂದಿನ ಹಂತದ ಬೆಳವಣಿಗೆ. ಧರ್ಮ ಮತ್ತು ಚರ್ಚುಗಳ ಅವನತಿ ಬಗ್ಗೆ ಮಾರ್ಕ್ಸ್ ರೂಪಿಸಿರುವ ಅಭಿಪ್ರಾಯಗಳು ಆಗ ಅಲ್ಲಿದ್ದಿರಬಹುದಾದ ಪರಿಸ್ಥಿತಿಯಲ್ಲಿ ಎಷ್ಟೇ ಸುಸಂಗತವಾಗಿ ಕಂಡು ಬಂದರೂ ಈ ಅಭಿಪ್ರಾಯ ಪ್ರಪಂಚದಾದ್ಯಂತ ಸರ್ವಸಮ್ಮತವಾದದ್ದು, ಸರ್ವಾನ್ವಯವಾದದ್ದು ಅಥವಾ ವಿಶ್ವವ್ಯಾಪಕವಾದದ್ದು ಎಂದು ಪರಿಗಣಿಸುವುದು ಸರಿಯಲ್ಲ. ಚಿಂತಕರು ಮತ್ತು ವಿದ್ವಾಂಸರು ಈ ಅಂಶವನ್ನು ಕ್ರಮೇಣ ಮನಗಂಡರು. ಇದಕ್ಕೆ ಪ್ರತಿಯಾಗಿ ವಿವಿಧ ದೇಶಗಳಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಧರ್ಮದ ಪುನರ್‌ಮೌಲ್ಯಮಾಪನ ಪ್ರಾಮುಖ್ಯ ಪಡೆಯಿತು. ಧರ್ಮವನ್ನು ಮಾನವ ಜೀವನದ ಮೂಲಾಧಾರ ಎಂದು ಪರಿಗಣಿಸದೇಹೋದರೂ ಧರ್ಮಕ್ಕೊಂದು ವಿಶೇಷ ಸ್ಥಾನವಿದೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು; ಧರ್ಮವನ್ನು ಒಂದು ಅಫೀಮು ಎಂದೂ ಭಾವಿಸುವುದು ಸರಿಯಲ್ಲ; ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು ಧರ್ಮದ ಸ್ವರೂಪವನ್ನು ನಿರ್ಧರಿಸುತ್ತವೆ ಎನ್ನುವುದೂ ತಪ್ಪು ಎಂದು ಚಿಂತಕರು ಹೇಳಲಾರಂಭಿಸಿದರು.

**ಮಾರ್ಕ್ಸ್‌ವಾದಿಗಳ ಚಿಂತನೆಯಲ್ಲಿ ಬದಲಾವಣೆ**

ಈ ರೀತಿಯ ಆಲೋಚನೆಗಳು ಚಾಲ್ತಿಗೆ ಬರಲಾರಂಭಿಸಿದವು ದೇವರಿಲ್ಲ, ಧರ್ಮ ಎನ್ನುವುದು ಒಂದು ಅಫೀಮು ಎಂದೆಲ್ಲ ಮಾತನಾಡುತ್ತಿದವರು.



ಭೌತವಾದವನ್ನು ಪ್ರತಿಪಾದಿಸುತ್ತಿದ್ದವರಲ್ಲೂ ಮಾರ್ಕ್ಸ್‌ವಾದದ ಬಗ್ಗೆ ಅನುಮಾನಗಳು ಶುರುವಾದವು. ಮಾರ್ಕ್ಸ್‌ನ ಕಟ್ಟಾ ಅನುಯಾಯಿಗಳಾಗಿದ್ದ ಇವರಿಗೆ ಮಾರ್ಕ್ಸ್ ಒಬ್ಬ ಅಸಂಸ್ಕೃತ ಲೋಕಾಯತನಂತೆ ಕಂಡ. ವ್ಯಕ್ತಿಸ್ವಾತಂತ್ರ್ಯ ಮತ್ತು ಪತ್ರಿಕಾ ಸ್ವಾತಂತ್ರ್ಯ ಕುರಿತ ಮಾರ್ಕ್ಸ್ ಸಿದ್ಧಾಂತ ೧೮೪೨ರಲ್ಲಿ ಪ್ರಕಟಗೊಂಡಿತು. ಆರ್ಥಿಕ ಮತ್ತು ತತ್ತ್ವಶಾಸ್ತ್ರಗಳ ಮೀಮಾಂಸೆ ೧೮೪೪ರಲ್ಲಿ ಪ್ರಕಟವಾಯಿತು. ಇದರ ನಂತರ ಮಾರ್ಕ್ಸ್‌ನ ಅನುಯಾಯಿಗಳ ನಿಲುವಿನಲ್ಲಿ ಬದಲಾವಣೆಯಾಯಿತು. ಮಾರ್ಕ್ಸ್ ಕೇವಲ ಭೌತವಾದಿಯಷ್ಟೇ ಅಲ್ಲ ಎಂದು ಅವರು ಘೋಷಿಸಿದರು. ಜಡ ಪ್ರಕೃತಿಗಳು ಹಾಗೂ ಭೌತಿಕ ದ್ರವ್ಯಗಳು ಅಮೂರ್ತ ಚಿಂತನೆಯನ್ನು ಪ್ರಭಾವಿಸಿದಂತೆ ಅಮೂರ್ತ ಚಿಂತನೆಯೂ ಜಡ ಪ್ರಕೃತಿಗಳನ್ನು, ಅಚೇತನ ಭೌತಿಕದ್ರವ್ಯಗಳನ್ನು ಪ್ರಭಾವಿಸಿರಬಹುದು ಎಂಬ ಚಿಂತನೆ ಶುರುವಾಯಿತು. ಇದೇ ರೀತಿ ಧರ್ಮ, ಸಂಸ್ಕೃತಿ ಮತ್ತು ನೀತಿಶಾಸ್ತ್ರಗಳನ್ನು ರೂಪಿಸುವುದರಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ಮಹತ್ವದ ಪಾತ್ರ ನಿರ್ವಹಿಸಿದವು. ಧರ್ಮ ಸಂಸ್ಕೃತಿ ಮತ್ತು ನೀತಿಶಾಸ್ತ್ರಗಳೂ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ಮೇಲೆ ಪ್ರಭಾವ ಬೀರಿದವು. ಅಂದರೆ ಇವುಗಳ ನಡುವೆ ಅಂತರಸಂವಹನವಿತ್ತು, ಅಂತರಕ್ರಿಯೆಗಳು ನಡೆಯುತ್ತಿದ್ದವು.

**ಐರೋಪ್ಯ ಚಿಂತನೆಯ ನಾಲ್ಕು ಶತಮಾನಗಳು**

ನಾಲ್ಕು ಶತಮಾನಗಳ ಐರೋಪ್ಯ ಇತಿಹಾಸ ಏನು ಹೇಳುತ್ತದೆ ಎಂಬುದನ್ನು ನಾವೀಗ ಚರ್ಚಿಸೋಣ. ಪ್ರಾರಂಭದ ದಿನಗಳಲ್ಲಿ ವ್ಯಕ್ತಿಯೇ ಪ್ರಾಥಮಿಕ ಘಟಕವಾಗಿದ್ದ ಎನ್ನುವುದನ್ನು ನಾವು ಕಾಣುತ್ತೇವೆ. ಆದರೆ ಪರದೆ ಮೇಲೆದ್ದಾಗ ದೃಶ್ಯದಲ್ಲಿ ನಾವು ಸ್ವತಂತ್ರನಾದ ವ್ಯಕ್ತಿಯನ್ನು ಕಾಣುವುದಿಲ್ಲ. ವ್ಯಕ್ತಿ ಏನಿದ್ದರೂ ಪೋಪ್‌ನ ಕೈಗೊಂಬೆ ಅಥವಾ ಸಾಮ್ರಾಟನ ಕೈಗೊಂಬೆಯಾಗಿದ್ದ. ವ್ಯಕ್ತಿಗೆ ಮುಕ್ತ ಮನಸ್ಸಾಗಲೀ, ಸ್ವತಂತ್ರವಾದ ಬುದ್ಧಿ ಇರಲಿಲ್ಲ. ವ್ಯಕ್ತಿ ದಬ್ಬಾಳಿಕೆಗಾರರ ವಿರುದ್ಧ ಸಿಡಿದು ನಿಂತು ತನ್ನ ಹಕ್ಕುಗಳನ್ನು ಸಮರ್ಥಿಸಿಕೊಳ್ಳಲಾರಂಭಿಸಿದ್ದು ಮುಂದಿನ ಹಂತ. ಇದು ಪೋಪ್ ಹಾಗೂ ದೊರೆಯ ವಿರುದ್ಧ ಬಹಿರಂಗ ಬಂಡಾಯಕ್ಕೆಡೆ ಮಾಡಿಕೊಟ್ಟಿತು. ಈ ಬಹಿರಂಗ ಬಂಡಾಯ–ಪೋಪ್ ಮತ್ತು ಆಳರಸರ ಅಧಿಕಾರ, ಪ್ರಭಾವಗಳು ಅಳಿಸಿಹೋದವು. ಇದರ ನಂತರ ವ್ಯಕ್ತಿ ಸ್ವಾತಂತ್ರ್ಯ ಅನಿಯಂತ್ರಿತವಾಗಿರಬೇಕು. ಅಬಾಧಿತವಾಗಿರಬೇಕು ಎನ್ನುವ ವಾದ ಭದ್ರವಾಗಿ ಬೇರೂರಿತು. ವ್ಯಕ್ತಿ ಸ್ವಾತಂತ್ರ್ಯವನ್ನು ಖಾತ್ರಿಯಾಗಿಸುವ ಪಾರ್ಲಿಮೆಂಟ್ ಅಥವಾ ಪ್ರಜಾಸತ್ತಾತ್ಮಕ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಈ ಸಂಸ್ಥೆಗಳು ವ್ಯಕ್ತಿ ಸ್ವಾತಂತ್ರವನ್ನು ಕಾಪಾಡುತ್ತವೆ ಎನ್ನುವ ಭರವಸೆಯಿಂದ ಜನತೆಗೆ ಸಂತಸವಾಯಿತು. ಕಾಲಕಳೆದಂತೆ ವ್ಯಕ್ತಿ ಸ್ವಾತಂತ್ರ್ಯ ಶೋಷಣೆಯ ಸ್ವಾತಂತ್ರ್ಯಕ್ಕೆಡೆ ಮಾಡಿಕೊಟ್ಟಿತು. ಪ್ರಜಾಸತ್ತಾತ್ಮಕ ಸಂಸ್ಥೆಗಳು ಬಲಶಾಲಿಗಳಿಂದ ದುರ್ಬಲರ ಶೋಷಣೆಗೆ

ಅವಕಾಶ ಮಾಡಿಕೊಟ್ಟವು. ಈ ಸಂಸ್ಥೆಗಳು ಶೋಷಣೆಯ ಸಾಧನಗಳಾದವು. ಶ್ರೀಮಂತರಿಂದ ಬಡವರ ಶೋಷಣೆಗೆ, ಬುದ್ಧಿವಂತರಿಂದ ದಡ್ಡರ ಶೋಷಣೆಗೆ ಸಾಧನಗಳಾದವು. ಹೀಗೆ ಯೂರೋಪಿನಲ್ಲಿ, ಶೋಷಿತ ಅಲ್ಪಸಂಖ್ಯಾತರು ಹಾಗೂ ಶೋಷಕ ಬಹುಸಂಖ್ಯಾತರು ಎನ್ನುವ ಎರಡು ವರ್ಗಗಳು ಹುಟ್ಟಿಕೊಂಡದ್ದನ್ನು ನಾವು ಕಾಣುತ್ತೇವೆ. ಯಾವುದೇ ರೀತಿಯ ಶೋಷಣೆಯನ್ನು ಪ್ರತಿಭಟಿಸುತ್ತಿದ್ದ ಜನ ಶೋಷಣೆಯ ಸ್ವಾತಂತ್ರ್ಯದ ವಿರುದ್ಧ ತಿರುಗಿಬಿದ್ದರು. ಶೋಷಣೆ ನಡೆಸುತ್ತಿದ್ದ ಮಂದಿ ವ್ಯಕ್ತಿ ಸ್ವಾತಂತ್ರ್ಯ ಕೂಡದು ಎಂದು ಹೇಳಲಾರಂಭಿಸಿದರು. ಬೇರೆ ಮಾತುಗಳಲ್ಲಿ ಹೇಳುವುದಾದರೆ ವ್ಯಕ್ತಿಯ ವ್ಯಕ್ತಿತ್ವವನ್ನೇ ಅಳಿಸಿಹಾಕಬೇಕೆಂಬುದೇ ಇವರ ಬೇಡಿಕೆಯಾಗಿತ್ತು. ಈ ಪರಿಸ್ಥಿತಿ ನಿರಂಕುಶಪ್ರಭುತ್ವಕ್ಕೆ ದಾರಿಮಾಡಿಕೊಟ್ಟಿತು. ನಂತರ ಏನಾಗಿರಬಹುದು? ಆಗ ವ್ಯಕ್ತಿ ಸ್ವಾತಂತ್ರ್ಯದ ನೆಪದಲ್ಲಿ ನಿರಂಕುಶ ಪ್ರಭುತ್ವ ಸ್ಥಾಪಿಸುವ ಉದ್ದೇಶದ ವಿರುದ್ಧ ಜನ ತಿರುಗಿಬಿದ್ದರು. ಹಾಗೆಯೇ ಶೋಷಣೆಯ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಿದ್ದ ಸಂಸ್ಥೆಗಳ ವಿರುದ್ಧವೂ ಪ್ರಬಲವಾದ ಪ್ರತಿಭಟನೆ ಕಂಡುಬಂದಿತು. ಹೀಗೆ ಕ್ರಾಂತಿಗೆ ನೆಲ ಹದವಾಯಿತು. ರಕ್ತಪಾತದ ಕ್ರಾಂತಿಯ ಅಗತ್ಯವನ್ನು ಜನ ಕಂಡುಕೊಂಡರು. ದುರ್ಬಲರ ಶೋಷಣೆಯನ್ನು ನಿಗ್ರಹಿಸುವುದು ಪ್ರಜಾಸತ್ತಾತ್ಮಕ ಸಂಸ್ಥೆಗಳಿಂದ ಸಾಧ್ಯವಿಲ್ಲ, ಪ್ರಜಾಸತ್ತಾತ್ಮಕ ವ್ಯವಸ್ಥೆ ಅಸಮರ್ಥ ಎಂದು ಮನವರಿಕೆಯಾದದ್ದೇ ಕ್ರಾಂತಿಗೆ ಕಾರಣವಾಯಿತು. ಹೀಗೆ ಕ್ರಾಂತಿ ಮತ್ತು ಕ್ರಾಂತಿ ಮೂಲಕ ಶ್ರಮಿಕ ವರ್ಗದ ಸರ್ವಾಧಿಕಾರ ಪ್ರಭುತ್ವ ಸ್ಥಾಪನೆಗೆ ಜನಬೆಂಬಲ ದೊರೆಯಿತು. ರಷ್ಯದಲ್ಲಿ ರಕ್ತಪಾತದಿಂದ ಕೂಡಿದ ಕ್ರಾಂತಿಯಾಯಿತು. ಆದರೆ ಈ ಕ್ರಾಂತಿಯಿಂದ ಶೋಷಿತ ಜನಸಮೂಹದ ಪ್ರಭುತ್ವ ಬರಲಿಲ್ಲ. ಬದಲಾಗಿ ಒಂದು ಕೂಟ, ಸಂಚುಗಾರರ ಕೂಟವೊಂದು ಅಧಿಕಾರಕ್ಕೆ ಬಂತು. ಪ್ರಭುತ್ವ ಶೋಷಿತ ಜನ ಸಾಮಾನ್ಯರದಲ್ಲ, ಒಂದು ಕೂಟದ್ದು ಎನ್ನುವುದು ಅನುಭವ ವೇದ್ಯವಾಯಿತು. ಆದರೆ ಇದೊಂದು ಸಂಕ್ರಮಣಾವಸ್ಥೆ ಎಂದು ಜನ ಕೂಟದ ಪ್ರಭುತ್ವವನ್ನು ಸಹಿಸಿಕೊಂಡರು. ಸಂಕ್ರಮಣಕಾಲ ಮುಗಿದು ದೀನದಲಿತರ, ಬಡವರ ಆಡಳಿತ ಬಂದಾಗ ಪರಿಸ್ಥಿತಿ ಸುಧಾರಿಸುವುದೆಂಬ ಭರವಸೆಯಿಂದ, ನಿರೀಕ್ಷೆಯಿಂದ ಜನ ಕಾದು ನಿಂತರು. ಆದರೆ ಅವರ ಭರವಸೆ, ನಿರೀಕ್ಷೆಗಳು ಸುಳ್ಳಾದವು. ವ್ಯಕ್ತಿಗತ ಸರ್ವಾಧಿಕಾರ ಅಥವಾ ಸಂಚುಗಾರರ ಕೂಟದ ನಿರಂಕುಶ ಪ್ರಭುತ್ವ ಕಾಯಮ್ಮಾಗಿ ಉಳಿಯಲಿದೆ ಎನ್ನುವುದು ಕ್ರಮೇಣ ಜನತೆಗೆ ಮನವರಿಕೆಯಾಯಿತು. ಜನ ಈ ಕಹಿಸತ್ಯವನ್ನು ಅರಿತುಕೊಂಡರು. ಈ ಅರಿವಿನಿಂದಾಗಿಯೇ ನಿರಂಕುಶ ಕೂಟ ವ್ಯವಸ್ಥೆ ವಿರುದ್ಧ ಜನ ಬಂಡಾಯವೆದ್ದ ಸೂಚನೆಗಳನ್ನು ನಾವು ಕಾಣುತ್ತೇವೆ. ತಮ್ಮನ್ನು ಸಂಕಟಕ್ಕೆ ಸಿಲುಕಿಸಿದ ಪ್ರಭುತ್ವದ ವಿರುದ್ಧ ಜನಸಾಮಾನ್ಯರು ಸಿಡಿದೆದ್ದರು.



## ವ್ಯಕ್ತಿ ಸ್ವಾತಂತ್ರ್ಯಕ್ಕೆ ಆಗ್ರಹ

ಕಮ್ಯುನಿಸ್ಟ್ ಸರ್ಕಾರದ ವಿರುದ್ಧ ಗುಡುಗು–ಸಿಡಿಲುಗಳು ಹಾಗೂ ಒತ್ತಡಗಳು ವ್ಯಕ್ತಿ ಸ್ವಾತಂತ್ರ್ಯವನ್ನು ಮತ್ತೆ ರೂಢಿಗೆ ತರುವುದಕ್ಕೆ ಹಾದಿ ಸುಗಮಮಾಡಿಕೊಟ್ಟವು. ಕಮ್ಯುನಿಸ್ಟರ ನೇರ ಆಳ್ವಿಕೆಯಿರದ ರಾಷ್ಟ್ರಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ಶೋಷಣೆಗೆ ಮುಕ್ತಾಯ ಹಾಡಲು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನೇ ಏಕೆ ಬಳಸಿಕೊಳ್ಳಬಾರದೆಂದು ತೀವ್ರವಾಗಿ ಆಲೋಚಿಸತೊಡಗಿದವು. ಈ ಬಗ್ಗೆ ತೀವ್ರ ಚರ್ಚೆಗಳಾದವು. ಕಾರ್ಲ್ ಮಾರ್ಕ್ಸ್‌ನ ಕಾಲದಲ್ಲಿ ರಕ್ತ ಕ್ರಾಂತಿ ಸುಸಂಗತವೂ ಅಪರಿಹಾರ್ಯವೂ ಆಗಿದ್ದಿತು. ಆದರೆ ಬದಲಾಗಿರುವ ಸಂದರ್ಭದಲ್ಲಿ ಶ್ರಮಜೀವಿಗಳ ನಿರಂಕುಶಪ್ರಭುತ್ವ ಸ್ಥಾಪಿಸಲು ಸಂಸದೀಯ ವ್ಯವಸ್ಥೆಯನ್ನು ಬಳಸಿಕೊಳ್ಳಬಹುದೆಂದು ಪ್ರಭಾವಿ ನಾಯಕರು ಚರ್ಚಿಸಲಾರಂಭಿಸಿದರು. ಆದರೆ ಕಮ್ಯುನಿಸಂ ಬೇರುಬಿಡದೇ ಸಂಸದೀಯ ಪ್ರಜಾಪ್ರಭುತ್ವ ಇದ್ದ ರಾಷ್ಟ್ರಗಳ ಪರಿಸ್ಥಿತಿ ಭಿನ್ನವಾಗಿತ್ತು. ರಾಜಮಹಾರಾಜರ ಆಳ್ವಿಕೆ ವಿರುದ್ಧ ವ್ಯಕ್ತಿಯ ರಕ್ಷಣೆಗೆ ಪ್ರಜಾಪ್ರಭುತ್ವವನ್ನು ಒಂದು ಅಸ್ತ್ರವಾಗಿ ಬಳಸಿದ ರಾಷ್ಟ್ರಗಳಲ್ಲಿ ಜನ ಪ್ರಜಾಸತ್ತೆಯಲ್ಲಿ ನಂಬಿಕೆ ವಿಶ್ವಾಸಗಳನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ತಲೆದೋರಿತ್ತು. ಸಂಪೂರ್ಣ ಸ್ವಾತಂತ್ರ್ಯ ಈ ಜನರ ಅಪೇಕ್ಷೆಯಾಗಿತ್ತು. ಪಾಶ್ಚಾತ್ಯ ಪ್ರಜಾಸತ್ತೆ ವ್ಯಕ್ತಿಗಳ ಮೇಲೆ ಹೇರಿದ್ದ ಶಿಸ್ತು, ನಿಯಂತ್ರಣಗಳನ್ನು ಒಪ್ಪಿಕೊಳ್ಳಲೂ ಇವರು ತಯಾರಿರಲಿಲ್ಲ. ಸ್ವಾತಂತ್ರ್ಯ ಮತ್ತು ನಿಯಂತ್ರಣ. ಲೈಸೆನ್ಸ್–ಪರವಾನಗಿಗಳ ಮಧ್ಯೆ ಅಂಥ ವ್ಯತ್ಯಾಸವೇನೂ ಕಂಡುಬರಲಿಲ್ಲ. ಪಾಶ್ಚಾತ್ಯ ರಾಷ್ಟ್ರಗಳ ಹಿಪ್ಪೀಗಳು ಈ ವರ್ಗಕ್ಕೆ ಸೇರಿದವರು. ಹಿಪ್ಪೀಗಳು ಪ್ರಜಾಸತ್ತಾತ್ಮಕ ವ್ಯವಸ್ಥೆಗಷ್ಟೇ ಅಲ್ಲ ಯಾವುದೇ ರೀತಿಯ ವ್ಯವಸ್ಥೆಯೂ ಅವರಿಗೆ ಬೇಕಾಗಿರಲಿಲ್ಲ. ಕಳೆದ ಮೂರು ನಾಲ್ಕು ಶತಮಾನಗಳ ಪಾಶ್ಚಾತ್ಯ ಪ್ರಪಂಚದ ಆಗುಹೋಗುಗಳ ಸಂಕ್ಷಿಪ್ತ ನೋಟ ಇದು. ಒಟ್ಟಾರೆಯಾಗಿ ಕೇಂದ್ರ ಅಸ್ತಿತ್ವದಲ್ಲಿ ವ್ಯಕ್ತಿಯದೇ ಮೇಲುಗೈ ವ್ಯಕ್ತಿಯದೇ ಪ್ರಾಬಲ್ಯ.

## ‘ಕುಟುಂಬದ’ ವಿರುದ್ಧ ಬಂಡಾಯ

ವ್ಯಕ್ತಿಯ ನಂತರ ನಾವು ಕೌಟುಂಬಿಕ ವ್ಯವಸ್ಥೆಯಂಥ ಪದ್ಧತಿಗಳನ್ನು ನೋಡೋಣ. ಕಾಲಾನುಕಾಲದಿಂದ ಎಲ್ಲ ಸಮಾಜಗಳಲ್ಲೂ ಪರಸ್ಪರ ಕೊಂಡಿಯಾಗಿದ್ದ ಪರಸ್ಪರ ಹೆಣೆದುಕೊಂಡಿದ್ದ ಕುಟುಂಬ ಪದ್ಧತಿ ಕುರಿತು ಚರ್ಚಿಸಬಹುದು. ಹಿಂದೂ ಶಾಸ್ತ್ರಗಳು, ಕನ್‌ಫ್ಯೂಶಿಯಸ್ ಸಿದ್ಧಾಂತ. ಇಸ್ಲಾಂ, ಕ್ರಿಶ್ಚಿಯನ್ ರಿಲಿಜನ್ ಇತ್ಯಾದಿಯಾಗಿ ಎಲ್ಲವೂ ಕುಟುಂಬ ವ್ಯವಸ್ಥೆಯ ಅನಿವಾರ್ಯತೆಯನ್ನು ಒಪ್ಪಿಕೊಂಡಿದ್ದವು. ಆದರೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಎರಡು ಕಾರಣಗಳಿಂದಾಗಿ ಕುಟುಂಬ ವ್ಯವಸ್ಥೆಯ ಮೇಲೂ ದಾಳಿ ಶುರುವಾಗಿತ್ತು. ಕುಟುಂಬ ವ್ಯವಸ್ಥೆ ಕೃತಕ ಪದ್ಧತಿ ಎಂದು ಕಮ್ಯುನಿಸ್ಟರು ಖಂಡಿಸಲಾರಂಭಿಸಿದ್ದರು. ವ್ಯಕ್ತಿ ಮತ್ತು ಸಮಾಜದ ನಡುವೆ ಕುಟುಂಬ ವ್ಯವಸ್ಥೆ

ಏಕೆ ಬೇಕು ಎನ್ನುವುದು ಕಮ್ಯುನಿಸ್ಟರ ವಾದವಾಗಿತ್ತು. ಆದ್ದರಿಂದ ಕುಟುಂಬ ಒಡೆದು ಸಮುದಾಯಗಳನ್ನು ಸ್ಥಾಪಿಸುವುದು ಉಚಿತವಾದೀತೆಂದು ಕಮ್ಯುನಿಸ್ಟರು ಪ್ರತಿಪಾದಿಸುತ್ತಿದ್ದರು. ಜೊತೆಗೆ ಇನ್ನೊಂದು ದಿಕ್ಕಿನಲ್ಲಿ ಕುಟುಂಬದಲ್ಲಿನ ಶಿಸ್ತಿಗೆ ವಿರೋಧ ಎದ್ದಿತ್ತು. ವ್ಯಕ್ತಿ ಕುಟುಂಬ ವ್ಯವಸ್ಥೆಯ ಶಿಸ್ತಿಗೇಕೆ ಬದ್ಧನಾಗಿರಬೇಕೆಂಬುದು ಇವರ ಪ್ರಶ್ನೆಯಾಗಿತ್ತು. ಶಿಸ್ತು ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟುಮಾಡುತ್ತದೆ ಎನ್ನುವುದು ವಿರೋಧಿಗಳ ನಿಲುವಾಗಿತ್ತು. ಆದ್ದರಿಂದ ಕುಟುಂಬ ವ್ಯವಸ್ಥೆಯನ್ನು ಹಾಳುಗೆಡವಬೇಕು; ಯುವಕ–ಯುವತಿಯರು ತಮ್ಮ ತಂದೆ ತಾಯಿಯರನ್ನು ತೊರೆದು ಸ್ವತಂತ್ರವಾಗಿ ಬದುಕಲು ಅವಕಾಶವಿರಬೇಕು ಎಂಬುದು ವಿರೋಧಿಗಳ ವಾದದ ಸಾರಾಂಶ. ಕುಟುಂಬ ಚಿಕ್ಕದಾಗಿದ್ದಷ್ಟೂ ಸ್ವಾತಂತ್ರ್ಯ ಅಬಾಧಕ, ಮುಕ್ತವಾಗಿ ಕಾರ್ಯಚಟುವಟಿಕೆಗಳಲ್ಲಿ ತೊಡಗಲು ಸಾಧ್ಯ ಎನ್ನುವುದು ಕುಟುಂಬ ವಿರೋಧಿಗಳ ಅಭಿಮತವಾಗಿತ್ತು.

ಮೇಲಿನ ಎರಡೂ ಚಿಂತನೆಗಳಲ್ಲಿನ ಕೊರತೆಗಳು, ದೋಷಗಳು ಬಲು ಬೇಗ ಬಹಿರಂಗವಾದವು. ಸೋವಿಯತ್ ರಷ್ಯಾದಲ್ಲಿ ಸಮುದಾಯ ಪ್ರಯೋಗ ವಿಫಲಗೊಂಡಿತು. ಇದಕ್ಕೆ ಪ್ರತಿಯಾಗಿ ಕುಟುಂಬ ವ್ಯವಸ್ಥೆ ಪರವಾದ ಆಸೆ–ಅಪೇಕ್ಷೆಗಳು ಹೆಚ್ಚಾದವು. ಕಮ್ಯುನಿಸ್ಟ್ ರಾಷ್ಟ್ರಗಳಲ್ಲೂ ಮಾತೃತ್ವ ಮತ್ತು ಪಿತೃತ್ವಗಳನ್ನು ಮಾನ್ಯ ಮಾಡಬೇಕೆಂಬ ಬೇಡಿಕೆ ಪ್ರಬಲಗೊಂಡಿತು. ಈ ಬೇಡಿಕೆ ಎಷ್ಟು ಆಗ್ರಹಪೂರ್ವಕವಾಗಿತ್ತೆಂದರೆ ಆಖೈರಾಗಿ ಆಡಳಿತಗಾರರು ಇದನ್ನು ಮಾನ್ಯ ಮಾಡಲೇಬೇಕಾಯಿತು. ಇದೇ ರೀತಿ ಅಮೆರಿಕದಂಥ ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ಮುಕ್ತ ಜೀವನದ ಹಿಪ್ಪೀ ಪಂಥದ ವಿರುದ್ಧ ಸುಪ್ರಸಿದ್ಧ ಚಿಂತಕರು ದನಿ ಎತ್ತಿದರು. ಮತ್ತೆ ಅವಿಭಕ್ತ ಕುಟುಂಬ ವ್ಯವಸ್ಥೆ ಪುನರಾರಂಭಿಸುವಂತೆ ಒತ್ತಾಯ ಪಡಿಸಿದರು. ಅವಿಭಕ್ತ ಕುಟುಂಬವಿಲ್ಲದೆ ಸುಭದ್ರ ಸುಸ್ಥಿರ ಸಮಾಜ ಸಾಧ್ಯವಿಲ್ಲ ಎಂದು ಬುದ್ಧಿವಾದ ಹೇಳಿದರು. ಈಗ ಅಮೆರಿಕದಲ್ಲಿ ಇಂಥ ಅಭಿಪ್ರಾಯಗಳಿಗೆ ಮಣೆ ಹಾಕಲಾಗುತ್ತಿದೆ.

**ರಾಷ್ಟ್ರೀಯತೆ**

ಕುಟುಂಬದ ಮುಂದಿನ ಘಟಕ ರಾಷ್ಟ್ರ ಅಥವಾ ರಾಷ್ಟ್ರೀಯ ಸಮಾಜ. ಆದರೆ, ಹೇಗೋ ಏನೋ ಐರೋಪ್ಯ ಸಮುದಾಯದ ಮೇಲಿದ್ದ ಪೋಪರ ಅಗಾಧ ಪ್ರಭಾವದಿಂದಾಗಿ ರಾಷ್ಟ್ರ ಅಥವಾ ರಾಷ್ಟ್ರೀಯತೆ ಬಗ್ಗೆ ಜಾಗೃತಿ ಮೂಡಲಿಲ್ಲ. ಆದರೆ ಧಾರ್ಮಿಕ ವಿಚಾರಗಳಲ್ಲಿ ಪೋಪರ ಹಸ್ತಕ್ಷೇಪ ಜಾಸ್ತಿಯಾದಾಗ, ವಿದೇಶೀಯರ ಮತ್ತು ಸಾಮ್ರಾಜ್ಯ ಶಾಹಿಗಳ ಆಕ್ರಮಣ ಹೆಚ್ಚಿದಾಗ ಇವುಗಳಿಗೆ ಪ್ರತಿಕ್ರಿಯೆಯಾಗಿ ರಾಷ್ಟ್ರೀಯ ಮನೋಭಾವ ಬೆಳೆಯಲಾರಂಭಿಸಿತು. ರಾಷ್ಟ್ರ–ರಾಷ್ಟ್ರೀಯ ಪರಿಕಲ್ಪನೆ ಗರಿಗೆದರಿತು. ಈ ಹಿನ್ನೆಲೆಯಲ್ಲಿ ಯೂರೋಪಿನಲ್ಲಿ ಪ್ರತಿಗಾಮಿ ಮಾದರಿಯ



ರಾಷ್ಟ್ರೀಯತೆ ಮತ್ತು ಪೋಪರ ಅಧಿಕಾರಗಳ ನಡುವೆ ಸಾಮರಸ್ಯ ಸಾಧ್ಯವಾಗದೇ ಹೋದಲ್ಲಿ ರಾಷ್ಟ್ರೀಯತೆ ಮತ್ತು ಅಂತರ ರಾಷ್ಟ್ರೀಯತೆಗಳ ನಡುವೆಯೂ ಸಾಮರಸ್ಯ ಸಾಧ್ಯವಾಗದು ಎನ್ನುವ ಅಭಿಪ್ರಾಯ ಬಲವಾಗಿ ರೂಪುಗೊಂಡಿತು. ಇದೆಲ್ಲದರ ಪರಿಣಾಮವಾಗಿ ಐರೋಪ್ಯ ರಾಷ್ಟ್ರೀಯತೆ ಹುಟ್ಟಿಕೊಂಡಿತು. ಆನಂತರ ಸಹಜವಾಗಿಯೇ ತೀವ್ರಗಾಮಿ ರಾಷ್ಟ್ರೀಯತೆಗೆ ವಿರೋಧ ವ್ಯಕ್ತವಾಯಿತು. ಈ ವಿರೋಧ ಇನ್ನೊಂದು ಬಗೆಯ ಇನ್ನೊಂದು ಬಗೆಯ ತೀವ್ರಗಾಮಿ ಸಿದ್ಧಾಂತಕ್ಕೆ – ಕಮ್ಯುನಿಸಂ ಜನನಕ್ಕೆ ಕಾರಣವಾಯಿತು. ಕಮ್ಯುನಿಸ್ಟ್ ಸಿದ್ಧಾಂತ ಧರ್ಮದ ಪರಿಕಲ್ಪನೆಯನ್ನು ತಿರಸ್ಕರಿಸಿತು. ರಾಷ್ಟ್ರ, ರಾಷ್ಟ್ರೀಯತೆಗಳ ಪರಿಕಲ್ಪನೆಯನ್ನು ನಿರಾಕರಿಸಿತು. ಇದಾವುದಕ್ಕೂ ಅರ್ಥವಿಲ್ಲ. ಇವೆಲ್ಲ ತ್ಯಾಜ್ಯ, ಈಗೇನಿದ್ದರೂ ಅಂತರರಾಷ್ಟ್ರೀಯ ಪರಿಕಲ್ಪನೆ ಕುರಿತು ಆಲೋಚಿಸಬೇಕಾಗಿದೆ. ಅಂತರರಾಷ್ಟ್ರೀಯತೆಯೊಂದೇ ಸುಸಂಗತವಾದದ್ದು ಎಂದು ಕಮ್ಯುನಿಸ್ಟರು ಪ್ರತಿಪಾದಿಸತೊಡಗಿದರು. ೧೯೧೪ರ ಮೊದಲನೆಯ ಮಹಾಯುದ್ಧ ಕಾಲದಲ್ಲಿ ಅನೇಕ ರಾಷ್ಟ್ರಗಳಲ್ಲಿ ಕಾರ್ಮಿಕರು ತಮ್ಮ ರಾಷ್ಟ್ರೀಯ ಸರ್ಕಾರಗಳಿಗೆ ಬೆಂಬಲವಾಗಿ ನಿಂತರು. ಶ್ರಮಜೀವಿಗಳ ಈ ನಿಲುವಿಗೆ ಲೆನಿನ್ ಆಕ್ಷೇಪ ವ್ಯಕ್ತಪಡಿಸಿದರು. ಶ್ರಮಜೀವಿಗಳು ತಮ್ಮ ಸರ್ಕಾರಗಳಿಗೆ ಬೆಂಬಲ ವ್ಯಕ್ತಪಡಿಸುವ ಬದಲು ದೇಶದ್ರೋಹಿಗಳಾಗಿ ಅಂತರರಾಷ್ಟ್ರೀಯತೆಗೆ ಬೆಂಬಲ ವ್ಯಕ್ತಪಡಿಸಿ ಅದನ್ನು ಬಲಪಡಿಸುವುದು ಯೋಗ್ಯವಾಗುತ್ತಿತ್ತೆಂಬುದು ಲೆನಿನ್ ವಾದವಾಗಿತ್ತು.

ಅನೇಕ ರಾಷ್ಟ್ರಗಳಲ್ಲಿ ಕಮ್ಯುನಿಸ್ಟರು ಅಧಿಕಾರ ವಹಿಸಿಕೊಂಡರು. ಆದರೆ ಈ ಪ್ರಕ್ರಿಯೆಯಲ್ಲಿ ಅಂತರರಾಷ್ಟ್ರೀಯತೆ ವಾದ ಮೆರುಗು ಕಳೆದುಕೊಂಡಿತು. ರಾಷ್ಟ್ರೀಯತೆ ವಾದ ಮತ್ತೆ ತಲೆಎತ್ತಿತು. ಇದು ಎಷ್ಟು ಪ್ರಬಲವಾಗಿತ್ತೆಂದರೆ, ಅಂತರರಾಷ್ಟ್ರೀಯತೆಗೆ ಜೋತುಬಿದ್ದಿದ್ದ ರಾಷ್ಟ್ರದ ಚಿಂತಕ ಮಾರಿಸ್ ಹಿಂಡೋಸ್ ತನ್ನ "ಮದರ್ ರಷ್ಯ" ಗ್ರಂಥದಲ್ಲಿ ರಾಷ್ಟ್ರೀಯತೆಯನ್ನು ಪ್ರಬಲವಾಗಿ ಸಮರ್ಥಿಸಿದ್ದರು. ಈ ಸಂಬಂಧದಲ್ಲಿ, ಈ ಗ್ರಂಥದ "ಗತಕಾಲದ ಪುನರ್ ಅನ್ವೇಷಣೆ" ಮತ್ತು "ರಷ್ಯನ್ನರಿಗಾಗಿ ರಷ್ಯ" – ಈ ಎರಡು ಅಧ್ಯಾಯಗಳು ಗಮನಾರ್ಹವಾದವು ಹಾಗೂ ಎರಡು ಅಂತರರಾಷ್ಟ್ರೀಯವಾದಿ ಶಕ್ತಿ ರಾಷ್ಟ್ರಗಳಾದ ರಷ್ಯ ಮತ್ತು ಚೀನ ಈಗಿನ ಸಂಘರ್ಷದ ಹಾದಿ ಹಿಡಿದಿರುವುದೂ ಚರ್ಚೆ–ವ್ಯಾಖ್ಯಾನಗಳಿಗೆ ಉತ್ತಮ ಗ್ರಾಸವಾದೀತು.

**ಕುಂಠಿತವಾದ ಪ್ರಗತಿ**

ರಾಷ್ಟ್ರೀಯತೆ ಹಾಗೂ ಅಂತರರಾಷ್ಟ್ರೀಯತೆ ಕುರಿತ ಸಂಘರ್ಷದಿಂದಾಗಿ ಪಾಶ್ಚಿಮಾತ್ಯ ಪ್ರಪಂಚಕ್ಕೆ ಮಾನವಕುಲ ಕುರಿತು ಸಮಗ್ರವಾಗಿ ಒಟ್ಟಾರೆಯಾಗಿ ಚಿಂತಿಸಲು ಅವಕಾಶವೇ ದೊರೆಯಲಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಅವರ

ಇಡೀ ಚಿಂತನ ಏಕಕೇಂದ್ರಿತವಾಗಿತ್ತು. ಮಾನವಕುಲ ಪ್ರಪಂಚದ ಕೇಂದ್ರವಾಗಿದ್ದು ಪಾಶ್ಚಾತ್ಯ ಚಿಂತನೆಯ ಜಗತ್ತು ಅದರ ಸುತ್ತಲೇ ಸುತ್ತುತ್ತಿತ್ತು.

ಪಾಶ್ಚಾತ್ಯ ಜಗತ್ತಿನ ಸೈದ್ಧಾಂತಿಕ ತಿಕ್ಕಾಟಗಳಲ್ಲಿ ನಾವು ಯಾರ ಪಕ್ಷವನ್ನೂ ವಹಿಸಿಕೊಳ್ಳುವುದು ಉಚಿತವಲ್ಲ. ಯಾವುದು ಸರಿ, ಯಾವುದು ತಪ್ಪು ಎಂದು ಯಾರ ಪಕ್ಷವನ್ನೂ ನಾವು ಬೆಂಬಲಿಸಲಾಗದು. ಆದರೆ ಒಂದು ತೀರ್ಮಾನವಂತೂ ಖಚಿತ. ಅದು : ಪಾಶ್ಚಾತ್ಯ ಲೋಕದಿಂದ ಈ ದೇಶಕ್ಕೆ ಆಯಾತ ಮಾಡಿಕೊಂಡಾಗ ಅದನ್ನು ಪ್ರಗತಿಶೀಲ ಎಂದು ಕರೆಯಲಾಗುತ್ತಿತ್ತು. ಉಳಿದವನ್ನು ಪ್ರತಿಗಾಮಿ ಎಂದು ಕರೆಯಲಾಗುತ್ತಿತ್ತು. ಇಷ್ಟೆಲ್ಲ ಆದ ನಂತರವೂ ಪ್ರಗತಿಶೀಲ ಸಿದ್ಧಾಂತಗಳೆಂದು ಹೇಳಲಾದವು ಯಾವುದೂ ದೀರ್ಘಾಯುವಾಗಲಿಲ್ಲ. ಅವು ಬದಲಾವಣೆ ಹೊಂದುತ್ತಲೇ ಇದ್ದವು. ಒಂದು ಅತಿಯಿಂದ ಇನ್ನೊಂದು ಅತಿಯವರೆಗೆ ತೂಗುಯ್ಯಾಲೆಯಾಡುತ್ತಿದ್ದವು. ಇದರಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ಪಾಶ್ಚಾತ್ಯ ಚಿಂತನೆಗೆ ಇನ್ನೂ ತಾಳಿಕೆ-ಬಾಳಿಕೆಯ ಸಾಧನೆ ಸಾಧ್ಯವಾಗಿಲ್ಲ. ಅವೇ ಆಖೈರಲ್ಲ.

**ಪ್ರತಿಕ್ರಿಯೆಯ ಉತ್ಪನ್ನ**

ಸಂಕ್ಷಿಪ್ತವಾಗಿ ಹೇಳುವುದಾದರೆ, ಪಾಶ್ಚಾತ್ಯ ಚಿಂತನೆಗಳು ಇತ್ಯಾತ್ಮಕವಾಗಿರದೆ ಪ್ರತಿಕ್ರಿಯೆಯ ಫಲಿತವಾಗಿದ್ದವು. ಹೀಗೆ ನೋಡೋಣ. ದೇಶದಲ್ಲಿ ಒಂದು ವಿಶಿಷ್ಟ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಒಂದು ಆಲೋಚನೆ ಅಥವಾ ಕಲ್ಪನೆಗೆ ಪ್ರೇರಕವಾಗುವುದು ನಿಶ್ಚಿತ. ಸಂದರ್ಭಾನುಸಾರ ಇದರ ಪರಿಷ್ಕರಣವೂ ಅನಿವಾರ್ಯವಾದೀತು. ಆದ್ದರಿಂದ, ಇಡೀ ಪಾಶ್ಚಾತ್ಯ ಚಿಂತನೆ ಪ್ರತಿಕ್ರಿಯೆಗಳನ್ನು ಆಧರಿಸಿದೆ. ಆ ಲೋಕದಲ್ಲಿ ಗಂಭೀರವಾದ ಸೈದ್ಧಾಂತಿಕ ಸಂಘರ್ಷ, ತಿಕ್ಕಾಟಗಳು ಸಂಭವನೀಯ ಎನ್ನುವುದು ನಮ್ಮ ಗಮನಕ್ಕೆ ಬರುತ್ತದೆ. ಇದು ಅವರ ಎರಡನೆಯ ಲಕ್ಷಣ ಎಂದು ನಾವು ತಳ್ಳಿ ಹಾಕುತ್ತೇವೆ. ಆದರೆ ಮೂರನೆಯದೊಂದಿದೆ. ಅದು ಎಲ್ಲಕಾಲಕ್ಕೂ ಮೌಲಿಕವಾದದ್ದು ಉಚಿತವಾದದ್ದು. ಆದರೆ ಅದು ವಿಭಿನ್ನವಾದದ್ದು, ವಿಭಜನಯೋಗ್ಯವಾದದ್ದು. ನಾಲ್ಕನೆಯದು ಕಾಲಾನುಕಾಲಕ್ಕೆ ಎದುರಾಗುವ ವಿವಿಧ ಆಲೋಚನೆಗಳನ್ನು ಚಿಂತನೆಗಳನ್ನು ಸಮನ್ವಯಗೊಳಿಸುವುದರಲ್ಲಿನ ವೈಫಲ್ಯ. ಇದರಿಂದಾಗಿ ಅವು ಪರಸ್ಪರ ವಿರೋಧಿಯಾಗಿಯೇ ಸಾಮರಸ್ಯ ಇಲ್ಲದೆಯೇ ಉಳಿದವು. ಬೇರೆ ಬೇರೆ ದಿಕ್ಕುಗಳಲ್ಲೇ ಮುಖಮಾಡಿನಿಂತವು. ಇದಕ್ಕೆ ಫ್ರೆಂಚ್ ಕ್ರಾಂತಿಯೇ ಉತ್ತಮ ನಿದರ್ಶನವಾದೀತು.

**ಜೀವನ ಮೌಲ್ಯಗಳು**

ಈಗಿನ ಪರಿಸ್ಥಿತಿಯಲ್ಲಿ ಇವತ್ತಿನ ಚರ್ಚೆಯ ವಿಷಯ ಹೆಚ್ಚು ಸುಸಂಗತವಾದದ್ದು ಹಾಗೂ ಇದರಲ್ಲಿ ನಮ್ಮ ದೇಶ ಕಲಿಯಬೇಕಾದ ಪಾಠವಿದೆ. ಆದ್ದರಿಂದ ಇದನ್ನು



ಸಮಗ್ರವಾಗಿ ಅರ್ಥಮಾಡಿಕೊಳ್ಳಬೇಕಾದ್ದು ಅತ್ಯಗತ್ಯ.

ಸಮಾನತೆಯ ಸಲುವಾಗಿ ಕನಿಷ್ಠ ಮತ್ತು ಗರಿಷ್ಠ ಆದಾಯಗಳ ನಡುವಣ ವ್ಯತ್ಯಾಸವನ್ನು ಕಡಿಮೆಗೊಳಿಸುವಂತೆ ಕೇಳಲಾಗುತ್ತಿದೆ. (ನಮಗೂ ಇದೇ ಬೇಕಾಗಿರುವುದು) ಏತನ್ಮಧ್ಯೆ, ಅಭಿವೃದ್ಧಿಯ ಸ್ಫೂರ್ತಿ ಸೆಲೆ ಬತ್ತುವುದು ಎನ್ನುವ ಮಾತೂ ಕೇಳಿಬರುತ್ತಿದೆ. ಜೀವನ ಮೌಲ್ಯಗಳು ಶುದ್ಧಾಂಗವಾಗಿ ಹಣಕಾಸಿನ ವಿಷಯಗಳೇ ಆಗಿದ್ದಲ್ಲಿ, ಏಕಾದರೂ ಕಷ್ಟಪಟ್ಟು ದುಡಿಯಬೇಕು ಎನ್ನುವ ಆಲೋಚನೆ ಸಹಜವಾದದ್ದು, ಬೆವರು ಹರಿಸಿದುಡಿದು ಐನ್‌ಸ್ಟೈನ್ ಅಥವಾ ರಾಧಾಕೃಷ್ಣನ್ ಆದರೂ ಅಂಥವರ ಸಂಬಳ ಸಮಾನತೆಯ ಸಲುವಾಗಿ ೨೦೦೦ ರೂಗಳ ಗೆರೆ ದಾಟದಿದ್ದಲ್ಲಿ ಅವರ ಉತ್ಸಾಹ ಕುಗ್ಗುತ್ತದೆ. ಇನ್ನೊಬ್ಬ ಸೋಮಾರಿ. ಜವಾನನಾಗಿಯೇ ಉಳಿದಿರುತ್ತಾನೆ. ಇವನಿಗೆ ೧೦೦ ರೂಗಳಿಗಿಂತ ಕಡಿಮೆ ಸಂಬಳ ನೀಡುವಂತಿಲ್ಲ. ಹೀಗಿರುವಾಗ ಏಕೆ ಶ್ರಮಪಟ್ಟು ದುಡಿದು ಐನ್‌ಸ್ಟೈನ್ ಅಥವಾ ರಾಧಾಕೃಷ್ಣನ್ ಆಗಲು ಹಂಬಲಿಸಬೇಕು?

ಆದ್ದರಿಂದ ಸ್ಫೂರ್ತಿ ಮೂಲ ಶುದ್ಧಾಂಗವಾಗಿ ಭೌತಿಕ ಸಂಪತ್ತೇ ಆಗಿದ್ದಲ್ಲಿ ವ್ಯಕ್ತಿಯ ಸುಧಾರಣೆ ಮತ್ತು ಉದ್ಯಮಶೀಲ ಮನೋಭಾವ, ಸಂಕಲ್ಪಗಳು ಅವಸಾನ ಹೊಂದುತ್ತವೆ. ಇದಕ್ಕೆ ಅವಕಾಶಕೊಡದೆ ವ್ಯಕ್ತಿಗೆ ಭೌತಿಕ ಲಾಭದ ಆಸೆ ತೋರಿ ಪ್ರೋತ್ಸಾಹಿಸುವ ಕ್ರಮಕೈಗೊಂಡಲ್ಲಿ ಸಮಾನತೆಗೆ ವಿದಾಯ ಹೇಳಬೇಕಾಗುತ್ತದೆ. ಇವತ್ತು ನಾವು ಎದುರಿಸುತ್ತಿರುವ ಪ್ರತಿಭಾ ಪಲಾಯನದ ಸಮಸ್ಯೆಯ ಮೂಲ. ಜೀವನ ಮೌಲ್ಯಗಳು ಶುದ್ಧಾಂಗವಾಗಿ ಭೌತಿಕ-ಪ್ರಾಪಂಚಿಕ ಭೋಗ ಲೋಲುಪತೆಯಾಗಿ ಪರಿವರ್ತನೆ ಹೊಂದಿರುವುದರಲ್ಲಿದೆ. ಪ್ರಾಪಂಚಿಕ ಭೋಗಲೋಲುಪತೆಯಲ್ಲಿ ಏಳ್ಗೆ ಹೊಂದುವುದು ಈ ದೇಶದಲ್ಲಿ ಸಾಧ್ಯವಿಲ್ಲ ಎಂದಾದಲ್ಲಿ ಬೇರೆಡೆ ಇದನ್ನು ಅರಸುವುದು ಸಹಜ.

ಈ ಅಹಿತಕರವಾದ, ಅನಾರೋಗ್ಯಕರವಾದ ಪರಿಸ್ಥಿತಿಯನ್ನು ಬದಲಾಯಿಸಬೇಕಾದರೆ ನಾವು ವಿಭಿನ್ನ ಮೌಲ್ಯಗಳ ಜೀವನ ಪದ್ಧತಿಯನ್ನು ಅನುಸರಿಸಬೇಕಾಗುತ್ತದೆ. ಈ ಹೊಸ ಜೀವನ ಪದ್ಧತಿ ಸಾರ್ವತ್ರಿಕ ಸ್ವರೂಪದ ಲೌಕಿಕ ಹಾಗೂ ಅಲೌಕಿಕ ಜೀವನ ಮೌಲ್ಯಗಳ ಸಮ್ಮಿಶ್ರವಾಗಿರಬೇಕಾಗುತ್ತದೆ. ನಾನು ಉದ್ದೇಶ ಪೂರ್ವಕವಾಗಿಯೇ 'ಆಧ್ಯಾತ್ಮಿಕ' ಪ್ರಕೃತಿಯ ಪರಿಭಾಷೆಯನ್ನು ಇಲ್ಲಿ ಬಳಸುತ್ತಿಲ್ಲ. ಯಾರಿಗಾದರೂ ಲೌಕಿಕ ಭೋಗಭಾಗ್ಯಗಳ ಸ್ಫೂರ್ತಿ ಪ್ರೇರಣೆಗಳಂತೆ ಸಾಮಾಜಿಕ ಪ್ರತಿಷ್ಠೆ-ಸ್ಥಾನಮಾನಗಳ ಅಪೇಕ್ಷೆಯೂ ಸಹಜವಾದದ್ದು ಇವೆರಡನ್ನೂ ಒಳಗೊಂಡಂಥ ಪದ್ಧತಿಯೊಂದು ಜಾರಿಗೆ ಬರಲಿ. ಪ್ರಾಚೀನ ಭಾರತ ಇಂಥದೊಂದು ಪದ್ಧತಿಯನ್ನು, ಇಂಥದೊಂದು ವ್ಯವಸ್ಥೆಯನ್ನು ರೂಪಿಸಿತ್ತು. ಈ ವ್ಯವಸ್ಥೆಯಲ್ಲಿ ಸಾಮಾಜಿಕ ಸ್ಥಾನಮಾನ ಪ್ರತಿಷ್ಠೆಗಳು ಮತ್ತು ಲೌಕಿಕ ಭೋಗ ಭಾಗ್ಯಗಳ ಗಳಿಕೆಗೆ

ಒಂದೂ ವಿಲೋಮ ಪ್ರಮಾಣವನ್ನು ನಿಷ್ಕರ್ಶಿಸಲಾಗಿತ್ತು. ಅಂದರೆ ಗರಿಷ್ಠ ಸಾಮಾಜಿಕ ಪ್ರತಿಷ್ಠೆ ಗಳಿಸುವ ಗುರಿ–ಉದ್ದೇಶಗಳನ್ನಿಟ್ಟುಕೊಂಡವರು ವೈಯುಕ್ತಿಕ ಭೋಗಭಾಗ್ಯಗಳ ಸೌಲಭ್ಯಗಳನ್ನು ಇದೇ ಪ್ರಮಾಣದಲ್ಲಿ ತ್ಯಾಗಮಾಡಲು ಸಿದ್ಧರಿರಬೇಕು. ಸಮಾಜದ ಲೌಕಿಕ ಸಂಪನ್ಮೂಲಗಳಿಂದ ಕನಿಷ್ಠ ಲಾಭ ಸೌಕರ್ಯಗಳನ್ನು ಪಡೆದಕೊಳ್ಳುವವರು ಮಾತ್ರ ಗರಿಷ್ಠ ಪ್ರತಿಷ್ಠೆ ಅಥವಾ ಪೂಜ್ಯತೆ ಗಳಿಸಲು ಅರ್ಹರಾಗುತ್ತಾರೆ. ಇದಕ್ಕೆ ಬದಲು ಸಮಾಜದಿಂದ ಗರಿಷ್ಠ ಸೌಲಭ್ಯಗಳನ್ನು ಪಡೆಯಲಿಚ್ಛಿಸುವವರು ಗರಿಷ್ಠ ಸೌಲಭ್ಯ ಅನುಕೂಲಗಳನ್ನು ಪಡೆದುಕೊಳ್ಳಲು ಸ್ವತಂತ್ರರಿರುತ್ತಾರೆ. ಆದರೆ ಇಂಥವರು ಇದೇ ಪ್ರಮಾಣದಲ್ಲಿ ಸಾಮಾಜಿಕ ಪ್ರತಿಷ್ಠೆಯಲ್ಲಿ ಪಾಲು ಕೇಳಲಾಗದು. ಹೀಗೆ, ಮಾನವೀಯ ಸ್ಫೂರ್ತಿ–ಪ್ರೇರಣೆಗಳಲ್ಲಿ ಎಚ್ಚರದ ಸಮತೋಲ ಸಾಧಿಸುವ ಮೂಲಕ; ಮನುಷ್ಯನಿಗೆ ಅಗತ್ಯವಾದ ಸ್ಫೂರ್ತಿ–ಪ್ರೇರಣೆ ಪ್ರಚೋದನೆಗಳ ಸಮತೋಲದ ಆಧಾರದ ಮೇಲೆ ಜೀವನ ಪದ್ಧತಿಯೊಂದನ್ನು ರೂಪಿಸಲಾಗಿತ್ತು.

**ಪಾಶ್ಚಾತ್ಯರಲ್ಲಿ ಸಮತೋಲದ ಕೊರತೆ**

ಪಾಶ್ಚಾತ್ಯರಲ್ಲಿ ಸಮತೋಲನದ ಕೊರತೆ ಇದೆ. ಸೋವಿಯತ್ ರಷ್ಯಾದಲ್ಲಿ ಕಮ್ಯುನಿಸ್ಟ್ ಕ್ರಾಂತಿಯ ನಂತರ ಪಾರುಪತ್ಯದಾರರ ನಿರೂಪದಂತೆ ಜನ ಕೆಲಸ ಮಾಡಬೇಕಾಯಿತು. ಇಂದು ಅಲ್ಲಿ ಕನಿಷ್ಠ–ಗರಿಷ್ಠ ವರಮಾನಗಳಲ್ಲಿ ೧ ರಿಂದ ೪೦ ರವರೆಗೆ ತಾರತಮ್ಯಗಳಿವೆ. ಇದು ಕಮ್ಯುನಿಸ್ಟರು ಜಪಿಸುವ ಸಮಾನತೆಗೆ ತದ್ವಿರುದ್ಧವಾಗಿದೆ. ಜೊತೆಗೆ ವರ್ಗಗಳ ಅಸ್ತಿತ್ವವನ್ನೂ ಅಲ್ಲಿ ಸಹಿಸಿಕೊಳ್ಳಲಾಗುತ್ತಿದೆ. ಯುಗೋಸ್ಲಾವಿಯಾದ ಮಾಜಿ ಪ್ರಧಾನ ಮಂತ್ರಿ ಡಿಲಾಸ್ ಅವರು "ಹೊಸ ವರ್ಗ – ದಿ ನ್ಯೂ ಕ್ಲಾಸ್" ಗ್ರಂಥದಲ್ಲಿ ಈ ತಾರತಮ್ಯವನ್ನು ದೃಢೀಕರಿಸಿದ್ದಾರೆ. ಕೆಲವರಿಗೆ ಸಾಮಾಜಿಕ ಉತ್ತೇಜನಗಳ ನೆಪದಲ್ಲಿ ವಿಶೇಷ ಸೌಲಭ್ಯಗಳನ್ನು ಅನುಕೂಲತೆಗಳನ್ನು ಮಾಡಿಕೊಡಲಾಗಿದೆ. ರಷ್ಯ ಮೊದಲ ಸ್ಫುಟ್ನಿಕ್ ಉಡಾಯಿಸಿದಾಗ ಕ್ರುಶ್ಚೇವ್ ಅದನ್ನು ಕಮ್ಯುನಿಸಂನ ವಿಜಯವೆಂದು ಹೆಮ್ಮೆಯಿಂದ ಘೋಷಿಸಿದರು. ಆದರ ಅತಿಶೀಘ್ರದಲ್ಲೆ ಖ್ಯಾತ ತತ್ತ್ವಜ್ಞಾನಿ ಬರ್ಟ್ರಂಡ್ ರಸಲ್ ಅವರು ಅದನ್ನು ಕಮ್ಯುನಿಸಂನ ವಿಜಯವಲ್ಲವೆಂದು ಛೀಮಾರಿ ಹಾಕಿದರು : "ಅದು ಕಮ್ಯುನಿಸಂನ ವಿಜಯವಲ್ಲ. ಪರಾಭವ. ಏಕೆಂದರೆ ಸ್ಫುಟ್ನಿಕ್ ಹಾರಿಸಿದ ವಿಜ್ಞಾನಿಗಳು ವಿಶೇಷ ಹಕ್ಕು ಬಾಧ್ಯತೆಗಳನ್ನುಳ್ಳ ವರ್ಗದವರಾಗಿದ್ದರು. ಈ ವಿಶೇಷ ಸವಲತ್ತುಗಳಿಂದಾಗಿ ಅವರಿಗೆ ಸ್ಫುಟ್ನಿಕ್ ತಯಾರಿಸುವುದು ಸಾಧ್ಯವಾಯಿತು". ಕಮ್ಯುನಿಸಂನ ಸೋಲು ಎನ್ನುವುದನ್ನು ನಾನೂ ಅನುಮೋದಿಸುತ್ತೇನೆ. ಏಕೆಂದರೆ ಅವರಿಂದ ಐಹಿಕ ಜೀವನದಲ್ಲಿ ಸಮಾನತೆಯನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಇದು ರಷ್ಯ, ಯುಗೋಸ್ಲಾವಿಯಾ ಮತ್ತು ಇತರ ಕಮ್ಯುನಿಸ್ಟ್ ರಾಷ್ಟ್ರಗಳ ಬಗ್ಗೆಯೂ ನಿಜ. ನಿಖರವಾಗಿ ಹೇಳುವುದಾದರೆ



ಪ್ರಜಾಸತ್ತೆಯಲ್ಲಿ ರಾಷ್ಟ್ರಗಳಲ್ಲಿ ಕಂಡುಬರುವ ಎಲ್ಲ ವಿರೋಧಾಭಾಸಗಳು, ಅನನುರೂಪತೆಗಳು ಕಮ್ಯುನಿಸ್ಟ್ ರಾಷ್ಟ್ರಗಳಲ್ಲೂ ಸ್ಪಷ್ಟವಾಗಿ ಗೋಚರಿಸುತ್ತಿವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಪಾಶ್ಚಾತ್ಯ ಜಗತ್ತಿನಲ್ಲಿ ಚಿರಂತನತೆ ಇಲ್ಲ, ಉದ್ದೇಶ ಕಾರಣ ತತ್ವಗಳಿಲ್ಲ ಮತ್ತು ತಾಳಿಕೆ ಬಾಳಿಕೆಗಳಿಲ್ಲ. ಅವರ ಚಿಂತನೆಗಳಲ್ಲಿ ಮಹತ್ವವಾದುದೇನಿಲ್ಲ, ಅವರ ಚಿಂತನೆಗಳೆಲ್ಲ ಸ್ವಾರ್ಥ–ಸುಖಗಳಿಗೆ ಸಂಬಂಧಿಸಿದ್ದು. ಇದರ ಫಲವಾಗಿ ಪಾಶ್ಚಾತ್ಯ ಸಿದ್ಧಾಂತಗಳು ಇತ್ಯಾತ್ಮಕವಾಗುವ ಬದಲು ಪ್ರತಿಗಾಮಿಯಾದವು. ಸಮಾಜ ಮತ್ತು ಕಾಲಕ್ಕನುಗುಣವಾದ ಅಪೇಕ್ಷಿತ ಗುರಿಗಮ್ಯತೆಗಳಲ್ಲಿ ಸಾಮರಸ್ಯ ಸಾಧಿಸುವುದು ಅವರಿಂದ ಸಾಧ್ಯವಾಗಲಿಲ್ಲ.

**ಕುರುಡು ಮಿತಿ ಸಲ್ಲ**

ಈ ಎಲ್ಲ ಹಿನ್ನೆಲೆಯಲ್ಲಿ ನಾವು ಪಶ್ಚಿಮದ ಅಂಧಾನುಕರಣೆ ಸರಿಯೇ ಎನ್ನುವುದನ್ನು ಪುನರಾಲೋಚಿಸಬೇಕಾಗಿದೆ. ಪಾಶ್ಚಿಮಾತ್ಯ ಚಿಂತಕರು ಸ್ವಾಮಿ ವಿವೇಕಾನಂದರಿಗೆ ಹೀಗೆ ಹೇಳಿದ್ದರು.

> "ನಾವು ನಿಮ್ಮ ಆಧ್ಯಾತ್ಮಿಕ ವಿಚಾರಗಳನ್ನು ಒಪ್ಪಿಕೊಳ್ಳುತ್ತೇವೆ. ಪ್ರತಿಯಾಗಿ ನೀವು ನಮ್ಮ ಸಮಾಜವಾದಿ ಸಿದ್ಧಾಂತವನ್ನು ಒಪ್ಪಿಕೊಳ್ಳಬೇಕು. ಆರ್ಥಿಕ ಕ್ಷೇತ್ರದಲ್ಲಿ ನೀವು ನಮ್ಮ ವಿಚಾರಗಳನ್ನು ಒಪ್ಪಿಕೊಳ್ಳಿ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ನಾವು ನಿಮ್ಮ ವಿಚಾರಗಳನ್ನು ಒಪ್ಪಿಕೊಳ್ಳುತ್ತೇವೆ."

ಆದಕ್ಕೆ ಸ್ವಾಮಿ ವಿವೇಕಾನಂದರು ಹೀಗೆ ಉತ್ತರಿಸಿದ್ದರು.

> "ಸೋದರರರೇ, ನೀವು ಹೇಳುವುದು ಸರಿ. ಆದರೆ ನಿಮ್ಮ ಸಿದ್ಧಾಂತವು ಇನ್ನೂ ಪ್ರಯೋಗದ ಹಂತದಲ್ಲಿದೆ ಆದರೆ ನಾವಾದರೋ ಒಂದು ಆರ್ಷೇಯ ರಾಷ್ಟ್ರ. ನಾವು ಸಾವಿರಾರು ವರ್ಷಗಳಷ್ಟು ಪ್ರಾಚೀನ. ನಾವು ಅಂಧಾಭಿಮಾನಿಗಳಲ್ಲ. ನಿಮ್ಮ ಸಿದ್ಧಾಂತಗಳನ್ನು ಒಪ್ಪಿಕೊಳ್ಳುವ ಮೊದಲು ಅದು ಸ್ಥಿರಗೊಳ್ಳಬೇಕಾಗಿದೆ. ಸುಮಾರು ಐದುನೂರು ವರ್ಷಗಳ ಕಾಲವಾದರೂ ಅದು ಸಮಾಜವನ್ನು ಪಾಲಿಸಿ ಪೋಷಿಸುವಂತಾದುದನ್ನು ನಾವು ಸಾಕ್ಷ್ಯಧಾರಗಳಿಂದಲೇ ನೋಡಬೇಕಾಗಿದೆ. ಬಳಕೆಯಲ್ಲಿಲ್ಲದ, ಇನ್ನೂ ಪ್ರಯೋಗಾವಸ್ಥೆಯಲ್ಲಿರುವ ಸಿದ್ಧಾಂತವೊಂದನ್ನು ನಮ್ಮಿಂದ ಒಪ್ಪಿಕೊಳ್ಳಲಾಗದು"

**ಕಮ್ಯುನಿಸ್ಟ್ ಸಿದ್ಧಾಂತದ ಗುಣಾವಗುಣಗಳು**

ಕಮ್ಯುನಿಸಮನ್ನು ಇವತ್ತಿನ ಅತ್ಯಂತ ಪ್ರಗತಿಶೀಲ ಸಿದ್ಧಾಂತವೆಂದು ಪಾಶ್ಚಾತ್ಯ ಜಗತ್ತಿನಲ್ಲಿ ಮಾನ್ಯ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಸ್ವಾಮೀಜಿಯವರ ಹೇಳಿಕೆಯನ್ನು ಪರಿಶೀಲಿಸೋಣ. ರಷ್ಯ ಕ್ರಾಂತಿ ನಡೆದು ಐವತ್ತು ವರ್ಷಗಳೂ ಆಗಿಲ್ಲ ಆಗಲೇ ಕಮ್ಯುನಿಸಂನಲ್ಲಿ ಬಿರುಕುಗಳು ಕಾಣಿಸಿಕೊಳ್ಳಲಾರಂಭಿಸಿವೆ. ಕಮ್ಯುನಿಸ್ಟ್ ವಲಯಗಳಲ್ಲೆ

ಅದರ ನಿಷ್ಕೃಷ್ಟವಾದ ಅರ್ಥವನ್ನು, ಅದರ ಲಕ್ಷಣ ಸ್ವರೂಪಗಳನ್ನು ಪ್ರಶ್ನಿಸಲಾಗುತ್ತಿದೆ. ರಷ್ಯ ಚೀನವನ್ನು ಕಮ್ಯುನಿಸ್ಟ್ ಪಂಥಭ್ರಷ್ಟ, ಪರಿಷ್ಕರಣವಾದಿ ರಾಷ್ಟ್ರವೆಂದು ದೂಷಿಸುತ್ತಿದೆ. ಚೀನ, ರಷ್ಯದ ವಿರುದ್ಧ ಇದೇ ಆರೋಪಗಳನ್ನು ಮಾಡುತ್ತಿದೆ. ಈ ಎರಡೂ ರಾಷ್ಟ್ರಗಳು ಯುಗೋಸ್ಲಾವಿಯಾ ವಿರುದ್ಧ ಇದೇ ಆಪಾದನೆಯನ್ನು ಮಾಡುತ್ತಿವೆ. ನಂಬೂದಿರಿ ಪಾಡ್ ಅವರ ದೃಷ್ಟಿಯಲ್ಲಿ ಡಾಂಗೆ ಪರಿಷ್ಕರಣ ವಾದಿ, ಡಾಂಗೆ ದೃಷ್ಟಿಯಲ್ಲಿ ನಂಬೂದಿರಿ ಪಾಡ್ ಪರಿಷ್ಕರಣವಾದಿ. ಚಾರು ಮಂಜುಂದಾರ್ ಕಮ್ಯುನಿಸ್ಟ್ ಪಂಥಭ್ರಷ್ಟ ಪರಿಷ್ಕರಣವಾದಿಯೆಂದು ಇವರಿಬ್ಬರೂ ಹೇಳುತ್ತಾರೆ. ಚಾರು ಮಜುಂದಾರರ ಲೆಕ್ಕ ಹಿಡಿಯುವುದರಲ್ಲಿ ಬಣ ಇನ್ನೊಂದು ಬಣದ ವಿರುದ್ಧ ಬಳಸಿರುವ ಗುಣವಾಚಕಗಳನ್ನು ನಾವು ಸಂಗ್ರಹಿಸಿ ನೋಡಿದಲ್ಲಿ ಕಮ್ಯುನಿಸ್ಟ್ ಪ್ರಪಂಚ ಪಂಥಭ್ರಷ್ಟ ಪ್ರಪಂಚವಾಗಿ ಬಿಡುತ್ತದೆ. ಕಮ್ಯುನಿಸ್ಟ್ ಸಿದ್ಧಾಂತದಲ್ಲಿ ದೋಷರಹಿತವಾದುದು ಏನೂ ಇಲ್ಲ. ಈ ಪರಿಸ್ಥಿತಿ ಎಂಥ ವಿಚಾರವಾದಿಗೂ ಹಿತರವಾದುದಲ್ಲ. ರಾಷ್ಟ್ರಗಳೆಂದು ಕರೆದುಕೊಳ್ಳುವವರು ಪಂಥಭ್ರಷ್ಟತೆಯ ಹಂತವನ್ನು ತಲುಪಿದ್ದಾರೆ. ಸ್ವಾಮೀಜಿಯವರ ಮಾತುಗಳಲ್ಲೇ ಹೇಳುವುದಾದರೆ, “ಈ ಸಿದ್ಧಾಂತ ಐದುನೂರು ವರ್ಷಗಳ ಕಾಲ ಸಮಾಜವನ್ನು ಪೋಷಿಸುವ ಶಕ್ತಿ–ಸಾಮರ್ಥ್ಯಗಳನ್ನು ಹೊಂದಿರುತ್ತದೆ ಎನ್ನುವ ಭರವಸೆಯಾದರೂ ಏನು?”

### ಪುನರ್ ನಿರ್ಮಾಣ

ವಿವಿಧ ಸಿದ್ಧಾಂತಗಳನ್ನು ಪರಾಮರ್ಶಿಸುವ ನಿರ್ಧಾರ ಕೈಕೊಂಡಾಗ ನಾವು ಅವುಗಳ ಅಂಧಾನುಕರಣೆ ಮಾಡದೆ ಗುಣಾಗುಣಗಳನ್ನು ಪರಿಶೀಲಿಸಬೇಕು. ಒಳ್ಳೆಯದನ್ನು ಅಳವಡಿಸಿಕೊಳ್ಳಲು ಆಕ್ಷೇಪಣೆ ಇರಬಾರದು. ಪುನರ್ ನಿರ್ಮಾಣದ ಬಗ್ಗೆ ಆರ್.ಎಸ್.ಎಸ್.ನ ದಿವಂಗತ ಸರಸಂಘ ಚಾಲಕರೊಬ್ಬರು ನಮ್ಮ ಹಳೆಯ ವ್ಯವಸ್ಥೆ ಬಗ್ಗೆ ಹೀಗೆ ಹೇಳಿದ್ದಾರೆ:

> “ಈಗಾಗಲೇ ಕ್ಷಯಿಸಿರುವ ವೃಕ್ಷದಲ್ಲಿ ಕಳೆಗುಂದಿದ, ಬಾಡಿದ ಎಲೆಗಳು, ಕೊಂಬೆಗಳು ಹಲವಾರಿರಬಹುದು. ಅವು ಒಣಗಿ ಉದುರಿಹೋಗಲಿ. ಈ ಬಗ್ಗೆ ನಾವು ವ್ಯಥೆ ಪಡೋದು ಬೇಡ. ಅದೇ ರೀತಿ ಹೊಸ ಚಿಗುರು ಮೂಡಿದಲ್ಲಿ, ಹೊಸ ಕುಡಿ ಮೂಡಿದಲ್ಲಿ ಅವುಗಳನ್ನು ಸ್ವಾಗತಿಸೋಣ. ಆದರೆ ನಾವು ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರವೆಂದರೆ ಇವೆಲ್ಲ ತಾಯಿ ವೃಕ್ಷದ ಜೈವಿಕ ವಿಕಾಸಗಳೆಂಬುದನ್ನು. ಇವು ವೃಕ್ಷದ ಅವಿಭಾಜ್ಯ ಅಂಗಗಳು. ಒಣಗಿದ ಎಲೆಗಳು, ಒಣಗಿದ ಕೊಂಬೆಗಳು ಉದುರಿ ನೆಲಕಚ್ಚುತ್ತವೆ. ಕಾಲಕಳೆದಂತೆ ಅವುಗಳ ಜಾಗದಲ್ಲಿ ಹೊಸಕುಡಿ, ಹೊಸ ಚಿಗುರು ಮೂಡುತ್ತವೆ. ಇದೊಂದು ನೈಸರ್ಗಿಕ ಪ್ರಕ್ರಿಯೆ, ಆದ್ದರಿಂದ ಯಾವುದೇ ಹಿಂಜರಿಕೆ ಬೇಡ. ಹೊಸ ಆಲೋಚನೆಗಳನ್ನು ನಾವು ಸ್ವಾಗತಿಸೋಣ. ಆದರೆ ಒಂದು ಷರತ್ತಿನ ಮೇಲೆ; ಅವು ನಮ್ಮ ಗುರಿ ತಲುಪಲು ನಮಗೆ ಸಹಾಯಕವಾಗಿರಬೇಕು”



ಆದರೆ ಇಂಥದೊಂದು ಖಾತ್ರಿಮಾತ್ರ ನಮ್ಮ ಮುಂದಿಲ್ಲ. ಹಾಗೆಯೇ ತೋರುತ್ತಿದೆ.

### ಭಾರತೀಯ ಜೀವನ ಪದ್ಧತಿ

ನಾವೀಗ ಪಾಶ್ಚಾತ್ಯ ಚಿಂತನೆಗಳ ಪರಾಮರ್ಶೆ ನಡೆಸಿದಂತೆ ನಮ್ಮ ಚಿಂತನೆಗಳನ್ನೂ ಪರಿಶೀಲಿಸಬೇಕಾಗಿದೆ. ನಮ್ಮ ಸಾಮಾಜಿಕ–ಆರ್ಥಿಕ ವ್ಯವಸ್ಥೆ ಪಾಶ್ಚಾತ್ಯರು ನಮಗಿಂತ ಭಿನ್ನವಾದ, ತದ್ವಿರುದ್ಧವಾದ ಅಭಿಪ್ರಾಯಗಳನ್ನು ಹೊಂದಿದ್ದಾರೆ. ನಮ್ಮದು ಯಾವುದೂ ಸಂಗತವಾಗಿಲ್ಲ. ಸಮಂಜಸವಾಗಿಲ್ಲ. ಸುಸಂಗತವಾಗಿಲ್ಲ. ಸ್ಥಿರವಾಗಿಲ್ಲ ಎಂದು ಅವರು ಭಾವಿಸುತ್ತಾರೆ. ನಮ್ಮೆಲ್ಲ ಆಚಾರ–ವಿಚಾರಗಳಲ್ಲೂ ಅವರು ಅರಾಜಕತೆ, ಅಸ್ತವ್ಯಸ್ತತೆಯನ್ನೇ ಕಾಣುತ್ತಾರೆ. ನಾವು ಒಂದೊಂದನ್ನೇ ಪರಿಶೀಲಿಸೋಣ. ಮೊದಲನೆಯದಾಗಿ ಧರ್ಮ. ಪಾಶ್ಚಾತ್ಯರ ದೃಷ್ಟಿಯಲ್ಲಿ ನಮ್ಮ ಧಾರ್ಮಿಕ ಕ್ಷೇತ್ರದಲ್ಲಂತೂ ಏಕರೂಪದ, ಒಂದೇ ಒಂದು ನಂಬಿಕೆ ಇಲ್ಲ. ಒಬ್ಬ ಆಸ್ತಿಕ, ಇನ್ನೊಬ್ಬ ನಾಸ್ತಿಕ. ಮೂರನೆಯವನು ಅದ್ವೈತವಾದಿ. ನಾಲ್ಕನೆಯವನು ದ್ವೈತವಾದಿ, ಕೆಲವರು ವಿಗ್ರಹರಾಧಕರು. ಇನ್ನು ಕೆಲವರು ನಿರಾಕಾರ ದೇವರುಗಳನ್ನು ಪೂಜಿಸುತ್ತಾರೆ. ಮತ್ತೆ ಕೆಲವರು ಎಲ್ಲ ರೂಪ ಆಕಾರಗಳ ದೇವರುಗಳನ್ನೂ ತಿರಸ್ಕರಿಸುತ್ತಾರೆ. ದೇವರನ್ನು ನಂಬುವವರಲ್ಲಿ ಏಕರೂಪದ ಒಬ್ಬನೇ ಆದ ದೇವರಿಲ್ಲ. ಅಸಂಖ್ಯಾತ ದೇವಾನುದೇವತೆಗಳಿದ್ದಾರೆ. ೩೩೦ ದಶಲಕ್ಷ ಭಕ್ತರಷ್ಟೇ ಸಂಖ್ಯೆಯಲ್ಲಿ ದೇವರುಗಳೂ ಇದ್ದಾರೆ. ಪ್ರಾಚೀನ ಭಾರತದ ಜನಸಂಖ್ಯೆಗನುಗುಣವಾಗಿ ಈ ಮೂವತ್ಮೂರು ಕೋಟಿ. ಪ್ರತಿಯೊಬ್ಬ ಪ್ರಜೆಗೂ ತನ್ನ ಪಂಥಕ್ಕನುಗುಣವಾದ, ದೇವರನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿದೆ. ಪಥ, ಪಂಥಗಳು ವಿಭಿನ್ನವಾಗಿದ್ದೇ ಇರುತ್ತವೆ. ಆದರೆ ಇದು ಪಾಶ್ಚಾತ್ಯ ಜಗತ್ತಿನಲ್ಲಿ ಊಹೆಗೂ ನಿಲುಕದ ವಿಷಯ ಏಕೆಂದರೆ ಅಲ್ಲಿ ಚಿಂತನೆ, ಆಲೋಚನೆಯನ್ನು ಕಟ್ಟುಪಾಡಿಗೊಳಪಡಿಸಲಾಗಿದೆ. ಎರಡನೆಯದಾಗಿ “ನಾನೇ ಸರಿ, ನನ್ನ ಪಂಥ, ಪಥಗಳೇ ಸರಿ” ಎನ್ನುವ ಮನೋಭಾವ ಹೀಗಿರುವಾಗ ವೈವಿಧ್ಯಮಯವಾದ ವಿಪರ್ಯಾಸಗಳಿಂದ ಕೂಡಿದ ಭಾರತವನ್ನು ಅವರು ಅನುಮಾನದಿಂದ ನೋಡುವುದು ಸಹಜವೇ ಆಗಿದೆ. ಎಂದೇ ಪಾಶ್ಚಾತ್ಯರು ಕಕ್ಕಾಬಿಕ್ಕಿಯಾಗಿದ್ದಾರೆ. ಇದೇ ರೀತಿ, ಕುಟುಂಬದ ಸ್ಥಾನಮಾನ, ರಾಷ್ಟ್ರ, ಸಮಾಜ, ಅಂತರ ರಾಷ್ಟ್ರೀಯತೆ ಹಾಗೂ ವ್ಯಕ್ತಿಯ ಸ್ಥಾನಮಾನ ಇವೆಲ್ಲವೂ ಪಾಶ್ಚಾತ್ಯರಿಗೆ ಆಂತರಿಕ ವಿರೋಧಾಭಾಸ, ವಿಪರ್ಯಾಸಗಳಿಂದ ಕೂಡಿರುವಂತೆ ಕಾಣಿಸುತ್ತದೆ.

ಪ್ರತಿಯೊಬ್ಬ ವ್ಯಕ್ತಿಗೆ ಅಭಿವೃದ್ಧಿ ಹೊಂದಲು ಸಂಪೂರ್ಣ ಅವಕಾಶಗಳಿರಬೇಕು ಹಾಗೂ ಪರಮಸಂತೋಷ ವ್ಯಕ್ತಿಯ ಹಕ್ಕು ಎಂಬುದನ್ನು ನಾವು ನಂಬುತ್ತೇವೆ.

ಆದ್ದರಿಂದ ವ್ಯಕ್ತಿಯ ವಿಕಾಸ ಮತ್ತು ಸಂತೋಷಗಳಿಗೆ ಸಂಪೂರ್ಣ ಅವಕಾಶಗಳನ್ನು ಕಲ್ಪಿಸುವಂಥ ಸಾಮಾಜಿಕ–ಆರ್ಥಿಕ ವ್ಯವಸ್ಥೆಗಳನ್ನು ನಾವು ರೂಪಿಸಬೇಕು. ವ್ಯಕ್ತಿಯ ಜೊತೆಗೆ ನಾವು ಕುಟುಂಬವನ್ನೂ ಮಾನ್ಯ ಮಾಡಿದ್ದೇವೆ. ತಂದೆ–ತಾಯಿಯರು ದೇವರ ಸಮಾನ ಎಂದು ಪರಿಗಣಿಸಲಾಗಿದೆ. (ಮಾತೃ ದೇವೋಭವ, ಪಿತೃ ದೇವೋಭವ). ವ್ಯಕ್ತಿಯ ಸ್ವತಂತ್ರ ಅಸ್ತಿತ್ವವನ್ನು ಮಾನ್ಯ ಮಾಡಲಾಗಿದೆ ಎಂದಾಕ್ಷಣ ಅವನು ವಿವಾಹದ ನಂತರ ತಂದೆ–ತಾಯಿಯರನ್ನು ತ್ಯಜಿಸಬಹುದೆಂದು ಎಲ್ಲಿಯೂ ಹೇಳಿಲ್ಲ. ವ್ಯಕ್ತಿ ಮಾತ್ರವಲ್ಲ ಕುಟುಂಬದ ಪಾತ್ರವನ್ನು ಗೊತ್ತುಪಡಿಸಲಾಗಿದೆ. ಅಷ್ಟೇ ಅಲ್ಲದೆ ಕುಟುಂಬದ ಸಲುವಾಗಿ ವ್ಯಕ್ತಿ ತ್ಯಾಗಮಾಡಬೇಕೆಂದೂ ಹೇಳಲಾಗಿದೆ. ಆತ್ಮದ ಸಲುವಾಗಿ ಇಡೀ ವಿಶ್ವವನ್ನೇ ತ್ಯಾಗಮಾಡಬೇಕೆಂದು ವಿಧಿಸಲಾಗಿದೆ. (ಆತ್ಮಾರ್ಥೆ ಪೃಥ್ವಿಯಂ ತ್ಯಜೇತ್). ಪಾಶ್ಚಾತ್ಯ ಚಿಂತನೆಗಳಿಂದ ಪ್ರಭಾವಿತರಾದವರು ಇವುಗಳನ್ನು ಅಸಂಬದ್ಧ, ಅಸಮರ್ಪಕ ಎಂದು ಭಾವಿಸುತ್ತಾರೆ. ಆದರೆ ಇಂಥ ಭಾವನೆ ಸರಿಯಲ್ಲ ಎನ್ನುವುದು ನಮಗೆಲ್ಲರಿಗೂ ಗೊತ್ತು.

**ವ್ಯಕ್ತಿ ಮತ್ತು ಸಮಾಜ**

ಇದೇ ರೀತಿ ರಾಷ್ಟ್ರ ಮತ್ತು ಸಮಾಜದ ಜೊತೆ ವ್ಯಕ್ತಿಯ ಸಂಬಂಧವನ್ನೂ ನಿರೂಪಿಸಲಾಗಿದೆ. ಆದರೆ ಪಾಶ್ಚಾತ್ಯ ಜಗತ್ತಿನಲ್ಲಿ ವ್ಯಕ್ತಿ–ಸಮಾಜ–ರಾಷ್ಟ್ರಗಳ ಬಾಂಧವ್ಯಕ್ಕೆ ಸಂಬಂಧಿಸಿದಂತೆ ತಕರಾರುಗಳಿವೆ. ವ್ಯಕ್ತಿ ಮತ್ತು ಸಮಾಜದ ನಡುವಣ ಎಲ್ಲೆಯನ್ನು ಕುರಿತು ಉಗ್ರಸ್ವರೂಪದ ವಾದ–ವಿವಾದಗಳು ಅಲ್ಲಿ ನಡೆದಿವೆ. ಅಲ್ಲಿ ವ್ಯಕ್ತಿಗೆ ಹೆಚ್ಚಿನ ಸ್ವಾತಂತ್ರ್ಯಕೊಟ್ಟರೆ ಅಷ್ಟರಮಟ್ಟಿಗೆ ಸಮಾಜದ ಸ್ವಾತಂತ್ರ್ಯದಲ್ಲಿ ಕಡಿತ ಉಂಟಾಗುತ್ತದೆ. ಸಮಾಜಕ್ಕೆ ಹೆಚ್ಚಿನ ಸ್ವಾತಂತ್ರ್ಯಕೊಟ್ಟರೆ ಅದೇ ಪ್ರಮಾಣದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಮೊಟಕುಗೊಳ್ಳುತ್ತದೆ. ಹೀಗಾಗಿ ಪಾಶ್ಚಾತ್ಯ ಜಗತ್ತಿನಲ್ಲಿ ವ್ಯಕ್ತಿ ಮತ್ತು ಸಮಾಜದ ಮಧ್ಯೆ ಸಂಘರ್ಷವಿರುವುದನ್ನು ನಾವು ನೋಡುತ್ತಿದ್ದೇವೆ.

ಆದರೆ ಭಾರತದಲ್ಲಿ ವ್ಯಕ್ತಿ ಮತ್ತು ಸಮಾಜ ಇಬ್ಬರಿಗೂ ಸೂಕ್ತ ಸ್ಥಾನಮಾನಗಳನ್ನು ನೀಡಲಾಗಿದೆ. ಇವರಿಬ್ಬರ ನಡುವೆ ಘರ್ಷಣೆ ಇಲ್ಲ. ಪೂರ್ಣ ವಿಕಾಸ ಮತ್ತು ಪರಮ ಸಂತೋಷಕ್ಕೆ ಸಂಬಂಧಿಸಿದ ವ್ಯಕ್ತಿಯ ಹಕ್ಕನ್ನು ಒಪ್ಪಿಕೊಳ್ಳಲಾಗಿದೆ. ಅಂತೆಯೇ ಗೌರವ ವಿಧೇಯತೆಗಳನ್ನು ತೋರುವ ಸಾಮಾಜಿಕ ಶಿಸ್ತನ್ನು ವ್ಯಕ್ತಿಗೆ ಬೋಧಿಸಲಾಗಿದೆ. ವ್ಯಕ್ತಿ ತನ್ನ ಅಭಿವೃದ್ಧಿ ತನ್ನ ತೃಪ್ತಿಗಳಿಗಾಗಿ ಶ್ರಮಿಸುವುದರ ಜೊತೆಗೆ ಸಮಾಜಕ್ಕೂ ತಲೆಬಾಗಬೇಕು. ಅಂದರೆ ಹಿಂಜರಿಯದೆ ಸ್ವಯಂಸ್ಫೂರ್ತಿಯಿಂದ ಸಾಮಾಜಿಕ ಕರ್ತವ್ಯಗಳನ್ನು ಪಾಲಿಸಬೇಕು. ತನ್ನ ಅಭ್ಯುದಯವನ್ನು ಸಮಾಜದ ಪದತಲದಲ್ಲಿ ಅರ್ಪಿಸಲು ಸಿದ್ಧನಾಗಿರುವುದೇ ವ್ಯಕ್ತಿಯ ಅಂತಿಮ ಗುರಿಗಮ್ಯತೆಗಳಾಗಿವೆ. ಹೀಗೆ ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ಶಿಸ್ತುಗಳನ್ನು ಸ್ಪಷ್ಟವಾಗಿ ಸಂಪೂರ್ಣವಾಗಿ



ಗುರುತಿಸಿರುವುದನ್ನು ನಾವು ಕಾಣುತ್ತೇವೆ. ಇದು ಪಾಶ್ಚಾತ್ಯರನ್ನು ಚಕಿತಗೊಳಿಸಿದೆ.

**ರಾಷ್ಟ್ರೀಯತೆ–ಅಂತರ ರಾಷ್ಟ್ರೀಯತೆ**

ಮನುಷ್ಯ ಮತ್ತು ಸಮಾಜದ ನಡುವಣ ಬಾಂಧವ್ಯ ಕುರಿತು ಮೇಲೆ ಹೇಳಿದ ಮಾತುಗಳು ರಾಷ್ಟ್ರೀಯತೆ ಮತ್ತು ಅಂತರರಾಷ್ಟ್ರೀಯ ಬಾಂಧವ್ಯಗಳ ಬಗ್ಗೆಯೂ ನಿಜವಾದದ್ದು. ಪಾಶ್ಚಾತ್ಯ ಪ್ರಪಂಚದಲ್ಲಿ ರಾಷ್ಟ್ರೀಯತೆ ಒಂದು ಪ್ರತಿಕ್ರಿಯೆಯಾಗಿ ಹುಟ್ಟಿದೆ. ಆದ್ದರಿಂದಲೇ ಅಲ್ಲಿ ಎರಡು ರಾಷ್ಟ್ರಗಳ ರಾಷ್ಟ್ರೀಯತೆ ಹಾಗೂ ರಾಷ್ಟ್ರೀಯತೆ ಮತ್ತು ಅಂತರರಾಷ್ಟ್ರೀಯತೆ ಬಗ್ಗೆ ಅಂತರ್ಗತವಾದ ಅಸಾಮರಸ್ಯ, ಅನನುರೂಪತೆಗಳಿವೆ. ನಮ್ಮಲ್ಲಿ ರಾಷ್ಟ್ರೀಯತೆ ಬಿಂಬಿಸುವ ಪ್ರಾರ್ಥನೆಯೊಂದಿದೆ.

> **"ನಾನು ಈ ಘನತೆವೆತ್ತ ರಾಷ್ಟ್ರದಲ್ಲಿ ಜನ್ಮತಾಳಿದ್ದೇನೆ. ನನಗೆ ಸಂತೋಷ ವೈಭವಗಳನ್ನು ಕರುಣಿಸು"**
>
> **(ಪ್ರದೂರ್ ಭುವನ್ ಸುರಷ್ಟ್ರೇ ಅಸ್ಮಿನ್ ಕೀರ್ತಿಮ್ ರಿದ್ಧಿಮ್ ದದಾತು ಮೇ)**

ವಿಶ್ವದ ಒಳಿತನ್ನು ಬಯಸುವ ಇನ್ನು ಇಂಥ ಹಲವಾರು ಪ್ರಾರ್ಥನೆಗಳಿವೆ. ವಿಶ್ವಹಿಂದೂ ಪರಿಷತ್ ವ್ಯವಸ್ಥೆಗೊಳಿಸಿದ್ದ ವಿಶ್ವ ಹಿಂದೂ ಸಮ್ಮೇಳನದಲ್ಲಿ ಕೇಳಿಬಂದ "ಹಿಂದೂವನ್ನೂ ವಿಶದಪಡಿಸುವುದು ಹೇಗೆ?" ಎನ್ನುವ ಪ್ರಶ್ನೆಯೊಂದು ನನಗೆ ನೆನಪಾಗುತ್ತಿದೆ. ಇಲ್ಲಿ ಈ ಪ್ರಶ್ನೆಯನ್ನು ನಾನು ವಿವರವಾಗಿ ಚರ್ಚಿಸಲಾಗದು. ಆದರೆ ಅದರ ಒಂದು ಮುಖವನ್ನು ಮಾತ್ರ ಪ್ರಸ್ತಾಪಿಸುತ್ತೇನೆ. ಹಿಂದೂ ರಾಷ್ಟ್ರೀಯತೆ, ಅಂತರ ರಾಷ್ಟ್ರೀಯತೆ ಅಥವಾ ಅದಕ್ಕೂ ಮಿಗಿಲಾದ ಅಧಿಕಾರ್ಥವನ್ನು ಧ್ವನಿಸುತ್ತದೆ. ಇಡೀ ಪ್ರಪಂಚ ಅನಾಗರಿಕವಾಗಿದ್ದಾಗ, ವಿಶ್ವ ನಾಗರಿಕತೆಯನ್ನು ಹಿಂದೂ ರಾಷ್ಟ್ರೀಯತೆಯೊಂದಿಗೆ ಅನಿವಾರ್ಯವಾಗಿ ಗುರುತಿಸಲಾಗಿತ್ತು ಎನ್ನುವುದೇ ಮೇಲಿನ ಪ್ರಶ್ನೆ ಉತ್ತರ. ಆದರೆ ಇಂಥ ಅತ್ಯುನ್ನತವಾದ ಪರಮೋಚ್ಚವಾದ ಸ್ಥಿತಿಯಲ್ಲಿದ್ದಾಗ ನಾವು ನಮ್ಮ ಹಿತಕ್ಕಾಗಿ ಬೇರೆ ರಾಷ್ಟ್ರಗಳನ್ನು ಶೋಧಿಸುವ ಬಗ್ಗೆ ಯೋಚಿಸಲಿಲ್ಲ. "ಕೃಣ್ವಂತೋ ವಿಶ್ವಮಾರ್ಯಂ" ಎನ್ನುವುದೇ ನಮ್ಮ ಧ್ಯೇಯವಾಗಿತ್ತು. ನಾವು ಆರ್ಯನ್ನರು, ವಿಶ್ವವನ್ನು ಆರ್ಯನ್ ಆಗಿ ಮಾಡುತ್ತೇವೆ. ನಾವು ಸುಸಂಸ್ಕೃತರು ನಾವು ನಮ್ಮ ಸಂಸ್ಕೃತಿ ಮತ್ತು ಸಜ್ಜನಿಕೆಗಳನ್ನು ಇನ್ನೊಬ್ಬರ ಮಟ್ಟದ ವೃದ್ಧಿಗೆ ಬಳಸುತ್ತೇವೆ ಎನ್ನುವುದೇ ಮೇಲಿನ ಮಾತಿನ ಅರ್ಥ. ಈ ಚಿಂತನೆ ನಮ್ಮ ಇತ್ಯಾತ್ಮಕ ರಾಷ್ಟ್ರೀಯತೆಯ ಆಧಾರವಾಗಿದೆ. ಇದು ಐತಿಹಾಸಿಕ ಸಂಗತಿ. ಇದು ರಾಷ್ಟ್ರೀಯತೆ ಮತ್ತು ಅಂತರರಾಷ್ಟ್ರೀಯತೆಗಳ ನಡುವೆ ಘರ್ಷಣೆಗಳನ್ನುಂಟುಮಾಡುವ ಬದಲು ಅಂತರರಾಷ್ಟ್ರೀಯತೆಯ ಓನಾಮವನ್ನು. ಮೂಲತತ್ತ್ವಗಳನ್ನು ಬೋಧಿಸುತ್ತದೆ. ರಾಷ್ಟ್ರೀಯನಾದವನು ಅಂತರರಾಷ್ಟ್ರೀಯನಾಗಲಾರ ಎನ್ನುವ ವಾದವನ್ನು ನಾವು ಒಪ್ಪುವುದಿಲ್ಲ. ಮತ್ತೆ ಈ ವಿಚಾರಗಳ ಬಗ್ಗೆ ಪಾಶ್ವಾತ್ಯರು ಆಶ್ಚರ್ಯಚಕಿತರು. ಒಬ್ಬ

ವ್ಯಕ್ತಿ ಏಕಕಾಲದಲ್ಲಿ ರಾಷ್ಟ್ರೀಯನೂ ಅಂತರರಾಷ್ಟ್ರೀಯನೂ ಆಗಿರುವುದು ಸಾಧ್ಯ ಎನ್ನುವುದನ್ನು ಗ್ರಹಿಸುವುದರಲ್ಲಿ ಅವರು ವಿಫಲರಾಗಿದ್ದಾರೆ. ಆದರೆ ನಮ್ಮಲ್ಲಿ ಇಂಥ ಅಸಂಬದ್ಧತೆ ವಿರೋಧಾಭಾಸಗಳಿಲ್ಲ.

**ಮಾನವತ್ವದ ಆಚೆಗೆ**

ಮುಂದಿನದು ಪಾಶ್ಚಾತ್ಯರ ಗ್ರಹಿಕೆಯ ಅಳವಿಗೆ ಮೀರಿದ್ದು. ಹೆಚ್ಚೆಂದರೆ ಅವರು ಅಂತರರಾಷ್ಟ್ರೀಯತೆ ಅಥವಾ ಮಾನವತ್ವದ ಬಗ್ಗೆ ಚಿಂತನ ಮಂಥನ ನಡೆಸಬಹುದಷ್ಟೆ. ಆದರೆ ನಮ್ಮ ಚಿಂತನ ಲಹರಿ ಈ ಮಿತಿಗಳನ್ನು ದಾಟಿ ಮುಂದೆ ಹೋಗಿದೆ. ಇನ್ನಷ್ಟು ಮುಂದಕ್ಕೆ ಹೋಗಿ ಇಡೀ ಬದುಕನ್ನೇ ಲಕ್ಷ್ಯಕ್ಕೆ ತೆಗೆದುಕೊಂಡಿದೆ. ನಾವು ಮಾನವ ಬದುಕನ್ನಷ್ಟೇ ಅಲ್ಲದೆ ಇತರ ಜೀವಿಗಳ ಬದುಕನ್ನು ಕುರಿತೂ ಯೋಚಿಸಿದ್ದೇವೆ. ಹಿಂದೂಗಳಲ್ಲಿ ಕೆಲವರು ಮೀನು, ಇರುವೆ. ಹಸುಗಳು ಮೊದಲಾದ ಪಶುಪಕ್ಷಿಗಳಿಗೆ ಹಿಟ್ಟು, ಅಕ್ಕಿನುಚ್ಚು, ಸಕ್ಕರೆ ಮೊದಲಾದ ಆಹಾರವನ್ನು ಉಣಬಡಿಸುತ್ತಾರೆ. ಶಿಲೆಯಲ್ಲೂ ದೇವರನ್ನು ಕಾಣುತ್ತಾರೆ. ಶಿಲಾಮೂರ್ತಿಗಳನ್ನು ಪೂಜಿಸುತ್ತಾರೆ. ಏಕೆಂದರೆ ಭಗವಂತ ಸರ್ವಾಂತರ್ಯಾಮಿ. ಮನುಷ್ಯನೆಂದರೆ ಏನು? ಮನುಷ್ಯ ಯಾರು? ಸಚೇತನ ಜೀವಿಗಳು, ಜಡ ವಸ್ತುಗಳು, ಸಂವೇದಕ – ಅಸಂವೇದಕಗಳು – ಏನು ಇವೆಲ್ಲ? ಇವೆಲ್ಲದರ ಸೃಷ್ಟಿಯ ಮರ್ಮ ಏನು? ಎಂದೆಲ್ಲ ಜಿಜ್ಞಾಸೆ ನಡೆಸಿದ ಇವರು ಆಖೈರಾಗಿ ಸಕಲ ಸೃಷ್ಟಿಯೂ ಒಂದೇ ಎನ್ನುವ ನಿರ್ಧಾರಕ್ಕೆ ಬಂದಿದ್ದಾರೆ. ಆದರೆ ಏಕತೆ ಎನ್ನುವುದು ಏಕಪ್ರಕಾರತೆಗಿಂತ ಭಿನ್ನವಾದದ್ದು ಎಂಬುದನ್ನೂ ಇವರು ಅನ್ವೇಷಿಸಿದ್ದಾರೆ. ಎಲ್ಲ ಏಕಪ್ರಕಾರವಾಗಿರಬೇಕೆಂದು ನಾವು ಯಾವತ್ತೂ ನಂಬಿದವರಲ್ಲ. ಆದರೆ, ನಾವೆಲ್ಲ ಒಂದು ಏಕತೆ ಎಷ್ಟು ಪ್ರಬಲವಾದದ್ದು, ಎಂಬುದನ್ನು ನಾವು ಯೋಚಿಸಿದ್ದೇವೆ. "ಸರ್ವಂ ಖಲ್ವಿದಂ ಬ್ರಹ್ಮ" ವಿಶ್ವವೆಲ್ಲ ಒಂದೇ, ಬ್ರಹ್ಮಾಂಡವೆಲ್ಲ ಒಂದೇ ಜಗತ್ತನ್ನು ಸೃಷ್ಟಿಯನ್ನು ಪೋಷಿಸುವಂಥ ಪೋಷಿಸುವಂಥ ಸಾಮರ್ಥ್ಯ ನಮ್ಮ ಧರ್ಮಕ್ಕಿದೆ. ನಮ್ಮ ದೇಶಕ್ಕಿದೆ. ಕೆಲವೊಂದು ತತ್ತ್ವಗಳು ಚಿರಂತನವಾದವು. ಸಾರ್ವಕಾಲಿಕವಾಗಿ ಉಳಿಯುವಂಥವು ಆದ್ದರಿಂದ ಅಪರಿವರ್ತನೀಯ. ಸತ್ಯಪೂರ್ಣವಾದ ಮತ್ತು ಚಿರಂತನವಾದ ಈ ತತ್ವಗಳ ಬಲದಿಂದ ಪರಿವರ್ತನೀತ ಸ್ಥಿತಿಯ ಸನ್ನಿವೇಶಗಳಿಗನುಗುಣವಾದ ಶ್ರೇಷ್ಠ ವಿಚಾರಗಳನ್ನು, ಕಲ್ಪನೆಗಳನ್ನು ನಿರೂಪಿಸುವುದು ನಮ್ಮಿಂದ ಸಾಧ್ಯವಾಗಿದೆ. ವಿಪರ್ಯಾಸ–ವಿರೋಧಾಭಾಸಗಳನ್ನು, ಭಿನ್ನಾಭಿಪ್ರಾಯಗಳನ್ನು ಸಮನ್ವಯಗೊಳಿಸಲಾಗಿದೆ. ಸಾಮರಸ್ಯಗೊಳಿಸಲಾಗಿದೆ. ನಾವು ಒಂದು ವಿಷಯ. ಒಂದು ಅಂಶ ಕುರಿತು ಚಿಂತಿಸಲಾರಂಭಿಸಿದರೆ ಅನೇಕ ಅಸಂಗತಗಳು, ತಿಕ್ಕಾಟಗಳು ಉದ್ಭವಿಸುತ್ತವೆ. ಕೆಲವೊಮ್ಮೆ ನಾವು ಕರ್ಮದ ಬಗ್ಗೆ



ಇನ್ನು ಕೆಲವೊಮ್ಮೆ ಸನ್ಯಾಸದ ಬಗ್ಗೆ ಮಾತಾಡುತ್ತೇವೆ. ಒಂದು ಕಡೆ ಮೋಕ್ಷವನ್ನು ನಂಬುತ್ತೇವೆ ಇನ್ನೊಂದು ಕಡೆ "ಎಲ್ಲ ವ್ಯರ್ಥ, ಎಲ್ಲ ನಿರುಪಯುಕ್ತ" ಎಂದು ಭಾವಿಸುತ್ತೇವೆ. ಕೆಲವೊಮ್ಮೆ ಧನವೇ ಧರ್ಮದ ಮೂಲ "ಧರ್ಮಸ್ಯ ಮೂಲಂ ಅರ್ಥಃ" ಎಂದು ಘೋಷಿಸುತ್ತೇವೆ. ಇವೆಲ್ಲವೂ ಬೇರೆ ಬೇರೆಯಾದ ಭಿನ್ನಭಿನ್ನವಾದ ಅಭಿಪ್ರಾಯಗಳಾದರೂ ಒಂದು ಸಮನ್ವಯಿತ ಪದ್ಧತಿಯಾಗಿ ಸಂಗಮಿಸಿವೆ. ಇದು ಕೆಲವು ಸಲ ಸಾಮಾನ್ಯರಿಗೆ ಅರ್ಥ ಮಾಡಿಕೊಳ್ಳಲು ಕಷ್ಟವಾಗಬಹುದು. ಸ್ವಾಮಿ ವಿವೇಕಾನಂದರ ಮಾತುಗಳಲ್ಲೇ ಹೇಳಬಹುದಾದರೆ, ನಮ್ಮ ಧರ್ಮ ಸುರಕ್ಷಿತವಾಗಿ ಸಮಾಜದ ಪಾಲನೆ–ಪೋಷಣೆ ಮಾಡಬಲ್ಲದು. ಅದರಿಂದ ಸಮಾಜದ ಹೊರೆ ಹೊರಲು ಸಾಧ್ಯ. ನೂರಾರು ವರ್ಷಗಳಿಂದ ನಮ್ಮ ಧರ್ಮ ಸಮಾಜವನ್ನು ಕಾಪಾಡಿಕೊಂಡು ಬಂದಿದೆ. ಕಳೆದ ೧೨೦೦–೧೩೦೦ ವರ್ಷಗಳಿಂದೀಚೆಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಆಗಬೇಕಾಗಿರುವ ಬದಲಾವಣೆಗಳತ್ತ ಸಾಕಷ್ಟು ಗಮನ ಹರಿಸಲಾಗಿಲ್ಲ. ಯೋಚನೆಮಾಡಿಲ್ಲ ಎನ್ನುವುದು ದಿಟ. 'ಬದಲಾವಣೆ' ಎನ್ನುವ ಬಗ್ಗೆ ಗಾಬರಿಯಾಗಬೇಕಾದ್ದಿಲ್ಲ. ಕಾಲಕಾಲಕ್ಕೆ ಧರ್ಮ ಮತ್ತು ತತ್ತ್ವಶಾಸ್ತ್ರಗಳ ಅನುಮೋದನೆಯೊಂದಿಗೇ ಸಮಾಜದಲ್ಲಿ ಬದಲಾವಣೆಗಳನ್ನು ಜಾರಿಗೊಳಿಸಲಾಗಿದೆ.

**ತರ್ಕೋ ಪ್ರತಿಷ್ಠ ಶ್ರುತಯೋ ವಿಭಿನ್ನ–**
**ರೈಕೋ ಮುನಿರ್ಯಸ್ಯ ವಾಚಃ ಪ್ರಮಾಣಮ್**

ಎಂದು ಹೇಳಲಾಗಿದೆ. ಅಂದರೆ, ವೇದಗಳಲ್ಲಿ ಭಿನ್ನ ಭಿನ್ನ ಅಭಿಪ್ರಾಯಗಳಿವೆ. ಸ್ಮೃತಿಗಳು ಪ್ರತ್ಯೇಕವಾಗಿವೆ. ಇವುಗಳಲ್ಲಿ ಭಿನ್ನತೆ ಇದೆ. ಮುನಿಗಳ ಮಾತನ್ನೇ ಆಖೈರೆಂದು ಪರಿಗಣಿಸಲಾಗದು. ಆದರೆ ದುರದೃಷ್ಟವಶಾತ್ ಕಳೆದ ೧೨೦೦–೧೩೦೦ ವರ್ಷಗಳ ಕಾಲಾವಧಿಯಲ್ಲಿ ಬದಲಾವಣೆಗಳನ್ನು ಜಾರಿಗೆ ತರಲು ಅಗತ್ಯವಾದ ಶಾಂತಿ ಪರಿಸ್ಥಿತಿ ಇರಲಿಲ್ಲ ಹಾಗೂ ಕೆಲವೊಂದು ವಿಚಾರಗಳು, ವಿಕೃತಿಗಳು ಸಮಾಜದೊಳಕ್ಕೆ ನುಸುಳಿದವು. ನಿಸ್ಸಂದೇಹವಾಗಿಯೂ ಶಸ್ತ್ರಚಿಕಿತ್ಸೆ ಅಗತ್ಯವಾಗಿದೆ. ಗಾಂಧೀಜಿಯವರು ಹೇಳಿರುವಂತೆ. "ರೋಗಪೀಡಿತ ಅಂಗವನ್ನು ತೆಗೆದು ಹಾಕಿ, ರೋಗಿಯನ್ನು ಸಾಯಿಸಬೇಡಿ" ದೋಷಗಳನ್ನು ನಿವಾರಿಸಿ, ವ್ಯವಸ್ಥೆ ಕಾರ್ಯ ನಿರ್ವಹಿಸುತ್ತಿರಲಿ. ಯಾವಾಗಿನಿಂದಲೂ ನಮ್ಮಲ್ಲಿ ಚಿರನೂತನವಾದ ಹಾಗೂ ಅಪರಿವರ್ತನೀಯವಾದ ಶಾಸನಗಳಿವೆ. ಈ ಶಾಸನಗಳು ಹಾಗೂ ಬದಲಾವಣೆಯ ವಿಧಿಗಳು ಪರಸ್ಪರ ಕೈಹಿಡಿದೇ ಸಾಗುತ್ತಾಬಂದಿವೆ.

ಈಗ ಉದ್ಭವಿಸಿರುವ ಪ್ರಶ್ನೆಯೆಂದರೆ : ಪಾಶ್ಚಾತ್ಯ ಸಿದ್ಧಾಂತಗಳನ್ನೇ ಪ್ರಗತಿಶೀಲ, ಆಧುನಿಕ ಹಾಗೂ ಅತ್ಯುತ್ತಮ ಎಂದು ನಾವು ಸ್ವೀಕರಿಸಬೇಕೆ? ಎರಡನ್ನೂ ತುಲನಾತ್ಮಕವಾಗಿ ಅಧ್ಯಯನ ಮಾಡಿ ಅವುಗಳಲ್ಲಿ ಉತ್ತಮವಾದುದನ್ನು ಸ್ವೀಕರಿಸುವುದು ಒಳಿತಲ್ಲವೆ? ತುಲನಾತ್ಮಕವಾಗಿ ನೋಡಿದಾಗ ಪಾಶ್ಚಾತ್ಯ ಚಿಂತನೆಗಿಂತ ನಮ್ಮ ಸನಾತನ

ಧರ್ಮ ಅತ್ಯುತ್ಕೃಷ್ಟವಾದುದೆನಿಸುತ್ತದೆ. ನಮ್ಮ ಸನಾತನ ಧರ್ಮಕ್ಕೆ ಹಲವಾರು ಗುಣಲಕ್ಷಣಗಳಿವೆ. ಆದರೆ ಇವತ್ತಿನ ಸಂದರ್ಭದಲ್ಲಿ ದಿವಂಗತ ಪಂಡಿತ್ ದೀನ ದಯಾಳ್ ಉಪಾಧ್ಯಾಯರು ಹೇಳಿರುವಂತೆ "ನಾವಿಂದು ಅಖಂಡ ಮಾನವತಾ ವಾದವನ್ನು" ಪ್ರತಿಪಾದಿಸುತ್ತಿದ್ದೇವೆ.

**ಆಧುನಿಕ ಧರ್ಮ**

ಎರಡು ಚಿತ್ರಗಳಲ್ಲಿನ ವ್ಯತ್ಯಾಸಗಳು ಈಗ ಸ್ಪಷ್ಟವಾಗಿವೆ. ಸಮಕಾಲೀನ ಪರಿಸ್ಥಿತಿಗೆ ಸಂಬಂಧಿಸಿದಂತೆ. "ಅಖಂಡ ಮಾನವತಾ ವಾದವೇ" ನಮ್ಮ ಧರ್ಮದ ಮುಖ್ಯ ಗುಣಲಕ್ಷಣವೆಂದು ಪಂಡಿತ್‌ಜೀ ಹೇಳಿದ್ದಾರೆ. ಸನಾತನ ಧರ್ಮವೂ ಹೆಚ್ಚು ಕಡಿಮೆ ಇದೇ ಆಗಿದೆ. ಈ ಸನಾತನ ಧರ್ಮವೇ ಕಾಲಾನುಕಾಲದಿಂದ ಮಾನವನ ಬದುಕಿಗೆ ಸಂತೋಷ–ಸಮೃದ್ಧಿಗಳನ್ನು ನೀಡಿರುವುದು.

**ಸ್ಪಷ್ಟ ದಿಕ್ಸೂಚಿ**

ನಮ್ಮ ದೇಶದಲ್ಲಿ ನಮ್ಮ ಚಿಂತನೆಯ ಮಾರ್ಗ ಅಪೂರ್ವವಾದದ್ದು ಎನ್ನುವುದನ್ನು ನಾವು ಮರೆಯಬಾರದು. ಏಕೆಂದರೆ ಭಾರತೀಯ ತತ್ತ್ವಶಾಸ್ತ್ರದ ಮೂಲ ಪರಿಕಲ್ಪನೆ ಮತು ಭಾರತೀಯೇತರ ಚಿಂತಕರ ವಿಚಾರಗಳಲ್ಲಿ ಮೂಲಭೂತ ವ್ಯತ್ಯಾಸಗಳಿವೆ. ಪಾಶ್ಚಾತ್ಯ ಜಗತ್ತಿನಲ್ಲಿ ಪ್ರತಿಯೊಂದು ಅಭಿಪ್ರಾಯ, ಪರಿಕಲ್ಪನೆ ಮತ್ತು ಪದ್ಧತಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಂಗಡಿಸಿ ನೋಡಲಾಗಿರುವುದನ್ನು ಪಂಡಿತ್‌ಜಿ ಸ್ಪಷ್ಟವಾಗಿ ಎತ್ತಿ ತೋರಿಸಿದ್ದಾರೆ. ವ್ಯಕ್ತಿ, ಕುಟುಂಬ, ಸಮಾಜ, ಮಾನವ ಕುಲ ಎಲ್ಲವೂ ಪ್ರತ್ಯೇಕ, ಪ್ರತ್ಯೇಕ ಹಾಗೂ ಇವು ಪರಸ್ಪರ ಸಂವಾದಿಯಲ್ಲ ಎಂದು ಪಾಶ್ಚಾತ್ಯರ ಅಂಬೋಣ. ವ್ಯಕ್ತಿ ಸಂಬಂಧಿತ ವಿಷಯಗಳನ್ನು ಚರ್ಚಿಸುವಾಗ ಅವರು ಸಮಾಜದ ಇತರ ಅಂಗಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳುವುದಿಲ್ಲ. ಕುಟುಂಬ ಸಮಾಜ ಮತ್ತು ಮನುಕುಲ ಕುರಿತ ಅವರ ಚಿಂತನೆಗಳಿಗೂ ಇದೇ ಅನ್ವಯವಾಗುತ್ತದೆ. ಇದು ಅವರ ಧ್ಯೇಯೋದ್ದೇಶಗಳಲ್ಲೇ ಅಂತರ್ಗತವಾಗಿದೆ. ಅವರು ಒಂದೇ ಒಂದು ವ್ಯವಸ್ಥೆಗೆ ಸೀಮಿತಗೊಂಡಿದ್ದಾರೆ. ಉದಾಹರಣೆಗೆ ಅವರ ಧರ್ಮವನ್ನೇ ತೆಗೆದುಕೊಳ್ಳೋಣ. ಅವರಲ್ಲಿ ವಿವಿಧ ನಂಬಿಕೆಗಳು, ಪಂಥಪಂಗಡಗಳಿವೆಯಾದರೂ ಎಲ್ಲರಲ್ಲೂ ಸಮಾನವಾದ ಒಂದು ಲಕ್ಷಣವಿದೆ. ಪ್ರತಿಯೊಬ್ಬರೂ ತಾವೇ ಸರಿ ಉಳಿದವರು ದೋಷಿಗಳು ಎಂದು ನಂಬಿದ್ದಾರೆ. ಈಗ ನಾವು ನಮ್ಮ ದೇಶದತ್ತ ಕಣ್ಣುಹಾಯಿಸೋಣ. ನಮ್ಮಲ್ಲೂ ಹಲವು ಹನ್ನೊಂದು ನಂಬಿಕೆಗಳಿವೆ. ಆದರೆ. "ನನ್ನ ದಾರಿ ಸರಿಯಾಗಿದೆ ನಿನ್ನ ಪಥವೂ ಸರಿಯಾಗಿದೆ" ಎಂದು ನಾವು ಹೇಳುತ್ತೇವೆ. "ನಮ್ಮ ಧರ್ಮದಿಂದ ಮಾತ್ರ ಭಗವಂತನ ಸಾನ್ನಿಧ್ಯ, ಸಾಕ್ಷಾತ್ಕಾರಗಳು ಸಾಧ್ಯ"



ಎಂದು ಪಾಶ್ಚಾತ್ಯ ಜಗತ್ತು ಸಮರ್ಥಿಸಿಕೊಳ್ಳುತ್ತದೆ. ಇದು ಪಾಶ್ಚಿಮಾತ್ಯ ಆಧ್ಯಾತ್ಮಿಕ ಜಿಜ್ಞಾಸೆ, ಪಾಶ್ಚಿಮಾತ್ಯ ಮೀಮಾಂಸೆ. ಆದರೆ, "ನಿಮ್ಮ ಧರ್ಮದಿಂದಲೂ ಭಗವಂತನ ಸಾನ್ನಿಧ್ಯ ಸಾಕ್ಷಾತ್ಕಾರ ಸಾಧ್ಯ" ಎಂದು ಭಾರತ ಹೇಳುತ್ತದೆ. ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳಲ್ಲೂ ಇದೇ ದೃಷ್ಟಿಕೋನವನ್ನು ಕಾಣುತ್ತೇವೆ. ಅವರು ಒಬ್ಬ ವ್ಯಕ್ತಿಯ ಅಸ್ತಿತ್ವ ಕೇಂದ್ರಿತ ವ್ಯವಸ್ಥೆ ಹೊಂದಿದ್ದಾರೆ. ಈ ವ್ಯಕ್ತಿಗೆ ಇತರರ ಜೊತೆ ಯಾವುದೆ ಸಂಬಂಧವಿಲ್ಲ. ಪರಸ್ಪರ ಸಂವಾದಿಯಲ್ಲ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಅವರ ವ್ಯವಸ್ಥೆಯಲ್ಲಿ ವ್ಯಕ್ತಿಯೇ ಕೇಂದ್ರ. ಈ ಕೇಂದ್ರದ ಸುತ್ತ ಕುಟುಂಬ, ಸಮುದಾಯ, ರಾಷ್ಟ್ರ, ಮಾನವ ಕುಲಗಳನ್ನು ಪ್ರತಿನಿಧಿಸುವ ಸಮಾನ ಕೇಂದ್ರಿತ ವೃತ್ತಗಳಿರುತ್ತವೆ.

ನಾನು ಈಗಾಗಲೇ ಹೇಳಿರುವಂತೆ ಇದೊಂದು ಏಕಕೇಂದ್ರಿತ ವ್ಯವಸ್ಥೆ ಕೇಂದ್ರವು ಬೇರೆ ವೃತ್ತಗಳಿಂದ ಸುತ್ತುವರಿಯಲ್ಪಟ್ಟಿವೆಯಾದರೂ ಇವುಗಳಿಗೆ ಸ್ವತಂತ್ರವಾದ ಅಸ್ತಿತ್ವ ಇಲ್ಲ. ಇವು ಸ್ವತಂತ್ರವಾಗಿ ಕಾರ್ಯನಿರ್ವಹಿಸಲಾರವು.

ಇದಕ್ಕೆ ಹೋಲಿಸಿ ನೋಡಿದರೆ ನಮ್ಮದು ಪ್ರಾಚೀನ ವ್ಯವಸ್ಥೆ ಹಾಗೂ ಸತತ ಚಲನಶೀಲವಾದದ್ದು. ವಿಸ್ತಾರಗೊಳ್ಳುವಂಥಾದ್ದು. ಅದು ವ್ಯಕ್ತಿಯಿಂದ ಶುರುವಾಗುತ್ತದೆ. ಹಾಗೂ ಕುಟುಂಬಕ್ಕೆ ವಿಸ್ತರಿಸುತ್ತದೆ. ಕುಟುಂಬದಿಂದ ಸಮಾಜಕ್ಕೆ ಸಮಾಜದಿಂದ ರಾಷ್ಟ್ರಕ್ಕೆ ರಾಷ್ಟ್ರದಿಂದ ಮಾನವ ಕುಲಕ್ಕೆ ಚಾಚಿಕೊಳ್ಳುತ್ತದೆ. ಆಖೈರಾಗಿ ಅದು ಬ್ರಹ್ಮಾಂಡ ಅಥವಾ ಸೃಷ್ಟಿಯನ್ನೂ ವ್ಯಾಪಿಸುತ್ತದೆ. ಆದರೆ ಕೇಂದ್ರದಿಂದ. ಅಂದರೆ ವ್ಯಕ್ತಿಯಿಂದ ಎಂದಿಗೂ ಸಂಪರ್ಕ ಕಡಿದುಕೊಳ್ಳುವುದಿಲ್ಲ.

**ವ್ಯತ್ಯಾಸ**

ಎರಡು ವ್ಯವಸ್ಥೆಗಳ ನಡುವಣ ಭಿನ್ನತೆ, ವ್ಯತ್ಯಾಸಗಳನ್ನು ಗಮನಿಸುವುದು ಯೋಗ್ಯವಾದೀತು. ನಾವು ವ್ಯಕ್ತಿ, ಕುಟುಂಬ, ಸಮುದಾಯ ಸಮಾಜ, ರಾಷ್ಟ್ರ, ಮಾನವ ಕುಲಗಳ ಬಗ್ಗೆ ಚರ್ಚಿಸಿದ್ದೇವೆ. ನಮ್ಮ ವ್ಯವಸ್ಥೆ ಇದೆಲ್ಲವನ್ನೂ ಒಳಗೊಂಡಿದೆ. ಅವರು ಸಹ ಇದೆಲ್ಲವನ್ನೂ ಪರಾಮರ್ಶಿಸಿದ್ದಾರೆ. ಅವರಲ್ಲೂ ಇವೆಲ್ಲವೂ ಇದೆ. ಆದಾಗ್ಯೂ ಎರಡು ವ್ಯವಸ್ಥೆಗಳ ನಡುವೆ ವ್ಯಾಪಕವಾದ ವ್ಯತ್ಯಾಸಗಳಿವೆ. ಅವರಲ್ಲಿ ಅಂತರ ಸಂಬಂಧವಿಲ್ಲದ ವ್ಯವಸ್ಥೆಯಾದರೂ ಅವರು ಪ್ರತಿಯೊಂದನ್ನೂ ಅನನ್ಯವೆಂದೇ ಪರಿಗಣಿಸುತ್ತಾರೆ. ನಮ್ಮಲ್ಲಿ ಹಾಗಿಲ್ಲ. ಹೀಗಾಗಿ ಅವರ ಚಿಂತನೆ ಪ್ರತ್ಯೇಕವಾಗಿಯೇ ಉಳಿಯಿತು.

ನಮ್ಮ ವ್ಯವಸ್ಥೆಯಲ್ಲಿ ಒಂದರ ಅಸ್ತಿತ್ವ ಮತ್ತೊಂದರಿಂದ ಉದ್ಭವಿಸುತ್ತದೆ ಹಾಗೂ ಇಲ್ಲಿಂದ ಮತ್ತೊಂದಕ್ಕೆ ಚಾಚಿಕೊಳ್ಳುತ್ತದೆ. ಈ ರೀತಿ ಅನಂತವಾದ ವರ್ತುಲವೊಂದು, ಕೇಂದ್ರವೊಂದು ರೂಪುಗೊಳ್ಳುತ್ತದೆ. ಇದರಲ್ಲಿ ಆಂತರಿಕ

ತಿಕ್ಕಾಟಗಳಾಗಲಿ ಬಿಕ್ಕಟ್ಟುಗಳಾಗಲಿ ಇರುವುದಿಲ್ಲ. ವ್ಯಕ್ತಿ ಮತ್ತು ಕುಟುಂಬದ ನಡುವೆ, ಕುಟುಂಬ ಮತ್ತು ಸಮುದಾಯದ ನಡುವೆ ಘರ್ಷಣೆ ಸಂಭವಿಸುವುದಿಲ್ಲ. ಇದಿಷ್ಟೇ ಅಲ್ಲ ಒಂದು ಇನ್ನೊಂದಕ್ಕೆ ವಿರೋಧಿಯಲ್ಲ, ಪ್ರತಿಸ್ಪರ್ಧಿಯಲ್ಲ. ಒಂದು ಮತ್ತೊಂದಕ್ಕೆ ಪೂರಕವಾಗಿರುತ್ತದೆ. ಇಷ್ಟರ ಮಟ್ಟಿಗೆ ನಾವು ಪ್ರಗತಿ ಸಾಧಿಸಿದ್ದೇವೆ. ಒಂದು ಉದಾಹರಣೆಯೊಂದಿಗೇ ಈ ಅಂಶವನ್ನು ಖಚಿತ ಪಡಿಸುತ್ತೇನೆ. ಸಣ್ಣ ಕೂಸಿಗೆ ತಾನು ಹೊರತು ಬೇರೇನೂ ತಿಳಿದಿರುವುದಿಲ್ಲ. ಸಣ್ಣಕೂಸಿನ ಪ್ರಪಂಚ ಅದಕ್ಕಷ್ಟೇ ಸೀಮಿತವಾದದ್ದು. ಮಗು ಬೆಳೆದಂತೆ ತನ್ನ ತಂದೆ ತಾಯಿಯರನ್ನು, ಒಡಹುಟ್ಟಿದವರನ್ನು, ಸುತ್ತಲ ಜನರನ್ನು ಗುರುತಿಸುವ ಮೂಲಕ ಕುಟುಂಬದ ಬಗ್ಗೆ ಅರಿವನ್ನು ಗಳಿಸುತ್ತದೆ. ಆದರೆ ಈ ಅರಿವು ಅವನೊಳಗಿನ 'ನಾನು' ವನ್ನು ಅಳಿಸಿಹಾಕುವುದಿಲ್ಲ. ಅವನ ಪಾಲಿಗೆ 'ನಾನು' ಮತ್ತು ಕುಟುಂಬ ಇವೆರಡೂ ವಾಸ್ತವ. ಅವನು ಬೆಳೆಯುತ್ತಾನೆ. ಬುದ್ಧಿವಂತಿಕೆ ಬೆಳಸಿಕೊಳ್ಳುತ್ತಾನೆ. ಕಾರ್ಯ ಸಾಮರ್ಥ್ಯವನ್ನು ಗಳಿಸುತ್ತಾನೆ. ಆನಂತರ ಸಮಾನ ಮನುಷ್ಯರೊಂದಿಗೆ ಸಮಾನ ದುಡಿಮೆಗಾರರೊಂದಿಗೆ ಸೇರಿ ಸಮುದಾಯವೊಂದನ್ನು ಸೃಷ್ಟಿಸುತ್ತಾನೆ ಹಾಗೂ ತನ್ನ ಸಮುದಾಯದಿಂದ ಭಿನ್ನವಾಗಿ ತೋರದ, ಸಮುದಾಯದಿಂದ ಪ್ರತ್ಯೇಕಿಸಲಾಗದ ವ್ಯಕ್ತಿಯಾಗಿರುತ್ತಾನೆ. ಸನ್ಯಾಸ ಕೊನೆಯ ಹಂತ. ಈ ಹಂತದಲ್ಲಿ ಅವನಿಗೆ ಜ್ಞಾನೋದಯವಾಗುತ್ತದೆ. ಮಾನವ ಕುಲ ಒಂದು, ಇಲ್ಲ ಬ್ರಹ್ಮಾಂಡ ಒಂದು ಹಾಗೂ ಈ ಪ್ರಪಂಚದ, ಈ ಬ್ರಹ್ಮಾಂಡದ ಏಕೈಕ ಪ್ರಜೆ ತಾನಲ್ಲ. ಇದು ನಮ್ಮ ಅಂತಿಮ ಗುರಿ. ಆದ್ದರಿಂದ ಮಗುವಿನ 'ನಾನು' ಅಥವಾ 'ಅಹಂ' ಹಂತದಿಂದ ಹಿಡಿದು ಈ ಅತ್ಯುನ್ನತ ಸಾಧನೆಯ ಗುರಿತಲುಪುವವರೆಗೆ, ಅಂದರೆ ಸನ್ಯಾಸದವರೆಗೆ ಬದುಕೊಂದು ಪಯಣ. ಸುದೀರ್ಘ ಪಯಣ; ಮಾನವನ ಅಹಂ ಮತ್ತು ಸಾಮಾಜಿಕ ಪ್ರಜ್ಞೆಯನ್ನೊಳಗೊಂಡ ಪ್ರಪಂಚದಲ್ಲಿ ನಡೆಸುವ ಸುದೀರ್ಘ ಪಯಣ. ಪ್ರಜ್ಞೆ ಬೆಳೆದಂತೆ ಹಳೆಯ ಅಸ್ತಿತ್ವದೊಂದಿಗೆ ಅವನ ಸಂಬಂಧ ಕ್ಷಯಿಸುತ್ತಾ ಹೋಗುತ್ತದೆ. ಹೊಸದರೊಂದಿಗೆ, ಇನ್ನೂ ಬೃಹತ್ತಾದ ಹೊಸ ಅಸ್ತಿತ್ವದೊಂದಿಗೆ ಸಂಬಂಧ ಬಲಿಷ್ಠವಾಗುತ್ತದೆ. "ಇಡೀ ವಿಶ್ವವೇ ಬ್ರಹ್ಮ" ಇದು ಅಂತಿಮ ಹಂತ. ಲೌಕಿಕ ವಾದುದೆಲ್ಲವನ್ನೂ ತ್ಯಜಿಸಿ ಸನ್ಯಾಸ ಸ್ವೀಕರಿಸಿದಾಗ ಈ ಅಂತಿಮ ಹಂತ ತಲುಪುತ್ತಾನೆ.

**ಅರಾಜಕತೆ ಇಲ್ಲ**

ಬೇರೆ ಮಾತುಗಳಲ್ಲಿ ಹೇಳುವುದಾದರೆ ಎಲ್ಲ ಘಟಕಗಳು ಅಥವಾ ಅಸ್ತಿತ್ವಗಳು ಬದುಕಿನ ವಾಸ್ತವಗಳು. ನಮ್ಮ ಪ್ರಜ್ಞೆ ಬೆಳೆದಂತೆ ನಮ್ಮ ದೃಷ್ಟಿಯೂ ವಿಸ್ತಾರಗೊಳ್ಳುತ್ತದೆ. ಪ್ರತಿಯೊಂದು ವಾಸ್ತವವೂ ಪರಸ್ಪರ ವಿರುದ್ಧವಾಗಿ ವರ್ತಿಸುವುದಿಲ್ಲ. ಒಂದು ಇನ್ನೊಂದನ್ನು ವಿರೋಧಿಸುವ ಉದ್ದೇಶ ಹೊಂದಿರುವುದಿಲ್ಲ. ಯಾರನ್ನೂ ಕಿತ್ತೊಗೆಯಲಾಗದು. ಇದೊಂದು ಬೀಜವಿದ್ದಂತೆ. ಬೀಜ ಮೊಳಕೆಯೊಡೆದು ಗಿಡವಾಗಿ,



ಮರವಾಗಿ ಬೆಳೆದಂತೆ. ಮರವಾಗಿ ಬೆಳೆದು ಹೂ-ಫಲಗಳನ್ನು ಬಿಟ್ಟಂತೆ. ಹೂವರಳಿ ಫಲಬಿಟ್ಟ ಮರದಂತೆ. ಬೀಜ, ಗಿಡ, ಮರ, ಹೂವು, ಹಣ್ಣು ಇವೆಲ್ಲವೂ ನೋಡಲು ಭಿನ್ನವಾಗಿಯೇ ಕಾಣುತ್ತವೆ. ಒಂದಕ್ಕೊಂದು ಸಂಬಂಧವಿಲ್ಲದಂತೆಯೇ ಕಾಣುತ್ತವೆ. ಕೆಲವರಿಗೆ ಪ್ರಕೃತಿಯಲ್ಲಿ ಅರಾಜಕತೆ ಇದೆ ಎನ್ನಿಸಬಹುದು. ಹೌದೆ? ಇಲ್ಲ, ನಿಶ್ಚಯವಾಗಿಯೂ ಅರಾಜಕತೆ ಇಲ್ಲ. ಇವೆಲ್ಲವೂ ವಿಕಸನ ಪ್ರಕ್ರಿಯೆಗಳು ಬೆಳವಣಿಗೆಯ ಪ್ರಕ್ರಿಯೆಗಳು. ಬೀಜ ಮತ್ತು ವೃಕ್ಷದ ನಡುವೆ ತಿಕ್ಕಾಟವಿಲ್ಲ. ಘರ್ಷಣೆ ಇಲ್ಲ. ಸೂಕ್ಷ್ಮಾತಿಸೂಕ್ಷ್ಮಗಳಿಗೂ ಪ್ರತ್ಯೇಕ ಅಸ್ತಿತ್ವ ಇದೆಯಾದರೂ ಅವೆಲ್ಲ ಒಟ್ಟಾಗಿ ಸೇರಿ ಒಂದು ಅಖಂಡತೆ ನಿರ್ಮಾಣಗೊಂಡಿದೆ. ಭಾರತೀಯ ಚಿಂತನ ಕ್ರಮ ಇದಕ್ಕೆ ಸದೃಶವಾದದ್ದು.

**ಅಖಂಡ ಬದುಕು ಏಕೆ**

ಅತಿ ಚಿಕ್ಕ ಘಟಕವಾದ ವ್ಯಕ್ತಿಗೆ ನಾವು ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದೇವೆ. ಅದು ಉಚಿತವಾದುದೇ. ನಮ್ಮ ಕಲ್ಪನೆಯಲ್ಲಿ ವ್ಯಕ್ತಿ ಸಂಘಟಿತ, ಸುವ್ಯಸ್ಥಿತ ಹಾಗೂ ಸಮಗ್ರ. ಪಾಶ್ಚಾತ್ಯರಿಗೆ ಇದು ತಿಳಿಯದು. ಅವರು ಹೆಚ್ಚು ಒತ್ತು ನೀಡುವುದು ಐಹಿಕ ಪ್ರಗತಿಗೆ. ನಿಮಗೆಲ್ಲ ತಿಳಿದಂತೆ ಅಮೆರಿಕ ವಿಶ್ವದಲ್ಲೇ ಹೆಚ್ಚು ಅಭಿವೃದ್ಧಿ ಹೊಂದಿರುವ ರಾಷ್ಟ್ರ. ಅವರು ಅತ್ಯುಚ್ಚ ಮಟ್ಟದ ಅಭ್ಯುದಯವನ್ನು ಸಾಧಿಸಿದ್ದಾರೆ. ಆದರೆ ಅಲ್ಲಿನ ಜನಸಾಮಾನ್ಯರಿಗೆ ಶಾಂತಿ ಸಂತೋಷ ಸಮಾಧಾನಗಳು ಲಭಿಸಿಲ್ಲ. ತೃಪ್ತಿ ಲಭಿಸಿಲ್ಲ. ಅವರ ಬದುಕು ವಿರೋಧಾಭಾಸಗಳಿಂದ, ಸಂಕಟಗಳಿಂದ, ಅಶಾಂತಿಯಿಂದ ಯಾತನಾಮಯವಾಗಿದೆ. ಅಲ್ಲಿ ಅಪರಾಧಗಳು ಹೆಚ್ಚು, ಆತ್ಮಹತ್ಯೆಗಳು ಅಧಿಕ. ಅಮೆರಿಕನ್ನರಲ್ಲಿ ಹೃದ್ರೋಗ, ರಕ್ತದ ಒತ್ತಡ ಹೆಚ್ಚು. ಅವರಲ್ಲಿ ಅಪರಾಧ ಮನೋವೃತ್ತಿ ಅಧಿಕ. ಇಡೀ ಪ್ರಪಂಚವನ್ನೇ ಖರೀದಿಸುವ ಸಾಮರ್ಥ್ಯವುಳ್ಳ ದೇಶ ತನ್ನ ಜನರಿಗೆ ಮನಶ್ಶಾಂತಿ ದೊರಕಿಸುವುದರಲ್ಲಿ ಅಸಮರ್ಥ. ಹೀಗಾಗಿ, 'ನಮ್ಮ ಗುರಿ ಏನು?' ಎಂದು ನಾವು ಯೋಚಿಸುವಂತಾಗಿದೆ. ಸಂತೋಷ, ನೆಮ್ಮದಿ, ಶಾಶ್ವತವಾದ, ನಿಜವಾದ ಸಂತೋಷ ನೆಮ್ಮದಿ. ಯೂರೋಪ್ ಸಂಪದಭ್ಯುದಯದ ಮಧ್ಯೆ ಸಂತೋಷಕ್ಕಾಗಿ ತಡಕಾಡುತ್ತಿದೆ. ಇಡೀ ವಿಶ್ವದ ಸಾಮ್ರಾಟನಾದರೂ ಆತ್ಮಹೀನನಾಗಿದ್ದರೆ ಅಂಥವನು ಪರಾಜಿತ ಎಂದು ಏಸುಕ್ರಿಸ್ತ ಹೇಳಿರುವ ಮಾತು ಸರಿಯಾದದ್ದು. ಪಶ್ಚಿಮ ಚಂದ್ರನಲ್ಲಿ ಪದಾರ್ಪಣ ಮಾಡಿತು ಆದರೆ ಸಂತೋಷ, ನೆಮ್ಮದಿಗಳನ್ನು ಕಳೆದುಕೊಂಡಿತು. ನಮ್ಮಲ್ಲಿ ಅತ್ಯಲ್ಪ ಮಾನವನೂ ಅವರಿಗಿಂತ ಹೆಚ್ಚು ಸುಸಂಘಟಿತ, ಸುವ್ಯವಸ್ಥಿತ ಹಾಗೂ ಸಮಗ್ರ ಮಾನವ. ಅವನು ಛಿದ್ರಛಿದ್ರವಾಗಿಲ್ಲ. "ನಮ್ಮ ರಸ್ತೆಗಳು ಪ್ರತ್ಯೇಕಿತರಾದ, ಏಕಾಂಗಿಗಳಾದ, ತಾವಾಗಿಯೇ ಅನಾಥರಾದ ಜನರಿಂದ ತುಂಬಿಹೋಗಿದೆ" ಎಂದು ಅಮೆರಿಕ ಸಮಾಜದ ಬಗ್ಗೆ

ಅಮೆರಿಕದ ಮನಶ್ಶಾಸ್ತ್ರಜ್ಞರೊಬ್ಬರು ವ್ಯಾಖ್ಯಾನಮಾಡಿದ್ದಾರೆ. ಸ್ವತಃ ತಾವೇ ಅನ್ಯರಾಗಿರುವಾಗ, ತಾವೇ ಪ್ರತ್ಯೇಕಿತರಾಗಿರುವಾಗ ಅವರಿಂದ ಪ್ರಪಂಚಕ್ಕೆ ಏನು ಪ್ರಯೋಜನವಾದೀತು? ವ್ಯಕ್ತಿ ಮತ್ತು ಸಮಾಜದ ನಡುವೆ ಸಾಮರಸ್ಯವೇ ಇಲ್ಲ. ಮಾನವನನ್ನು ಭೌತಜೀವ, ಆರ್ಥಿಕ ಜೀವಿ ಎಂದು ಪರಿಗಣಿಸಿರುವುದರಲ್ಲಿ ಈ ಕಾಯಿಲೆಯ ಮೂಲವಿದೆ. ಮನುಷ್ಯನಿಗೆ ಹಣ ಮತ್ತು ಐಹಿಕ ದ್ರವ್ಯಗಳನ್ನು ಒದಗಿಸಿದಲ್ಲಿ ಸುಖ–ಶಾಂತಿ ಸಂತೋಷ–ನೆಮ್ಮದಿಗಳು ಅವುಗಳನ್ನು ಹಿಂಬಾಲಿಸಿ ಬರುತ್ತವೆ ಎಂದು ಅವರು ಭಾವಿಸಿದ್ದಾರೆ. ಆದರೆ ಈ ನಿರೀಕ್ಷೆ ಸುಳ್ಳಾಗಿದೆ. ಎಂದೇ ಅತ್ಯುಚ್ಚ ಜೀವನ ಮಟ್ಟದಿಂದಲೂ ಸಂತೋಷ–ನೆಮ್ಮದಿಗಳು ಸಾಧ್ಯವಾಗಿಲ್ಲ. ಅವರು ಎಲ್ಲವನ್ನೂ ಪ್ರತ್ಯೇಕತಾ ಭಾವನೆಯಿಂದ, ತುಣುಕು–ತುಣುಕಾಗಿ ನೋಡುತ್ತಾರೆ. ಮನುಷ್ಯ ಸ್ವಭಾವದ ವಿವಿಧ ಮುಖಗಳ ಬಗ್ಗೆ ಯೋಚಿಸುವುದೇ ಇಲ್ಲ. ಮನುಷ್ಯನನ್ನು ಧನ ಜೀವಿಯಾಗಿಯಷ್ಟೇ ನೋಡುತ್ತದೆ ಅವನ ಇತರ ಅಗತ್ಯಗಳ ಬಗ್ಗೆ ಲಕ್ಷ್ಯ ಕೊಡುವುದಿಲ್ಲ. ಈ ಕೊರತೆಯೇ ಎಲ್ಲ ತೊಂದರೆಗಳ ಮೂಲ.

**ಸೀಮಿತ**

ಮನುಷ್ಯ ಧನ ಜೀವಿ ಎಂಬುದನ್ನು ನಾವೂ ಒಪ್ಪುತ್ತೇವೆ. ಇದರ ಬಗ್ಗೆ ಸಂದೇಹ ಬೇಡ. ಅವನ ಅಗತ್ಯಗಳಾದ ಅನ್ನ ಆಹಾರ, ನಿದ್ರೆ, ಭಯ, ಮೈಥುನ ಮೊದಲಾದವುಗಳನ್ನು (ಆಹಾರ, ನಿದ್ರಾ, ಭಯ, ಮೈಥುನಂ ಚ) ತಣಿಸಬೇಕು. ಆದರೆ ಇವಷ್ಟೇ ಸಾಲದು. ಇಲ್ಲಿಗೇ ನಮ್ಮ ಅಗತ್ಯಗಳು ಕೊನೆಗೊಳ್ಳುವುದಿಲ್ಲ ಮನುಷ್ಯ ಧನವನ್ನು ಮೀರಿದ, ಅದರಾಚೆಗಿನ ಜೀವಿ ಎನ್ನುವುದು ನಮ್ಮ ಆಲೋಚನೆ, ಅವನು ಭೌತ ಜೀವ, ಮನೋಜೀವಿ, ರಾಜಕೀಯ ಜೀವಿ, ಸಾಮಾಜಿಕ ಜೀವಿ ಹಾಗೂ ಧಾರ್ಮಿಕ ಜೀವಿಯೂ ಹೌದು. ಆದ್ದರಿಂದ ಮಾನವನ ಎಲ್ಲಮುಖಗಳನ್ನೂ, ಮಾನವಸ್ವಭಾವದ ಎಲ್ಲ ಅಗತ್ಯಗಳನ್ನು ಪೂರೈಸದೇ ಹೋದಲ್ಲಿ, ತೃಪ್ತಿಪಡಿಸದೇ ಹೋದಲ್ಲಿ ಮಾನವ ಸಂತೋಷ–ಸಂತೃಪ್ತಿಗಳಿಂದ ವಂಚಿತನಾಗುತ್ತಾನೆ. ನಮ್ಮ ಅಖಂಡತೆಯ ಚಿಂತನೆಯಲ್ಲಿ ನಾವು ಮಾನವನ ಅಗತ್ಯಗಳು ಮತ್ತು ಕಾಮನೆಗಳನ್ನು ಉಪೇಕ್ಷಿಸಿಲ್ಲ. ಇವುಗಳನ್ನು ತೃಪ್ತಿಪಡಿಸಬೇಕೆಂಬುದನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ ನಾವು ಕೆಲವೊಂದು ಕಟ್ಟುಪಾಡುಗಳನ್ನು ಹೇರಿದ್ದೇವೆ. ಲೈಂಗಿಕತೆ ಬಗ್ಗೆ ಯೋಚಿಸಿದವನು ಫ್ರಾಯ್ಡ್ ಒಬ್ಬನೇ ಅಲ್ಲ. ನಮ್ಮ ದೇಶದಲ್ಲೂ ಲೈಂಗಿಕತೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಇಂದ್ರಿಯಗಳು ಕಾಮಾತೀತವಾದವು. ಮನಸ್ಸು ಇಂದ್ರೀಯಾತೀತವಾದದ್ದು, ಬುದ್ಧಿ ಮನಸ್ಸಿಗೆ ಅತೀತವಾದದ್ದು ಹಾಗೂ ಇವೆಲ್ಲವುಗಳಿಗೂ ಅತೀತವಾದದ್ದು ಆತ್ಮ ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಕೆಲವರು ವಿದ್ವಾಂಸರುಗಳು ಈ ಶ್ಲೋಕದಲ್ಲಿ ಬರುವ ಕಾಮವನ್ನು ಲೈಂಗಿಕ



ಬಯಕೆ ಎಂದು ವ್ಯಾಖ್ಯಾನಿಸಿದ್ದಾರೆ. ಇದನ್ನು ಒಪ್ಪಿದರೂ ಲೈಂಗಿಕತೆ ಅನಿಯಂತ್ರಿತವಲ್ಲ, ಅನಿರ್ಬಂಧಿತವಲ್ಲ. ಲೈಂಗಿಕತೆ ನಿಯಂತ್ರಗಳಿಗೆ, ಕಟ್ಟು ಪಾಡುಗಳಿಗೊಳಪಟ್ಟಿದೆ. ಭಗವಾನ್ ಕೃಷ್ಣ ಹೇಳುತ್ತಾನೆ: "ನಾನೇ ಕಾಮ", ಜೊತೆಗೆ "ನಾನೇ ಕಾಮ, ಕಾಮವನ್ನು ತೃಪ್ತಿಪಡಿಸಬೇಕು ಆದರೆ ಧರ್ಮಕ್ಕೆ ವಿರುದ್ಧವಾಗಿಯಲ್ಲ".

**ಧರ್ಮವನ್ನು ಆಧರಿಸಿದ ಜೀವನ**

ಕಾಮದಂತೆ ಬದುಕಿನಲ್ಲಿ ಅರ್ಥಕ್ಕೂ ಸ್ಥಾನವಿದೆ ಎಂಬುದನ್ನು ನಾವು ಒಪ್ಪಿಕೊಂಡಿದ್ದೇವೆ. ಪ್ರತಿಯೊಬ್ಬರಿಗೂ ತಮ್ಮ ಐಹಿಕ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗಬೇಕು. ಹೊಟ್ಟೆ ತುಂಬಿಸಿಕೊಳ್ಳುವುದು ಹೇಗೆ ಎಂದೂ ಯಾರೊಬ್ಬರೂ ಹಗಲೂ ರಾತ್ರಿ ಚಿಂತಿಸುವಂತಾಗಬಾರದು ಅವನಿಗೆ ದೈವೇಚ್ಛೆಯಿದ್ದಲ್ಲಿ ಸಾಹಿತ್ಯ, ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ತೊಡಗಿಸಿಕೊಳ್ಳುವುದು ಸಾಧ್ಯವಾಗಬೇಕು. ಹಣ ಮತ್ತು ಕಾಮಗಳನ್ನು ಪೂರ್ಣವಾಗಿ ಗಮನಕ್ಕೆ ತೆಗೆದುಕೊಂಡ ನಂತರವೂ ಈ ವಿಷಯಗಳಲ್ಲಿ ಒಂದು ನ್ಯಾಯಯುತ ಮಿತಿಯನ್ನು ಮೀರಬಾರದು, ಮೀರಿದಲ್ಲಿ ಅವನ ನಾಶವಾಗುತ್ತದೆ ಹಾಗೂ ಸಮಾಜವೂ ಛಿದ್ರಛಿದ್ರವಾಗುತ್ತದೆ ಎಂದು ಮಾನವನಿಗೆ ಎಚ್ಚರಿಕೆಯನ್ನೂ ನೀಡಲಾಗಿದೆ. ನಮ್ಮ ಪ್ರಾಚೀನ ಋಷಿ ಮುನಿಗಳಿಗೆ ಅಧಃಪತನದ ಸಾಧ್ಯತೆಗಳ ಪ್ರಜ್ಞೆಯಿತ್ತು. ಎಂದೇ ಕೆಲವೊಂದು ಚಿರಂತನ ನಿಯಮಗಳನ್ನು, ಕಾನೂನುಗಳನ್ನು, ಕೆಲವೊಂದು ಸರ್ವಾನ್ವಯಿ ಕಾನೂನುಗಳನ್ನು, ನೀತಿ, ನಿಯಮಗಳನ್ನು ರೂಪಿಸಿದ್ದರು. ಈ ಕಾನೂನು, ನೀತಿ–ನಿಯಮಗಳನ್ನು ಋಷಿಮುನಿಗಳು ಪ್ರಯೋಗಾನ್ವಯ ಪರೀಕ್ಷಿಸಿ ನೋಡಿದ್ದರು. ಅವರು ಕೇವಲ ಅನ್ವೇಷಣೆ ಮಾಡಲಿಲ್ಲ. ಅಥವಾ ಸಂಹಿತೆಗಳನ್ನು ರಚಿಸಲಿಲ್ಲ ಅಥವಾ ಕಾನೂನು, ನಿಯಮಾವಳಿಗಳನ್ನು ಕ್ರೋಢೀಕರಿಸಲಿಲ್ಲ. ಅವರು ಪರೀಕ್ಷಿಸಿ ನೋಡಿ ತಿಳಿದುಕೊಂಡು ರೂಪಿಸಿದ ಕಾನೂನುಗಳು, ನೀತಿ ನಿಯಮಗಳು ಚಿರಂತನವಾದವು; ಸರ್ವಾನ್ವಯಿಯಾದವು. ಮೊತ್ತದಲ್ಲಿ ಹೇಳುವುದಾದರೆ ಇವು ಮಾನವನ ಅಧಃಪತನವನ್ನು ತಪ್ಪಿಸಿದವು. ಸಮಾಜದ ಅವನತಿಯನ್ನು ತಪ್ಪಿಸಿದವು ಹಾಗೂ ಧರ್ಮ ಒಂದೇ ಸಾಲದು. ಅರ್ಥ ಕಾಮಗಳನ್ನು ಅಲಕ್ಷ್ಯ ಮಾಡಲಿಲ್ಲ. ಧರ್ಮ–ಮೋಕ್ಷಗಳ ನಡುವೆ ಅವುಗಳನ್ನೂ ಸಂಯೋಜಿಸಲಾಯಿತು. ಹೀಗೆ ಮಾನವ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುಷ್ಕಗಳನ್ನು, ಚತುರ್ವಿಧ ಪುರುಷಾರ್ಥಗಳನ್ನು ರೂಪಿಸಲಾಯಿತು. ಇವುಗಳ ನಡುವೆ ಸಮನ್ವಯ ಸಾಧಿಸಲಾಯಿತು. ಸುಸಂಘಟಿತವಾದ, ಸಮನ್ವಯಿವಾದ ಈ ಸಮಗ್ರ ವ್ಯವಸ್ಥೆ ವ್ಯಕ್ತಿಯನ್ನು ವಿಘಟಿಸಲಿಲ್ಲ. ಆದರೆ ವ್ಯಕ್ತಿಗೆ ತನ್ನ ಭೌತಿಕ, ಮಾನಸಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಸಾಮರ್ಥ್ಯಗಳಿಗನುಗುಣವಾದ ತನ್ನ ವ್ಯಕ್ತಿತ್ವಕ್ಕೆ ಮಾರಕವಾಗದಂಥ

ಜೀವನ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಕೊಟ್ಟಿತು.

**ಏಕಾತ್ಮ ಮಾನವದರ್ಶನ ಎಂದರೇನು?**

ವ್ಯಕ್ತಿ ಮತ್ತು ವ್ಯಕ್ತಿತ್ವದ ವಿವಿಧ ಅಂಶಗಳನ್ನು ವಿವಿಧ ಘಟಕಗಳನ್ನು ವ್ಯವಸ್ಥಿತಗೊಳಿಸದೆ ಸುವ್ಯವಸ್ಥಿತ ಸಮಾಜ ಎನ್ನುವುದು ಬಹುದೂರದ ಮಾತಾಗಿಯೇ ಉಳಿಯುತ್ತದೆ ಎನ್ನುವುದನ್ನು ಯಾವಾಗಲೂ ನೆನಪಿಡಬೇಕು. ವಾಸ್ತವವಾಗಿ ಈ ವ್ಯವಸ್ಥಿತ ಸ್ಥಿತಿಯೇ ನಮ್ಮ ಆರಂಭದ ಬಿಂದು. ಇಲ್ಲಿಂದ ನಾವು ವ್ಯಕ್ತಿಯತ್ತ, ಕುಟುಂಬದತ್ತ, ರಾಷ್ಟ್ರದತ್ತ, ಮಾನವಕುಲದತ್ತ. ಇಡೀ ಬ್ರಹ್ಮಾಂಡತ್ತ ನಮ್ಮ ಪಯಣವನ್ನು ಪ್ರಾರಂಭಿಸುತ್ತೇವೆ. ಅಂದರೆ ಇಲ್ಲಿಂದ ಸೃಷ್ಟಿಯ ಸಕಲ ಚೇತನ–ಅಚೇತನಗಳತ್ತ ನಾವು ಮುಂದೆ ಸಾಗುತ್ತೇವೆ. ಇದು ಅಖಂಡ ಮಾನವತಾವಾದ. ಇದು ವಿವಿಧ ಅಸ್ತಿತ್ವಗಳ ನಡುವಣ ಘರ್ಷಣೆಗಳನ್ನು ನಿವಾರಿಸುತ್ತದೆ. ಅಸ್ತಿತ್ವಗಳ ನಡುವೆ ಸಂಬಂಧವನ್ನು ಸ್ಥಾಪಿಸುತ್ತದೆ. ಒಂದರಿಂದ ಮತ್ತೊಂದು ಹೊರಹೊಮ್ಮುತ್ತದೆ. ಒಂದು ಮತ್ತೊಂದರಿಂದ ಪೂರಕವಾಗುತ್ತವೆ, ಪ್ರಭಾವಿತವಾಗುತ್ತವೆ. ಇದು ಪ್ರಗತಿಯ ಪ್ರಕ್ರಿಯೆಯ ಅಂಗವಾಗುತ್ತದೆ. ಈ ಪ್ರಗತಿ ಪ್ರಕ್ರಿಯೆಯಲ್ಲಿ, ತಮ್ಮ ಕ್ಷೇತ್ರದಲ್ಲಿ ಸ್ವಾಯತ್ತವಾದ ಸಣ್ಣಪುಟ್ಟ ಘಟಕಗಳೂ ದೊಡ್ಡ ಘಟಕಗಳಲ್ಲಿ ವಿಲಯನ ಹೊಂದುತ್ತವೆ. ಮಾನವ ಸಮಾಜ ಕುರಿತು ಹೇಳುವುದಾದಲ್ಲಿ ಅದರ ಸರಣಿ ವ್ಯಕ್ತಿಯಿಂದ ಕುಟುಂಬದವರೆಗೆ, ಕುಟುಂಬದಿಂದ ರಾಷ್ಟ್ರದವರೆಗೆ, ಅಲ್ಲಿಂದ ವಿಶ್ವ ಸರ್ಕಾರದವರೆಗೆ ಏಕಾತ್ಮ ಮಾನವದರ್ಶನದ ಆಧಾರದ ಮೇಲೆ ಅನುಕ್ರಮವಾಗಿ ಹರಡಿಕೊಳ್ಳುತ್ತದೆ. ಚಿಂತನೆಯ ಕ್ಷೇತ್ರದಲ್ಲಿ ಅದ್ವೈತ ತತ್ತ್ವವೇ ಶಿಖರವಾಗಿರುತ್ತದೆ.

**ಏಕಾತ್ಮ ಮಾನವದರ್ಶನದ ಗುರಿಗಳು**

ಏಕಾತ್ಮ ಮಾನವದರ್ಶನದ ಪ್ರಕಾರ ವಿಶ್ವ ಸರ್ಕಾರ ಕಮ್ಯುನಿಸ್ಟರು ಪರಿಭಾವಿಸಿರುವ ಸರ್ಕಾರಕ್ಕಿಂತ ಭಿನ್ನವಾದದ್ದು. ಅವರ ಪ್ರಪಂಚ ಏಕಕೇಂದ್ರಿತವಾಗಿರುತ್ತದೆ ಮತ್ತು ಬಂಡೆಯಂಥಾದ್ದಾಗಿರುತ್ತದೆ. ನಮ್ಮದು ಬಹುಕೇಂದ್ರಿತವಾಗಿರುತ್ತದೆ. ವಿವಿಧ ಬಗೆಯ ರಚನೆಗಳಿಂದ ಕೂಡಿರುತ್ತದೆ. ಕಮ್ಯುನಿಸ್ಟ ವ್ಯವಸ್ಥೆಯನ್ನು ಪೋಷಿಸುವುದು ಕಟ್ಟು ಪಾಡುಗಳಿಂದ. ನಿಬಂಧನೆಗಳಿಂದ ನಿಶ್ಚಯಿಸಲಾದ ಚಿಂತನಕ್ರಮ ಇದಮಿತ್ಥಂ ಎಂದು ಬೆಳೆಸಲಾದ ಬುದ್ಧಿಶಕ್ತಿ. ಇದರಲ್ಲಿ ಏಕಪ್ರಕಾರತೆ ಇರುತ್ತದೆ. ಆದರೆ ನಮ್ಮ ವಿಶ್ವ ವ್ಯವಸ್ಥೆಯಲ್ಲಿ ಇಂಥ ಏಕಪ್ರಕಾರತೆ ಇರುವುದಿಲ್ಲ. ಪ್ರತಿಯೊಂದು ರಾಷ್ಟ್ರವೂ ತನ್ನ ಮೇಧಾವಿತನಕ್ಕನುಗುಣವಾಗಿ ಅಭಿವೃದ್ಧಿ ಹೊಂದಲು ಸ್ವತಂತ್ರವಾಗಿರುತ್ತವೆ. ಪ್ರತಿಯೊಂದು ರಾಷ್ಟ್ರವೂ ವಿಶ್ವ ಸರ್ಕಾರದ ಒಂದು ಅಂಗವಿದ್ದಂತೆ. ವ್ಯಕ್ತಿ ತನ್ನ ಬುದ್ಧಿಶಕ್ತಿ, ತನ್ನೆಲ್ಲ ಗಳಿಕೆ, ತನ್ನಲ್ಲ ಸಾಧನೆಗಳನ್ನು



ಸಮಾಜದ ಅಧಿನಕ್ಕೋಳಪಡಿಸುವಂತೆಯೇ ಪ್ರತಿ ರಾಷ್ಟ್ರವೂ ವಿಶ್ವ ಸರ್ಕಾರದ ಅಧೀನ ಅಂಗವಾಗಿರುತ್ತದೆ. ನಾವು ಇಡೀ ಮಾನವ ಕುಲದಲ್ಲಿ ಒಂದಾಗಿರುತ್ತೇವೆ. ಹಾಗೂ ನಮ್ಮ ಲೌಕಿಕ ಸಾಧನೆ, ಸಂಪತ್ತುಗಳನ್ನು, ನಮ್ಮ ಸಾಧನೆಗಳ ಸಿಹಿ ಫಲಗಳನ್ನು ಮನುಕುಲದ ಪದತಲದಲ್ಲಿ ಅರ್ಪಿಸುತ್ತೇವೆ. ಒಂದು ರಾಷ್ಟ್ರ ಸ್ವತಂತ್ರವೂ ಸಾರ್ವಭೌಮವೂ ಆಗಿದ್ದುಕೊಂಡು ಹೀಗೆ ಪ್ರಗತಿ ಹೊಂದುತ್ತದೆ. ಹಾಗೂ ಸಹಕಾರ–ಸೌಹಾರ್ದತೆಗಳಿಂದ, ವಿಶ್ವವ್ಯಾಪಿ ಮನೋಭಾವಕ್ಕೆ ಬದ್ಧವಾಗುವುದರಿಂದ ಉಳಿದ ರಾಷ್ಟ್ರಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿರುತ್ತದೆ. ಈ ಮಾದರಿಯ ವಿಶ್ವಸರ್ಕಾರ ಪಂಡಿತ ದೀನದಯಾಳ್ ಉಪಾಧ್ಯಾಯರ ಅಖಂಡ ಮಾನವತಾ ಸಿದ್ಧಾಂತದ ಕನಸಿನ ಶಿಶುವಾಗಿರುತ್ತದೆ, ಅದ್ವೈತಾನುಸಾರಿಯಾಗಿರುತ್ತದೆ. ದೀನದಯಾಳ್‌ಜಿ ಅವರು ಪ್ರತಿಪಾದಿಸಿದ ಆಲೋಚನೆಗಳಿಗೆ, ಆದರ್ಶಗಳಿಗೆ ನಾವು ಬದ್ಧರಾಗಿದ್ದಲ್ಲಿ ಇವತ್ತಿನ ತಲೆಮಾರಿನ ಗೊಂದಲಗಳನ್ನು ನಿವಾರಿಸುವುದು ನಮ್ಮಿಂದ ಸಾಧ್ಯವಾಗುತ್ತದೆ.

# ೭. ಏಕಾತ್ಮ ಮಾನವದರ್ಶನ

## ದಯಾಪರ ಸಮಾಜೋ–ಆರ್ಥಿಕ ವ್ಯವಸ್ಥೆ ಕುರಿತ ಒಂದು ತತ್ತ್ವಜಿಜ್ಞಾಸೆ

**ಡಾ. ಚಂದ್ರ ಪಿ. ಅಗರ್‌ವಾಲ್**

ಒಂದು ಅಪೇಕ್ಷಿತ ಮಟ್ಟದಲ್ಲಿ ವ್ಯಕ್ತಿ ಸ್ವಾತಂತ್ರ್ಯ, ಆರ್ಥಿಕ ಅಭ್ಯುದಯ, ಸಾಮಾಜಿಕ ಸಮಾನತೆ ಮತ್ತು ರಾಜಕೀಯ ಸ್ಥಿರತೆಗಳನ್ನು ಸಾಧಿಸಲು ಯಾವುದೇ ಸಮಾಜಕ್ಕೂ ತಾತ್ತ್ವಿಕ ಕಲ್ಪನೆಗಳ ಕೆಲವೊಂದು ಸಿದ್ಧರೂಪಗಳು, ನಿರ್ಣಯಗಳು ಬೇಕೇಬೇಕು. ಇವು ವೃಕ್ಷವೊಂದರ ಬೇರುಗಳಿದ್ದಂತೆ, ಸಮಾಜಕ್ಕೆ ಪೋಷಣೆ, ಪ್ರಫುಲ್ಲತೆಗಳನ್ನು ಒದಗಿಸುತ್ತವೆ. ಅಖಂಡ ಮಾನವತಾ ಸಿದ್ಧಾಂತ ಇಂಥ ಒಂದು ತಾತ್ತ್ವಿಕ ಗ್ರಹಿಕೆಗಳ ಒಂದು ಸಿದ್ಧರೂಪ. ಈ ಪರಿಕಲ್ಪನೆಗಳು ಪ್ರಾಚೀನವಾಗಿದ್ದು ಅರವಿಂದರು ಇದನ್ನು 'ಅಖಂಡ ಮಾನವತಾ ಸಿದ್ಧಾಂತ" ಎಂದು ಕರೆದಿದ್ದಾರೆ. ಆನಂತರ ಸಮಕಾಲೀನ ಸಮಾಜೋ–ಆರ್ಥಿಕ ಜಿಜ್ಞಾಸುಗಳಾದ ದೀನದಯಾಳ್ ಉಪಾಧ್ಯಾಯರು, ಬಂಡವಾಳಶಾಹಿ ಮತ್ತು ಮಾರ್ಕ್ಸ್‌ವಾದಕ್ಕೆ ಪ್ರತಿಯಾಗಿ ಹೊಸ ಸಮಾಜೋ–ಆರ್ಥಿಕ ವ್ಯವಸ್ಥೆಯೊಂದನ್ನು ನಿರ್ಮಿಸಲು ಏಕಾತ್ಮ ಮಾನವತಾ ಸಿದ್ಧಾಂತದ ತಾತ್ತ್ವಿಕ ಸೂತ್ರಗಳನ್ನು ಬಳಸಿಕೊಂಡರು.

ಈ ಪ್ರಬಂಧದಲ್ಲಿ ನಾನು ಮೊದಲಿಗೆ ಏಕಾತ್ಮ ಮಾನವತಾ ಸಿದ್ಧಾಂತ ಮತ್ತು ಇತರ ಪ್ರಮುಖ ಮಾನವತಾವಾದ ಚಳವಳಿ ನಡುವಣ ವ್ಯತ್ಯಾಸಗಳನ್ನು ಗುರುತಿಸುತ್ತೇನೆ. ನಂತರ ಏಕಾತ್ಮ ಮಾನವತಾ ಸಿದ್ಧಾಂತದ ಮಾನವ ಪರಿಕಲ್ಪನೆಯನ್ನು[೧] ವಿವರಿಸುತ್ತೇನೆ. ಆಖೈರಾಗಿ, ಅಖಂಡಮಾನವತಾ ಸಿದ್ಧಾಂತವೆಂದು ಪ್ರಖ್ಯಾತಗೊಂಡಿರುವ ಉಪಾಧ್ಯಾಯರ ಸಮಾಜೋ ಆರ್ಥಿಕ ವ್ಯವಸ್ಥೆಯ ಪರಿಕಲ್ಪನೆಯನ್ನು ವಿಶ್ಲೇಷಿಸುತ್ತೇನೆ.

### ಪಾಶ್ಚಾತ್ಯ ಮಾನವತಾ ಚಳವಳಿಗಿಂತ ಭಿನ್ನ

ಮಾನವತಾವಾದ ಎಂದರೆ, ಮನುಷ್ಯ ಘನತೆಯನ್ನು, ಆಲೋಚನೆ ಅಥವಾ ಕ್ರಿಯೆಗಳನ್ನು ಆಧರಿಸಿದ ಒಂದು ವ್ಯವಸ್ಥೆ. ಅಂತೆಯೇ ಮಾನವ ಆತ್ಮತೃಪ್ತಿಯನ್ನು



ಸಾಧಿಸಲು ಸಮರ್ಥನಾದವನು ಎಂದರ್ಥ. ಚರಿತ್ರೆಯಲ್ಲಿ ಹಲವಾರು ಮಾನವತಾವಾದಿ ಚಳವಳಿಗಳು ನಡೆದಿವೆ. ಇವುಗಳಲ್ಲಿ ಹೆಚ್ಚಿನವು "ನಾಗರಿಕ ಪ್ರಪಂಚದಲ್ಲಿ" ನಡೆದಂಥ ಚಳವಳಿಗಳು ಎಂಬುದು ಗಮನಾರ್ಹವಾದದ್ದು. ಕಳೆದ ಐದುನೂರು ವರ್ಷಗಳಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲೆ ಇಂಥ ನಾಲ್ಕು ಪ್ರಮುಖ ಚಳವಳಿಗಳು ನಡೆದಿವೆ. ಅವು ಪ್ರಾಚೀನ ಮಾನವತಾವಾದ, ಮಾರ್ಕ್ಸ್‌ವಾದಿ ಮಾನವತಾವಾದ, ಅಸ್ತಿತ್ವವಾದಿ ಮಾನವತಾವಾದ ಮತ್ತು ಪರಿಸರವಾದಿ ಮಾನವತಾವಾದ. ಮಾನವತಾ ವಾದದಲ್ಲಿನ ಪರಿವರ್ತನೆಗಳು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬೌದ್ಧಿಕ ವಾತಾವರಣವನ್ನೂ, ಜೀವನ ಶೈಲಿಯನ್ನು ರೂಪಿಸಿದವು. ಆದರೆ ಇವು ಅಖಂಡ ಮಾನವತಾ ಸಿದ್ಧಾಂತದ ಪರಿಕಲ್ಪನೆಗೆ ವಿರುದ್ಧವಾದ ಅರ್ಥಗಳಿಂದ ಗರ್ಭಿತವಾದವು. ಆದ್ದರಿಂದ ಇವುಗಳ ಒಂದು ಸ್ಥೂಲ ಅವಲೋಕನ ಅಖಂಡ ಮಾನವತಾ ಸಿದ್ಧಾಂತದ ಸೂತ್ರಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ.

ಪ್ರಪ್ರಥಮ ಮಾನವತಾವಾದ ಚಳವಳಿಯೆಂದರೆ ಪ್ರಾಚೀನ ಮಾನವತಾವಾದ. ಹದಿನೈದು ಹದಿನಾರನೇ ಶತಮಾನಗಳ ಐರೋಪ್ಯ ನವೋದಯ ಕಾಲಾವಧಿಯಲ್ಲಿ ಇದು ಪರಾಕಾಷ್ಠೆ ಮುಟ್ಟಿತ್ತು. ಗ್ರೀಕ್ ನಾಗರಿಕತೆ ಕಾಲದಲ್ಲೂ ಮಾನವತಾ ವಾದದ ಆದರ್ಶಗಳು ಪರಿಪೂರ್ಣ ವ್ಯವಸ್ಥೆಯನ್ನು ತಲುಪಿದ್ದವು ಎಂದೂ ಹೇಳಲಾಗುತ್ತದೆ. ತಮ್ಮ ಸಾಂಸ್ಕೃತಿಕ ಹಾಗೂ ರಾಜಕೀಯ ಸಾಧನೆಗಳ ಬಗ್ಗೆ ಹಾಗೂ ಮಾನವನ ಘನತೆ, ಕೀರ್ತಿ–ವೈಭವಗಳ ಬಗ್ಗೆ ಆತ್ಮವಿಶ್ವಾಸ ಹೊಂದಿದ್ದ ಪ್ರಾಚೀನ ಗ್ರೀಕ್ ಪಂಡಿತರು "ಎಲ್ಲ ವಿಷಯಗಳಲ್ಲೂ ಮಾನವನೇ ಮಾನದಂಡ" ಎಂದು ಘೋಷಿಸಿದ್ದರು. ಭೂಮಿ ಬ್ರಹ್ಮಾಂಡದ ಕೇಂದ್ರ. ಮಾನವ ಭೂಮಿಯ ಮುಕುಟಮಣಿ ಎನ್ನುವುದು ಇವರ ನಂಬಿಕೆಯಾಗಿತ್ತು. ಶತಮಾನಗಳ ನಂತರ ಗ್ರೀಕರ ಆಲೋಚನೆಗಳು, ಆದರ್ಶಗಳಿಂದ ಸ್ಫೂರ್ತಿ ಪಡೆದ ನವೋದಯ ಮಾನವನ ಪರಿಪೂರ್ಣತೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿತು ಹಾಗೂ ಮಾನವನ ಸರ್ವೋತ್ಕೃಷ್ಟತೆಯನ್ನು ಕೊಂಡಾಡಿತು. ಕಾರಣಾತೀತ ಆದರ್ಶವಾಗಿ ಮಾನವ ಇನ್ನೂ "ಎಲ್ಲ ವಿಷಯಗಳ ಮಾಪನವಾಗಿಯೇ" ಉಳಿದಿದ್ದ. ಆದರೆ ಮಾನವ ಘನತೆಯ ಅನುಗ್ರಹಕ್ಕೆ ಪಾತ್ರರಾದದ್ದು ಮೇಲಂತಸ್ತಿನ ವರ್ಗದ ಜನರೇ ಹೊರತಾಗಿ ಬೀದಿಯಲ್ಲಿನ ಸಾಮಾನ್ಯರಲ್ಲ. ಆದ್ದರಿಂದ, ಕೆಲವು ಶತಮಾನಗಳ ನಂತರ ಮಾನವರಲ್ಲಿ ಸಮಾನತೆ ಇರಬೇಕೆಂಬ ಹೊಸ ಪರಿಕಲ್ಪನೆಗಳು ಮೂಡಿದಾಗ ಮಾರ್ಕ್ಸ್‌ನೊಂದಿಗೆ ಮಾನವತಾವಾದದ ಹೊಸ ಅರ್ಥ, ವ್ಯಾಖ್ಯಾನಗಳು ಹುಟ್ಟಿಕೊಂಡವು. ಮಾರ್ಕ್ಸ್‌ನ ಹೊಸ ಮಾನವತಾವಾದ ಕೆಳವರ್ಗದ ಜನರಿಗೂ ಮಾನವೀಯ ಹಕ್ಕುಗಳನ್ನು ವಿಸ್ತರಿಸಿತು. ಜೊತೆಗೆ, ಅಧಿಕಾರಸ್ಥ ಕಿಡಿಗೇಡಿಗಳ ಕಪಿಮುಷ್ಟಿಯಿಂದ ಅಧಿಕಾರರಹಿತ ಜನರನ್ನು ರಕ್ಷಿಸುವ ಸಲುವಾಗಿ ಮಾರ್ಕ್ಸ್‌ವಾದ ವ್ಯಕ್ತಿಯನ್ನು ತನ್ನ ಕ್ರಿಯೆಗಳ ನೈತಿಕ ಹೊಣೆಗಾರಿಕೆಯಿಂದ ವಿಮುಕ್ತಿಗೊಳಿಸಿತು.

ದುಷ್ಟಕಾರ್ಯಗಳಲ್ಲೂ ವ್ಯಕ್ತಿಯನ್ನು ಅದರ ನೈತಿಕ ಹೊಣೆಗಾರಿಕೆಯಿಂದ ಮುಕ್ತನನ್ನಾಗಿಸಿತು. ಈ ನೈತಿಕ ಹೊಣೆಗಾರಿಕೆಯಿಂದ ಪಡೆದ ವಿಮೋಚನೆಯಿಂದಾಗಿ ಜನಸಾಮಾನ್ಯರಲ್ಲಿ ಹಿಂದೆಂದೂ ಕಾಣದಂಥ ಸ್ವಾತಂತ್ರ್ಯ ಹಾಗೂ ಸಮಾನತೆಯ ಅರಿವು ಢಾಳವಾಗಿ ಗೋಚರಿಸಿತು. ಆದರೆ ಈ ವಿಮೋಚನೆಯೇ ಅಧಿಕಾರಸ್ಥರು ಹಾಗೂ ಅಧಿಕಾರರಹಿತರು, ಇವರಿಬ್ಬರನ್ನೂ ಚರಿತ್ರೆಯ ನಿಯಂತ್ರಣವಾದಿ ಶಕ್ತಿಗಳ ಅಧೀನರನ್ನಾಗಿಸಿತು.

ಮನುಷ್ಯನೇ ತನ್ನ ವಿಧಿಯ ಸೃಷ್ಟಿಕರ್ತ, ತನ್ನ ವಿಧಿಗೆ ತಾನೇ ಹೊಣೆ ಎಂದು ಅಸ್ತಿತ್ವವಾದಿ ಮಾನವತಾವಾದ ಘೋಷಿಸಿತು. ಮನುಷ್ಯ ತನ್ನ ಕ್ಷಣಕ್ಷಣದ ಬದುಕಿಗೂ ತಾನೇ ಹೊಣೆಗಾರ. ಘನತೆ ಗೌರವ ಅಧಿಕಾರ ಇವೆಲ್ಲ ಏನೇ ಇದ್ದರೂ ಪ್ರತಿಕ್ಷಣದ ಬದಕಿಗೂ ಅವನೇ ಹೊಣೆ. ಪ್ರತಿಕ್ಷಣದ ಬದುಕಿನಲ್ಲೂ ಅವನು ಹೊಸ ಕ್ಷಣವನ್ನು ಸೃಷ್ಟಿಸುತ್ತಾನೆ ಅಥವಾ ಅದಕ್ಕೆ ಮಾರಕವಾಗುತ್ತಾನೆ. ಹೀಗೆ ಅವನು ತನ್ನ ಇಡೀ ಬದುಕಿಗೆ ತಾನೇ ಹೊಣೆಗಾರನಾಗುತ್ತಾನೆ ಎಂದು ಅಸ್ತಿತ್ವವಾದಿ ಮಾನತಾವಾದ ಪ್ರತಿಪಾದಿಸಿತು. ಹೊಸ ಸಿದ್ಧಾಂತ ನಿಚ್ಚಯವಾಗಿ ಮಾನವನನ್ನು ನಿಯಂತ್ರಣ ವಾದಿ ಶಕ್ತಿಗಳಿಂದ ಪಾರುಮಾಡಿತು. ಮಾನವನನ್ನು ಹೊಣೆಗಾರನನ್ನಾಗಿ ಮಾಡುವ ಮೂಲಕ ಅದು ಮಾನವ ತನ್ನ ಘನತೆ ಬಗ್ಗೆ ಹೆಮ್ಮೆಪಡಲು ಕಾರಣೀಭೂತವಾಯಿತು. ಆದರೆ ಮಾನವನನ್ನು ಕಾಲದ ಒಂದು ತುಣಕನ್ನಾಗಿಸುವ ಮೂಲಕ ಅಸ್ತಿತ್ವವಾಗಿ ಮಾನವತಾವಾದ ಮಾನವನಿಗೆ ಬ್ರಹ್ಮಾಂಡದ ವ್ಯಾಪಕ ದರ್ಶನವನ್ನು ನಿರಾಕರಿಸಿತು. ಅವನನ್ನು ಅಹಂಕೇಂದ್ರಿತ ಕಷ್ಟಕೋಟಲೆಗಳಲ್ಲಿ ಬಂದಿಯನ್ನಾಗಿಸಿತು. ಈ ಕಷ್ಟ ಕೋಟಲೆಗಳ, ಹತಾಶೆಯ ಹೋರಾಟಕ್ಕೆ ನೂಕಿತು.

ಪಾಶ್ಚಾತ್ಯ ಮಾನವತಾವಾದ ಚಳವಳಿಗಳಲ್ಲಿ ಮುಖ್ಯವಾದದ್ದು ಕೊನೆಯದಾದ ಪರಿಸರ ಮಾನವತಾವಾದ. ಇದು ಇನ್ನೂ ಅರ್ಥ ವ್ಯಾಖ್ಯಾನಗಳ ನಿರೂಪಣೆಯ ಹಂತದಲ್ಲೇ ಇದೆ. ಹೆನ್ರಿಕ್ ಸ್ಕೋಲಿಮೊವಸ್ಕಿ ಈ ತತ್ತ್ವದ ಪ್ರವರ್ತಕರಲ್ಲೊಬ್ಬ, ವಿಚ್ಛಿದ್ರಗೊಂಡ, ಪ್ರತ್ಯೇಕಿತನಾದ ತಾಂತ್ರಿಕ ಮಾನವನನ್ನು ಜೀವಮಂಡಲದಲ್ಲಿ ಪ್ರತಿಷ್ಠಾಪಿಸುವುದು ಪರಿಸರ ಮಾನವತಾವಾದದ ಧ್ಯೇಯ ಎನ್ನುತ್ತಾನೆ ಹೆನ್ರಿಕ್ ಸ್ಕೋಲಿಮೊವಸ್ಕಿ.[೨] ಮನುಷ್ಯನನ್ನು ಎಲ್ಲ ವಿಷಯಗಳಲ್ಲೂ ಮಾನದಂಡವನ್ನಾಗಿಸಿದ್ದರಿಂದ ಹಾಗೂ ಅವನನ್ನು ಬ್ರಹ್ಮಾಂಡದ ವ್ಯಾಪಕ ದರ್ಶನದಿಂದ ವಂಚಿಸಿದ್ದರಿಂದ ಆದ ದುಷ್ಪರಿಣಾಮಗಳನ್ನು ಈ ಚಳವಳಿ ಮಾನ್ಯ ಮಾಡಿರುವಂತೆ ತೋರುತ್ತದೆ. ಆದರೆ ಈ ಚಳವಳಿ ಇನ್ನೂ ಶೈಶವಾವಸ್ಥೆಯಲ್ಲಿದೆ. ಇದನ್ನು ಉಚಿತ ರೀತಿಯಲ್ಲಿ ಮಾಪನಮಾಡಿ ಮೌಲ್ಯ ತಿಳಿಯಬೇಕಾಗಿದೆ.

ಸಾರಾಂಶದಲ್ಲಿ ಹೇಳುವುದಾದರೆ ಮಾನವತಾವಾದ ಕುರಿತು ಪಾಶ್ಚಾತ್ಯ ಪರಿವರ್ತನೆಗಳೆಲ್ಲವೂ ಮಾನವನ ಘನತೆ ಮತ್ತು ಪರಿಪೂರ್ಣತೆಯನ್ನೇ ಆಧರಿಸಿವೆ.



ಈ ಎಲ್ಲ ಚಳವಳಿಗಳು ಮನುಷ್ಯನನ್ನು ಸಾಮಾಜಿಕ–ಆರ್ಥಿಕ ಅಧಿಕಾರದ ಚೌಕಟ್ಟಿನಲ್ಲಿ, ಅಧಿಕಾರರಹಿತ ಚೌಕಟ್ಟಿನಲ್ಲಿ ಗ್ರಹಿಸುವ ಪ್ರಯತ್ನ ಮಾಡಿದೆ ಹಾಗೂ ಮಾನವನಿಗೆ ಅನೇಕ ಹಕ್ಕುಗಳನ್ನು ಅನುಗ್ರಹಿಸಿವೆ. ಮನುಷ್ಯ, ಸಮಾಜದ ಬ್ರಹ್ಮಾಂಡ, ಜೀವಮಂಡಲ ಇತ್ಯಾದಿಗಳನ್ನೊಳಗೊಂಡ ವಿಸ್ತೃತ ಪರಿಧಿಯೊಳಗಿನ ಅಂತರಕ್ರಿಯಾ ಘಟಕ ಎನ್ನುವುದನ್ನು ಈ ಚಳವಳಿಗಳು ವಿರೋಧಿಸುತ್ತವೆ. ಮನುಷ್ಯನನ್ನು ಕೇವಲ ಒಬ್ಬ ವ್ಯಕ್ತಿಯನ್ನಾಗಿ ಮಾತ್ರ ಪರಿಗ್ರಹಿಸುತ್ತವೆ. ಮನುಷ್ಯ ಪರಿಪೂರ್ಣವಲ್ಲ, ಅವನು ವಿಕಸನಶೀಲ ಎಂಬುದು ಈ ಚಳವಳಿಗಳ ಮತ್ತೊಂದು ಗ್ರಹಿಕೆಯಾಗಿದೆ. ಮಾನವನ ಕೈಯಲ್ಲಿ ಅಧಿಕಾರವಿದೆ ಹಾಗೂ ಅವನೊಳಗೊಂದು ಸಮಗ್ರ ವ್ಯಕ್ತಿತ್ವವಿದೆ ಎನ್ನುವುದೂ ಇವುಗಳ ದೃಢ ನಿಲುವು. ಈಚಿನ ಪಾಶ್ಚಾತ್ಯ ಮಾನವತಾವಾದಿ ಚಳವಳಿಗಳು ಗ್ರೀಕರಂತೆ ಎಲ್ಲ ವಿಷಯಗಳಿಗೂ ಮಾನವನೇ ಮಾನದಂಡ ಎಂದು ಪರಿಗಣಿಸುವುದಿಲ್ಲ. ಆದರೆ ಜೀವಮಂಡಲದಲ್ಲಿನ ಬದುಕಿನ ಎಲ್ಲ ಘಟಕಗಳಿಗೂ ಮಾನವ ಹೊಣೆಗಾರನೆಂದು ಹೇಳುತ್ತವೆ. ಎಲ್ಲ ಮಾನವತಾವಾದಿ ಚಳವಳಿಗಳಂತೆ ಅಖಂಡ ಮಾನವ ಸಿದ್ಧಾಂತವೂ ಮಾನವನನ್ನು ಅಪೂರ್ವ ಜೀವಿ ಎಂದು ಮಾನ್ಯ ಮಾಡುತ್ತದೆ. ಬೇರೆ ಎಲ್ಲ ಜೀವರಾಶಿಗಳಿಗಿಂತ ಮಾನವನ ಅಪೂರ್ವತೆ ಇರುವುದು ಅವನ ಪ್ರಜ್ಞಾವಂತಿಕೆಯಲ್ಲಿ. ತನ್ನ ಇತರರ ಜೊತೆಗಿನ ಪರಸ್ಪರ ಕಾರ್ಯಕಾರಿ ಅಗತ್ಯಗಳ ಅರಿವು ಮಾನವನಿಗಿದೆ. ಹಾಗೂ ವಿಕಸನಶೀಲ ಪ್ರಕೃತಿಯ ಅರಿವು ಅವನಿಗಿದೆ. ಅರವಿಂದರ ದಾರ್ಶನಿಕ ವಿಶ್ಲೇಷಣೆ ಪ್ರಕಾರ. "ಅಸ್ತಿತ್ವದ ಎಲ್ಲ ಮಗ್ಗುಲುಗಳನ್ನು ಕುರಿತ ಸತ್ಯದ ಅರಿವು ಹಾಗೂ ಸತ್ಯದೊಂದಿಗಿನ ಎಲ್ಲ ಸಂಬಂಧಗಳ ಅರಿವಿನ ಸತ್ಯಶೀಲ ಮನೋಧರ್ಮದ ಆಧಾರದ ಮೇಲೆ ಅಖಂಡ ಮಾನವತಾವಾದ ರೂಪುಗೊಂಡಿದೆ. ಇಲ್ಲಿ ಎಲ್ಲರೊಂದಿಗಿನ ಎಂದರೆ ಸಕಲ ಜೀವರಾಶಿಗಳೊಡನೆ ಮಾನವ ಸಂಬಂಧಗಳು ಹಾಗೂ ಸತ್ಯಶೀಲ ಮನೋಧರ್ಮ ಎಂದರೆ ಮಾನವನ ವಿಕಸನಶೀಲ ಪ್ರವೃತ್ತಿ ಎಂದೂ ಅರ್ಥ.[೩] ಈ ತಾತ್ವಿಕ ಆದರ್ಶಗಳೇ ಉಪಾಧ್ಯಾಯರ ಸಮಾಜೊ ಆರ್ಥಿಕ ವ್ಯವಸ್ಥೆಯ ಆಧಾರಶಿಲೆ. ಮುಂದೆ ಅವುಗಳನ್ನು ನಾನು ವಿವರಿಸಲಿದ್ದೇನೆ.

## ಮಾನವನ ಪರಿಕಲ್ಪನೆ

ಜೀವಮಂಡಲದೊಳಗಿನ ಎಲ್ಲ ಜೀವಿಗಳಿಗೆ ಹೋಲಿಸಿ ನೋಡಿದಾಗ ಮನುಷ್ಯ ಅತ್ಯುಚ್ಚ ಜೀವಿಯಾಗಿ ಕಾಣುತ್ತಾನೆ ಎನ್ನುವುದು ಅಖಂಡ ಮಾನವತಾ ಸಿದ್ಧಾಂತದ ನಂಬಿಕೆ. ಅವನು ಅಪೂರ್ವ ಜೀವ ಜಾತಿಗೆ ಸೇರಿದವನು. ಮಾನವನಿಂದ ವ್ಯಕ್ತಿತ್ವದ ವಿವಿಧ ಮುಖಗಳನ್ನು ಸಮಗ್ರಗೊಳಿಸುವುದು, ಸಮನ್ವಯಗೊಳಿಸುವುದು ಸಾಧ್ಯ. ಉಳಿದ ಜೀವಿಗಳಿಂದ ಇದು ಸಾಧ್ಯ ಇಲ್ಲ. ಮಾನವನಿಗೆ ಉಳಿದ ಜೀವನಗಳೊಂದಿಗೆ

ನಿರಂತರವಾಗಿ ತಾಳಿಬಾಳುವ ಸಂಬಂಧ ಅತ್ಯಗತ್ಯ. ಮಾನವ ಬದುಕಿನ ಉನ್ನತ ಶ್ರೇಣಿಗೇರಲು ಸತತವಾಗಿ ಪ್ರಜ್ಞಾ ಪೂರ್ವಕ ಪ್ರಯತ್ನಗಳನ್ನು ನಡೆಸುತ್ತಿರುತ್ತಾನೆ.

**ಸಮಗ್ರ ಜೀವಿ**

ಮನುಷ್ಯನ ಸ್ವಭಾವ, ನಡತೆ, ಬುದ್ಧಿವಂತಿಕೆ ಇವೇ ಮೊದಲಾದ ಲಕ್ಷಣಗಳಿಂದ ಸಾಮಾಜಿಕ ಚಿಂತಕರರು ಮಾನವನನ್ನು ಹಲವು ರೀತಿಗಳಲ್ಲಿ ಅರ್ಥೈಸಿದ್ದಾರೆ. ಉದಾಹರಣೆಗೆ : ಆರ್ಥಿಕ ಮಾನವ, "ತಾಂತ್ರಿಕ ಮಾನವ", "ಚಿಂತನಶೀಲ ಮಾನವ", "ರಸಿಕಮಾನವ" ಇತ್ಯಾದಿ ತದ್ವಿರುದ್ಧವಾದ ಒತ್ತಡಗಳು ಮತ್ತು ಅಗತ್ಯಗಳ ಬಗ್ಗೆ ಕ್ರಿಯಾಶೀಲನಾಗುವ ಪ್ರವೃತ್ತಿಯಿಂದಾಗಿ ಸಮಾಜ ಚಿಂತಕರು ಮಾನವನನ್ನು "ಚಂಚಲ", "ನಿಗೂಢ" ಎಂದೂ ವ್ಯಾಖ್ಯಾನಿಸಿದ್ದಾರೆ. ಆದರೆ ಮನುಷ್ಯ ಜೀವನ ಗಮನಿಸಿದಾಗ ಇಂಥ ಅರ್ಥ ವಿವರಣೆ ತಪ್ಪು ಕಲ್ಪನೆಗಳೆನ್ನಿಸುತ್ತವೆ. ಮನುಷ್ಯನ ನಿಜವಾದ ಸ್ವಭಾವವನ್ನು ಇವು ಬಿಂಬಿಸುವುದಿಲ್ಲ. ನಿಜ ಜೀವನದಲ್ಲಿ ಅತಿ ಬುದ್ಧಿವಂತನಾದ ಮನುಷ್ಯ ಎಷ್ಟೋವೇಳೆ ದುಡುಕು ಪ್ರವೃತ್ತಿಯಿಂದಾಗಿ, ಆವೇಶಕ್ಕೊಳಗಾಗಿ ಕ್ರಿಯಾಶೀಲನಾಬಹುದು. ಹಾಗೆಯೇ ಚಂಚಲ ಸ್ವಭಾವದವನು ತರ್ಕಬದ್ಧ ವ್ಯವಸ್ಥೆಯಲ್ಲಿ ಕಾರ್ಯೋನ್ಮುಖನಾಗಬಲ್ಲ. ಮನುಷ್ಯರಲ್ಲಿನ ಈ ವ್ಯತ್ಯಾಸ, ವೈವಿಧ್ಯತೆ ಮತ್ತು ಪ್ರತಿಕೂಲಗಳನ್ನು ಅರ್ಥೈಸುವ ಸಲುವಾಗಿ ಅಖಂಡ ಮಾನವತಾ ಸಿದ್ಧಾಂತ ಮಾನವನನ್ನು ವಿವಿಧ ಮುಖಗಳಿಂದೊಡಗೂಡಿದ ಸಮಗ್ರ ವ್ಯಕ್ತಿಯಾಗಿ ಗ್ರಹಿಸುತ್ತದೆ. ಸಮಾಂತರ ಚತುರ್ಭುಜಗಳಿರುವ ಘನ ಆಕೃತಿಯಂತೆ ಮಾನವನ ಪ್ರತಿಯೊಂದು ಪಾರ್ಶ್ವವೂ ಮತ್ತೊಂದುರಿಂದ ಪ್ರತ್ಯೇಕ. ಪ್ರತಿಪಾರ್ಶ್ವವೂ ಬೇರೆಬೇರೆ ಸಮಯಗಳಲ್ಲಿ ಹೊಳೆಯುತ್ತವೆ. ಆದಾಗ್ಯೂ ಒಂದಿಲ್ಲದೆ ಇನ್ನೊಂದು ಪಾರ್ಶ್ವಕ್ಕೆ ಅರ್ಥವಿಲ್ಲ. ಚತುರ್ಭುಜ ಘನಾಕೃತಿಯಂತೆ. ಅಖಂಡ ಮಾನವತಾ ಸಿದ್ಧಾಂತದ ಪ್ರಕಾರ ಮಾನವನಲ್ಲಿ ನಾಲ್ಕು ಶಕ್ತಿಕೇಂದ್ರಗಳಿವೆ. ಅವು; ದೇಹ, ಬುದ್ಧಿ, ಮನಸ್ಸು ಮತ್ತು ಆತ್ಮ. ಮಾನವನ ಬಹು ವಿಧದ ಆಲೋಚನೆಗಳು ಮತ್ತು ಕ್ರಿಯೆಗಳು ಈ ನಾಲ್ಕು ಶಕ್ತಿ ಕೇಂದ್ರಗಳಿಂದಲೇ ಉಗಮಿಸುತ್ತವೆ. ದೇಹದಿಂದ ಮಾನವನಲ್ಲಿ ಹಸಿವು, ನಿದ್ರೆ ಇತ್ಯಾದಿ ಭೌತಿಕ ಅಗತ್ಯಗಳು ಹುಟ್ಟುತ್ತವೆ. ಅವನ ಭಾವನೆಗಳು ಸುಖಸಂತೋಷಗಳನ್ನು ಬಯಸುತ್ತವೆ. ನೋವು ಕಷ್ಟಗಳನ್ನು ನಿರಾಕರಿಸುತ್ತವೆ. ಬುದ್ಧಿಮತ್ತೆಯಿಂದ ಆತ್ಮರಕ್ಷಣೆ, ವಶವರ್ತಿತನ, ಸಮುದಾಯ ಪ್ರಿಯತೆ, ಸ್ಪರ್ಧಾ ಮನೋಭಾವ ಮೊದಲಾದವು ಹುಟ್ಟುತ್ತವೆ. ಮನಸ್ಸು ಸರಿ–ತಪ್ಪುಗಳನ್ನು ಕಂಡುಹಿಡಿಯುವ ಸಾಧನ. ಇಂಗ್ಲಿಷ್‌ನಲ್ಲಿ ಅನೇಕ ವೇಳೆ ಮನಸ್ಸನ್ನು ಬುದ್ಧಿ ಎಂದು ತಪ್ಪಾಗಿ ಅರ್ಥೈಸಲಾಗುತ್ತದೆ[೪] ಇದು ಸರಿಯಲ್ಲ. ದೇಹದ ಮತ್ತು ಬುದ್ಧಿ ಮತ್ತೆಯ ಆಜ್ಞೆ–ಆದೇಶಗಳನ್ನು ಸ್ವೀಕರಿಸುವುದು ಅಥವಾ ತಿರಸ್ಕರಿಸುವುದೂ ಮನಸ್ಸೇ.



ಉದಾಹರಣೆಗೆ ದೇಹಕ್ಕೆ ಸೋಮಾರಿತನ ಹಿತಕರವೆನ್ನಿಸಬಹುದು. ಆದರೆ ಮನಸ್ಸು ಈ ಪ್ರವೃತ್ತಿಯನ್ನು ತಿರಸ್ಕರಿಸಿ ಉದ್ಯಮಶೀಲತೆಯನ್ನು ಪ್ರೇರೇಪಿಸಬಹುದು. ಬುದ್ಧಿ ಸಂಪತ್ತನ್ನು ಸಂಗ್ರಹಿಸಬೇಕೆಂಬ ದುರಾಸೆಯನ್ನು ಪ್ರಚೋದಿಸಬಹುದು. ಆದರೆ ಸಮಾನತೆಯ ದೃಷ್ಟಿಯಿಂದ ಮನಸ್ಸು ಇಂಥ ದುರಾಸೆಯನ್ನು ನಿಗ್ರಹಿಸುತ್ತದೆ. ಆಖೈರಾಗಿ, ಮಾನವನ ಪರಿಪೂರ್ಣತೆಯ ನಿರಂತರ ಅನ್ವೇಷಣೆಯಲ್ಲಿ ಆತ್ಮ ಮಾರ್ಗದರ್ಶನ ಮಾಡುತ್ತದೆ.

ಈ ಎಲ್ಲ ನಾಲ್ಕು ಕೇಂದ್ರಗಳೂ ಮಾನವನ ಅವಿಭಾಜ್ಯ ಅಂಗಗಳು. ಆದಾಗ್ಯೂ ಕಾರ್ಯಕ್ಷಮತೆಯಲ್ಲಿ ಅವು ಭಿನ್ನವಾಗಿಯೇ ವರ್ತಿಸುತ್ತವೆ. ಸಮಾಜದ ರೀತಿ ನೀತಿ ನಿಯುವಾನುಸಾರ ಹಾಗೂ ಸವಾಜದ ನಿರೀಕ್ಷೆಯುಂತೆ ವಾನವ ನಡೆದುಕೊಳ್ಳಬೇಕಾದಂಥ ಪರಿಸ್ಥಿತಿಯಲ್ಲಿ ಕ್ರಿಯಾತ್ಮಕವಾಗಿ ತೀವ್ರವಾಗಿ ಭಿನ್ನವಾಗಿರುತ್ತವೆ. ದೇಹ ಮತ್ತು ಬುದ್ಧಿಮತ್ತೆಗೆ ಹೆಚ್ಚಿನ ಮಹತ್ವ ನೀಡುವ ಸಮಾಜದಲ್ಲಿ ಮನುಷ್ಯನ ವಿಶಿಷ್ಟ ಗುಣಲಕ್ಷಣಗಳಾದ ನೀತಿ ಮೌಲ್ಯಗಳು, ಪರಿಪೂರ್ಣತೆಗಾಗಿ ವಿಕಸನಶೀಲ ಅನ್ವೇಷಣೆ ಮೊದಲಾದವುಗಳನ್ನು ಉಪೇಕ್ಷಿಸಲಾಗಿದೆ. ಮನಸ್ಸು ಭೌತಿಕ ಹಾಗೂ ಬೌದ್ಧಿಕ ಮೌಲ್ಯಗಳ ಶಕ್ತಿ ಅಧೀನವಾಗುತ್ತದೆ, ಎರಡನೆಯ ಸ್ಥಾನದಲ್ಲಿರುತ್ತದೆ.

**ಉಳಿದ ಜೀವಿಗಳೊಂದಿಗೆ ಸಮರ್ಥನೀಯ ಸಂಬಂಧದ ಅಗತ್ಯ**

ನಾಲ್ಕು ಶಕ್ತಿಗಳ ಸದ್ಗುಣಗಳಿಂದ ಅನುಗ್ರಹಿತನಾದ ಮಾನವ ಅಪೂರ್ವ ಜೀವಿ. ಆದಾಗ್ಯೂ ಜೀವಮಂಡಲದಲ್ಲಿನ ಸಹಜೀವಿಗಳ ಸಂಬಂಧ ಶ್ರೇಣಿಯ ಅನೇಕ ಜೀವರಾಶಿಗಳಲ್ಲಿ ಅವನೂ ಒಬ್ಬ. ಅವನಿಗೆ ಜೀವಮಂಡಲದಲ್ಲಿನ ತನ್ನ ಸ್ಥಾನಮಾನ ಮತ್ತು ಕರ್ತವ್ಯಗಳ ಅರಿವಿದೆ. ಈ ಪ್ರಜ್ಞಾವಂತಿಕೆಯಿಂದಾಗಿಯೇ ಅವನು ಅಪೂರ್ವ, ಅಸದೃಶ. (ಛಿದ್ರಿತ ಮಾನವನನ್ನು ಜೀವಮಂಡಲದ ಪ್ರಜ್ಞಾಪರಿಧಿಯೊಳಕ್ಕೆ ತರಲುದ್ದೇಶಿಸಿರುವ ಪರಸ್ಪರ ಮಾನವತಾವಾದದೊಂದಿಗೆ ಇದನ್ನು ಹೋಲಿಸಿ ನೋಡುವುದು ಉಚಿತವಾದೀತು). ಇತರ ಜೀವಿಗಳನ್ನು ಪೋಷಿಸುವುದು ಹಾಗೂ ಬೆಂಬಲಿಸುವುದು ಮಾನವನ ಕರ್ತವ್ಯ. ಈ ಇತರ ಜೀವಿಗಳು ಒಟ್ಟಾಗಿ ಮಾನವನ ಅಪೂರ್ವತೆಗೆ ಒಂದು ಆಕರವನ್ನು ಒದಗಿಸುತ್ತವೆ.[೫] ಹಾಗೂ ಅವನ ಅಸ್ತಿತ್ವಕ್ಕೆ ಜೈವಿಕ ಆಧಾರಗಳನ್ನು ಒದಗಿಸುತ್ತವೆ. ಮಾನವ ಹೆಚ್ಚು ವ್ಯಾವಹಾರಿಕ ದೃಷ್ಟಿಯಿಂದ ಇತರ ಜೀವಿಗಳನ್ನು ಪೋಷಿಸುತ್ತಾನೆ. ಇವಿಲ್ಲದೆ ಅವನ ಬದುಕು ನಿರ್ವಹಣೆ ಅಸಾಧ್ಯ. ಅವನ ಸ್ವಯಮಭಿವ್ಯಕ್ತಿ ಅಸಾಧ್ಯ. ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡಿದಲ್ಲಿ, ಸಂಸ್ಕೃತದ ನಿಷ್ಪತ್ತಿಯಾದ ವ್ಯಕ್ತಿಗೆ ಸಮನಾದ ಮಾನವ ಸಮಷ್ಟಿಯ ಒಟ್ಟು ಸಂದರ್ಭದಲ್ಲೇ ಪ್ರತ್ಯಕ್ಷನಾಗುತ್ತಾನೆ. (ವ್ಯಕ್ತಿ–ಒಬ್ಬ ಮಾನವ–ವ್ಯಕ್ತಿಯಾಗಿ ಪ್ರಕಟಗೊಳ್ಳುತ್ತಾನೆ. ದೇವರು ಅವ್ಯಕ್ತ–ಅವ್ಯಕ್ತರೂಪ, ಹಾಗೂ

ವ್ಯಕ್ತಿ ಎನ್ನುವ ಪದ ಪ್ರಯೋಗವನ್ನು ಮಾನವರಿಗೆ ಮಾತ್ರ ಒಳಸಬಹುದು)[೬] ಆದ್ದರಿಂದ, ಭೌತಿಕ ಅಸ್ತಿತ್ವಕ್ಕಾಗಿ ಹಾಗೂ ಬೌದ್ಧಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸ್ವಯಮಭಿವ್ಯಕ್ತಿಗಳಿಗಾಗಿ ಮನುಷ್ಯ ಜೀವಮಂಡಲದಲ್ಲಿನ ಇತರ ಜೀವಿಗಳೊಂದಿಗೆ ತಾಳಿಬಾಳುವ ಬಾಂಧವ್ಯವನ್ನು ಹೊಂದಿರಲೇಬೇಕಾಗುತ್ತದೆ. "ಬದುಕಿನ ಎಲ್ಲ ವಿಷಯಗಳಲ್ಲೂ ಮಾನವನನ್ನೇ ಮಾನದಂಡ"ವಾಗಿಸುವ ಸಮಾಜದ ಇತರ ಸಹಜೀವಗಳೊಂದಿಗಿನ ಮಾನವ ಸಂಬಂಧವನ್ನು ಕಡಿದುಹಾಕುತ್ತದೆ. ಕರುಳ ಬಳ್ಳಿಯ ಸಂಬಂಧವನ್ನೇ ಕತ್ತರಿಸಿಬಿಡುತ್ತದೆ.

## ಮಾನವ ವಿಕಾಸದ ಸ್ವರೂಪ

ಅರವಿಂದರ ಮಾತುಗಳಲ್ಲೇ ಹೇಳುವುದಾದರೆ, "ಮಾನವ ಜನ್ಮವೇ ಅಂತಿಮವಲ್ಲ, ಅವನೊಬ್ಬ ಸಂಕ್ರಮಣಾವಸ್ಥೆಯ ಜೀವಿ ಏಕೆಂದರೆ, ಮಾನವನಲ್ಲಿ ಹಾಗೂ ಅವನನ್ನು ಮೀರಿದ ತೇಜೋರಾಶಿಗಳಿವೆ. ತೇಜಃಪುಂಜಗಳಿವೆ. ಇವು ಮಾನವನನ್ನು ಲೋಕೋತ್ತರವಾದ ದಿವ್ಯಮಾನತ್ವಕ್ಕೆ ಏರಿಸುತ್ತವೆ. ದಿವ್ಯಮಾನವತ್ವ ನಮ್ಮ ಗುರಿ. ಇದು ನಿತ್ಯಗಟ್ಟಳೆಯ ಕಷ್ಟ ಕೋಟಲೆಗಳಿಂದ ವಿಮೋಚನೆಗೆ ಕೀಲಿಕೈ ಇದ್ದಂತೆ.[೭] ಮಾನವನ ವಿಕಾಸ ಸ್ವರೂಪ ಲಕ್ಷಣಗಳಲ್ಲಿನ ಈ ನಂಬಿಕೆ ಅಖಂಡ ಮಾನವತಾ ಸಿದ್ಧಾಂತದ ಒಂದು ಅತಿ ಮಹತ್ವದ ಸೂತ್ರ. ಉನ್ನತ ಪ್ರಜ್ಞಾಸ್ತರದಲ್ಲಿ ಇಂದ್ರಿಯಗೋಚರವಾದ ಪ್ರಪಂಚವನ್ನೊಳಗೊಂಡ ಹಾಗೂ ಅದರಾಚೆಗಿನ ತೇಜೋಮಯ ವಾಸ್ತವತೆಯನ್ನು ಅರಸುತ್ತಾನೆ. ದಿನನಿತ್ಯದ ವ್ಯಾವಹಾರಿಕ ಬದುಕಿನ ಹಂತದಲ್ಲಿ ಅವನು ತನ್ನ ಪ್ರಾಪ್ತ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ತನ್ನ ಸುತ್ತಲ ಪರಿಸರವನ್ನು ಸುಧಾರಿಸುವ ಕೆಲಸಗಳನ್ನು ಮಾಡುತ್ತಾನೆ ಹಾಗೂ ತನ್ನ ಸುತ್ತಲ ಪರಿಸರದೊಂದಿಗೆ ಸಾಂಗಗೊಳಿಸುವಂಥ ಸಂಬಂಧಗಳ ಸೃಷ್ಟಿಗಾಗಿ ಪ್ರಯತ್ನಿಸುತ್ತಾನೆ. ಈ ಎಲ್ಲ ವಿಷಯಗಳಲ್ಲೂ, ಕಾರ್ಯಾಚರಣೆಗಳ ಸ್ತರಗಳು ಯಾವುದೇ ಇರಲಿ, ಮನುಷ್ಯನಿಂದ ಮಾತ್ರ "ಇರುವಿಕೆ" ಹಾಗೂ ಜಗತ್ತಿನಲ್ಲಿ ಸಾಮರಸ್ಯ "ಹೇಗೆ ಇರಬೇಕಾಗಿತ್ತು" ಎನ್ನುವ ಇವೆರಡರ ನಡುವಣ ವ್ಯತ್ಯಾಸಗಳನ್ನು ಗುರುತಿಸುವುದು ಸಾಧ್ಯ ಕಷ್ಟಕೋಟಲೆಗಳಿಂದ ತುಂಬಿದ ಪ್ರಪಂಚದಲ್ಲಿ ಬೇರಾವ ಜೀವಿಯಿಂದಲೂ ಈ ತರತಮವನ್ನು ಗುರುತಿಸುವುದು ಸಾಧ್ಯವಿಲ್ಲ. ಈ ವಿಕಸನಶೀಲ ಸ್ವರೂಪ, ಗುಣಲಕ್ಷಣ ಗಳಿಂದಾಗಿಯೇ ಮಾನವನಿಗೆ ಪ್ರೇಯ–ಶ್ರೇಯಗಳ ನಡುವಣ ವ್ಯತ್ಯಾಸವನ್ನು ಗುರುತಿಸುವುದು ಸಾಧ್ಯವಾಗಿದೆ. ಪ್ರೇಯ – ಅಂದರೆ ದೇಹ ಆಗ್ರಹಪಡಿಸುವ ಸುಖಭೋಗಗಳು ಹಾಗೂ ಶ್ರೇಯ ಅಂದರೆ ಸಮರಸದಿಂದ ಕೂಡಿದ ಯೋಗ್ಯ ಜೀವನ ವ್ಯವಸ್ಥೆಯ ಹಂಬಲ, ಸಾಮರಸ್ಯದಿಂದ ಕೂಡಿದ ಬದುಕಿನ ಪ್ರಜ್ಞೆ, ಇಂಥ ಬದುಕಿನ ಹಂಬಲ. (ಬದುಕಿನ ಎಲ್ಲ ಮುಖಮಗ್ಗುಲುಗಳಲ್ಲೂ



ಪರಿಪೂರ್ಣತೆ ಸಾಧಿಸಲು ನಿರಂತರವಾಗಿ ಅನ್ವೇಷಣೆ ನಡೆಸುವ ಮಾನವ ಪ್ರವೃತ್ತಿ ಹಾಗೂ ತಾನು ಶ್ರೇಷ್ಠ ಎನ್ನುವುದರ ಆಧಾರದ ಮೇಲೆಯೇ ಮನುಷ್ಯ ಪರಿಪೂರ್ಣತೆ ಸಾಧಿಸಬಹುದು ಎನ್ನುವ ಕಲ್ಪನೆಗಳ ನಡುವಣ ವೈದೃಶ್ಯವನ್ನು ಗಮನಿಸುವುದು ಉಚಿತವಾದೀತು).

## ಉಪಾಧ್ಯಾಯರ ಸಮಾಜೋ–ಆರ್ಥಿಕ ವ್ಯವಸ್ಥೆ

ಹಾಲಿ ಚಾಲ್ತಿಯಲ್ಲಿರುವ ಬಂಡವಾಳಶಾಹಿ ಹಾಗೂ ಮಾರ್ಕ್ಸ್‌ವಾದಿ ಸಮಾಜೋ ಆರ್ಥಿಕ ವ್ಯವಸ್ಥೆಗೆ ಪರ್ಯಾಯವಾದ ವ್ಯವಸ್ಥೆಯೊಂದನ್ನು ಉಪಾಧ್ಯಾಯರು ಸೂಚಿಸಿದ್ದಾರೆ. ಈ ಪರ್ಯಾಯ ವ್ಯವಸ್ಥೆ ರೂಪಿಸುವಲ್ಲಿ ಅವರು ಮೇಲೆ ಹೇಳಿರುವ ಮಾನವ ಪರಿಕಲ್ಪನೆಯನ್ನು ನಿಷ್ಠೆಯಿಂದ ಬಳಸಿಕೊಂಡಿದ್ದಾರೆ. ಮೇಲಿನ ಎರಡು ವ್ಯವಸ್ಥೆಗಳು ಮನುಷ್ಯನನ್ನು ಅಮಾನವೀಕರಣಗೊಳಿಸಿವೆ.[೮] ಆದ್ದರಿಂದ ಉಪಾಧ್ಯಾಯರು ಪರ್ಯಾಯ ವ್ಯವಸ್ಥೆಯ ಅಗತ್ಯವನ್ನು ಮನಗಂಡಿದ್ದಾರೆ. ಸ್ಪರ್ಧೆ, ಪೈಪೋಟಿಗಳ ಮೇಲಾಟದಲ್ಲಿ ಏಳಿಗೆಯನ್ನು ಕಾಣುತ್ತಿರುವ ಬಂಡವಾಳಶಾಹಿ ಮಾನವ ಶೋಷಣೆಗೆಡೆ ಮಾಡಿಕೊಟ್ಟಿದೆ. ನಿಯಂತ್ರಣವಾದವನ್ನು ಹೇರುವ ಮೂಲಕ ಮಾರ್ಕ್ಸ ಸಿದ್ಧಾಂತ "ಮಾನವನ ಸುಧಾರಣಾ ಪ್ರವೃತ್ತಿ ಮತ್ತು ಶಕ್ತಿ ಚೈತನ್ಯಗಳನ್ನು" ಕಸಿದುಕೊಳ್ಳುತ್ತದೆ. ಇವೆರಡನ್ನೂ ನಿವಾರಿಸುವ ಪರ್ಯಾಯ ವ್ಯವಸ್ಥೆ ಉಪಾಧ್ಯಾಯರದು. ಮಾನವ ಅಖಂಡವಾದ, ಅಪೂರ್ವವಾದ ಜೀವಿ. ಮಾನವನ ವಿಕಸನಶೀಲ ಗುಣಲಕ್ಷಣಗಳು ಹಾಗೂ ಸಹಬಾಳ್ವೆಯ ಅಗತ್ಯಗಳಿಂದಾಗಿ ಅವನು ಅಖಂಡ, ಅಪೂರ್ವ, ಮಾನವನ ಈ ಎರಡು ವಿಶೇಷಗುಣಗಳನ್ನು ಆಧರಿಸಿದ ಉಪಾಧ್ಯಾಯರ ಪರ್ಯಾಯ ವ್ಯವಸ್ಥೆಯ ಪರಿಕಲ್ಪನೆ.

## ಧರ್ಮದ ಪಾರಮ್ಯ

ಉಪಾಧ್ಯಾಯರ ಸಮಾಜೋ ಆರ್ಥಿಕ ವ್ಯವಸ್ಥೆಯ ಮುಖ್ಯಾಂಶ ವ್ಯಕ್ತಿಯ ಕರ್ತವ್ಯದ ಹಕ್ಕು. ಅಂದರೆ ಧರ್ಮದ ಪ್ರಕಾರ ಕರ್ತವ್ಯ ಪೂರೈಸುವ ಹಕ್ಕು. ಧರ್ಮವನ್ನು ಅವರು ಒಂದು ಜನ್ಮ ಸಿದ್ಧ ಶಾಸನವೆಂದು ಅರ್ಥೈಸಿದ್ದಾರೆ. ಅವರ ಪ್ರಕಾರ ಧರ್ಮ. ವಿಭಿನ್ನ ಸಂದರ್ಭಗಳಲ್ಲಿ ಸಮಾಜ ಹಾಗೂ ವ್ಯಕ್ತಿಯ ಔಚಿತ್ಯವನ್ನು ನಿರ್ಣಯಿಸುವ ಮಾನದಂಡ. ಧರ್ಮ ಎನ್ನುವುದು. ಜೀವಿಯ ಪಾಲನೆ–ಪೋಷಣೆ ಪ್ರಗತಿಗಳನ್ನು ನಿರ್ದೇಶಿಸುವ ಒಂದು ಸಂಹಿತೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, "ಯಾವುದು ಬದುಕಿನ ಎಲ್ಲ ವಿಷಯಗಳನ್ನು, ಸಮಾಜವನ್ನು, ಇಡೀ ಪ್ರಪಂಚವನ್ನು ಪಾಲಿಸಿ ಪೋಷಿಸುವುದೋ ಅದೇ ಧರ್ಮ' ವಾಸ್ತವ ಸಂಗತಿ ಎಂದರೆ ಜೀವನವೇ ಧರ್ಮ.

ಧರ್ಮದ ಈ ಕಲ್ಪನೆ ಮಾನವನ ಮೂರು ಕಾರ್ಯಕ್ಷ

ಮತೆಗಳನ್ನೊಳಗೊಂಡಿದೆ. ಮೊದಲನೆಯದಾಗಿ ಅದು ಮಾನವನನ್ನು ಅಖಂಡ ಜೀವಿಯೆಂದು ಪರಿಗಣಿಸುತ್ತದೆ. ದೇಹ, ಬುದ್ಧಿಗಳಷ್ಟರಿಂದಲೇ ಅಲ್ಲ ಮನಸ್ಸೂ ಆತ್ಮಗಳೂ ಸೇರಿದಂತೆ ಮಾನವ ಅಖಂಡಜೀವಿ. ಇವು ಒಳಿತು–ಕೆಡಕುಗಳ ನಡುವಣ ಭೇದವನ್ನು ಗುರುತಿಸುತ್ತವೆ ಹಾಗೂ ಒಳ್ಳೆಯದರತ್ತ, ಸನ್ಮಾರ್ಗ ದತ್ತ ಮಾನವ ಶಕ್ತಿಯನ್ನು ಕಾರ್ಯೋನ್ಮುಖಗೊಳಿಸುತ್ತದೆ. ಹೀಗಾಗಿ ಮಾನವ ಸತ್ಕಾರ್ಯಗಳಲ್ಲಿ ತೊಡಗುತ್ತಾನೆ. ಸತ್ಕಾರ್ಯಗಳಲ್ಲಿ ಪಾಲ್ಗೊಳ್ಳಲು ಇಚ್ಛಿಸುತ್ತಾನೆ. ಇದೇ ಧರ್ಮ. ತನ್ನ ಬದುಕಿನ ಪೋಷಣೆಗಾಗಿ, ತನ್ನ ಸ್ವಯಮಭಿವ್ಯಕ್ತಿಗಾಗಿ ಇತರ ಜೀವಿಗಳ ಜೊತೆ ಮಾನವನಿಗೆ ಸ್ನೇಹಸಂಬಂಧಗಳು ಅನಿವಾರ್ಯವಾದ ಅಗತ್ಯಗಳಾಗಿವೆ. ಇದು ಧರ್ಮದ ಎರಡನೆಯ ಗುಣ ಅಥವಾ ಸೂತ್ರ. ಇದೇ ರೀತಿ ಮೂರನೆಯ ಧರ್ಮಸೂತ್ರ ಮಾನವನ ವಿಕಸನಶೀಲತೆಗೆ ಸಂಬಂಧಿಸಿದ್ದು. ವಿಕಸನಶೀಲ ಮಾನವ "ಹೇಗಿರಬೇಕು", "ಹೇಗಿದ್ದಾನೆ" ಎನ್ನುವ ಪರಿಕಲ್ಪನೆಗೆ ಸಂಬಂಧಿಸಿದ್ದು. ಆದ್ದರಿಂದ ಮಾನವನಿಗೆ ಕ್ಲುಪ್ತ ಪ್ರಮಾಣದ ಬಗ್ಗೆ ಔಚಿತ್ಯ ಜ್ಞಾನದ ಬಗ್ಗೆ ಕಾಳಜಿ ಇದೆ, ಅದೇ ವ್ಯಕ್ತಿ ಮತ್ತು ಸಮಾಜದ ನಡಾವಳಿಯ ಔಚಿತ್ಯಧರ್ಮ.

ಜನಸ್ತೋಮಕ್ಕೆ ಧರ್ಮವನ್ನು ರುಚಿಕರವನ್ನಾಗಿಸುವುದು ಹೇಗೆ? ಉಪಾಧ್ಯಾಯರು ಹೀಗೆ ವಿವರಿಸುತ್ತಾರೆ: "ರಾಷ್ಟ್ರವೊಂದರ ಪಾಲನೆ–ಪೋಷಣೆಗೈಯ್ಯುವ, ರಾಷ್ಟ್ರದ ಆತ್ಮಾಭಿವ್ಯಕ್ತಿಗೆ ಸಹಾಯಮಾಡುವ ಶಾಸನಗಳೇ ಧರ್ಮ", ಹಾಗೂ "ನಮ್ಮ ಸಂಪ್ರದಾಯಗಳಿಗೆ ವಿರುದ್ಧವಾದ ಕ್ರಿಯೆ–ಕರ್ಮಾಚರಣೆಗಳೆಲ್ಲ" ಧರ್ಮ ವಿರೋಧಿಯಾದವು. ಧರ್ಮ ಜೀವ ಪೋಷಕವಾದದ್ದು. ಧರ್ಮ ಬದುಕಿಗೆ ಆಧಾರವಾದದ್ದು, ಆದ್ದರಿಂದ ಭಗವಂತನೂ ಸೇರಿದಂತೆ ಯಾರೊಬ್ಬರೂ ಧರ್ಮಕ್ಕಿಂತ ದೊಡ್ಡವರಲ್ಲ ಎಂದು ಅವರು ಒತ್ತಿಹೇಳುತ್ತಾರೆ. ರಾಷ್ಟ್ರೀಯತೆ ಹಾಗೂ ಸಂಪ್ರದಾಯಬದ್ಧತೆಯ ಟೀಕಾಕಾರರು ಈ ವಿವರಣೆಗಳ ಬಗ್ಗೆ ಪ್ರಶ್ನೆಗಳನ್ನೆತ್ತಬಹುದು. ಆದರೆ, ಉಪಾಧ್ಯಾಯರು ನಿರೂಪಿಸಿರುವ ಸಮಾಜೋ ಆರ್ಥಿಕ ವ್ಯವಸ್ಥೆಯ ಮೇಲೆ ಧರ್ಮ ಬೀರಿರುವ ನಿಜವಾದ ಪ್ರಭಾವ, ವ್ಯಕ್ತಿ ಮತ್ತು ಸಮಾಜದ ನಡುವಣ ಸಾಮರಸ್ಯದಿಂದ ಕೂಡಿದ ಬಾಂಧವ್ಯದಲ್ಲಿ ಗೋಚರಿಸುತ್ತದೆ.

## ವ್ಯಕ್ತಿ–ಸಮಾಜದ ನಡುವೆ ಸಾಮರಸ್ಯ

ಬಂಡವಾಳಶಾಹಿ ವ್ಯವಸ್ಥೆ ಹಾಗೂ ಮಾರ್ಕ್ಸ್‌ವಾದಿ ವ್ಯವಸ್ಥೆ ಇವೆರಡೂ ವ್ಯಕ್ತಿಯ ಹಿತಾಸಕ್ತಿ ಮತ್ತು ಸಮುದಾಯದ ಹಿತಾಸಕ್ತಿಗಳ ಮಧ್ಯೆ ಬಿರುಕನ್ನು ಸೃಷ್ಟಿಸಿವೆ. ಇವೆರಡೂ ವ್ಯವಸ್ಥೆಗಳು ವ್ಯಕ್ತಿಗೆ ಉತ್ತೇಜಕ ಸವಲತ್ತುಗಳನ್ನು ಕೊಡುವ ಮೂಲಕ ಹಾಗೂ ಉತ್ತೇಜಕ ಸವಲತ್ತುಗಳನ್ನು, ಉತ್ತೇಜಕ ಪ್ರವೃತ್ತಿಯನ್ನು ದಮನಗೊಳಿಸುವ ಮೂಲಕ ಇಂಥ ಬಿರುಕನ್ನು ಸೃಷ್ಟಿಸಿವೆ. ಹಾಗೂ ಇವು ವ್ಯಕ್ತಿಯನ್ನು



ಯಾವುದೇ ಮೂಲ ಅಗತ್ಯವಿಲ್ಲದೆ, ಉದ್ದೇಶವಿಲ್ಲದೆ ಸಂಘಟಿತವಾದ ಸಮಾಜದ ಘಟಕವನ್ನಾಗಿಸಿವೆ. ಇವೆಲ್ಲದರಿಂದಾಗಿ ಬಿರುಕು ಉಂಟಾಗಿದೆ. ಅಖಂಡ ಮಾನವತಾ ಸಿದ್ಧಾಂತ ಎಂದು ಕರೆಯಲಾಗುವ ಉಪಾಧ್ಯಾಯರ ವ್ಯವಸ್ಥೆ ವ್ಯಕ್ತಿ ಮತ್ತು ಸಮಾಜದ ನಡುವಣ ಜೈವಿಕ ಬಾಂಧವ್ಯದ ಮೇಲೆ ರೂಪುಗೊಂಡಿದೆ. ವ್ಯಕ್ತಿ–ಸಮಷ್ಟಿ ಇಷ್ಟಾರ್ಥಕದ ಮೇಲೆ ರೂಪುಗೊಂಡಿದೆ. ಅಸ್ತಿತ್ವ ಉಳಿಸಿಕೊಳ್ಳಲು, ಬೆಳೆದು ಅಭಿವೃದ್ಧಿ ಕಾಣಲು ವ್ಯಕ್ತಿ ಸಮಷ್ಟಿಗಳು ಪರಸ್ಪರ ಅಗತ್ಯಗಳು, ಪೂರಕವಾದವು ಹಾಗೂ ಇವೆರಡೂ ಒಂದು ಮತ್ತೊಂದರ ಅಭಿವ್ಯಕ್ತಿಯೇ ಆಗಿದೆ. ಪ್ರಕಾಶವೇ ಆಗಿದೆ. ಬದುಕಿನ ಪರಮೋಚ್ಚ ಸಂಹಿತೆಯಾದ ಧರ್ಮ, ವ್ಯಕ್ತಿ ಮತ್ತು ಸಮಾಜದ ಬದುಕನ್ನು ಪೋಷಿಸುತ್ತದೆ, ಸಂಘಟಿಸುತ್ತದೆ ಹಾಗೂ ಶಕ್ತಿಶಾಲಿಯನ್ನಾಗಿಸುತ್ತದೆ.

ವ್ಯಕ್ತಿಗತ ಹಂತದಲ್ಲಿ ಮಾನವ ಸಾಮಾಜಿಕ ಸಹಕಾರದ ಹಿನ್ನೆಲೆಯಲ್ಲಿ ತನ್ನ ಆಗ್ರಹ–ಅಗತ್ಯಗಳನ್ನು ಈಡೇರಿಸುತ್ತಾನೆ. ಅನ್ನ ಆಹಾರ, ವಸತಿ, ನಿದ್ರೆ ಇತ್ಯಾದಿ ವ್ಯಕ್ತಿಯ ಅಗತ್ಯಗಳನ್ನು ಪೂರೈಸಲು ಮಾನವನಿಗೆ ಶೈಶವಾವಸ್ಥೆಯಿಂದಲೇ ಸಮಾಜದ ಅಗತ್ಯಬೀಳುತ್ತದೆ. ಸಮಾಜವಿಲ್ಲದೆ, ಸಮಷ್ಟಿ ಇಲ್ಲದೆ ಅವನ ಬೌದ್ಧಿಕ ಹಾಗೂ ಭಾವನಾತ್ಮಕ ಅಗತ್ಯಗಳನ್ನು ತೃಪ್ತಿಗೊಳಿಸುವುದು ಸಾಧ್ಯವಿಲ್ಲ ಇವಿಲ್ಲದೆ ವ್ಯಕ್ತಿ ಅಸಹಾಯಕ. ಹಲವಾರು ವೈರುಧ್ಯಗಳ ನಡುವೆ ಸರಿಯಾದ ಮಾರ್ಗವನ್ನು ಆಯ್ಕೆಮಾಡಿಕೊಳ್ಳಲು ಅವನು ಸಮಾಜದ ರೂಢಿ, ಸಂಪ್ರದಾಯಗಳಿಂದ ಮಾರ್ಗದರ್ಶನ ಪಡೆಯುತ್ತಾನೆ. ಹೀಗೆ ಮಾನವನೊಳಗೆ ಸಮಾಜದ ಅಗತ್ಯತೆ ಅಂತರ್ಗತವಾಗಿದೆ. ಈ ಅಗತ್ಯತೆಯನ್ನು ಮಾನ್ಯಮಾಡಿರುವ ಮಾನವ ಸಮಾಜವನ್ನು ಬಲಪಡಿಸುತ್ತಾನೆ. ಉಪಾಧ್ಯಾಯರ ಮಾತಿನಲ್ಲೇ ಹೇಳುವುದಾದರೆ, ಮಾನವ ಎಂದರೆ ಧರ್ಮದ ಪ್ರಕಾರ ನಡೆದುಕೊಳ್ಳುವ ಅಖಂಡ ಮಾನವ.

> **"ಸಮಾಜದ ಪಾಲನೆ ಪೋಷಣೆ ಬಗ್ಗೆ ಯೋಚಿಸುವವನು; ಸಮಾಜ ವ್ಯವಸ್ಥೆಯ ಸಮಗ್ರತೆ ಮತ್ತು ಅಖಂಡತೆಗಳಿಗೆ ಅತ್ಯವಶ್ಯಕವಾದಂಥ ಗುಣಗಳನ್ನು ಹೊಂದಿರುವವನು; ಸಮಾಜದ ಸಮತೋಲಕ್ಕೆ ಭಂಗ ಉಂಟುಮಾಡದ ರೀತಿಯಲ್ಲಿ ಐಶ್ವರ್ಯ ಸಂಪಾದಿಸಿ ಭೋಗಿಸುವವನು; ಮನಸ್ಸಿನ ಮೇಲೆ ಹತೋಟಿ ಇಟ್ಟುಕೊಂಡು, ಮನಸನ್ನು ತನ್ನ ಆಸಕ್ತಿಗನುಸಾರವಾಗಿ ಭಕ್ತಿಮಾರ್ಗದಲ್ಲಿ ಕೇಂದ್ರೀಕರಿಸುವವನು; ಬದುಕಿನ ಅಂತಿಮ ಗುರಿ ಸಾಧನೆಗೆ ಪ್ರಯತ್ನಿಸುವವನು. ಯಾರು ಈ ಎಲ್ಲ ಗುಣಗಳನ್ನು ಹೊಂದಿರುತ್ತಾರೋ ಅವನೇ ಏಕಾತ್ಮಮಾನವ."**

ಸಮುದಾಯದ ಹಂತದಲ್ಲಿ ಸಮಾಜ ಮಾನವನಿಂದ ಪೋಷಕ ದ್ರವ್ಯಗಳನ್ನು ಪಡೆದುಕೊಳ್ಳುತ್ತದೆ. ಉದಾತ್ತ ಸಂಪ್ರದಾಯಗಳು ಒಂದು ಸಮಾಜದ ಜೀವರಕ್ತವಿದ್ದಂತೆ. ಈ ಉದಾತ್ತ ಸಂಪ್ರದಾಯಗಳನ್ನು ರೂಪಿಸಲು, ಪಾಲಿಸಲು ಸಮಾಜಕ್ಕೆ ಮಾನವರ ಅಗತ್ಯವಿದೆ. ಆರೋಗ್ಯ ಪೂರ್ಣ ಸಂಘಸಂಸ್ಥೆಗಳಿಗೆ ಆರೋಗ್ಯಕರವಾದ ಪದ್ಧತಿಗಳಿಗೆ

ಸಮಾಜದ ಪ್ರಬುದ್ಧವಾದ ಹಾಗೂ ನಾಗರಿಕವಾದ ಪ್ರಕಟಣೆಗಳಿಗೆ, ಅದು ಮಾನವನನ್ನೇ ಅವಲಂಬಿಸಬೇಕಾಗಿದೆ ಹಾಗೂ ತನ್ನ ಆತ್ಮಾಭಿವ್ಯಕ್ತಿಗೆ ಸಮಾಜಕ್ಕೆ ಮಾನವನ ಕಾರ್ಯಕ್ಷಮತೆಯ ಅಗತ್ಯವಿದೆ. ಆದ್ದರಿಂದ ತನಗೆ ಕೀರ್ತಿ ವೈಭವಗಳಿಂದ ಕೂಡಿದ ಬದುಕನ್ನು ಕೂಡುವಂಥ ಮಾನವನನ್ನು ಸಮಾಜ ಸೃಷ್ಟಿಸುತ್ತದೆ. ಉಪಾಧ್ಯಾಯರ ಮಾತಿನಂತೆ, ಸಮಾಜ ಧರ್ಮಾನುಸಾರವಾಗಿ, ಧರ್ಮದ ಆದೇಶಗಳಂತೆ ನಡೆದುಕೊಳ್ಳುತ್ತದೆ. ಸುಸಂಘಟಿತವಾದ, ಏಕತೆಯಿಂದ ಕೂಡಿದ, ತಮ್ಮ ತಮ್ಮ ಉದ್ಯೋಗಗಳಲ್ಲಿ ತೊಡಗುವ ಸ್ವಾತಂತ್ರ್ಯವನ್ನು ಎಲ್ಲ ಬಗೆಯ ಜನತೆಗೆ ನೀಡುವಂಥ ಸಮಾಜದಿಂದ ಮಾತ್ರ ಧರ್ಮಾನುಸಾರವಾಗಿ, ಧರ್ಮದ ಆದೇಶದಂತೆ ನಡೆದುಕೊಳ್ಳುವುದು ಸಾಧ್ಯ. ಧರ್ಮಾನುಸಾರ ನಡೆದುಕೊಳ್ಳುವ ಸಮಾಜ

> **"ಅಭ್ಯುದಯಕ್ಕಾಗಿ ದುಡಿಯುವಂತೆ ಜನರನ್ನು ಪ್ರೇರೇಪಿಸುತ್ತದೆ; ಇಡೀ ಸಮಾಜದ ಭದ್ರತೆಗಾಗಿ, ಉನ್ನತವಾದ ಹಾಗೂ ಉದಾತ್ತವಾದ ಬದುಕಿಗಾಗಿ ಪರಸ್ಪರ ಸಹಕಾರ ಮನೋಭಾವದಿಂದ ದುಡಿಯುವಂತೆ ಪ್ರೇರೇಪಿಸುತ್ತದೆ."**

**ಸಮಾರೋಪ**

ತಾತ್ವಿಕವಾಗಿ ಉಪಾಧ್ಯಾಯರ ಪರ್ಯಾಯ ವ್ಯವಸ್ಥೆಯಲ್ಲಿ ಗಮನಕ್ಕೆ ಬಾರದೆ ಇರುವ ಅಂಶವೆಂದರೆ : ಸಮಾಜದಿಂದ ಸಮಷ್ಟಿಯಾಗಿ ಬದಲಾವಣೆ ಹೊಂದುವಾಗ ಸಂಭವಿಸುವ ಅವಸ್ಥಾಂತರ. ಸಮಾಜದಿಂದ ಸಮಷ್ಟಿಯಾಗಿ, ಸಮಷ್ಟಿ ನಾಗರಿಕ ವ್ಯಕ್ತಿಗಳನ್ನೊಳಗೊಂಡ ಒಂದು ಸಮಾಜವಾಗಿ ಬದಲಾವಣೆಗೆ ಹೊಂದುವ ಪ್ರಕ್ರಿಯೆಯಲ್ಲಿನ ಅರ್ಥಾಂತರ. ಬಂಡವಾಳಶಾಹಿ ಮತ್ತು ಮಾರ್ಕ್ಸ್ ಸಿದ್ಧಾಂತಗಳೆರಡೂ ಸಮಾಜವೆಂದರೆ ನಾಗರಿಕ ವ್ಯಕ್ತಿಗಳ ಒಂದು ಸಮುದಾಯ ಎನ್ನುವ ಅರ್ಥವನ್ನೇ ಆಧರಿಸಿವೆ. ಉಪಾಧ್ಯಾಯರ ಸಮಾಜೊ ಆರ್ಥಿಕ ಪರ್ಯಾಯ ವ್ಯವಸ್ಥೆಯ ಅಖಂಡ ಮಾನವ ಸಿದ್ಧಾಂತ ಮಾನವನನ್ನು ಕುರಿತಂತೆ ಕ್ರಾಂತಿಕಾರಕ ಪರಿಕಲ್ಪನೆಯೊಂದಿಗೆ ಶುರುವಾಗುತ್ತದೆ. ಸಮಷ್ಟಿ ಮಾನವನಿಂದ ಸಾಮಾಜಿಕ ಮಾನವನಾಗುವ ಪ್ರಕ್ರಿಯೆಯಲ್ಲಿ ಮಾನವ ಚಟುವಟಿಕೆಗಳನ್ನು ಕುಗ್ಗಿಸುವ ಮೂಲಕ ಜೀವಮಂಡಲದಲ್ಲಿ ಮನುಷ್ಯನ ಸ್ಥಾನಮಾನ ಹಾಗೂ ಹೊಣೆಗಾರಿಕೆಯ ಮಹತ್ವವನ್ನು ಕಡೆಗಾಣಿಸುತ್ತದೆ. ಮಾನವ ಬದುಕಿನ ಒಂದು ಘಟಕವಾಗಿಬಿಡುತ್ತಾನೆ. ಹೀಗಾಗಿ ಅವನ ಅಂತರಸಂಬಂಧೀಯ ಕಾರ್ಯಚಟುವಟಿಕೆಗಳಿಗೆ ಅವಕಾಶವಿಲ್ಲದಂತಾಗುತ್ತದೆ. ಮಾನವನ ವಿಕಸನ ಶೀಲ ಗುಣಲಕ್ಷಣವಾದ ಅಂತರ ಸಂವಹನ, ಸಂಬಂಧಗಳಿಗೆ ಪ್ರೋತ್ಸಾಹವಿಲ್ಲದಂತಾಗುತ್ತದೆ. ಆದ್ದರಿಂದ ಅಖಂಡ ಮಾನವತಾ ಸಿದ್ಧಾಂತದ ತತ್ತ್ವಸೂತ್ರಗಳು ದೃಷ್ಟಿಗೋಚರವಾಗುತ್ತವೆಯೇ ವಿನಃ ಕಾರ್ಯಾನುಷ್ಠಾನ ರೂಪದಲ್ಲಿ ಪೂರ್ಣವಾಗಿ ಗೋಚರಿಸುವುದಿಲ್ಲ.

ಪರಿಕಲ್ಪನೆಯಲ್ಲಿನ ಈ ಪಲ್ಲಟದಿಂದಾಗಿ ಹಾಗೂ ಇದರಿಂದ ಸಮಾಜೋ



ಆರ್ಥಿಕ ಸಿದ್ಧಾಂತದ ಮೇಲೆ ಆಗಬಹುದಾದ ಪರಿಣಾಮಗಳು ಏನೇ ಇದ್ದಾಗ್ಯೂ ಅಖಂಡ ಮಾನವತಾ ಸಿದ್ಧಾಂತ ಮನುಷ್ಯನನ್ನು ಕುರಿತಂತೆ ಹೊಸದಾದ ಹಾಗೂ ಕ್ರಾಂತಿಕಾರಿಯಾದ ಪರಿಕಲ್ಪನೆಯೊಂದನ್ನು ಬಳಸಿದೆ. ಇಂಥ ಪರಿಕಲ್ಪನೆ ಪ್ರಪ್ರಥಮವಾದುದಾಗಿದೆ. ಮನುಷ್ಯ, ಮನುಷ್ಯನ ಅಂತರ ಸಂಬಂಧಗಳು, ಸ್ನೇಹಗಳು, ಸಮಾಜೋ ಆರ್ಥಿಕ ವ್ಯವಸ್ಥೆಯಲ್ಲಿನ ಸಹಕಾರ ಮನೋಭಾವ ಇವೆಲ್ಲವನ್ನು ನಿರೂಪಿಸುವ ಪ್ರಪ್ರಥಮ ಪ್ರಯತ್ನ ಇದಾಗಿದೆ. ಕಲ್ಪನೆಯನ್ನು ಕೃತಿಗಳಿಸುವ ಪ್ರಯತ್ನ ಇದಾಗಿದೆ. ಆಖೈರಾಗಿ, ಇಂಥದೊಂದು ವ್ಯವಸ್ಥೆಯ ಕಾರ್ಯಸಾಧ್ಯತೆ, ತಾಳಿಕೆ–ಬಾಳಿಕೆಗಳು ನಮ್ಮ ಜಾಗೃತಿಯನ್ನುಂಟು ಮಾಡುವ ಪ್ರಪ್ರಥಮ ಪ್ರಯತ್ನವೂ ಇದಾಗಿದೆ. ಶೋಷಣೆ ಮತ್ತು ಅಮಾನವೀಕರಣಕ್ಕೆ ಪ್ರತಿಯಾಗಿ ಪರ್ಯಾಯ ವ್ಯವಸ್ಥೆಯೊಂದನ್ನು ನಾವು ನಿಜವಾಗಿ ಬಯಸುವುದಾದಲ್ಲಿ ಅದು ಇಲ್ಲಿದೆ.

**ಟಿಪ್ಪಣಿಗಳು :**

೧. ಈ ಪ್ರಬಂಧದಲ್ಲಿ "ಮಾನವ" ಎನ್ನುವ ಪದವನ್ನು ಕುಲಸೂಚಕವಾಗಿ ಬಳಸಲಾಗಿದೆ, ಲಿಂಗಸೂಚಿಯಾಗಲ್ಲ.

೨. *Ecological Humanism,* Tract, Nos. 19 7 20 (Agberytwyth, England) pp 3-39

೩. The Life Divine 1939-40

೪. ಉಪಾಧ್ಯಾಯರು 'ಮನಸ್ಸು" ಮತ್ತು "ಬುದ್ಧಿಮತ್ತೆ"ಯ ನಡುವಣ ವ್ಯತ್ಯಾಸಗಳನ್ನು ಸ್ಪಷ್ಟೀಕರಿಸುವುದಿಲ್ಲ ಅಥವಾ ಈ ಪದಗಳನ್ನೂ ಅವರು ಅರ್ಥೈಸುವುದಿಲ್ಲ. ನನ್ನ ಅರ್ಥ ವಿವರಣೆ ಆಯಾ ಪದಗಳ ಸಂಸ್ಕೃತ ಪದಗಳಿಗನುಸಾರವಾಗಿದೆ. ಬುದ್ಧಿ, ಅಂದರೆ ಸಂಕೀರ್ಣವಾದ ಪ್ರಚೋದನೆ, ಪ್ರಚೋದನೆಗಳಿಗೆ ಪ್ರತಿಕ್ರಿಯಿಸುವ ಮತ್ತು ಕಲಿಯುವ ಸಾಧನ. ವಿವೇಕ (ಮನಸ್ಸು) ಒಳ್ಳೆಯದು ಕೆಟ್ಟದ್ದು ಇವುಗಳ ನಡುವಣ ಬೇಧವನ್ನು ವಿವೇಚಿಸುವ ಸಾಧನ. ಸಮಗ್ರ ಮಾನವ ಪರಿಕಲ್ಪನೆಗೆ ಸಂಬಂಧಿಸಿದ ಅಭಿಪ್ರಾಯಗಳಲ್ಲಿ ದೇಹ ಮತ್ತು ಆತ್ಮಗಳಿಗೆ ಸಂಬಂಧಿಸಿದಂತೆ ದೇಹ ಮತ್ತು ಆತ್ಮಗಳಿಗೆ ಸಂಬಂಧಿಸಿದಂತೆ ದ್ವಂದ್ವವಿದೆ. ಹೆಚ್ಚಿನ ಜಿಜ್ಞಾಸೆಗಾಗಿ ಚಂದ್ರ ಪಿ ಅಗರವಾಲ್ ಅವರ *Elements of Gandhian Man*, Ecologos, XX11, 82, (Denver, N.S.) ನೋಡಿ ಅರವಿಂದರೂ ಮಾನವನನ್ನು ಭೌತದ್ರವ್ಯ ಮತ್ತು ಆತ್ಮ ಎಂದೇ ಪರಿಗಣಿಸುತ್ತಾರೆ. ಭೌತದ್ರವ್ಯ ಮತ್ತು ಆತ್ಮಗಳ ನಡುವಣ ಸಂಬಂಧವನ್ನು ವಿವರಿಸಲು, ಅವರು, ಜೀವ ಮತ್ತು ಮನಸ್ಸು ಎಂಬೆರಡು ಮೂಲ ದ್ರವ್ಯಗಳನ್ನು ಸೇರಿಸುತ್ತಾರೆ.

೫. ಜನ್ಮಸಿದ್ಧ ಸ್ವಾತಂತ್ರ್ಯ ಮತ್ತು ವಿವಿಧ ಜೀವರಾಶಿಗಳಿಗೆ ಸಂಬಂಧಿಸಿದ ವಿಷಯಗಳು ಇತ್ತೀಚಿನ ವರ್ಷಗಳಲ್ಲಿ ತುಂಬ ಗಂಭೀರವಾದ ಅಧ್ಯಯನಕ್ಕೆಡೆ ಮಾಡಿಕೊಟ್ಟಿವೆ. Thor

Heyerdahl ಅವರ How to kill an Ocean ಇದಕ್ಕೊಂದು ಉತ್ತಮ ನಿದರ್ಶನ. ಈ ಗ್ರಂಥದಲ್ಲಿ ಮನುಷ್ಯ, ಜಲ, ಸಸ್ಯ ಜೀವರಾಶಿಗಳ ನಡುವಣ ಸಂಬಂಧವನ್ನು ಹಾಗೂ ಜಲಮಾಲಿನ್ಯದಿಂದಾಗಿ ಈ ಸಂಬಂಧಕ್ಕೆ ವಿಪತ್ತುಂಟಾಗಿರುವುದನ್ನು ವಿವರಿಸಲಾಗಿದೆ. ಈ ವಿಪತ್ತಿನಿಂದಾಗಿ ಸಾಗರ ಸಮುದ್ರಗಳಷ್ಟೆ ನಿರ್ನಾಮ ಹೊಂದುವುದಿಲ್ಲ 'ಭೂಗ್ರಹವೂ' ನಿರ್ನಾಮವಾಗುತ್ತದೆ ಎಂದು Heyerdahl ಎಚ್ಚರಿಸಿದ್ದಾನೆ.

೬. ಲಕ್ಷಣ ರಾವ್ ಭಿಡೆ ಉಪಾಧ್ಯಾಯರ ಸಹವರ್ತಿಗಳು ಹಾಗೂ ಸಂಸ್ಕೃತ ವಿದ್ವಾಂಸರು ಅವರೊಡನೆ ಈ ಲೇಖಕ ಅಖಂಡಮಾನವೀಯತೆ ಸಿದ್ಧಾಂತ ಕುರಿತು ಚರ್ಚಿಸಿದಾಗಿನ ಪ್ರಸ್ತಾಪ. (30, Lincroft Avenue, Old Bridge New Jersey, Sept.)

೭. Anthologized in the Essental Aurobindo, Ed. R.A. McDermott (1973), P. 55

೮. The Integral Approach (New Delhi), Deendayal Research Institute, 1979) pp. 55. Subrequment Quotations from the is book will be given in parentheses in the text.



# ೮. ಸಾಮಾಜಿಕ ತತ್ತ್ವ ಸಿದ್ಧಾಂತಗಳನ್ನು ಕುರಿತ ದೀನ್ ದಯಾಳರ ಚಿಂತನೆಗಳು : ಒಂದು ಸಮಗ್ರ ಪ್ರಸ್ತಾಪ

**ಮಹೇಶ್ ಮೆಹ್ತಾ**

ಮನುಕುಲದ ಒಟ್ಟಾರೆ ಸಾಂಸ್ಕೃತಿಕ ಪ್ರಗತಿಗೆ ವಿಶ್ವದ ವಿವಿಧ ರಾಷ್ಟ್ರಗಳ ಕೊಡುಗೆ ಏನು? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ನಾವು ಐತಿಹಾಸಿಕ ಶೋಧದಲ್ಲಿ ತೊಡಗಿದಾಗ ದೇಶಗಳಿಗೆ ಸಂಬಂಧಿಸಿದಂತೆ ರೋಮ್ ಮತ್ತು ಗ್ರೀಸ್ ದೇಶಗಳಾಚೆಯೂ ನೋಡಬೇಕಾಗುತ್ತದೆ. ಕಾಲಕ್ಕೆ ಸಂಬಂಧಿಸಿದಂತೆ ಐದು ಸಾವಿರದ ವರ್ಷಗಳಿಗೂ ಹಿಂದಿನ ಕಾಲಾವಧಿಯನ್ನು ಗಮನಿಸಬೇಕಾಗುತ್ತದೆ. ಭಾರತೀಯ ಸಂಸ್ಕೃತಿಗೆ ಹಾಗೂ ಮಾನವಕುಲದ ಪ್ರಗತಿಗೆ ಭಾರತ ನೀಡಿರುವ ಕೊಡುಗೆಯನ್ನು ಅಲಕ್ಷಿಸಲಾಗದು. ದೀನ್ ದಯಾಳ್ ಉಪಾಧ್ಯಾಯರ ಏಕಾತ್ಮ ಮಾನವ ಸಿದ್ಧಾಂತದ ಮೂಲಶಕ್ತಿ ಭಾರತದ ಋಷಿಮುನಿಗಳ ಪ್ರಾಚೀನ ವಿವೇಕ. ಸಹಸ್ರಾರು ವರ್ಷಗಳಷ್ಟು ಹಿಂದೆಯೇ ನಮ್ಮ ಋಷಿಗಳು ಮಾನವ ಕುಲಕ್ಕೆ ಈ ವಿವೇಕವನ್ನು ಬಹಿರಂಗಪಡಿಸಿದ್ದರು. ಉಪಾಧ್ಯಾಯರು ತಮ್ಮ ಪ್ರಮೇಯದಲ್ಲಿ ಉತ್ತರಿಸಲೆತ್ನಿಸಿರುವ ಕೆಲವು ಪ್ರಶ್ನೆಗಳು ಹೀಗಿವೆ:

- **ವ್ಯಕ್ತಿಯ ಸುಖ-ಸಂತೋಷಗಳು ಅಂದರೆ ಏನು?**
- **ವ್ಯಕ್ತಿ ಮತ್ತು ಸಮಾಜದ ನಡುವಣ ಬಾಂಧವ್ಯ ಎಂದರೆ ಏನು?**
- **ಸಮಾಜದ ಯೋಗಕ್ಷೇಮ ನೋಡಿಕೊಳ್ಳುವುದರಲ್ಲಿ ಸರ್ಕಾರದ ಪಾತ್ರ ಏನು?**
- **ಮನುಷ್ಯ ಹಾಗೂ ಸರ್ಕಾರದ ನಡಾವಳಿಯನ್ನು ಹೇಗೆ ನಿರ್ದೇಶಿಸಬಹುದು? ಹೇಗೆ ಮಾರ್ಗದರ್ಶನ ಮಾಡಬಹುದು?**

## ಪಶ್ಚಿಮದ ಅಸಮಂಜಸ ವಿಚಾರಸರಣಿ

ಐರೋಪ್ಯ ರಾಷ್ಟ್ರಗಳ ಉದಯವಾದಂತೆ ಅಲ್ಲಿ ತಮ್ಮ ಜನರ ಯೋಗಕ್ಷೇಮಕ್ಕಾಗಿ ಜನತೆಗೆ ಮಾರ್ಗದರ್ಶನ ನೀಡಲು ಹಲವಾರು ತತ್ತ್ವವಿಚಾರಗಳನ್ನು, ಸಿದ್ಧಾಂತಗಳನ್ನು

ಪ್ರಚುರಪಡಿಸಲಾಯಿತು. ಇವುಗಳ ಪೈಕಿ, ರಾಷ್ಟ್ರೀಯತೆ–ಪ್ರಜಾಸತ್ತೆ ಮತ್ತು ಸಮಾಜವಾದ ಪ್ರಮುಖವಾದವು. ಆದರೆ ಇವು ತಮ್ಮಷ್ಟಕ್ಕೆ ಅಪರಿಪೂರ್ಣವಾಗಿದ್ದು, ಕಾರ್ಯತಃ ಒಂದು ಮತ್ತೊಂದಕ್ಕೆ ವಿರುದ್ಧವಾಗಿವೆ. ಐರೋಪ್ಯ ರಾಷ್ಟ್ರೀಯತೆ (ಭಾರತೀಯ ರಾಷ್ಟ್ರೀಯತೆಯ ಅಡಿಪಾಯ ಸಂಪೂರ್ಣವಾಗಿ ಭಿನ್ನವಾದದ್ದು) ವಿಶ್ವ ಶಾಂತಿಗೆ ಬೆದರಿಕೆಯನ್ನು ತಂದೊಡ್ಡಲು ಕಾರಣವಾಯಿತು. ಬಂಡವಾಳಶಾಹಿ ಜೊತೆ ಸಂಯೋಗ ಹೊಂದಿದ ವ್ಯಕ್ತಿ ಸ್ವಾತಂತ್ರ್ಯದ ಪರಿಕಲ್ಪನೆಯೇ ವ್ಯಕ್ತಿ ಶೋಷಣೆಯ ಮೂಲವಾಯಿತು. ಬಂಡವಾಳಶಾಹಿ ಜಾಗಕ್ಕೆ ಸಮಾಜವಾದವನ್ನು ತರಲಾಯಿತು. ಸಮಾಜವಾದ ಪ್ರಜಾಸತ್ತೆಯನ್ನೂ ವ್ಯಕ್ತಿ ಸ್ವಾತಂತ್ರ್ಯವನ್ನು ಕೊನೆಗಾಣಿಸಿತು. ಹೀಗಾಗಿ, ಈಗ ಪಾಶ್ಚಾತ್ಯ ಜಗತ್ತು ಈ ಮಹಾನ್ ಆದರ್ಶಗಳೊಂದಿಗೆ ರಾಜಿ, ಸಮನ್ವಯ ಸಾಧಿಸುವ ಹೊಣೆಯನ್ನು ಎದುರಿಸುತ್ತಿದೆ.

## ಭಾರತೀಯ ಸಂಸ್ಕೃತಿಯ ಸನ್ನೆದೀಪ

ಭಾರತೀಯ ಸಂಸ್ಕೃತಿಯ ಮೊದಲ ಮುಖ್ಯ ಲಕ್ಷಣವೆಂದರೆ ಅದು ಬದುಕನ್ನು ಅಖಂಡವೆಂದು ಪರಿಗ್ರಹಿಸುತ್ತದೆ. ಬದುಕಿನ ವೈವಿಧ್ಯತೆ ಮತ್ತು ಬಹುಮುಖತೆಯನ್ನು ನಾವೆಲ್ಲ ಮಾನ್ಯಮಾಡುತ್ತೇವೆ. ಆದರೆ ಭಾರತದ ಋಷಿಗಳು ಮೂಲಾಧಾರವಾಗಿರುವ ಏಕತೆಯ ಮಹತ್ವವನ್ನು ಒತ್ತಿಹೇಳಿದ್ದಾರೆ. ಪಾಶ್ಚಾತ್ಯ ದಾರ್ಶನಿಕರಿಗೆ ದ್ವೈತ ತತ್ತ್ವಗಳನ್ನು ಮುಟ್ಟುವುದಷ್ಟೆ ಸಾಧ್ಯವಾದದ್ದು. ಹೆಗಲ್ ಸಿದ್ಧಾಂತ ಪ್ರತಿ ಸಿದ್ಧಾಂತ ವೈರುಧ್ಯ–ವಿರೋಧ–ಸಮನ್ವಯಗಳ ಬಗ್ಗೆ ಮಾತ್ರ ಮಾತನಾಡುವುದು ಸಾಧ್ಯವಾಯಿತು. ಕಾರ್ಲ್‌ಮಾರ್ಕ್ಸ್ ಈ ತತ್ತ್ವಗಳನ್ನು ಬಳಸಿಕೊಂಡು ಇತಿಹಾಸ ಮತ್ತು ಅರ್ಥ ವ್ಯವಸ್ಥೆಯ ವಿಶ್ಲೇಷಣೆಯನ್ನು ಮಂಡಿಸಿದ. ಡಾರ್ವಿನ್ "ಉಳಿಯುವ ಸಾಮರ್ಥ್ಯ ಉಳ್ಳವರೇ ಉಳಿಯುತ್ತಾರೆ" ಎನ್ನುವ ತತ್ತ್ವವನ್ನು ಸಾರಿದ. ಬದುಕಿನ ವೈವಿಧ್ಯತೆ ಅಂತರಂಗದ ಅಖಂಡತೆಯ ಅಭಿವ್ಯಕ್ತಿಯಷ್ಟೆ ಎಂದು ಭಾರತೀಯ ಸಂಸ್ಕೃತಿ ಸ್ಪಷ್ಟಪಡಿಸಿತು.

ಭಾರತೀಯ ದಾರ್ಶನಿಕರು ಮನುಷ್ಯನಲ್ಲಿನ ಕೋಪ, ದುರಾಸೆ, ಕಾಮ, ಕ್ರೋಧ ಇತ್ಯಾದಿ ಕೀಳುಪ್ರವೃತ್ತಿಗಳನ್ನು ಗಮನಕ್ಕೆ ತೆಗೆದುಕೊಂಡಿದ್ದರು. ಆದರೆ ಅವರು ಇವುಗಳನ್ನು ನಾಗರಿಕ ಜೀವನದ, ಸುಸಂಸ್ಕೃತ ಜೀವನದ ಮೂಲಾಧಾರ ಗಳೆಂದು ಮಾನ್ಯ ಮಾಡಿರಲಿಲ್ಲ. "ಉಳಿಯುವ ಸಾಮರ್ಥ್ಯ ಉಳ್ಳವನೇ ಉಳಿಯುತ್ತಾನೆ" ಎನ್ನುವ ಸಿದ್ಧಾಂತವನ್ನು ಒಪ್ಪಿಕೊಳ್ಳುವುದರಿಂದ ಬದುಕಿನಲ್ಲಿ ಸಾಮರಸ್ಯವನ್ನು ಸಾಧಿಸಲು, ಸಾಮರಸ್ಯಕ್ಕೆ ನೆರವಾಗಲು ಸಾಧ್ಯವಾಗುವುದಿಲ್ಲ. ತದ್ವಿರುದ್ಧವಾಗಿ ಅದು ಸಮಾಜದಲ್ಲಿ ಘರ್ಷಣೆ, ತಿಕ್ಕಾಟಗಳನ್ನು, ವೈಮನಸ್ಯಗಳನ್ನುಂಟುಮಾಡುತ್ತದೆ.

ಕೋಪ, ದುರಾಸೆಗಳು ಹೇಗೆ ಮನುಷ್ಯ ಸ್ವಭಾವದ ಅಂಗವೋ ಹಾಗೆಯೇ



ಪ್ರೀತಿ, ತ್ಯಾಗಗಳೂ. ಪ್ರೀತಿ, ತ್ಯಾಗಗಳು ಬದುಕಿನ ಮೂಲಾಧಾರ, ಬದುಕಿನ ಪೋಷಣೆಯ ಮೂಲಾಧಾರ. ಜೀವಪೋಷಕವಾದುದೆಲ್ಲವನ್ನೂ, ಸಾಮರಸ್ಯವುಂಟು ಮಾಡುವುದೆಲ್ಲವನ್ನೂ ಒಂದು ಮಾನದಂಡವಾಗಿ, ಒಂದು ಗುಣಮಟ್ಟವಾಗಿ ಅಂಗೀಕರಿಸಲಾಗಿದೆ. ಇವುಗಳನ್ನೇ ನೀತಿತತ್ತ್ವಗಳೆಂದು ಕರೆಯಲಾಗುತ್ತದೆ. ಈ ನೀತಿ ತತ್ತ್ವಗಳನ್ನು ಅನ್ವೇಷಿಸಲಾಗಿದೆ. ಯಾವುದೇ ಏಜೆನ್ಸಿಯೂ ಇವುಗಳನ್ನು ರೂಪಿಸಿಲ್ಲ.

ಭಾರತದಲ್ಲಿ ಈ ನೀತಿ ತತ್ತ್ವಗಳನ್ನು "ಧರ್ಮ", ಜೀವನ ನಿಯಮ ಎಂದು ಕರೆಯಲಾಗುತ್ತದೆ. ಸಾಮರಸ್ಯವುಂಟು ಮಾಡುವ ಹಾಗೂ ಮಾನವಕುಲದ ಬದುಕನ್ನು ಶ್ರೀಮಂತಗೊಳಿಸುವುದೆಲ್ಲವೂ 'ಧರ್ಮ'ದ ಪರಿಭಾಷೆಯಲ್ಲಿದೆ. ಮಾನವನ ಬದುಕನ್ನು ಹಸನುಗೊಳಿಸುವುದೆಲ್ಲವನ್ನೂ 'ಧರ್ಮ'ದಲ್ಲಿ ಸೇರಿಸಲಾಗಿದೆ. ಧರ್ಮದ ದೃಢ ಆಧಾರದ ಮೇಲೆ ನಾವು ಬದುಕನ್ನು ಸಮಗ್ರವಾಗಿ ವಿಶ್ಲೇಷಿಸಬೇಕು. ಜೀವನ ನಿಯಮ–ರೂಲ್ ಆಫ್ ಲಾ ಎನ್ನುವುದು ಧರ್ಮ ಪದಕ್ಕೆ ಹತ್ತಿರವಾದ ಇಂಗ್ಲಿಷ್ ಅನುವಾದವಾದೀತು. ಧರ್ಮದ ತತ್ತ್ವಗಳನುಸಾರವಾಗಿ ಎಲ್ಲಿ ಮಾನವಸ್ವಭಾವಗಳಿಗೆ ಮಾರ್ಗದರ್ಶನ ನೀಡಲಾಗುತ್ತದೋ ಅಲ್ಲಿ ಮಾತ್ರ ಸಂಸ್ಕೃತಿ ಮತ್ತು ನಾಗರಿಕತೆಗಳು ನೆಲಸಿರುವುದು ಸಾಧ್ಯ.

## ವ್ಯಕ್ತಿಯ ಸುಖ ಸಂತೋಷ

ವ್ಯಕ್ತಿಯ ಯೋಗಕ್ಷೇಮ ನೋಡಿಕೊಳ್ಳಲೆಂದೇ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹುಟ್ಟಿಕೊಂಡ ಹಲವಾರು ಪದ್ಧತಿಗಳು, ಸಂಘಸಂಸ್ಥೆಗಳು ಮನುಷ್ಯ ಸ್ವಭಾವದ ಒಂದಲ್ಲ ಒಂದು ದೃಷ್ಟಿಕೋನದಿಂದ ವಂಚಿತವಾಗಿದ್ದವು. ಹೀಗಾಗಿ ಅವು ಮಾನವನ ಸಮಸ್ಯೆಗಳಿಗೆ ಅಪರಿಪೂರ್ಣವಾದ ಪರಿಹಾರಗಳನ್ನು ನೀಡಿದವು. ಈ ಪರಿಹಾರಗಳ ಅಡ್ಡ ಪರಿಣಾಮಗಳಿಂದಾಗಿ ಸಮಸ್ಯೆಗಳು ಮತ್ತಷ್ಟು ಉಲ್ಬಣಗೊಂಡವು. ರಾಜಕೀಯ ವ್ಯಕ್ತಿಯನ್ನು ತುಷ್ಟಿಗೊಳಿಸಲು ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಪ್ರಯೋಗಿಸಿನೋಡಲಾಯಿತು. ಪ್ರಜೆಗೆ ಮತದಾನದ ಹಕ್ಕು, ಸಮಾನತೆ, ಭ್ರಾತೃತ್ವ ಮತ್ತು ಸ್ವಾತಂತ್ರ್ಯಗಳನ್ನು ನೀಡಲಾಯಿತು. ಸಮಾಜವಾದಿ ಸಿದ್ಧಾಂತಗಳು ಮಾನವನನ್ನು ಒಂದು ಆರ್ಥಿಕ ಘಟಕವೆಂದೇ ಪರಿಗಣಿಸಿದವು ಹಾಗೂ ಅವನನ್ನು ಸಂತುಷ್ಟಗೊಳಿಸಲು ಅನ್ನ, ವಸತಿ, ವಸ್ತ್ರಗಳಿಗೆ ಪ್ರಾಶಸ್ತ್ಯ ನೀಡಿದವು. ಅಮೆರಿಕದಲ್ಲಿ "ಮೂಲಭೂತ ಅಗತ್ಯಗಳು" ಹಾಗೂ "ಮತದಾನದ ಹಕ್ಕುಗಳು" ಇವೆರಡನ್ನೂ ಮಾನ್ಯ ಮಾಡಲಾಯಿತು. ಆದಾಗ್ಯೂ ವ್ಯಕ್ತಿಗೆ ಶಾಂತಿ, ಸುಖ, ಸಮಾಧಾನಗಳು ಸಿಗಲಿಲ್ಲ. ಅಮೆರಿಕ ವಿಶ್ವದ ಅತಿ ಶ್ರೀಮಂತ ರಾಷ್ಟ್ರವಾದರೂ ಮನೋವ್ಯಾಧಿ, ಆತ್ಮಹತ್ಯೆಯಂಥ ಸಮಸ್ಯೆಗಳು ಅದನ್ನು ಕಾಡುತ್ತಿವೆ. ಕೊಲೆ ಇತ್ಯಾದಿ ಅಪರಾಧಗಳು

ಈ ಒಂದು ಹೊಸ ಪರಿಸ್ಥಿತಿಗೆ ಕಾರಣ ಏನು ಎಂದು ಸಮಾಜೋ ಆರ್ಥಿಕ ಚಿಂತಕರು ದಿಗ್ಭ್ರಾಂತರಾಗಿದ್ದಾರೆ.

ವ್ಯಕ್ತಿಗತ ಸುಖಸಂತೋಷಗಳ ಅನ್ವೇಷಣೆಯ ನಿಟ್ಟಿನಲ್ಲಿ ಭಾರತೀಯ ಸಂಸ್ಕೃತಿ ವ್ಯಕ್ತಿಯನ್ನು, ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಗಳನ್ನೊಳಗೊಂಡಿರುವ ಒಂದು ಅಖಂಡ ವ್ಯಕ್ತಿತ್ವವೆಂದೇ ಮಾನ್ಯ ಮಾಡಿತು. ಈ ನಾಲ್ಕು ಅಂಗಗಳನ್ನು ತೃಪ್ತಿಪಡಿಸದೇ ಮಾನವ ಸಂತೋಷದಿಂದಿರಲಾರ. ಭಾಗಶಃ ತುಷ್ಟೀಕರಣ ಉಳಿದ ಅಂಗಾಂಗಗಳ ಅತೃಪ್ತಿಗೆ ಅವಕಾಶ ಕಲ್ಪಿಸುತ್ತವೆ. ಪರಿಣಾಮವಾಗಿ ಕಷ್ಟಕಾರ್ಪಣ್ಯಗಳು ಉದ್ಭವಿಸುತ್ತವೆ. ವ್ಯಕ್ತಿಯ ಸುಖ ಸಂತೋಷಗಳ ಈಡೇರಿಕೆಗಾಗಿ ಭಾರತೀಯ ತತ್ತ್ವಶಾಸ್ತ್ರ ಚತುರ್ವಿಧ ಪುರುಷಾರ್ಥಗಳನ್ನು ಕಲ್ಪಿಸಿದೆ. ಧರ್ಮ, ಅರ್ಥ, ಕಾಮ, ಮೋಕ್ಷ ಈ ಚತುರ್ವಿಧ ಪುರುಷಾರ್ಥಗಳು ಮಾನವನಲ್ಲಿ ಜನ್ಮಸಿದ್ಧವಾಗಿದ್ದು ಅವನನ್ನು ಸಂತೃಪ್ತನನ್ನಾಗಿಸುತ್ತವೆ. ಭಾರತೀಯ ತತ್ತ್ವಮೀಮಾಂಸೆ ಆಧ್ಯಾತ್ಮಿಕ ಅಗತ್ಯಗಳಿಗೆ ಮಾತ್ರ ಮಹತ್ವ ನೀಡುತ್ತವೆ ಎಂದು ಹೇಳುವವರಿಗೆ ಕೆಳಗೆ ಉಲ್ಲೇಖಿಸಿರುವ ಶ್ಲೋಕ ದೇಹದ ಹಿರಿಮೆ, ಮಹತ್ವ ಅವಶ್ಯಕತೆಗಳನ್ನು ಅಲಕ್ಷಿಸಿಲ್ಲ ಎನ್ನುವುದನ್ನು ಎತ್ತಿ ತೋರಿಸುತ್ತದೆ.

**ನ ಅಯಾಂ ಆತ್ಮಾ ಬಲಹೀನೇನ ಲಭ್ಯಾ**
**ಶರೀರಂ ಆದ್ಯಂ ಖಲು ಧರ್ಮಸಾಧನಂ**

–ದುರ್ಬಲ ಮನುಷ್ಯನಿಂದ ಬದುಕಿನ ಪುರುಷಾರ್ಥಗಳ ಸಾಧನೆ ಸಾಧ್ಯವಿಲ್ಲ. ಧರ್ಮದ ಹೊಣೆಗಾರಿಕೆಗಳನ್ನು ನಿರ್ವಹಿಸುವಲ್ಲಿ ದೇಹ ಒಂದು ಪ್ರಮುಖ ಸಾಧನ.

ಮಾನವ ಜನ್ಮದ ಅಂತಿಮ ಗುರಿ ಎಂದರೆ ಸಾಮಾಜಿಕ ಮಾನ್ಯತೆ. ಭಾರತೀಯ ತತ್ತ್ವಶಾಸ್ತ್ರ ಅರ್ಥ, ಕಾಮಗಳಿಗೆ ಸಲ್ಲಬೇಕಾದಷ್ಟು ಮಾನ್ಯತೆಯನ್ನು ನೀಡಿವೆ. ಅರ್ಥ, ಕಾಮಗಳ ಗುರಿಸಾಧನೆಯ ವಿಧಿ, ವಿಧಾನಗಳನ್ನು ಧರ್ಮ ವಿಶದೀಕರಿಸಿದೆ. ಮಹಾಭಾರತದಲ್ಲಿ ಹೇಳಿರುವಂತೆ, "ಧರ್ಮ ತತ್ತ್ವಗಳನ್ನು ಅನುಸರಿಸುವ ಮೂಲಕ ಅರ್ಥ–ಕಾಮಗಳನ್ನು ಸಾಧಿಸಬೇಕು". ಹೀಗೆ, ಪರಸ್ಪರ ಸಮನ್ವಯ–ಸಹಕಾರಗಳಿಂದ, ಸಮಗ್ರತೆಯಿಂದ ಸಾಗುವ ತ್ರಿವಿಧ ಪುರುಷಾರ್ಥಗಳು, ನಾಲ್ಕನೆಯದಾದ ಮೋಕ್ಷಕ್ಕೆ ಹಾದಿಯನ್ನು ಸುಗಮಗೊಳಿಸುತ್ತವೆ. ವ್ಯಕ್ತಿಯ ಒಟ್ಟು ಸಂತೋಷದಲ್ಲಿ ಇವು ಯಾವುದೂ ತಿರಸ್ಕಾರಾರ್ಹವಲ್ಲ ಅಥವಾ ಅತಿಶಯವೂ ಅಲ್ಲ. ಒಂದು ಇನ್ನೊಂದಕ್ಕೆ ಪ್ರತಿಯಾಗಿ ಅತಿಶಯವಾಗಿಯೂ ಸಲ್ಲದು.

### ವ್ಯಕ್ತಿ–ಸಮಾಜ

ಸಮಾಜ ವ್ಯಕ್ತಿಗಳಿಂದ ಕೂಡಿದೆ. ಆದ್ದರಿಂದ ಸಮಾನ ಮತ್ತು ವ್ಯಕ್ತಿಗಳ ನಡುವೆ ಕಾರ್ಯ ವ್ಯವಹಾರಗಳಿರುತ್ತವೆ. ಕಾರ್ಯವ್ಯವಹಾರಗಳಿಂದಾಗಿ ಘರ್ಷಣೆ, ತಿಕ್ಕಾಟಗಳು ಸಂಭವಿಸಬಹುದು. ವ್ಯಕ್ತಿಗಳು ಒಂದುಗೂಡಿ ತಮ್ಮ ತಮ್ಮಲ್ಲೇ ಒಪ್ಪಂದ



ಮಾಡಿಕೊಂಡು ಸಮಾಜವನ್ನು ರಚಿಸಿಕೊಂಡಿದ್ದಾರೆ ಎಂದು ಸಾಮಾಜಿಕ ಕರಾರು ಸಿದ್ಧಾಂತ (ಸೋಶಿಯಲ್ ಕಾಂಟ್ರಾಕ್ಟ್ ಥಿಯರಿ) ಹೇಳುತ್ತದೆ. ಇಲ್ಲಿ ವ್ಯಕ್ತಿಯೇ ಮಹತ್ವ ಪಡೆಯುತ್ತಾನೆ. ವ್ಯಕ್ತಿಯೇ ಸಮಾಜವನ್ನು ರಚನೆ ಮಾಡಿದ ಎಂದಾಗ ಶೇಷಾತ್ಮಕ ಅಧಿಕಾರ ಯಾರ ಕೈಯ್ಯಲ್ಲಿರುತ್ತದೆ? ಸಮಾಜದ ಕೈಯ್ಯಲ್ಲೋ, ವ್ಯಕ್ತಿಯ ಕೈಯ್ಯಲ್ಲೋ? ಸಮಾಜ ವ್ಯಕ್ತಿಯ ಮೇಲೆ ಹಲವು ಬಗೆಯ ನಿಯಂತ್ರಣಗಳನ್ನು ಹೇಳಬಹುದೆ? ವ್ಯಕ್ತಿ ತನಗೆ ನಿಷ್ಠನಾಗಿರಬೇಕೆಂದು ಕೇಳುವ ಅಧಿಕಾರ ಸಮಾಜಕ್ಕಿದೆಯೆ? ಅಥವಾ ಈ ಎಲ್ಲ ವಿಚಾರಗಳಲ್ಲಿ ವ್ಯಕ್ತಿ ಸ್ವತಂತ್ರನೆ? ಕೆಲವರು ಸಮಾಜವೇ ಪರಮ, ಮಹತ್ತಮ ಎನ್ನುತ್ತಾರೆ.

ಆದರೆ ಸತ್ಯವೆಂದರೆ, ವ್ಯಕ್ತಿಗಳು ಸಮಾಜವನ್ನು ರಚಿಸಿದರು ಎನ್ನುವ ಅಭಿಪ್ರಾಯವೇ ಮೂಲಭೂತವಾಗಿ ತಪ್ಪು. ಜನ ಸಮಾಜವನ್ನು ನಿರ್ಮಾಣ ಮಾಡಿಲ್ಲ ಅಥವಾ ಕೆಲವು ವ್ಯಕ್ತಿಗಳು ಜೊತೆಗೂಡಿದ್ದರ ಫಲವಾಗಿ ಸಮಾಜ ಹುಟ್ಟಲಿಲ್ಲ. ಭಾರತೀಯ ಚಿಂತನ ಪ್ರಕಾರ ಸಮಾಜ ಒಂದು ಸ್ವಯಂಭೂ. ಅದು ಸ್ವಯಂಸೃಷ್ಟಿಯ ಒಂದು ಅಸ್ತಿತ್ವ, ತನ್ನದೇ ಬದುಕಿನಲ್ಲಿ ಒಂದು ಅಸ್ತಿತ್ವ ವ್ಯಕ್ತಿಗಿರುವಂತೆ ಸಮಾಜಕ್ಕೂ ತನ್ನದೇ ಆದ ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಗಳು ಇವೆ. ಮೆಕ್‌ಡುಗಾಲ್, ತಮ್ಮ ಮನೋವೈಜ್ಞಾನಿಕ ಸಿದ್ಧಾಂತಗಳಲ್ಲಿ ಸಮಷ್ಟಿ ಮನಸ್ಸನ್ನು ಕುರಿತು ಚರ್ಚಿಸಿದ್ದಾರೆ.

ದೀರ್ಘಕಾಲದಿಂದ ಒಟ್ಟಿಗೆ ಕೂಡಿ ಬಾಳ್ವೆ ನಡೆಸುತ್ತಿರುವ ಜನಸಮೂಹ ತನ್ನದೇ ಆದ ರೀತಿ–ನೀತಿ, ಪದ್ಧತಿ, ಕಟ್ಟುಪಾಡುಗಳನ್ನು, ಸಂಪ್ರದಾಯ, ಸಂಸ್ಕೃತಿಗಳನ್ನು ಬೆಳೆಸಿರುತ್ತದೆ. ಈ ಜನ ಸಮೂಹವೇ ಆಖ್ಯೆರಾಗಿ ತಮ್ಮ ದೇಶದ ಮೇಲಿನ ಸಮಾನ ಆದರ್ಶ ಮತ್ತು ಪ್ರೀತಿಗಳಿಂದಾಗಿ ರಾಷ್ಟ್ರವನ್ನು ಬೆಸೆಯುತ್ತದೆ. ಸಂಸ್ಕೃತಿ ಮತ್ತು ರಾಷ್ಟ್ರದ ಕಲ್ಪನೆ ಮೂಡಿ ಗರಿಗೆದರಿದ ನಂತರ ಸಮಾಜ ಅನನ್ಯತೆಯನ್ನು ಅಸ್ಮಿತೆಯನ್ನು ಪಡೆಯುತ್ತದೆ. ಜನಸಮೂಹದಲ್ಲಿ ಬಾಹ್ಯ ಬದಲಾವಣೆಗಳಾದರೂ ಸಮಾಜ ಮುಂದುವರಿದಿರುತ್ತದೆ. ಸತತ ಅಸ್ತಿತ್ವದ ಈ ಅಸ್ಮಿತೆಯನ್ನೇ, ದೀನ ದಯಾಳ್ ಉಪಾಧ್ಯಾಯರು ಜನಸಮೂಹದ ಆತ್ಮ ಎಂದು ಕರೆದಿದ್ದಾರೆ.

ರಾಷ್ಟ್ರ ಮತ್ತು ರಾಷ್ಟ್ರದ ಆತ್ಮಗಳನ್ನು ಒಡಂಬಡಿಸುವುದರಲ್ಲಿ ವ್ಯಕ್ತಿ ಒಂದು ಸಾಧನವಿದ್ದಂತೆ. ವ್ಯಕ್ತಿ ತನ್ನ ಪ್ರತಿನಿಧಿಯೂ ಹೌದು, ರಾಷ್ಟ್ರದ ಪ್ರತಿನಿಧಿಯೂ ಹೌದು. ವ್ಯಕ್ತಿಯ ಪಾತ್ರಗಳು ಹಲವಾರು. ಅವನು ಗೃಹಸ್ಥ, ಕಸಬುದಾರ, ರಾಜಕೀಯ, ಧಾರ್ಮಿಕ ಪಂಥಗಳ ಸದಸ್ಯ, ಸಮುದಾಯದ ಸಮಾಜದ ಸದಸ್ಯ, ರಾಷ್ಟ್ರವೊಂದರ ಸದಸ್ಯ ಜೊತೆಗೆ ಮಾನವಕುಲವೆಂಬ ಬೃಹತ್ ಸಮಷ್ಟಿಯ ಸದಸ್ಯನೂ ಹೌದು. ಹೀಗೆ ವ್ಯಕ್ತಿಯ ಹಂಗು ಹೊಣೆಗಾರಿಕೆಗಳು ಹಲವಾರು. ಇವುಗಳು ಪರಸ್ಪರ ವಿರೋಧಿಯಾದವಲ್ಲ. ಇವುಗಳ ನಿರ್ವಹಣೆಯಲ್ಲಿ ಘರ್ಷಣೆ ಇಲ್ಲ. ಮಾನವ ಕುಲದ ವಿಭಿನ್ನ ಆಚಾರ–ವಿಚಾರ–ಆದರ್ಶಗಳು ಪರಸ್ಪರ ಪೂರಕವಾಗಿರುವುದನ್ನು

ಮಾನ್ಯ ಮಾಡುವಂಥ, ಎಲ್ಲರಿಗೂ ಅನುಕೂಲವಾಗುವಂಥ ಶಾಸನಗಳನ್ನು ಮಾಡಬಲ್ಲ ವ್ಯವಸ್ಥೆಯಿಂದ ಮಾತ್ರ ಮನುಕುಲಕ್ಕೆ ಶಾಂತಿ–ಸಂತೋಷ–ನೆಮ್ಮದಿಗಳನ್ನು ಕೊಡುವುದು ಸಾಧ್ಯ.

> **"ವಿವಿಧತೆಯ ಮೂಲಾಧಾರವಾದ ಏಕತೆಯ ತತ್ತ್ವವನ್ನು ಮಾನ್ಯ ಮಾಡಿದಲ್ಲಿ, ಕುಟುಂಬದಿಂದ ಹಿಡಿದು ಬ್ರಹ್ಮಾಂಡದವರೆಗಿನ ವಿವಿಧ ಸಂಸ್ಥೆಗಳೊಡನೆ ವ್ಯಕ್ತಿಹೊಂದಿರುವ ಸಂಬಂಧ–ಸಾದೃಶ್ಯಗಳು ಅವನ ಪ್ರಜ್ಞಾ–ವಿಕಾಸದ ಬಾಹ್ಯರೂಪವಾಗಿರುತ್ತವೆ. ಪ್ರಜ್ಞಾವಂತಿಕೆ ವಿಕಾಸಗೊಂಡಷ್ಟೂ ಅಸ್ತಿತ್ವ ವಿಸ್ತೃತಗೊಳ್ಳುತ್ತದೆ. ಉನ್ನತ ಮಟ್ಟವನ್ನು ತಲುಪುತ್ತದೆ. ಇದರಿಂದಲೇ ವ್ಯಕ್ತಿಯನ್ನು ಗುರುತಿಸುವುದು. ಆದರೆ ಇದೊಂದು ವಿಕಸನಶೀಲ ಪ್ರಕ್ರಿಯೆ. ಪ್ರಜ್ಞೆಯ ಸುಪ್ತಸ್ತರಗಳು ಹಿಂದಿನ ಕೆಳಸ್ತರಗಳಿಗೆ ಪ್ರತಿಬಂಧಕವಾಗುವುದಿಲ್ಲ. ಅದು ಎಲ್ಲವನ್ನೂ ಒಳಗೊಂಡಿರುತ್ತದೆ. ಅದಕ್ಕೆ ಪ್ರತ್ಯೇಕ ಗುಣಲಕ್ಷಣಗಳಿರುವುದಿಲ್ಲ. ಒಬ್ಬ ವ್ಯಕ್ತಿ ವಿವಿಧ ಅಸ್ತಿತ್ವಗಳೊಂದಿಗೆ ಸಂಬಂಧ ಹೊಂದಿರಬಹುದು. ಆದರೆ ಇದರಿಂದ ಯಾವುದೊಂದಕ್ಕೂ ಅನ್ಯಾಯವಾಗಬಾರದು. ವಸ್ತುವಿಷಯ ಸಂಗತಿಗಳ ವಾಸ್ತವಿಕವಾದ ಸಮಗ್ರ ದರ್ಶನ ಅತ್ಯಗತ್ಯ".**

**ಸಮಾಜದ ಸಮಸ್ಯೆಗಳು**

ಆಧುನಿಕ ಸಮಾಜ ಎದುರಿಸುತ್ತಿರುವ ಸಮಸ್ಯೆಗಳು ವಿಧವಿಧವಾಗಿದ್ದು ಸಂಕೀರ್ಣ ಸ್ವರೂಪದ್ದಾಗಿವೆ. ಇಂದಿನ ರಾಜಕೀಯ ನಾಯಕರು, ಸಮಾಜದ ನೇತಾರರು ಎದುರಿಸುತ್ತಿರುವ ಸಮಸ್ಯೆಗಳು ಸಮಸ್ಯೆಯ ಯಾವುದೇ ಒಂದು ಮುಖ. ಮಗ್ಗುಲುಗಳಿಗೆ ಭಾಗಶಃ ಒತ್ತುಕೊಡುವ ಪ್ರವೃತ್ತಿಯ ಫಲವಾಗಿವೆ. ಪಾಶ್ಚಾತ್ಯ ಜಗತ್ತಿನಲ್ಲಿ ವ್ಯಕ್ತಿ ಸ್ವಾತಂತ್ರ್ಯ ಸ್ವಚ್ಛಂದತೆ, ಸ್ವೇಚ್ಛಾಪ್ರವೃತ್ತಿಗಳಾಗಿ ಅಧೋಗತಿಗಿಳಿದಿದೆ. ಶಿಸ್ತು ಎನ್ನುವುದು ಕಟ್ಟುಪಾಡುಗಳಿಂದ ಮನಸ್ಸನ್ನು ನಿಗ್ರಹಿಸುವ ಕ್ರಮವಾಗಿದೆ. ಮೂಲಾಧಾರವಾದ ಏಕತೆಯನ್ನು ಹುಡುಕುವ ಬದಲು ಚಿಂತಕರು ಬಾಹ್ಯದ ಏಕರೂಪತೆಗಾಗಿ ತಡಕಾಡಿದರು. ಇದರ ಫಲವಾಗಿ ಸಮಾನತೆಯ, ಎಲ್ಲರನ್ನು ಸಮನಾಗಿಸುವ ಪೊಳ್ಳು ಘೋಷಣೆ ಹುಟ್ಟಿಕೊಂಡಿತು. ವ್ಯಕ್ತಿಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ, ಆರ್ಥಿಕ ಅಭಿವೃದ್ಧಿ ಇತ್ಯಾದಿ ಕಲ್ಪನೆಗಳು, ವಿಷಯ ವಿಚಾರಗಳು ಅಬಾಧಿತವಾದವು, ಸರ್ವತಂತ್ರ ಸ್ವತಂತ್ರವಾದವು ಎಂದು ಪರಿಗಣಿಸಲ್ಪಟ್ಟಾಗಲೇ ಸಂಘರ್ಷದ ಪರಿಸ್ಥಿತಿ ಉದ್ಭವಿಸುವುದು. ಆರೋಗ್ಯಪೂರ್ಣ ಸಮಾಜವನ್ನು ಕಟ್ಟಲು, ವ್ಯಕ್ತಿ, ಸಮಾಜಗಳಂಥ ಸಜೀವ ಸಮಷ್ಟಿಗಳ ಯೋಗಕ್ಷೇಮ ಬದುಕಿನ ಅಖಂಡತೆಯ ದೃಷ್ಟಿಕೋನವನ್ನು ಅಂಗೀಕರಿಸುವುದರಲ್ಲಿದೆ.



# ೯. ದೀನ್ ದಯಾಳ್ ಉಪಾಧ್ಯಾಯರ ಆರ್ಥಿಕ ಚಿಂತನೆ

**ಡಾ. ಅಮಿತ್ ಕುಮಾರ್ ಮಿತ್ರ**

ಜನಸಂಘ ಈಚಿನ ವರ್ಷಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಕಟುವಾಗಿ ಟೀಕಿಸುತ್ತಿದೆ. ಅದು ಸೈದ್ಧಾಂತಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಇದನ್ನು ವಿರೋಧಿಸುತ್ತಾ ಬಂದಿದೆ. ದೀನದಯಾಳ್ ಉಪಾಧ್ಯಾಯರು ತಮ್ಮ ಸೈದ್ಧಾಂತಿಕ ಕೊಡುಗೆ ಮೂಲಕ ಬಂಡವಾಳಶಾಹಿ ವ್ಯವಸ್ಥೆಯ ಕಟುವಾದ ವಿಮರ್ಶೆ ಮಾಡಿದ್ದಾರೆ. ದೀನ್‌ದಯಾಳ್ ಉಪಾಧ್ಯಾಯರು ಆಧುನಿಕ ಬಂಡವಾಳ ಶಾಹಿ ವ್ಯವಸ್ಥೆಯ ಪ್ರಭಾವಶಾಲಿ ವಿಮರ್ಶಕರು. ವಿದೇಶೀಯರು ಹಾಗೂ ಅನೇಕ ವಲಯಗಳು ಏನೇ ಹೇಳಲಿ, ಅವರ ನಂಬಿಕೆಗಳು ಏನೇ ಇರಲಿ, ದೀನದಯಾಳ್ ಉಪಾಧ್ಯಾಯರು 'ಏಕಾತ್ಮ ಮಾನವದರ್ಶನ' (ಇಂಟಗ್ರೇಟೆಡ್ ಹ್ಯೂಮನಿಸಂ) ಗ್ರಂಥದಲ್ಲಿ ಈ ಎಲ್ಲ ಅನ್ನಿಸಿಕೆ ನಂಬಿಕೆಗಳನ್ನು ಬುಡಮೇಲುಗೊಳಿಸುವಂಥ ಗಮನಾರ್ಹ ಕೊಡುಗೆ ನೀಡಿದ್ದಾರೆ. ಉಪಾಧ್ಯಾಯರ ವಿಮರ್ಶೆ ತೀಕ್ಷ್ಣವಾಗಿದ್ದರೂ ಅದರಲ್ಲಿ ದ್ವೇಷ–ಮತ್ಸರಗಳಿಲ್ಲ. ಅವರದು ವಿದ್ವತ್ಪೂರ್ಣ ಆಸಕ್ತಿಯಿಂದ ಕೂಡಿದ ವಿಮರ್ಶೆ, ಬಂಡವಾಳ ಶಾಹಿಯ ವಿರುದ್ಧ ಹುಟ್ಟಿಕೊಂಡ ಕಮ್ಯುನಿಸ್ಟ್ ಸಿದ್ಧಾಂತದ ಪಾಂಡಿತ್ಯಪೂರ್ಣ ದೃಷ್ಟಿಯ ವಿಮರ್ಶೆ.

**ದಕ್ಷತೆಗಾಗಿ ಸಹಕಾರ**

ದೀನ್‌ದಯಾಳಜಿ ಗಣಿತಶಾಸ್ತ್ರಜ್ಞರು. ಆದ್ದರಿಂದ ಅವರಿಗೆ ನವ ಕ್ಲಾಸಿಕಲ್ ಅರ್ಥಶಾಸ್ತ್ರವನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಾಯಿತು. ನೊಬೆಲ್ ಪ್ರಶಸ್ತಿ ವಿಜೇತ ಭೌತವಿಜ್ಞಾನಿ ಪಾಲ್ ಸ್ಯಾಮಯಲ್ಸನ್‌ರಷ್ಟೇ ಸುಲಭವಾಗಿ, ಸಮರ್ಥವಾಗಿ ಅವರು ಅರ್ಥವ್ಯವಸ್ಥೆಯ ನವೋದಯವನ್ನು ಗ್ರಹಿಸಿದ್ದರು. ಹೀಗಾಗಿ ಉಪಾಧ್ಯಾಯರಿಗೆ ವಿಕಲ ಸಮೀಕರಣಗಳ ಬಗ್ಗೆ ಅರ್ಥಶಾಸ್ತ್ರಜ್ಞರಿಗಿಂತ ಉತ್ತಮವಾದ ಅರಿವಿತ್ತು. ನಾವು ಅರ್ಥ ಶಾಸ್ತ್ರದಲ್ಲಿ ಯಾವುದನ್ನು "ಪರೇಟೊ ಆಪ್ಟಿಮಾಲಿಟಿ"ಯನ್ನು (ಪರೇಟೊ ಸ್ವಿಜರ್ಲೆಂಡಿನ ಅರ್ಥಶಾಸ್ತ್ರಜ್ಞ, ಬೆಳವಣಿಗೆ ಮತ್ತು ಉತ್ಪಾದನೆಗೆ

ಅನುಕೂಲಕರ ವಾತಾವರಣ ಕುರಿತ ಇವನ ಮೀಮಾಂಸೆಯನ್ನು (ಪರೇಟೊ ಆಪ್ಟಿಮಾಲಿಟಿ) ಉಪಾಧ್ಯಾಯರು ಒಪ್ಪುವುದಿಲ್ಲ. ಇದರ ಕಾರ್ಯನಿರ್ವಹಣೆಯನ್ನು ತಿರಸ್ಕರಿಸಿರುವುದು ಅವರ ಪ್ರಥಮ ಕೊಡುಗೆ. ವ್ಯಕ್ತಿ ಉಗ್ರರೀತಿಯಲ್ಲಿ ಗರಿಷ್ಠ ಲಾಭ ಸಂಪಾದಿಸುವುದು ಸಾಧ್ಯವಾದಲ್ಲಿ ಸಮಾಜ ಅದರಿಂದ ಗರಿಷ್ಠ ಲಾಭ ಪಡೆಯುತ್ತದೆ ಎನ್ನುವುದು ಸ್ಥೂಲವಾಗಿ ಪರೇಟೊ ಆಪ್ಟಿಮಾಲಿಟಿಯ ಸಿದ್ಧಾಂತ. ಸಾರಾಂಶ ಇಷ್ಟೇ: ಪ್ರತಿ ವ್ಯಕ್ತಿಯೂ ತನ್ನ ಗರಿಷ್ಠ, ಅಧಿಕತಮ ಗಳಿಕೆಗಾಗಿ ಉಗ್ರವಾಗಿ ಹೋರಾಡುತ್ತಾನೆ. ಸಮಷ್ಟಿ ಸಮಾಜವೂ ಇದರಿಂದ ಅಧಿಕತಮ ಲಾಭವನ್ನು ಗಳಿಸುತ್ತದೆ." ಇದನ್ನು ಉಪಾಧ್ಯಾಯರು ಒಪ್ಪುವುದಿಲ್ಲ. ಅವರು ಕನಿಷ್ಠ ಮಿತಿಯ ವಿಶ್ಲೇಷಣೆ ಮೂಲಕ ಈ ಸಮಸ್ಯೆಯನ್ನು ಬಿಡಿಸಲೆತ್ನಿಸಿದರು. ಇದು ಬಂಡವಾಳಶಾಹಿ ವ್ಯವಸ್ಥೆಯೊಳಗಣ ಮೂಲ ರೋಗಾಣುವಾಗಿತ್ತು. ಪರಿಪೂರ್ಣವಾದ ಪರಿಸರದಲ್ಲಿ ವ್ಯಕ್ತಿಯ ಸ್ಪರ್ಧೆ, ಪೈಪೋಟಿಗಳೆ ಈ ರೋಗಾಣು. ಇದರ ನಿವಾರಣೆಯ ನಿಟ್ಟಿನಲ್ಲಿ ಉಪಾಧ್ಯಾಯರು ಶ್ರಮಿಸಿದ್ದಾರೆ. ವ್ಯಕ್ತಿಗಳ ನಡುವಣ ಸಹಕಾರದಿಂದ ದಕ್ಷತೆ ಹಾಗೂ ಸಂಪತ್ತು ಇವೆರಡನ್ನೂ ಇತ್ಯಾತ್ಮಕವಾಗಿ ಸೃಷ್ಟಿಸುವುದು ಸಾಧ್ಯ ಎನ್ನುವುದು ಉಪಾಧ್ಯಾಯರ ಪ್ರತಿಪಾದನೆ. ಅವರು ಯಾವಾಗಲೂ ತಮ್ಮ ವಾದ ಸಮರ್ಥನೆಗೆ ಜೀವರಾಶಿಗಳಿಂದಲೇ ನಿದರ್ಶನಗಳನ್ನು ಕೊಡುತ್ತಿದ್ದರು. ಅವರು ಪ್ರಕೃತಿ ತತ್ತ್ವವಾದಿಯಾದ್ದರಿಂದ ಅವರು ಕೊಡುತ್ತಿದ್ದ ನಿದರ್ಶನಗಳು ಪ್ರಕೃತಿ ಸಂಬಂಧಿತವಾಗಿರುತ್ತಿದ್ದವು. ಅವರು ಕೊಟ್ಟ ನಿದರ್ಶನಗಳು ಯಾವುದು? ತತ್‌ಕ್ಷಣ ಹೊಳೆಯುವುದು; ಸಸ್ಯಗಳು ಮತ್ತು ಪ್ರಾಣಿಗಳು ಹಾಗೂ ಮಾನವ ಮತ್ತು ಅವನ ಪರಿಸರ ಇವುಗಳ ನಡುವಣ ಜೈವಿಕ ಸಂಬಂಧ. ಪ್ರಕೃತಿಯ ಸಮಸ್ತ ಮುಖಗಳಲ್ಲೂ ಸಹಕಾರವಿದೆ ಈ ಸಹಕಾರದಿಂದಾಗಿ ಪರಿಣಾಮಕಾರಿಯಾದ ಅದ್ಭುತ ವ್ಯವಸ್ಥೆಯೊಂದು ರೂಪುಗೊಂಡಿದೆ ಎಂದು ಅವರು ಪದೇ ಪದೇ ಹೇಳುತ್ತಿದ್ದರು. ಪ್ರಕೃತಿಯೊಳಗೇ ವಿರೋಧ ವೈಷಮ್ಯಗಳಿದ್ದಾಗೂ ಸಮಸ್ತ ಪ್ರಕೃತಿಯಲ್ಲಿ ಸಹಕಾರವಿದೆ. ಆದ್ದರಿಂದ ಸಣ್ಣ ಪುಟ್ಟ ಘಟಕಗಳ ನಡುವಣ ಸ್ಪರ್ಧೆ, ಪೈಪೋಟಿಗಳು ಮಾನವನನ್ನು ದಕ್ಷತೆಯತ್ತ ಮತ್ತು ಗರಿಷ್ಠ ಉತ್ಪಾದನೆಯತ್ತ ಒಯ್ಯುತ್ತವೆ ಎನ್ನುವುದು ನಿಜವಲ್ಲ ಎಂದು ಉಪಾಧ್ಯಾಯರು ಹೇಳುತ್ತಿದ್ದರು. ಇದು ಅವರ ತಾತ್ವಿಕ ಶಂಕೆ. ಇದು ಅವರೆಲ್ಲ ಚಿಂತನೆಗಳಿಗೆ ಪ್ರೇರಣೆಯಾಯಿತು. ಹೀಗೆ ಅವರು ಬಂಡವಾಳಶಾಹಿಯ ಟೀಕಾಕಾರರಾಗಿ ಬೆಳೆದರು.

## ಪ್ರಾರಂಭದ ದಿನಗಳ ಮಾರ್ಕ್ಸ್ ಮತ್ತು ದೀನದಯಾಳ್

ಇನ್ನೊಂದು ಸೋಜಿಗದ, ವಿಸ್ಮಯದ ಸಂಗತಿಯೆಂದರೆ ಯುವಕ ಕಾರ್ಲ್ ಮಾರ್ಕ್ಸ್ ಮತ್ತು ದೀನದಯಾಳ್ ಉಪಾಧ್ಯಾಯರಲ್ಲಿ ಕಂಡುಬರುವ ವಿಚಾರ ಸಾಮ್ಯತೆ. ಕಾರ್ಲ್‌ಮಾರ್ಕ್ಸ್ ಕುರಿತ ವಾದ, ವಿವಾದಗಳಲ್ಲಿ ಮರೆಯಲಾಗಿರುವ ಒಂದು ಸಂಗತಿ ಎಂದರೆ 'ದಾಸ್ ಕ್ಯಾಪಿಟಲ್' ಬರೆಯುವುದಕ್ಕೆ ಮುಂಚಿನ ಮಾರ್ಕ್ಸ್. ದುಡಿಯುವ ವ್ಯಕ್ತಿಯನ್ನು ಗೌಣವಾಗಿ ಕಾಣುವ, ದೂರ ಇರಿಸುವ ಪ್ರವೃತ್ತಿ ಬಗ್ಗೆ ಮಾರ್ಕ್ಸ್ ತೀವ್ರ ಕಾಳಜಿ ಹೊಂದಿದ್ದ. ಆಧುನಿಕ ಯಂತ್ರಗಳಿಂದ ಕಾರ್ಮಿಕ ಬಿಡಿಭಾಗಗಳಾದ ನಟ್ ಅಥವಾ ಬೋಲ್ಟನ್ನು ಉತ್ಪಾದಿಸುತ್ತಾನೆ. ಆದರೆ ಅಂತಿಮವಾಗಿ ರೂಪುಗೊಳ್ಳುವ, ತಯಾರಾಗುವ ಉತ್ಪನ್ನದ ಕಲ್ಪನೆಯೇ ಅವನಿಗಿರುವುದಿಲ್ಲ. ಇದು ಮಡಿಕೆ ಕುಡಿಕೆ ತಯಾರಿಸುವ ಕುಂಬಾರನ ಪಾತ್ರಕ್ಕಿಂತ ಭಿನ್ನವಾದದ್ದು. ಕುಂಬಾರ ಮಡಿಕೆ ತಯಾರಿಕೆಯ ಪ್ರತಿಹಂತದಲ್ಲೂ ಪ್ರತ್ಯಕ್ಷವಾಗಿ ಭಾಗಿಯಾಗಿರುತ್ತಾನೆ. ಹೀಗಾಗ ಆಖೈರಾಗಿ ಮಡಿಕೆ ತಯಾರಾದಾಗ ಅವನಿಗೊಂದು ಬಗೆಯ ಮಾನವ ಸಹಜ ತೃಪ್ತಿಯುಂಟಾಗುತ್ತದೆ. ಇದು ಯುವಕ ಮಾರ್ಕ್ಸ್‌ನ ಕಾಳಜಿಯಾಗಿತ್ತು. ಆ ಕಾಲದ ಜರ್ಮನಿಯ ಅರ್ಥಶಾಸ್ತ್ರಜ್ಞರು ಮತ್ತು ತತ್ತ್ವಶಾಸ್ತ್ರಜ್ಞರ ಕಾಳಜಿಯೂ ಇದೇ ಆಗಿತ್ತು. ಬಂಡವಾಳಶಾಹಿಗೆ ಇದು ಸುಸಂಗತವಾಗಿದ್ದ ಕಾಲದಲ್ಲೇ ಮಾರ್ಕ್ಸ್‌ಗೆ ಈ ಸಮಸ್ಯೆಯ ಅರಿವಿತ್ತು. ಅವನು ಹೇಳುತ್ತಾನೆ: "ಬೃಹತ್ ಉದ್ಯಮದ ಕೇಂದ್ರೀಕೃತ ವ್ಯವಸ್ಥೆಯ ಮೂಲಕ ಉತ್ಪಾದನೆ ನಡೆಯುತ್ತದೆ. ಬಂಡವಾಳ ಸೃಷ್ಟಿಯಲ್ಲೂ ಕಾರ್ಮಿಕರು ಮಾಡುವ ತ್ಯಾಗಕ್ಕೆ ಸೂಕ್ತ ಮಾನ್ಯತೆ ದೊರೆಯುತ್ತಿಲ್ಲ. ಬಂಡವಾಳ ಅಥವಾ ವೇತನಕ್ಕಿಂತ ಹೆಚ್ಚಾಗಿ ಮೂಡಿದ ಕೆಲಸದ ಮಿಗುತಾಯ ಮೌಲ್ಯದಲ್ಲಿ ತಾನು ಭಾಗಸ್ಥ ಎನ್ನುವ ಸ್ವಾಭಾವಿಕ ತೃಪ್ತಿಯುಂಟಾಗುತ್ತದೆ ಹಾಗೂ ವ್ಯವಸ್ಥೆಯ ಉತ್ಪಾದಕತೆಯಲ್ಲಿ ತನ್ನ ಪಾಲು ಇದೆ ಎನ್ನುವ ತೃಪ್ತಿ ಕಾರ್ಮಿಕರಲ್ಲಿ ಉಂಟಾಗುತ್ತದೆ." ಇದು ಬಂಡವಾಳ ಶಾಹಿಯ ಆರಂಭದ ದಿನಗಳಲ್ಲಿ ಯೂರೋಪಿನಾದ್ಯಂತ ಕೇಳಿ ಬಂದ ಕಳಕಳಿ. ಈ ಲಕ್ಷಣ ಭಾರತೀಯ ಪರಿಸ್ಥಿತಿಗೂ ಹೊಂದಿಕೆಯಾಗುತ್ತಿತ್ತು. ಉಪಾಧ್ಯಾಯರು ತುಂಬ ಪರಿಣಾಮಕಾರಿಯಾಗಿ ಭಾರತದ ಪರಿಸ್ಥಿತಿಗೆ ಕಾರ್ಮಿಕರನ್ನು ಗೌರವವಾಗಿ ಕಾಣುವ ಪ್ರವೃತ್ತಿಯನ್ನು ತಾಳೆ ಹಾಕಿ ನೋಡಿದ್ದರು.



## ಭಾರತೀಯ ತಂತ್ರಜ್ಞಾನ

ಬಂಡವಾಳಶಾಹಿ ವ್ಯವಸ್ಥೆಯಲ್ಲಾಗಲೀ ಅಥವಾ ಕಮ್ಯುನಿಸ್ಟ್ ವ್ಯವಸ್ಥೆಯಲ್ಲಾಗಲೀ ಔದ್ಯಮೀಕರಣ ತಂದೊಡ್ಡುವ ಮುಖ್ಯ ಸಮಸ್ಯೆ ಎಂದರೆ ಪರಿಸರ ಸಮತೋಲನ ರಕ್ಷಣೆ. ಇದು ಇವತ್ತಿಗೆ ತುಂಬ ಪ್ರಸ್ತುತವಾದ ಸಮಸ್ಯೆ. ಅರವತ್ತರ ದಶಕದಲ್ಲಿ ಇದು ಅಂಥ ಮುಖ್ಯ ಸಮಸ್ಯೆಯಾಗಿರಲಿಲ್ಲ. ದೀನ್ ದಯಾಳ್ ಉಪಾಧ್ಯಾಯರ ಬರವಣಿಗೆಯಲ್ಲಿ, ಬರಿದಾಗುವ ಸಂಪನ್ಮೂಲಗಳು ಹಾಗೂ ಪುನರುತ್ಪಾದಿಸಬಹುದಾದಂಥ ಸಂಪನ್ಮೂಲಗಳ ವಿಷಯ ಹೆಚ್ಚಿನ ಮಹತ್ವ ಪಡೆದಿರುವುದನ್ನು ನಾವು ಕಾಣುತ್ತೇವೆ. ಈ ಬಗ್ಗೆ ಅವರು ಪುನಃ ಪುನಃ ಒತ್ತಿ

ಹೇಳಿದ್ದಾರೆ. ಬಂಡವಾಳಶಾಹಿಯಾಗಲೀ ಕಮ್ಯುನಿಸ್ಟ್ ವ್ಯವಸ್ಥೆಯಾಗಲೀ ಈ ಸಂಪನ್ಮೂಲ ಸಮಸ್ಯೆಗೆ ಹೆಚ್ಚಿನ ಪ್ರಾಮುಖ್ಯ ನೀಡಿರಲಿಲ್ಲ. ನಮ್ಮ ಅರ್ಥ ವ್ಯವಸ್ಥೆ ಪರಿಸರ ಸಮತೋಲಕ್ಕೆ ಹೆಚ್ಚು ಲಕ್ಷ್ಯಕೊಡಬೇಕೆಂದು ಅವರು ಹೇಳುತ್ತಿದ್ದರು.

ಭಾರತೀಯ ಅರ್ಥವ್ಯವಸ್ಥೆಯ ಧ್ಯೇಯ–ಉದ್ದೇಶಗಳು ಏನಿರಬೇಕು ಎನ್ನುವುದನ್ನು ನಿರೂಪಿಸುವಾಗ ಉಪಾಧ್ಯಾಯರು ಭಾರತೀಯ ತಂತ್ರಜ್ಞಾನದ ಪರಿಕಲ್ಪನೆಗೆ ಹೆಚ್ಚು ಒತ್ತುಕೊಟ್ಟಿದ್ದರು. ಮಹಾತ್ಮ ಗಾಂಧಿಯವರು ಇದನ್ನೇ ಸ್ವದೇಶಿ ತಂತ್ರಜ್ಞಾನ ಎಂದು ಕರೆದಿದ್ದರು. ಸ್ವದೇಶ ತಂತ್ರಜ್ಞಾನ ಎಂದರೇನು? ಬಂಡವಾಳದ ಅಗತ್ಯವಿಲ್ಲದ ತಂತ್ರಜ್ಞಾನ ಎಂದರೇನು? ಬಂಡವಾಳದ ಕೊರತೆಯಾದಾಗ, ಸಮುದಾಯ ಹೆಚ್ಚಿನ ಬಂಡವಾಳ ಅಗತ್ಯವಿಲ್ಲದ ತಂತ್ರಜ್ಞಾನದ ಮೊರೆಹೋಗುತ್ತದೆ ಎನ್ನುವುದು ಅರ್ಥಶಾಸ್ತ್ರದ ಓನಾಮ ತಿಳಿದವರೆಲ್ಲರಿಗೂ ಗೊತ್ತಿರುವ ವಿಷಯ. ಅಂದರೆ ಬಂಡವಾಳ ಮಿಗಿಸಿ ದುಡಿಮೆ ಹೆಚ್ಚಿಸುವುದು ಆಗ ಭಾರತದ ಯೋಜನಾ ಪ್ರಕ್ರಿಯೆ ಇದಕ್ಕೆ ತದ್ವಿರುದ್ಧವಾದ ನಿರ್ಧಾರಗಳನ್ನು ಕೈಗೊಂಡಿತು. ಇದು ರಷ್ಯ ಮತ್ತು ಅಮೆರಿಕನ್ ತಜ್ಞರ ಪ್ರಭಾವದ ಪರಿಣಾಮವಾಗಿತ್ತು. ಕಾರ್ಮಿಕ ಚಟುವಟಿಕೆ ಸಂಪೂರ್ಣವಾಗಿ ಒಟ್ಟು ಬಂಡವಾಳವನ್ನೇ ಅವಲಂಬಿಸಿರುವುದರಿಂದ ನಾವು ಅಧಿಕ ಬಂಡವಾಳ ಹೂಡುವ ನಿರ್ಧಾರ ಕೈಗೊಂಡಿದ್ದೆವು. ಹೀಗಾಗಿ ಜವಹರಲಾಲ್ ನೆಹರೂ ಮಾರ್ಗದರ್ಶನದಲ್ಲಿ ಮಹಲನೋಬಿಸ್ ಅವರು ರೂಪಿಸಿದ ಯೋಜನೆಗಳು ಬಂಡವಾಳ ಪ್ರಧಾನ ಯೋಜನೆಗಳಾಗಿದ್ದವು. ಯಂತ್ರ ಪ್ರಧಾನವಾಗಿದ್ದವು. ಇದರಿಂದಾಗಿ ಕಾರ್ಮಿಕ ಶಕ್ತಿ ಮಿಗಿತಾಯವಾಯಿತು. ಮಾನವ ಸಂಪನ್ಮೂಲ ಹೆಚ್ಚುವರಿಯಾಗಿ ಉಳಿಯಿತು. ಪರಿಣಾಮವಾಗಿ ನಿರುದ್ಯೋಗ ಸಮಸ್ಯೆ ತಲೆದೋರಿತು. ದೀನದಯಾಳರು ತಮ್ಮ ಬರಹಗಳಲ್ಲಿ ಈ ವಿಷಯವನ್ನು ವ್ಯಾಪಕವಾಗಿ ಚರ್ಚಿಸಿದ್ದಾರೆ.

### ಮೂಲಾಧಾರ ಮಾನವ ಯಂತ್ರವಲ್ಲ

ತಂತ್ರಜ್ಞಾನದ ಆಯ್ಕೆ ವಿಕೇಂದ್ರೀಕರಣದ ಮುಖ್ಯ ಕಾಳಜಿಯಾಗಬೇಕು ಎನ್ನುವುದು ದೀನದಯಾಳರ ಅಭಿಪ್ರಾಯವಾಗಿತ್ತು. ಕೇಂದ್ರೀಕರಣ ಎಂದಕೂಡಲೇ ಆರ್ಥಿಕ ನೀತಿಗಳು ಅಧಿಕ ಬಂಡವಾಳದ ಪರವಾಗಿರುತ್ತದೆ. ಯಾಂತ್ರಿಕ ಕಂಪ್ಯೂಟರೀಕೃತ ವ್ಯವಸ್ಥೆಯ ಪರವಾಗಿರುತ್ತದೆ ಎನ್ನುವುದು ಇತಿಹಾಸದಿಂದ ಸಾಬೀತಾಗಿರುವ ಅಂಶ. ಮಾನವನನ್ನು ಸಂಪೂರ್ಣವಾಗಿ ಅಪಮೌಲ್ಯ ಗೊಳಿಸಲಾಯಿತು. ಹೀಗಾಗಿ, ಉಪಾಧ್ಯಾಯರ ಅಖಂಡ ಮಾನವತಾ ಸಿದ್ಧಾಂತದಲ್ಲಿ ಮಾನವನೇ ಕೇಂದ್ರಬಿಂದುವಾದ. ಯಂತ್ರಗಳು ಏನಿದ್ದರೂ ಮಾನವನಿಗೆ ಸಹಾಯಕವಾಗಿರಬೇಕಷ್ಟೆ, ಮಾನವನಿಗೆ ಪ್ರತಿಸ್ಪರ್ಧಿಯಾಗಬಾರದು ಎಂದು ಅವರು



ಪದೇ ಪದೇ ಹೇಳುತ್ತಿದ್ದರು. ಬಂಡವಾಳಶಾಹಿಯ ಮುಖ್ಯದೋಷವೆಂದರೆ ಅದು ಯಂತ್ರವನ್ನು ಮಾನವ ದುಡಿಮೆಯ ಪ್ರತಿಸ್ಪರ್ಧಿಯನ್ನಾಗಿಸಿದ್ದು. ಇದರಿಂದಾಗಿ ಮಾನವ ಉದ್ಯೋಗವಂಚಿತನಾದ. ಹೀಗಾಗಿ, ಯಂತ್ರಸೃಷ್ಟಿಯ ಮುಖ್ಯ ಉದ್ದೇಶವೇ ನಿಷ್ಫಲಗೊಂಡಿತು. ಇದಕ್ಕೆ ಯಂತ್ರವನ್ನು ದೂಷಿಸುವಂತಿಲ್ಲ. ಅದು, ವಸ್ತು ಮತ್ತು ಸಾಧನದ ನಡುವಣ ಭಿನ್ನತೆ, ವ್ಯತ್ಯಾಸಗಳನ್ನು ಗುರುತಿಸಲಾಗದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ದೋಷ "ನಾವು ನಿರ್ದಿಷ್ಟವಾದ ಆರ್ಥಿಕ ಉದ್ದೇಶಗಳಿಗಾಗಿ ಯಂತ್ರಗಳನ್ನು ರೂಪಿಸಬೇಕು. ಈ ಯಂತ್ರಗಳು ಯಾವುದೇ ರೀತಿಯಲ್ಲೂ ನಮ್ಮ ಸಮಾಜೊ ಅರ್ಥವ್ಯವಸ್ಥೆಯೊಂದಿಗೆ, ಸಾಂಸ್ಕೃತಿಕ ಧ್ಯೇಯಗಳೊಂದಿಗೆ ಘರ್ಷಣೆಗಿಳಿಯಬಾರದು." ಮಹಾತ್ಮಗಾಂಧಿ ಸೇರಿದಂತೆ, ಅನೇಕ ಭಾರತೀಯ ವಿದ್ವಾಂಸರುಗಳಿಂದ ಇದನ್ನು ಮನವರಿಕೆ ಮಾಡಿಕೊಂಡಿದ್ದ ದೀನದಯಾಳ್ ಉಪಾಧ್ಯಾಯರು ಸಮಾಜವಾದಿ ಅರ್ಥ ವ್ಯವಸ್ಥೆಯ ಕಟು ಟೀಕಾಕಾರರಾಗಿದ್ದರು. ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ, ಕಾರ್ಮಿಕರಿಂದ ಹುಟ್ಟಿದ ಹೆಚ್ಚುವರಿ ಬಗ್ಗೆ ಅವರು ತೀವ್ರವಾಗಿ ಬರೆದಿದ್ದರು. ಮಾಲೀಕರೇ ಈ ಹೆಚ್ಚುವರಿ ಅಥವಾ ಮಿಗಿತಾಯ ಸಂಪನ್ಮೂಲವನ್ನು ಹಾಳುಮಾಡುತ್ತಿದ್ದಾರೆ. ನಿರುಪಯುಕ್ತವನ್ನಾಗಿಸುತ್ತಿದ್ದಾರೆ ಎನ್ನುವುದು ಅವರ ತಕರಾರಾಗಿತ್ತು. ಸಮಾಜವಾದಿ ವ್ಯವಸ್ಥೆಯಲ್ಲೂ 'ಹೆಚ್ಚುವರಿ'ಯ ಉತ್ಪಾದನೆಯಾಗುತ್ತಿತ್ತು. ಈ ಬಗ್ಗೆ ಹೊಸ ವರ್ಗ ನಿರ್ಧಾರ ಕೈಗೊಳ್ಳುತ್ತಿತ್ತು. ಮಿಲ್ಲೋವನ್ ಡಿಜ್ಲಾಸ್ ಅವರು *"The New Class"* ಎನ್ನುವ ಗ್ರಂಥದಲ್ಲಿ ಇದನ್ನೂ ಸವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ. ಈ ಬಗ್ಗೆ ದೀನ್‌ದಯಾಳಜಿ ಅವರ ವಾದ ಹೀಗಿತ್ತು.

**"ಹೆಚ್ಚುವರಿ ಶ್ರಮವನ್ನು, ಕಮುನಿಸ್ಟ್ ವ್ಯವಸ್ಥೆಯೊಳಗೇ ಪಕ್ಷದ ಧುರೀಣರು ಶೋಷಿಸುತ್ತಿದ್ದರು."**

ಹೀಗಾಗಿ, ಅಂತಿಮ ನಿರ್ಣಯ, 'ಎಕ್ಸ್' – 'ವೈ' ಯಾರದೇ ಇರಲಿ, ವ್ಯವಸ್ಥೆಯ ಮನೋಭಾವ ಒಂದೇ ಆಗಿರುತ್ತಿತ್ತು. ಬಂಡವಾಳ ಪ್ರಧಾನ ತಂತ್ರಜ್ಞಾನವನ್ನು ಅಟ್ಟಕ್ಕೇರಿಸುವುದರಲ್ಲಿ ಯಾರು ಯಾರಿಗೂ ಕಡಿಮೆ ಇರಲಿಲ್ಲ. ಇಬ್ಬರದೂ ತದ್ವತ್ತಾದ ನಿಲುವು. ಆದ್ದರಿಂದ ಅರ್ಥಶಾಸ್ತ್ರಜ್ಞರಾಗಿ ಕಮ್ಯುನಿಸ್ಟರ ನಿಲುವಿನ ಬಗ್ಗೆ, ಉಪಾಧ್ಯಾಯರ ವಿಮರ್ಶೆ ಸ್ಪಷ್ಟವಾಗಿದೆ.

ಕೊನೆಯದಾಗಿ ನಾನು ಹೇಳಲಿರುವುದು ಪೂರ್ಣ ಉದ್ಯೋಗಾವಕಾಶಗಳ ಬಗ್ಗೆ. ಮಾನವನನ್ನು ಪರ್ಯಾಯವಾಗಿ ಬಳಸುವ ಬಗ್ಗೆ, ಅದರಿಂದ ಆಗುವ ನಷ್ಟದ ಬಗ್ಗೆ ದೀನದಯಾಳರು ಭಾವನಾತ್ಮಕ ಕಾಳಜಿಯನ್ನು ಹೊಂದಿದ್ದರು. ಅರ್ಥವ್ಯವಸ್ಥೆಯ ಧ್ಯೇಯ–ಉದ್ದೇಶಗಳನ್ನು ನಿರೂಪಿಸುತ್ತಾ ಅವರು ಕೇಳುತ್ತಾರೆ.

೧. ಪ್ರತಿಯೊಬ್ಬ ಪ್ರಜೆಗೂ ಕನಿಷ್ಠ ಮಟ್ಟದ ಬಾಳ್ವೆ ಸಾಧ್ಯವಾಗಬೇಕು. ಹಾಗೂ ಪ್ರತಿಯೊಬ್ಬ ಪ್ರಜೆಯೂ ರಾಷ್ಟ್ರದ ರಕ್ಷಣೆಗೆ ಸಿದ್ಧನಾಗಿರಬೇಕು. ಇದು ಅವರು ಸಮಾಜದಿಂದ ನಿರೀಕ್ಷಿಸುವ ಭರವಸೆ. ಇದನ್ನು ನೀವು ಸರ್ಕಾರ ಎಂದು ಕರೆಯಬಹುದು.

೨. ಮುಂದೆ ಕನಿಷ್ಠ ಜೀವನ ಮಟ್ಟವನ್ನು ಹೆಚ್ಚಿಸಿ ಇದರಿಂದಾಗಿ ವ್ಯಕ್ತಿ ಮತ್ತು ಸಮಾಜಕ್ಕೆ ಹಾಗೂ ವಿಶ್ವಕ್ಕೆ ತನ್ನ ಆತ್ಮದ ಆಧಾರದ ಮೇಲೆ ಕೊಡುಗೆ ನೀಡುವ ಸಾಧನ ಸಂಪತ್ತುಗಳನ್ನು ಗಳಿಸುವ ಸಾಮರ್ಥ್ಯ ಒದಗಿಬರಬೇಕು.

೩. ಪ್ರತಿಯೊಬ್ಬ ಸಮರ್ಥಶಾಲಿ ಪ್ರಜೆಗೂ ಅರ್ಥಪೂರ್ಣ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕು. ಇದರಿಂದಾಗಿ ಮೇಲಿನ ಉದ್ದೇಶಗಳು ಈಡೇರುತ್ತವೆ ಹಾಗೂ ಪ್ರಕೃತಿ ಸಂಪನ್ಮೂಲಗಳ ದುಂದುಗಾರಿಕೆ ತಪ್ಪುತ್ತದೆ. ಹೆಚ್ಚುವರಿ ಶಕ್ತಿ ಸಾಮರ್ಥ್ಯಗಳಿದ್ದಾಗ್ಯೂ ನಾವು ಈ ಹೆಚ್ಚುವರಿ ಸಮಸ್ಯೆಯನ್ನು ಏಕೆ ನಿಭಾಯಿಸಲಿಲ್ಲ ಪರಿಸ್ಥಿತಿಗನುಗುಣವಾದ ಸೂಕ್ತ ಯಂತ್ರವನ್ನು ರೂಪಿಸುವ ನಿಟ್ಟಿನಲ್ಲಿ ವ್ಯಕ್ತಿಯನ್ನು ಏಕೆ ಬಳಸಿಕೊಳ್ಳಲಿಲ್ಲ?

೪. ಈ ವ್ಯವಸ್ಥೆ ವ್ಯಕ್ತಿಗೆ, ಮಾನವನಿಗೆ ಸಹಾಯಕವಾಗಿ ಬೇಕು. ಮಾನವನನ್ನು ಅಲಕ್ಷಿಸಬಾರದು. ನಮ್ಮ ಜೀವನ ಮೌಲ್ಯಗಳನ್ನು ರಕ್ಷಿಸಬೇಕು. ಇದು ಅತ್ಯಗತ್ಯ. ಪ್ರಳಯದಂಥ ಸಂದರ್ಭಗಳು ಹೊರತಾಗಿ ಇದು ಅನುಲ್ಲಂಘನೀತಿಯ.

ಉದ್ದಕ್ಕೂ ದೀನದಯಾಳಜೀ "ಯಥಾಸ್ಥಿತಿ" ಮುಂದುವರಿಸುವುದರ ವಿರೋಧಿಯಾಗಿದ್ದರು. ಅಂದರೆ ಸಾಮಾಜಿಕ ಬದಲಾವಣೆಗಳನ್ನು ವಿರೋಧಿಸುವ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಸಡ್ಡುಹೊಡೆದಿದ್ದರು. ಯಥಾಸ್ಥಿತಿ ಮುಂದುವರಿಕೆ ಯಾವತ್ತೂ ಅವರ ಕಾರ್ಯಕ್ರಮವಾಗಿರಲಿಲ್ಲ. ಇದರಿಂದ ಬೇಸರಗೊಂಡಿದ್ದ ವ್ಯಕ್ತಿಗಳೂ ಇದ್ದರು. ಸಾವಿರ ವರ್ಷಗಳಷ್ಟು ಹಿಂದಕ್ಕೆ ಸರಿಯಲು ಸಿದ್ಧವಾಗಿದ್ದ ಜನರಿದ್ದರು. ಜನಸಂಘದ ಮಂದಿಯಾದ ನಾವು ಹೇಳುತ್ತೇವೆ: "ಮಿಥ್ಯೆಯಲ್ಲಿ ಮಾತ್ರ ನಾವು ಸಾವಿರ ವರ್ಷಗಳಷ್ಟು ಹಿಂದಕ್ಕೆ ಸರಿಯುತ್ತೇವೆ". ದೀನ್ ದಯಾಳ್ ಉಪಾಧ್ಯಾಯರು "ಏಕಾತ್ಮ ಮಾನವದರ್ಶನ"ದಲ್ಲಿ ಸ್ಪಷ್ಟವಾಗಿ ಹೇಳುತ್ತಾರೆ:

**"ಹಿಂದಕ್ಕೆ ಸರಿಯುವುದು, ಹಿಂದಕ್ಕೆ ಹೋಗುವುದು, ಹಿಮ್ಮುಖ ಚಲನೆ ಎನ್ನುವುದು ಒಂದು ಮೂರ್ಖತನದ ವಿಚಾರಧಾರೆ. ಸಾವಿರ ವರ್ಷಗಳಷ್ಟು ಹಿಂದಕ್ಕೆ ಹೋಗುವುದು ನಮ್ಮ ಬಯಕೆಯಲ್ಲ. ಅದು ಭೌತಿಕವಾಗಿ ಅಸಾಧ್ಯವಾದದ್ದು"**

## ದೀನ್ ದಯಾಳರ ಕ್ರಾಂತಿಕಾರಿ ಉತ್ಸಾಹ

ಯಥಾಸ್ಥಿತಿ ವಾದದ ಬಗ್ಗೆ ಉಪಾಧ್ಯಾಯರು ಹೀಗೆ ಹೇಳುತ್ತಾರೆ. "ನಾವು ಯಥಾಸ್ಥಿತಿ ಮನೋಭಾವವನ್ನು ತ್ಯಜಿಸಿ ಹೊಸಯುಗದಲ್ಲಿ ಪದಾರ್ಪಣ



ಮಾಡಬೇಕು". ಈ ಮಾತುಗಳು ನನ್ನವಲ್ಲ. ಉಪಾಧ್ಯಾಯರದು. "ಏಕಾತ್ಮ ಮಾನವದರ್ಶನ" ಗ್ರಂಥದಿಂದ ಉಲ್ಲೇಖಿಸುತ್ತಿರುವುದು. ಪುನರ್ ನಿರ್ಮಾಣದ ನಮ್ಮ ಪ್ರಯತ್ನಗಳು ಪಾರಂಪರ್ಯವಾಗಿ ನಾವು ಗಳಿಸಿರುವುದರ ಬಗ್ಗೆ ಪೂರ್ವಾಗ್ರಹ ಹೊಂದಿರುವುದು ಅಥವಾ ತಾತ್ಸಾರ ಮನೋಭಾವದಿಂದಾಗಿ ಕುಂಠಿತಗೊಳ್ಳಬಾರದು. ಜೊತೆಗೆ ನಿಷ್ಪ್ರಯೋಜಕವಾದ ಸತ್ತ್ವ ತೀರಿದ ಗತಕಾಲದ ವಿಚಾರಗಳಿಗೆ ಜೋತು ಬೀಳಬೇಕಾದ ಅಗತ್ಯವೂ ಇಲ್ಲ. ಬದಲಾವಣೆ ಯಾವ ದಿಕ್ಕಿನಲ್ಲಿ ಸಾಗಬೇಕೆಂಬುದನ್ನು ನಾವು ಪರಿಶೀಲಿಸಿದ್ದೇವೆ. ನನ್ನ ಅಭಿಪ್ರಾಯದಲ್ಲಿ ದೀನ್ ದಯಾಳ್ ಉಪಾಧ್ಯಾಯರು ಕ್ರಾಂತಿಕಾರಿಯಾಗಿದ್ದರು. ಅವರ ಗ್ರಂಥಗಳನ್ನು ಓದಿರುವವರು ನನ್ನೀ ಮಾತನ್ನು ಒಪ್ಪುವರೆಂಬ ಖಾತರಿ ನನಗಿದೆ. ಕ್ರಾಂತಿಕಾರಿ ಎಂದರೆ ಅವರು ಭುಸುಗುಡುತ್ತ ಹುಯಿಲೆಬ್ಬಿಸುವ ಕ್ರಾಂತಿಕಾರಿಯಾಗಿರಲಿಲ್ಲ. ಅವರು ಯಥಾಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸುವ ಕ್ರಾಂತಿಕಾರಿಯಾಗಿದ್ದರು. ಕೆಲವೊಂದು ಮೂಲಭೂತ ಮೌಲ್ಯಗಳ ಆಧಾರದ ಮೇಲೆ ಬದಲಾವಣೆಗಳನ್ನು ತರಬೇಕೆನ್ನುವುದು ಅವರ ನಿಲುವಾಗಿತ್ತು. ಸಾಮಾಜಿಕ ಬದಲಾವಣೆ, ವಿಕೇಂದ್ರೀಕರಣ, ಮಾನವ ಸಂಪನ್ಮೂಲಕ್ಕೆ ಹೆಚ್ಚಿನ ಮಹತ್ವ ನೀಡಿಕೆ, ಮಾನವ ಸಂಪನ್ಮೂಲ ರಚನೆ ಈ ವಿಷಯಗಳನ್ನು ಯಥಾಸ್ಥಿತಿ ವಾದದೊಂದಿಗೆ ತಳುಕುಹಾಕಿದಾಗ ಡಾ. ಆಂಡ್ರಸನ್ ಅವರು ಸೂಚಿಸಿದ ಸಂದಿಗ್ಧತೆ ಉದ್ಭವಿಸಿತೆಂದು ನನ್ನ ನಂಬಿಕೆ. ಮಾನವ ಸಂಪನ್ಮೂಲ ಬೆಳೆಸುವ ವಿಷಯದಲ್ಲಂತೂ ಶಿಕ್ಷಣ ಸರ್ಕಾರದ ಹೊಣೆಯಾಗಬೇಕಾಗುತ್ತದೆ. ವೈದ್ಯಕೀಯ ನೆರವೂ ಸಂಪೂರ್ಣವಾಗಿ ಸರ್ಕಾರದ ಜವಾಬ್ದಾರಿಯಾಗಬೇಕೆಂದು ಉಪಾಧ್ಯಾಯರು ಆಗ್ರಹಪಡಿಸಿದ್ದರು. ರಾಷ್ಟ್ರ ಕಂಡುಕೊಂಡಿರುವ ಮಾನವ ಬಂಡವಾಳ ಸಮಾಜ ಸಂಪಾದಿಸಿದ್ದು. ಇದನ್ನು ಅರ್ಥಶಾಸ್ತ್ರದಲ್ಲಿ ಇತ್ಯಾತ್ಮಕ ಬಾಹ್ಯ ವಸ್ತುವೆಂದು ಪರಿಗಣಿಸಲಾಗುತ್ತದೆ. ಸಮಾಜ ನನ್ನನ್ನು ವಿದ್ಯಾವಂತನನ್ನಾಗಿ ಮಾಡಿದಾಗ, ನನಗೆ ಮಾತ್ರ ಲಾಭವಾಗುವುದಿಲ್ಲ. ವಿದ್ಯೆಯಿಂದ ನನಗೆ ಮಾತ್ರ ಪ್ರಯೋಜನವಾಗುವುದಿಲ್ಲ, ಸಮಾಜಕ್ಕೂ ಪ್ರಯೋಜನವಾಗುತ್ತದೆ. ಹೀಗಾಗಿ ನನ್ನ ಶಿಕ್ಷಣಕ್ಕೆ ಸಮಾಜ ಹೊಣೆ, ನನ್ನನ್ನು ವಿದ್ಯಾವಂತನನ್ನಾಗಿ, ಆರೋಗ್ಯವಂತನನ್ನಾಗಿ ಮಾಡಿದ್ದು ಸಮಾಜ. ನನಗೆ ಮತ್ತು ಎಲ್ಲ ದೃಢಕಾಯರಿಗೆ ಉದ್ಯೋಗಾವಕಾಶಗಳನ್ನು ದೊರೆಯುವಂತೆ ಮಾಡಿದ್ದು ಸಮಾಜ. ಹೀಗಾಗಿ, ಯಥಾಸ್ಥಿತಿ ಮುಂದುವರಿಸಬೇಕೆಂದು ವಾದಿಸುವ ಒಂದು ಸಣ್ಣ ಗುಂಪಿನ ಬಗ್ಗೆ ನಾವು ವೃಥಾ ತಲೆಕೆಡಿಸಿಕೊಳ್ಳುತ್ತಿದ್ದೇವೆ. ಈ ಸಣ್ಣಗುಂಪು ಕೆಲವೊಂದು ಪಟ್ಟಭದ್ರ ಹಿತಗಳ ಗುಂಪು. ಡಾ. ಆಂಡ್ರಸನ್ ಅವರು ಸಾಮಾಜಿಕ ಪರಿವರ್ತನೆ ಕುರಿತ ತಮ್ಮ ಪ್ರಬಂಧದಲ್ಲಿ ಹೇಳಿರುವಂತೆ ಈ ಸಣ್ಣ ಗುಂಪಿನ ಬಗ್ಗೆ ಗೋಡೆಗೆ ತಲೆ ಚಚ್ಚಿಕೊಳ್ಳುತ್ತಿದ್ದೇವೆ. ಈ ವಿಷಯದಲ್ಲಿ ದೀನ್ ದಯಾಳರ ಅಭಿಪ್ರಾಯ ಸ್ಪಷ್ಟವಿತ್ತು. ಬದಲಾವಣೆಯಿಂದ ಅವರು ಹಿಂದೆ ಸರಿದವರೇ ಅಲ್ಲ. ಸಣ್ಣ–ಪುಟ್ಟ

ಅಪಸ್ವರಗಳ ಸಲುವಾಗಿ ಯಥಾಸ್ಥಿತಿಯಲ್ಲೇ ಮುಂದುವರಿಯುವುದು ಕೈಕಟ್ಟಿ ಕೂರುವುದು ಸಾಧ್ಯವೇ ಇಲ್ಲ ಎಂದು ಅವರು ಸ್ಪಷ್ಟವಾಗಿ ತಿಳಿಸಿದ್ದರು. ಈ ಅರ್ಥದಲ್ಲಿ "ತುರ್ತುಪರಿಸ್ಥಿತಿ"ಯನ್ನು ನಾವು ಪರೀಕ್ಷೆಗೊಳಪಡಿಸಬಹುದೆಂದು ನನಗೆ ತೋಚುತ್ತದೆ. ದೀನ್ ದಯಾಳರು ಮಾನವ, ಆರ್ಥಿಕ ಸಂರಚನೆಯ ಕೇಂದ್ರಬಿಂದು ಎಂದು ಅವರು ಒತ್ತಿಹೇಳುತ್ತಿದ್ದರು. ನಮ್ಮ ಮಹಾನ್ ನಾಯಕರುಗಳು ಸಾಧಿಸಿರುವುದಕ್ಕಿಂತ ಮಿಗಿಲಾದ ಕ್ರಾಂತಿಕಾರಿ ಕಾರ್ಯಕ್ರಮವೊಂದನ್ನು ಅವರು ರೂಪಿಸುತ್ತಿದ್ದರು ಎಂದು ನನಗೆ ಅನ್ನಿಸುತ್ತದೆ. ಅವರ ಚಿಂತನೆಯಲ್ಲಿ ಸ್ಪಷ್ಟತೆ ಇದ್ದುದ್ದೇ ಅವರಿಂದ ಕ್ರಾಂತಿಕಾರಿ ಕಾರ್ಯಕ್ರಮ ಸಾಧ್ಯವಾಗುತ್ತಿತ್ತು ಎನ್ನುವುದಕ್ಕೆ ಕಾರಣ. ಗಣಿತಶಾಸ್ತ್ರಜ್ಞರಾಗಿದ್ದುದರಿಂದ ಅವರು ತಮ್ಮ ಕಾಲದ ಅರ್ಥಶಾಸ್ತ್ರಜ್ಞರ ಜೊತೆ ಸುಲಭವಾಗಿ ಚರ್ಚಿಸುವುದು, ವಿಚಾರವಿನಿಮಯ ಮಾಡಿಕೊಳ್ಳುವುದು ಸಾಧ್ಯವಿತ್ತು. ನಾವು ದೀರ್ಘಕಾಲದ ನಂತರವೂ ಮರು ಪರಿಶೀಲಿಸಬಹುದಾದಂಥ ಕ್ರಾಂತಿಕಾರಿ ಕಾರ್ಯಕ್ರಮವೊಂದನ್ನು ರೂಪಿಸುವುದರಲ್ಲಿ ದೀನ್ ದಯಾಳ್ ಉಪಾಧ್ಯಾಯರು ಸಮರ್ಥರಿದ್ದರು ಎನ್ನುವ ಮಾತುಗಳೊಂದಿಗೆ ನನ್ನ ಉಪನ್ಯಾಸವನ್ನು ಸಮಾಪ್ತಿಗೊಳಿಸಲಿಚ್ಛಿಸುತ್ತೇನೆ.



### ಭಾಗ ೩

# ಸಾಂದರ್ಭಿಕ ಪ್ರಕ್ರಿಯೆ ಮತ್ತು ತೌಲನಿಕ ಅಧ್ಯಯನ

* ಮಹೇಶ್ ಶರ್ಮಾ
* ಬಿ.ಕೆ. ಕೇಳ್ಕರ್
* ವಾಲ್ಟರ್ ಆಂಡರ್‌ಸನ್
* ಕೆ. ಪಿ. ಸಿಂಗ್
* ಡಿ.ಬಿ. ಠೇಂಗಡಿ
* ಅಶೋಕ ಮೋದಕ್
* ಜನಾ ಕೃಷ್ಣಮೂರ್ತಿ

**BLANK PAGE**



# ೧೦. ಭಾರತೀಯ ಚಿಂತನಶೀಲ ಪರಂಪರೆಯ ಮುಂದುವರಿಕೆ

**ಡಾ. ಮಹೇಶ ಚಂದ್ರ ಶರ್ಮಾ**

ದೀನ್ ದಯಾಳ್ ಉಪಾಧ್ಯಾಯರು ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ಮಹಾನ್ ರಾಜಕೀಯ ಚಿಂತಕರಾಗಿ ಆವಿರ್ಭವಿಸಿದರು. ಆಗ ಪ್ರಪಂಚದಲ್ಲಿ ಹಲವಾರು ಸಿದ್ಧಾಂತಗಳು ಓಲಾಡುತ್ತಿದ್ದವು. ಹದಿನಾರನೆಯ ಶತಮಾನದ ನವೋದಯ ಪ್ರಪಂಚ ಹರಿಬಿಟ್ಟ ವಿಚಾರಗಳು ಹೊಸ ಆಯಾಮವೊಂದನ್ನು ಸೃಷ್ಟಿಸಿದ್ದವು. ದೃಗ್ಗೋಚರ ಪ್ರಪಂಚ ಒಂದು ಬಿಡಿಸಲಾಗದ ನಿಗೂಢ ಎನ್ನುವ ಚಿಂತನೆ ಕೊನೆಗೊಂಡಿತ್ತು. ಸಾಹಸ ಪ್ರವೃತ್ತಿಯ ವ್ಯಕ್ತಿಗಳು ವಿಶ್ವದ ಸುತ್ತ ಪರ್ಯಟನ ಕೈಗೊಂಡಿದ್ದರು. ವಿಜ್ಞಾನ, ಐಹಿಕತೆ ಮತ್ತು ಮಾನವತಾವಾದಗಳು ವಿಶ್ವದ ಮತಧರ್ಮ ಶಾಸ್ತ್ರದ ಅಭಿಪ್ರಾಯಗಳಿಗೆ ಸಡ್ಡು ಹೊಡೆದು ನಿಂತಿದ್ದವು. ವೈಚಾರಿಕತೆ ನಂಬಿಕೆಯನ್ನು ಅಂದೆ ಸರಿಸಿ ಮೇಲುಗೈ ಸಾಧಿಸಿತು. ಮಾನವ ದೈವಾನುಗ್ರಹದ ರಕ್ಷಾಕವಚವನ್ನು ದೂರಸರಿಸಿದ್ದ. ಜಾತ್ಯತೀತತೆ, ಪ್ರಜಾಪ್ರಭುತ್ವ ಮತ್ತು ವ್ಯಕ್ತಿಯ ಅಸ್ಮಿತೆಗಳು ಪಾರಮ್ಯ ಸಾಧಿಸಿ ಪುರೋಹಿತಶಾಹಿಗೆ ಸವಾಲಾಗಿ ನಿಂತಿದ್ದವು. ಅದು ಯೂರೋಪಿನ ಹೊಸ ಅವತಾರವಾಗಿತ್ತು.

ದೈವ ಭೀತಿಯಿಂದ ಮುಕ್ತನಾದ ಮಾನವ ಪ್ರಕೃತಿ ಮತ್ತು ವಿಶ್ವದ ಮೇಲೆ ವಿಕ್ರಮ ಸಾಧಿಸುವ ನಿಟ್ಟಿನಲ್ಲಿ ಹೆಜ್ಜೆ ಇಡಲಾರಂಭಿಸಿದ್ದ. ಹೊಸದಾಗಿ ಕಂಡುಹಿಡಿಯಲಾದ ಪ್ರದೇಶಗಳಲ್ಲಿ ಐರೋಪ್ಯ ವಸಾಹತುಗಳನ್ನು ಸ್ಥಾಪಿಸಲಾಯಿತು. ಈ ವಸಾಹತುಗಳು ಅದಮ್ಯರಾಷ್ಟ್ರೀಯ ಭಾವನೆಯಿಂದ ಪ್ರೇರಿತವಾದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಕ್ಕೆ ಸಾಕ್ಷಿಗಳಾದವು.

ಪಾಶ್ಚಾತ್ಯ ಸಾಮ್ರಾಜ್ಯಶಾಹಿ ಹರಡಿದಂತೆ ಪಶ್ಚಿಮದ ಜ್ಞಾನ ಮತ್ತು ವಿಜ್ಞಾನಗಳು ಏಷ್ಯಾ ಮತ್ತು ಆಫ್ರಿಕಾ ಭೂಖಂಡಗಳನ್ನು ತಲುಪಿದವು. ಪಾಶ್ಚಿಮಾತ್ಯ ಸಂಪರ್ಕ ಏಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳಲ್ಲಿ ನಿರ್ಣಾಯಕ ಪ್ರಭಾವವನ್ನು ಬೀರಿದವು. ಆದರೆ ಏಷ್ಯಾದ ರಾಷ್ಟ್ರೀಯ ಮನೋಭಾವ ಪಶ್ಚಿಮದ ಸೈದ್ಧಾಂತಿಕ ಪಾರಮ್ಯವನ್ನು ತಿರಸ್ಕರಿಸಿತು. ಇದನ್ನು ತಮ್ಮ ಅಪೂರ್ವವಾದ ಗುಣವಿಶೇಷಗಳಿಗೆ ಮತ್ತು ಮೇಧಾವಿತನಕ್ಕೆ ಅವಮಾನವೆಂದೇ ಭಾವಿಸಿದವು. ಹೀಗೆ ಈ ರಾಷ್ಟ್ರಗಳು ಪಶ್ಚಿಮದ

ಪ್ರಭಾವವನ್ನು, ಸಿದ್ಧಾಂತಗಳನ್ನು ನಿರಾಕರಿಸಿದವು. ಭಾರತದಲ್ಲಿದ್ದ ಈ ಬಗೆಯ ರಾಷ್ಟ್ರೀಯ ಚಿಂತನಕ್ರಮದ ಕೂಸು ದೀನದಯಾಳ್ ಉಪಾಧ್ಯಾಯರು.

**ಭಾರತೀಯ ಪುನರ್ ಜಾಗೃತಿ**

ರಾಜಾರಾಮ್ ಮೋಹನ ರಾಯ್ ಭಾರತೀಯ ನವೋದಯದ ನಾಯಕರು ಎನ್ನುವುದು ಸಾಮಾನ್ಯವಾಗಿರುವ ನಂಬಿಕೆ. ಬ್ರಹ್ಮೋ ಸಮಾಜ, ಆರ್ಯಸಮಾಜ, ಪ್ರಾರ್ಥನಾ ಸಮಾಜ, ರಾಮಕೃಷ್ಣ ಮಿಷನ್ ಮೊದಲಾದ ಚಳವಳಿಗಳು ಈ ನವೋದಯದ ಮುಂಚೂಣಿಯಲ್ಲಿದ್ದವು. ಸ್ವಾಮಿ ದಯಾನಂದ, ರಾಮತೀರ್ಥ ಮತ್ತು ಶ್ರೀರಾಮಕೃಷ್ಣ ಪರಮಹಂಸರು ಭಾರತೀಯ ಸಮಾಜವನ್ನು ಜಡತ್ವದಿಂದ ಬಡಿದೆಬ್ಬಿಸಿ ಆತ್ಮಜ್ಞಾನದ ಜಾಗೃತಿಯನ್ನು ಮೂಡಿಸಿದ ಮಹರ್ಷಿಗಳು. ಆ ಕಾಲದ ದೊಡ್ಡದೊಡ್ಡ ಸಮಾಜ ಸುಧಾರಕರೂ ತಾವು ಪಡೆದ ಇಂಗ್ಲಿಷ್ ಶಿಕ್ಷಣದಿಂದ ತುಂಬ ಪ್ರಭಾವಿತರಾಗಿದ್ದರು. ಈ ಪುನರ್ ಜಾಗೃತಿಯಿಂದ ಹುಟ್ಟಿಕೊಂಡ ರಾಜಕೀಯ ಚಳವಳಿಯಲ್ಲಿ ಶುರುವಿನಿಂದಲೇ ಒಡಕುಂಟಾಗಿತ್ತು. ಅದರೊಂದಿಗಿನ ಎಲ್ಲ ಪ್ರಭಾವಗಳ ಸಮೇತ ತಿರಸ್ಕರಿಸಿತ್ತು. ಆದರೆ ಇನ್ನೊಂದು ವರ್ಗ ಬ್ರಿಟಿಷ್ ಆಳ್ವಿಕೆಯನ್ನು ತಿರಸ್ಕರಿಸಿ ಅದರ ಸೈದ್ಧಾಂತಿಕ ವಿಚಾರಗಳನ್ನು ಸ್ವೀಕರಿಸಿತ್ತು.

ಲೋಕಮಾನ್ಯ ತಿಲಕರು ಮತ್ತು ಮಹರ್ಷಿ ಅರವಿಂದರು ಮೊದಲ ವರ್ಗದ ಪ್ರಧಾನ ವಕ್ತಾರರಾಗಿದ್ದರು. ಅವರು ಸ್ಥಳೀಯ ಜ್ಞಾನ-ವಿವೇಕ ಮತ್ತು ಜೀವನ ಶೈಲಿಯ ಶ್ರೇಷ್ಠತೆ, ಹಿರಿಮೆಗಳನ್ನು ಒತ್ತಿ ಹೇಳುತ್ತಿದ್ದರು. ಅವರು "ಪುನಶ್ಚ ಹರಿವು" ಮತ್ತು "ವೈದಾಂತಿಕ ಸ್ವರಾಜ್ಯ" ಬಗ್ಗೆ ಮತ್ತೆ ಮತ್ತೆ ಪ್ರಸ್ತಾಪಿಸುತ್ತಿದ್ದರು. ಅವರ ಪ್ರಕಾರ ಭಾರತೀಯ ಬೌದ್ಧಿಕ ಪರಂಪರೆ ಯೂರೋಪಿನ ಚಿಂತನಕ್ರಮಕ್ಕೆ ಅಡಿಪಾಯವಾಗಿದ್ದ ಗ್ರೀಕ್ ಬೌದ್ಧಿಕ ಪರಂಪರೆಗೆ ಸರಿಗೈ ಆಗಿತ್ತು. ಬೌದ್ಧಿಕ ಸ್ವಾತಂತ್ರ್ಯ ಕುರಿತ ಈ ಆಗ್ರಹ "ಸ್ವರಾಜ್ಯ ನಮ್ಮ ಜನ್ಮಸಿದ್ಧಹಕ್ಕು" ಎನ್ನುವ ಜನಜನಿತ ಘೋಷಣೆಯಲ್ಲಿ ಅಂತರ್ಗತವಾಗಿತ್ತು. ಈ ಮಹನೀಯರು ಭಾರತೀಯ ವಿವೇಕ, ಬುದ್ಧಿಮತ್ತೆಗಳ ಬಗ್ಗೆ ಮಾತನಾಡಿದಾಗಲೆಲ್ಲ ಅವರು ಸಂದೇಹಾತೀತವಾಗಿ ಹಿಂದೂ ತಾತ್ವಿಕ ಪರಂಪರೆ ಮತ್ತು ಮೌಲ್ಯಗಳನ್ನು ಧ್ವನಿಸುತ್ತಿದ್ದರು. ತಿಲಕರ ಅಚ್ಚಿನಲ್ಲಿ ರೂಪುಗೊಂಡ ಸ್ವಾತಂತ್ರ್ಯ ಹೋರಾಟಗಾರರೆಲ್ಲರೂ ಈ ರಾಷ್ಟ್ರೀಯ ಮನೋಭಾವ ವರ್ಗದ ಕಟ್ಟಾ ಅನುಯಾಯಿಗಳಾಗಿದ್ದರು.

ದಾದಾಭಾಯಿ ನವರೋಜಿ ಮತ್ತು ಗೋಪಾಲಕೃಷ್ಣ ಗೋಖಲೆಯಂಥವರು ಬ್ರಿಟಿಷ್ ಆಳ್ವಿಕೆ ಒಂದು ವರವೆಂದೂ ಪಾಶ್ಚಿಮಾತ್ಯ ಜ್ಞಾನ-ವಿಜ್ಞಾನಗಳು ಮನುಕುಲದ ಮಹಾನ್‌ಸಾಧನೆಗಳೆಂದು ಭಾವಿಸಿದ್ದರು. ಇವರುಗಳು ನಿಶ್ಚಿತವಾಗಿಯೂ ಸ್ವಾತಂತ್ರ್ಯ-ಸ್ವರಾಜ್ಯಗಳ ಪರವಾಗಿದ್ದರು. ಆದರೆ ಸ್ವರಾಜ್ಯ ಪಾಶ್ಚಾತ್ಯ ಪದ್ಧತಿಗಳ



ಆಧರಿಸಿರಬೇಕೆಂಬುದು ಇವರ ನಿಲುವಾಗಿತ್ತು. "ಭಾರತದಲ್ಲಿ ಬ್ರಿಟಿಷ್ ರಹಿತ ಆಳ್ವಿಕೆ" ಎನ್ನುವ ಗ್ರಂಥದಲ್ಲಿ ದಾದಾಭಾಯಿ ನವರೋಜಿಯವರು ತಮ್ಮೀ ವಿಚಾರಗಳನ್ನು ನಿರೂಪಿಸಿದ್ದಾರೆ. ಬ್ರಿಟಿಷ್ ಪಾರ್ಲಿಮೆಂಟರಿ ಮಾದರಿಯಲ್ಲಿ ಭಾರತೀಯರ ಆಳ್ವಿಕೆಯ ಭಾರತ ಅವರ ಅಪೇಕ್ಷೆಯಾಗಿತ್ತು. ಗೋಖಲೆ ಮತ್ತು ನವರೋಜಿಯಂಥವರು ಸ್ವದೇಶಿ-ವಿದೇಶಿ ಮಾನದಂಡದಿಂದ ಪಾಶ್ಚಿಮಾತ್ಯ ಜ್ಞಾನದ ಮೌಲ್ಯಮಾಪನ ಮಾಡಲಿಲ್ಲ. ಅವರು ಅದನ್ನು ಆಧುನಿಕ ಎನ್ನುವ ಮಾನದಂಡದಿಂದ ಅಳೆದು ನೋಡಿದರು. ಭಾರತ ಮತ್ತು ಪಾಶ್ಚಿಮಾತ್ಯ ತತ್ತ್ವಸಿದ್ಧಾಂತಗಳ ಮಿಶ್ರಪಾಕ ಅವರ ಅಪೇಕ್ಷೆಯಾಗಿತ್ತು.

ದೀನ್ ದಯಾಳ್ ಉಪಾಧ್ಯಾಯರು ತಿಲಕರ ವಿಚಾರಧಾರೆಯಿಂದ ಪ್ರಭಾವಿತರಾದವರು. ಆರ್.ಎಸ್.ಎಸ್. ಸಂಸ್ಥಾಪಕರಾದ ಡಾ. ಕೇಶವ ಬಲಿರಾಂ ಹೆಡ್ಗೇವಾರ್ ಅವರೂ ತಿಲಕ್ ಸಂಪ್ರದಾಯದ ಕಾಂಗ್ರೆಸ್ಸಿಗರಾಗಿದ್ದರು. ತಿಲಕರು ನಿಧನರಾದಾಗ, ಅರವಿಂದರು ರಾಷ್ಟ್ರೀಯ ಆಂದೋಲನದ ನಾಯಕತ್ವ ವಹಿಸಿಕೊಳ್ಳಬೇಕೆಂಬುದು ಹೆಡ್ಗೇವಾರ್ ಅವರ ಅಭಿಮತವಾಗಿತ್ತು. ಅರವಿಂದರು ಇದಕ್ಕೆ ಸಮ್ಮತಿಸಲಿಲ್ಲ. ಮಹಾತ್ಮಗಾಂಧಿಯವರ ರಾಜಕಾರಣ ಗೋಖಲೆಯವರ ಚಿಂತನ ಲಹರಿಗನುಗುಣವಾಗಿತ್ತು. ರಾಜಕೀಯ ಗೊತ್ತುಗುರಿಗಳಲ್ಲಿ ಗಾಂಧಿಯವರ ರಾಜಕಾರಣ ಗೋಖಲೆಯವರ ಚಿಂತನೆಗೆ ಹತ್ತಿರವಾಗಿತ್ತೆಂದು ಕೆಲವರು ಹೇಳುತ್ತಾರೆ. ಆದರೆ ಈ ಗುರಿಸಾಧಿಸಲು ಹಿಡಿದದ್ದು ತಿಲಕರ ಹಾದಿಯನ್ನೇ. ಡಾ. ಹೆಡ್ಗೇವಾರ್ ಅವರು ಗಾಂಧಿ ಮತ್ತು ಗೋಖಲೆ ಇವರಿಬ್ಬರನ್ನೂ ತೊರೆದು ಹಿಂದೂ ರಾಷ್ಟ್ರದ ಪುನರುಜ್ಜೀವನಕ್ಕಾಗಿ ಆರ್.ಎಸ್.ಎಸ್. ಸ್ಥಾಪಿಸಿದರು. ರಾಜಕೀಯದಲ್ಲಿ ದೀನದಯಾಳ್ ಉಪಾಧ್ಯಾಯರು ಆರ್.ಎಸ್.ಎಸ್.ನ ಹಿಂದೂ ರಾಷ್ಟ್ರೀಯತೆಯ ಪ್ರತಿನಿಧಿಯಾಗಿದ್ದರು ಹಾಗೂ ಭಾರತೀಯ ಸಂಸ್ಕೃತಿಯ ಪಾವಿತ್ರ್ಯ, ಪರಿಶುದ್ಧತೆ ಮತ್ತು ಶಕ್ತಿಯನ್ನು ನಂಬಿದ್ದರು. ದೀನ್ ದಯಾಳ್ ಉಪಾಧ್ಯಾಯರ ರಾಜಕೀಯ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳಲು ನಾವು ಸವಿವರವಾಗಿ ಭಾರತೀಯ ಸಾಂಸ್ಕೃತಿಕ ಪರಂಪರೆಯ ಪರಿಚಯಮಾಡಿಕೊಳ್ಳಬೇಕಾದ್ದು ಅತ್ಯಗತ್ಯ.

**ಸೈದ್ಧಾಂತಿಕ ಪರಂಪರೆ**

"ವಾದೇವಾದೇ ಜಾಯತೇ ತತ್ವಬೋಧಃ" – ಇದು ಭಾರತೀಯ ತತ್ತ್ವಶಾಸ್ತ್ರ ಪರಂಪರೆಯ ಮೂಲಾಧಾರ. ಚರ್ಚೆ, ವಿಚಾರ ವಿನಿಮಯಗಳೇ ಜ್ಞಾನದ ಮಾರ್ಗ ಎನ್ನುತ್ತವೆ ಭಾರತದ ತತ್ತ್ವಸಿದ್ಧಾಂತಗಳು. ವೇದಗಳು, ಉಪನಿಷತ್ತುಗಳು, ರಾಮಾಯಣ, ಮಹಾಭಾರತ... ಇವುಗಳಿಂದ ಹೊರಹೊಮ್ಮಿದ ಆರ್ಯಧರ್ಮವೇ ಬರಬರುತ್ತಾ ಹಿಂದೂ ಧರ್ಮ ಎನ್ನಿಸಿಕೊಂಡಿತು. ಈ ಸನಾತನ ಧರ್ಮ ಯಾವತ್ತೂ ಒಂದು

ಸಾಂಸ್ಥಿಕ ಜಾತಿ ಮತವಾಗಿರಲಿಲ್ಲ. ಹೀಗಾಗಿ ಋಷಿಮುನಿಗಳು, ತತ್ತ್ವಶಾಸ್ತ್ರಜ್ಞರು ಹಿಂದೂ ತತ್ತ್ವ ಸಿದ್ಧಾಂತಗಳಿಗೆ ತಮ್ಮ ಚಿಂತನೆಗಳನ್ನು ಧಾರೆ ಎರೆದರು. ಈ ವಿಸ್ತೃತ ಪ್ರಕ್ರಿಯೆ ವಿಭಿನ್ನ ತಾತ್ವಿಕ ಚಿಂತನೆಗಳಿಗೆಡೆ ಮಾಡಿಕೊಟ್ಟಿತು. ತಾತ್ತ್ವಿಕ ಪರಂಪರೆಯ ಮುಖ್ಯವಾಹಿನಿಯನ್ನು ಆಸ್ತಿಕ ಮತ್ತು ನಾಸ್ತಿಕ ಎಂದು ಎರಡಾಗಿ ವಿಂಗಡಿಸಬಹುದು. ಮೂರು ಕವಲು ಪಂಥಗಳು ನಿರೀಶ್ವರ ವಾದಿಯನ್ನು ಪ್ರತಿನಿಧಿಸುತ್ತವೆ... ಲೋಕಾಯತ, ಬೌದ್ಧ ಹಾಗೂ ಜೈನ ಸಿದ್ಧಾಂತಗಳು. ಈಶ್ವರವಾದಿಗಳಲ್ಲಿ ಆರು ಬಗೆಯ ಸೈದ್ಧಾಂತಿಕ ಪಂಥಗಳಿವೆ.

ಈ ವಿಂಗಡಣೆಗೆ ಮುಖ್ಯ ಆಧಾರವನ್ನೂ ವೇದಗಳೇ ಒದಗಿಸುತ್ತವೆ. ಆಸ್ತಿಕರು ವೇದವೇ ಪಾರಮ್ಯ ಎಂದೂ ನಿರ್ಧರಿಸಿದ್ದರು. ಆದರೆ ನಾಸ್ತಿಕರು ಈ ಸಂಪ್ರದಾಯವನ್ನು ತಿರಸ್ಕರಿಸಿದರು. ಮಹರ್ಷಿ ಚಾರ್ವಾಕ ನಿರೀಶ್ವರವಾದಿ ಪಂಥದ ಪ್ರಥಮ ಪ್ರತಿಪಾದಕ. ಚಾರ್ವಾಕನ ಪ್ರಕಾರ, ಕರ್ಮ ನರಕದ ಭೀತಿಯಿಂದಾಗಲೀ ಅಥವಾ ಪುನರ್‌ಜನ್ಮದ ಪರಿಣಾಮಗಳಿಂದಾಗಲೀ ಉದ್ಭೂತವಾಗತಕ್ಕದ್ದಲ್ಲ ಅಥವಾ ಪುನರ್ ಜನ್ಮದಲ್ಲಿ ಸ್ವರ್ಗ ಪ್ರಾಪ್ತಿಯಾಗುತ್ತದೆ ಎನ್ನುವ ಆಸೆಯಿಂದಲೂ ಕರ್ಮ ಮಾಡುವ ಬಯಕೆ ಹುಟ್ಟಬಾರದು:

**ಯಾವತ್ ಜೀವೇತ ಸುಖಜೀವೇತ್**
**ಋಣಂ ಕೃತ್ವಾ ಘೃತಂ ಪಿಬೇತ್**
**ಭಸ್ಮೀ ಭೂತಸ್ಯ ದೇಹಸ್ಯ**
**ಪುನರಾಗಮನಂ ನ ಕುತ**

ಸುಖಸಂತೋಷಗಳಿಂದ ಜೀವಿತಾವಧಿಯವರೆಗೂ ಬಾಳ್ವೆಮಾಡಿ, ಸಾಲಮಾಡಿ, ತುಪ್ಪದ ಅನ್ನ ತಿಂದು ತೇಗಿ, ದೇಹವನ್ನು ಅಗ್ನಿಗೆ ಅರ್ಪಿಸಿದ ನಂತರ ಪುನರ್ ಜನ್ಮ ಎನ್ನುವುದು ಇಲ್ಲ.

ವೇದಗಳು ಹೇಳುವುದೇ ಆಖೈರು ನಿರ್ಣಯ ಎನ್ನುವುದನ್ನು ಬೌದ್ಧ ಹಾಗೂ ಜೈನ ಧರ್ಮಗಳು ನಿರಾಕರಿಸಿದವು. ಆದರೆ ಇವು ಐಹಿಕವಾಗಲಿಲ್ಲ, ಆಧ್ಯಾತ್ಮಿಕವಾದವು. ಅವು ದೈವವಿರೋಧಿ, ಆದರೆ "ನಿರ್ವಾಣ"ದಲ್ಲಿ ನಂಬಿಕೆ ಇದೆ. ವಾಸ್ತವವಾಗಿ ಭಗವಾನ್ ಬುದ್ಧ ವೈದಿಕ ಆಚರಣೆಗಳಲ್ಲಿನ ತರ್ಕದ ವಿರುದ್ಧ ದನಿ ಎತ್ತಿದ. ಸತ್ಯಾನುಭವದ ಅಂಗೀಕಾರಾರ್ಹತೆಯನ್ನು ಎತ್ತಿಹಿಡಿದ. ಬುದ್ಧ ನಾಲ್ಕು ಸತ್ಯಗಳನ್ನು ಸ್ಪಷ್ಟೀಕರಿಸಿದ. ಈ ನಾಲ್ಕು ಚಿರಂತನ ಸತ್ಯಗಳ ಮುಖೇನ ಬೌದ್ಧಧರ್ಮ ಹರಡಿತು. ಕಾಲ ಕಳೆದಂತೆ ಶಂಕರಾಚಾರ್ಯರು ಬೌದ್ಧ ತತ್ತ್ವ ಸಿದ್ಧಾಂತಗಳನ್ನು ವೈದಿಕ ಚಿಂತನೆಗಳೊಂದಿಗೆ ಸಮೀಕರಿಸಿ ಬುದ್ಧನನ್ನು ವಿಷ್ಣುವಿನ ಅವತಾರವೆಂದು ಘೋಷಿಸಿದರು:



**ನಿಂದಸಿ ಯಜ್ಞ ವಿಧೇರಹಹ ಶ್ರುತಿಜಾತಂ**
**ಸದಯ ಹೃದಯ ದರ್ಶಿತಪಶುಘಾತಂ**
**ಕೇಶವ ಧೃತ ಬುದ್ಧಶರೀರಂ ಜಯ ಜಗದೀಶ ಹರೇ**

*(ಜಯದೇವನ ಗೀತಗೋವಿಂದ)*

ಜೈನಧರ್ಮ ಸಂಸ್ಥಾಪಕರಾದ ಭಗವಾನ್ ಮಹಾವೀರರೂ ವೇದಗಳನ್ನು ಪ್ರಶ್ನಿಸುತ್ತಾರೆ. ಜೈನರು ಶ್ರಮಣ ಸಂಪ್ರದಾಯವನ್ನು ಬ್ರಾಹ್ಮಣ ಸಂಪ್ರದಾಯಕ್ಕೆ ಸಮಾನಾಂತರವಾದುದೆಂದು ಭಾವಿಸುತ್ತಾರೆ. ಅವರ ಪ್ರಕಾರ ಭಗವಾನ್ ಮಹಾವೀರನೇ ಆದಿಪುರುಷ.

ಜೈನಧರ್ಮದ ನಂಬಿಕೆಯಂತೆ ಅನಂತಕಾಲದ ನಂತರ ಭಗವಾನ್ ಮಹಾವೀರನೇ ಪ್ರಭು. ಕೃಷಿ, ವಾಣಿಜ್ಯ, ಆಡಳಿತ, ಕೈಗಾರಿಕೆ, ಶಿಲ್ಪ ಇತ್ಯಾದಿ ಆರು ಪಟ್ಟು ಮಾರ್ಗಗಳ ಮೂಲಕ ಬದುಕನ್ನು ನಿರ್ವಹಿಸುವಂತೆ ಭಾರತೀಯರಿಗೆ ಉಪದೇಶಿಸಿದವನು ಭಗವಾನ್ ಮಹಾವೀರ ಎನ್ನುತ್ತಾರೆ ಜೈನರು.

ಜೈನಧರ್ಮ ಆತ್ಮೋದ್ಧಾರ ಮತ್ತು ಪುನರ್ಜನ್ಮಗಳಲ್ಲೂ ನಂಬಿಕೆ ಹೊಂದಿದೆ. ಜೈನಧರ್ಮವನ್ನು ವೇದವಿರೋಧಿ ಎಂದು ಪರಿಗಣಿಸಲಾಗಿತ್ತು. ಅದು ವೈದಿಕ ಆಚರಣೆಗಳಲ್ಲಿ ಅಂತರ್ಗತವಾಗಿರುವ ಡಂಭಾಚಾರ ಮತ್ತು ಹಿಂಸಾಚಾರಗಳ ವಿರುದ್ಧ ಜೈನಧರ್ಮ ದನಿ ಎತ್ತಿತು. ವೇದವಿರೋಧಿ ಎನ್ನಲು ಇದೇ ಕಾರಣವಿರಬೇಕು "ಸ್ಯಾದ್ವಾದ" ಜೈನರ ಮತ್ತು ಅನೇಕಾಂತದರ್ಶನ ಜೈನಧರ್ಮವನ್ನು ಹಿಂದೂ ತತ್ತ್ವಸಿದ್ಧಾಂತಗಳ ಪರಂಪರೆಯೊಂದಿಗೆ ಸಮನ್ವಯಗೊಳಿಸುತ್ತದೆ.

ಈಶ್ವರವಾದಿ ಪರಂಪರೆಯನ್ನು ಪ್ರಮುಖವಾಗಿ ಆರು ಪಂಥಗಳು ಪ್ರತಿನಿಧಿಸುತ್ತಿದ್ದವು. ಅವು: ವೈಶೇಷಿಕ, ನ್ಯಾಯ, ಸಾಂಖ್ಯ, ಯೋಗ, ಪೂರ್ವಮೀಮಾಂಸೆ ಮತ್ತು ಉತ್ತರ ಮೀಮಾಂಸೆ. ಮಹರ್ಷಿಗಳಾದ ಕಣಾದ, ಗೌತಮ, ಕಪಿಲ, ಪತಂಜಲಿ, ಜೈಮಿನಿ ಮತ್ತು ವ್ಯಾಸ ಈ ಪಂಥಗಳ ವ್ಯಾಖ್ಯಾನಕಾರರು.

ನಮ್ಮ ವೇದ ಸಾಹಿತ್ಯದಲ್ಲಿ ಪ್ರಸ್ತಾಪಿಸಲಾಗಿರುವ ಜೀವ, ಜಗತ್, ಆತ್ಮ ಮತ್ತು ಪರಮಾತ್ಮ ಇವುಗಳಿಗೆ ಆಧಾರವಾದ ಮೂಲಾಂಶಗಳನ್ನು, ಮೂಲದ್ರವ್ಯಗಳನ್ನು ಈ ಆರು ಮಂದಿ ಮಹರ್ಷಿಗಳು ನಿರೂಪಿಸಿದ್ದಾರೆ. ಇವರ ನಿರೂಪಣೆಗಳು ಸೂಕ್ಷ್ಮ ಪರ್ಯಾಲೋಚನೆ ಮತ್ತು ತರ್ಕಬದ್ಧತೆಗಳಿಂದ ಕೂಡಿದ ಅಪೂರ್ವ ವ್ಯಾಖ್ಯಾನಗಳಾಗಿವೆ. ಈ ಆರು ತತ್ತ್ವಶಾಸ್ತ್ರ ದರ್ಶನ ಪಂಥಗಳು ದ್ವೈತ ಮತ್ತು ಅದ್ವೈತ ವರ್ಗಗಳಿಗೆ, ಪಂಗಡಗಳಿಗೆ ಕಾರಣೀಭೂತವಾದವು. ವೈಷ್ಣವ, ಶೈವ ಮತ್ತು ಶಾಕ್ತ್ಯದಂಥ ಉಪವರ್ಗ, ಉಪಪಂಗಡಗಳಿಗೂ ಮೂಲವಾದವು. ಈ ವರ್ಗ, ಪಂಗಡಗಳಲ್ಲಿ ಏಕತೆಯನ್ನು, ಐಕಮತ್ಯವನ್ನು ಉಂಟುಮಾಡುವಂಥ ಮೂಲಾಧಾರವೊಂದನ್ನು ಸ್ಥಾಪಿಸಲು ಜಗದ್ಗುರು ಶಂಕರಾಚಾರ್ಯರು

ಪ್ರಯತ್ನಿಸಿದರು. ಆದ್ದರಿಂದಲೇ ಶಂಕರಾಚಾರ್ಯರು ಇಂದು ಸನಾತನ ಧರ್ಮ ಸಂಸ್ಥಾಪಕರಾಗಿ ಮಹತ್ವದ ಸ್ಥಾನ ಪಡೆದಿದ್ದಾರೆ. ಭಾರತೀಯ ತತ್ತ್ವಶಾಸ್ತ್ರ ದರ್ಶನ ಕ್ರಮೇಣ ಪ್ರಾಕೃತದಿಂದ ಪರಿಶುದ್ಧತೆಯತ್ತ, ಸಂಸ್ಕಾರದತ್ತ, ಸೂಕ್ಷ್ಮತೆಯತ್ತ ಹೊರಳಿರುವುದನ್ನು ನಾವು ಕಾಣುತ್ತೇವೆ. ಇರವು, ಅಸ್ತಿತ್ವಗಳ ವಿಶ್ಲೇಷಣೆ ಲೌಕಿಕ ಅಭ್ಯುದಯ ಮತ್ತು ಶ್ರೀಮಂತ ಜೀವನದ, ಭೋಗಭಾಗ್ಯಗಳ ಅಪೇಕ್ಷೆ, ಆಸೆ ಆಕಾಂಕ್ಷೆಗಳಿಗೆಡೆ ಮಾಡಿಕೊಟ್ಟಿತು. ಲೌಕಿಕ ಜೀವನವನ್ನು ಉಪೇಕ್ಷಿಸುವುದರಿಂದ ಉಂಟಾಗಬಹುದಾದ ಅಪಾಯಗಳನ್ನು ಗ್ರೀಕ್ ಆಕ್ರಮಣ ಬಹಿರಂಗಗೊಳಿಸಿತು. ಈ ಅವಧಿಯಲ್ಲೇ ಆಚಾರ್ಯ ಚಾಣಕ್ಯ ಅಮರ ಕೃತಿ 'ಅರ್ಥಶಾಸ್ತ್ರ' ವನ್ನು ರಚಿಸಿದ. ಈ ಮಹಾನ್ ಕೃತಿ, ಭಾರತೀಯ ತತ್ತ್ವಶಾಸ್ತ್ರ ದರ್ಶನದ ಅಹಿಂಸಾತ್ಮಕ ನೈತಿಕ ಆದರ್ಶಗಳು ಮತ್ತು ಘನ ಆಧ್ಯಾತ್ಮಿಕ ಮೂಲತತ್ತ್ವಗಳಿಗೆ ಭಿನ್ನವಾದ ಚಿಂತನೆಯನ್ನು, ದರ್ಶನವನ್ನು ನಿರೂಪಿಸಿತು. ಕೌಟಿಲ್ಯನ ಅರ್ಥಶಾಸ್ತ್ರ ಆ ಕಾಲದ ಅಗತ್ಯಗಳನ್ನು ಬಿಂಬಿಸಿತು.

ಚಾಣಕ್ಯನ ನಂತರ ಭಾರತೀಯ ತತ್ತ್ವಶಾಸ್ತ್ರದರ್ಶನಕ್ಕೆ ತನ್ನ ಅಕಳಂಕವಾದ ಅನತಿಕ್ರಾಂತ ಮಾರ್ಗದಲ್ಲಿ ಮುಂದುವರಿಯುವುದು ಸಾಧ್ಯವಾಗಲಿಲ್ಲ. ಒಗ್ಗೂಡಿಸುವ ಭಾಷಾ ಮಾಧ್ಯಮಗಳಾದ ಪಾಳಿ, ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳು ನಮ್ಮ ಪ್ರಾದೇಶಿಕ ಋಷಿಮುನಿಗಳಿಗೆ ಹಾಗೂ ವಿದ್ವಾಂಸರಿಗೆ ಲಭಿಸಲಿಲ್ಲ. ಇದರಿಂದಾಗಿ ಹಿಂದಿನ ಪರಂಪರೆ, ಸಂಪ್ರದಾಯಗಳ ಏಕಪ್ರಕಾರದ ಬೆಳವಣಿಗೆ ಕುಂಠಿತಗೊಂಡಿತು. ಭಾರತೀಯ ತತ್ತ್ವದರ್ಶನ ಮಹಾನದಿ ಮಧ್ಯಯುಗೀನ ಕಾಲದಲ್ಲೂ ತನ್ನ ಹರಿತವನ್ನು ಮುಂದುವರಿಸಿತ್ತು. ಕೆಲವೊಮ್ಮೆ ಪ್ರಾದೇಶಿಕ ಹೊಳೆಗಳು, ಉಪನದಿಗಳು ಈ ಮಹಾನದಿಯ ಹರಿತದೊಳಕ್ಕೆ ಸಂಗಮಿಸಿದ್ದುಂಟು. ಇನ್ನು ಕೆಲವೊಮ್ಮೆ ದೂರ ಸರಿದು ಬೇರೆಯಾಗಿ ಹರಿದದ್ದೂ ಉಂಟು.

**ಮಧ್ಯಯುಗೀನ ಮತ್ತು ಆಧುನಿಕ ಭಾರತದ ಚಿಂತನೆಗಳು**

ಮಧ್ಯಯುಗೀನ ಕಾಲದಲ್ಲಿ ಇಸ್ಲಾಮಿಕ್ ಮತ್ತು ಹಿಂದೂ ಚಿಂತನೆಗಳು ಏಕೀಭವಿಸಿ ಸೂಫಿ ಸಾಹಿತ್ಯಕ್ಕೆ ಜನ್ಮಕೊಟ್ಟವು. ಇಸ್ಲಾಂ ತನ್ನ ತತ್ತ್ವಸಿದ್ಧಾಂತ, ಸಂಸ್ಕೃತಿಗಳ ಜೊತೆಗೆ ಸಾಮ್ರಾಜ್ಯಶಾಹಿ ರಾಜಕಾರಣವನ್ನೂ ಭಾರತಕ್ಕೆ ತಂದುಕೊಟ್ಟಿತು. ಆದ್ದರಿಂದ ಇಸ್ಲಾಂ ಮತ್ತು ಹಿಂದೂ ಧರ್ಮಗಳ ಸ್ನೇಹ ಮಧುರವಾಗೇನಿರಲಿಲ್ಲ. ಭಾರತೀಯ ಇತಿಹಾಸದ ಇಸ್ಲಾಮಿಕ್ ಕಾಲಘಟ್ಟದಲ್ಲಿ ಸ್ವಾಮಿ ವಿದ್ಯಾರಣ್ಯ, ತುಳಸಿದಾಸ್, ಸೂರದಾಸ್, ರಾಮದಾಸ್, ತುಕಾರಾಂ ಮತ್ತು ಏಕನಾಥ ಮೊದಲಾದ ಸಾಧು–ಸಂತರು ಭಾರತೀಯ ಬೌದ್ಧಿಕ ಪರಂಪರೆಯನ್ನು ಮುನ್ನಡೆಸಿದರು.

ಮಧ್ಯಯುಗೀನ ಭಾರತೀಯ ಚಿಂತನ ಪ್ರಕ್ರಿಯೆ ಗತಕಾಲದ



ಸೃಜನಶೀಲತೆಯನ್ನು ವಿರೋಧಿಸುತ್ತಿದ್ದು ದುರ್ಬಲವಾಗಿದ್ದಂತೆ ತೋರುತ್ತದೆ. ಈ ಕಾಲದ ಬೌದ್ಧಿಕ ಚಿಂತನೆ, ದರ್ಶನಗಳು ರಕ್ಷಣಾತ್ಮಕವಾಗಿದ್ದವು. ಹಾಗೂ ಪ್ರತಿಗಾಮಿಯಾಗಿದ್ದವು. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ವಾಣಿ ಉಲ್ಲೇಖನಾರ್ಹವಾದದ್ದು.

> "ರಮಾನಂದ, ಕಬೀರ, ದಾದು, ಚೈತನ್ಯ, ನಾನಕ್ ಇವರುಗಳು ಸ್ಥಾಪಿಸಿದ ಪಂಗಡಗಳು ಭಿನ್ನಾಭಿಪ್ರಾಯದ ನಡುವೆಯೂ ಮಾನವ ಸಮಾನತೆ ಮತ್ತು ವಿಶ್ವ ಭ್ರಾತೃತ್ವದ ಸಂದೇಶವನ್ನು ಪಸರಿಸುತ್ತಿದ್ದವು. ಆದರೆ ಬಹುತೇಕ ಶಕ್ತಿಸಂಪನ್ಮೂಲಗಳೆಲ್ಲ ಇಸ್ಲಾಂನ ಆಕ್ರಮಣಶೀಲ ಪ್ರಭಾವವನ್ನು ಎದುರಿಸುವುದರಲ್ಲೇ ವ್ಯಯವಾಗುತ್ತಿತ್ತು. ಇಸ್ಲಾಮಿಕ್ ಮೂಲಭೂತವಾದವನ್ನು ನೆಲಸಮಗೊಳಿಸುವುದರಲ್ಲಿ ಅವರು ತಕ್ಕಮಟ್ಟಿನ ಯಶಸ್ಸನ್ನು ಸಾಧಿಸಿದರೂ ಅವರದು ಉಳಿವಿಗಾಗಿ ನಡೆಸಿದ ಹೋರಾಟವಾಗಿತ್ತು. ಅವರು ರಕ್ಷಣಾತ್ಮಕವಾಗಿದ್ದರು."

ಭಾರತೀಯ ಚರಿತ್ರೆಯ ಸಾಂಸ್ಕೃತಿಕ ನವೋದಯದ ಪ್ರತಿಯೊಂದು ಕಾಲಘಟ್ಟದಲ್ಲೂ ನಾವು ರಾಜಕೀಯವಾಗಿ ಒಂದಾಗುವ ಪುನರ್ಜಾಗೃತಿಯನ್ನು ನಾವು ಕಾಣುತ್ತೇವೆ. ಪರಿಣಾಮತ: ಇದು ಜನತೆಯ ಆಧ್ಯಾತ್ಮಿಕ ಆಶೋತ್ತರಗಳನ್ನು ಬಲಗೊಳಿಸಿದೆ. ಈಡೇರಿಸಿದೆ. ಆದರೆ ಮರಾಠರು ಮತ್ತು ಸಿಖ್ಖರ ರಾಜಕೀಯ ಆಳ್ವಿಕೆಗೆ ಮುನ್ನ ಆಧ್ಯಾತ್ಮಿಕ ಜಾಗೃತ ಪ್ರತಿಗಾಮಿ ಸ್ವರೂಪದ್ದಾಗಿತ್ತು. ಪುಣೆ ಮತ್ತು ಲಾಹೋರ್‌ಗಳ ಮುಘಲ್ ದರ್ಬಾರುಗಳಲ್ಲಿದ್ದ ಸಂಸ್ಕೃತಿಯಲ್ಲಿ ಬೌದ್ಧಿಕ ಪ್ರತಿಭೆ ಪ್ರಕಾಶಗಳ ಝಳಕೂ ಕಾಣಸಿಗುವುದಿಲ್ಲ. ಮಾಳ್ವ ಮತ್ತು ವಿಜಯನಗರ ಸಾಮ್ರಾಜ್ಯಗಳಲ್ಲಿದ್ದ ಬೌದ್ಧಿಕ ಶಕ್ತಿ, ಕ್ರಿಯಾಶೀಲತೆ ಮತ್ತು ಚೈತನ್ಯಗಳೊಂದಿಗೆ ಈ ಸಂಸ್ಕೃತಿಯನ್ನು ದೂರದಿಂದಲೂ ಹೋಲಿಸಲಾಗದು. ಮಧ್ಯಯುಗೀನ ಕಾಲವನ್ನು ಭಾರತೀಯ ಇತಿಹಾಸದ ಕರಾಳದಿನಗಳೆಂದು ಕರೆಯಬಹುದು. ಮುಸ್ಲಿಮರ ವಿರುದ್ಧ ಜನರಲ್ಲಿದ್ದ ಕ್ರೋಧೋನ್ಮಾದ ದ್ವೇಷಗಳನ್ನು ಕೋಶೀಕರಿಸಿದ ಈ ಸಾಮ್ರಾಜ್ಯಗಳು ಭಾರತೀಯ ನಭೋಮಂಡಲದಲ್ಲಿ ಉಲ್ಕೆಗಳಂತೆ ಹೊಳೆದವು. ಜನರ ಆಕ್ರೋಶ, ದ್ವೇಷಗಳಿಗೆ ಗುರಿಯಾಗಿದ್ದ ಮುಘಲ್ ಸಾಮ್ರಾಜ್ಯವನ್ನು ನುಚ್ಚುನೂರು ಮಾಡಿದ ನಂತರ ತಮ್ಮೆಲ್ಲ ದೀಪ್ತಿ, ಪ್ರಕಾಶಮಾನತೆಗಳನ್ನು ಕಳೆದುಕೊಂಡವು.

ಬ್ರಿಟಿಷರೊಂದಿಗಿನ ಸಂಪರ್ಕ ಭಾರತೀಯ ಮತ್ತು ಪಾಶ್ಚಾತ್ಯ ಚಿಂತನೆಗಳ ನಡುವೆ ಸ್ನೇಹ ಸೇತುವಾಯಿತು. ಪೌರ್ವಾತ್ಯ ಮತ್ತು ಪಾಶ್ಚಾತ್ಯಗಳ ಈ ಸಮಾಗಮದ ಫಲವೇ ಭಾರತೀಯ ಪುನರ್ಜಾಗೃತಿ.

ಪಂಡಿತ ದೀನ್ ದಯಾಳ್ ಉಪಾಧ್ಯಾಯರು ಇದೇ ಭಾರತೀಯ ಸಂಸ್ಕೃತಿ ಮತ್ತು ಬೌದ್ಧಿಕ ಪರಂಪರೆಯಲ್ಲಿ ಬೆಳೆದು ಬಂದವರು. ದೀನದಯಾಳರು ಸನಾತನ

ಧರ್ಮ ಚಿಂತನೆಯ ಪಂಥದಿಂದ ತುಂಬ ಪ್ರಭಾವಿತರಾದವರು. ವೇದ, ಪುರಾಣ ಸ್ಮೃತಿ, ಉಪನಿಷತ್ತುಗಳಲ್ಲಿ ಬರುವ ವೇದಾಂತ ಚಿಂತನೆಗಳು ಸಾಂದರ್ಭಿಕ ಪ್ರಕ್ರಿಯೆಯಾಗಿ ಮತ್ತು ಹೋಲಿಕೆಯಾಗಿ ಉಪಾಧ್ಯಾಯರ ಬರಹಗಳಲ್ಲಿ ತುಂಬ ಶ್ರೀಮಂತವಾಗಿ ಮೈದಾಳಿವೆ. ಅವರ ಪಾರಿಭಾಷಿಕ ಪ್ರಯೋಗಗಳು ವೇದಮಾದರಿಯ ರೂಪಾವಳಿಗಳೇ ಆಗಿವೆ. ಅವರು ಆರ್.ಎಸ್.ಎಸ್. ನೇತಾರರಾದ ಎಂ.ಎಸ್. ಗೋಳ್ವಾಲ್ಕರ್ ಮತ್ತು ಉಮಾಕಾಂತ ಕೇಶವ ಆಪ್ಟೆಯವರ ಬೌದ್ಧಿಕ ಗರಡಿಯಲ್ಲಿ ರೂಪುಗೊಂಡವರು. ಅವರು ಬೌದ್ಧಿಕವಾಗಿ, ಲೋಕಾಯತ, ಬುದ್ಧ ಜೈನ ತತ್ತ್ವದರ್ಶನಗಳನ್ನು ತಿರಸ್ಕರಿಸಿದ್ದರು. ಇಸ್ಲಾಂ ಮತ್ತು ಪಾಶ್ಚಾತ್ಯ ಪ್ರಭಾವಗಳನ್ನು ನಿರಾಕರಿಸಿದ್ದರು. ಅವರ ಬರಹಗಳಲ್ಲಿ ಇವುಗಳ ಪ್ರಭಾವ ಲೇಶಮಾತ್ರವೂ ಕಾಣಸಿಗುವುದಿಲ್ಲ.

**ದೇಶಿಕ್ ಶಾಸ್ತ್ರ**

ದೀನದಯಾಳರ ಚಿಂತನೆ ಸಹಜವಾಗಿಯೇ ವಿವೇಕಾನಂದ, ತಿಲಕ್ ಮತ್ತು ಅರವಿಂದರ ವಿಚಾರಗಳಿಗೆ ಸದೃಶವಾಗಿವೆ, ಅನುರೂಪವಾಗಿವೆ. ಅವರು ಗಾಂಧೀಜಿ ಮತ್ತು ವಿನೋಬಾ ಭಾವೆಯವರನ್ನೂ ತಮ್ಮ ಬರಹಗಳಲ್ಲಿ ಪ್ರಸ್ತಾಪಿಸುತ್ತಾರೆ. ಇವೆಲ್ಲ ಅಂಚಿನ ಅಡಿಟಿಪ್ಪಣಿಯ ಪ್ರಸ್ತಾವಗಳಷ್ಟೇ. ಅವರು ದುಲ್‌ಧಾರಿಯಾರ "ದೈಶಿಕ ಶಾಸ್ತ್ರ"ದಿಂದ ತುಂಬ ಪ್ರಭಾವಿತರಾಗಿದ್ದಾರೆ. ಈ ಗ್ರಂಥ ವೇದಾಂತ ಹಾಗೂ ವೇದ ಸಾಹಿತ್ಯದಲ್ಲಿ ನಿರೂಪಿಸಲಾಗಿರುವ ಸಾಮಾಜಿಕ ತತ್ತ್ವದರ್ಶನವನ್ನು ಒಳಗೊಂಡಿರುವ ಮಹಾಕೃತಿ. ಈ ಕೃತಿಯನ್ನು ಕುರಿತು ದೀನದಯಾಳರು ಹೀಗೆ ವ್ಯಾಖ್ಯಾನ ಮಾಡಿದ್ದಾರೆ:

> **"ಭೌತವಿಜ್ಞಾನ ಕ್ಷೇತ್ರದಲ್ಲಿ ಭಾರತೀಯರ ಕೊಡುಗೆಯ ಬಗ್ಗೆಯೂ ಹೇಳಬೇಕಾದ್ದು ಇಂದು ಅತ್ಯಗತ್ಯವಾಗಿದೆ. ನಲವತ್ತು ವರ್ಷಗಳ ಹಿಂದೆ ಶ್ರೀ ಬದರಿ ಶಾ ದುಲ್‌ಧಾರಿಯಾ ಎನ್ನುವವರು "ದೇಶಿಕ್ ಶಾಸ್ತ್ರ" ಎನ್ನುವ ಗ್ರಂಥವೊಂದನ್ನು ಪ್ರಕಟಿಸಿದ್ದಾರೆ. ದಾರ್ಶನಿಕ ಸಂತ ಶ್ರೀ ೧೦೮ ಸೋಮವಾರಿ ಬಾಬ್ಜಿ ಮಹಾರಾಜ್ ಅವರ ಆದೇಶಾನುಸಾರ ಈ ಗ್ರಂಥವನ್ನು ಪ್ರಕಟಿಸಲಾಗಿದೆ. ಬದರಿಶಾ ಅವರು ಲೋಕಮಾನ್ಯ ತಿಲಕರ 'ಕರ್ಮ ಯೋಗ ಶಾಸ್ತ್ರ' ಗ್ರಂಥದಿಂದ ಸ್ಫೂರ್ತಿ ಪಡೆದು "ದೈಶಿಕ್ ಶಾಸ್ತ್ರ' ರಚಿಸಿದ್ದಾರೆ. 'ಕರ್ಮ ಯೋಗ ಶಾಸ್ತ್ರ, ಭಗವದ್ಗೀತೆಯ ವ್ಯಾಖ್ಯಾನ. ಈ ಗ್ರಂಥದಲ್ಲಿ ತಿಲಕರು ಭಾರತೀಯ ತತ್ತ್ವಶಾಸ್ತ್ರದರ್ಶನ ಪರಂಪರೆಯನ್ನು "ನಿವೃತ್ತಿ" ಮತ್ತು "ಪ್ರವೃತ್ತಿ" ಪರಿಕಲ್ಪನೆಗಳಿಂದ ಮುಕ್ತಗೊಳಿಸಿದ್ದಾರೆ. ಭಾರತದಲ್ಲಿ ಪ್ರತಿಪಾದಿಸಲಾದ ಎರಡು ಚಿರಂತನ ಸತ್ಯಗಳನ್ನು ಹಿಮಾಲಯದ ಗುಹೆಗಳಿಂದ ಕರ್ಮಕ್ಷೇತ್ರಕ್ಕೆ ಎಳೆದು ತಂದಿದ್ದಾರೆ."**

"ದೈಶಿಕ್ ಶಾಸ್ತ್ರ" ರಾಷ್ಟ್ರೀಯ ನಡಾವಳಿ ಸಂಹಿತೆಯ ಮೂಲಾಧಾರ ತತ್ತ್ವಗಳನ್ನು



ಚರ್ಚಿಸುವ ಗ್ರಂಥ. ಲೋಕಮಾನ್ಯ ತಿಲಕರೇ ಈ ಗ್ರಂಥವನ್ನು ಹಸ್ತಪ್ರತಿಯಲ್ಲೇ ಓದಿ ಪ್ರಶಂಸಿಸಿದ್ದರು. ಕರ್ಮಯೋಗ ಶಾಸ್ತ್ರ ಮತ್ತು ದೈಶಿಕ್ ಶಾಸ್ತ್ರ ಪರಸ್ಪರ ಪೂರಕವಾಗಿರುವ ಗ್ರಂಥಗಳು. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಪ್ರತಿಯೊಬ್ಬರೂ ಈ ಎರಡೂ ಗ್ರಂಥಗಳನ್ನು ಅಭ್ಯಾಸ ಮಾಡಲೇಬೇಕು.

ದೀನದಯಾಳ್ ಉಪಾಧ್ಯಾಯರು ಎರಡು ದಶಕಗಳಿಗೂ ಹೆಚ್ಚು ಕಾಲದ ಆಳವಾದ ಅಧ್ಯಯನ, ಚಿಂತನೆಗಳ ನಂತರ 'ಏಕಾತ್ಮವಾದ ಮಾನವದರ್ಶನ'ದ ತತ್ತ್ವದರ್ಶನವನ್ನು ಜನಸಂಘದ ರಾಜಕೀಯ ಪ್ರಣಾಳಿಕೆಯಲ್ಲಿ ಸೇರಿಸಿದ್ದಾರೆ. ಪ್ರಸ್ತಾವನೆಯಲ್ಲಿ, ಶಂಕರಾಚಾರ್ಯ ಮತ್ತು ಚಾಣಕ್ಯರನ್ನು ಪರಿಚಯಿಸುತ್ತ ಅವರು ಹೀಗೆ ಹೇಳುತ್ತಾರೆ:

> "ಇಂದು ನನಗೆ ಭಾರತೀಯ ಜೀವನದಲ್ಲಿ ಕ್ರಾಂತಿಕಾರಕ ಮಾರ್ಪಾಟುಗಳನ್ನು ಮಾಡಿದ ಇಬ್ಬರು ಮಹಾನುಭಾವರು ನೆನಪಾಗುತ್ತಿದ್ದಾರೆ. ಒಬ್ಬರು, ಸನಾತನ ಧರ್ಮದ ಸಂದೇಶದ ಮೂಲಕ ಭಾರತೀಯ ಜೀವನದಲ್ಲಿನ ಅನೈತಿಕತೆಯನ್ನು ಅಳಿಸಿಹಾಕಲು ಮುಂದಾದ ಶಂಕರಾಚಾರ್ಯರು. ಇನ್ನೊಬ್ಬರು ಚಾಣಕ್ಯ, ಅರ್ಥಶಾಸ್ತ್ರದ ತತ್ತ್ವದರ್ಶನಗಳ ಆಧಾರದ ಮೇಲೆ, ತಮ್ಮ ದರ್ಶನಗಳ ಆಧಾರದ ಮೇಲೆ, ತಮ್ಮ ತಮ್ಮ ರಾಜಕೀಯ ಇಚ್ಛಾನುಸಾರ ಚದುರಿಹೋಗಿದ್ದ ಪ್ರಜಾರಾಜ್ಯಗಳನ್ನು ಒಂದು ರಾಷ್ಟ್ರವನ್ನಾಗಿ ಒಗ್ಗೂಡಿಸಿದ ಚಾಣಕ್ಯ. ಇವತ್ತು, ಇಂಥದೇ ಪರಿಸ್ಥಿತಿಯಲ್ಲಿ ನಿಂತಿರುವ ನಾವು, ಮಾನವನ ನಿರ್ವೀರ್ಯ ಪಾಶ್ಚಾತ್ಯ ಚಿಂತನೆಗೆ ಪ್ರತಿಯಾಗಿ 'ಏಕಾತ್ಮ ಮಾನವವಾದ'ವನ್ನು ಮಂಡಿಸುತ್ತಿದ್ದೇವೆ. ಇದು ಮಾನವನ ಸರ್ವಾಂಗೀಣ ಪ್ರಗತಿಯನ್ನು ಗುರಿಯಾಗಿ ಹೊಂದಿರುವ ತತ್ತ್ವಸಿದ್ಧಾಂತ.

ಶಂಕರವೇದಾಂತದ "ಪ್ರಸ್ಥಾನತ್ರಯಿ" ಮತ್ತು ಕೌಟಿಲ್ಯನ 'ಅರ್ಥ ಶಾಸ್ತ್ರ'ಗಳ ಹೊಸ ಅವತರಣಿಕೆಯನ್ನು ಸ್ಥಾಪಿಸುವುದು ದೀನದಯಾಳ್ ಉಪಾಧ್ಯಾಯರ ಮಹಾನ್ ಯತ್ನವಾಗಿದೆ. ಜೊತೆಗೆ ಅವರದೇ ಆದ ಏಕಾತ್ಮ ಮಾನವದರ್ಶನದ ಅನುಷ್ಠಾನವೂ ಸೇರಿಕೊಂಡಿದೆ.

# ೧೧. ದೀನ್ ದಯಾಳ್‌ಜೀ, ಆರ್.ಎಸ್.ಎಸ್. ಮತ್ತು ಹಿಂದೂ ರಾಷ್ಟ್ರೀಯತೆ

**ಬಿ. ಕೆ. ಕೇಳ್ಕರ್**

ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು ಉತ್ತರ ಪ್ರದೇಶದಲ್ಲಿ ಜನಸಂಘದ ವ್ಯವಸ್ಥಾಪಕ ಕಾರ್ಯದಶಿಯಾಗಿ ೧೯೫೧ರಲ್ಲಿ ರಾಜಕೀಯವನ್ನು ಪ್ರವೇಶಿಸಿದರು. ೧೯೬೭ರಲ್ಲಿ ಅವರು ಜನಸಂಘದ ಅಧ್ಯಕ್ಷರಾದರು. ೧೯೫೧–೬೭ರ ಹದಿನೇಳು ವರ್ಷಗಳ ಅವಧಿಯಲ್ಲಿ ಅವರು ಜನಸಂಘ ಸ್ವಂತಶಕ್ತಿಯ ಮೇಲೆ ನಿಲ್ಲುವಂತೆ ಸಹಾಯ ಮಾಡಿದರು. ೧೯೩೭ ರಿಂದ ೧೯೫೧ರವರೆಗೆ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರಾಗಿದ್ದರು. ಜನಸಂಘ ಸೇರುವುದಕ್ಕೆ ಮೊದಲು ಉತ್ತರ ಪ್ರದೇಶದಲ್ಲಿ ಆರೆಸ್ಸೆಸ್‌ನ ಸಹ ಪ್ರಾಂತ ಪ್ರಚಾರಕರಾಗಿದ್ದರು. ಆರೆಸ್ಸೆಸ್ ಅವರ ವ್ಯಕ್ತಿತ್ವವನ್ನೂ ಅವರ ಚಿಂತನಶೀಲತೆಯನ್ನೂ ರೂಪಿಸಿದೆ. ಆದ್ದರಿಂದ ಅವರ ರಾಜಕೀಯ ಕೆಲಸ ಕಾರ್ಯಗಳು ಹಾಗೂ ರಾಜಕೀಯ ನಾಯಕತ್ವ ಕುರಿತು ಅಧ್ಯಯನ ಮಾಡುವಾಗ ಪಂಡಿತ್ ಅವರು ಆರೆಸ್ಸೆಸ್‌ನ ಮೂಲತತ್ತ್ವ ಸಿದ್ಧಾಂತಗಳನ್ನು ಹೇಗೆ ಪ್ರತಿನಿಧಿಸುತ್ತಿದ್ದರು ಎನ್ನುವುದನ್ನು ತಿಳಿದುಕೊಳ್ಳುವುದು ಉಚಿತಕರವಾಗುತ್ತದೆ. ಆರೆಸ್ಸೆಸ್ ಸ್ವಯಂ ಸೇವಕರಾಗಿ ಅವರ ರಾಜಕೀಯ ಪರಿಕಲ್ಪನೆಗಳೇನು? ಹಾಗೂ ಆರೆಸ್ಸೆಸ್‌ನ ಸರ ಸಂಘಚಾಲಕರಾಗಿದ್ದ ಶ್ರೀ ಗುರೂಜಿ ಅವರ ರಾಜಕೀಯ ಪರಿಕಲ್ಪನೆಗಳು ಹೇಗಿದ್ದವು ಎನ್ನುವುದನ್ನೂ ಗ್ರಹಿಸಬೇಕಾಗುತ್ತದೆ. ದೀನದಯಾಳರ ಪ್ರಾರಂಭಿಕ ಚಿಂತನಶೀಲತೆ ಮತ್ತು ವ್ಯಕ್ತಿತ್ವವನ್ನು ಆರೆಸ್ಸೆಸ್ ರೂಪಿಸಿತ್ತಾದ್ದರಿಂದ ಅವರ ನಾಯಕತ್ವದ ರೂಪ ವಿನ್ಯಾಸಗಳು ಉಳಿದವರಿಗಿಂತ ಭಿನ್ನವಾಗಿದ್ದವು. ಅವರ ಚಿಂತನ ಪ್ರಕ್ರಿಯೆ ಹಾಗೂ ರಾಜಕೀಯ ವಿಚಾರಗಳು, ಪ್ರತಿವರ್ತನೆಗಳು ಉಳಿದ ರಾಜಕೀಯ ನೇತಾರರಿಗಿಂತ ಭಿನ್ನವಾಗಿದ್ದವು.

ಆರೆಸ್ಸೆಸ್‌ನ ಅಚ್ಚಿನಲ್ಲಿ ರೂಪುಗೊಂಡ ವ್ಯಕ್ತಿಯೊಬ್ಬನ ನಾಯಕತ್ವ ಆರೆಸ್ಸೆಸ್ ಹೊರಗಿನ ಪ್ರಪಂಚದಲ್ಲಿ ಹೇಗೆ ಬೆಳೆಯುತ್ತದೆ ಹಾಗೂ ಏನೆಲ್ಲ ಆಯಾಮಗಳನ್ನು ಪಡೆದುಕೊಳ್ಳಬಹುದು ಎನ್ನುವುದನ್ನು ತಿಳಿದುಕೊಳ್ಳಲೋಸುಗವೇ ದೀನ್‌ದಯಾಳರನ್ನು ರಾಜಕೀಯಕ್ಕಿಳಿಸಲಾಯಿತು. ಇದೊಂದು ಆರೆಸ್ಸೆಸ್‌ನ ರಾಜಕೀಯ ಪ್ರಯೋಗ.



ಈ ಕಾರಣದಿಂದಲೇ ದೀನ್ ದಯಾಳರು ಸತ್ಯಾನ್ವೇಷಿಯಾಗಿ ಹಾಗೂ ಸೃಜನಶೀಲ ಚಿಂತಕರಾಗಿ ರಾಜಕೀಯವನ್ನು ಪ್ರವೇಶಿಸಿದರೇ ವಿನ: ಅಧಿಕಾರ ಮೋಹದಿಂದಲ್ಲ. ಅವರು ಗುರಿ ಮತ್ತು ಅವರು ನಿರ್ವಹಿಸಬೇಕಾದ ಪಾತ್ರವನ್ನು ಖಚಿತವಾಗಿ ನಿಷ್ಕರ್ಷಿಸಲಾಗಿತ್ತು.

## ಸಂಘಕ್ಕೂ ಬೇಕು ಬದಲಾವಣೆ

ಸ್ವಾತಂತ್ರ್ಯ ಹೋರಾಟ ಮುಗಿದ ನಂತರ ಭಾರತದ ರಾಜಕಾರಣ ವಿಕೇಂದ್ರೀಕರಣದ ಪ್ರಕ್ರಿಯೆಗೊಳಗಾಯಿತು. ಆರೆಸ್ಸೆಸ್ ಕಾರ್ಯಕರ್ತರಾಗಿ ದೀನ್ ದಯಾಳ್‌ಜಿ ರಾಷ್ಟ್ರದಲ್ಲಿನ ಈ ಬದಲಾದ ರಾಜಕೀಯ ಪರಿಸ್ಥಿತಿ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ಅಭಿಪ್ರಾಯಗಳು ಅವರು ಆನಂತರ ನಿರ್ವಹಿಸಿದ ರಾಜಕೀಯ ಪಾತ್ರದ ಮಾನಸಿಕ ಹಿನ್ನೆಲೆಯ ಸುಳಿವು ನೀಡಿದ್ದವು. ಜನಸಂಘ ಪಕ್ಷದ ಸ್ಥಾಪನೆಗೂ ಮೊದಲೇ ಉಪಾಧ್ಯಾಯರು, 'ಸ್ವಾತಂತ್ರ್ಯ ಒಂದು ಸಾಧನ, ಅದೇ ಕೊನೆಯಲ್ಲ" ಎಂದು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಘೋಷಿಸಿದ್ದರು ಹಾಗೂ ಉತ್ತರಪ್ರದೇಶದ ಸಹಪ್ರಾಂತ ಪ್ರಚಾರಕರಾಗಿ ಮೀರತ್‌ನಲ್ಲಿ ಮಾಡಿದ ಭಾಷಣದಲ್ಲಿ "ಸ್ವಾತಂತ್ರ್ಯಾನಂತರ ನಮ್ಮ ಮುಂದಿರುವ ಕಾಯಕಗಳ ಬಗ್ಗೆ, ಜವಾಬ್ದಾರಿಗಳ ಬಗ್ಗೆ" ಮಾತನಾಡಿದ್ದರು.

"ಜನಸಂಘ ಅಂಧಶ್ರದ್ಧೆಯ ಪಕ್ಷ, ಗೊಡ್ಡು ಪಕ್ಷ, ಪ್ರತಿಗಾಮಿ ಎಂದು ಪದೇಪದೇ ಆರೋಪಿಸಲಾಗುತ್ತೆ. ಆದರೆ, ಪ್ರಪಂಚ ನಿರಂತರವಾಗಿ ಬದಲಾವಣೆ ಹೊಂದುತ್ತಿದ್ದರೂ ಈ ಬದಲಾವಣೆಗಳು ಚಿರಂತನ ಸತ್ಯಗಳಿಗೆ ಬಾಧಕವಾಗಿಲ್ಲ ಎನ್ನುವುದು ಎಲ್ಲರಿಗೂ ಗೊತ್ತು. ನಮಗೂ ಪುನರ್ ನಿರ್ಮಾಣ ಬೇಕು. ಆದರೆ ಇಂಥ ಪುನರ್ ನಿರ್ಮಾಣಕ್ಕಾಗಿ ಚಿರಂತನ ಮೌಲ್ಯಗಳನ್ನು ತ್ಯಾಗಮಾಡಲು ನಾವು ಸಿದ್ಧರಿಲ್ಲ. ಜೀವಮಾನಪೂರ್ತಿ ಗೌರವದಿಂದ ಬಾಳ್ವೆ ಮಾಡುವುದು ನಮ್ಮ ಅಪೇಕ್ಷೆಯಾಗಿದೆ. ಬದುಕಿನ ಚಿರಂತನ ಮೌಲ್ಯಗಳನ್ನು ಬೆಳೆಸುವಂಥ ಬದಲಾವಣೆಗಳನ್ನು ಒಪ್ಪಿಕೊಳ್ಳಲು ನಾವು ಸಿದ್ಧರಿದ್ದೇವೆ. ಇದೇ ಕಾಲಕ್ಕೆ ಇದರ ಜೊತೆಗೇ ನಮ್ಮ ಅಸ್ಮಿತೆಯನ್ನು ಜಾಹೀರುಗೊಳಿಸುವುದು ನಮ್ಮ ಅಪೇಕ್ಷೆಯಾಗಿದೆ. ನಮ್ಮ ಅಸ್ಮಿತೆಯ ರಕ್ಷಣೆ ಹಾಗೂ ಪರಿಷ್ಕಾರ–ಸಂಸ್ಕಾರಗಳಿಗಾಗಿ ಅಗತ್ಯವಾದ ಎಲ್ಲ ಆಧುನಿಕ ಬದಲಾವಣೆಗಳಿಗೂ ನಾವು ಸಿದ್ಧರಿದ್ದೇವೆ. ಜ್ಞಾನ, ವಿಜ್ಞಾನ, ಸಂಸ್ಕೃತಿ ಕ್ಷೇತ್ರಗಳಲ್ಲಿ ನಮ್ಮ ಅಭಿವೃದ್ಧಿಗೆ ಅಗತ್ಯವಾದ ಎಲ್ಲ ಬದಲಾವಣೆಗಳನ್ನೂ ಒಪ್ಪಿಕೊಳ್ಳಲು ನಾವು ಸಿದ್ಧರಿದ್ದೇವೆ. ನಮ್ಮ ಶರೀರ ತನ್ನ ಪೋಷಣೆಗಾಗಿ ಅನ್ಯ ದ್ರವ್ಯಗಳನ್ನು ಸ್ವೀಕರಿಸುವಂತೆ ನಾವೂ ಸಹ ನಮ್ಮ ಅಗತ್ಯಗಳಿಗನುಗುಣವಾಗಿ ವಿದೇಶಿ ವಸ್ತುಗಳನ್ನು ಒಪ್ಪಿಕೊಳ್ಳುತ್ತೇವೆ. ನಮ್ಮ ದೇಹದ ಚರ್ಮ ಸತತವಾಗಿ ಬದಲಾವಣೆ ಹೊಂದುತ್ತಿರುತ್ತದೆ. ಅದು ಕೃತಕವಲ್ಲ,

ಅಸಹಜವಲ್ಲ ಅಥವಾ ಕೇವಲ ನಾವೀನ್ಯತೆಗಾಗಿ, ಖಯಾಲಿಗಾಗಿ ಆಗುವ ಬದಲಾವಣೆಯಲ್ಲ. ಅದೇ ರೀತಿ, ಕೇವಲ ಹೊಸತಿನ ಹಂಬಲಕ್ಕಾಗಿ ನಾವೀನ್ಯತೆಯ ಖಯಾಲಿಗಾಗಿ ನಮ್ಮ ಚಿರಂತನ ಮೌಲ್ಯಗಳನ್ನು ಬಿಟ್ಟುಕೊಡುವುದು ಮಾರಕವಾಗುತ್ತದೆ. ನಾವು ಇದನ್ನು ಮಾಡುವುದಿಲ್ಲ. ಏಕೆಂದರೆ ಇದು ನಮ್ಮ ಬದುಕನ್ನು ನಾಶ ಮಾಡುತ್ತದೆ. ಕೇವಲ ಪ್ರತಿಷ್ಠೆಗಾಗಿ ನಾವು ಪುರಾತನವಾದುದೆಲ್ಲವನ್ನೂ, ಹಳತಾದುದೆಲ್ಲವನ್ನೂ ರಕ್ಷಿಸಿಡುವುದು ನಮ್ಮಿಚ್ಛೆಯಲ್ಲ. ನಮ್ಮ ಪಿತೃಪಿತಾಮಹರ ಮೃತಶರೀರಗಳನ್ನು ಕಾಪಿಡಲು ಪ್ರಯತ್ನಿಸದೆ, ಅವುಗಳಿಗೆ ಅಗ್ನಿಸಂಸ್ಕಾರ ಮಾಡಿ ಹೇಗೆ ಚಿತಾಭಸ್ಮವನ್ನು ನದಿಗಳಲ್ಲಿ ವಿಸರ್ಜಿಸುತ್ತೇವೆಯೋ ಹಾಗೆಯೇ ಹಳತಾದುದನ್ನು ವಿಸರ್ಜಿಸುತ್ತೇವೆ.

ಆದಾಗ್ಯೂ, ಹಲವು ಅನ್ಯ ತತ್ತ್ವಸಿದ್ಧಾಂತಗಳು, ಕೇವಲ ನಾವೀನ್ಯತೆ, ಆಕರ್ಷಣೆಗಳಿಂದಾಗಿ ನಮ್ಮಲ್ಲಿ ಚಲಾವಣೆಗೆ ಬರುತ್ತಿವೆ. ಇದೊಂದು ಘಾತುಕ ಪ್ರವೃತ್ತಿ. ಅವು ವಿದೇಶಿ ಎನ್ನುವ ಕಾರಣಕ್ಕಾಗಿಯೇ ನಾವು ಈ ತತ್ತ್ವ ಸಿದ್ಧಾಂತಗಳನ್ನು ವಿರೋಧಿಸುತ್ತಿಲ್ಲ. ಪ್ರೀತಿ, ಸಹಕಾರ, ನಮ್ಮ ಬದುಕಿನ ಸುಧಾರಣೆಯನ್ನು ಕಲಿಯಬಹುದು." (ಪಾಂಚಜನ್ಯ)

ಮೊತ್ತದಲ್ಲಿ ಹೇಳುವುದಾದರೆ, ದೀನ್ ದಯಾಳ್ ಆರೆಸ್ಸೆಸ್‌ನಲ್ಲಿದ್ದಾಗ್ಯೂ, "ಆಧುನಿಕ ಪ್ರಪಂಚದಲ್ಲಿ ಭಾರತ ತಲೆಎತ್ತಿ ನಿಲ್ಲಬೇಕು. ಬದುಕಬೇಕು. ಇದಕ್ಕೆ ಅಗತ್ಯವಾದ ಎಲ್ಲ ಬದಲಾವಣೆಗಳನ್ನೂ ಸ್ವೀಕರಿಸೋಣ. ಆದರೆ ನಮ್ಮ ರಾಷ್ಟ್ರದ ಮೂಲ ಗುಣಲಕ್ಷಣ, ಚಾರಿತ್ರ್ಯಗಳನ್ನು ಕಾಪಾಡಿಕೊಂಡೇ ಬದಲಾವಣೆಗಳಿಗೆ ಅವಕಾಶ ನೀಡಬೇಕು." ಎಂದು ದೃಢವಾಗಿ ನಂಬಿದ್ದರು.

## ಸಾಂಸ್ಕೃತಿಕ ಸ್ವಾತಂತ್ರ್ಯ

ಭಾರತ ಸ್ವಾತಂತ್ರ್ಯ ಗಳಿಸಿದ ನಂತರ ಸಂಘದ ಪಾತ್ರ ಏನೆಂಬುದನ್ನು ದೀನ್‌ದಯಾಳಜಿ ವಿಶದಪಡಿಸಿದ್ದರು. 'ಪಾಂಚಜನ್ಯ'ದ ೧೯೪೯ರ ಆಗಸ್ಟ್–ಸೆಪ್ಟೆಂಬರ್ ಸಂಚಿಕೆಯಲ್ಲಿ (ಭಾದ್ರಪದ ಕೃಷ್ಣ ೯,೨೦೦೬) ಈ ಬಗ್ಗೆ ಅವರ ಉಪನ್ಯಾಸ ಪ್ರಕಟವಾಗಿತ್ತು. ಪ್ರತಿಯೊಂದು ರಾಷ್ಟ್ರಕ್ಕೂ ಅದರದೇ ಆದ ಅಸ್ಮಿತೆ ಇರುತ್ತದೆ ಹಾಗೂ ಕೆಲವು ವಿಶೇಷ ಗುಣಲಕ್ಷಣಗಳಿರುತ್ತವೆ. ಇವುಗಳ ಅಭಿವೃದ್ಧಿಗೆ ಸ್ವಾತಂತ್ರ್ಯ ಅಗತ್ಯವೆಂದು ಅವರು ಹೇಳಿದ್ದರು. ಅವರು ಮುಂದುವರಿದು ಹೀಗೆ ಹೇಳಿದ್ದರು:

> **"೧೯೪೭ರ ಆಗಸ್ಟ್ ೧೫ ರಂದು ನಾವೊಂದು ಯುದ್ಧವನ್ನು ಗೆದ್ದೆವು. ಅಭಿವೃದ್ಧಿ ಪಥದಲ್ಲಿನ ಅಡೆತಡೆಗಳನ್ನು ತೆರವುಗೊಳಿಸಲು ನಮಗೆ ಸ್ವಾತಂತ್ರ್ಯ ಬೇಕಾಗಿತ್ತು. ಈಗ ಹಾದಿ ತೆರವಾಗಿದೆ. ನಮ್ಮ ಆತ್ಮವಿಕಾಸ, ಆತ್ಮ ಸಾಕ್ಷಾತ್ಕಾರಗಳಿಗೆ ಈಗ ಹಾದಿ ಸುಗಮವಾಗಿದೆ. ನಾವೀಗ ಮಾನವ ಪ್ರಗತಿಗೆ ನೆರವಾಗಬೇಕಿದೆ. ನಮ್ಮ ಆತ್ಮ**



> **ಪ್ರತಿಭಟಿಸಿದ್ದು ನಮ್ಮನ್ನು ಆಳುತ್ತಿದ್ದವರು ಬ್ರಿಟಿಷರು ಎನ್ನುವ ಕಾರಣಕ್ಕಾಗಿಯಷ್ಟೇ ಅಲ್ಲ. ವಿದೇಶಿ ಜೀವನದೃಷ್ಟಿ ಮತ್ತು ಬ್ರಿಟಿಷ್ ಪದ್ಧತಿಗಳು ನಮ್ಮ ನಿತ್ಯಗಟ್ಟಳೆ ಜೀವನವನ್ನು ಅತಿಕ್ರಮಿಸಲಾರಂಭಿಸಿದ್ದರ ವಿರುದ್ಧ ನಾವು ಸಿಡಿದೆದ್ದೆವು. ಇದು ಇಡೀ ವಾತಾವರಣವನ್ನು ಕಲುಷಿತಗೊಳಿಸುತ್ತಿತ್ತು. ಬ್ರಿಟಿಷರ ನಿರ್ಗಮನದ ನಂತರ ನಮ್ಮದೇ ರಕ್ತಮಾಂಸ ಹಂಚಿಕೊಂಡಿರುವ ಜನ ನಮ್ಮನ್ನು ಆಳುತ್ತಿದ್ದಾರೆ ಎನ್ನುವುದು ಸಂತೋಷದ ಸಂಗತಿ. ಇವರು ತಮ್ಮನ್ನು ಪೋಷಿಸಿದ, ಬೆಳೆಸಿದ ಸಮಾಜದ ಆಶೋತ್ತರಗಳನ್ನು, ಭಾವನೆಗಳನ್ನು ಹಂಚಿಕೊಳ್ಳಬೇಕೆಂಬುದು ನಮ್ಮ ನಿರೀಕ್ಷೆ. ನಮ್ಮ ಸಮಾಜಕ್ಕೆ ಹೊಂದಿಕೊಳ್ಳುವ, ನಮ್ಮ ಸಮಾಜದ ಗುಣಲಕ್ಷಣ, ಶೀಲ ಸ್ವಭಾವಗಳಿಗನುಗುಣವಾದ ಪದ್ಧತಿಯನ್ನು ಅಳವಡಿಸಿಕೊಳ್ಳಲು ಅವರು ಪ್ರಯತ್ನಿಸಬೇಕು. ಇದು ಕೈಗೂಡದೇ ಹೋದಲ್ಲಿ ಸ್ವಾತಂತ್ರ್ಯ ಹೋರಾಟ ಅಪೂರ್ಣವಾಯಿತೆಂದೇ ಹೇಳಬೇಕಾಗುತ್ತದೆ.**
>
> **ನಮಗೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಸ್ವಾತಂತ್ರ್ಯದ ಅಗತ್ಯವಿದೆ. ಸ್ವಾತಂತ್ರ್ಯದಲ್ಲಿ ಆತ್ಮಸಾಕ್ಷಾತ್ಕಾರ, ಆತ್ಮ ವಿಕಸನಗಳೂ ಸೇರಬೇಕು. ನಮ್ಮ ಬದುಕಿನ ನಾಡಿಮಿಡಿತದಂತೆ, ನಮ್ಮ ಜೀವನಾಡಿಯಂತೆ ಸಂಸ್ಕೃತಿ ರಾಷ್ಟ್ರೀಯ ಜೀವನದಲ್ಲಿ ಹಾಸುಹೊಕ್ಕಾಗಿರಬೇಕು. ಬದುಕಿನ ಶೃಂಗ ಸದೃಶ ಸಾಧನೆಗಳ ಸಮಯದಲ್ಲಿ ಹಾಗೂ ಕಷ್ಟಕೋಟಲೆಗಳನ್ನು ಎದುರಿಸಬೇಕಾದ ಸಂಕಷ್ಟ ಸ್ಥಿತಿಯಲ್ಲಿ ಮಾನವ ತಾಳುವ ರಚನಾತ್ಮಕ ದೃಷ್ಟಿ ನಿಲುವುಗಳಲ್ಲಿ ಅವನ ಸಂಸ್ಕೃತಿ ಪ್ರತಿಬಿಂಬಿಸುತ್ತದೆ. ಸಂಸ್ಕೃತಿ ಸ್ಥಾವರವಲ್ಲ. ಅದು ಸದಾಕಾಲಕ್ಕೂ ಜಂಗಮ. ನದಿಯಂತೆ ಚಲನಶೀಲವಾದದ್ದು. ಸಂಸ್ಕೃತಿ ಕುರಿತಂತೆ ವ್ಯಕ್ತಿಯ ಚಿಂತನೆಯ ಗುಣಲಕ್ಷಣಗಳು ಸಾಹಿತ್ಯ ಕಲೆ, ತತ್ತ್ವಶಾಸ್ತ್ರ ಮತ್ತು ಸಾಮಾಜಿಕ ಇತಿಹಾಸಗಳಲ್ಲಿ ಅಭಿವ್ಯಕ್ತಿ ಪಡೆಯುತ್ತವೆ. ನಾವು ಸ್ವತಂತ್ರರಾಗಿದ್ದಲ್ಲಿ ನಮ್ಮ ಈ ಸಂಸ್ಕೃತಿಯ ಹರಿವು ಶುರುವಾಗಬೇಕು. ರಾಷ್ಟ್ರಭಕ್ತಿಯೂ ಸಂಸ್ಕೃತಿಯಿಂದ ಹುಟ್ಟುತ್ತದೆ. ಸಂಸ್ಕೃತಿಯೇ ರಾಷ್ಟ್ರೀಯ ಎಲ್ಲೆಗಳನ್ನು ದಾಟಿ ಉಳಿದ ಮಾನವ ಕುಲದೊಂದಿಗ ರಾಷ್ಟ್ರದ ಬಾಂಧವ್ಯವನ್ನು ಬೆಸೆಯುತ್ತದೆ. ಆದ್ದರಿಂದ ಸಾಂಸ್ಕೃತಿಕ ಸ್ವಾತಂತ್ರ್ಯ ಅತಿಮುಖ್ಯವಾದದ್ದು. ಇದಿಲ್ಲದೆ ನಮ್ಮ ಸ್ವಾತಂತ್ರ್ಯ ಅರ್ಥರಹಿತವಾಗುತ್ತದೆ ಹಾಗೂ ಅದು ಹೆಚ್ಚುಕಾಲ ಇರುವುದಿಲ್ಲ."**

('ಪಾಂಚಜನ್ಯ')

## ಅನಿರ್ಬಂಧಿತ ವ್ಯಕ್ತಿಸ್ವಾತಂತ್ರ್ಯ ಮತ್ತು ಸರ್ವಾಧಿಕಾರ

ಸಮಾಜವಾದ ಮತ್ತು ಮುಕ್ತ ಅರ್ಥ ವ್ಯವಸ್ಥೆ ಸರ್ವಾಧಿಕಾರಕ್ಕೆ ಜನ್ಮ ಕೊಟ್ಟಿತೆಂದು ದೀನ್ ದಯಾಳ್ ಆರೆಸ್ಸೆಸ್ ವೇದಿಕೆಯಿಂದಲೇ ಹೇಳಿದ್ದರು. ಅವರು ಹೀಗೆ ಹೇಳಿದ್ದರು.

> **"ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಶಕ್ತಿ ಸಾಮರ್ಥ್ಯಾನುಸಾರ ದುಡಿಯಬೇಕು ಹಾಗೂ**

ಅವನ ಅಗತ್ಯಗಳಿಗನುಸಾರವಾಗಿ ಸಂಪತ್ತನ್ನು ಪಡೆಯಬೇಕು ಎನ್ನು ಪ್ರಮೇಯವನ್ನಾಧರಿಸಿ ಪಶ್ಚಿಮದಲ್ಲಿ ಸಿದ್ಧಾಂತವೊಂದನ್ನು ರೂಪಿಸಲಾಯಿತು. ಆದರೆ ಈ ಸಿದ್ಧಾಂತ ಸರ್ವಾಧಿಕಾರದ, ನಿರಂಕುಶ ಪ್ರಭುತ್ವದ ಉಗಮಕ್ಕೆಡೆ ಮಾಡಿಕೊಟ್ಟಿತು. ಏಕೆಂದರೆ ಈ ಸಿದ್ಧಾಂತದಲ್ಲಿ ಅಳವಡಿಸಿಕೊಳ್ಳಲಾಗಿದ್ದ ತತ್ತ್ವಗಳು ಮಾನವ ಸ್ವಭಾವಕ್ಕೆ ವಿರುದ್ಧವಾಗಿದ್ದವು. ಕಡಿಮೆ ಕೆಲಸ, ಅಧಿಕ ಸಂಬಳ ಮನುಷ್ಯನ ಸಹಜ ಬಯಕೆ. ಹೀಗಾಗಿ ಈ ವ್ಯವಸ್ಥೆಯಲ್ಲಿ ನಿರಂಕುಶ ಮಾರ್ಗಗಳಿಂದ ಮಾನವನ ಅಗತ್ಯಗಳನ್ನು ಕಡಿಮೆ ಮಾಡಲಾಯಿತು. ನಿಯಂತ್ರಣ ಸ್ವಯಂಪ್ರೇರಿತವಾಗಿರಬೇಕು ಎನ್ನುವುದು ಭಾರತೀಯ ತತ್ತ್ವಶಾಸ್ತ್ರದರ್ಶನದ ಅಪೇಕ್ಷೆ. ಸನ್ಯಾಸಿಯೊಬ್ಬನ ಅಗತ್ಯಗಳು ಅತಿ ಕಡಿಮೆ. ಆದರೆ ಅವನು ಸಮಾಜದ ಕಲ್ಯಾಣಕ್ಕಾಗಿ ಹೆಚ್ಚು ದುಡಿಯುತ್ತಾನೆ, ಗೌರವ ಸಂಪಾದಿಸುತ್ತಾನೆ. ಅದೇ ರೀತಿ ಭಾರತದ ಕುಟುಂಬದಲ್ಲಿ, ಮನೆಯ ಯಜಮಾನ ತನ್ನ ಅಗತ್ಯಗಳನ್ನು ಕಡಿತಗೊಳಿಸುತ್ತಾನೆ. ಯಜಮಾನ ಮನೆಯ ಅತಿ ಗೌರವಾನ್ವಿತ ವ್ಯಕ್ತಿ. ನಿಶ್ಚಯವಾಗಿಯೂ ನಾವು ನಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಬೇಕು, ಆದರೆ ಅವುಗಳ ಗುಲಾಮರಾಗಬಾರದು.''

''ತಾತ್ಪರ್ಯವೆಂದರೆ, ವ್ಯಕ್ತಿಗಳ ಬರಿಯ ಅಹಂಭಾವ ಅವರನ್ನು ಬಂಡವಾಳಶಾಹಿಯ ಗುಲಾಮರನ್ನಾಗಿಸುತ್ತದೆ. ಬರಿಯ ಸಮಾಜವಾದ ವ್ಯಕ್ತಿಯ ಅಹಮ್ಮನ್ನು ವ್ಯಕ್ತಿತ್ವವನ್ನು ನಾಶಮಾಡುತ್ತದೆ. ಭಾರತಕ್ಕೆ ಬೇಕಾಗಿರುವುದು ಇವೆರಡರ ಸಂಯೋಗ. ಈ ಎರಡು ಸಿದ್ಧಾಂತಗಳ ನಡುವಣ ಸಮನ್ವಯ. ಇದು ಭಾರತೀಯ ಚಿಂತನೆಗನುಣವಾಗಿರುತ್ತದೆ. ಈ ರೀತಿ ನಾವು ನಮ್ಮ ಮೌಲ್ಯಗಳನ್ನು ರಕ್ಷಿಸಿಕೊಂಡು. ನಮ್ಮ ಆತ್ಮರಕ್ಷಣೆ ಮಾಡಿಕೊಂಡು, ಅಭಾರತೀಯವಾದುದೆಲ್ಲವನ್ನೂ ದೂರವಿಟ್ಟು, ಪುನರ್ ನಿರ್ಮಾಣದ ನಮ್ಮ ಉತ್ಸಾಹವನ್ನು ಫಲಪ್ರದವಾಗಿಸಬಹುದು.''

('ಪಾಂಚಜನ್ಯ')

ಆಶ್ವಿನ್‌ಕೃಷ್ಣ ೯, ಸಂವತ್ ೨೦೦೭)

ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು ಪ್ರತ್ಯಕ್ಷವಾಗಿ ರಾಜಕೀಯಕ್ಕೆ ಕಾಲಿರಿಸುವುದಕ್ಕೂ ಮೊದಲೇ ಸ್ವಾತಂತ್ರ್ಯೋತ್ತರ ಭಾರತದ ಪುನರ್ ನಿರ್ಮಾಣದ ಬಗ್ಗೆ ಸ್ಪಷ್ಟ ಅಭಿಪ್ರಾಯಗಳನ್ನು, ಖಚಿತ ದೃಷ್ಟಿಯನ್ನು ಹೊಂದಿದ್ದರು ಎನ್ನುವುದು ಮೇಲಿನ ಉಲ್ಲೇಖಗಳಿಂದ ಸ್ಪಷ್ಟವಾಗುತ್ತದೆ.

**ಹಿಂದೂ ರಾಷ್ಟ್ರೀಯತೆ**

ದೀನ್ ದಯಾಳಜಿಯವರ ಒಟ್ಟು ಸಾಮಾಜಿಕ ಮತ್ತು ರಾಜಕೀಯ ಚಿಂತನಲಹರಿ ಹಿಂದೂ ಜಿಜ್ಞಾಸೆಯ ಆಧಾರದ ಮೇಲೆ ನಿಂತಿದೆ. ಆರೆಸ್ಸೆಸ್‌ನಲ್ಲಿದ್ದಾಗಲೇ ಅವರು ಇದರಿಂದ ಪ್ರಭಾವಿತರಾಗಿದ್ದರು. ಅವರ ರಾಷ್ಟ್ರೀಯ ದೃಷ್ಟಿಕೋನವೂ ಆರೆಸ್ಸೆಸ್ ಸಿದ್ಧಾಂತದ ಫಲವೇ. ದೆಹಲಿಯಲ್ಲಿ ನೀಡಿದ ಕೊನೆಯ ಉಪನ್ಯಾಸದಲ್ಲಿ ಅವರು ರಾಷ್ಟ್ರೀಯತೆಯನ್ನು ವಿಶ್ಲೇಷಿಸಿದ್ದರು. ಈ ಉಪನ್ಯಾಸದಲ್ಲಿ ಶ್ರೀ ಗುರೂಜಿಯವರು ಉಪಸ್ಥಿತರಿದ್ದರು.



''ಪ್ರತಿಯೊಂದಕ್ಕೂ ಒಂದು ಕೇಂದ್ರ ಬಿಂದುವಿರಬೇಕು. ಇವತ್ತಿನ ಸಂದರ್ಭದಲ್ಲಿ ಹೇಳುವುದಾದರೆ. ನಮಗೆ ಕಲಿಯಲು ಅವಕಾಶವಿದೆ. ಬುದ್ಧಿಮತ್ತೆಗೆ ಅವಕಾಶವಿದೆ. ಆದರೆ ಇವುಗಳ ಪ್ರಯೋಜನ ಪಡೆಯುವಂಥ ಕೇಂದ್ರ ತತ್ತ್ವ ಇಲ್ಲ. ನಮ್ಮ ಬದುಕಿನ ಕೇಂದ್ರ ಬಿಂದು ಯಾವುದು ಎನ್ನುವುದು ಯಾರಿಗೂ ಗೊತ್ತಿಲ್ಲ. ನಮ್ಮನ್ನು ಒಗ್ಗೂಡಿಸಿರುವ ಶಕ್ತಿಯಾದರೂ ಯಾವುದು? ಯಾವುದು ಅದು? ಈ ಕೇಂದ್ರಬಿಂದುವೇ ರಾಷ್ಟ್ರ. ಆದರೆ ನಮ್ಮ ದೇಶದಲ್ಲಿ ರಾಷ್ಟ್ರವಲ್ಲ, ವ್ಯಕ್ತಿ ಕೇಂದ್ರ ಬಿಂದು. ಇದು ಎಲ್ಲವನ್ನೂ ಬುಡಮೇಲಾಗಿಸಿತು. ಜನರು ವ್ಯಕ್ತಿಗತ ಚಿಂತನೆಗಳಿಗೆ, ಅಹಂಗೆ ಜೋತು ಬಿದ್ದರು. ಆರ್ಥಿಕ ಪ್ರಗತಿ, ಅಭಿವೃದ್ಧಿಯಾಗಬೇಕೆಂದು ಹೇಳುತ್ತೇವೆ. ಯಾರ ಅಭಿವೃದ್ಧಿ? ಯಾರ ಪ್ರಗತಿ ನಾವು ಬಯಸುತ್ತಿರುವುದು? ವ್ಯಕ್ತಿಯ ಅಭಿವೃದ್ಧಿಯೇ? ಇದು ಖಂಡಿತ ಎಂದೇ ನಾವು ವ್ಯಕ್ತಿಗತ ಜೀವನಮಟ್ಟದಲ್ಲಿ ಸುಧಾರಣೆಯಾಗಬೇಕೆಂದು ಇಚ್ಛಿಸುತ್ತೇವೆ. ಆದರೆ ರಾಷ್ಟ್ರದ ಜೀವನಮಟ್ಟ ವೃದ್ಧಿಗೊಂಡಂತೆ ತಂತಾನೇ ವ್ಯಕ್ತಿಯ ಜೀವನಮಟ್ಟವೂ ಸುಧಾರಿಸುವುದೆಂದು ಹೇಳುವವರು ಯಾರೂ ಇಲ್ಲ.''

ಇವತ್ತು ನಮಗೆ ಅತ್ಯಗತ್ಯವಾಗಿರುವುದು. ನಮ್ಮ ಗುರಿ, ನಮ್ಮ ಧ್ಯೇಯೋದ್ದೇಶಗಳನ್ನು ಗುರುತಿಸುವುದು. ಒಮ್ಮೆ ಗುರಿ, ಧ್ಯೇಯೋದ್ದೇಶಗಳು ಖಚಿತವಾದಲ್ಲಿ ಜನ ಸ್ವಯಂಪ್ರೇರಿತರಾಗಿ ಆ ದಿಕ್ಕಿನಲ್ಲಿ ಸಾಗುವರು. ಗುರಿ ಸಾಧನೆಯ ಮಾರ್ಗಗಳಲ್ಲಿ ಭಿನ್ನಾಭಿಪ್ರಾಯವಿರಬಹುದು. ಆದರೆ ನಂಬಿಕೆ ಮುಖ್ಯ. ಈ ದೇಶ ನಮ್ಮದು, ಈ ರಾಷ್ಟ್ರ ನಮ್ಮದು ಎನ್ನುವ ನಂಬಿಕೆ ಮುಖ್ಯ. ಒಮ್ಮೆ ಇದು ನಿರ್ಧಾರವಾದಲ್ಲಿ, ರಾಷ್ಟ್ರವೆಂಬ ನಿರ್ಧಾರವಾದಲ್ಲಿ, ಉಳಿದೆಲ್ಲ ವಿಷಯಗಳಲ್ಲೂ ಸಹಕಾರ – ಹೊಂದಾಣಿಕೆ ಸಾಧ್ಯ.

''ರಾಷ್ಟ್ರವೆಂದರೆ ಏನು? ನದಿ, ಪರ್ವತಗಳಷ್ಟೇ ಭಾರತವೆ? ನಾವು ಭಾರತದ ಬಗ್ಗೆ ಯೋಚಿಸುತ್ತಿರುವಾಗ ಭಾರತೀಯ ಸಮಾಜದ ಬಗ್ಗೆ ಯೋಚಿಸುತ್ತಿರುತ್ತೇವೆ. ಆದರೆ, ನಾವು ನಮ್ಮ ರಾಷ್ಟ್ರದ ಬಗ್ಗೆ ಚಿಂತೆ ಮಾಡೋಣ ಎಂದಾಗ, ನಮ್ಮೊಳಗಣ, ನಮ್ಮ ಅಂತರಂಗದ ಭಾವನೆಗಳು ನಮ್ಮನ್ನು ಮುನ್ನಡೆಸುತ್ತಿರುತ್ತವೆ. ಈ ಅಂತರಂಗದ ಭಾವನೆಗಳೇ ಬ್ರಿಟಿಷರ ವಿರುದ್ಧ ಹೋರಾಡಲು ನಮ್ಮಲ್ಲಿ ಸ್ಫೂರ್ತಿ ತುಂಬಿದವು. ಬ್ರಿಟಿಷರು ಹೋದ ಮೇಲೆ ಸರ್ಕಾರದ ಹೊಣೆಗೆ ಹೆಗಲು ಕೊಡುವುದು ನಮಗುಳಿಯಿತು. ಆದರೆ, ಆಗ ಯಾರೊಬ್ಬರೂ, ನಾವು ಯಾರು? ಎನ್ನುವ ಪ್ರಶ್ನೆ ಬಗ್ಗೆ ಯೋಚಿಸಲಿಲ್ಲ. ಬ್ರಿಟಿಷರು ಹೋದನಂತರ ನಾವೇ ಆಳರಸರಾದೆವು. ಆದರೆ

ಇದು 'ನಮ್ಮ ಆಡಳಿತ, ನಮ್ಮ ಆಳ್ವಿಕೆ' ಎಂದಾಗ ಯಾರ ಬಗ್ಗೆ ಹೇಳುತ್ತಿದ್ದೇವೆ. ಈ ನಾವು ಯಾರು? ನಮ್ಮ ದೇಶದ ವಂಶವೃಕ್ಷದ ಪತ್ತೆ ನಮ್ಮಿಂದ ಸಾಧ್ಯವಾದೀತೆ? ಈ ದೇಶದ ಜೀವನವನ್ನು ರೂಪಿಸಿದವರು. ಸಂಯೋಜಿಸಿದವರು ಯಾರು? ಯಾರು? ಇಲ್ಲಿ ನಾವು ಒಂದು ವಿಚಾರಕ್ಕೆ ತಲೆ ಬಾಗಲೇಬೇಕಾಗಿದೆ: ನಮ್ಮ ರಾಷ್ಟ್ರೀಯತೆ ಎಂದರೆ ಹಿಂದೂ ರಾಷ್ಟ್ರೀಯತೆ ಅದು ಹೊರತು ಬೇರಾವುದೂ ಇಲ್ಲ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಯಾರಾದರೂ ಹೊರಗಿನವರು ಈ ದೇಶಕ್ಕೆ ಬಂದರೆ, ಅವರು ಹಿಂದೂ ರಾಷ್ಟ್ರೀಯತೆಯೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿಸಿಕೊಳ್ಳಬೇಕು. ಇದಕ್ಕೆ ಮಾನದಂಡ ಏನಾಗಬೇಕು ಎನ್ನುವುದನ್ನು ನಿರ್ಧರಿಸಬೇಕು, ಆಗ ಮಾತ್ರ ನಮ್ಮಿಂದ ಒಬ್ಬ ವ್ಯಕ್ತಿಯ ರಾಷ್ಟ್ರೀಯತೆಯ ಧನಾತ್ಮಕ – ಋಣಾತ್ಮಕ ಅಂಶಗಳನ್ನು ನಿರ್ಧರಿಸಲು ಸಾಧ್ಯವಾದೀತು. ಇದೊಂದು ರೀತಿ ಉಷ್ಣಮಾಪಕದಿಂದ ನಮ್ಮ ದೇಹದ ಜ್ವರವನ್ನು ಅಳೆದಂತೆ. ಉಷ್ಣಮಾಪಕದಲ್ಲಿ ಮಾಮೂಲಿನ ಉಷ್ಣಾಂಶ ಮಿತಿಯನ್ನು ಗುರುತಿಸಲಾಗಿರುತ್ತದೆ. ಇದನ್ನು ಗಮನಿಸಿಯೇ ನಾವು ಜ್ವರದ ತಾಪ ಹೆಚ್ಚಾಗಿದೆಯೋ ಕಡಿಮೆಯಾಗಿದೆಯೋ ಎನ್ನುವುದನ್ನು ನಾವು ಅಳೆದು ನಿರ್ಧರಿಸುತ್ತೇವೆ. ಇದೇ ರೀತಿ, ಹಿಂದೂ ರಾಷ್ಟ್ರೀಯತೆ ಮಾಪನವೂ. ಇದು ಎಲ್ಲರಿಗೂ ತಿಳಿದ ವಿಷಯ. ನಮ್ಮ ರಾಷ್ಟ್ರ ಹಿಂದೂ ರಾಷ್ಟ್ರೀಯತೆ ಮೇಲೆ ನಿಂತಿರುವ ರಾಷ್ಟ್ರ. ಪ್ರಾಚೀನ ಕಾಲದಿಂದಲೂ ನಮ್ಮನ್ನು ಒಗ್ಗೂಡಿಸಿರುವ ಶಕ್ತಿ ಇದು."

## ಧರ್ಮ

ದೀನ್ ದಯಾಳರ ರಾಜಕೀಯ ಚಿಂತನೆಯಲ್ಲಿ ರಾಷ್ಟ್ರೀಯತೆಯಂತೆ, ಧರ್ಮ ಮತ್ತು ನೀತಿಯೇ ಪ್ರಧಾನ. ಭಾರತ ಪ್ರಬಲವಾದ ಧರ್ಮಾಭಿಮುಖವಾದ ರಾಷ್ಟ್ರ ಎನ್ನುವುದು ಉಪಾಧ್ಯಾಯರ ನಂಬಿಕೆ. ಆರೆಸ್ಸೆಸ್ ಸ್ವಯಂ ಸೇವಕರನ್ನುದ್ದೇಶಿಸಿ ಮಾಡಿದ ಭಾಷಣಗಳಲ್ಲಿ ಧರ್ಮ ಭಾರತದ ಜೀವ ಮತ್ತು ಆತ್ಮಗಳೆಂದೂ ಹೇಳಿದ್ದರು. ಅಲೀಗಢದಲ್ಲಿ ಆರೆಸ್ಸೆಸ್ ಏರ್ಪಡಿಸಿದ್ದ ಸಭೆಯೊಂದರಲ್ಲಿ ಅವರು, "ಭಾರತವನ್ನು ಜಾತ್ಯತೀತ ರಾಷ್ಟ್ರವೆಂದು ಘೋಷಿಸುವ ಮೂಲಕ ಭಾರತದ ಆತ್ಮದ ಮೇಲೆ ಆಕ್ರಮಣವೆಸಗಲಾಗಿದೆ. ಜಾತ್ಯತೀತ ರಾಷ್ಟ್ರ ಸಂಕಷ್ಟಗಳಿಂದ ತುಂಬಿದ ರಾಷ್ಟ್ರವಾಗಿರುತ್ತದೆ. ರಾವಣನ ಧರ್ಮರಹಿತ ಲಂಕೆಯಲ್ಲಿ ಅಪಾರ ಸುವರ್ಣ ಸಂಪತ್ತು ಶ್ರೀಮಂತಿಕೆಗಳಿದ್ದರೂ ಅಲ್ಲಿ ರಾಮ ರಾಜ್ಯವಿರುವುದಿಲ್ಲ" ಎಂದು ಹೇಳಿದ್ದರು.

ಧರ್ಮದ ಬಗ್ಗೆ ಉಪನ್ಯಾಸ ನೀಡುತ್ತ ದೀನದಯಾಳ್, ಧರ್ಮ ಎಂದರೆ ಜಾತಿಯಲ್ಲ, ಮತವಲ್ಲ ಎಂದು ಘೋಷಿಸಿದ್ದರು. ಧರ್ಮದ ಅರ್ಥವನ್ನು ಅವರು ಸರಳವಾಗಿ ವ್ಯಾಖ್ಯಾನಿಸಿದ್ದಾರೆ:

"ಧರ್ಮದಲ್ಲಿ ಸಂಘರ್ಷವಿಲ್ಲ, ಸಹಮತವಿದೆ. ಏಕರೀತಿಯ ಸ್ವಹಿತಾಸಕ್ತಿಗಳಿಂದಾಗಿ



ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಪರಸ್ಪರ ಸಂಬಂಧವಿದೆಯೆಂದು ಧರ್ಮಬೋಧಿಸುತ್ತದೆ. ಆದರೆ ನಮ್ಮೀ ಸಂಬಂಧ ಇರುವುದು ಏಕಾತ್ಮತೆಯಲ್ಲಿ. ಮಹಾಭಾರತದಲ್ಲಿ ಧರ್ಮ–ಅಧರ್ಮಗಳನ್ನು ಸರಳವಾದ ಮಾತುಗಳಲ್ಲಿ ವಿಶದಪಡಿಸಲಾಗಿದೆ. 'ನಾನು' ಎಂಬ ಸ್ವಾರ್ಥ ಭಾವನೆ ಅಧರ್ಮವನ್ನು ಸೂಚಿಸುತ್ತದೆ. ನಿಸ್ವಾರ್ಥ ಭಾವನೆ ಧರ್ಮವನ್ನು ಸೂಚಿಸುತ್ತದೆ. "ನನ್ನದು ಏನೂ ಇಲ್ಲ, ಎಲ್ಲವೂ ನಿನ್ನದು, ಎಲ್ಲ ನಿನಗೆ ಸೇರಿದ್ದು" ಎನ್ನುವ ಭಾವನೆ ಧರ್ಮವನ್ನು ಸೂಚಿಸುತ್ತದೆ, "ಎಲ್ಲವೂ ನನ್ನದು, ನನಗೆ ಸೇರಿದ್ದು" ಎನ್ನುವುದು ಅಧರ್ಮವನ್ನು ಸೂಚಿಸುತ್ತದೆ. ಎಲ್ಲವೂ ನನ್ನದು ಎನ್ನುವುದರಲ್ಲಿ ಸಮಾಜ ತನಗಾಗಿ ಇದೆ, ತಾನೇ ಕೇಂದ್ರಬಿಂದು ಎನ್ನುವ ಭಾವನೆ ಇದೆ. ಆದರೆ ಜಗತ್ತನ್ನು ಸಂತೋಷವಾಗಿರಿಸುವುದು ನಮ್ಮಿಚ್ಛೆಯಾಗಿದ್ದಲ್ಲಿ "ನನ್ನದಲ್ಲ" ಎನ್ನುವ ಭಾವನೆಯಿಂದ ನಾವು ಸಾಗಬೇಕು. ವ್ಯಕ್ತಿಸ್ವಾತಂತ್ರ್ಯ ಮತ್ತು ಸಮಾಜ ಶುಭಕ್ಕಾಗಿ ಸಮತೋಲ ಸಾಮರಸ್ಯಗಳನ್ನೂ ನಾವು ಸಾಧಿಸಬೇಕಾಗುತ್ತದೆ. ವ್ಯಕ್ತಿ ಸ್ವಾತಂತ್ರ್ಯವಿರಬೇಕು. ಅದರಲ್ಲಿ ಸಂದೇಹ ಬೇಡ, ಅದನ್ನು ನಿಯಂತ್ರಿಸುವುದೂ ಸಲ್ಲದು. ಆದರೆ ಇಂಥ ಸ್ವಾತಂತ್ರ್ಯವನ್ನು ವ್ಯಕ್ತಿ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವುದು ತಪ್ಪಾಗುತ್ತದೆ. ವ್ಯಕ್ತಿ ತನಗಾಗಿ ಸ್ವಾರ್ಥಕ್ಕಾಗಿ ಬದುಕಬಾರದು. ಇಡೀ ಸಮಾಜಕ್ಕಾಗಿ ಬದುಕಬೇಕು. ಆಗ ಮಾತ್ರ ಅವನಿಂದ ಸಮಾಜಸೇವೆ ಸಾಧ್ಯವಾಗುತ್ತದೆ."

## ಹಿಂದೂ ಧರ್ಮದ ಭವ್ಯತೆಗಾಗಿ

ಹಿಂದೂ ಸಂಘಟನೆ ಏಕೆ ಬೇಕು? ರಾಜಸ್ತಾನದಲ್ಲಿ ಆರೆಸ್ಸೆಸ್ ಸ್ವಯಂಸೇವಕರನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ದೀನ್ ದಯಾಳ್‌ಜಿ ಈ ಬಗ್ಗೆ ಸುದೀರ್ಘವಾಗಿ ಪ್ರಸ್ತಾಪಿಸಿದ್ದರು. ಅವರು ಹೀಗೆ ಹೇಳಿದ್ದರು :

"ರಾಷ್ಟ್ರದ ಭವ್ಯಕೀರ್ತಿಯನ್ನು, ಭಾರತದ ಘನತೆ, ಧವಳಕೀರ್ತಿಗಳನ್ನು ಪುನರ್ ಪ್ರತಿಷ್ಠಾಪಿಸಬೇಕೆಂಬ ಗುರಿಯನ್ನು ಆರೆಸ್ಸೆಸ್ ಪ್ರಾರ್ಥನೆಯಲ್ಲಿ ಪ್ರಸ್ತಾಪಿಸಲಾಗಿದೆ. ಹಳೆಯ ಘನತೆ, ವೈಭವಗಳನ್ನು ಮರಳಿತರಲು ಅಗತ್ಯವೆನಿಸಿದ್ದೆಲ್ಲವನ್ನು ಉಪಯುಕ್ತವೆನಿಸಿದ್ದೆಲ್ಲವನ್ನೂ ನಾವು ಮಾಡಬೇಕು ಎಂದು ಇದರ ಅರ್ಥ. ಧರ್ಮವನ್ನು ಅನುಸರಿಸುವ ಮೂಲಕ ನಾವು ಇದನ್ನು ಸಾಧಿಸುತ್ತೇವೆ ಎಂದೂ ಪ್ರಾರ್ಥನೆ ಹೇಳುತ್ತದೆ. ಹಾಗಿದ್ದಲ್ಲಿ ಆರೆಸ್ಸೆಸ್ ಮುಂದಿರುವ ನಿರ್ದಿಷ್ಟ ಕೆಲಸವಾದರೂ ಏನು? ಸಂಘಟನೆಯೇ ಅಥವಾ ಹಳೆಯ ವೈಭವವನ್ನು ಮರಳಿ ತರುವುದೆ ಅಥವಾ ಧರ್ಮ ರಕ್ಷಣೆಯೆ? ವಾಸ್ತವವಾಗಿ ಇವೆಲ್ಲ ಒಂದಕ್ಕೊಂದು ಸಂಬಂಧ ಹೊಂದಿವೆ. ಬೆಳಕು ಬರಲು ನಮಗೆ ಬಲ್ಬ್ ಮತ್ತು ವಿದ್ಯುಚ್ಛಕ್ತಿ ಎರಡೂ ಬೇಕು. ಇದೇ ರೀತಿ ನಾವು, ನಮ್ಮ ಸಂಘಟಿತ ಶಕ್ತಿ ಧರ್ಮವನ್ನು ಪಾಲಿಸುವಂತೆ ಧರ್ಮ ಪಾಲಿಸುವ ಮೂಲಕ ನಮ್ಮ ರಾಷ್ಟ್ರಕ್ಕೆ ಹಿಂದಿನ ಪರಮ ವೈಭವವನ್ನು ಮರಳಿ ತರುವಂತೆ

**ಅನುಗ್ರಹಿಸು ಎಂದು ನಾವು ದೇವರ ಅನುಗ್ರಹಕ್ಕಾಗಿ ಪ್ರಾರ್ಥನೆ ಮಾಡುತ್ತೇವೆ. ಈ ಒಂದು ವಾಕ್ಯ ಸಕಲವನ್ನೂ ಅರುಹುತ್ತದೆ.''**

**''ನೀವು ವ್ಯಕ್ತಿತ್ವವಾದ ಪ್ರತಿಪಾದಕರೆ ಅಥವಾ ಸಮಾಜವಾದಿಯೆ? ಎಂದು ಯಾರಾದರೂ ಪ್ರಶ್ನಿಸಿದಾಗ, 'ನಾವು ಇವರೆಡರ ಬಗ್ಗೆಯೂ ಚಿಂತನಮಂಥನ ಮಾಡುತ್ತೇವೆ' ಎಂದು ನಾನು ಯಾವಾಗಲೂ ಹೇಳುತ್ತಿರುತ್ತೇನೆ. ನಮಗೆ ಅಖಂಡ ದೃಷ್ಟಿಯಲ್ಲಿ, ಎಲ್ಲವನ್ನೂ ಸಮಗ್ರವಾಗಿ ನೋಡುವುದರಲ್ಲಿ ನಂಬಿಕೆ ಇದೆ. ಏಕಾತ್ಮ ಎಲ್ಲವನ್ನೂ ಪೂರ್ಣಗೊಳಿಸುತ್ತದೆ ಹಾಗೂ ಎಲ್ಲರನ್ನೂ ಕ್ರಿಯಾಶೀಲಗೊಳಿಸುತ್ತದೆ ಎನ್ನುವುದು ನಮ್ಮ ನಂಬಿಕೆ. ಹಿಂದೂಗಳನ್ನು ಸಂಘಟಿಸುವ ಮೂಲಕ ನಾವು ಹಿಂದೂಗಳ ಮನಸ್ಸಿನಲ್ಲಿ ಏಕತೆಯ ಭಾವನೆಯನ್ನು ತರಬೇಕು. ಏಕತೆಯ ಭಾವನೆ ಮೂಡಿರಬೇಕು ಎಂಬುದೇ ನಮ್ಮ ಉದ್ದೇಶ. ಇದೇ ಹಿಂದೂ ಸಂಘಟನೆಯ ಅರ್ಥ. ಅಖಂಡ ಜೀವನ ಆಶೋತ್ತರಗಳನ್ನು ಬಿತ್ತುವುದೇ ನಮ್ಮ ಉದ್ದೇಶ.**

**(ಉದಯಪುರದಲ್ಲಿ ೧೯೬೪ರ ಜೂನ್ ೫ ರಂದು ಆರೆಸ್ಸೆಸ್ ಶಿಬಿರದಲ್ಲಿ ಮಾಡಿದ ಭಾಷಣ)**

## ವ್ಯಕ್ತಿ ಮತ್ತು ಸಮಾಜ

ವ್ಯಕ್ತಿ ಮತ್ತು ಸಮಾಜದ ನಡುವೆ ಅಂತರ್ ಸಂಬಂಧವಿರಬೇಕು. ವ್ಯಕ್ತಿಗೆ ಸಾಮಾಜಿಕ ಬದ್ಧತೆ ಇರಬೇಕು ಎನ್ನುತ್ತದೆ ಆರೆಸ್ಸೆಸ್ ಸಿದ್ಧಾಂತ. ವ್ಯಕ್ತಿಯ ವ್ಯಕ್ತಿತ್ವವನ್ನು ಕಾಪಾಡಿ ಅದನ್ನು ಸಮಾಜದ ಹಿತಕ್ಕೆ ಮುಡುಪಾಗಿಸುವುದರಲ್ಲಿ ಆರೆಸ್ಸೆಸ್ ಪಾತ್ರವಿದೆ ಎಂದು ದೀನ್‌ದಯಾಳಜಿ ಹೇಳುತ್ತಿದ್ದರು. ವ್ಯಕ್ತಿರಾಜಕಾರಣದ ನಡುವೆಯೂ ದೀನ್‌ದಯಾಳ್ ಅವರು ಸ್ವಾರ್ಥರಹಿತ ನಾಯಕತ್ವವನ್ನು ಬೆಳೆಸಿಕೊಂಡಿದ್ದರು. ಇದಕ್ಕೆ ಅವರಿಗಿದ್ದ ಆರೆಸ್ಸೆಸ್ ಹಿನ್ನೆಲೆಯೇ ಕಾರಣ. ಎಂದೇ ಈ ವಿಷಯದಲ್ಲಿ ಅವರ ಅಭಿಪ್ರಾಯಗಳು ಮುಖ್ಯವಾಗುತ್ತದೆ. ''ಮನುಷ್ಯನ ವ್ಯಕ್ತಿತ್ವ ಎನ್ನುವುದು ದೇಹ–ಮನಸ್ಸು–ಬುದ್ಧಿ ಮತ್ತು ಆತ್ಮಗಳ ಮಿಶ್ರಣ. ವ್ಯಕ್ತಿಯ ಸಂತೋಷ ಎಂದರೆ ವ್ಯಕ್ತಿತ್ವದ ಈ ಎಲ್ಲ ಭಾಗಗಳ ಸಂತೋಷ. ಇವುಗಳಲ್ಲಿ ಯಾವದೋ ಒಂದು ಪ್ರತ್ಯೇಕವಾಗಿ ಸಂತೋಷಕ್ಕೆ ಕಾರಣವಾಗುತ್ತದೆ ಎಂದರೆ ನಮ್ಮ ಆಲೋಚನೆ ಪರಿಪೂರ್ಣವಲ್ಲ. ನಾವು ಹಿಂದಿನ ಜನ್ಮವನ್ನೂ ಪರಿಗಣಿಸಬೇಕಾಗುತ್ತದೆ. ವ್ಯಕ್ತಿಯ ಸುಖಸಂತೋಷಗಳ ಬಗ್ಗೆ ಯೋಚಿಸುವಾಗ ನಾವು ಈ ನಾಲ್ಕು ಘಟಕಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಹಾಗೆಯೇ ಸಮಾಜದ ಹಿತ, ಸಂತೋಷಗಳ ಬಗ್ಗೆ ಚಿಂತಿಸುವಾಗಲೂ ನಾವು ಈ ನಾಲ್ಕು ಘಟಕಗಳನ್ನು ಲಕ್ಷಿಸಬೇಕಾಗುತ್ತದೆ. ಹುಟ್ಟಿದಾಗಿನಿಂದ ವ್ಯಕ್ತಿಯ ಸುಖ–ಸಂತೋಷಗಳು ಸಮಾಜದ ಸುಖ



ಸಂತೋಷಗಳನ್ನು ಅವಲಂಬಿಸಿರುತ್ತದೆ.''

## ಭಾರತೀಯ ಹಾಗೂ ಪಾಶ್ಚಾತ್ಯ ಸಿದ್ಧಾಂತಗಳು

ಭಾರತೀಯ ಮತ್ತು ಪಾಶ್ಚಾತ್ಯ ಸಿದ್ಧಾಂತಗಳ ನಡುವಣ ಭಿನ್ನತೆಯನ್ನು ಗುರುತಿಸುತ್ತಾ ದೀನದಯಾಳ್‌ಜಿಯವರು ಭಾರತೀಯ ಚಿಂತನೆ ಸಹಕಾರಕ್ಕೆ, ಪರಸ್ಪರ ಪೂರಕವಾಗಿರುವುದಕ್ಕೆ ಹೆಚ್ಚು ಪ್ರಾಮುಖ್ಯ ನೀಡುತ್ತದೆ ಎಂದು ಹೇಳಿದ್ದಾರೆ. ಆದರೆ ಪಾಶ್ಚಾತ್ಯ ಚಿಂತನೆ ಸ್ಪರ್ಧೆ–ಪೈಪೋಟಿಗಳ ಹೋರಾಟವನ್ನು ಆಧರಿಸಿದೆ. ಸ್ಪರ್ಧೆ ಪಾಶ್ಚಾತ್ಯದ ಬದುಕಿನ ಮೂಲಾಂಶಗಳಲ್ಲಿ ಒಂದು. ನಮ್ಮ ಸಾಮಾಜಿಕ ವಿಚಾರಗಳು, ಪರಿಕಲ್ಪನೆಗಳು ವ್ಯಕ್ತಿಯ ಪರಿಪೂರ್ಣತೆ ಕುರಿತಾಗಿವೆ. ಪಾಶ್ಚಾತ್ಯ ಚಿಂತನೆಯಲ್ಲಿ ಮಾನವ ಶರೀರಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ಆದರೆ ಭಾರತೀಯ ಚಿಂತನೆ ವ್ಯಕ್ತಿಯ ಬುದ್ಧಿಮತ್ತೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಮಾನವನ ಮನಸ್ಸು ಮತ್ತು ಆಧ್ಯಾತ್ಮಿಕ ಆಗತ್ಯಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಇಲ್ಲೂ ವ್ಯಕ್ತಿ ಮತ್ತು ಸಮಾಜದ ನಡುವೆ ತಿಕ್ಕಾಟಗಳು ಸಂಭವಿಸುತ್ತವೆ. ಆದರೆ ನಿಯಮವಾಗಿಯಲ್ಲ. ಅಪವಾದವಾಗಿಯಷ್ಟೆ. ಇಂಥ ತಿಕ್ಕಾಟ ಧರ್ಮವಲ್ಲ ವಿಕೃತಿ.

ಪಾಶ್ಚಾತ್ಯರಲ್ಲಿ ಸಂಘರ್ಷವೇ ಚಿಂತನೆಯ ಮೂಲಾಧಾರ ಎಂದೇ ಪಾಶ್ಚಾತ್ಯ ಚಿಂತಕರಲ್ಲಿ ಎರಡು ಪಂಥಗಳಾಗಿವೆ. ಒಂದು ಗುಂಪು ಸಮಾಜದ ಹಿತಕ್ಕಿಂತ ವ್ಯಕ್ತಿಯ ಹಿತಕ್ಕೆ ಪ್ರಾಮುಖ್ಯ ನೀಡುತ್ತದೆ. ವ್ಯಕ್ತಿಯ ಹಿತಾಸಕ್ತಿಗಳು ಸಮಾಜದ ಅಧೀನ ಎಂದು ಇನ್ನೊಂದು ಪಂಥದ ನಂಬಿಕೆ. ಮೊದಲ ಪಂಥ ವ್ಯಕ್ತಿಗೆ ಅನಿಯಂತ್ರಿತ ಸ್ವೇಚ್ಛಾ ಸ್ವಾತಂತ್ರ್ಯ ನೀಡುತ್ತದೆ. ಆದರೆ ಇನ್ನೊಂದು ಪಂಥ ವ್ಯಕ್ತಿ ಸ್ವಾತಂತ್ರ್ಯವನ್ನು ಖಂಡಿಸುತ್ತದೆ.

ಪಾಶ್ಚಾತ್ಯರ ಜೀವನ ಶೈಲಿ ''ಉಳಿಯುವ ಸಾಮರ್ಥ್ಯ ಉಳ್ಳವರೇ ಉಳಿಯುತ್ತಾರೆ'' ಎಂಬ ಡಾರ್ವಿನ್ನನ ಸಿದ್ಧಾಂತವನ್ನು ಆಧರಿಸಿದೆ. ಅಲ್ಲಿ ಸಂಘರ್ಷಣೆಗಳು ಸ್ವಾರ್ಥಮೂಲವಾದವು. ವ್ಯಕ್ತಿಗಳ ನಡುವಣ ಸಂಬಂಧವೂ ಪರಸ್ಪರ ಹಿತಾಸಕ್ತಿಯನ್ನು ಅವಲಂಬಿಸಿರುತ್ತದೆ. ಸಮಾಜದೊಂದಿಗೆ ವ್ಯಕ್ತಿಯ ಸಂಬಂಧವೂ ಸ್ವಹಿತವನ್ನೇ ಆಧರಿಸಿರುತ್ತದೆ. ಸಮಾಜದ ಸ್ವಾರ್ಥದಿಂದ ರಾಷ್ಟ್ರರಚನೆಯಾಗಿದೆ ಎಂದು ಪಾಶ್ಚಾತ್ಯ ಚಿಂತಕರು ನಂಬಿದ್ದಾರೆ.

## ಕರ್ತವ್ಯ ಸ್ಫೂರ್ತಿ

ಪಾಶ್ಚಾತ್ಯ ಜಗತ್ತಿನಲ್ಲಿ ವ್ಯಕ್ತಿ ತನ್ನ ಹಕ್ಕುಗಳ ರಕ್ಷಣೆಗೆ ಪ್ರಯತ್ನಿಸುತ್ತಾನೆ. ಪರಸ್ಪರ ಹಕ್ಕುಗಳಿಗಾಗಿ ಪತಿ–ಪತ್ನಿಯರು ಕಚ್ಚಾಡುತ್ತಾರೆ. ಅವರ ಮದುವೆ ಪ್ರೇಮ ವಿವಾಹವಾದರೂ ಅವರ ವೈವಾಹಿಕ ಜೀವನ ಘರ್ಷಣಾಮಯವಾದದ್ದು. ವಾಸ್ತವವಾಗಿ ಪ್ರೀತಿ ಇದ್ದಲ್ಲಿ ಸಂಘರ್ಷಕ್ಕೆ ಜಾಗವಿಲ್ಲ.

ಆದರೆ ಭಾರತದಲ್ಲಿ ನಮಗೆ ಹಕ್ಕುಗಳಿಗಿಂತ ಕರ್ತವ್ಯ ಮುಖ್ಯ. ಕರ್ತವ್ಯವೇ ನಮಗೆ ಪ್ರೇರಣೆ. ಕರ್ತವ್ಯ ಪಾಲನೆಗೆ ನಾವು ಹೆಚ್ಚಿನ ಒತ್ತು ಕೊಟ್ಟಿದ್ದೇವೆ. ಪರಿಣಾಮವಾಗಿ ನಮ್ಮ ಸಮಾಜದಲ್ಲಿ ಸೇವಾಮನೋಭಾವವೇ ಪ್ರಧಾನವಾದದ್ದು. ಆದ್ದರಿಂದಲೇ ಸಾಮಾಜಿಕ ಒಗ್ಗಟ್ಟು ಮತ್ತು ಸಹಿಷ್ಣುತೆಯ ಭಾವನೆ, ಸಹಿಷ್ಣುತಾ ಮನೋಭಾವ ನಮ್ಮ ರಾಷ್ಟ್ರದಲ್ಲಿದೆ. ಮಾನವ ಜೀವನದಲ್ಲಿ ಸುಖಸಂತೋಷಗಳಿವೆ.

ಪ್ರತಿಯೊಬ್ಬ ವ್ಯಕ್ತಿಯೂ ಸಮುದಾಯದ ಬಗ್ಗೆ ಒಲವನ್ನು ಹೊಂದಿರಬೇಕಾದ್ದು ಅತ್ಯಗತ್ಯ. ಇಂಥ ಒಲವಿನ ಸಂಬಂಧದಿಂದ ವ್ಯಕ್ತಿ ತನ್ನ ಅಸ್ಮಿತೆಯನ್ನು ಕಳೆದುಕೊಳ್ಳುವುದಿಲ್ಲ. ಆದರೆ ಇಂಥ ಸಂಬಂಧದಿಂದ ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯವಾಗುತ್ತದೆ. ಯಾರಾದರೂ ತಾನು ಸಮಾಜದಿಂದ ಬೇರೆ ಎಂದು ಯೋಚಿಸಲಾರಂಭಿಸಿದಾಗ ಘರ್ಷಣೆ ಶತಃಸಿದ್ಧ. ನಿಸರ್ಗದ ನಿಯಮದ ಪ್ರಕಾರ ಸಮುದ್ರದ ನೀರು ಮೋಡವಾಗಿ ರೂಪುಗೊಳ್ಳಲು ಆವಿಯಾಗುತ್ತದೆ. ಮೋಡಗಳು ಮಳೆ ಸುರಿಸುತ್ತವೆ. ನೀರು ಮತ್ತೆ ಸಮುದ್ರವನ್ನು ಸೇರುತ್ತದೆ. ಬ್ರಹ್ಮಾಂಡವನ್ನು ಪೋಷಿಸುವುದು ಇದೇ. ಸಮಾಜದ ಬಗ್ಗೆ ವ್ಯಕ್ತಿಯ ನಡವಳಿಕೆಯನ್ನೂ ಇದೇ ರೀತಿ ಪರಿಭಾವಿಸಬೇಕು. ಇದೇ ಮಾರ್ಗದರ್ಶನವಾಗಬೇಕು. ಆಗ ನಮ್ಮ ತತ್ತ್ವಶಾಸ್ತ್ರ ದರ್ಶನಗಳು ವಿಶ್ವಶಾಂತಿಗೆ ಹಾಗೂ ಮಾನವ ಕುಲದ ಸುಖ ಸಂತೋಷಗಳಿಗೆ ಪ್ರಯೋಜನಕಾರಿಯಾಗುತ್ತದೆ.

## ಆದರ್ಶ ಸ್ವಯಂಸೇವಕ

ಆರೆಸ್ಸೆಸ್‌ನಲ್ಲಿ ಬೋಧಿಸುವ ಸಾಮಾಜಿಕ ಚಿಂತನೆ ಮೇಲಿನ ಆಲೋಚನೆಗಳಲ್ಲಿ ಅಡಕವಾಗಿದೆ. ಅದನ್ನು ವ್ಯಕ್ತಿಯ ಸಾಮಾಜಿಕ ಸಿದ್ಧಾಂತವೆಂದು ವರ್ಣಿಸಬಹುದು. ದೀನದಯಾಳ್‌ಜಿಯವರು ಈ ಸಿದ್ಧಾಂತದ ವ್ಯಾಖ್ಯಾನಕಾರರಷ್ಟೇ ಆಗಿರದೆ ಅದರೊಳಗಿನ ಆದರ್ಶದ ಮೂರ್ತಿಸ್ವರೂಪರಾಗಿದ್ದರು. ಈ ತತ್ತ್ವಾದರ್ಶಗಳನ್ನು ಅವರು ತಮ್ಮ ಜೀವನದಲ್ಲಿ ಆಚರಿಸಿದರು. ಈ ಕಾರಣದಿಂದಾಗಿಯೇ ಗುರೂಜಿಯವರು ದೀನದಯಾಳಜಿ ಅವರನ್ನು ಆದರ್ಶ ಸ್ವಯಂಸೇವಕ ಎಂದು ಕರೆದಿದ್ದರು.

ದೀನದಯಾಳಜಿ ಅವರು ತಮ್ಮ ಭಾಷಣದಲ್ಲಿ ಆರೆಸ್ಸೆಸ್ ಸ್ವಯಂಸೇವಕನ ಪರಿಕಲ್ಪನೆಯನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಅವರು ಹೀಗೆ ಹೇಳಿದ್ದಾರೆ.

> **"ಸಾಮಾನ್ಯವಾಗಿ ಸ್ವಯಂಸೇವಕ ಕೆಲಸ ಮಾಡುತ್ತಾನೆ. ಆದರೆ ಸಂಬಳ ಕೇಳುವುದಿಲ್ಲ ಎಂದು ನಮ್ಮ ಅರ್ಥ ಅಥವಾ ಕಾರ್ಯಕ್ರಮವೊಂದನ್ನು ನಡೆಸಲು ಒಗ್ಗೂಡಿದ ಕಾರ್ಯಕರ್ತರೇ ಸ್ವಯಂಸೇವಕರು. ಕಾರ್ಯಕ್ರಮ ಮುಗಿದಕೂಡಲೇ ಅವರು ಸ್ವಯಂಸೇವಕರಾಗಿರುವುದಿಲ್ಲ ಎನ್ನುವ ಭಾವನೆಯೂ ಇದೆ. ಸಮಾಜದ ಪುನರ್ ನಿರ್ಮಾಣದಲ್ಲಿ ನಾವು ಸ್ವಯಂಸೇವಕರ ಪಾತ್ರವನ್ನು ಮಾನ್ಯ ಮಾಡಿದ್ದೇವೆ.**



> **ಸಮಾಜವನ್ನು ಸಂಘಟಿಸುವ ಮಹಾನ್ ಕೆಲಸವನ್ನು ನಾವು ಕೈಗೊಂಡಿದ್ದೇವೆ. ಇದಕ್ಕಾಗಿ ಸಮರ್ಪಿಸಿಕೊಂಡವನು ಸ್ವಯಂಸೇವಕ.**
>
> **ನಾವು ನಮ್ಮನ್ನು ಹಿಂದೂಗಳು ಎಂದು ಕರೆದುಕೊಂಡಾಗ ಏನದರ ಅರ್ಥ? ಹಿಂದೂ ಎನ್ನುವುದು ನಮ್ಮ ಜೀವನ ಶೈಲಿಯ, ಜೀವನ ಪದ್ಧತಿಯ ಹೆಸರು. ಹೀಗಾಗಿ ನಾವು ಹಂಗಾಮಿಯಲ್ಲಿ ಜೀವಾವಧಿ ಸ್ವಯಂಸೇವಕರು. ಸಮಾಜಕ್ಕಾಗಿ ತಮ್ಮ ಬದುಕನ್ನು ಸಮರ್ಪಿಸಿಕೊಂಡ ಸ್ವಯಂಸೇವಕರನ್ನು ಡಾ. ಹೆಡ್ಗೇವಾರ್ ಸೃಷ್ಟಿಸಿದ್ದಾರೆ. ಸ್ವಯಂಸೇವಕರಾಗಿರುವುದೇ ನಮ್ಮ ಹಿಂದುತ್ವ 'ಹಿಂದು' ಘನತೆ, ಹಿರಿಮೆಗಳಿಗೆ ತಕ್ಕುದಾಗಿರಬೇಕು ನಮ್ಮ ವ್ಯವಹಾರಗಳು, ನಮ್ಮ ಕೆಲಸಕಾರ್ಯಗಳು".**
>
> **(೧೯೬೫ರಲ್ಲಿ ನೈರೋಬಿಯಲ್ಲಿ ಮಾಡಿದ ಭಾಷಣ)**

ಆರೆಸ್ಸೆಸ್ ಸಿದ್ಧಾಂತಿಗಳೂ ಸರಸಂಘ ಚಾಲಕರೂ ಆದ ಶ್ರೀಗುರೂಜಿಯವರು ಮೂವತ್ತೂರು ವರ್ಷಗಳ ಅಧಿಕಾರಾವಧಿಯಲ್ಲಿ ಸ್ವಯಂಸೇವಕನಿಗಿರಬೇಕಾದ ಗುಣಶೀಲಗಳ ಬಗ್ಗೆ ಮಾರ್ಗದರ್ಶನ ನೀಡಿದ್ದಾರೆ. ಸ್ವಯಂಸೇವಕನ ಕೆಲಸ ಹೇಗಿರಬೇಕು. ಅವನ ಸ್ವಭಾವ ಹೇಗಿರಬೇಕು, ಮನೋಭಾವ ಹೇಗಿರಬೇಕು. ಅವನ ಧ್ಯೇಯೋದ್ದೇಶಗಳು ಏನಾಗಿರಬೇಕು ಎನ್ನುವುದರ ಬಗ್ಗೆ ಮಾರ್ಗದರ್ಶನ ಮಾಡಿದ್ದಾರೆ. ದೀನ ದಯಾಳ್ ಉಪಾಧ್ಯಾಯರ ವ್ಯಕ್ತಿತ್ವವೇ ಆರೆಸ್ಸೆಸ್ ಸಿದ್ಧಾಂತದಿಂದ ಪ್ರಭಾವಿತವಾದದ್ದು.

## ಆರೆಸ್ಸೆಸ್ ಫಲ

"ಪ್ರಜಾಪ್ರಭುತ್ವದ ಸಮಸ್ಯೆ ಸಜ್ಜನರ ಸಮಸ್ಯೆಯೇ ಆಗಿದೆ" ಎಂದು ಬ್ರಿಟನ್ನಿನ ಖ್ಯಾತ ರಾಜ್ಯಶಾಸ್ತ್ರಜ್ಞ, ರಾಜಕೀಯ ಪಂಡಿತ ಪ್ರೊ. ಹೆರಾಲ್ಡ್ ಲಾಸ್ಕಿ ಹೇಳಿದ್ದಾರೆ. ಪ್ರಜಾಪ್ರಭುತ್ವದ ಯಶಸ್ಸು ವ್ಯಕ್ತಿಯ ಸಜ್ಜನಿಕೆಯನ್ನು ಅವಲಂಬಿಸಿದೆ. ದೀನ್‌ದಯಾಳ್‌ಜಿ ಆರೆಸ್ಸೆಸ್‌ನಿಂದ ಬಂದವರು. ಸಜ್ಜನಿಕೆಯ, ಸಮರ್ಪಣ ಮನೋಭಾವದ ವ್ಯಕ್ತಿಗಳನ್ನು ರೂಪಿಸುವುದು ಆರೆಸ್ಸೆಸ್‌ನ ಗುರಿ. ಇದರ ಪರಿಣಾಮವಾಗಿಯೇ ದೀನ್‌ದಯಾಳಜಿ ಜನಸಂಘ ಕಟ್ಟುವಾಗ ಸಂಘಟನಾ ಸಾಮರ್ಥ್ಯದಿಂದ ಸಜ್ಜಿತರಾಗಿದ್ದರು. ಅವರಲ್ಲಿ ಕಾರ್ಯಕರ್ತರನ್ನು ರೂಪಿಸುವ ಕೌಶಲವಿತ್ತು ಹಾಗೂ ತತ್ತ್ವ ಸಿದ್ಧಾಂತಗಳ ಸ್ಪಷ್ಟ ದರ್ಶನವಿತ್ತು.

ದೀನ್‌ದಯಾಳ್‌ಜಿ ಅವರ ನಾಯಕತ್ವ ಸಂಪೂರ್ಣ ಭಿನ್ನವಾದ ಚಿಂತನ ಕ್ರಮ, ವಿನ್ಯಾಸಗಳಿಂದ, ಸಾಮಾಜಿಕ ಸ್ಫೂರ್ತಿಯಿಂದ ರೂಪುಗೊಂಡದ್ದು. ರಾಜಕೀಯ ಇತಿಹಾಸದ ದೃಷ್ಟಿಕೋನದಿಂದ ಆರೆಸ್ಸೆಸ್ ಸಿದ್ಧಾಂತವನ್ನು ಚರ್ಚಿಸುವುದು. ಅದರ ಮೌಲ್ಯಮಾಪನ ಮಾಡುವುದು ಇಲ್ಲಿ ಅಪ್ರಕೃತ. ಆರೆಸ್ಸೆಸ್ ತನ್ನ ಕಾರ್ಯ ವೈಖರಿಯಿಂದ ಅನೇಕರ ಜೀವನ ಮತ್ತು ವ್ಯಕ್ತಿತ್ವಗಳನ್ನು ರೂಪಿಸಿತು. ಅಲ್ಲದೆ ಅದು ವ್ಯಕ್ತಿಗಳ

ಚಿಂತನಶೀಲತೆಯನ್ನು ತಿದ್ದಿ ತೀಡಿ ರೂಪಿಸಿತು. ಈ ಸಂಗತಿಯನ್ನು ಬಹಿರಂಗಪಡಿಸಲೆಂದೇ ಈ ಒಂದು ವಿಶ್ಲೇಷಣಾತ್ಮಕ ಅಧ್ಯಯನವನ್ನು ಮಾಡಲಾಗಿದೆ. ೧೯೨೫ ಮತ್ತು ೧೯೫೦ರ ಅವಧಿಯಲ್ಲಿ ಆರೆಸ್ಸೆಸ್ ಸಿದ್ಧಾಂತ ಒಂದು ತಾಂತ್ರಿಕ ಪರಿಭಾಷೆಯನ್ನು ಕರಗತ ಮಾಡಿಕೊಂಡಿತು. ಸಾಮಾಜಿಕ ಮತ್ತು ರಾಷ್ಟ್ರೀಯ ಮಾರ್ಗ ಮನೋಧರ್ಮಗಳನ್ನು ರೂಪಿಸಲಾಯಿತು. ದೀನ್ ದಯಾಳ್‌ಜಿ ಆರೆಸ್ಸೆಸ್ ಸಿದ್ಧಾಂತದ ಸಂಕೇತವಾಗಿದ್ದರು.



# ೧೨. ಗಾಂಧೀಜೀ ಮತ್ತು ದೀನ್ ದಯಾಳ್: ಇಬ್ಬರು ದ್ರಷ್ಟಾರರು

**ಡಾ. ವಾಲ್ಟರ್ ಕೆ ಆಂಡರ್‌ಸನ್***

೧೯೨೦ರ ದಶಕದಲ್ಲಿ ಭಾರತ ಸ್ವಾತಂತ್ರ್ಯ ಹೋರಾಟದ ಅಗ್ರಗಣ್ಯ ನಾಯಕರಾಗಿ ಮಹಾತ್ಮ ಗಾಂಧಿಯವರು ಗೋಚರಿಸಿದ ನಂತರ, ಅವರ ಬದುಕು, ಅವರ ಚಿಂತನೆ ಮತ್ತು ಅವರ ಕಾರ್ಯಕ್ರಮಗಳು ಒರೆಗಲ್ಲಾದವು. ಅವೇ ಒಂದು ಮಾನದಂಡವೆನಿಸಿಕೊಂಡವು. ಈ ಮಾನದಂಡದಿಂದಲೇ ಭಾರತೀಯ ರಾಜಕಾರಣದ ಮತ್ತು ಸಾಮಾಜಿಕ ಜೀವನದ ವ್ಯಕ್ತಿಗಳನ್ನು ಅಳೆದು ನೋಡಲಾಯಿತು. ಮಹಾತ್ಮಗಾಂಧಿಯವರೇ ಒಂದು ಮಾನದಂಡವಾದರು. ಜನತಾ ಪಕ್ಷದ ವಿಜಯದ ನಂತರ ಗಾಂಧಿಯವರ ಬಗೆಗಿನ ಆಸಕ್ತಿಯ ಪುನುರುಜ್ಜೀವನ ಎದ್ದು ಕಾಣುತ್ತಿದೆ. ಜನತಾ ಪಕ್ಷದ ನಾಯಕರುಗಳ ಸಿದ್ಧಾಂತದ ತಾಯಿ ಬೇರು ಗಾಂಧೀಜಿಯವರೇ. ಇದೇ ಕಾಲಕ್ಕೆ ದೀನ್ ದಯಾಳ್ ಉಪಾಧ್ಯಾಯರ ಬದುಕಿನಲ್ಲೂ ಆಸಕ್ತಿದಾಯಕವಾದಂಥ ಬೆಳವಣಿಗೆಯೊಂದು ಕಾಣಿಸಿಕೊಂಡಿತು. ಇತ್ತೀಚಿನವರೆಗೆ ಉಪಾಧ್ಯಾಯರು ಜನಸಂಘದ ಆಚೆಯ ಪ್ರಪಂಚಕ್ಕೆ ಅಪರಿಚಿತರೇ ಆಗಿದ್ದರು.

ಬೌದ್ಧಿಕ ಹಾಗೂ ಸೈದ್ಧಾಂತಿಕ ಕಾರಣಗಳಿಂದಾಗಿ ಇವರಿಬ್ಬರನ್ನು ಹೋಲಿಸಿ ನೋಡುವುದು ಅನಿವಾರ್ಯ. ಈ ಕೆಲಸದಲ್ಲಿ ಬಂಡೆಗಾತ್ರದ ಅಡೆತಡೆಗಳಿವೆ. ಇವರಿಬ್ಬರೂ ಕೆಲಸಮಾಡಿದ ರಾಜಕೀಯ ವಾತಾವರಣ ಭಿನ್ನವಾಗಿತ್ತು. ಇವರ ಸಾಮಾಜಿಕ ಹಿನ್ನೆಲೆಗಳೂ ಭಿನ್ನವಾಗಿದ್ದವು. ಅವರ ಆ ತತ್‌ಕ್ಷಣದ ರಾಜಕೀಯ ಉದ್ದೇಶಗಳೂ ಭಿನ್ನವಾಗಿದ್ದವು. ಆದರೆ ಸಮಸ್ಯೆ ಎಂದರೆ ಉಪಾಧ್ಯಾಯರ ಬಗ್ಗೆ ಮಾಹಿತಿ ಅಲಭ್ಯವಾಗಿರುವುದು. ಗಾಂಧೀಜಿಯವರಂತೆ ಅವರು ಚಿರಪರಿಚಿತರಾಗಿರಲಿಲ್ಲ. ಅವರು ಎಲ್ಲರ ಕಣ್ಣಿಗೂ ಬೀಳದೆ ಕೆಲಸ ಮಾಡಲು ಇಚ್ಛಿಸುತ್ತಿದ್ದರು. ಅವರ ಜೀವನ ಮತ್ತು ಚಿಂತನೆಗಳು ಸಾರ್ವಜನಿಕವಾಗಿ ಹೆಚ್ಚಾಗಿ ಪ್ರಕಟವಾಗಿಲ್ಲ. ಈ ಪರಿಸ್ಥಿತಿಯನ್ನು ಸುಧಾರಿಸಲು ಈಗ ಭಾರತದಲ್ಲಿ ಸಂಶೋಧನೆ ನಡೆಯುತ್ತಿದೆ. ಈ ಸಂಶೋಧನೆ ಪೂರ್ಣಗೊಳ್ಳುವ ವೇಳೆಗೆ ಭಾರತೀಯ ಸಾಮಾಜಿಕ

* ಅಮೆರಿಕನ್ ವಿದ್ವಾಂಸರು "Brotherhood in Saffron" ಗ್ರಂಥದ ಗ್ರಂಥಕರ್ತರು.

ಹಾಗೂ ರಾಜಕೀಯ ಚಿಂತನೆಗಳಿಗೆ ಅವರ ಕೊಡುಗೆಯ ಸ್ಪಷ್ಟ ಚಿತ್ರ ಸಿಗಬಹುದು. ಆದ್ದರಿಂದ ಉಪಾಧ್ಯಾಯರು ಮತ್ತು ಗಾಂಧೀಜಿಯವರನ್ನು ಹೋಲಿಸಿನೋಡುವ ಯಾವುದೇ ಪ್ರಯತ್ನ ಪೀಠಿಕಾ ಸ್ವರೂಪದ್ದಾಗಿರುತ್ತದೆ ಹಾಗೂ ಹೆಚ್ಚಿನ ಮಾಹಿತಿ ಲಭ್ಯವಾದಂತೆ ಪರಿಷ್ಕರಣಕ್ಕೊಳಪಡಬೇಕಾಗುತ್ತದೆ. ಉಪಾಧ್ಯಾಯರ ಬಗ್ಗೆ ಮಾತನಾಡುವ ಅರ್ಹತೆ ಇರುವುದು ಅವರೊಂದಿಗೆ ನಿಕಟವಾಗಿ ಕೆಲಸ ಮಾಡಿದವರಿಗೆ ಮಾತ್ರ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವವರಿಗೆ ಈ ನಿಕಟಜೀವಿಗಳು ಮಾಹಿತಿಸಂಗ್ರಹದಲ್ಲಿ ನೆರವಾಗುವರೆಂದು ಆಶಿಸಬಹುದು.

ಗಾಂಧಿ ಮತ್ತು ಉಪಾಧ್ಯಾಯರು ಪ್ರಪ್ರಥಮವಾಗಿ ಸಂಘಟಕರು. ತಾತ್ವಿಕ ಚಿಂತನೆ ಅವರ ಎರಡನೆಯ ಆಸಕ್ತಿಯಾಗಿತ್ತು. ಇವರಿಬ್ಬರೂ ಬುದ್ಧಿಜೀವಿಗಳಾಗಿರಲಿಲ್ಲ. ಸಾಂಪ್ರದಾಯಿಕ ಅರ್ಥದಲ್ಲಿ ಬುದ್ಧಿಜೀವಿಗಳಾಗಿರಲಿಲ್ಲ. ಅಂದರೆ, ಅಕಾಡೆಮಿಕ್ ಪದಕ ಪ್ರಶಂಸೆಗಳಿಂದ ಅಲಂಕೃತರಾದ ಪಂಡಿತರಾಗಿರಲಿಲ್ಲ. ಅರ್ಹ ವಿದ್ವಾಂಸರುಗಳಾಗಿರಲಿಲ್ಲ ಅಥವಾ ಇವರು ನೀತಿ ಮತ್ತು ರಾಜಕಾರಣ ಕುರಿತಂತೆ ಪ್ರಬಂಧಗಳನ್ನು ರಚಿಸಿರಲಿಲ್ಲ. ಅಂದರೆ ಇವರಿಬ್ಬರಿಗೂ ಅಮೂರ್ತವಾದ ಸಿದ್ಧಾಂತ ಸೂತ್ರಗಳ ಬಗ್ಗೆ ವಿಶೇಷ ಆಸಕ್ತಿ ಏನಿರಲಿಲ್ಲ. ಉದಾಹರಣೆಗೆ ಹೇಳುವುದಾದರೆ, ಗಾಂಧೀಜಿ ಸತ್ಯಾಗ್ರಹದ ಪರಿಕಲ್ಪನೆ ಕುರಿತು ಸಂಶೋಧನೆ ನಡೆಸುತ್ತಿದ್ದ ವಿದ್ವಾಂಸರೊಬ್ಬರಿಗೆ ಈ ರೀತಿ ತಿಳಿಸಿದ್ದರು:

**ಸತ್ಯಾಗ್ರಹ ಸಂಶೋಧನೆಯ ವಿಷಯವಲ್ಲ.**
**ಅದನ್ನು ನೀವು ಅನುಭವಿಸಬೇಕು. ಬಳಸಬೇಕು.**
**ಬದುಕಾಗಿ ಸ್ವೀಕರಿಸಬೇಕು.**

**(ಜೋನ್ ಬಂಡುರ್‍ಯಾಂಟ್, Conquest of Violence, ಪು : ೧೪೬)**

ಉಪಾಧ್ಯಾಯರ ಬಗ್ಗೆಯೂ ಇಂಥ ವೃತ್ತಾಂತಗಳಿದ್ದಾವು.

ಇವರಿಬ್ಬರಿಗೂ ವರ್ಚಸ್ಸಿತ್ತು. ಇಬ್ಬರೂ ವರ್ಚಸ್ವೀ ವ್ಯಕ್ತಿಗಳು. ಗಾಂಧೀಜಿಯವರ ಪ್ರಭಾವ ಹೆಚ್ಚು ವಿಸ್ತೃತ, ಹೆಚ್ಚು ವ್ಯಾಪಕ. ಏಕೆಂದರೆ ಅವರು ಸಂತರಲ್ಲದಿದ್ದರೂ ಅನೇಕ ಮಂದಿ ಅವರನ್ನೊಬ್ಬ ಸಂತ ಎಂದೇ ಭಾವಿಸಿದ್ದರು. ಅವರ ವಿರಕ್ತತೆ, ಬೈರಾಗಿ ವೇಷಗಳಿಂದಾಗಿ ಅನೇಕ ಮಂದಿ ಅವರಿಂದ ತಮ್ಮ ಆದರ್ಶಗಳ ಈಡೇರಿಕೆ ಕಾರ್ಯಸಾಧ್ಯ ಎಂದು ಭಾವಿಸಿದ್ದರು. ಇವುಗಳಲ್ಲಿ ಕೆಲವು ಮಾತ್ರ ಈಡೇರಿದವು. ಗಾಂಧೀಜಿಯವರು, ಮಧ್ಯಮವರ್ಗದ ಆಂಗ್ಲೀಕೃತ ಚರ್ಚಾ ವೇದಿಕೆಯಾಗಿದ್ದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸನ್ನು ಜನಸಾಮಾನ್ಯರ ಬದುಕಿನ ಪರಿಧಿಗೆ ಸ್ಪಂದಿಸುವ ವೈಚಾರಿಕ ವೇದಿಕೆಯನ್ನಾಗಿ ಪರಿವರ್ತಿಸಿದರು. ಅವರ ಸಂಘಟನಾ ಕೌಶಲ, ಮಹಾತ್ಮ ವರ್ಚಸ್ಸು ಇವೆಲ್ಲವೂ ಕಾಂಗ್ರೆಸ್ಸನ್ನು ಸ್ವಾತಂತ್ರ್ಯ ಹೋರಾಟದ ಒಂದು ಕ್ರಿಯಾಶೀಲ ತೋಳ್ಬಲವನ್ನಾಗಿಸಿದವು.

ಉಪಾಧ್ಯಾಯರಲ್ಲೂ ಸಾಧುಸಂತರ ಗುಣಲಕ್ಷಣಗಳಿದ್ದವು. ಅವರು ವೃತ್ತಿಯ



ಕರೆ ತಿರಸ್ಕರಿಸಿ ತಾಯ್ನಾಡಿನ ಸೇವೆಗೆ ಸಮರ್ಪಿಸಿಕೊಂಡವರು. ಅವರದು ನಿರ್ಭೋಗ ಜೀವನ. ಅವರು ನೈತಿಕತೆಯ ಪಾಲನೆಯಲ್ಲಿ ಅತ್ಯುನ್ನತ ಶ್ರೇಣಿಯವರು. ಈ ಗುಣಗಳಿಂದಾಗಿ ಅವರು ಗೌರವಾನ್ವಿತರಾದರು. ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಸಮರ್ಪಿಸಿಕೊಂಡಿದ್ದರಿಂದಾಗಿಯಲ್ಲ ಅಥವಾ ಅದರ ಬಗೆಗಿನ ಶ್ರದ್ಧೆಯಿಂದಾಗಿಯಲ್ಲ. ಅವರು ೧೯೪೨–೫೧ರ ಅವಧಿಯಲ್ಲಿ ಉತ್ತರ ಪ್ರದೇಶದಲ್ಲಿ, ಆರೆಸ್ಸೆಸ್‌ನ ಸಹ ಸಂಘಟಕರಾಗಿ ಕೆಲಸ ಮಾಡಿದ್ದರು. ಜನಸಂಘದಲ್ಲೂ, ಅಖಿಲ ಭಾರತ ಮಟ್ಟದ ಕಾರ್ಯದರ್ಶಿಯಾಗಿ, ೧೯೫೨–೬೭ರ ಅವಧಿಯಲ್ಲೂ ಅವರು ಅಖಿಲಭಾರತ ಕಾರ್ಯದರ್ಶಿಯಾಗಿದ್ದರು. ಹೊಸದಾಗಿ ಅಸ್ತಿತ್ವಕ್ಕೆ ಬಂದಿದ್ದ ಜನಸಂಘದ ಅಧ್ಯಕ್ಷರಾಗಿದ್ದ ಶ್ಯಾಮಾಪ್ರಸಾದ್ ಮುಖರ್ಜಿಯವರು, ಉಪಾಧ್ಯಾಯರಂಥ ಜನ ಹೆಚ್ಚಿನ ಸಂಖ್ಯೆಯಲ್ಲಿ ತಮಗೆ ದೊರೆತಲ್ಲಿ ತಾವು ಭಾರತದ ರೂಪುರೇಷೆಯನ್ನೇ ಬದಲಾಯಿಸುವುದಾಗಿ ಹೇಳಿದ್ದರು. ಉಪಾಧ್ಯಾಯರು ಖಂಡಿತವಾಗಿಯೂ ಜನಸಂಘದಲ್ಲಿ ಪರಿವರ್ತನೆ ಉಂಟುಮಾಡಿದರು. ೧೯೫೩ರ ಮಧ್ಯ ಭಾಗದಲ್ಲಿ ಶ್ಯಾಮಾ ಪ್ರಸಾದ್ ಮುಖರ್ಜಿಯವರ ನಿಧನಾನಂತರ ಅವರು ಪಕ್ಷದ ಸೂತ್ರವನ್ನು ವಹಿಸಿಕೊಂಡರು. ಮುಖರ್ಜಿಯವರಿಲ್ಲದೆ, ಈ ಪಕ್ಷ ಉಳಿದೀತೆ ಎಂದು ಎಲ್ಲರೂ ಹುಬ್ಬೇರಿಸುತ್ತಿದ್ದ ಕಾಲದಲ್ಲಿ ಅವರು ಅಧಿಕಾರ ವಹಿಸಿಕೊಂಡರು. ಸಣ್ಣ ಪಕ್ಷದಲ್ಲಿ ಅಧಿಕಾರ ನಿಯಂತ್ರಣದ ಬಗ್ಗೆ ಗೊಂದಲವಿತ್ತು. ಉಪಾಧ್ಯಾಯರು ಶಿಸ್ತನ್ನು ತಂದರು, ಪಕ್ಷದ ನೆಲೆಯನ್ನು ವಿಸ್ತರಿಸಿದರು. ಸಮರ್ಪಣ ಮನೋಭಾವದ ಕಾರ್ಯಕರ್ತರನ್ನೂ ಪಕ್ಷಕ್ಕೆ ಎಳೆದು ತಂದರು. ಹಣವಿಲ್ಲದವರ, ಅಧಿಕಾರ–ಸ್ಥಾನಮಾನ ಇಲ್ಲದವರ ಹಿತಾಸಕ್ತಿ ರಕ್ಷಿಸುವ ಕಾರ್ಯಕ್ರಮಗಳನ್ನು ರೂಪಿಸಿದರು. ಅವರ ಕಾಲದಲ್ಲಿ ಸಣ್ಣ ಪುಟ್ಟ ವಿರೋಧಗಳು, ಪಕ್ಷಾಂತರಗಳು ಇದ್ದವು. ಆದಾಗ್ಯೂ ಜನಸಂಘಕ್ಕೆ ಗರ್ಮನಾರ್ಹ ಹಾನಿಯೇನೂ ಆಗಲಿಲ್ಲ. ಅದು ಪ್ರಮುಖ ಪಕ್ಷವಾಗಿ ಉಳಿಯಿತು. ಅದು ಅವರನ್ನು ರೂಪಿಸಿದ ಸುಸಂಘಟಿತ ಸಂಸ್ಥೆಗೆ ಸಾಕ್ಷಿಪ್ರಮಾಣವಾಗಿತ್ತು.

ಆದಾಗ್ಯೂ ಒಂದು ಅಂಶವನ್ನು ಮನಗಾಣಬೇಕು. ಉಪಾಧ್ಯಾಯರನ್ನು ಮಹಾತ್ಮ ಎಂದೂ ಯಾವತ್ತೂ ಮಾನ್ಯ ಮಾಡಿರಲಿಲ್ಲ. ಅವರು ಸಾರ್ವಜನಿಕ ಮಾನ್ಯತೆ ಮರ್ಯಾದೆಗಳಿಂದ ದೂರವಿರುತ್ತಿದ್ದರು. ಪ್ರಚಾರದ ಮೆರೆತ ಅವರಿಗೆ ಅಹಿತಕರವಾಗಿತ್ತು. ವ್ಯಕ್ತಿಗಿಂತ ಸಂಸ್ಥೆ ಮತ್ತು ಅದರ ಗುರಿ ಅನುಪಮವಾದದ್ದು. ಹೋಲಿಸಲಾಗದಷ್ಟು ಪ್ರಮುಖವಾದದ್ದು; ವ್ಯಕ್ತಿ ಮುಖ್ಯವಲ್ಲ ಎಂದು ಅವರು ನಂಬಿದ್ದರು. ಅವರ ಬರಹಗಳಿಂದ, ಅವರ ಬಗ್ಗೆ ಬೇರೆಯವರು ಹೊಂದಿರುವ ಅಭಿಪ್ರಾಯಗಳಿಂದ ನನಗೆ ಉಪಾಧ್ಯಾಯರ ಈ ಮುಖದ ಪರಿಚಯವಾಗಿದೆ. ಅವರು ಎಷ್ಟು ಸಂಕೋಚ ಪ್ರವೃತ್ತಿಯವರಾಗಿದ್ದರೆಂದರೆ ಎಷ್ಟೋ ಸಲ 'ಪಾಂಚಜನ್ಯ'ಕ್ಕೆ ಬರೆದ ಲೇಖನಗಳಿಗೆ ತಮ್ಮ ಹೆಸರನ್ನೇ ಹಾಕಿಕೊಳ್ಳುತ್ತಿರಲಿಲ್ಲ 'ಪಾಂಚಜನ್ಯ'

ಉಪಾಧ್ಯಾಯರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ನಿಯತಕಾಲಿಕ. ವೈಯುಕ್ತಿಕ ಪ್ರಚಾರದಿಂದ ಧ್ಯೇಯ ಉದ್ದೇಶಗಳಿಗೆ ಭಂಗವುಂಟಾಗುವುದೆಂದು ಅವರ ಅಭಿಪ್ರಾಯವಾಗಿತ್ತು. ಇದು ಆರೆಸ್ಸೆಸ್ ಸಂಪ್ರದಾಯಕ್ಕನುಗುಣವಾಗಿಯೇ ಇದೆ. ಆಂತರಿಕ ಭಿನ್ನಾಭಿಪ್ರಾಯಗಳನ್ನು ತೊಡೆದುಹಾಕಿ ಭಾರತೀಯರನ್ನು ಸಂಘಟಿಸುವುದೇ, ಅವರ ಅಭಿಪ್ರಾಯದಲ್ಲಿ ಧ್ಯೇಯ ಉದ್ದೇಶಗಳಾಗಿದ್ದವು. ಬಾಹ್ಯದ ವಿಧ್ವಂಸಕ ಕೃತ್ಯಗಳಿಗೆ ಚಾರಿತ್ರಿಕವಾಗಿ ಈಡಾಗಿದ್ದ ರಾಷ್ಟ್ರ ಆಂತರಿಕವಾಗಿ ಛಿದ್ರಗೊಂಡಿತ್ತು. ಇದು, ಈ ಆಂತರಿಕ ಒಡಕು ಆರ್ಥಿಕ ಹಾಗೂ ಸಾಂಸ್ಕೃತಿಕ ಪುನುರುಜ್ಜೀವನಕ್ಕೆ ಅಗತ್ಯವಾದ ತ್ಯಾಗಬುದ್ಧಿ ಮತ್ತು ಸಂಕಲ್ಪ ಶಕ್ತಿಯನ್ನು ಶಿಥಿಲಗೊಳಿಸಿದೆ ಎಂಬುದು ಅವರ ಅಭಿಮತವಾಗಿತ್ತು.

ಗಾಂಧೀಜಿಯವರಂತೆ, ಉಪಾಧ್ಯಾಯರು ಸಾಂಪ್ರದಾಯಿಕ ಅರ್ಥದಲ್ಲಿ ಸಾಧುಪುರುಷರಾಗಿರಲಿಲ್ಲ. ಹಿಂದೂ ಸಂಪ್ರದಾಯಗಳಂತೆ ನಡೆದುಕೊಳ್ಳುತ್ತಿದ್ದಾಗ್ಯೂ ಅವರು ಲೌಕಿಕದ ಅರ್ಥದಲ್ಲಿ ಸಾಧು ಪುರುಷರಾಗಿರಲಿಲ್ಲ. ಕೇವಲ ಧಾರ್ಮಿಕ ಪರಿಕಲ್ಪನೆಗಳಿಂದಲೇ ಅವರು ಕಾರ್ಯೋನ್ಮುಖರಾಗುತ್ತಿರಲಿಲ್ಲ. ಆದರೆ ಗಾಂಧೀಜಿಯವರಂತೆ ಅವರೂ ಧರ್ಮ ಮತ್ತು ರಾಜಕೀಯ ಆದರ್ಶ ವಿಚಾರಗಳನ್ನು ಪ್ರತ್ಯೇಕಿಸುವ ಮ್ಯಾಕಿವೆಲಿ ಅನಂತರದ ಪಾಶ್ಚಾತ್ಯ ಧೋರಣೆಯನ್ನು ತಿರಸ್ಕರಿಸಿದ್ದರು. ಇವೆರಡನ್ನೂ ಒಂದುಗೂಡಿಸುವ ಪ್ರಯತ್ನದಲ್ಲಿ ಗಾಂಧೀಜಿ ಮತ್ತು ಉಪಾಧ್ಯಾಯರಿಬ್ಬರೂ ಸಾಂಪ್ರದಾಯಿಕ ಹಿಂದೂ ಪರಿಕಲ್ಪನೆಯಾದ ಕರ್ಮಯೋಗದ ಮೊರೆ ಹೊಕ್ಕಿದ್ದರು. ಕರ್ಮಯೋಗ ಅಥವಾ ಸಮಾಜಸೇವೆ ಮುಖೇನ ಆಧ್ಯಾತ್ಮಿಕ ಸಾಕ್ಷಾತ್ಕಾರದ ಪರಿಕಲ್ಪನೆಯಿಂದ ಪ್ರಭಾವಿತರಾಗಿದ್ದರು. ಧರ್ಮ ಅರ್ಥ–ಕಾಮಗಳಿಗೆ ಮಾರ್ಗದರ್ಶಿ ಎನ್ನುವ ಸಾಂಪ್ರದಾಯಿಕ ಕಲ್ಪನೆಯನ್ನು ಇಬ್ಬರೂ ಒಪ್ಪಿಕೊಂಡಿದ್ದರು.

ಆದಾಗ್ಯೂ ಧರ್ಮ ನಿರ್ಣಯದಲ್ಲಿ ಇಬ್ಬರ ದಾರಿಗಳೂ ಬೇರೆ ಬೇರೆಯೇ ಆಗಿದ್ದವು. ಗಾಂಧೀಜಿ ವ್ಯಕ್ತಿಯ ಸತ್ಯಾನ್ವೇಷಣೆಗೆ ಹೆಚ್ಚಿನ ಒತ್ತು ನೀಡಿದ್ದರು. ಸತ್ಯ ಮಾನವನ ನಡವಳಿಕೆಯನ್ನು ನಿಯಂತ್ರಿಸುವ ನೀತಿ ತತ್ತ್ವಗಳನ್ನು ತಿಳಿಸುತ್ತದೆ ಎಂದು ಗಾಂಧೀಜಿ ನಂಬಿದ್ದರು. ಆದ್ದರಿಂದ ಸತ್ಯಾನ್ವೇಷಣೆಯೇ ಅವರಿಗೆ ಮುಖ್ಯವಾಗಿತ್ತು. "ಆತ್ಮದ ಆಣತಿ ಅಥವಾ ಚಿತ್ತದ ವಿವೇಕದೊಂದಿಗೆ ಘರ್ಷಣೆಗಿಳಿಯುವ ಯಾವುದೇ ಅಧಿಕಾರವನ್ನೂ ನಾನು ತಿರಸ್ಕರಿಸುತ್ತೇನೆ. ಅಧಿಕಾರ ಪುಷ್ಟಿಗೊಂಡು ದುರ್ಬಲರನ್ನು ವರಿಷ್ಠರನ್ನಾಗಿಸುತ್ತದೆ. ಶ್ರೀಮಂತರನ್ನಾಗಿಸುತ್ತದೆ, ವಿವೇಕದಿಂದ ಉದಯಿಸುವ ಅಂತರಂಗದ ಸಣ್ಣದನಿಯ ಜಾಗವನ್ನು ಅಧಿಕಾರ ಆಕ್ರಮಿಸುತ್ತದೆ" ಎಂದು ಗಾಂಧೀಜಿ ಪದೇ ಪದೇ ಹೇಳುತ್ತಿದ್ದರು. ಅವರ ಸತ್ಯಾನ್ವೇಷಣೆಯ ಮಾರ್ಗ ಈ ಧೋರಣೆಗನುಗುಣವಾಗಿಯೇ ಇದೆ. ವೈಯುಕ್ತಿಕ ಪ್ರಯತ್ನಗಳಿಗೆ ಗಾಂಧೀಜಿಯವರು ನೀಡುತ್ತಿದ್ದ ಪ್ರಾಮುಖ್ಯ ಅವರೊಬ್ಬ, ಸಾಮಾಜಿಕ



ಕ್ರಾಂತಿಕಾರಿಯಲ್ಲವಾದರೂ ನೈತಿಕ ಕ್ರಾಂತಿಕಾರಿ ಎನ್ನುವ ಭಾವನೆಗೆಡೆ ಮಾಡಿಕೊಟ್ಟಿತ್ತು. ಉದಾಹರಣೆಗೆ ಯಂಗ್ ಇಂಡಿಯಾ (ಮಾರ್ಚ ೧೯೩೧)ದ ಅವರ ಬರವಣಿಗೆಯನ್ನು ನೋಡಬಹುದು.

> **"ಎಲ್ಲಿಯವರೆಗೆ ಒಬ್ಬ ವ್ಯಕ್ತಿ, ಅವನು ಎಷ್ಟೇ ಉನ್ನತ ಸ್ಥಾನದಲ್ಲಿರಲಿ, ಲಕ್ಷಾಂತರ ಜನರ ಜೀವನ, ಆಸ್ತಿಪಾಸ್ತಿ, ಮಾನಮರ್ಯಾದೆಗಳನ್ನು ತನ್ನ ಮುಷ್ಠಿಯಲ್ಲಿ ಹಿಡಿದಿಟ್ಟುಕೊಳ್ಳಲಿಚ್ಛಿಸುವನೋ ಅಲ್ಲಿಯವರೆಗೆ ಭಾರತಕ್ಕೆ ಸ್ವಾತಂತ್ರ್ಯವಿಲ್ಲ. ಅದು ಕೃತಕ, ಅದು ಅಸ್ವಾಭಾವಿಕ ಹಾಗೂ ಅದು ಅನಾಗರಿಕ ವ್ಯವಸ್ಥೆ."**

ಆದರೆ ಗಾಂಧೀಜಿ ಈ ಎರಡೂ ದೃಷ್ಟಿಗಳಿಂದಲೂ ಕ್ರಾಂತಿಕಾರಿಯಾಗಿರಲಿಲ್ಲ. ಏಕೆಂದರೆ ಅವರು, ಎಲ್ಲರ ಶಕ್ತಿಸಾಮರ್ಥ್ಯಗಳಿಗೂ ಎಟುಕುವಂಥ ಮೂಲಾಧಾರ ಸತ್ಯವೊಂದಿದೆ ಎನ್ನುವ ವೇದಾಂತದ ಅಭಿಮತವನ್ನು ಒಪ್ಪಿಕೊಂಡಿದ್ದರು. ಮಿಗಿಲಾಗಿ ಅವರಿಗೆ ಸಾಮಾಜಿಕ ಕರ್ತವ್ಯಗಳು ಮತ್ತು ಹೊಣೆಗಾರಿಕೆಯನ್ನು ಗೊತ್ತು ಮಾಡುವ ಪಂಚಾಯತ್ ಮತ್ತು ವರ್ಣ ಸಾಂಪ್ರದಾಯಿಕ ಪದ್ಧತಿಗಳಲ್ಲಿ ಗೌರವವಿತ್ತು.

ಆದರೆ ಉಪಾಧ್ಯಾಯರು, ರಾಷ್ಟ್ರದ ಸಮಷ್ಟಿ ವಿವೇಕವನ್ನೇ ಧರ್ಮದ ಅಧಿಕೃತ ವಾಣಿ ಎನ್ನುವುದಕ್ಕೆ ಹೆಚ್ಚಿನ ಮಹತ್ವ ನೀಡಿದ್ದರು. ಆದರೆ ಬಹುಸಂಖ್ಯಾತರು ಎಲ್ಲ ಕಾಲಕ್ಕೂ ಧರ್ಮದ ನಿಯಮಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಇರುವ ಸಾಧ್ಯತೆ ಬಗ್ಗೆ ಅವರಿಗೆ ಶಂಕೆ ಇತ್ತು. "ಪ್ರಜೆಗಳು ಸಾರ್ವಭೌಮರಲ್ಲ. ಏಕೆಂದರೆ ಪ್ರಜೆಗಳಿಗೂ ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಹಕ್ಕಿಲ್ಲ" (ಏಕಾತ್ಮ ಮಾನವದರ್ಶನ, ಪುಟ ೫೬). ಇನ್ನೂ ಮುಂದುವರಿದು ಹೇಳುವುದಾದಲ್ಲಿ – "ಸತ್ಯವನ್ನು ಬಹುಮತದಿಂದ ನಿರ್ಣಯಿಸಲಾಗದು. ಸರ್ಕಾರ ಏನು ಮಾಡಬೇಕು ಎನ್ನುವುದನ್ನು ಧರ್ಮ ನಿರ್ಧರಿಸುತ್ತದೆ" (೧೬೧೦ ಪುಟ ೫೮). ಧರ್ಮದ ಯುಕ್ತ ವ್ಯಾಖ್ಯಾನಕಾರರು ಯಾರೆಂಬುದನ್ನು ಅವರು ವಿಶದಪಡಿಸುವುದಿಲ್ಲ. ಪ್ರಜಾಪ್ರಭುತ್ವ ಧರ್ಮಕ್ಕೆ ಹತ್ತಿರವಾದ, ಹೋಲಿಸಬಹುದಾದ ವ್ಯವಸ್ಥೆ ಎನ್ನುವುದು ಅವರ ಆಲೋಚನೆಯಾಗಿತ್ತು ಎಂದು ಅವರ ಬರಹಗಳ ಆಧಾರದ ಮೇಲೆ ತೀರ್ಮಾನಿಸಬಹುದು. ಏಕೆಂದರೆ ಪ್ರಜಾಸತ್ತೆ, ರಾಷ್ಟ್ರ ಕಲ್ಯಾಣಕ್ಕೆ ಸಮರ್ಪಿತನಾದ ನಿಷ್ಪಕ್ಷಪಾತ ವ್ಯಕ್ತಿಗೆ ಸಾರ್ವಜನಿಕ ಅಭಿಪ್ರಾಯವನ್ನು ತಿದ್ದುವ ಅವಕಾಶವನ್ನು ನೀಡುತ್ತದೆ.

ಉಪಾಧ್ಯಾಯರ ಚಿಂತನೆಯ ಪ್ರಕಾರ

ರಾಷ್ಟ್ರದ ಕೇಂದ್ರತೆ, ಪ್ರಾಮುಖ್ಯ, ಅದರ ಆತ್ಮವನ್ನು ಆಧರಿಸಿದೆ. ರಾಷ್ಟ್ರಕ್ಕೊಂದು ಆತ್ಮವಿದೆ ಎಂಬ ಕಲ್ಪನೆಯನ್ನು ಆಧರಿಸಿದೆ. ರಾಷ್ಟ್ರ ಕೇಂದ್ರತೆ, ಪ್ರಾಮುಖ್ಯ ಒಂದು ಭೌಗೋಳಿಕ ನೆಲೆಯೊಳಗಣ ಅನುಭವಗಳಿಂದ ರೂಪುಗೊಳ್ಳುತ್ತದೆ. ಹಾಗೂ ಹೊರಾವೃತ ಆದರ್ಶಗಳಿಂದ ಪ್ರಚೋದಿತವಾಗಿರುತ್ತದೆ, ಪ್ರೇರಿತವಾಗಿರುತ್ತದೆ (*Inlegral Humanism* ಪುಟ ೩೬–೩೭). ರಾಷ್ಟ್ರದ ಅರ್ಥವ್ಯಾಖ್ಯೆ ಮಾಡುವಾಗ

ಉಪಾಧ್ಯಾಯರು ಪರಸ್ಪರ ಅವಲಂಬಿಗಳಾದ ಜೀವಿಗಳ ರೂಪಕದಿಂದ ಪ್ರೇರೇಪಣೆ ಪಡೆದಿದ್ದಾರೆ. ವಿಶೇಷವಾಗಿ ಮಾನವ ಶರೀರ ವ್ಯವಸ್ಥೆಯಿಂದ ಪ್ರೇರಿತರಾಗಿದ್ದಾರೆ. ಮಾನವ ಶರೀರದಲ್ಲಿ ಪ್ರತಿಯೊಂದು ಅವಯವವೂ ಇಡಿಯಾದ ದೇಹದೊಳಗೆ ನಿರ್ವಹಿಸುವ ನಿರ್ದಿಷ್ಟ ಕಾರ್ಯದಲ್ಲಿ ಮಾತ್ರ ಅದು ತನ್ನ ನೈಜ ಪ್ರತ್ಯೇಕ ಆಸ್ತಿತ್ವ ಹೊಂದಿರುತ್ತದೆ.

> **"ಮಾನವಕುಲದ ವಿವಿಧ ಆದರ್ಶಗಳು ಸಮನ್ವಯ ಸಾಮರಸ್ಯತೆಯ ಪ್ರಕೃತಿಗನುಸಾರವಾಗಿ ಕೆಲಸಮಾಡುವಂಥ ಪರಸ್ಪರ ಪೂರಕವಾದ ವ್ಯವಸ್ಥೆಯಿಂದ ಮಾತ್ರ ಸ್ಥಿರವಾದ ಪ್ರಗತಿ, ಅಭಿವೃದ್ಧಿಗಳು ಸಾಧ್ಯ. ಮಾನವರ ನಡುವಣ ವೈಮನಸ್ಯಗಳನ್ನು ನಿವಾರಿಸಿ ಅವರಲ್ಲಿ ಪರಸ್ಪರ ಪ್ರಯೋಜನ, ಉಪಯುಕ್ತತೆ ಮತ್ತು ಸಹಕಾರಗಳನ್ನು ವರ್ಧಿಸುವಂಥ ಕಾನೂನುಗಳನ್ನು ರೂಪಿಸಬಲ್ಲ ಇಂಥ ಒಂದು ವ್ಯವಸ್ಥೆ ಮಾತ್ರ ಮಾನವಕುಲಕ್ಕೆ ಸುಖ-ಸಂತೋಷ, ಸಮೃದ್ಧಿಗಳನ್ನು ನೀಡಬಲ್ಲದು"**
>
> **(Integral Humanism ಪು. ೩೯)**

ಈ ಜೀವ ಪರಿಕಲ್ಪನೆಯೇ ಭಾರತವನ್ನು ಕಾಲದ ಏರಿಳಿತಗಳ ಮಧ್ಯೆಯೂ ಜೀವಂತವಾಗಿರಿಸಿದೆ. ರಾಜಕೀಯ ತತ್ತ್ವಶಾಸ್ತ್ರಕ್ಕೆ ಇದೊಂದು ಅಪೂರ್ವಕೊಡುಗೆ. ತಮ್ಮಕಾಲದ ರಾಜಕೀಯ ಗಣ್ಯರ ವಿರುದ್ಧ ಅವರ ಪ್ರಮುಖ ಸೈದ್ಧಾಂತಿಕ ವಾದದ ಮೂಲ ಪಾಶ್ಚಾತ್ಯ ಸಾಮಾಜಿಕ ಕಲ್ಪನೆಗಳಾಗಿತ್ತು. ರಾಜಕೀಯ ಗಣ್ಯರು ಪಾಶ್ಚಾತ್ಯ ಸಾಮಾಜಿಕ ಪರಿಕಲ್ಪನೆಗಳನ್ನು ಪ್ರತಿಪಾದಿಸುತ್ತಿದ್ದು, ಈ ಪ್ರಕ್ರಿಯೆಯಲ್ಲಿ ಭಾರತೀಯ ನಾಗರಿಕತೆಯನ್ನು ಪೋಷಿಸಿಕೊಂಡು ಬಂದಿರುವ ಆಂತರಿಕ ಸಮಗ್ರತೆ, ಏಕತೆಗಳನ್ನು ಅಲಕ್ಷಿಸಲಾಗುತ್ತಿದೆ ಎನ್ನುವುದು ಉಪಾಧ್ಯಾಯರ ನಿಶ್ಚಿತಾಭಿಪ್ರಾಯವಾಗಿತ್ತು. ಈ ಅಭಿಪ್ರಾಯ ಗಣ್ಯ ರಾಜಕೀಯ ನಾಯಕರುಗಳೊಂದಿಗಿನ ಅವರೆಲ್ಲ ವಾದ ವಿವಾದಗಳ ಮೂಲವಾಗಿತ್ತು.

ಸಾಂಪ್ರದಾಯಿಕ ಪದ್ಧತಿಗಳ ಬಗ್ಗೆ ವ್ಯವಸ್ಥೆಯ ಬಗ್ಗೆ ಅವರಿಗೆ ಗಾಂಧಿಯವರಿಗಿದ್ದಷ್ಟು ಬದ್ಧತೆಯೂ ಇರಲಿಲ್ಲ. ಆಚರಿತ ಜಾತಿ ಪದ್ಧತಿ ಬಗ್ಗೆ ಅವರ ಬರವಣಿಗೆಯಲ್ಲಿ ವಿರೋಧಗಳು ಎದ್ದುಕಾಣುತ್ತವೆ. ಅವರ ಪ್ರಕಾರ ಎಲ್ಲ ಪದ್ಧತಿಗಳೂ, ವ್ಯವಸ್ಥೆಗಳೂ ವ್ಯುತ್ಪನ್ನಗಳಾಗಿದ್ದು ಸಮಗ್ರ ಕಾರ್ಯನಿರ್ವಹಣೆಯಲ್ಲಿ ಅಥವಾ ಕಿತ್ತೊಗೆಯಬೇಕು. ಎಂದೇ ಸಂಪ್ರದಾಯಶರಣ ಹಿಂದೂಗಳು ಜನಸಂಘದ ಪ್ರಮುಖ ಟೀಕಾಕಾರಾಗಿದ್ದುದ್ದರಲ್ಲಿ ಆಶ್ಚರ್ಯವೇನಿಲ್ಲ.

ಗಾಂಧೀಜಿಯವರ ರಾಜಕೀಯ ಗುರಿ ಸ್ವರಾಜ್ಯವಾಗಿತ್ತು. ಸ್ವರಾಜ್ಯವೆಂದರೆ ಕೇವಲ ಬ್ರಿಟಿಷರಿಂದ ಮುಕ್ತಿಯಲ್ಲ ಅದಕ್ಕೂ ಮಿಗಿಲಾದದ್ದು ಎಂದು ಅವರು ಸ್ವರಾಜ್ಯವನ್ನು ವ್ಯಾಖ್ಯಾನಿಸುತ್ತಿದ್ದರು. ಗ್ರಾಮೀಣ ಹಂತದವರೆಗೆ. ಸ್ವಯಂಪರಿಪೂರ್ಣತೆಯನ್ನು ಸಾಧಿಸುವುದು ಸ್ವರಾಜ್ಯದ ಅರ್ಥ. ಅವರ ಈ



ಸ್ವಯಂ ಪರಿಪೂರ್ಣತೆಯ ಕಲ್ಪನೆ ಒಂದು ನಿರ್ದಿಷ್ಟ ಕಾರ್ಯಕ್ರಮವಾಗಿ ಅವರ ಸ್ವದೇಶಿ ಚಳವಳಿಯಲ್ಲಿ ರೂಪ ಪಡೆದಿತ್ತು. ಸ್ವಾತಂತ್ರ್ಯ ಹೋರಾಟದ ವರ್ಷಗಳಲ್ಲಿ 'ಸ್ವರಾಜ್ಯ' ಖಾದಿ ಉತ್ಪನ್ನಗಳ ಪರವಾದ ಪ್ರಚಾರದಲ್ಲಿ ಪ್ರಕಟಗೊಂಡಿತ್ತು. ಸ್ವದೇಶಿ ಕೇವಲ ಖಾದಿ ಪೂರೈಕೆಯ ಆರ್ಥಿಕ ಚಟುವಟಿಕೆಗೆ ಸೀಮಿತಗೊಳ್ಳಲಿಲ್ಲ. ಸ್ವದೇಶಿ ಪರಿಕಲ್ಪನೆಯಲ್ಲಿ ಮಹತ್ವದ ಸೈದ್ಧಾಂತಿಕ ಪರಿಣಾಮಗಳು ಅಡಗಿದ್ದವು. ಗಾಂಧೀಜಿಯವರ, ವ್ಯಾಪಕವಾದ ರಚನಾತ್ಮಕ ಕಾರ್ಯಕ್ರಮದ ಕೇಂದ್ರಬಿಂದುವಾಗಿತ್ತು ಸ್ವದೇಶಿ ಪರಿಕಲ್ಪನೆ. ಕೇಂದ್ರೀಕೃತ ಉದ್ಯಮಗಳು ಹಾಗೂ ನಗರೀಕರಣದ ವಿರುದ್ಧ ಅವರ ಹೋರಾಟದ ಸಾಂಕೇತಿಕ ಪ್ರತಿನಿಧಿಯಾಗಿತ್ತು. ಕೇಂದ್ರೀಕೃತ ಉದ್ಯಮ ಹಾಗೂ ನಗರೀಕರಣ ಕಾರ್ಮಿಕರನ್ನು ಕೀಳುಮಟ್ಟಕ್ಕಿಳಿಸಿವೆ ಎಂಬುದು ಗಾಂಧೀಜಿಯವರ ಅನ್ನಿಸಿಕೆಯಾಗಿತ್ತು. (೧೯೦೯ರಲ್ಲಿ ಬರೆದ 'ಹಿಂದ್ ಸ್ವರಾಜ್' ಕಿರುಹೊತ್ತಿಗೆಯಲ್ಲಿ ಗಾಂಧೀಜಿ ಆಧುನಿಕ ಉತ್ಪನ್ನಗಳನ್ನು ಉಗ್ರವಾಗಿ ಟೀಕಿಸಿದ್ದಾರೆ). ಪಾಶ್ಚಾತ್ಯ ಐಹಿಕತೆ ಬಗ್ಗೆ ಗಾಂಧೀಜಿ ಕಟುವಾದ ಅಭಿಪ್ರಾಯ ಹೊಂದಿದ್ದರು. ಈ ಕಡುವಿರೋಧವೇ ಗ್ರಾಮ ಸಮುದಾಯದ ಸ್ವರಾಜ್ಯ ಕಲ್ಪನೆಗೆ ದೂಡಿತು. ಇದರಿಂದಾಗಿ ಗಾಮ ಸ್ವರಾಜ್ಯ ಬೆಂಬಲಿಸುವುದು ಅವರಿಗೆ ಅನಿವಾರ್ಯವಾಯಿತು. ಅತ್ಯಲ್ಪ ತಂತ್ರಜ್ಞಾನ ಬಳಕೆಯ ಉತ್ಪನ್ನಗಳನ್ನು ಅವರು ಬೆಂಬಲಿಸಿದರು ಸರಳವಾದ ಉತ್ಪನ್ನಗಳ ಸಾಮಗ್ರಿಗಳ ಬಳಕೆಯನ್ನು ಅವರು ಪ್ರತಿಪಾದಿಸುತ್ತಿದ್ದರು. ಗಾಂಧೀಜಿಯವರ ಗ್ರಾಮಸ್ವರಾಜ್ಯ ಸರಳ ಜೀವನ ಮತ್ತು ಸ್ಥಳೀಯ ತಂತ್ರಜ್ಞಾನ ಆಧಾರಿತ ಉತ್ಪನಗಳಿಗೆ ಆದ್ಯತೆ ನೀಡಲಾಗಿತ್ತು.

ಅಭಿವೃದ್ಧಿಯ ಪಾಶ್ಚಾತ್ಯ ಮಾದರಿಗಳ ಬಗ್ಗೆ ಉಪಾಧ್ಯಾಯರ ಬರಹಗಳಲ್ಲಿ ತುಲನಾತ್ಮಕವಾದ ತೀವ್ರ ವಿರೋಧವಿದೆ. ೧೯೬೫ರಲ್ಲಿ ಏಕಾತ್ಮ ಮಾನವದರ್ಶನ ಕುರಿತು ಪುಣೆಯಲ್ಲಿ ನೀಡಿದ ಉಪನ್ಯಾಸಗಳಲ್ಲಿ ಅವರು ಸಮಾಜವಾದ ಮತ್ತು ಬಂಡವಾಳಶಾಹಿ ವ್ಯವಸ್ಥೆಗಳನ್ನು ತರಾಟೆಗೆ ತೆಗೆದುಕೊಂಡು ತೀವ್ರ ವಾಗ್ದಾಳಿ ನಡೆಸಿದ್ದಾರೆ. ಈ ಉಪನ್ಯಾಸಗಳನ್ನೇ ನಂತರ ಜನಸಂಘದ ಅಧಿಕೃತ ಸೈದ್ಧಾಂತಿಕ ಹೇಳಿಕೆಯಾಗಿ ಅಂಗೀಕರಿಸಲಾಯಿತು.

> **"ಶೋಷಣೆ ಮುಕ್ತ ಆಧಿಪತ್ಯಕ್ಕೆ ದಾರಿ ಮಾಡಿಕೊಡುವುದರಲ್ಲಿ ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿ ಪರಸ್ಪರ ಕೈಗೊಡಿಸಿವೆ. ಸಮಾಜವಾದ ಬಂಡವಾಳಶಾಹಿಯ ಜಾಗಕ್ಕೆ ಬಂತು. ಅದರೊಂದಿಗೆ ಪ್ರಜಾಪ್ರಭುತ್ವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಅವಸಾನವಾಯಿತು.**
>
> ***(Integral Humanism*, ಪು. ೧೦).**

ಇವುಗಳ ಜಾಗಕ್ಕೆ, ಇವುಗಳಿಗೆ ಪ್ರತಿಯಾಗಿ ಮಾದರಿ ವ್ಯವಸ್ಥೆಯೊಂದನ್ನು ಸೂಚಿದ್ದಾರೆ. ಅದು : "ದೇಹ, ಮನಸ್ಸು, ಬುದ್ಧಿ ಆತ್ಮಗಳನ್ನು ಎಲ್ಲ ರೀತಿಯಿಂದಲೂ

ಗಣನೆಗೆ ತೆಗೆದುಕೊಂಡ ವ್ಯವಸ್ಥೆಯಾಗಬೇಕು. ವ್ಯಕ್ತಿಯನ್ನು ರೂಪಿಸುವ ಈ ನಾಲ್ಕು ಮಾನವ ಸ್ಥಿತಿಗಳ ಎಲ್ಲ ಮುಖಗಳನ್ನೂ ಗಣನೆಗೆ ತೆಗೆದುಕೊಳ್ಳುವ ಮಾದರಿ ವ್ಯವಸ್ಥೆಯಾಗಬೇಕು. (ಪು ೨೪). ಕಾರ್ಯತಃ ಈ ವ್ಯವಸ್ಥೆ ವಿಕೇಂದ್ರೀಕೃತ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯಾಗಲಿದ್ದು ಇದರಲ್ಲಿ, ಆಡಳಿತ ಮತ್ತು ಉತ್ಪಾದನಾ ಪ್ರಕ್ರಿಯೆಗಳಲ್ಲಿ ಪ್ರಜೆಗಳ ಅರ್ಥ ಪೂರ್ಣ ದನಿಗೆ ಅವಕಾಶವಿರುತ್ತದೆ. ಈ ಜನಾನುರಾಗಿ ಪರಿಕಲ್ಪನೆ ಆರ್ಥಿಕ ಶಕ್ತಿ ಮತ್ತು ರಾಜಕೀಯ ಶಕ್ತಿಗಳ ಮಧ್ಯೆ ಒಂದು ಸಮತಲವನ್ನು ರೂಪಿಸುತ್ತದೆ. ಅಧಿಕಾರ ಮತ್ತು ಆರ್ಥಿಕ ಸಂಪನ್ಮೂಲಗಳ ಗಳಿಕೆಯ ಪ್ರಕ್ರಿಯೆಯಲ್ಲಿ ಸಂಭವಿಸಬಹುದಾದ ಭಿನ್ನಾಭಿಪ್ರಾಯ ಒಳ್ಳೆಯ ಸಮಾಜಕ್ಕೆ ಅಗತ್ಯವಾದ ಸಿಮೆಂಟ್ ಎಂದು ಅವರು ನಂಬಿದ್ದರು.

ವಿಜ್ಞಾನ, ತಂತ್ರಜ್ಞಾನ, ನಗರೀಕರಣಗಳಿಗೆ ಉಪಾಧ್ಯಾಯರ ವಿರೋಧ ಇರಲಿಲ್ಲ. ಅವುಗಳ ಅಳವಡಿಕೆಯಲ್ಲಿ ಆಯ್ಕೆ ಮನೋಭಾವ ಇರಬೇಕೆಂದು ಅವರು ಭಾವಿಸಿದ್ದರು. (ಅದೇ, ಪುಟ ೮) ಜನರ ಆರ್ಥಿಕ ಸ್ಥಿತಿಗತಿ ಸುಧಾರಣೆಗೆ ಸ್ಥಳೀಯ ಪರಿಸ್ಥಿತಿಗನುಗುಣವಾಗಿ ವಿಜ್ಞಾನ, ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಸೂಕ್ತವೆಂಬುದು ಅವರ ಅನ್ನಿಸಿಕೆಯಾಗಿತ್ತು. ಹೊಟ್ಟೆ ಬಟ್ಟೆ, ವಸತಿ, ಶಿಕ್ಷಣಗಳಿಗೆ ಬೇಕಾಗುವಷ್ಟನ್ನು ಸಮಾಜ ಉತ್ಪಾದಿಸಬೇಕು ಹಾಗೂ ಉತ್ಪಾದನೆಗಳಲ್ಲಿ ಜನತೆಗೆ ಉದ್ಯೋಗಾವಕಾಶ ಕಲ್ಪಿಸಬೇಕು. ಇಷ್ಟು ಮಾಡದಿದ್ದಲ್ಲಿ ಕಷ್ಟಕೋಟಲೆಗಳುಂಟಾಗುತ್ತವೆ ಇದರಿಂದ ಸಮಷ್ಟಿಯ ಯೋಗಕ್ಷೇಮಕ್ಕೆ ಅಗತ್ಯವಾದ ಸಾಮರಸ್ಯಕ್ಕೆ ಭಂಗವುಂಟಾಗುತ್ತದೆ. ಆದರೆ ಬಳಕೆ ಕೊಳ್ಳುಬಾಕತನಕ್ಕೆ ಕುಸಿಯಬಾರದು. (ಅದೇ, ಪುಟ ೬೫)

> **"ಲಭ್ಯವಿರುವ ಸಂಪನ್ಮೂಲಗಳ ದುಂದುಗಾರಿಕೆ ಸಲ್ಲದು. ನಿಯಂತ್ರಿತವಾಗಿ ಬಳಸುವುದು ನಮ್ಮ ಅರ್ಥ ವ್ಯವಸ್ಥೆಯ ಉದ್ದೇಶವಾಗಬೇಕು ಎನ್ನುವುದನ್ನು ಈ ನಿಟ್ಟಿನಿಂದ ಅರ್ಥ ಮಾಡಿಕೊಳ್ಳಬೇಕು. ಧ್ಯೇಯಪೂರ್ಣವಾದ ಪ್ರಗತಿಶೀಲ ಜೀವನಕ್ಕೆ ಭೌತ ದ್ರವ್ಯಗಳ ಅಗತ್ಯವಿದೆ. ಅವುಗಳನ್ನು ಪಡೆದುಕೊಳ್ಳಬೇಕು. ಸರ್ವಶಕ್ತನು ಸಮೃದ್ಧವಾಗಿ ಕೊಟ್ಟಿದ್ದಾರೆ. ಆದರೆ, ಮನುಷ್ಯ ಹುಟ್ಟಿರುವುದೇ ಭೋಗಕ್ಕಾಗಿ ಎನ್ನುವ ಮನೋಭಾವದಿಂದ ಉತ್ಪಾದನೆಯಲ್ಲಿ ಮತ್ತು ಬಳಕೆಯಲ್ಲಿ ಅಹಿತಕರ ಪೈ ಪೋಟಿಯಲ್ಲಿ ತೊಡಗುವುದು ವಿವೇಕಯುತವಾದದ್ದಲ್ಲ"**

ಆಶ್ಚರ್ಯಕರವಾಗಿ ಹೇಳುವುದಾದರೆ ಇಬ್ಬರೂ ರಾಜಕೀಯ ಅಧಿಕಾರ ಮತ್ತು ಸಾರ್ವಜನಿಕ ವ್ಯಕ್ತಿಗಳ ಮೇಲೆ ಅದು ಬೀರುವ ಭ್ರಷ್ಟ ಪರಿಣಾಮದ ಬಗ್ಗೆ ಅನುಮಾನಗಳನ್ನು ಹೊಂದಿದ್ದರು. ಇಬ್ಬರೂ ರಾಜಕೀಯ ಅಧಿಕಾರದ ಹುದ್ದೆಗಳಲ್ಲಿರಲಿಲ್ಲ. ಅಂಥ ಆಸೆಯೂ ಅವರಲ್ಲಿರಲಿಲ್ಲ. (ಉಪಾಧ್ಯಾಯರು ಒಮ್ಮೆ ಪಾರ್ಲಿಮೆಂಟಿಗೆ ಸ್ಪರ್ಧಿಸಿ ಸೋತಿದ್ದರು. ಆದರೆ ಅತ್ಯುತ್ಸಾಹದಿಂದ ಅವರು



ಈ ವಿಫಲ ಸಾಹಸ ನಡೆಸಿದ್ದರೇ ಎನ್ನುವ ಬಗ್ಗೆ ನನಗೆ ಪ್ರಬಲವಾದ ಅನುಮಾನವಿದೆ).

ಗಾಂಧೀಜಿಯವರು ಭಾರತ ಸ್ವಾತಂತ್ರ್ಯ ಗಳಿಸಿದ ಕೆಲವೇ ತಿಂಗಳಲ್ಲಿ ತಮ್ಮ ಆಪ್ತ ಸಹೋದ್ಯೋಗಿಯೊಬ್ಬರಿಗೆ ಹೀಗೆ ಹೇಳಿದ್ದರು.

> **"ಅಧಿಕಾರದ ಆಸೆಬಿಟ್ಟು ಶುದ್ಧಾಂಗವಾಗಿ ಸ್ವಾರ್ಥರಹಿತರಾಗಿ ಮತದಾರರ ಸೇವೆಗೆ ಸಮರ್ಪಿಸಿಕೊಂಡಲ್ಲಿ ನಾವು ಅವರಿಗೆ ಮಾರ್ಗದರ್ಶನ ಮಾಡಬಹುದು. ಅವರ ಮೇಲೆ ಪ್ರಭಾವ ಬೀರಬಹುದು. ಸರ್ಕಾರ ಸೇರುವುದರಿಂದ ನಮಗೆ ದೊರೆಯಬಹುದಾದ ಅಧಿಕಾರಕ್ಕಿಂತ ಹೆಚ್ಚಿನ ಅಧಿಕಾರ ಇದರಿಂದ ಪ್ರಾಪ್ತವಾಗುತ್ತದೆ... ಇವತ್ತು ರಾಜಕಾರಣ ಭ್ರಷ್ಟವಾಗಿದೆ. ರಾಜಕಾರಣಕ್ಕೆ ಹೋದವರೆಲ್ಲ ಕಲುಷಿತಗೊಳ್ಳುತ್ತಾರೆ. ಮಲಿನಗೊಳ್ಳುತ್ತಾರೆ. ನಾವು ಅದರಿಂದ ಸಂಪೂರ್ಣವಾಗಿ ಹೊರಗಿರೋಣ. ಅದರಿಂದ ನಮ್ಮ ಪ್ರಭಾವ ಹೆಚ್ಚುತ್ತದೆ."**
>
> **(ಮಾಹಾತ್ಮ ಡಿ.ಜಿ. ತೆಂಡುಲ್ಕರ್, ಸಂಪುಟ ೮. ಪು. ೨೭೮-೨೮೦)**

ರಾಜಕೀಯ ಪಕ್ಷವೊಂದರ ನಾಯಕರಾಗಿದ್ದ ಉಪಾಧ್ಯಾಯರು ಬಾಪೂವಿನ ಈ ಮಾತುಗಳನ್ನು ಒಪ್ಪುತ್ತಿದ್ದರೆಂದು ಹೇಳುವುದೇ ಒಂದು ವಿಪರ್ಯಾಸವಾದೀತು. ಉಪಾಧ್ಯಾಯರು ಹೀಗೆ ಬರೆದಿದ್ದಾರೆ.

> **"ಇಂದು ರಾಜಕೀಯ ಒಂದು ಸಾಧನವಾಗಿ, ಒಂದು ಧ್ಯೇಯ-ಆದರ್ಶವಾಗಿ ಉಳಿದಿಲ್ಲ. ಅದೇ ಒಂದು ಗುರಿಯಾಗಿಬಿಟ್ಟಿದೆ. ಶಕ್ತಿ-ರಾಜಕೀಯದಲ್ಲಿ ತೊಡಗಿರುವ ಜನ ಇಂದು ನಮ್ಮ ನಡುವೆ ಇದ್ದಾರೆ. ಇವರಿಗೆ ರಾಜಕೀಯ ಅಧಿಕಾರ ಮುಖ್ಯವಲ್ಲ. ಸಾಮಾಜಿಕ, ರಾಷ್ಟ್ರೀಯ ಅಧಿಕಾರ ಮುಖ್ಯವಲ್ಲ. ಸಾಮಾಜಿಕ, ರಾಷ್ಟ್ರೀಯ ಗುರಿಗಳನ್ನು ಸಾಧಿಸಲು ರಾಜಕೀಯ ಅಧಿಕಾರ ಇವರಿಗೆ ಮುಖ್ಯವಲ್ಲ ಇವರಿಗೆ ಶಕ್ತಿ ರಾಜಕೀಯ -ವೇ ಮುಖ್ಯ.'**
>
> **(ಪೊಲಿಟಿಕಲ್ ಡೈರಿ, ಪು. ೧೧೫)**

ಆದರೆ ನಿಷ್ಪಕ್ಷಪಾತರಾದ, ನಿರ್ಲಿಪ್ತರಾದ ಸದಾಶಯದ ಸಜ್ಜನರು ರಾಜಕೀಯದಲ್ಲಿರಬೇಕಾದ್ದು ಮುಖ್ಯ, (ಅಥವಾ ಧರ್ಮದಲ್ಲಿ) ಸತ್ಯಪಥದಲ್ಲಿ ಸಾರ್ವಜನಿಕ ಅಭಿಪ್ರಾಯ ಮೂಡಿಸಲು ಇಂಥ ಮಂದಿ ರಾಜಕೀಯದಲ್ಲಿರಬೇಕಾದ ಅಗತ್ಯವಿದೆ ಎಂದು ಅವರು ನಂಬಿದ್ದರು. ಇಂಥ ಆಲೋಚನೆಯ ಫಲವಾಗಿಯೇ ಅವರು ರಾಜಕೀಯಕ್ಕೆ ನೀತಿನಿಷ್ಠೆ, ಋಜುತ್ವದಲ್ಲಿ ನಂಬಿಕೆಯುಳ್ಳ ಸುಶೀಲರನ್ನು ನೇಮಕ ಮಾಡಿಕೊಳ್ಳುತ್ತಿದ್ದರು.

ಇವರಿಬ್ಬರ ಮಧ್ಯೆ ಏನೆಲ್ಲ ಭಿನ್ನಾಭಿಪ್ರಾಯಗಳಿದ್ದರೂ ಇಬ್ಬರು ಒಂದು ತೀರ್ಮಾನಕ್ಕೆ ಬಂದಿದ್ದರು. ಅದು ಸಮಾಜದಲ್ಲಿನ ಜನರ ಗುಣಶೀಲಗಳೇ ಸರ್ಕಾರದ ಗುಣಸ್ವಭಾವಗಳನ್ನು ನಿರ್ಧರಿಸುತ್ತದೆ. ಇದು ಸಮಕಾಲೀನ ಪಾಶ್ಚಾತ್ಯ ರಾಜಕೀಯ ಚಿಂತನೆಗಿಂತ ಭಿನ್ನವಾಗಿದೆ. ಅಸಂಗತ ಹಿತಾಸಕ್ತಿಗಳೇ ಸರ್ಕಾರ ಮತ್ತು

ರಾಜಕೀಯವನ್ನು ರೂಪಿಸುವ ಪ್ರಮುಖ ಶಕ್ತಿಗಳು ಎನ್ನುವುದು ಪಾಶ್ಚಾತ್ಯ ರಾಜಕೀಯ ಚಿಂತನೆಯಾಗಿದೆ. ಈ ಬಗ್ಗೆ ಗಾಂಧೀಜಿ ಮತ್ತು ಉಪಾಧ್ಯಾಯರ ಅಭಿಪ್ರಾಯಗಳ ಗುಣಾವಗುಣಗಳು ಏನೇ ಇರಲಿ. ತಮ್ಮ ಸುತ್ತ ಕೆಲಸ ಮಾಡುತ್ತಿದ್ದ ಜನರಲ್ಲಿ ಇವರಿಬ್ಬರೂ ತಾಳಿದ್ದ ತೀವ್ರ ಆಸಕ್ತಿ ಮೂಲಭೂತವಾಗಿ ಮುಖ್ಯವಾದದ್ದು. ಸಂಘಟನೆ ಮತ್ತು ನಿರ್ಮಾಣ ಕಾರ್ಯದ ಯಶಸ್ಸಿನಲ್ಲಿ ತಮ್ಮ ಸುತ್ತಲ ವಿವಿಧ ರೀತಿಯ ಜನರಲ್ಲಿ ಇವರು ತೋರಿದ ಆಸಕ್ತಿ ಅತಿಮುಖ್ಯವಾದದ್ದು.



# ೧೩. ಗಾಂಧೀ, ಲೋಹಿಯಾ, ದೀನ್ ದಯಾಳ್ ಅವರ ಆರ್ಥಿಕ ಚಿಂತನೆಗಳು

**ಡಾ. ಕೇಶವ ಪ್ರಸಾದ್ ಸಿಂಗ್***

ಭಾರತೀಯ ಸಾಮಾಜಿಕ ಮತ್ತು ರಾಜಕೀಯ ಜೀವನದ ಮಹಾನ್ ಮೇಧಾವಿಗಳಾಗಿದ್ದ ಗಾಂಧೀಜಿ, ಲೋಹಿಯಾಜಿ ಮತ್ತು ಪಂಡಿತ್‌ಜಿ ಅವರಿಗೆ ಪಾಶ್ಚಾತ್ಯ ಕೈಗಾರಿಕಾ ನಾಗರಿಕತೆಯ ಬಗ್ಗೆ ಆಳವಾದ ಜ್ಞಾನವಿತ್ತು. ಅವರುಗಳು ಪಾಶ್ಚಾತ್ಯ ಕೈಗಾರಿಕಾ ನಾಗರಿಕತೆ ಮತ್ತು ಅದರ ಆನುಷಂಗಿಕ ದುಷ್ಪರಿಣಾಮಗಳ ಬಗ್ಗೆಯೂ ಯಥಾರ್ಥ ತಿಳಿವಳಿಕೆಯಿತ್ತು. ಆದ್ದರಿಂದ, ಕೆಲವು ಭಾರತೀಯರಂತೆ ಈ ಮೂವರು ಹೊಸನಾಗರಿಕತೆಯ ಉಜ್ವಲಕಾಂತಿಗೆ ಮರುಳಾಗಲಿಲ್ಲ. ಪ್ರತಿಯಾಗಿ ಭ್ರಮನಿರಸನ ಹೊಂದಿದ್ದರು, ನಿರಾಶರಾಗಿದ್ದರು, ಜಿಗುಪ್ಸೆ ಪಟ್ಟಿದ್ದರು. ಕೈಗಾರಿಕಾ ನಾಗರಿಕತೆ ಒಡ್ಡಿದ್ದ ಸಮೃದ್ಧಿ, ಅಭ್ಯುದಯ, ಸುಖಸಂತೋಷಗಳ ಆಡಂಬರದ ಮಾತುಗಳು, ಭರವಸೆಗಳು ಪೊಳ್ಳು ಹಾಗೂ ವಂಚನೆಯಿಂದ ಕೂಡಿದವು ಎನ್ನುವುದನ್ನು ಈ ತ್ರಿಮೂರ್ತಿಗಳು ತಮ್ಮ ಸೂಕ್ಷ್ಮಗ್ರಹಣ ಶಕ್ತಿಯಿಂದ, ತೀಕ್ಷ್ಣ ಬುದ್ಧಿಯಿಂದ ಬಲ್ಲವರಾಗಿದ್ದರು. ಈ ನಾಗರಿಕತೆಯ ಪ್ರಚೋದಿತ ಶಿಶುವಾದ ಬಂಡವಾಳಶಾಹಿ ಹಾಗೂ ಈ ಬಂಡವಾಳ ಶಾಹಿಗೆ ಪ್ರತಿಕ್ರಿಯೆಯಾಗಿ ಹುಟ್ಟಿದ ಕಮ್ಯುನಿಸಂ ನಮ್ಮ ಕಾಲದ ಅತಿ ಪ್ರಭಾವಶಾಲಿ ಸಿದ್ಧಾಂತಗಳಾದವು ಅಥವಾ ಚಿಂತನ ಪದ್ಧತಿಗಳಾದವು. ಅಸಮತೆ, ಅನ್ಯಾಯ, ಬಡತನ, ಶೋಷಣೆ, ಗುಲಾಮಗಿರಿ ಇವೇ ಮೊದಲಾದ ಸಮಸ್ಯೆಗಳ ಒಗಟುಗಳನ್ನು ಬಿಡಿಸುವುದು ಈ ಎರಡು ಸಿದ್ಧಾಂತಗಳಿಂದಲೂ ಸಾಧ್ಯವಿಲ್ಲ ಎಂಬುದನ್ನು ಅವರುಗಳು ಚೆನ್ನಾಗಿ ಮನಗೂಂಡಿದ್ದರು. ಇಡೀ ಮಾನವ ಕುಲ ಈ ಪೀಡೆಗಳಿಂದ ಆವೃತ್ತವಾಗಿತ್ತು. ಏಕೆಂದರೆ ಇವರ ಪ್ರಕಾರ ಬಂಡವಾಳಶಾಹಿ ನಿರ್ದಯಿ ಶೋಷಕ ವ್ಯವಸ್ಥೆಯಾಗಿತ್ತು. ಕೊರಳುಕೊಯ್ಯುವ ಸ್ಪರ್ಧೆ ಅದರಲ್ಲಿತ್ತು. ಜೊತೆಗೆ ಅದು ಏಕಸ್ವಾಮ್ಯವಾಗಿತ್ತು. ಪಕ್ಷಪಾತ ಜನ್ಯವಾಗಿತ್ತು. ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಮಾಡಿಕೊಡುವ ಪ್ರವೃತ್ತಿ ಅದರಲ್ಲಿತ್ತು. ಕಮ್ಯುನಿಸಂ ದ್ವೇಷದಿಂದ

---

*ಬಿಹಾರದ ಆರಾದಲ್ಲಿನ ಎಚ್.ಬಿ. ಜೈನ್ ಕಾಲೇಜಿನ ರಾಜಕೀಯ ವಿಜ್ಞಾನ ವಿಭಾಗದ ಮುಖ್ಯಸ್ಥರು.

ಹುಟ್ಟಿತು. ಹಿಂಸೆಯಿಂದ ಬೆಳೆಯಿತು. ಇದು ವಿಭಜನಾ ಸಿದ್ಧಾಂತದ ತೀವ್ರಗಾಮಿತ್ವದ ಮಾದರಿ. ಅದು ಮಾನವ ಸಮುದಾಯವನ್ನು ಎರಡು ಶತ್ರು ಶಿಬಿರಗಳನ್ನಾಗಿ ವಿಂಗಡಿಸುತ್ತದೆ. ಒಂದು ಮತ್ತೊಂದನ್ನು ನಿರ್ನಾಮಗೊಳಿಸುವ ಸಮರಶಿಬಿರ. ಈ ಮೂಲಕ ಧಾರ್ಮಿಕ ಅಸಹಿಷ್ಣುತೆಯ ವರ್ಗಗಳನ್ನು ಸೃಷ್ಟಿಸಿತು. ಇದೆಲ್ಲಕ್ಕಿಂತ ಹೆಚ್ಚಾಗಿ ಕಮ್ಯುನಿಸ್ಟ್ ಸರ್ವಾಧಿಕಾರ ತನ್ನಷ್ಟಕ್ಕೇ ಸೀಮಿತ ಉದ್ದೇಶಗಳೊಂದಿಗೆ ಸಮಾಪ್ತಿ ಹೊಂದುತ್ತದೆ. ವ್ಯಕ್ತಿಯೂ ಸಮಾಪ್ತಿ ಹೊಂದುತ್ತಾನೆ. ವ್ಯಕ್ತಿ ಸಮಾಜದಲ್ಲಿ ವಿಲೀನಗೊಳ್ಳುತ್ತಾನೆ. ಈ ಎರಡು ಅಂತರ್ಗತ ದೌರ್ಬಲ್ಯಗಳ ಜೊತೆಗೆ ಇನ್ನೊಂದು ದುರಂತ ಮುಖವಿದೆ. ಮಾನವನ ವ್ಯಕ್ತಿತ್ವದ ಅಪಮೌಲ್ಯೀಕರಣಗೊಳಿಸಿದ, ಮಾನವ ವ್ಯಕ್ತಿತ್ವವನ್ನು ಕುಬ್ಜಗೊಳಿಸಿದ, ದಿಗ್ಬಂಧನಕ್ಕೀಡು ಮಾಡಿದ ಅಸಹ್ಯಕಾರಿ ಮುಖವಿದು. ಮಾನವೀಯ ಮೌಲ್ಯಗಳ ತಕ್ಕಡಿಯಲ್ಲಿ ಮಾನವ ವ್ಯಕ್ತಿತ್ವದ ಪರಮಪಾವಿತ್ರ್ಯ ಶೃಂಗಸದೃಶವಾಗಿ ನಿಲ್ಲುತ್ತದೆ. ಇದಕ್ಕೆ ವಿರುದ್ಧವಾದ ವಿಕಾರ–ವಿಕೃತ ಆಲೋಚನೆಗಳ ಪದ್ಧತಿ ಸ್ವೀಕಾರಾರ್ಹವಲ್ಲ. ಪಾಶ್ಚಾತ್ಯ ಜಗತ್ತಿನಿಂದ ಒಟ್ಟಾರೆಯಾಗಿ ಆಮದು ಮಾಡಿಕೊಳ್ಳುವ ಯಾವ ತತ್ತ್ವಸಿದ್ಧಾಂತಗಳಿಂದಲೂ, ತಂತ್ರಜ್ಞಾನದಿಂದಲೂ, ಪದ್ಧತಿಗಳಿಂದಲೂ ಭಾರತದ ಸಮಸ್ಯೆಗಳಿಗೆ ಪರಿಹಾರ ಸಾಧ್ಯವಿಲ್ಲ ಎನ್ನುವುದು ಇವರೆಲ್ಲರ ಸರ್ವಸಮ್ಮತ ಅಭಿಮತವಾಗಿತ್ತು. ಈಶ್ವರವಾದಿಗಳಾದ ಗಾಂಧೀಜಿ ಮತ್ತು ಪಂಡಿತ್‌ಜಿ ಮಾನವನಲ್ಲಿ ಅಂತರ್ಗತವಾಗಿರುವ ಸಜ್ಜನಿಕೆಯನ್ನು, ಮಾನವನ ಪಾವಿತ್ರ್ಯ, ದಿವ್ಯತೆಗಳನ್ನು ನಂಬಿದ್ದರು. ಮಾನವಸ್ವಭಾವದ ದಿವ್ಯತೆ, ದೈವೀಕತೆಗಳ ಬಗ್ಗೆ ನಿರೀಶ್ವರವಾದಿಯಾದ ಲೋಹಿಯಾಜಿ ಅವರಿಗೆ ಇದನ್ನು ಒಪ್ಪುವುದು ಕಷ್ಟವಾಗಬಹುದು. ಆದರೆ ಲೋಹಿಯಾ ಅವರೂ ಮಾನವನ ಘನತೆ ಬಗ್ಗೆ ಅಪಾರವಾದ ಗೌರವವನ್ನು ಹೊಂದಿದ್ದರು. ಲೋಹಿಯಾ ಹೇಳುತ್ತಾರೆ :

> **"ವಿವೇಕಶಾಲಿಯಾದವರು ಯಾರೂ ಮಾನವನನ್ನು ಕುರಿತ ಗಾಂಧೀಜಿಯವರ ಅಭಿಪ್ರಾಯಗಳನ್ನು ಒಪ್ಪದಿರಲಾರರು. ಸ್ವ ಮನಸ್ಸಿನವರು ಒಪ್ಪಿಯೇ ಒಪ್ಪುತ್ತಾರೆ. ಏಕೆಂದರೆ ಅದು ವೈಜ್ಞಾನಿಕವಾಗಿ ಸರಿಯಾದುದು ಅಷ್ಟೇ ಅಲ್ಲ ಅದು ಹೊಸ ಜಗತ್ತಿನ ಬುನಾದಿಯೂ ಹೌದು"**

ಸೈದ್ಧಾಂತಿಕ ಸ್ವಾತಂತ್ರ್ಯ ಕುರಿತಂತೆ ಈ ತ್ರಿಮೂರ್ತಿಗಳ ದೃಢನಂಬಿಕೆ; ಮಾನವನ ಸ್ವಭಾವ ಮತ್ತು ವ್ಯಕ್ತಿತ್ವ ಕುರಿತ ಪೂಜ್ಯ ಭಾವನೆಗಳು ; ಮಾನವನ ಸರ್ವಾಂಗೀಣ ಅಭಿವೃದ್ಧಿ ಕುರಿತ ಅವರ ನಂಬಿಕೆಗಳು; ಬುದ್ಧಿಭಾವಗಳಲ್ಲಿ ಅವರ ಭಾರತೀಯತೆ, ಇವೆಲ್ಲಕ್ಕೂ ಮಿಗಿಲಾದ ಸಾರ್ವಕಾಲಿಕ ಭಾರತೀಯ ಸಂಸ್ಕೃತಿಯ ಪ್ರಭಾವ ಪರಿಣಾಮಗಳು–

ಇವುಗಳ ಆಧಾರದ ಮೇಲೆ ಪ್ರಶ್ನೆಗಳನ್ನು ಕೇಳಬೇಕಾಗಿದೆ. ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಚಿಂತನೆಗಳ ಬಗ್ಗೆ ಒಮ್ಮತಕ್ಕಿಂತ ಭಿನ್ನಮತವೇ ಏಕೆ



ಹೆಚ್ಚಾಯಿತು? ನಿಶ್ಚಿತವಾಗಿಯೂ ನಾನು ಹೇಳಬಲ್ಲೆ, ಈ ವಿಚಾರಗಳಲ್ಲಿ ಅವರ ಆಲೋಚನೆಗಳು ಮೂಲಭೂತವಾದವು ಹಾಗೂ ಅಸಮ್ಮತಿಗಳು ಗೌಣವಾದವು. ಅವರ ಆರ್ಥಿಕ ಚಿಂತನೆಗಳ ಬಗ್ಗೆಯೂ ಹೆಚ್ಚುಕಡಿಮೆ ಇದೇ ಮಾತುಗಳು ಅನ್ವಯವಾಗುತ್ತವೆ. ಯಾವುದೇ ಹೊರಗಿನ ಸಿದ್ಧಾಂತಗಳು, ಪದ್ಧತಿಗಳು, ಸಂಸ್ಥೆಗಳು, ತಂತ್ರಜ್ಞಾನಗಳು ಇವುಗಳು ಯಾವುದರಿಂದಲೂ ಭಾರತದ ಸಮಸ್ಯೆಗಳಿಗೆ ಪರಿಹಾರವಿಲ್ಲ ಎನ್ನುವುದು ಅವರುಗಳ ಸರ್ವಸಮ್ಮತ ಅಭಿಪ್ರಾಯವಾಗಿತ್ತು. ಈಶ್ವರವಾದಿಗಳಾದ ಗಾಂಧೀಜಿ ಮತ್ತು ಪಂಡಿತ್‌ಜಿ ಮಾನವನ ದಿವ್ಯತೆ ಮತ್ತು ಅವನಲ್ಲಿ ಅಂತರ್ಗತವಾಗಿರುವ ಸಜ್ಜನಿಕೆಯಲ್ಲಿ ನಂಬಿಕೆಯುಳ್ಳವರಾಗಿದ್ದರು ನಿರೀಶ್ವರವಾದಿಯಾದ ಲೋಹಿಯಾಜಿ ಅವರಿಗೆ ಮಾನವಸ್ವಭಾವದಲ್ಲಿನ ದಿವ್ಯತೆ, ದೈವಿಕತೆಗಳ ಬಗ್ಗೆ ಅನುಮಾನಗಳಿದ್ದಿರಬಹುದು. ಆದರೆ ಮಾನವ ವ್ಯಕ್ತಿತ್ವದ ಘನತೆ–ಗೌರವಗಳ ಬಗ್ಗೆ ಅವರು ಪೂಜ್ಯಭಾವನೆಯನ್ನು ಹೊಂದಿದ್ದರು ಎನ್ನುವುದರಲ್ಲಿ ಲೇಶ ಮಾತ್ರವೂ ಸಂಶಯಕ್ಕೆಡೆಯಿಲ್ಲ. ಲೋಹಿಯಾ ಹೇಳುತ್ತಾರೆ:

> **"ಸ್ವಸ್ಥ ಮನಸ್ಸಿನ ವಿವೇಕಶಾಲಿಗಳು ಗಾಂಧೀಜಿಯವರು ಮಾನವನಲ್ಲಿ ಇಟ್ಟಿರುವ ನಂಬಿಕೆಯನ್ನು ಅನುಮೋದಿಸಬೇಕು ಅದು ಹೊಸ ಪ್ರಪಂಚವೊಂದರ ಬುನಾದಿಯಾಗಲಿದೆ ಎನ್ನುವ ಕಾರಣಕ್ಕಾಗಿಯೂ"**[೧]

ತಾತ್ವಿಕ ಉದಾರಶೀಲತೆಯಲ್ಲಿ ಅವರ ನಂಬಿಕೆ;

* **ಮಾನವಸ್ವಭಾವ ಮತ್ತು ಮಾನವ ವ್ಯಕ್ತಿತ್ವದ ಘನತೆ–ಗೌರವಾರ್ಹತೆಗಳ ಬಗ್ಗೆ ಅವರಲ್ಲಿರುವ ಬಹುತೇಕ ತದ್ವತ್ತಾದ ಅಭಿಪ್ರಾಯಗಳು;**
* **ಮಾನವನ ಸರ್ವಾಂಗೀಣ ಅಭಿವೃದ್ಧಿ ಬಗ್ಗೆ ಅವರ ನಂಬಿಕೆ;**
* **ಮನಸ್ಸು, ಪ್ರವೃತ್ತಿಗಳಲ್ಲಿನ ಭಾರತೀಯತೆ,**
* **ಆದರ್ಶ ರಾಷ್ಟ್ರೀಯ ಪ್ರಜ್ಞೆ;**
* **ಇವೆಲ್ಲಕ್ಕೂ ಮಿಗಿಲಾಗಿ ಅವರ ವ್ಯಕ್ತಿತ್ವ ಮತ್ತು ಕರ್ತವ್ಯಗಳ ಮೇಲಿನ ವ್ಯಾಪಕವಾದ ಭಾರತೀಯ ಸಂಸ್ಕೃತಿಯ ಪ್ರಭಾವ–ಪರಿಣಾಮಗಳು**

– ಈ ತ್ರಿಮೂರ್ತಿಗಳಲ್ಲಿ ಅವರ ಮೂಲಭೂತ ಸಾಮಾಜಿಕಗುರಿ, ರಾಜಕೀಯ ಮತ್ತು ಆರ್ಥಿಕ ಚಿಂತನೆಗಳಲ್ಲಿ ಭಿನ್ನಾಭಿಪ್ರಾಯಗಳಿಗಿಂತ ಪರಸ್ಪರ ಸಮ್ಮತಿ, ಒಡಂಬಡಿಕೆಗಳು ಮೂಡಿರಲು ಏನು ಕಾರಣವಿದ್ದೀತು? ಈ ಪ್ರಶ್ನೆಗೆ ಉತ್ತರವನ್ನು ಮೇಲೆ ಕಾಣಿಸಿರುವ ಅಂಶಗಳಲ್ಲೆ ಹುಡುಕಬೇಕಾಗುತ್ತದೆ. ಅವರ ಚಿಂತನೆಯಲ್ಲಿನ ಒಮ್ಮತ ಮೂಲಭೂತವಾದದ್ದು, ಭಿನ್ನಮತ ಬಾಹ್ಯ ಪರಿಧಿಯದು, ಗೌಣವಾದದ್ದು ಎನ್ನುವುದನ್ನು ನಾನು ಖಾತ್ರಿಯಾಗಿ ಹೇಳಬಲ್ಲೆ. ಆರ್ಥಿಕ ಚಿಂತನೆಗಳಲ್ಲಂತೂ ಈ ಮಾತು ಇನ್ನಷ್ಟು ಹೆಚ್ಚಾಗಿ ಅನ್ವಯವಾಗುತ್ತದೆ.

ಪಶ್ಚಿಮದ ಎರಡು ಪ್ರಧಾನ ವ್ಯವಸ್ಥೆಗಳಾದ ಬಂಡವಾಳಶಾಹಿ ಮತ್ತು

ಕಮ್ಯುನಿಸಂ ನಮಗೆ ಹೊಂದಿಕೆಯಾಗುವುದಿಲ್ಲ ಎನ್ನುವುದು ಅವರಿಗೆ ಸಂಪೂರ್ಣವಾಗಿ ಮನವರಿಕೆಯಾಗಿತ್ತು. ಅವರು ಸತತವಾಗಿ ಸ್ವಂತಿಕೆಯಿಂದ ಕೂಡಿದ ಸೃಜನಶೀಲ ಚಿಂತನೆಯಲ್ಲಿ ತೊಡಗಿಕೊಂಡಿದ್ದರು. ಭಾರತೀಯ ಪರಿಸ್ಥಿತಿ ಹಾಗೂ ರಾಷ್ಟ್ರದ ಮನೋಧರ್ಮ, ಮೇಧಾಶಕ್ತಿಗಳಿಗನುಗುಣವಾದ ಹೊಸ ಸಾಮಾಜಿಕ ವ್ಯವಸ್ಥೆ ರೂಪಿಸುವುದು ಅವರ ಚಿಂತನೆಗಳ ಉದ್ದೇಶವಾಗಿತ್ತು. ನ್ಯಾಯ, ಸಮಾನತೆ ಮತ್ತು ಸ್ವಾತಂತ್ರ್ಯಗಳ ಅಡಿಪಾಯದ ಮೇಲೆ ದೀರ್ಘಕಾಲ ಬಾಳುವಂಥ ಸಾಮಾಜಿಕ ವ್ಯವಸ್ಥೆಯೊಂದನ್ನು ಸ್ಥಾಪಿಸುವುದು ಅವರ ಆಲೋಚನೆಯಾಗಿತ್ತು. ವ್ಯಕ್ತಿಗೆ, ತನ್ನ ವ್ಯಕ್ತಿತ್ವದ ಪೂರ್ಣ ವಿಕಾಸಕ್ಕೆ ಮತ್ತು ಅಭಿವ್ಯಕ್ತಿಗೆ ಅಗತ್ಯವಾದ ಸಕಲ ಅವಕಾಶಗಳನ್ನು ಹೊಸವ್ಯವಸ್ಥೆಯಲ್ಲಿ ಮುಕ್ತರೀತಿಯಲ್ಲಿ ಕಲ್ಪಿಸುವುದು ಅವರ ಉದ್ದೇಶವಾಗಿತ್ತು. ಈ ಹೊಸ ವ್ಯವಸ್ಥೆ ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ತಾಂತ್ರಿಕವಾಗಿ ವಿಕೇಂದ್ರೀಕೃತವಾಗಿರಬೇಕೆಂಬುದು ಅವರ ಚಿಂತನೆಯಾಗಿತ್ತು.

ಅವರ ಕಲ್ಪನೆಯ ವಿಕೇಂದ್ರೀಕೃತ ಅರ್ಥವ್ಯವಸ್ಥೆ ರಚನಾಸಾದೃಶ್ಯತೆಯಿಂದ ಕೂಡಿತ್ತು. ಆರ್ಥಿಕ ವಿಕೇಂದ್ರೀಕರಣ ಕುರಿತ ಅವರ ವಿಚಾರಗಳಲ್ಲಿ ನಿಕಟವಾದ ಸಾಮ್ಯತೆ ಇತ್ತು. ಸಾಮ್ಯತೆ ಅಷ್ಟೇ ಅಲ್ಲ ವಿಕೇಂದ್ರೀಕೃತ ಅರ್ಥವ್ಯವಸ್ಥೆಯ ಪ್ರಮುಖ ವಿಷಯಗಳಲ್ಲಿ ಅವರ ಅಭಿಪ್ರಾಯಗಳು ತದ್ವತ್ತಾಗಿದ್ದವು. ಗಾಂಧೀಜಿಯವರ ಸರ್ವೋದಯ, ಲೋಹಿಯಾ ಅವರ ವಿಕೇಂದ್ರೀಕೃತ ಸಮಾಜವಾದ ಮತ್ತು ಪಂಡಿತ್‌ಜಿಯವರ 'ಏಕಾತ್ಮ ಮಾನವತೆ' ಯ ಪರಿಕಲ್ಪನೆಗಳು ಪರಸ್ಪರ ಸಂಧಿಸುತ್ತವೆ, ಅನನ್ಯತೆಯನ್ನು ಕಳೆದುಕೊಳ್ಳದೆ ಸಮ್ಮಿಳನವಾಗುತ್ತವೆ. ವಿಕೇಂದ್ರೀಕೃತ ಅರ್ಥವ್ಯವಸ್ಥೆಯಲ್ಲಿ ಅಪೂರ್ವವಾಗಿ, ಉಜ್ವಲವಾಗಿ ಸಂಗಮಿಸುತ್ತವೆ. ಲೋಹಿಯಾ ಅವರ ಚಿಂತನೆ ಮತ್ತು ಕೆಲಸಕಾರ್ಯಗಳ ಮೇಲೆ ಗಾಂಧೀಜಿಯವರು ಅಗಾಧವಾದ ಪ್ರಭಾವ ಬೀರಿದ್ದರು. ಲೋಹಿಯಾ ಚಿಂತನೆಯ ತಿರುಳು ಸತ್ತ್ವಗಳು ಗಾಂಧೀವಾದವೇ ಆಗಿವೆ. ಲೋಹಿಯಾ ಅವರ ಅಸಹಕಾರ ಚಳುವಳಿ, ಅಹಿಂಸಾಮಾರ್ಗ ಹಾಗೂ ಗಾಂಧೀಜಿಯವರ 'ನನಗೊಂದು ಹೆಜ್ಜೆಸಾಕು' ಉಕ್ತಿಯ ಮೂರ್ತರೂಪವಾದ ಅವ್ಯವಹಿತತ್ವ ಇವೆಲ್ಲದರಲ್ಲಿ ಗಾಂಧೀಜಿಯವರ ಪ್ರಭಾವವನ್ನು, ವಿಚಾರಗಳನ್ನು ಕಾಣಬಹುದು. ಇವೆಲ್ಲ ವಿಷಯಗಳನ್ನು ಅವರು ಗಾಂಧೀಜಿಯವರಿಂದ ಪಡೆದುಕೊಂಡಿದ್ದಾರೆ. ಸಣ್ಣಪುಟ್ಟ ಷರತ್ತುಗಳೊಂದಿಗೆ ಆರ್ಥಿಕ ವಿಕೇಂದ್ರೀಕರಣ, ರಾಜಕೀಯ ವಿಕೇಂದ್ರೀಕರಣ, ಪ್ರೀತಿ ಮತ್ತು ಕೋಪ (ಭೀತಿ, ಸೇಡು ಅಲ್ಲ) ಆಧಾರಿತ ಅಹಿಂಸಾತ್ಮಕ ಬೆಳವಣಿಗೆ, ಸಭ್ಯ ಜೀವನಮಟ್ಟ, ಮಾನವತಾವಾದ, ವಿಶ್ವಸರ್ಕಾರ ಈ ಎಲ್ಲ ವಿಚಾರಗಳಲ್ಲಿ ಲೋಹಿಯಾ ಗಾಂಧಿಯವರಿಂದ ಪ್ರಭಾವಿತರಾಗಿದ್ದಾರೆ. ಲೋಹಿಯಾಜಿ ಗಾಂಧೀತತ್ತ್ವಗಳಿಗೆ ಪೂರಕಾಂಶಗಳನ್ನು ಸೇರಿಸಿದರು ಹಾಗೂ ಅದನ್ನು ಶ್ರೀಮಂತಗೊಳಿಸಿದರು ಎಂದು ಹೇಳದಿದ್ದರೆ



ಅವರಿಗೆ ಅನ್ಯಾಯವೆಸಗಿದಂತೆ. ಲೋಹಿಯಾಜಿ ಅವರ ಸಮಾಜವಾದ, ಮಾರ್ಕ್ಸ್‌ವಾದ ಅಥವಾ ರಷ್ಯ ಚೀನಾಗಳ ಸಿದ್ಧಾಂತಗಳ ಸಮ್ಮಿಶ್ರಣವಲ್ಲ ಅಥವಾ ಪಾಶ್ಚಿಮಾತ್ಯ ಜಗತ್ತಿನ ಸಮಾಜವಾದದಿಂದಲೂ ಪ್ರಭಾವಿತವಾದುದಲ್ಲ. ಅವರದು ನಿಜವಾಗಿ ಭಾರತೀಕೃತ ಸಮಾಜವಾದ. ಅವರ ಸಮಾಜವಾದದ ನೇಯ್ಗೆ ಗಾಂಧೀಜಿಯವರ ಚಿಂತನೆ ಮತ್ತು ಕಾರ್ಯಕ್ರಮಗಳ ಎಳೆಗಳನ್ನು ಹೊಂದಿದೆ. ಲೋಹಿಯಾಜಿ ಅವರ ಮಾತಿನಲ್ಲೇ ಹೇಳುವುದಾದರೆ:

> **"ಗಾಂಧೀಜಿಯವರ ಬದುಕು ಮತ್ತು ಕಾರ್ಯಕಾಯಕಗಳ ಕೆಲವೊಂದು ವಿಚಾರಗಗಳ ಎಳೆಗಳಿಂದ ಸ್ಥಿರವಾದ, ಸುಸಂಗತವಾದ ಸಮಾಜವಾದಿ ಹಚ್ಚಡವೊಂದನ್ನು ನೇಯಬಹುದು. ಇದರಿಂದ ಹೊಸ ನಾಗರಿಕತೆಯೊಂದು ಉದಯಿಸುತ್ತದೆ. ಆಗ ಮಾನವಕುಲ ಶಾಂತಿ–ಗೌರವಗಳಿಂದ ಯೋಗ್ಯವಾದ ಬಾಳ್ವೆಯ ನವಯುಗವನ್ನು ನಿರೀಕ್ಷಿಸಬಹುದು"[೨]**

"ಮಹಾತ್ಮ ಗಾಂಧಿಯವರ ಬೋಧನೆಗಳ ವಿವೇಕಯುಕ್ತ ಅನ್ವಯಿಸುವಿಕೆ"[೩] ಲೋಹಿಯಾ ಸಮಾಜವಾದಿ ಯೋಜನೆಯ ಅಂತರ್ಗತ ಭಾಗವಾಗಿದೆ. ಮತ್ತೆ ಲೋಹಿಯಾ ಅವರ ಇನ್ನೊಂದು ಉಲ್ಲೇಖವನ್ನು ಗಮನಿಸಬಹುದು:

> **"ಗಾಂಧೀಜಿಯವರ ಮೂಲಭೂತ ಸೂತ್ರಗಳನ್ನು ಆರ್ಥಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಗಳನ್ನಾಗಿ ರೂಪಾಂತರಿಸಿ ಅವುಗಳನ್ನು ಕಾರ್ಯಗತಗೊಳಿಸಿದಲ್ಲಿ, ಹೊಸನಾಗರಿಕತೆಯನ್ನು ಸೃಷ್ಟಿಸುವುದರಲ್ಲಿ ಭಾರತ ದಾರಿದೀಪವಾಗಬಲ್ಲದು. ಇದು ಪ್ರಪಂಚದಾದ್ಯಂತ ಸಮಾಜವಾದ ಮೂಡಬೇಕಾದ ಕೆಲಸವಾಗಿದೆ. ವಿಶೇಷವಾಗಿ ಭಾರತೀಯ ಸಮಾಜವಾದ ಈ ಕೆಲಸವನ್ನು ಮಾಡಬೇಕಾಗಿದೆ."[೪]**

ಸಂಕ್ಷಿಪ್ತವಾಗಿ ಹೇಳುವುದಾದರೆ ಲೋಹಿಯಾ ಅವರ ರಾಜಕೀಯ ಮತ್ತು ಆರ್ಥಿಕ ವಿಚಾರಧಾರೆಯ ಸಮಾಜವಾದಿ ಮಹಲು ಗಾಂಧೀಜಿಯವರ ತತ್ತ್ವಗಳ ಅಡಿಪಾಯದ ಮೇಲೆ ನಿರ್ಮಾಣಗೊಂಡ ಸಿದ್ಧಾಂತವಾಗಿದೆ. ಗಾಂಧಿ ತತ್ತ್ವಗಳು ಲೋಹಿಯಾ ವಿಚಾರಧಾರೆಯ ಅವಿಭಾಜ್ಯ ಅಂಗ ಮಾತ್ರವಲ್ಲ, ಅದರ ಕೇಂದ್ರವೂ ಹೌದು.

ಗಾಂಧೀಜಿಯವರಂತೆ ಪಂಡಿತ್‌ಜಿಯವರ ವಿಚಾರಸೆಲೆಯ ಮೂಲ ಪ್ರಾಚೀನ ಭಾರತದ ಸಂಪದವಾದ ವಿವೇಕ, ತತ್ತ್ವ ಸಿದ್ಧಾಂತ ಮತ್ತು ಸಂಸ್ಕೃತಿಯಲ್ಲಡಗಿದೆ. ಮತ್ತೆ ಗಾಂಧೀಜಿಯವರಂತೆ ಪಂಡಿತ್‌ಜಿಯವರ ಚಿಂತನೆಗಳು ನೈತಿಕ ಅಡಿಪಾಯದ ಮೇಲೆ ರೂಪುಗೊಂಡಿವೆ. ಭಾರತೀಯ ಸಂಸ್ಕೃತಿಯಲ್ಲೇ ಅವರ ಚಿಂತನೆಯ ಬೇರುಗಳಿರುವುದರಿಂದ ಅದು ಬೇರೇನೂ ಆಗಲು ಸಾಧ್ಯವಿಲ್ಲ. ಪಂಡಿತ್‌ಜಿಯವರು ವ್ಯಕ್ತಿಯನ್ನು "ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಗಳನ್ನೊಳಗೊಂಡ"[೫] ಅಖಂಡ ಮಾನವನನ್ನಾಗಿ ಕಾಣುತ್ತಾರೆ. ಹಾಗೂ ಮಾನವ ಜೀವನದ ಈ ವಿವಿಧ ಅಂಶಗಳನ್ನು ಬೇರೆ ಬೇರೆ ಅಂಕಣಗಳೆಂದು ಪ್ರತ್ಯೇಕಗೊಳಿಸಲಾಗದು. ಬದುಕಿನ ಬಗ್ಗೆ ಪ್ರತ್ಯೇಕಿತ

ಅಭಿಪ್ರಾಯ ತಾಳಿರುವುದೇ ಪಶ್ಚಿಮದ ದುರಂತ ಎಂದು ಪಂಡಿತ್‌ಜಿ ಭಾವಿಸುತ್ತಾರೆ. ಎಂದೇ ಪಾಶ್ಚಾತ್ಯರು, "ಗೊಂದಲದ ಕೂಡುಹಾದಿಯಲ್ಲಿ ನಿಂತು" ಕತ್ತಲೆಯಲ್ಲಿ ತಡಕಾಡುತ್ತಿರುವ ಮಂದಿ ಎನ್ನುತ್ತಾರೆ ಅವರು.

> **"ಆದ್ದರಿಂದ ಕಣ್ಣು ಮುಚ್ಚಿಕೊಂಡು ಪಾಶ್ಚಾತ್ಯ ಜಗತ್ತನ್ನು ಅನುಸರಿಸುವುದೆಂದರೆ ಒಬ್ಬ ಕುರುಡ ಮತ್ತೊಬ್ಬ ಕುರುಡನನ್ನು ಕೈ ಹಿಡಿದು ನಡೆಸಿದ ಪ್ರಸಂಗದಂತಾಗುತ್ತದೆ"**[೬]

ಚಿತ್ರಹಿಂಸೆಯಿಂದ ಪೀಡಿತವಾಗಿರುವ ಮಾನವ ಕುಲಕ್ಕೆ ಹೊಸ ಬೆಳಕು, ಮಾರ್ಗದರ್ಶನ, ಹೊಸ ದಿಕ್ಕುದಿಸೆಗಳು ಅಗತ್ಯವಿದೆ ಎಂದೂ ಪಂಡಿತ್‌ಜಿಯವರಿಗೆ ತೀವ್ರವಾಗಿ ಅನ್ನಿಸಿತ್ತು. ಆರ್ಷೇಯವಾದ ಭಾರತೀಯ ಸಂಸ್ಕೃತಿ ಈ ಕೆಲಸ ಮಾಡಬಹುದು ಎಂದು ಅವರು ನಂಬಿದ್ದರು. ಹೀಗಾಗಿ ಅವರು ಭಾರತೀಯ ಸಂಸ್ಕೃತಿ ಸಾಗರ ಗರ್ಭದೊಳಕ್ಕೆ ಒಂದು ಮುಳುಗು ಹಾಕಿದರು ; "ಮಾನವ ಸಂಬಂಧ ತತ್ವಗಳು" ಎನ್ನುವ ಅಮೂಲ್ಯವಾದ ಮುತ್ತು ಮಾಣಿಕ್ಯವನ್ನು ಹೆಕ್ಕಿ ತಂದರು. ಹಾಗೂ ಧರ್ಮದ ನಿಯಮಗಳನ್ನು ಅನ್ವೇಷಿಸಿ ತಂದರು. ಇವು ಅವರ "ಅಖಂಡ ಮಾನವತಾವಾದದ" ತತ್ತ್ವ ಸಿದ್ಧಾಂತಗಳಾದವು. ಈ ತತ್ತ್ವಗಳು ಮನುಕುಲದ ಬದುಕಿನಲ್ಲಿ ಶಾಂತಿ, ಸಾಮರಸ್ಯ ಮತ್ತು ಪ್ರಗತಿಯನ್ನು ತರಬಹುದೆಂದು ಅವರು ಆಶಿಸಿದ್ದರು ಸ್ವದೇಶಿ ಮತ್ತು ವಿಕೇಂದ್ರೀಕರಣ ಎನ್ನುವ ಎರಡು ಪರಿಕಲ್ಪನೆಗಳು ಅವರ ಆರ್ಥಿಕನೀತಿಯ ಮೂಲಾಧಾರಗಳಾಗಿವೆ.[೭]

ಬೇರೆಬೇರೆ ಚಿಂತಕರ ಚಿಂತನೆಗಳ ತೌಲನಿಕ ವಿಶ್ಲೇಷಣೆಯನ್ನು ಮಂಡಿಸುವುದರಲ್ಲಿ, ಅವರಲ್ಲಿನ ಸಮ್ಮತಿ–ಅಸಮ್ಮತಿಗಳನ್ನು ಗುರುತಿಸುವುದರಲ್ಲಿ ವಿಶೇಷವಾಗಿ ಗಮನಿಸಬೇಕಾದ್ದು ಅವರ ಮೂಲಪಾಠ, ರೀತಿ–ನೀತಿ–ಆಶಯ–ಉದ್ದೇಶಗಳು ಹಾಗೂ ಧೋರಣೆಗಳನ್ನು ಈ ರೀತಿಯ ಅಧ್ಯಯನ ಕ್ರಮದಿಂದ ಅವರಲ್ಲಿನ ಸಮಾನ ಅಂಶಗಳನ್ನು, ಅವರ ಆಲೋಚನೆಗಳಲ್ಲಿನ ಭಿನ್ನತೆಗಳನ್ನು ಕರಾರುವಾಕ್ಕಾಗಿ ಗ್ರಹಿಸಲು ಮೌಲ್ಯಮಾಪನ ಮಾಡಲು ಸೂಕ್ತವಾದ ದೃಷ್ಟಿಕೋನವೊಂದು ಲಭ್ಯವಾಗುತ್ತದೆ.

ಅವರ ಆರ್ಥಿಕ ಚಿಂತನೆಗಳನ್ನು ಈ ರೀತಿಯ ಅನುಸಂಧಾನದ ಮೂಲಕವೇ ವಿಶ್ಲೇಷಿಸಲಾಗಿದೆ. ಅದರಲ್ಲಿನ ಸಮಾನ ನೆಲೆಗಳನ್ನು ಗುರುತಿಸಲು ಈ ಕೆಳಗಿನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಅಗತ್ಯವಾಗಿದೆ.

### ಅರ್ಥವ್ಯವಸ್ಥೆಯ ನೈತಿಕ ತಳಹದಿ

ಗಾಂಧೀಜಿ ಮತ್ತು ಪಂಡಿತ್‌ಜಿ ಅವರ ಕಲ್ಪನೆಯ ಅರ್ಥ ವ್ಯವಸ್ಥೆ ನೈತಿಕ ತಳಹದಿಯ ಮೇಲೆನಿಂತಿದೆ. ಆದ್ದರಿಂದ, ಮಾನವನ ನೈತಿಕ ಮಟ್ಟವನ್ನು, ಮಾನದಂಡವನ್ನು ವಿರೋಧಿಸುವ ಅರ್ಥವ್ಯವಸ್ಥೆಯನ್ನು ಇವರಿಬ್ಬರೂ ಇಚ್ಛಿಸುವುದಿಲ್ಲ.



ಇದರ ಸಮಾನ ಅಭಿಪ್ರಾಯಗಳು ಅಖಂಡ ಮಾನವ ಪರಿಕಲ್ಪನೆಗೆ ಋಣಿಯಾಗಿವೆ. ಮಾನವನ ಆಮೂಲಾಗ್ರ ಚಟುವಟಿಕೆಗಳನ್ನು ಅಭೇದ್ಯ ಅಂಕಣಗಳಲ್ಲಿ ಪ್ರತ್ಯೇಕಿಸಲಾಗದು. ನಿರೀಶ್ವರವಾದಿಯಾದ ಲೋಹಿಯಾ ಅವರು. ಮಾನವನ ವ್ಯಕ್ತಿತ್ವದ ಅಧ್ಯಾತ್ಮಿಕ ಗುಣಗಳು ಹಾಗೂ ದೈವೀಗುಣಗಳ ಬಗ್ಗೆ ಗಾಂಧೀಜಿ ಮತ್ತು ಪಂಡಿತ್‌ಜಿ ಅವರ ಅಭಿಪ್ರಾಯಗಳನ್ನು ಒಪ್ಪದೇ ಹೋಗಬಹುದು. ಆದ್ದರಿಂದ ಆರ್ಥಿಕತೆಯ ನೈತಿಕ ತಳಪಾಯ ಕುರಿತು ಲೋಹಿಯಾ ಅವರು ಒಪ್ಪದೇ ಹೋದರೂ. "ಬದುಕು–ಬಾಳ್ವೆ ಪರಿಪೂರ್ಣವಾಗಿರಬೇಕು, ಆನಂದಮಯವಾಗಿರಬೇಕು. ಸಂತೋಷದಿಂದ ಕೂಡಿರಬೇಕು" ಎನ್ನುವುದನ್ನು ನಂಬುತ್ತಾರೆ. ಮಾನವನ ವ್ಯಕ್ತಿತ್ವವನ್ನು ಸಾಂಗಗೊಳಿಸಲು, ಅಭಿವ್ಯಕ್ತಗೊಳಿಸಲು ಅವಕಾಶಗಳನ್ನು ಕಲ್ಪಿಸುವ, ಸಮಾನತೆ, ನ್ಯಾಯ, ಸ್ವಾತಂತ್ರ್ಯಗಳನ್ನು ಮೂಲಾಧಾರವಾಗಿ ಹೊಂದಿರುವ ವ್ಯವಸ್ಥೆಯಲ್ಲಿ ಮಾತ್ರ ಇಂಥ ಅನಂದಮಯವಾದ, ಸಂತಸಭರಿತವಾದ ಬಾಳ್ವೆಸಾಧ್ಯ ಎನ್ನುವುದರಲ್ಲಿ ತ್ರಿಮೂರ್ತಿಗಳಲ್ಲಿ ಸಂಪೂರ್ಣ ಸಹಮತವಿದೆ." ಧನವನ್ನೇ ಪರಮದೈವವೆಂದು ಪೂಜಿಸುವ, ಬಲಾಢ್ಯರಿಗೆ, ದುರ್ಬಲರ ಶೋಷಣೆಯಿಂದ ಹಣಮಾಡಲು ಅವಕಾಶನೀಡುವ ಅರ್ಥವ್ಯವಸ್ಥೆ ಒಂದು ಮಿಥ್ಯೆ. ಒಂದು ವಿಷಾದಕರ ವಿಜ್ಞಾನ ಎನ್ನುತ್ತಾರೆ ಗಾಂಧೀಜಿ. ಇಂಥ ಅರ್ಥ ವ್ಯವಸ್ಥೆಯಿಂದ ಅವಸಾನವೇ ಗತಿ. ನಿಜವಾದ ಅರ್ಥ ವ್ಯವಸ್ಥೆ ಸಾಮಾಜಿಕ ನ್ಯಾಯದ ಪರವಾಗಿ ದೀನದಲಿತರೂ ಸೇರಿದಂತೆ ಎಲ್ಲರ ಒಳಿತನ್ನು ಸಮಾನವಾಗಿ ಬೆಂಬಲಿಸುತ್ತದೆ, ಪ್ರೋತ್ಸಾಹಿಸುತ್ತದೆ. ಯೋಗ್ಯಬದುಕಿಗೆ ಅದು ಅನಿವಾರ್ಯ"[೯] ಎನ್ನುವುದು ಗಾಂಧೀಜಿಯವರ ಅಂಬೋಣ. ತ್ರಿಮೂರ್ತಿಗಳಲ್ಲಿ ಉಳಿದಿಬ್ಬರೂ ಬಾಪೂಜಿಯವರ ಈ ಮಾತಿನಲ್ಲಿ ಪೂರ್ಣಸಹಮತ ಹೊಂದಿದ್ದಾರೆ.

### ಅಗತ್ಯಗಳಿಗೆ ಕಡಿವಾಣ

ಅಗತ್ಯಗಳನ್ನು ಅಮಿತವಾಗಿ ಸೃಷ್ಟಿಸುವ ಆಧುನಿಕ ಅರ್ಥ ವ್ಯವಸ್ಥೆಯ ಆದರ್ಶವನ್ನು ಮೂವರೂ ನೈತಿಕತೆ, ಮಾನವೀಯತೆ ಮತ್ತು ವ್ಯಾವಹಾರಿಕ ದೃಷ್ಟಿಕೋನದಿಂದ ಖಂಡಿಸಿದ್ದಾರೆ. ಮಾನವನ ಬೇಕುಗಳನ್ನು ವೃದ್ಧಿಸುವ ಗುರಿಯುಳ್ಳ ಆಧುನಿಕ ಕೈಗಾರಿಕಾ ನಾಗರಿಕತೆಯನ್ನು ಗಾಂಧೀಜಿಯವರು ಪೈಶಾಚಿಕವೆಂದು ಖಂಡಿಸಿದ್ದಾರೆ. "ನಾಗರಿಕತೆಯ ನಿಜವಾದ ಅರ್ಥವಿರುವುದು ಬೇಕುಗಳನ್ನು ವೃದ್ಧಿಸುವುದರಲ್ಲಲ್ಲ, ಅಗತ್ಯಗಳ ಸ್ವಯಂಪ್ರೇರಿತ ಕಡಿತದಲ್ಲಿ"[೧೦] ಎಂದಿದ್ದಾರೆ ಗಾಂಧೀಜಿ. ಅಗತ್ಯಗಳು ಮತ್ತು ಆಸೆ ಆಕಾಂಕ್ಷೆಗಳ ಹುಚ್ಚು ಹಂಬಲ ಮಾನವರನ್ನು ಜೀವನದ ಅಂತಿಮ ಗುರಿಯಾದ ಮೋಕ್ಷಸಾಧನೆಯ ಮಾರ್ಗದಿಂದ ಅಡ್ಡಹಾದಿಗೆಳೆಯುತ್ತದೆ ಎಂಬುದು ಪಂಡಿತ್‌ಜಿ ನಂಬಿಕೆ. ಆಗ ಸಂಪಾದನೆಯೇ ಮುಖ್ಯಮಾರ್ಗವಾಗಿ ಶ್ರೇಯ ಪ್ರೇಯದಲ್ಲಿ ಕಳೆದುಹೋಗುತ್ತದೆ. ಸದಾ ವೃದ್ಧಿಸುವ ಅಗತ್ಯಗಳ ಪೂರೈಕೆಗಾಗಿ

ಪ್ರಕೃತಿಯ ಮಿತಸಂಪನ್ಮೂಲಗಳ ದುಂದುಗಾರಿಕೆಯಿಂದ ವಿಪತ್ತು ಖಚಿತ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕೆಂದು ಪಂಡಿತ್‌ಜಿ ಅಪೇಕ್ಷಿಸುತ್ತಾರೆ. ಅವರ ಮಾತನ್ನೇ ಉಲ್ಲೇಖಿಸುವುದಾದರೆ :

> **“ಈಗಿನ ಅರ್ಥ ವ್ಯವಸ್ಥೆ ಮತ್ತು ಉತ್ಪಾದನಾ ವ್ಯವಸ್ಥೆಗಳು ತೀವ್ರಗತಿಯಲ್ಲಿ ಪ್ರಕೃತಿಯ ಸಮತೋಲಕ್ಕೆ ಭಂಗವುಂಟುಮಾಡುತ್ತಿವೆ. ಇದರ ಫಲವಾಗಿ ಒಂದು ಕಡೆ ಸದಾಕಾಲ ಹೆಚ್ಚುತ್ತಿರುವ ಅಪೇಕ್ಷೆಗಳನ್ನು ತೃಪ್ತಿಪಡಿಸಲು ಹೊಸ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ಮತ್ತೊಂದು ಕಡೆ ಇಡೀ ಮಾನವ ಕುಲ ಹಾಗೂ ನಾಗರಿಕತೆಗಳ ಅಸ್ತಿತ್ವಕ್ಕೆ ಬೆದರಿಕೆಯೊಡ್ಡುತ್ತಿರುವ ಹೊಸ ಸಮಸ್ಯೆಗಳು ಹೆಚ್ಚುತ್ತಿವೆ”**[೧೧]

ಆದ್ದರಿಂದ, ದುಂದುಗಾರಿಕೆ ಬದಲು “ನಿಯಂತ್ರಿತ ಬಳಕೆ” ನಮ್ಮ ಅರ್ಥ ವ್ಯವಸ್ಥೆಯ ಗುರಿಯಾಗಬೇಕೆಂದು ಅವರು ಅಭಿಪ್ರಾಯಪಡುತ್ತಾರೆ. ಇದೇ ರೀತಿ ಲೋಹಿಯಾಜಿಯವರು ಬೇಕುಗಳನ್ನು, ಆಸೆ ಅಕಾಂಕ್ಷೆಗಳನ್ನು ಮಿತಗೊಳಿಸಬೇಕು, ಶಿಸ್ತು ಬದ್ಧಗೊಳಿಸಬೇಕು ಎನ್ನುತ್ತಾರೆ. ಅವರ ಮಾತಿನಲ್ಲೇ ಹೇಳುವುದಾದರೆ :

> **“ಸರ್ವದಾ ಉತ್ಪಾದನೆ ಹೆಚ್ಚಿಸುವ ಬದಲು ನಾವು ಯೋಗ್ಯ ಜೀವನಮಟ್ಟದತ್ತ ಲಕ್ಷ್ಯ ಕೊಡಬೇಕು. ತನ್ನ ರಾಷ್ಟ್ರದ ಎಲ್ಲೆಯೊಳಗೆ ತಾನು ಮಾತ್ರ ಬದುಕಿನ ಸುಖಸಂತೋಷಗಳನ್ನು ಹೆಚ್ಚು ಹೆಚ್ಚಾಗಿ ಪಡೆಯಬೇಕೆನ್ನುವ ಆಧುನಿಕ ಮಾನವನ ಆಕಾಂಕ್ಷೆಯ ಬದಲು ಇಡೀ ವಿಶ್ವದ ಹಿತ ಸಾಧಿಸುವುದು ಹೊಸ ಮಾನವನ ಇಚ್ಛೆಯಾಗಬೇಕು. ಇಲ್ಲೇ ಗಾಂಧೀಜಿಯವರ ಜೀವನ ಮತ್ತು ಕಾಯಕಗಳು ನಮಗೆಲ್ಲ ತುಂಬ ಲಾಭದಾಯಕವಾಗಲಿರುವುದು”**[೧೨]

ಲೋಹಿಯಾಜಿ ಕೊನೆಗೆ ಹೀಗೊಂದು ತೀರ್ಮಾನಕ್ಕೆ ಬರುತ್ತಾರೆ :

> **“ಇಡೀ ಮಾನವಕುಲಕ್ಕೆ ಯೋಗ್ಯವಾದ ಸಭ್ಯ ಜೀವನಮಟ್ಟಕ್ಕಾಗಿ ಪ್ರಯತ್ನಿಸಲು ಹೊಸ ವಿಶ್ವ ಸಿದ್ಧವಾಗಬೇಕು. ಸಮೃದ್ಧಿಗೆ ಬದಲು ಮರ್ಯಾದೆಯ ಯೋಗ್ಯ ಬದುಕು ಇಂದಿನ ಅಗತ್ಯವಾಗಿದೆ ಎಂದೂ ನನ್ನ ನಂಬಿಕೆ”**[೧೩]

ಬಹುಜನಕ್ಕೆ ಪ್ರಾಥಮಿಕ ಅಗತ್ಯಗಳನ್ನು ಪೂರೈಸುವುದು, ಬಹು ಜನರ ಅಗತ್ಯಗಳನ್ನು ತೃಪ್ತಿಪಡಿಸುವುದು ಸಾಧ್ಯವಾಗದೇ ಇರುವ ಸ್ಥಿತಿಯಲ್ಲಿ ಅಗತ್ಯಗಳ ವೃದ್ಧಿಯನ್ನು ತ್ರಿಮೂರ್ತಿಗಳು ಹೇಗೆ ತಾನೆ ಸಮರ್ಥಿಸಿಯಾರು. ಸಮಾನತೆ, ಮಾನವ ಕಲ್ಯಾಣಗಳಲ್ಲಿನ ಅಗಾಧ ನಂಬಿಕೆಯೇ ಅವರನ್ನು ಅಗತ್ಯಗಳನ್ನು ಮಿತಿಗೊಳಿಸಿಕೊಳ್ಳಬೇಕೆಂದು ಪ್ರತಿಪಾದಿಸಲು ದೂಡಿತು.

### ೪. ಆರ್ಥಿಕ ಮಿತವ್ಯಯ

ಅವರಿಗೆ ಸರ್ವರಹಿತದ ಬಗ್ಗೆ ಕಾಳಜಿ ಇದೆ. ಆದ್ದರಿಂದಲೇ ಮಾನವನ ಮೂಲಭೂತ ಅಗತ್ಯಗಳನ್ನು ಪೂರೈಸಬೇಕೆಂದು ಅವರು ಮನವಿಮಾಡುತ್ತಾರೆ. ಅನ್ನ ಆಹಾರ, ಬಟ್ಟೆ, ವಸತಿ, ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯ ಇವು ಮೂಲಭೂತ



ಅಗತ್ಯಗಳಾಗಿವೆ. ಈ ಮೂಲಭೂತ ಅಗತ್ಯಗಳನ್ನು ಪೂರೈಸುವುದು ಪ್ರತಿಯೊಂದು ಸರ್ಕಾರದ ಪವಿತ್ರ ಕರ್ತವ್ಯ. ಆಗ ಮಾತ್ರ “ಧರ್ಮದ ಆಳ್ವಿಕೆ ಸಾಧ್ಯವಾಗುತ್ತದೆ ಇಲ್ಲವಾದಲ್ಲಿ ಅದು ಅಧರ್ಮದ ಆಳ್ವಿಕೆಯೇ ಸರಿ”.

### ೫. ಆರ್ಥಿಕ ಸಮಾನತೆ

ಆರ್ಥಿಕ ಸಮಾನತೆಯ ಯುಕ್ತಾಯುಕ್ತತೆಯಲ್ಲಿ ಮೂವರೂ ದೃಢನಂಬಿಕೆಯನ್ನು ಘೋಷಿಸಿದ್ದಾರೆ. ಕಸುಬುಗಳು ಏನೇ ಇದ್ದರೂ ಎಲ್ಲರಿಗೂ ಸಮಾನ ವೇತನ ನಿಗದಿಮಾಡಬೇಕೆಂದು ಗಾಂಧೀಜಿ ಹೇಳುತ್ತಾರೆ. ಅದೊಂದು ಸಾಧಿಸಲಾಗದ ಗುರಿ ಎನ್ನುವುದನ್ನೂ ಅವರು ಒಪ್ಪಿಕೊಳ್ಳುತ್ತಾರೆ. ಆದಾಗ್ಯೂ ಅವರು ದೃಢವಾಗಿ ಹೇಳುತ್ತಾರೆ :

> **“ಆ ಗುರಿ ಸಾಧನೆಗಾಗಿ ಪ್ರತಿಯೊಬ್ಬ ಭಾರತೀಯನೂ ಹೃತ್ಪೂರ್ವಕವಾಗಿ ಕಾರ್ಯೋನ್ಮುಖನಾಗಬೇಕು. ಭಾರತ ಸುಖಸಂತೋಷಗಳ ನಾಡಾಗಬೇಕಾದರೆ ಇರುವುದು ಅದೊಂದೇ ಗುರಿ, ಬೇರೆ ಮಾರ್ಗವಿಲ್ಲ”**[೧೪]

ಕೆಳಗಿನ ಮಾತುಗಳು ಆರ್ಥಿಕ ಸಮಾನತೆ ಕುರಿತಂತೆ ಗಾಂಧೀಜಿಯವರ ನಿಲುವನ್ನು ಸ್ಪಷ್ಟಪಡಿಸುತ್ತವೆ.

> **“ಪ್ರತಿಯೊಬ್ಬ ವ್ಯಕ್ತಿಗೂ ಅಕ್ಷರಶಃ ಒಂದೇ ಮೊತ್ತದ ಹಣ ಸಂದಾಯವಾಗ ಬೇಕೆನ್ನುವುದು ನನ್ನ ಆರ್ಥಿಕ ಸಮಾನತೆಯ ಪರಿಕಲ್ಪನೆಯಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಅವನಾಗಲಿ, ಅವಳಾಗಲಿ–ಅವರ ಅಗತ್ಯಗಳನ್ನು ಪೂರೈಸುವಷ್ಟು ಹಣ ಸಂಪಾದನೆಗೆ ಅವಕಾಶಗಳಿರಬೇಕು. ಆರ್ಥಿಕ ಸಮಾನತೆಯ ನಿಜವಾದ ಅರ್ಥವೆಂದರೆ ಪ್ರತಿಯೊಬ್ಬರಿಗೂ ಅವರ ಅಗತ್ಯಗಳನ್ನು ಪೂರೈಸುವಷ್ಟು’ ಎಂದು ಅದೇ ಮಾರ್ಕ್ಸ್‌ವಾದದ ಅರ್ಥ”**[೧೫]

ದೀರ್ಘಕಾಲ ತಾಳಿಕೆಯಾಗುವಂಥ ಸಾಮಾಜಿಕ ಬದಲಾವಣೆಗಳನ್ನು ತರಲು ಶಿಕ್ಷಣ, ಜನರ ಮನ ಒಲಿಕೆ, ಪ್ರೀತಿ, ಅಹಿಂಸೆ “ಸಂಪತ್ತಿನ ಒಡೆತನ ಮತ್ತು ಬಳಕೆಯನ್ನು ನಿಯಂತ್ರಿಸುವ ಶಾಫ್”[೧೬] ಇತ್ಯಾದಿಗಳು ಅತ್ಯಗತ್ಯವೆಂದು ಗಾಂಧೀಜಿ ನಂಬಿದ್ದರು. ಅಸಮತೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆ ಮಾಡಬೇಕು. ಆಖೈರಾಗಿ ಅಸಮಾನತೆಯನ್ನು ನಿರ್ನಾಮಗೊಳಿಸಬೇಕೆಂದು ಗಾಂಧೀಜಿ ದೃಢವಾಗಿ ನಂಬಿದ್ದರು ಎನ್ನುವುದು ಅವರ ಚಿಂತನೆಯ ದಿಕ್ಕುಧೋರಣೆಗಳಿಂದ ಸ್ಪಷ್ಟವಾಗುತ್ತದೆ.

ಈ ವಿಷಯದಲ್ಲಿ ಲೋಹಿಯಾಜಿ ಅವರಿಗೆ ಗಾಂಧೀಜಿಯವರೊಂದಿಗೆ ಪೂರ್ಣಸಹಮತವಿದೆ. ಸಂಪೂರ್ಣ ಐಹಿಕ ಸಮಾನತೆ ಒಂದು ಆದರ್ಶ. ಈ ಆದರ್ಶವನ್ನೆಂದಿಗೂ ಕಾರ್ಯರೂಪಕ್ಕಿಳಿಸಲಾಗದು ಎಂಬುದ ಲೋಹಿಯಾ ಅವರ ನಂಬಿಕೆ.

ಐಹಿಕ ಅಂತರಗಳನ್ನು ಆದಷ್ಟೂ ಕಡಿಮೆಗೊಳಿಸಿ ಸಾಮೀಪ್ಯವುಂಟು

ಮಾಡುವುದು ಅಗತ್ಯ ಎನ್ನುವ ಲೋಹಿಯಾ ಅವರ ಸಿದ್ಧಾಂತ ಸಾಧ್ಯವಾದಷ್ಟೂ ಗರಿಷ್ಠ ಪ್ರಮಾಣದಲ್ಲಿ ಐಹಿಕ ಸಮಾನತೆಯನ್ನು ಸಾಧಿಸಬೇಕೆನ್ನುವುದೇ ಆಗಿದೆ. ಅವರೇ ಕಟುವಾದ ಮಾತುಗಳಲ್ಲಿ ಹೃದಯವೇಧಕವಾಗಿ ಇದನ್ನು ಹೀಗೆ ಸಮರ್ಥಿಸಿಕೊಂಡಿದ್ದಾರೆ.

> **“ಪ್ರಪಂಚದಲ್ಲಿ ಸಮಾನತೆ ಮತ್ತು ಏಕತೆಯ ಭೋಗಭಾಗ್ಯಗಳನ್ನು ಸವಿದವರು ಸಂಪೂರ್ಣ ಐಹಿಕ ಸಮಾನತೆಯನ್ನು ಸಾಧಿಸುವವರೆಗೆ ಸಂತೃಪ್ತರಾಗಿ ಕೈಕಟ್ಟಿಕುಳಿತಿರಲಾರರು. ಆದರೆ ಈ ಸಂಪೂರ್ಣ ಸಮಾನತೆ ಸುಲಭಸಾಧ್ಯವಲ್ಲ. ಸಂಪೂರ್ಣ ಸಮಾನತೆಯನ್ನು ಎಂದಿಗೂ ಸಾಧಿಸಲಾಗದೇನೋ, ಸಂಪೂರ್ಣ ಸಂಪೂರ್ಣ ಸಮಾನತೆ ಸಾಧಿಸಲು ಯುಗಗಳೇ ಬೇಕಾಗಬಹುದು. ಆದರೆ ಸಮಾನತೆಯ ಗುರಿ ಮನಸ್ಸಿನಲ್ಲಿ ಸದಾಕಾಲ ಜೀವಂತವಿರಬೇಕು. ಇಂಥ ಮನಸ್ಸುಗಳು ರಾಷ್ಟ್ರದೊಳಗೆ ಮತ್ತು ಹೊರ ರಾಷ್ಟ್ರಗಳಲ್ಲಿ ಅಸಮಾನತೆಯನ್ನು ಸಾಧ್ಯವಾದಷ್ಟೂ ಕಡಿಮೆಮಾಡಿ ಸಮಾನತೆಯ ಸಾಧಿಸುವ ಕಾರ್ಯದಲ್ಲಿ ಭಾವೋದ್ದೀಪ್ತವಾಗಿ ತೊಡಗಿರುತ್ತವೆ”**[೧೮]

ಅಸಮಾನತೆ ನಿವಾರಿಸಲು ಕನಿಷ್ಠ ವರಮಾನ, ಗರಿಷ್ಠ ವರಮಾನಗಳನ್ನು ನಿಗದಿಪಡಿಸುವುದು, ವೆಚ್ಚದ ಮೇಲೆ ಮಿತಿ ಹೇರುವುದು. ನಗರ ಮತ್ತು ಗ್ರಾಮೀಣ ಪ್ರದೇಶಗಳ ಆಸ್ತಿಯ ಮೇಲೆ ಮಿತಿ ಹೇರುವುದು ಇತ್ಯಾದಿ ನಿರ್ದಿಷ್ಟವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಲೋಹಿಯಾ ದೃಢ ನಂಬಿಕೆ. ಪಂಡಿತ್‌ಜಿಯವರೂ ಇದನ್ನೇ ಹೇಳುತ್ತಾರೆ.

ಆರ್ಥಿಕ ಸಮಾನತೆ ಕುರಿತಂತೆ ಪಂಡಿತ್ ಜಿ ಅವರು ಬಹುತೇಕ ತದ್ವತ್ತಾಗಿ ಮೇಲಿನ ಅಭಿಪ್ರಾಯಗಳನ್ನೇ ಹೊಂದಿದ್ದಾರೆ. “ಅಸಮಾನತೆ ನಿರ್ಮೂಲನ ವಿಶ್ವಮಾನ್ಯವಾದ ಗುರಿ”[೧೯] ಎಂಬುದನ್ನು ಅವರೂ ಒಪ್ಪುತ್ತಾರೆ. ಆರ್ಥಿಕ ಸಮಾನತೆ ಸಾಧಿಸಲು ಗರಿಷ್ಠ ಪ್ರಯತ್ನಗಳಾಗಬೇಕೆಂದು ಪಂಡಿತ್‌ಜಿ ಅಭಿಪ್ರಾಯಪಡುತ್ತಾರೆ. ಜೊತೆಗೆ, ಆರ್ಥಿಕ ಸಮಾನತೆಯ ಹಿನ್ನೆಲೆಯಲ್ಲಿ “ಆರ್ಥಿಕ ಪ್ರಜಾಪ್ರಭುತ್ವ” ಪರಿಕಲ್ಪನೆ ಅಧ್ಯಯನಯೋಗ್ಯವಾದದ್ದು. ಇದೊಂದು ಮಹತ್ವ ಪೂರ್ಣವಾದ ಪರಿಕಲ್ಪನೆ. ‘ಪ್ರತಿಯೊಂದು ಕೈಗೂ ಉದ್ಯೋಗ’ ಆರ್ಥಿಕ ಪ್ರಜಾಪ್ರಭುತ್ವ ಪರಿಕಲ್ಪನೆಯ ತಿರುಳು. ‘ಒಬ್ಬನಿಗೆ ಒಂದು ಓಟು’ ಎನ್ನುವ ರಾಜಕೀಯ ಪ್ರಜಾಪ್ರಭುತ್ವದಂತಿದೆ ಇದು. ಈ ‘ಉದ್ಯೋಗದ ಹಕ್ಕು’ ಗುಲಾಮಗಿರಿಯನ್ನು, ಜೀತ ಪದ್ಧತಿಯನ್ನು, ಬಲಾತ್ಕಾರದ ದುಡಿಮೆಯನ್ನು ವಿರೋಧಿಸುತ್ತದೆ. ಉದ್ಯೋಗದ ಹಕ್ಕು ಎಂದರೆ ಇವಲ್ಲ.

ಉದ್ಯೋಗದ ಹಕ್ಕಿನ ಮೂರು ಘಟಕಾಂಶಗಳು ಈ ಕೆಳಗಿನಂತಿವೆ:

೧. **ಉದ್ಯೋಗ ಯೋಗ್ಯವಾದ, ಮರ್ಯಾದೆಯಿಂದ ಕೂಡಿದ ಬಾಳ್ವೆಗೆ ಮಾರ್ಗವಾಗಬೇಕು.**



೨. **ವ್ಯಕ್ತಿಗೆ ತನಗೆ ಇಷ್ಟವಾದ ಉದ್ಯೋಗವನ್ನು ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯವಿರಬೇಕು.**

೩. **ಮಾಡಿದ ಕೆಲಸಕ್ಕೆ ರಾಷ್ಟ್ರೀಯ ವರಮಾನದಲ್ಲಿ ನ್ಯಾಯಯುತವಾದ ಪಾಲನ್ನು ವ್ಯಕ್ತಿ ಪಡೆಯುವಂತಾಗಬೇಕು ಇಲ್ಲವಾದಲ್ಲಿ ಮಾಡಿದ ಕೆಲಸವನ್ನು ಭಿಕ್ಷೆ ಎಂದು ಪರಿಗಣಿಸಬೇಕಾಗುತ್ತದೆ.**

ಇದೆಲ್ಲಕ್ಕೂ ಮಿಗಿಲಾಗಿ ಆರ್ಥಿಕ ಪ್ರಜಾಪ್ರಭುತ್ವ ಪರಿಕಲ್ಪನೆ ಬಗ್ಗೆ ನಡೆದ ಚರ್ಚೆ ಅವರನ್ನು ಈ ಕೆಳಗಿನ ತೀರ್ಮಾನಕ್ಕೆ ದೂಡಿದೆ :

> **“ಆರ್ಥಿಕ ಪ್ರಜಾಪ್ರಭುತ್ವದಲ್ಲಿ ಅತ್ಯಗತ್ಯವಾಗಿ ಕನಿಷ್ಠ ವೇತನ ನಿಗದಿಗೆ ಅವಕಾಶವಿರಬೇಕು, ನ್ಯಾಯೋಚಿತ ವಿತರಣೆ ಹಾಗೂ ಸಾಮಾಜಿಕ ಭದ್ರತೆಗೆ ಅವಕಾಶವಿರಬೇಕು”**[೨೦]

ಆರ್ಥಿಕ ಪ್ರಜಾಪ್ರಭುತ್ವ ಕುರಿತ ಪಂಡಿತ್‌ಜಿ ಪರಿಕಲ್ಪನೆ, ಇಪ್ಪತ್ತನೆ ಶತಮಾನದ ಮಹಾನ್ ರಾಜಕೀಯ ಚಿಂತಕರೆಂದು ಪ್ರಸಿದ್ಧರಾದ ಫೇಬಿಯನ್ ಪಂಥದ ಸಮಾಜವಾದಿ ಪ್ರೊ. ಹೆರಾಲ್ಡ್ ಲಾಸ್ಕಿಯವರ ವಿಚಾರಗಳಿಗಿಂತ ಹೆಚ್ಚು ಸಮಗ್ರವೂ ಹೆಚ್ಚು ತೀವ್ರಗಾಮಿಯೂ ಆಗಿದೆ ಎನ್ನುವುದು ಮೇಲಿನ ವಿವರಣೆಗಳಿಂದ ಸ್ಪಷ್ಟವಾಗುತ್ತದೆ. ಏಕೆಂದರೆ ಲಾಸ್ಕಿಯಯುವರ ಆರ್ಥಿಕ ಪ್ರಜಾಪ್ರಭುತ್ವದ ಪರಿಕಲ್ಪನೆ ಕೆಳಗಿನ ಎರಡು ಅಂಶಗಳಿಗೆ ಸೀಮಿತವಾದದ್ದು:

೧. **ಆರ್ಥಿಕ ಕನಿಷ್ಠತೆ**

೨. **ಕೈಗಾರಿಕೋದ್ಯಮಗಳಲ್ಲಿ ಪ್ರಜಾಪ್ರಭುತ್ವ**

ಹೀಗೆ, ಪಂಡಿತ್‌ಜಿ ಅವರ ‘ಆರ್ಥಿಕ ಪ್ರಜಾಪ್ರಭುತ್ವ’ ಲಾಸ್ಕಿಯವರ ಚಿಂತನೆಗಳನ್ನೊಳಗೊಂಡಿರುವುದು ಮಾತ್ರವಲ್ಲದೆ ಅದಕ್ಕಿಂತ ಹೆಚ್ಚು ವ್ಯಾಪಕವಾದುದಾಗಿದೆ.

ಪಂಡಿತ್‌ಜಿಯವರ ಆರ್ಥಿಕ ಪ್ರಜಾತ್ರಭುತ್ವ (ಅಥವಾ ಸಂಪೂರ್ಣ ಉದ್ಯೋಗದಹಕ್ಕು) ಪರಿಕಲ್ಪನೆ ಕಾರ್ಯಕಾರಣ ಸಂಬಂಧಿತ ಸರಣಿಯನ್ನೊಳಗೊಂಡಿದೆ:

೧. **ಸಂಪೂರ್ಣ ಸಾಮರ್ಥ್ಯ ಬಳಸಿಕೊಳ್ಳುವ ಉದ್ಯೋಗಾವಕಾಶಗಳು**

೨. **ಖರೀದಿ ಶಕ್ತಿಯ ಏರಿಕೆ**

೩. **ಬೇಡಿಕೆ ಹೆಚ್ಚಿಸುವುದು (ಕೈಗಾರಿಕೀಕರಣ ಮತ್ತು ಉತ್ಪಾದನೆಗಳನ್ನು ಹೆಚ್ಚಿಸಲು ಪ್ರೋತ್ಸಾಹ ನೀಡುವುದು)**

೪. **ಹೆಚ್ಚು ಹೆಚ್ಚು ಆರ್ಥಿಕ ಅಭಿವೃದ್ಧಿ, ಅಭ್ಯುದಯ**

ಸಂಪೂರ್ಣ ಸಾಮರ್ಥ್ಯದ ಉದ್ಯೋಗದಿಂದ ಹಿಡಿದು ಆರ್ಥಿಕ ಅಭ್ಯುದಯದವರೆಗಿನ ಇಡೀ ಪ್ರಕ್ರಿಯೆ ಮತ್ತೆ ಶುರುವಾಗಿ ಅನಂತಾನಂತವಾಗಿ ಮುಂದುವರಿಯುತ್ತಲೇ ಹೋಗುತ್ತದೆ. ಇನ್ನೂ ಹೆಚ್ಚಿನ ಆರ್ಥಿಕ ಅಭ್ಯುದಯದ

ಸಾಧನೆಯ ಗುರಿಯತ್ತ ಸಾಗುತ್ತಲೇ ಇರುತ್ತದೆ. ನ್ಯಾಯೋಚಿತ ವಿತರಣೆಯಿಂದ ಕೂಡಿದ ಆರ್ಥಿಕ ಅಭಿವೃದ್ಧಿ ಸಾಧನೆಯ ಈ ಯೋಜನೆ ಈ ವ್ಯವಸ್ಥೆ ಆರ್ಥಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯಗಳ ಗುರಿಗಳ ಸಾಧನೆಗೆಡೆ ಮಾಡಿಕೊಡುತ್ತದೆ: ಈ ಗುರಿಗಳ ಸಾಧನೆಗೆ ಮಾರ್ಗದರ್ಶಿಯಾಗುತ್ತದೆ. ಪಂಡಿತ್‌ಜಿಯವರ ಮಾತುಗಳಲ್ಲೇ ಹೀಗೆ ಸಂಗ್ರಹಿಸಿ ಹೇಳಬಹುದು:

> **"ರಾಷ್ಟ್ರದ ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸಲು, ಮೂಲವಸ್ತುಗಳು ಮತ್ತು ಗ್ರಾಹಕ ವಸ್ತುಗಳ ಉತ್ಪಾದನೆ ಹೆಚ್ಚಿಸುವುದು ಬಳಕೆಯನ್ನು ಹೆಚ್ಚಿಸುವುದು, ಸಂಪೂರ್ಣ ಸಾಮರ್ಥ್ಯದ ಉದ್ಯೋಗ, ಕನಿಷ್ಠ ಜೀವನ ಮಟ್ಟದ ಖಾತ್ರಿನೀಡುವುದು, ಅಸಮಾನತೆ ನಿವಾರಿಸುವುದು ಹಾಗೂ ವಿಕೇಂದ್ರೀಕರಣ – ಇವಿಷ್ಟೂ ನಮ್ಮ ಆರ್ಥಿಕ ನೀತಿಯ ಆದ್ಯಗುರಿಗಳಾಗಬೇಕು"**[೨೨]

### ೫. ಸಮಾನತೆಯೊಂದಿಗೆ ಸ್ವಾತಂತ್ರ್ಯ

ಯಾವುದೇ ಸಮಾಜ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯದೊಂದಿಗೆ ಸಮಾನತೆ ಇರಬೇಕು ಹಾಗೂ ಸಮಾನತೆಯೊಂದಿಗೆ ಸ್ವಾತಂತ್ರ್ಯ ಇರಬೇಕು ಎನ್ನುವುದು ಈ ಮೂವರ ಒಮ್ಮತದ ಅಭಿಪ್ರಾಯವಾಗಿದೆ. ಇವು ಒಟ್ಟಿಗೇ ಇರಬೇಕು. ಬಂಡವಾಳಶಾಹಿ ಹಾಗೂ ಕಮ್ಯುನಿಸಂ ಸ್ವಾತಂತ್ರ್ಯ ಮತ್ತು ಸಮಾನತೆಗಳೆರಡನ್ನೂ ಪೋಷಿಸುವುದರಲ್ಲಿ ವಿಫಲಗೊಂಡಿವೆ ಹಾಗೂ ಸ್ವಾತಂತ್ರ್ಯಕ್ಕಾಗಿ ಸಮಾನತೆಯನ್ನೂ, ಸಮಾನತೆಗಾಗಿ ಸ್ವಾತಂತ್ರ್ಯವನ್ನೂ ಬಲಿಕೊಟ್ಟಿವೆ. ಇದೇ ಬಂಡವಾಳಶಾಹಿ ಮತ್ತು ಕಮ್ಯುನಿಸಂನಲ್ಲಿನ ಲೋಪ ಎನ್ನುವುದು ಗಾಂಧೀಜಿ, ಲೋಹಿಯಾಜಿ ಮತ್ತು ಪಂಡಿತ್‌ಜಿ ಯವರಿಗೆ ಸಂಪೂರ್ಣವಾಗಿ ಮನವರಿಕೆಯಾಗಿತ್ತು. ರಾಜಕೀಯ ಮತ್ತು ನಾಗರಿಕ ಸ್ವಾತಂತ್ರ್ಯ ಇವೆರಡೂ ಮಾನವ ಕುಲದ ಅಮೂಲ್ಯ ಸಂಪತ್ತುಗಳು ಹಾಗೂ ನಮ್ಮ ನಾಗರಿಕ ಜೀವನದ ಮೂಲಾಧಾರಗಳಾಗಿವೆ. ಇವಿಲ್ಲದೆ ಉಳಿದ ಸ್ವಾತಂತ್ರ್ಯಗಳ ಸಾಧನೆಯನ್ನು ನಾವು ಕಲ್ಪಿಸಿಕೊಳ್ಳಲೂ ಆಗದು. ಆದ್ದರಿಂದ ಇವೆಲ್ಲ ಜೀವಸತ್ತ್ವವಿದ್ದ ಹಾಗೆ. ಇವು ತಮ್ಮ ಮೂಲ ಸ್ವರೂಪದಲ್ಲೆ ಉಳಿಯಬೇಕು. ಇವುಗಳನ್ನು ಉಳಿಸಿಕೊಳ್ಳಬೇಕು. ಆದರೆ, ನಿಯಂತ್ರಣವಿಲ್ಲದ ಸ್ವಾತಂತ್ರ್ಯ, ಸ್ವಶಿಸ್ತು ಇಲ್ಲದ ಸ್ವಾತಂತ್ರ್ಯ ಹಾಗೂ ನೈತಿಕ ಹೊಣೆಗಾರಿಕೆಯನ್ನರಿಯದ ಸ್ವಾತಂತ್ರ್ಯ ಸ್ವೇಚ್ಛಾವರ್ತನೆಯ ಅವನತಿ ಮಾರ್ಗಕ್ಕೆ ದೂಡುತ್ತದೆ ಎನ್ನುವುದೂ ಈ ತ್ರಿಮೂರ್ತಿಗಳ ದೃಢ ನಂಬಿಕೆಯಾಗಿತ್ತು. ಅಂದರೆ, ಸಮಾಜದಲ್ಲಿ ಅನಿಯಂತ್ರಿತ ಸ್ವಾತಂತ್ರ್ಯ ಅಪರಿಗ್ರಾಹ್ಯವಾದದ್ದು. "ಸಾಂಸ್ಥಿಕ ಸ್ವಾತಂತ್ರ್ಯದ ಮೊದಲನೆಯ ಅವಶ್ಯಕತೆ ಎಂದರೆ ಸ್ವಯಂ–ಪ್ರೇರಿತ ಶಿಸ್ತು" ಎನ್ನುತ್ತಾರೆ ಗಾಂಧೀಜಿ. ಇದೆಲ್ಲದರ ಜೊತೆಗೆ ಆರ್ಥಿಕ ಅವಶ್ಯಕತೆಗಳು ಹಾಗೂ ಸ್ವಾತಂತ್ರ್ಯ ಬರಡು ನಿರರ್ಥಕ ಎನ್ನುವ ನಂಬಿಕೆಯನ್ನು ದೃಢಪಡಿಸುತ್ತದೆ. ಎಲ್ಲಿಯವರೆಗೆ ಅಸಂಖ್ಯಾತ



ಜನಸಾಮಾನ್ಯರು ಬಡತನದ ರೂಪದಲ್ಲಿ ಸಿಕ್ಕಿಬಿದ್ದಿರುತ್ತಾರೋ ಅಲ್ಲಿಯವರೆಗೆ ಸ್ವಾತಂತ್ರ್ಯ ಎನ್ನುವುದು ಒಂದು ತಾಂತ್ರಿಕ ಅಮೂರ್ತಕಲ್ಪನೆಯಾಗಿಯೇ ಉಳಿದಿರುತ್ತದೆ. ಇದರ ಫಲವಾಗಿ ಸ್ವಾತಂತ್ರ್ಯ ನೀಡುವ ಅನುಕೂಲತೆಗಳು ಮತ್ತು ಅವಕಾಶಗಳ ಪೂರ್ಣ ಪ್ರಯೋಜನ ಪಡೆಯುವುದರಲ್ಲಿ ಈ ಮಂದಿ ಅಸಮರ್ಥರಾಗುತ್ತಾರೆ ಎನ್ನುವುದೇ ಅವರುಗಳ ಅನ್ನಿಸಿಕೆಯಾಗಿತ್ತು. ಜೊತೆಗೆ ಏಕತೆಯ ಬದಲು ಏಕಪ್ರಕಾರತೆಯನ್ನು ತರುವ ಸಲುವಾಗಿ ಬದುಕಿನ ವೈವಿಧ್ಯ ಶ್ರೀಮಂತಿಕೆಗಳನ್ನು ತುಳಿದು ಹಾಕುವ ನಿರ್ದಯ ಸಮಾನೀಕರಣ ಅನಿವಾರ್ಯವಾಗಿ ಕಠಿಣ ನಿಯಂತ್ರಣಕ್ಕೆ, ಸರ್ವಾಧಿಕಾರಕ್ಕೆ ದಾರಿಮಾಡಿಕೊಡುತ್ತದೆ ಎನ್ನುವುದು ಅವರಿಗೆ ಮನವರಿಕೆಯಾಗಿತ್ತು. ಒಂದಕ್ಕೆ ಅತಿಯಾದ ಮಹತ್ವ ನೀಡಿದರೆ ಅದು ಮತ್ತೊಂದಕ್ಕೆ ಕುತ್ತಾಗಿ ಪರಿಣಮಿಸುತ್ತದೆ. ಕಾನೂನು ಮತ್ತು ಸ್ವಾತಂತ್ರ್ಯ, ಸ್ವಾತಂತ್ರ್ಯ ಮತ್ತು ಸಮಾನತೆ ಇವುಗಳ ನಡುವೆ ಸಮತೋಲನ ಸಾಧಿಸುವುದು ಸಮಸ್ಯಾತ್ಮಕವೇ. ಇದೇನು ಹೊಸದಲ್ಲ. ಮನುಕುಲದ ನಿರಂತರ ಸಮಸ್ಯೆ, ಜನತೆಯ ಆಶೋತ್ತರಗಳು ಹಾಗೂ ಬದಲಾದ ಅಗತ್ಯಗಳಿಗನುಸಾರವಾಗಿ ಚೂರುಪಾರು ಅತ್ತಿತ್ತ ವಾಲುವುದು ಅನಿವಾರ್ಯವಾಗಬಹುದು. ಅಂಥ ಸಂದರ್ಭಗಳಲ್ಲಿ ಎರಡನ್ನೂ ಸಂಭಾಳಿಸುವ ತಂತಿಮೇಲಿನ ನಡಿಗೆ ಅಗತ್ಯವಾಗುತ್ತದೆ. ಇದು ರಾಷ್ಟ್ರದ ಮೇಧಾಶಕ್ತಿ, ವಿವೇಕ ಮತ್ತು ಆಳುವವರ ನಾಯಕರುಗಳ ವಿವೇಕಗಳು ಸಂಭಾಳಿಸಬೇಕಾದ ಸಂಗತಿ. ಸಾರ್ವಜನಿಕ ಜೀವನ ರಂಗದ ನಾಯಕರುಗಳಾಗಿದ್ದ, ಚಿಂತಕರಾಗಿದ್ದ ಈ ತ್ರಿಮೂರ್ತಿಗಳಲ್ಲಿ ಇಂಥ ಅಮೂಲ್ಯ ಮೇಧಾಶಕ್ತಿ, ವಿವೇಕ ಅಪಾರವಾಗಿತ್ತು.

### ೬. ಆಸ್ತಿ ಮತ್ತು ಧರ್ಮದರ್ಶಿತ್ವ ಸಿದ್ಧಾಂತ

ಯಾವುದೇ ಬಗೆಯ ಆಸ್ತಿಯ ಒಡೆತನ ಅನೈತಿಕವಾದದ್ದು ಎಂದು ಗಾಂಧೀಜಿ ನಂಬಿದ್ದರು. ಎಂದೇ ಅವರು ಖಾಸಗಿ ಆಸ್ತಿ ಒಡೆತನದ ಪರಿಕಲ್ಪನೆಯನ್ನೇ ತಿರಸ್ಕರಿಸುತ್ತಾರೆ. ಎಲ್ಲ ಆಸ್ತಿ ದೇವರಿಗೆ ಸೇರಿದ್ದು, ಭಗವಂತನೇ ಒಡೆಯ ಎನ್ನುವ ನಂಬಿಕೆಯೇ ಆಸ್ತಿಹಕ್ಕಿನ ನಿರಾಕರಣೆಯ ಮೂಲ. ವ್ಯಕ್ತಿ ಏನಿದ್ದರೂ ಒಬ್ಬ ಧರ್ಮದರ್ಶಿಯಾಗಿ ಆಸ್ತಿಯನ್ನು ಹೊಂದಿರಬಹುದು ಎನ್ನುವುದು ಅವರ ನಂಬಿಕೆಯಾಗಿತ್ತು. ಆದ್ದರಿಂದ ಅವರು ಆಸ್ತಿಯನ್ನು ಒಂದು ಸಾಮಾಜಿಕ ಪರಿಕಲ್ಪನೆ ಎಂದು ಪರಿಗಣಿಸಿದ್ದಾರೆ ಹಾಗೂ ಈ ಆಸ್ತಿ ಪರಿಕಲ್ಪನೆ ಸಮಾಜದ ಇಚ್ಛೆಗನುಗುಣವಾಗಿ ಬದಲಾವಣೆ ಹೊಂದಬಹುದೆಂದೂ ಅವರು ಭಾವಿಸುತ್ತಾರೆ. ಜೀವನದ ಮೂಲಭೂತ ಅವಶ್ಯಕತೆಗಳ ಪೂರೈಕೆಗೆ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಖಾಸಗಿ ಸ್ವತ್ತಾಗಿ ಇಟ್ಟುಕೊಳ್ಳಬಹುದು ಎನ್ನುತ್ತಾರೆ ಗಾಂಧೀಜಿ. ಮಾನವನ ಜೀವನಾವಶ್ಯಕತೆಗಿಂತ ಹೆಚ್ಚಿನ ಆಸ್ತಿ ಸಂಪಾದನೆ ಎಂದರೆ ಅದು ಶೋಷಣೆಯಾಗುತ್ತದೆ ಎನ್ನುವುದು

ಅವರ ಅಭಿಮತ. ಆದ್ದರಿಂದ, ಆಸ್ತಿ ಎನ್ನುವುದು ಸಮಾಜದ ಪರವಾಗಿ ಇಟ್ಟುಕೊಂಡಿರುವ ಒಂದು ನ್ಯಾಸ ಹಾಗೂ ನ್ಯಾಸದ ಧರ್ಮದರ್ಶಿಯಾದವನು ಆಸ್ತಿಯನ್ನು ಇಡೀ ಸಮಾಜಕ್ಕೆ ಬಳಸಬೇಕು ಎಂದು ಗಾಂಧೀಜಿ ಗಾಢವಾಗಿ ನಂಬಿದ್ದರು. ಧರ್ಮದರ್ಶಿತ್ವದ ಮೂಲಕ ಮಾತ್ರ ತಮ್ಮ ಪರಿಕಲ್ಪನೆಯ ಸಮಾಜವಾದ (ಹಿಂದೂ ಸಮಾಜವಾದ)ವನ್ನು ಅನುಷ್ಠಾನಗೊಳಿಸುವುದು ಸಾಧ್ಯ ಎನ್ನುತ್ತಿದ್ದರು. ಗಾಂಧೀಜಿ. ಪ್ರೊ. ದಂತ್ವಾಲ ಅವರು ರೂಪಿಸಿದ ವ್ಯಾವಹಾರಿಕ ಧರ್ಮದರ್ಶಿತ್ವ ಸೂತ್ರವನ್ನು ಕೆಲವೊಂದು ತಿದ್ದುಪಡಿಗಳೊಂದಿಗೆ ಗಾಂಧೀಜಿ ಒಪ್ಪಿಕೊಂಡಿದ್ದರು. ಈ ಸೂತ್ರ ಗಾಂಧೀಜಿಯವರ ಕನಸಿನ ಅರ್ಥವ್ಯವಸ್ಥೆಯ ಸಾಕಾರವಾಗಿತ್ತು.

ಅವರ ಸೂತ್ರ ಹೀಗಿದೆ :

೧. **ಈಗಿನ ಬಂಡವಾಳಶಾಹಿ ಸಮಾಜ ವ್ಯವಸ್ಥೆಯನ್ನು ಸಮಾನತಾವಾದಿ ವ್ಯವಸ್ಥೆಯಾಗಿ ರೂಪಾಂತರಿಸಲು ಧರ್ಮದರ್ಶಿತ್ವ ಮಾರ್ಗವೊಂದನ್ನು ತೋರಿಸುತ್ತದೆ. ಅಂಥ ಅವಕಾಶ ಕಲ್ಪಿಸುತ್ತದೆ. ಧರ್ಮದರ್ಶಿತ್ವ ಬಂಡವಾಳಶಾಹಿಗೆ ಪಾಲುಕೊಡುವುದಿಲ್ಲ. ಅದರ ಭಾಗಸ್ತಿಕೆಗೆ ಅವಕಾಶ ನೀಡುವುದಿಲ್ಲ. ಆದರೆ ಮಾಲೀಕ ವರ್ಗಕ್ಕೆ ಸುಧಾರಣೆಗೆ ಅವಕಾಶ ನೀಡುತ್ತದೆ. ಮಾನವ ಪ್ರಕೃತಿ, ಸ್ವಭಾವ ಯಾವತ್ತಿಗೂ ವಿಮೋಚನಾತೀತವಾದುದಲ್ಲ ಎಂಬ ನಂಬಿಕೆ ಈ ಧರ್ಮದರ್ಶಿತ್ವದ ಮೂಲಾಧಾರವಾಗಿದೆ.**

೨. **ಆಸ್ತಿಯ ಖಾಸಗಿ ಒಡೆತನದ ಹಕ್ಕನ್ನು ಅದು ಮಾನ್ಯ ಮಾಡುವುದಿಲ್ಲ. ಆದರೆ ಸಮಾಜ ತನ್ನ ಕಲ್ಯಾಣಕ್ಕೆ ಅಗತ್ಯವೆನಿಸಿದಾಗ ಇದಕ್ಕೆ ಅನುಮತಿ ನೀಡಬಹುದು.**

೩. **ಅದು ಸಂಪತ್ತಿನ ಬಳಕೆಯ ಶಾಸನಬದ್ಧ ಮಾಲೀಕತ್ವವನ್ನು ಬಹಿಷ್ಕರಿಸುವುದಿಲ್ಲ.**

೪. **ಹೀಗೆ, ಸರ್ಕಾರಿ ನಿಯಂತ್ರಿತ ಧರ್ಮದರ್ಶಿತ್ವ ವ್ಯವಸ್ಥೆಯಲ್ಲಿ ವ್ಯಕ್ತಿಯೊಬ್ಬನಿಗೆ ಸಾಮಾಜಿಕ ಹಿತಾಸಕ್ತಿಗಳನ್ನು ಕಡೆಗಣಿಸಿ ಆಸ್ತಿಹೊಂದಿರುವ ಸ್ವಾತಂತ್ರ್ಯ ಇರುವುದಿಲ್ಲ. ಸ್ವಾರ್ಥಕ್ಕಾಗಿ ತನ್ನ ಸಂಪತ್ತನ್ನು ಬಳಸುವ ಸ್ವಾತಂತ್ರ್ಯ ಇರುವುದಿಲ್ಲ.**

೫. **ಸಭ್ಯ ಜೀವನಾವಶ್ಯ ಕನಿಷ್ಠ ವೇತನ ನಿಗದಿ ಪಡಿಸಲು ಸೂಚಿಸಿರುವಂತೆಯೇ ಗರಿಷ್ಠ ಆದಾಯಕ್ಕೂ ಒಂದು ಮಿತಿ ಇರಬೇಕು. ಸಮಾಜದ ಎಲ್ಲ ವ್ಯಕ್ತಿಗಳಿಗೂ ಇದು ಅನ್ವಯವಾಗಬೇಕು. ಕನಿಷ್ಠ ಹಾಗೂ ಗರಿಷ್ಠ ವರಮಾನಗಳ ನಡುವಣ ಅಂತರ ವ್ಯತ್ಯಾಸಗಳು ನ್ಯಾಯೋಚಿತವಾಗಿರಬೇಕು ಹಾಗೂ ಕಾಲಕಾಲಕ್ಕೆ ಮಾರ್ಪಡಿಸಬಹುದಾದ ರೀತಿಯಲ್ಲಿರಬೇಕು. ಆಖೈರಾಗಿ ಅಂತರವನ್ನು ನಿರ್ಮೂಲಗೊಳಿಸುವ ಧೋರಣೆಯನ್ನು ಹೊಂದಿರಬೇಕು.**

೬. **ಗಾಂಧಿ ಪ್ರಣೀತ ಅರ್ಥ ವ್ಯವಸ್ಥೆಯನುಸಾರ ಉತ್ಪಾದನೆಯ ಗುಣಲಕ್ಷಣಗಳನ್ನು ಸಾಮಾಜಿಕ ಅಗತ್ಯಗಳಿಗನುಗುಣವಾಗಿ ನಿರ್ಧರಿಸಲಾಗುವುದು. ವ್ಯಕ್ತಿಯ ಆಸೆ–ದುರಾಸೆಗಳಿನುಗುಣವಾಗಿಯಲ್ಲ.**



"ಕೂಲಿ ಕೆಲಸದಾಳುಗಳನ್ನು ನೇಮಕ ಮಾಡಿಕೊಳ್ಳವುದು ಹೊರತಾಗಿ ಉಳಿದೆಲ್ಲ ಖಾಸಗಿ ಆಸ್ತಿಯನ್ನು ಸಮಾಜೀಕರಣಗೊಳಿಸಬೇಕು ಎನ್ನುವುದು ಲೋಹಿಯಾಜಿ ನಿಲುವು. ಲೋಹಿಯಾ ಅವರ ಅರ್ಥವ್ಯವಸ್ಥೆ ವಿಕೇಂದ್ರೀಕೃತ ಮಾದರಿಯ ಸಾಮಾಜಿಕ ಒಡೆತನದ ಸುತ್ತಲೇ ಸುತ್ತುತ್ತದೆ ಎನ್ನುವುದನ್ನು ಗಮನಿಸಬೇಕಾದ್ದು ಉಚಿತ. ಲೋಹಿಯಾ ಹೇಳುತ್ತಾರೆ :

> **"ಸರ್ಕಾರದ ವಿವಿಧ ವ್ಯವಸ್ಥೆ–ವಿನ್ಯಾಸಗಳಿಗನುಗುಣವಾಗಿ ಗ್ರಾಮ ಮಟ್ಟದಿಂದ ಒಕ್ಕೂಟದವರೆಗೆ ಸಾಮಾಜಿಕ ಒಡೆತನವಿರಬೇಕು"[೨೪]**

"ಮನುಷ್ಯರ ನಡುವೆ ಗರಿಷ್ಠಮಟ್ಟದ ಸಮಾನತೆ ಸಾಧಿಸಲು ಪ್ರಯತ್ನಿಸುವ ಹಾಗೂ ಊಟದ ಮೂಲಕ ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯದ ಮೂಲಕ ಊಟ ಲಭಿಸುವ ಹಾಗೆ ಮಾಡುವ ಸಾಮಾಜಿಕ ಒಡೆತನವನ್ನು ಸ್ಥಾಪಿಸುವುದು"[೨೫] ಲೋಹಿಯಾ ವಿಕೇಂದ್ರೀಕೃತ ಅರ್ಥವ್ಯವಸ್ಥೆಯ ಧ್ಯೇಯ. ಅಧಿಕಾರ ಕೇಂದ್ರೀಕರಣ ಸ್ವಾತಂತ್ರ್ಯ ಮತ್ತು ಸಮಾನತೆ ಎರಡಕ್ಕೂ ಹಾನಿಕಾರಕ ಎನ್ನುವುದು ಲೋಹಿಯಾಜಿ ನಂಬಿಕೆ. ಎರಡು ವಿಷಯಗಳಲ್ಲಿ ಗಾಂಧೀಜಿ ಮತ್ತು ಲೋಹಿಯಾ ನಡುವೆ ಸಹಮತವಿದೆ:

೧. **ವ್ಯಕ್ತಿಗೆ ಮಿತ ಪ್ರಮಾಣದಲ್ಲಿ ಆಸ್ತಿಹೊಂದುವಹಕ್ಕಿದೆ.**

೨. **ಗೊತ್ತು ಪಡಿಸಿದ ಮಿತಿಯನ್ನು ಮೀರಿದ ಆಸ್ತಿಯನ್ನು**

ಸಾಮಾಜೀಕರಣ ಅಥವಾ ರಾಷ್ಟ್ರೀಕರಣಗೊಳಿಸಬೇಕು. ಗಾಂಧಿಯವರ ಧರ್ಮದರ್ಶಿತ್ವ ಸಿದ್ಧಾಂತದ ಬಗ್ಗೆ, ಅದರ ಕಾರ್ಯಸಾಧ್ಯತೆ, ವ್ಯವಹಾರಿಕೆಗಳ ಬಗ್ಗೆ ಲೋಹಿಯಾ ಅವರಿಗೆ ಶಾಶ್ವತವಾದ ಅನುಮಾನಗಳಿವೆ. ಏಕೆಂದರೆ, ಬಂಡವಾಳಶಾಹಿಗಳು ಸಮಾಜದ ಒಳಿತಿಗಾಗಿ ಸ್ವಯಂಪ್ರೇರಣೆಯಿಂದ ತಮ್ಮ ಆಸ್ತಿಯನ್ನು ಬಿಟ್ಟುಕೊಡುವುದಿಲ್ಲ ಎನ್ನುವುದು ಅವರ ನಂಬಿಕೆ. ಆದಾಗ್ಯೂ ಗಾಂಧಿಯವರ "ಹೃದಯ ಪರಿವರ್ತನೆ" ತತ್ತ್ವ ವಿಫಲವಾದಲ್ಲಿ ಗುರಿಸಾಧಿಸಲು ಅಹಿಂಸಾತ್ಮಕ ಮಾರ್ಗಗಳನ್ನು ರೂಪಿಸಬೇಕಾಗುತ್ತದೆ ಎನ್ನುವ ಲೋಹಿಯಾ ಜನತೆಯಲ್ಲಿ ಸಂಕಲ್ಪ ಶಕ್ತಿಯನ್ನು ಸಂಘಟಿಸುವ ಮೂಲಕ (ಅಥವಾ ಬೇರೆ ಯಾವುದೇ ಅಹಿಂಸಾತ್ಮಕ ಮಾರ್ಗದ ಮೂಲಕ) ಇದನ್ನು ಸಾಧಿಸಬೇಕೆಂದು ಸಲಹೆ ಮಾಡಿದ್ದಾರೆ. ಅವರು ಹೇಳುತ್ತಾರೆ: "ಧರ್ಮದರ್ಶಿತ್ವದಂತೆಯೇ ಸ್ವಾತಂತ್ರ್ಯ, ಸಮಾನತೆಗಳನ್ನೂ ಕಾರ್ಯ ಸಾಧ್ಯಗೊಳಿಸಬಹುದೆಂದು ನಾನು ನಂಬುತ್ತೇನೆ."[೨೬]

ಆಸ್ತಿಯ ಖಾಸಗಿ ಒಡೆತನ ಹಾಗೂ ಧರ್ಮದರ್ಶಿತ್ವ ಸಿದ್ಧಾಂತದ ಬಗ್ಗೆ ಪಂಡಿತ್‌ಜಿಯವರು ಸಂಪೂರ್ಣವಾಗಿ ಗಾಂಧೀಜಿಯವರ ಅಭಿಪ್ರಾಯಗಳಿಗೆ ತದ್ವತ್ತಾದ ಅಭಿಪ್ರಾಯಗಳನ್ನೇ ಹೊಂದಿದ್ದರು. ಗಾಂಧೀಜಿಯವರಂತೆಯೇ ಪಂಡಿತ್‌ಜಿ ಆಸ್ತಿಯ

ಹಕ್ಕು ಸಮಾಜದ್ದು ಎಂಬುದನ್ನು ನಂಬುತ್ತಾರೆ. ವ್ಯಕ್ತಿಗಳಿಗೆ ಏನೇ ಹಕ್ಕುಗಳಿರಲಿ ಅವು ಕೆಲವೊಂದು ನಿರ್ದಿಷ್ಟ ಉದ್ದೇಶಗಳಿಗಾಗಿ ಕೆಲವೊಂದು ಕರ್ತವ್ಯಗಳನ್ನು ನಿರ್ವಹಿಸಲು ಸಮಾಜದಿಂದ ಅವರಿಗೆ ದತ್ತವಾದವು. ಆದ್ದರಿಂದ ಆ ಹಕ್ಕುಗಳು ಅಬಾಧಿತವಲ್ಲ, ಸಮಾಜದ ಸರ್ವೋಚ್ಚ ಹಿತಕ್ಕಾಗಿ ಅವುಗಳಲ್ಲಿ ಮಾರ್ಪಾಟುಗಳನ್ನು ಮಾಡಬಹುದು ಎಂದು ಪಂಡಿತ್‌ಜಿ ಸಮರ್ಥನೆ ಮಾಡಿದ್ದಾರೆ.

> **"ಎಲ್ಲ ಹಕ್ಕುಗಳೂ ಸಮಾಜದ ಹಿತವನ್ನು ಅವಲಂಬಿಸಿವೆ. ವ್ಯಕ್ತಿ ತನ್ನ ಸಾಮಾಜಿಕ ಕರ್ತವ್ಯಗಳನ್ನು ನಿರ್ವಹಿಸಲು ಅನುವಾಗಲೆಂದು ಅವನಿಗೆ ಈ ಹಕ್ಕುಗಳನ್ನು ನೀಡಲಾಗಿದೆ. ಈ ಉದ್ದೇಶದ ಸಲುವಾಗಿಯೇ ಕಾಲಕಾಲಕ್ಕೆ ಈ ಹಕ್ಕುಗಳನ್ನು ಅರ್ಥೈಸುವುದು. ವಿಶದ ಪಡಿಸುವುದು, ಅವುಗಳಲ್ಲಿ ಮಾರ್ಪಾಟುಗಳನ್ನು ಮಾಡುವುದು ಅಗತ್ಯವಿದೆ. ಆಸ್ತಿ ಕುರಿತ ಯಾವ ಹಕ್ಕೂ ಸಮಾಜದಿಂದ ಅಬಾಧಿತವಲ್ಲ"**[೨೭]

ಧರ್ಮದರ್ಶಿತ್ವದ ಪರಿಪೂರ್ಣ ಅಭಿವ್ಯಕ್ತಿಯನ್ನು ಅವಿಭಕ್ತ ಕುಟುಂಬದಲ್ಲಿ ಪಂಡಿತ್‌ಜಿ ಕಾಣುತ್ತಾರೆ. ಸಮಾಜವು ಹಲವು ಹನ್ನೊಂದು ಇರುವಿಕೆಗಳ ಮುಖೇನ, ವ್ಯಕ್ತಿ, ಕುಟುಂಬ, ಸಮುದಾಯ, ಸರ್ಕಾರ ಇತ್ಯಾದಿ ಇರುವಿಕೆಗಳ ಮುಖೇನ ಪ್ರಕಟಗೊಳ್ಳುತ್ತದೆ ಹಾಗೂ ಸಾಂಗಗೊಳ್ಳುತ್ತದೆ. ಅವಿಭಕ್ತ ಕುಟುಂಬ ವ್ಯಕ್ತಿಯಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಕಾಪಿಡುತ್ತದೆ.

> **"ಅವಿಭಕ್ತ ಕುಟುಂಬದಲ್ಲಿ ಪ್ರತಿಯೊಬ್ಬನಿಗೂ ಸಂಪಾದಿಸುವ ಹಕ್ಕಿದೆ. ಆದರೆ ಒಡೆತನದ ಹಕ್ಕು ಸಂಪೂರ್ಣವಾಗಿ ಕುಟುಂಬಕ್ಕೆ ಸೇರಿದ್ದು. ಸಂಪತ್ತನ್ನು ಕುಟುಂಬದ ಪ್ರಯೋಜನಕ್ಕಾಗಿ ಬಳಸಲಾಗುತ್ತದೆ. ಧರ್ಮದರ್ಶಿತ್ವದ ಈ ಭಾರತೀಯ ತತ್ವವನ್ನೇ ಗಾಂಧೀಜಿ ಮೊದಲಾದ ಚಿಂತಕರು ಹೇಳಿರುವುದು."**[೨೮]

ಎನ್ನುತ್ತಾರೆ ಪಂಡಿತ್‌ಜಿ. ಹೀಗೆ, ಆಸ್ತಿ ಮತ್ತು ಧರ್ಮದರ್ಶಿತ್ವ ಕಲ್ಪನೆ ಬಗ್ಗೆ ಗಾಂಧೀಜಿ ಮತ್ತು ಪಂಡಿತ್‌ಜಿ ತದ್ವತ್ತಾದ ಅಭಿಪ್ರಾಯಗಳನ್ನೇ ಹೊಂದಿದ್ದಾರೆ.

**೭. ಯಾಂತ್ರೀಕರಣ, ಕೈಗಾರಿಕೀಕರಣ ಮತ್ತು ರಾಷ್ಟ್ರೀಕರಣ**

ಗಾಂಧೀಜಿಯವರು ಪ್ರಾರಂಭದಲ್ಲಿ, ಯಾಂತ್ರೀಕರಣಕ್ಕೆ ಔದ್ಯಮೀಕರಣಕ್ಕೆ 'ಹಿಂದ್ ಸ್ವರಾಜ್'ನಲ್ಲಿ (೧೯೦೯) ಶುದ್ಧಾಂಗ ವಿರೋಧ ವ್ಯಕ್ತಪಡಿಸಿದ್ದರು. ಆಗ ಲಘುವಾಗಿ ಮಾತನಾಡುತ್ತಿದ್ದ ವಿರೋಧಿಗಳು ಇದನ್ನು ರಮ್ಯತೆ. ಭಾವಾವೇಶ, ಮಧ್ಯಕಾಲೀನ ಅನುಭಾವ ಎಂದೆಲ್ಲ ಟೀಕಿಸಿದ್ದರು. ಆದರೆ ಕಾಲಕಳೆದಂತೆ ಅವರ ಈ ನಿಲುವಿನಲ್ಲಿ ತೀವ್ರಗಾಮಿ ಬದಲಾವಣೆಗಳಾದವು. ಮೂವತ್ತು, ನಲವತ್ತರ ದಶಕಗಳಲ್ಲಿ ಈ ಬಗ್ಗೆ ಅವರ ಧೋರಣೆ ಹೆಚ್ಚು ವಾಸ್ತವಿಕವಾಗಿತ್ತು. ಅವರ ಅಭಿಪ್ರಾಯಗಳ ಸರಿಯಾದ ಮೌಲ್ಯ ನಿರ್ಣಯಮಾಡಲು ನಾವು ಈ ಬದಲಾವಣೆಗಳನ್ನು ಗಮನಿಸಬೇಕು. ಕೈಗಾರಿಕೀಕರಣ, ಯಾಂತ್ರೀಕರಣ ಹಳ್ಳಿಗಳನ್ನು



ದಿವಾಳಿ ಎಬ್ಬಿಸುತ್ತವೆ. ಮನುಷ್ಯನ ವ್ಯಕ್ತಿತ್ವದ ಅವನತಿಗೆ ಕಾರಣವಾಗುತ್ತವೆ. ಬೃಹತ್ ಪ್ರಮಾಣದಲ್ಲಿ ನಿರುದ್ಯೋಗವುಂಟಾಗುತ್ತದೆ. ರಾಷ್ಟ್ರೀಯವಾಗಿ ಮತ್ತು ಅಂತರರಾಷ್ಟ್ರೀಯವಾಗಿ ಬಲಿಷ್ಠರು ದುರ್ಬಲರನ್ನು ಶೋಷಿಸುತ್ತಾರೆ ಇವು ಗಾಂಧೀಜಿಯವರ ವಿರೋಧಕ್ಕೆ ಕಾರಣಗಳಾಗಿದ್ದವು. ಯಂತ್ರಗಳ ಬಳಕೆಗೆ ಅಥವಾ ಬೃಹತ್ ಪ್ರಮಾಣದ ಉತ್ಪಾದನೆಗೆ ತಾವು ವಸ್ತುತ: ವಿರೋಧಿಯಲ್ಲವೆಂದು ಮೂವತ್ತರ ದಶಕದಲ್ಲಿ ಅವರು ನೀಡಿರುವ ಹೇಳಿಕೆಯಿಂದ ಇದು ಸ್ಪಷ್ಟ. ವಿವೇಚನೆಯಿಲ್ಲದೆ ಯಂತ್ರಗಳ ಬಳಕೆಯನ್ನು ಅಧಿಕಗೊಳಿಸುವುದರಿಂದ, ನಮ್ಮ ರಾಷ್ಟ್ರ ಅನುಭವಿಸುತ್ತಿರುವ ನಿರುದ್ಯೋಗ ಸಮಸ್ಯೆ ಮತ್ತಷ್ಟು ಉಲ್ಬಣಿಸುತ್ತದೆ ಎನ್ನುವುದು ಅವರ ಅಭಿಪ್ರಾಯವಾಗಿತ್ತು. ದುಡಿಯುವ ಕೈಗಳು ಅಧಿಕವಾಗಿರುವ ನಮ್ಮ ದೇಶಕ್ಕೆ ಮಾನವ ಸಂಪನ್ಮೂಲ ಬಳಕೆ ಪ್ರಧಾನವಾದ ಉತ್ಪಾದನಾ ವ್ಯವಸ್ಥೆ ಬೇಕಾಗಿದೆಯೇ ವಿನ: ಮಾನವ ಸಂಪನ್ಮೂಲವನ್ನು ಮಿತಗೊಳಿಸುವ ಉತ್ಪಾದನಾ ಪ್ರಕ್ರಿಯೆಯಲ್ಲ ಎಂದು ಅವರು ನಂಬಿದ್ದರು. ಅರ್ಥ ವ್ಯವಸ್ಥೆಯಲ್ಲಿ ಯಂತ್ರಗಳು, ವಿದುಚ್ಛಕ್ತಿ, ಬೃಹತ್ ಕೈಗಾರಿಕೆಗಳು ಇವುಗಳ ಸ್ಥಾನದ ಅರಿವಾಗಿದ್ದು ನಲವತ್ತರ ದಶಕದಲ್ಲಿ. ಅವರ ಮಾತಿನಲ್ಲೇ ಹೇಳುವುದಾದರೆ :

> **"ವಿದ್ಯುಚ್ಛಕ್ತಿ, ನೌಕಾ ನಿರ್ಮಾಣ, ಕಬ್ಬಿಣದ ಕಾರ್ಖಾನೆಗಳು, ಯಂತ್ರಗಳ ತಯಾರಿಕೆ ಇತ್ಯಾದಿ ಉದ್ಯಮಗಳು ಗ್ರಾಮಿಣ ಕುಶಲ ಕಲೆಗಳ ಜೊತೆ ಜೊತೆ ಇರಬೇಕಾದ ಅಗತ್ಯವನ್ನು ನಾನೀಗ ಮನಗಂಡಿದ್ದೇನೆ."**[೨೯]

ಗ್ರಾಮೀಣ ಜನತೆಗೆ ಮತ್ತು ಅವರ ಕುಶಲ ಕರ್ಮಕ್ಕೆ ಸಹಾಯಕವಾಗುವುದಾದಲ್ಲಿ ಬೃಹತ್ ಹಾಗೂ ಸಣ್ಣ ಕೈಗಾರಿಕೆಗಳನ್ನು ವಿರೋಧಿಸಬೇಕಾದ ಅಗತ್ಯವಿಲ್ಲ. ಇವುಗಳ ಜೊತೆ ರಾಜಿಸಂಧಾನ ಸಾಧ್ಯ ಎಂದು ಅವರಿಗೆ ಹೀಗೆ ಮನವರಿಕೆಯಾಗಿತ್ತು ಬೃಹತ್ ಯಂತ್ರೋಪಕರಣಗಳನ್ನು ಕುರಿತು ಗಾಂಧೀಜಿ ಹೀಗೆ ಹೇಳಿದ್ದಾರೆ:

> **"ಸಾರ್ವಜನಿಕ ಕೆಲಸಕಾರ್ಯಗಳ ಉಪಯುಕ್ತತೆಗಾಗಿ ಬೃಹತ್ ಯಂತ್ರೋಪಕರಣಗಳ ಬಳಕೆ ಅನಿವಾರ್ಯವಾಗಿದೆ. ಆದರೆ ಇವೆಲ್ಲ ಸರ್ಕಾರಿ ಸ್ವಾಮ್ಯದಲ್ಲಿರಬೇಕು ಹಾಗೂ ಸಂಪೂರ್ಣವಾಗಿ ಜನರ ಪ್ರಯೋಜನಕ್ಕಾಗಿ ಬಳಸಲ್ಪಡಬೇಕು."**[೩೦]

–ಹೀಗೆ ಗಾಂಧೀಜಿಯವರು ಮಹತ್ವದ ಕೈಗಾರಿಕೆಗಳ ರಾಷ್ಟ್ರೀಕರಣವನ್ನೂ ಪ್ರತಿಪಾದಿಸುತ್ತಾರೆ.

ಲೋಹಿಯಾ ಜಿ ಅವರು "ಸಣ್ಣ ಘಟಕಗಳ ಯಂತ್ರ ಸ್ಥಾವರ"ಗಳ ಪ್ರಚಂಡ ಪ್ರತಿಪಾದಕರಾಗಿದ್ದರು. ಇವುಗಳ ಮೂಲಕವೇ ಕೈಗಾರಿಕೀಕರಣದ ಗುರಿಸಾಧಿಸುವುದು ಅವರ ಇಚ್ಛೆಯಾಗಿತ್ತು. ಆದಾಗ್ಯೂ ಅವರು ಬೃಹತ್ ಯಂತ್ರಗಳ, ಬೃಹತ್ ಪ್ರಮಾಣದ ಉದ್ಯಮಗಳ ವಿರೋಧಿಯಾಗಿರಲಿಲ್ಲ. ಈ ವಿಷಯದಲ್ಲಿ ಅವರ ಸೂತ್ರ ಹೀಗಿತ್ತು.

> **“ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲೆಲ್ಲ ಬೃಹತ್ ಕೈಗಾರಿಕೆಗಳು ಇರಬೇಕು ಹಾಗೆಯೇ ಸಾಧ್ಯವಿರುವೆಡೆಗಳಲ್ಲಿ ವಿದ್ಯುಚ್ಚಾಲಿತ ಸಣ್ಣ ಕೈಗಾರಿಕೆಗಳಿರಬೇಕು.”**[೩೧]

ಲೋಹಿಯಾ ಅವರು ಬೃಹತ್ ಯಂತ್ರೋಪಕರಣಗಳ ವಿರೋಧಿಯಾಗಿರಲಿಲ್ಲ. ಆದರೆ ಅಂಥ ಯಂತ್ರಗಳ ವಿವೇಚನಾರಹಿತ ಬಳಕೆಗೆ ಅವರ ವಿರೋಧವಿತ್ತು ಎನ್ನುವುದು ಸ್ಪಷ್ಟ. ನಿಸ್ಸಂದೇಹವಾಗಿ ಅವರ ಪ್ರಾಶಸ್ತ್ಯ ಇದ್ದದ್ದು, ಸಣ್ಣ ಸಣ್ಣ ಹಳ್ಳಿಗಳಲ್ಲಿ ಉಪಯುಕ್ತವಾಗಬಲ್ಲಂಥ ಸಾಮರ್ಥ್ಯವುಳ್ಳ ಸಣ್ಣ ಕೈಗಾರಿಕೆಗಳಿಗೆ.

> **“ಈ ಬಗೆಯ ಆರ್ಥಿಕ ಮತ್ತು ತಾಂತ್ರಿಕ ವಿಕೇಂದ್ರೀಕರಣ ಮತ್ತು ರಾಜಕೀಯ ಅಧಿಕಾರ ಶ್ರದ್ಧೆಯ ನಡುವೆ ಸಂಲಗ್ನವಾಗುಬೇಕಾಗುತ್ತದೆ.”**[೩೨]

ಈ ದಾಂಪತ್ಯ ಹೊಸ ನಾಗರಿಕತೆಗೆ ನಾಂದಿ ಹಾಡುತ್ತದೆ ಎಂದೂ ಅವರು ನಂಬಿದ್ದರು. “ಇದರಿಂದಾಗಿ, ಸಮುದಾಯಕ್ಕಾಗಿ ಸಮುದಾಯದಿಂದ ಸಮುದಾಯದ ಸರ್ಕಾರವೊಂದು ಬರುವುದು ಸಾಧ್ಯ”[೩೩] ಎಂದು ಅವರು ನಂಬಿದ್ದರು.

ಕಬ್ಬಿಣ, ಉಕ್ಕು, ಎಂಜಿನಿಯರಿಂಗ್, ಸಕ್ಕರೆ, ಹತ್ತಿಬಟ್ಟೆಗಳು ಇತ್ಯಾದಿಯಾಗಿ ಎಲ್ಲ ಬೃಹತ್ ಕೈಗಾರಿಕೆಗಳನ್ನು ರಾಷ್ಟ್ರೀಕರಣಗೊಳಿಸಬೇಕು. ಉತ್ಪಾದಕರು ಸಹಕಾರಿ ಸಂಘ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಬೇಕು.

ಮೇಲಿನ ಚರ್ಚೆಯಿಂದ ಈ ಕೆಳಗೆ ಕಾಣಿಸಿರುವ ಅಂಶಗಳು ಉದ್ಭವಿಸಿವೆ:

**೧. ವಿದ್ಯುಚ್ಚಾಲಿತ ಸಣ್ಣ ಘಟಕ ಯಂತ್ರೋಪಕರಣಗಳಿಗೆ ಪ್ರಾಶಸ್ತ್ಯ.**

**೨. ಇವುಗಳ ಮೂಲಕವೇ ಅಧಿಕ ಉತ್ಪಾದನೆಯ ಗುರಿಯನ್ನು ಸಾಧಿಸಬೇಕು.**

**೩. ಬೃಹತ್ ಯಂತ್ರಗಳ ಬಳಕೆ ತಾರ್ಕಿಕವಾಗಿರಬೇಕು. ಅತಾರ್ಕಿಕ ಹುಚ್ಚುತನಕ್ಕೆ ಅವಕಾಶವಿರಬಾರದು.**

**೪. ಎಲ್ಲ ಬೃಹತ್ ಕೈಗಾರಿಕೆಗಳನ್ನೂ ರಾಷ್ಟ್ರೀಕರಣಗೊಳಿಸಬೇಕು ಹಾಗೂ ಇವುಗಳನ್ನು ಸ್ವಯಮಾಧಿಕಾರದ ಸಂಸ್ಥೆಗಳು ನಿರ್ವಹಿಸಬೇಕು.**

ಯಾಂತ್ರೀಕರಣ ಹಾಗೂ ಕೈಗಾರಿಕೀಕರಣ ಕುರಿತಂತೆ ಪಂಡಿತ್‌ಜಿಯವರ ಅಭಿಪ್ರಾಯಗಳು ಎಚ್ಚರದ ವ್ಯಾವಹಾರಿಕತೆಯನ್ನು ಪ್ರಾಯೋಗಿಕ ದೃಷ್ಟಿಯನ್ನೂ ಬಿಂಬಿಸುತ್ತವೆ. ಬೃಹತ್ ಯಂತ್ರಗಳು ಅಥವಾ ಬೃಹತ್ ಪ್ರಮಾಣದ ಕೈಗಾರಿಕೆಗಳು ಅಗತ್ಯ ಕುರಿತ ಗೀಳನ್ನು ಅತಾರ್ಕಿಕ ವಾದಗಳನ್ನು ಅವರು ವಿರೋಧಿಸುತ್ತಾರೆ. ಬಂಡವಾಳದ ಕೊರತೆ ಇರುವ, ದುಡಿಯುವ ಸಾಮರ್ಥ್ಯ ಉಳ್ಳ ಕೈಗಳು ಯಥೇಚ್ಛವಾಗಿರುವ ನಮ್ಮ ದೇಶದಲ್ಲಿ ವಿವೇಚನಾರಹಿತ ಯಾಂತ್ರೀಕರಣ ಅಥವಾ ಕೈಗಾರಿಕೀಕರಣದಿಂದ ಈಗಾಗಲೇ ದೈತ್ಯಾಕಾರವಾಗಿ ಬೆಳೆದಿರುವ ನಿರುದ್ಯೋಗ ಸಮಸ್ಯೆ ಮತ್ತಷ್ಟು ಉಲ್ಬಣಿಸುತ್ತದೆ, ಇದು ಅನಿವಾರ್ಯವಾಗಿಬಿಡುತ್ತದೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಸಂಪೂರ್ಣ ಉದ್ಯೋಗಾವಕಾಶ ನಮ್ಮ ಆರ್ಥಿಕ



ನೀತಿಯ ಮುಖ್ಯ ಗುರಿಯಾಗಬೇಕು ಎಂದು ಅವರ ನಂಬಿಕೆ. ಇದನ್ನು ಗಮನದಲ್ಲಿಟ್ಟುಕೊಂಡು ನಾವು ಭಾರತದ ಪರಿಸ್ಥಿತಿ ಹಾಗೂ ಸಂಪನ್ಮೂಲಗಳಿಗೆ, (ಮಾನವ ಹಾಗೂ ಭೌತ) ಹೊಂದಿಕೊಳ್ಳುವಂಥ ಯೋಗ್ಯ ಮಾದರಿಯ ಯಂತ್ರಗಳನ್ನು ಆಯ್ಕೆಮಾಡಿಕೊಳ್ಳಬೇಕು. ಬೃಹತ್ ಯಂತ್ರೋಪಕರಣಗಳನ್ನು ಸಾರಾಸಗಟಾಗಿ ಸ್ವೀಕರಿಸುವುದು ಅಥವಾ ತಿರಸ್ಕರಿಸುವುದಕ್ಕೆ ಪಂಡಿತ್‌ಜಿಯವರ ಒಲವು ಇರಲಿಲ್ಲ ಎನ್ನುವುದು ಅವರ ಮೇಲಿನ ಅಭಿಪ್ರಾಯಗಳಿಂದ ಸ್ಪಷ್ಟವಾಗುತ್ತದೆ. ಭಾರತದ ಪರಿಸ್ಥಿತಿಗೆ ಹೊಂದಿಕೊಳ್ಳುವುದೇ ಅವುಗಳ ಉಪಯುಕ್ತತೆ ಅಥವಾ ನಿರುಪಯುಕ್ತತೆಗಳ ಮಾನದಂಡವಾಗಬೇಕು. ಆದ್ದರಿಂದಲೇ ಪಂಡಿತ್‌ಜಿ ಏಳು 'ಎಂ–M' ಗಳಿಗೆ ಹೆಚ್ಚು ಒತ್ತುನೀಡುತ್ತಾರೆ. ಮ್ಯಾನ್ (ಮಾನವ), ಮೆಟೀರಿಯಲ್ (ಭೌತ ದ್ರವ್ಯ), ಮನಿ (ಹಣ), ಮಾನೇಜ್‌ಮೆಂಟ್ (ಆಡಳಿತ ನಿರ್ವಹಣೆ), ಮೋಟಿವ್‌ಪವರ್ (ಪ್ರೇರಕಶಕ್ತಿ), ಮಾರ್ಕೆಟ್ (ಮಾರುಕಟ್ಟೆ) ಮತ್ತು ಮೆಷಿನ್ (ಯಂತ್ರ). ಯಂತ್ರೋಪಕರಣಗಳು ನಮ್ಮ ದೇಶದ ಸ್ಥಿತಿಗೆ ಹೊಂದಿಕೆಯಾಗುತ್ತವೆಯೇ ಇಲ್ಲವೇ ಎಂಬುವನ್ನು ನಿರ್ಧರಿಸಲು ಈ ಏಳು 'ಎಂ'ಗಳೇ ಮಾನದಂಡವಾಗಬೇಕು ಎಂಬುದು ಅವರ ನಿಲುವು.

> **“ನಾವು ಸೂಕ್ತ ಯಂತ್ರೋಪಕರಣಗಳನ್ನು ವಿನ್ಯಾಸಗೊಳಿಸಬೇಕು. ಪ್ರತಿಯಾಗಿ, ಈಚಿನ ದಿನಗಳಲ್ಲಿ ನಾವು ಮೊದಲು ಯಂತ್ರಗಳನ್ನು ಕಾರ್ಖಾನೆಗಳನ್ನು ಸ್ಥಾಪಿಸಿ ನಂತರ ಉಳಿದವುಗಳ ಜೊತೆ ಅವುಗಳನ್ನು ಸಮನ್ವಯಗೊಳಿಸಲು ಪ್ರಯತ್ನಿಸುತ್ತಿದ್ದೇವೆ. ನಾವು ಭಾರತೀಯ ತಂತ್ರಜ್ಞಾನವನ್ನು ರೂಪಿಸಬೇಕು.”**[೩೪]

–ಎಂದು ಪಂಡಿತ್ ಜಿ ನಮಗೆ ಆಗ್ರಹಪಡಿಸುತ್ತಾರೆ. “ಸಂಪೂರ್ಣ ಉದ್ಯೋಗಾವಕಾಶ ನಮ್ಮ ಪ್ರಾಥಮಿಕ ಕಾಳಜಿಯಾಗಬೇಕು. ಇದಾದ ನಂತರ ಉಳಿದ ಆರು ಅಂಶಗಳು ಇದಕ್ಕೆ ಹೊಂದಿಕೊಳ್ಳುತ್ತವೆ” ಎನ್ನುವ ಅವರ ಮಾತು ಗಮನಾರ್ಹವಾದದ್ದು. ಏಕೆಂದರೆ ಆಖೈರಾಗಿ ಯಂತ್ರಗಳ ಅಗತ್ಯ, ಅಪೇಕ್ಷೆ ಮತ್ತು ಸೂಕ್ತತೆಗಳನ್ನು ಈ ಮಾನದಂಡದಿಂದ ತೀರ್ಮಾನಿಸಬೇಕಾಗುತ್ತದೆ.

ಮೇಲೆ ಹೇಳಿರುವಂತೆ, ಬೃಹತ್ ಕೈಗಾರಿಕೆಗಳ ವಿವೇಚನಾರಹಿತ ಬಳಕೆಯನ್ನು ಪಂಡಿತ್‌ಜಿ ಸಮ್ಮತಿಸುವುದಿಲ್ಲ. ಹಾಗೆಂದು ಅವರು ಬೃಹತ್ ಉತ್ಪಾದನೆಯ ಅವಶ್ಯಕತೆಯನ್ನೂ ತಳ್ಳಿಹಾಕುವುದಿಲ್ಲ. ಆದರೆ ಅವಶ್ಯವಾಗಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಂದಲೇ ಬೃಹತ್ ಪ್ರಮಾಣದಲ್ಲಿ ಉತ್ಪಾದನೆ ಸಾಧ್ಯವಾಗಬೇಕು. ಬೃಹತ್ ಕೈಗಾರಿಕೆಗಳಿಂದಲ್ಲ ಎನ್ನುವುದು ಅವರ ನಿಲುವು. ವಿದ್ಯುಚ್ಚಾಲಿತ ಸಣ್ಣ ಕೈಗಾರಿಕೆಗೆ ಅವರು ಒತ್ತುನೀಡುತ್ತಾರೆ. ಇವುಗಳ ಮೂಲಕ ಮನೆಗಳು ಉತ್ಪಾದನಾ ಕೇಂದ್ರಗಳಾಗಬೇಕೆ ಹೊರತು ಕಾರ್ಖಾನೆಗಳಲ್ಲ; ಉತ್ಪಾದನೆಯು ವಿಕೇಂದ್ರೀಕರಣವಾಗಬೇಕು ಎನ್ನುವುದು ಅವರ ನಿಲುವು. ಈ ಮಾರ್ಗ

ಅನುಸರಿಸುವುದರಿಂದ ನಗರೀಕರಣ ಹಾಗೂ ಗ್ರಾಮೀಣ ನಿರುದ್ಯೋಗ ಸಮಸ್ಯೆಗಳನ್ನು ನಿವಾರಿಸಬಹುದೆಂದು ಅವರು ನಂಬುತ್ತಾರೆ. ಕೈಗಾರಿಕೆಯ ಆಡಳಿತ ನಿರ್ವಹಣೆ ಹಾಗೂ ಲಾಭದಲ್ಲಿ ಪಾಲುಗಾರಿಕೆಯನ್ನು ಮಾನ್ಯ ಮಾಡುವ ಅವರು, ಗಾಂಧೀಜಿಯವರಂತೆ "ಉತ್ಪನ್ನ ಸಾಧನಗಳಲ್ಲಿ ಶೇರುದಾರರ ಜೊತೆ ಕಾರ್ಮಿಕರಿಗೂ ಒಡೆತನದ ಹಕ್ಕು ಇರಬೇಕೆಂದು."[೨೫] ಪ್ರತಿಪಾದಿಸುತ್ತಾರೆ. ಇದರಿಂದಾಗಿ ಕಾರ್ಮಿಕರಲ್ಲಿ, ಉತ್ಪಾದನಾ ಪ್ರಕ್ರಿಯೆಯಲ್ಲಿ ತಾವು ಪ್ರತ್ಯಕ್ಷವಾಗಿ ಭಾಗಸ್ತರು ಎನ್ನುವ ಭಾವನೆ ಮೂಡುತ್ತದೆ. ಇದು ಕೈಗಾರಿಕಾ ಶಾಂತಿ ಮತ್ತು ಅಭ್ಯುದಯಗಳಿಗೆ ಹಾದಿ ಸುಗಮ ಮಾಡಿಕೊಡುತ್ತದೆ. ಲೋಹಿಯಾಜಿ ಹೇಳುವಂತೆ ಎಲ್ಲ ಬೃಹತ್ ಕೈಗಾರಿಕೆಗಳನ್ನು ರಾಷ್ಟ್ರೀಕರಣಗೊಳಿಸಬೇಕೆಂಬುದನ್ನು ಅವರು ಒಪ್ಪುವುದಿಲ್ಲ. ರಾಷ್ಟ್ರೀಕರಣ ನಿರ್ಧಾರ ಕೈಗೊಳ್ಳುವಾಗ ಪ್ರತಿಯೊಂದು ಕೈಗಾರಿಕೆಯ ವಿಶಿಷ್ಟ ಗುಣಲಕ್ಷಣಗಳೇ ನಿರ್ಣಾಯಕ ಅಂಶವಾಗಬೇಕೆಂಬುದು ಪಂಡಿತ್ ಜಿ ಅವರ ನಿಲುವು.

ಆದಾಗ್ಯೂ, ರಕ್ಷಣಾ ಕೈಗಾರಿಕೆಗಳ ಜೊತೆ ಮುಖ್ಯ ಉದ್ಯಮಗಳನ್ನೂ ರಾಷ್ಟ್ರೀಕರಣಗೊಳಿಸುವ ಅಗತ್ಯವನ್ನು ಅವರು ಒತ್ತಿಹೇಳುತ್ತಾರೆ. ಹೀಗೆ, ಯಾಂತ್ರೀಕರಣ, ಕೈಗಾರಿಕೀಕರಣ ಮತ್ತು ರಾಷ್ಟ್ರೀಕರಣ ಸಮಸ್ಯೆಗೆ ವ್ಯಾವಹಾರಿಕತೆ ಮತ್ತು ಪ್ರಾಯೋಗಿಕತೆಗಳ ದೃಷ್ಟಿಕೋನದಿಂದಲೇ ಪರಿಹಾರ ಹುಡುಕಬೇಕೆ ಹೊರತು ತತ್ವಾಂಧತೆ ಅಥವಾ ಹಟದ ಮಾರ್ಗಗಳಿಂದಲ್ಲ ಎನ್ನುವುದು ಪಂಡಿತ್‌ಜಿಯವರ ಮಾರ್ಗವಾಗಿದೆ.

## ೮. ಯೋಜನೆ

ಲೋಹಿಯಾಜಿ ಮತ್ತು ಪಂಡಿತ್‌ಜಿ ಇಬ್ಬರೂ ಯೋಜನೆ ಮೇಲಿನಿಂದಲ್ಲ, ತಳಹಂತದಿಂದ ಆಗಬೇಕೆಂದು ಅಭಿಪ್ರಾಯಪಡುತ್ತಾರೆ. ಗ್ರಾಮ ಮತ್ತು ಕೆಳಸ್ತರದ ಪ್ರಾದೇಶಿಕ ಘಟಕಗಳು ಯೋಜನೆಯ ಕೇಂದ್ರ ಬಿಂದುಗಳಾಗಬೇಕು ಹಾಗೂ ಗ್ರಾಮೀಣ ಅಥವಾ ಪ್ರದೇಶ ಮಟ್ಟದ ಯೋಜನೆಗಳನ್ನು ಕೇಂದ್ರ ಸಮನ್ವಯಗೊಳಿಸಬೇಕು ಎನ್ನುವುದನ್ನು ಲೋಹಿಯಾಜಿ ಮತ್ತು ಪಂಡಿತ್‌ಜಿ ಒತ್ತಿಹೇಳುತ್ತಾರೆ.

ಮೇಲಿನ ಅಂಶಗಳನ್ನು ಎಚ್ಚರಿಕೆಯಿಂದ ಪರಾಮರ್ಶಿಸಿದಾಗ ನಾವು ಒಂದು ಅನಿವಾರ್ಯ ತೀರ್ಮಾನಕ್ಕೆ ಬರಬಹುದಾಗಿದೆ. ಆಧುನಿಕ ಭಾರತದ ಶಿಲ್ಪಿಗಳಾದ ಈ ಮೂವರು ಮಹಾನ್ ನಾಯಕರುಗಳ ಆರ್ಥಿಕ ಚಿಂತನೆ ಮೂಲತಃ ಏಕರೀತಿಯದಾಗಿದೆ, ತದ್ವತ್ತಾಗಿದೆ ಎನ್ನುವುದೇ ಆ ತೀರ್ಮಾನ. ಬಂಡವಾಳ–ಶಾಹಿಯಾಗಲೀ ಕಮ್ಯುನಿಸಮ್ಮಾಗಲೀ ಭಾರತಕ್ಕೆ ಸ್ವೀಕಾರಾರ್ಹವಾದವುಗಳಲ್ಲ ಎನ್ನುವುದು ಈ ಮೂವರು ಮಹನೀಯರ ಸ್ಪಷ್ಟ ಅಭಿಪ್ರಾಯವಾಗಿದೆ. ಭಾರತ,



ತನ್ನ ವಿಶೇಷ ಗುಣಲಕ್ಷಣಗಳು ಹಾಗೂ ರಾಷ್ಟ್ರೀಯ ಮನೋಧರ್ಮ, ಮೇಧಾಶಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ತನ್ನದೇ ಆದ ಸಾಮಾಜಿಕ–ಆರ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಾದ ಅಗತ್ಯವನ್ನು ಮೂವರೂ ಮಹತ್ವಪೂರ್ಣವಾಗಿ ಪ್ರತಿಪಾದಿಸುತ್ತಾರೆ. ಇದಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಸೂಕ್ತ ತಂತ್ರಜ್ಞಾನ ಅಳವಡಿಕೆಯೊಂದಿಗೆ ವಿಕೇಂದ್ರೀಕರಣವಾಗಬೇಕೆಂಬ ವಾದದ ಪರವಾಗಿ ಮೂವರಲ್ಲೂ ಒಮ್ಮತದ ಅಭಿಪ್ರಾಯವಿದೆ.

ಸ್ವತಂತ್ರ ಭಾರತ ಈ ಮಾರ್ಗದರ್ಶನ ಸೂತ್ರಗಳನ್ನು ನಿಷ್ಠೆ, ವಿಧೇಯತೆಗಳಿಂದ ಪಾಲಿಸಲಿಲ್ಲ. ಪಥಭ್ರಂಶ ಎಡವಟ್ಟುಗಳಿಗಾಗಿ ನಾವು ಈಗಾಗಲೇ ಬೆಲೆ ತೆತ್ತಿದ್ದೇವೆ. ದೇಶಕ್ಕೆ ಅವಿವೇಕದ ಅರಿವು ಮೂಡಿರುವುದು, ತಪ್ಪುಹಾದಿಯಿಂದ ಹಿಂದೆ ಸರಿಯಲು ನಿರ್ಧರಿಸಿರುವುದು ಸಂತೋಷದ ಸಂಗತಿ. ವಿಕೇಂದ್ರೀಕರಣದ ಮೂಲಕ ಗ್ರಾಮೀಣ ಅಭಿವೃದ್ಧಿಗೆ ಒತ್ತುನೀಡುವ ಇವತ್ತಿನ ಆರ್ಥಿಕ ಚಿಂತನೆ ದೇಶವನ್ನು ಅಭ್ಯುದಯದತ್ತ ಒಯ್ಯುವುದು ಖಚಿತ. ಆದರೆ ಈ ಆರ್ಥಿಕ ಚಿಂತನೆಗಳನ್ನು ನಿಷ್ಠೆಯಿಂದ ಅನುಷ್ಠಾನಕ್ಕೆ ತರಬೇಕಷ್ಟೆ.

## ಅನುಬಂಧ


1. Lohia, Dr. R.M., *Marx, Gandhi and Socialism,* 1963, p. 156
2. *Ibid,* p. 138
3. *Ibid,* p. 400
4. *Ibid,* p. 136
5. Upadhyaya, Deendayal, *Integral Humanism,* 1965, p. 24.
6. *Ibid,* p. 17.
7. *Ibid,* p. 24.
8. *Ibid,* p. 78.
9. Gandhi, *M.K.: Harijan*, 9-10-1937
10. Gandhi: *Hind Swaraj,* pp. 44-45
11. Upadhyaya: *Integral Humanism,* Ibid, p. 65.
12. Lohia, *Marx, Gandhi and Socialism,* Ibid, p. 132.
13. *Ibid,* p. 133.
14. Upadhyaya: *Integral Humanism,* p. 67.

15. Gandhi: *Harijan,* 16.3.47.

16. Gandhi: *Harijan,* 31.3.46.

17. Pyarelal: *Towards New Horizons,* pp. 93-94

18. Lohia, *Marx, Gandhi and Socilism,* Ibid, p. 234.

19. Upadhyaya: *Bharatiya Artha-Niti,* p. 43.

20. *Ibid,* p. 19.

21. *Ibid,* pp. 23-73, Particularly pp. 72-73

22. *Ibid,* p. 58, see also p. 22.

23. Pyarelala, *Ibid,* pp. 93-94.

24. Lohia, *Marx, Gandhi and Socialism,* Ibid, p. 489

25. Haris Wofford Jr. *: Lohia and America Meet,* p. 151.

26. Lohia, *Marx, Gandhi and Socialism.* pp. 156 & 157.

27. *Pt. Deendayal Upadhyaya : A Profile* (ed.) Sudhaker Raje, p. 186.

28. *Ibid,* pp. 186-187. see also *Bharatiya Arth-Niti,* p. 122.

29. Gandhi: *Harijan*, 27.1.1940

30. Gandhi: *Harijan*, 22.6.1935.

31. Lohia, *Marx, Gandhi and Socialism,* p 496.

32. *Ibid*, p. 401.

33. *Ibid*, p. 406.

34. Upadhyaya: *Integral Humanism,* p. 72.

35. Upadhyaya: *Bharatiya Artha-Niti,* pp. 124-125.



# ೧೪. ಮಾರ್ಕ್ಸ್ ಮತ್ತು ದೀನ್ ದಯಾಳ್ : ಎರಡು ಚಿಂತನ ಧಾರೆಗಳು

**ಡಿ.ಬಿ. ಠೇಂಗಡಿ***

## ೧. ಮಾರ್ಕ್ಸ್

ದೀನ್ ದಯಾಳ್ ಉಪಾಧ್ಯಾಯರಂತೆ ಕಾರ್ಲ್‌ಮಾರ್ಕ್ಸ್ ಸಹ ಒಬ್ಬ ಮೂಲಚಿಂತಕರು. ಮಹಾನ್ ಚಿಂತಕರು. ಉಳಿದ ಚಿಂತಕರಂತೆ ಅವರೂ ಸಹ ವಿವಿಧ ಮೂಲಗಳನ್ನು ಬಳಸಿಕೊಂಡರು. ತಮ್ಮ ವಿಶ್ವವಿಜ್ಞಾನ ರಚನೆಗೆ ಅವರು ನ್ಯೂಟನ್ ಮತ್ತು ಡಾರ್ವಿನ್ನರ ಸಂಶೋಧನೆಗಳನ್ನು ಬಳಸಿಕೊಂಡರು. ಅವರು ಡಾರ್ವಿನ್ನನ ನೈಸರ್ಗಿಕ ಆಯ್ಕೆ ನಿಯಮವನ್ನು ತಿರಸ್ಕರಿಸಿದರು. ಪ್ಲೇಟೋ ಸಿದ್ಧಾಂತಗಳಲ್ಲದೆ ಮಧ್ಯಯುಗೀನ ಪಾಷಂಡಿಗಳಾದ ನಿಕ್ಲಾಸ್ ಸ್ಮಾರ್ಕ್, ಥಾಮಸ್ ಮೂರೆ, ಕ್ಯಾಂಪ್‌ನೆಲ್ಲ. ವಿನ್‌ಸ್ಟ್ಯಾನ್ಲಿ, ವೆಸ್ರಾಸ್, ಫಾಂಟ್‌ನೆಲ್ಲೆ, ಮೆಸ್ಲಿಯರ್, ಮೊರೆಲ್ಲೀ, ಡೆಡ್ರಾಯ್ಟ್, ಡೆಶ್‌ಚಾಂಪ್ಸ್ ಮೊದಲಾದವರಿಂದ ವಿವಾಹ, ಕುಟುಂಬ, ಧರ್ಮ, ಖಾಸಗಿ ಆಸ್ತಿ ಮೊದಲಾದ ವಿಚಾರಗಳಲ್ಲಿ ಪ್ರಭಾವಿತರಾದರು. ಹೆಗಲಿಯನ್ ಜಿಜ್ಞಾಸೆಯನ್ನು ಬಳಸಿಕೊಂಡರು. ಅದನ್ನು ತಳಕಂಬಳಕ ಮಾಡಿದರು. ಹೆಗಲಿಯನ್ ವಾದವನ್ನು ತಲೆಕೆಳಗು ಮಾಡಲು ಫೆರ್ಬಾಚನ 'ಪರಿವರ್ತನ ವಿಮರ್ಶೆ' ಯ ಪದ್ಧತಿಯನ್ನು ಬಳಸಿಕೊಂಡರು. ಎಲ್ಲಕ್ಕಿಂತ ಹೆಚ್ಚಾಗಿ, ರಾಜಕಾರಣದ ಆರ್ಥಿಕ ವ್ಯಾಖ್ಯಾನ, ವಂಶಪಾರಂಪರ್ಯವಾಗಿ ಬರುವ ಆಸ್ತಿ ಪದ್ಧತಿ ಮೊದಲಾದ ವಿಷಯಗಳ ವ್ಯಾಖ್ಯಾನದಲ್ಲಿ ಮ್ಯಾಚಿವಿಲೆ, ಲಾಕೆ, ಜೇಮ್ಸ್ ಮೆಡಿಸ್ ಇವರುಗಳು, ಬಂಡವಾಳಶಾಹಿ ವಿರುದ್ಧ ಮಾರ್ಕ್ಸ್ ತೀರ್ಮಾನಗಳಲ್ಲಿ ಅವರ ಕೈಯೊಳಗಣ ಅಸ್ತ್ರಗಳಾಗಿದ್ದರು. ಅವರ ವೈಜ್ಞಾನಿಕ ಸೂತ್ರೀಕರಣಕ್ಕೆ ಲ್ಯಾಸ್ಲೆಯ ಆರ್ಥಿಕ ಅಭಿಪ್ರಾಯಗಳು ಅನುಕೂಲಕರವಾಗಿ ಒದಗಿಬಂದವು. ತಮ್ಮ ಆರ್ಥಿಕ ನಿಯಂತ್ರಣ ವಾದವನ್ನು

* ಘನ ಚಿಂತಕರು ಮತ್ತು ಭಾರತೀಯ ಮಜ್ದೂರ್ ಸಂಘ, ಭಾರತೀಯ ಕಿಸಾನ್ ಸಂಘಗಳ ಸಂಸ್ಥಾಪಕರು.

ಸಮಾಜೋ ಆರ್ಥಿಕ ಸಮಸ್ಯೆಯ ಸ್ಥಾನಮಾನಕ್ಕೇರಿಸಲು ಪ್ರಾಯ್ಡನ ಅನಾಥ ಪ್ರಜ್ಞೆ, ಅಸ್ತಿತ್ವವಾದಗಳು ನೆರವಿಗೆ ಬಂದವು. 'ತಾಟಸ್ಥ್ಯ ನೀತಿ' ಪದ್ಧತಿ ಹಾಗೂ ಆ್ಯಡಮ್‌ಸ್ಮಿಥ್‌ನ 'ದಿ ವೆಲ್ತ್ ಆಫ್ ನೇಷನ್ಸ್" ವಿರುದ್ಧ ದಾಳಿಗೆ ಸಮಕಾಲೀನ ಬ್ರಿಟಿಷ್ ಅರ್ಥ ವ್ಯವಸ್ಥೆಯ ವಸ್ತುಸಂಗತಿಗಳನ್ನು ಮಾರ್ಕ್ಸ್ ಕ್ರೋಢೀಕರಿಸಿದರು.

ಆದರೆ ಮಾರ್ಕ್ಸ್ ಕಣ್ಣು ಮುಚ್ಚಿಕೊಂಡು ಎಲ್ಲವನ್ನೂ ಸ್ವೀಕರಿಸುತ್ತಿರಲಿಲ್ಲ. ಮಾರ್ಕ್ಸ್ ಪ್ರತಿಭೆ, ಧೀಮಂತಿಕೆಗಳು ಎಲ್ಲ ವಿಚಾರಗಳನ್ನೂ ಪರಿವರ್ತಿಸಿಬಿಡುತ್ತಿದ್ದವು. ಅವನ ಕೈಸೇರಿದ್ದು ಯಾವುದೂ ಅದರ ಮೂಲಸ್ವರೂಪದಲ್ಲಿ ಉಳಿಯಲೇ ಇಲ್ಲ. ಅರ್ಥಶಾಸ್ತ್ರ, ಸಮಾಜ ಶಾಸ್ತ್ರ, ರಾಜಕೀಯ ಸಿದ್ಧಾಂತ, ಇತಿಹಾಸ, ತತ್ತ್ವಶಾಸ್ತ್ರ ಇವೆಲ್ಲವನ್ನೂ ಮಾರ್ಕ್ಸ್ ತನ್ನ ವ್ಯಾಪಕ ಹಾಸು-ಬೀಸಿನ ವಿಶ್ಲೇಷಣೆಯಲ್ಲಿ ಬಳಸಿದ ಇವೆಲ್ಲವನ್ನೂ ತನ್ನದೇ ಆದ ಮೂಲ ಚಿಂತನ ವಿನ್ಯಾಸವಾಗಿ ಸಂಯೋಜಿಸಿದ. ಇಂಗ್ಲಿಷ್‌ನ ಪ್ರಯೋಜನ ತತ್ವ, ಫ್ರೆಂಚ್ ಸಮಾಜವಾದ, ಜರ್ಮನಿಯ ತೀವ್ರಗಾಮಿತ್ವ– ಇವೆಲ್ಲವನ್ನೂ ತನ್ನ ಮೂಲ ಚೌಕಟ್ಟಿನೊಳಕ್ಕೆ ಸೂಕ್ತವಾಗಿ ಸೇರಿಸಿಕೊಂಡ. ಏಕೈಕ ಧ್ಯೇಯ ಒಂದರ ಕೈಂಕರ್ಯಕ್ಕಾಗಿ ತಹಲ್‌ವರೆಗಿನ ಎಲ್ಲ ಜ್ಞಾನವನ್ನೂ ಬಳಸಿಕೊಂಡ.

ನ್ಯಾಯವಾಗಿ ನೋಡಿದರೆ, ಮಾರ್ಕ್ಸ್‌ನನ್ನು ಚಿಂತನೆಯ ಕ್ರಮದಿಂದಲೇ ಧರ್ಮವೊಂದನ್ನು ರೂಪಿಸಿದ ಅವನ ಅನುಯಾಯಿಗಳೊಂದಿಗೆ ಗುರುತಿಸಬಾರದು. ನಿಜವಾದ ವಿಜ್ಞಾನ ಮಾರ್ಕ್ಸ್ ಜಿಜ್ಞಾಸೆಯಿಂದಲೇ ಪ್ರಣೀತವಾಗಬೇಕು ಮತ್ತು ಮಾರ್ಕ್ಸ್ ಜಿಜ್ಞಾಸೆಯನ್ನು ಮತ್ತಷ್ಟು ಸಮರ್ಥಿಸಬೇಕು ಎನ್ನುವ ಮಟ್ಟಕ್ಕೆ ಹೋಗಿದ್ದರು ಅವನ ಅನುಯಾಯಿಗಳು. ಎಲ್ಲ ವಿಜ್ಞಾನಿಗಳೂ ದ್ವಂದ್ವಾತ್ಮಕ ವಸ್ತುವಾದದ ಅಪ್ರಜ್ಞಾಪೂರ್ವಕ ಪಾಲಕರು ಎಂದು ವಾದಿಸುವ ಹಾಸ್ಯಾಸ್ಪದ ಪ್ರಯತ್ನಗಳನ್ನೂ ಇವರು ಮಾಡುತ್ತಿದ್ದಾರೆ.

ಕಟ್ಟಾ ಮಾರ್ಕ್ಸ್ ವಾದಿಗಳ ಪ್ರಕಾರ, ಮಾರ್ಕ್ಸ್ ದ್ವಂದ್ವಾತ್ಮಕ ವಸ್ತುವಾದ ನಿರೂಪಿಸದೇ ಹೋಗಿದ್ದಲ್ಲಿ ಫೆರಾಡೇನ ವಿದ್ಯುತ್ಕಾಂತೀಯ ಪ್ರೇರಣೆ ಶೋಧ, ವಾನ್ ಮೇಯರನ ಶಕ್ತಿಸ್ಥಾಯಿತ್ವ ಅನ್ವೇಷಣೆ, ಐನ್‌ಸ್ಟೈನ್‌ನ ಸಾಪೇಕ್ಷ ಸಿದ್ಧಾಂತ ಅಥವಾ ಕ್ವಾಂಟಮ್ ಸಿದ್ಧಾಂತ ಇದಾವುದೂ ಸಾಧ್ಯವಾಗುತ್ತಿರಲಿಲ್ಲ. ಸಾಪೇಕ್ಷ ಸಿದ್ಧಾಂತ ಹಾಗೂ ಕ್ವಾಂಟಮ್ ಸಿದ್ಧಾಂತಗಳಿಗೂ 'ದಾಸ್‌ಕ್ಯಾಪಿಟಲ್' ಮೂಲ ಎನ್ನುತ್ತಾರೆ ಈ ಅಂಧಾಭಿಮಾನಿಗಳು.

ಆದರೆ ಸಾಮಾನ್ಯವಾಗಿ ಪಾಶ್ಚಾತ್ಯ ವಿಜ್ಞಾನಿಗಳು ಮಾರ್ಕ್ಸ್‌ವಾದವನ್ನು ಅಲಕ್ಷಿಸುತ್ತಾರೆ ಅಥವಾ ದ್ವಂದ್ವಾತ್ಮಕ ವಸ್ತುವಾದವನ್ನು ಅದು ಆಧುನಿಕ ವಿಜ್ಞಾನದ ತತ್ತ್ವ ಶಾಸ್ತ್ರವಲ್ಲ ಎಂದು ತಿರಸ್ಕರಿಸುತ್ತಾರೆ. ಕೆಲವು ವಿಜ್ಞಾನಿಗಳು, ಇಲ್ಲಿಯವರೆಗೆ ಯಾವುದೇ ಪ್ರಮುಖ ವೈಜ್ಞಾನಿಕ ಸಂಶೋಧನೆಗೆ ಕಾರಣೀಭೂತವಾಗದಿರುವ ದ್ವಂದ್ವಾತ್ಮಕ ವಸ್ತುವಾದದ ವಿರೋಧಿಗಳಾಗಿದ್ದಾರೆ. ಆದರೆ ಅನುಯಾಯಿಗಳ



ಸಮರ್ಥನೆ ಮಾರ್ಕ್ಸ್‌ನ ವೈಜ್ಞಾನಿಕ ವಿಧಾನದ ಚಿಂತನೆಗೆನುಗುಣವಾಗಿಲ್ಲ. ಆದರೆ ನಮ್ಮ ಆಸಕ್ತಿ ಇರುವುದು ಮಾರ್ಕ್ಸ್‌ನ ಮೂಲ ಚಿಂತನೆ ಬಗ್ಗೆ, ಅವನ ಅನುಯಾಯಿಗಳ ವ್ಯಾವಹಾರಿಕ, ಪ್ರಾಯೋಗಿಕ ವ್ಯಾಖ್ಯಾನಗಳ ಬಗ್ಗೆಯಲ್ಲ.

ಯಾವುದೇ ಚಿಂತಕನೂ ತನ್ನ ಚಿಂತನ ಕ್ರಮಕ್ಕೆ ಸಮಕಾಲೀನ ಮಾನವ ಜ್ಞಾನವನ್ನು ಆಧಾರವಾಗಿಟ್ಟುಕೊಳ್ಳಬಹುದು. ಆದರೆ ಮಾನವಜ್ಞಾನದ ಎಲ್ಲೆಗಳು ಸದಾಕಾಲ ವಿಸ್ತರಿಸುತ್ತಲೇ ಇರುತ್ತವೆ. ಆದ್ದರಿಂದ ಇವತ್ತಿನ ಅಬಾಧಿತ ಸತ್ಯ ನಾಳೆಯ ಸಾಪೇಕ್ಷ ಸತ್ಯವಾಗಿರುತ್ತದೆ. ಉದಾಹರಣೆಗೆ ಹತ್ತೊಂಬತ್ತನೆ ಶತಮಾನದ ವಿಜ್ಞಾನದ ಮೂಲಾಧಾರಗಳು ಇಪ್ಪತ್ತನೆ ಶತಮಾನದ ವಿಜ್ಞಾನದ ಬೆಳಕಿನಲ್ಲಿ ಹಳತಾಗಿ ಕಾಣುತ್ತವೆ.

**೨. ದೀನ್ ದಯಾಳ್**

ಬಹಳಷ್ಟು ಹಿಂದೆಯೇ ಅರ್ನಾಲ್ಡ್ ಟಾಯನ್ಬಿ ಹೀಗೆ ಹೇಳಿದ್ದರು.

> **"ತಂತ್ರಜ್ಞಾನ, ವಿಜ್ಞಾನ, ಭಾಷೆ, ಸಾಹಿತ್ಯ, ಆಡಳಿತ, ಕಾನೂನು ಕ್ಷೇತ್ರಗಳಲ್ಲಿ ತುಂಬ ಪರಕೀಯವಾಗಿದ್ದ ಪಾಶ್ಚಾತ್ಯ ಸಂಸ್ಕೃತಿಯನ್ನು ಅಳವಡಿಸಿಕೊಂಡ ಹಿಂದೂಗಳು ಪಾಶ್ಚಾತ್ಯ ಶೈಲಿಯನ್ನು ದೇಶಿಯ ಜೀವನ ಶೈಲಿಗೆ ಹೊಂದಿಸಿಕೊಳ್ಳುವುದರಲ್ಲಿ ರಷ್ಯನ್ನರಿಗಿಂತ ಹೆಚ್ಚು ಯಶಸ್ವಿಯಾಗಿರುವುದು ಮೇಲ್ನೋಟಕ್ಕೇ ಎದ್ದುಕಾಣುತ್ತದೆ. ಈ ಪಾಶ್ಚಾತ್ಯ ಜೀವನ ಶೈಲಿ ರಷ್ಯನ್ನರಿಗಿಂತ ಭಾರತೀಯರಿಗೆ ಹೆಚ್ಚು ಪರಕೀಯವಾಗಿತ್ತು. ಆದಾಗ್ಯೂ ಹಿಂದೂಗಳ ಆತ್ಮ ಬಿಕ್ಕಟ್ಟು ತುಂಬ ತೀವ್ರವಾಗಿದ್ದಿರಬೇಕು ಎಂದೇ ಅವರು ಇದನ್ನು ಹೊರಹಾಕಲು ಅವರು ಮಾರ್ಗೋಪಾಯಗಳನ್ನು ಕಂಡುಕೊಂಡರು."**
>
> **"ಆಶ್ಚರ್ಯರಾಗಿ ಹಿಂದೂ ಆತ್ಮಗಳು ಎಂಥ ನೆಮ್ಮದಿ ಪಡೆಯುತ್ತಾರೆಂಬ ವಿಚಾರ ಏನೇ ಆಗಿರಲಿ, ಅವರಿಗೆ ಪಾಶ್ಚಾತ್ಯ ನಾಗರಿಕತೆಯ ಪರಿಣಾಮಗಳಿಂದ ಬಿಡುಗಡೆ ಇಲ್ಲ. ಕಮ್ಯುನಿಸ್ಟ್ ಸಿದ್ಧಾಂತದ ಬಾಗಿಲುಗಳನ್ನು ತೆರೆಯುವ, ಕಮ್ಯುನಿಸ್ಟ್ ಪ್ರಭಾವಕ್ಕೆ ತೆರೆದುಕೊಳ್ಳುವ ಹಿಂದೂಗಳಿಗೆ ಪಾಶ್ಚಾತ್ಯ ನಾಗರಿಕತೆಯಿಂದ ಮುಕ್ತಿ ಇಲ್ಲ, ನೆಮ್ಮದಿ– ಸಮಾಧಾನಗಳಿರುವುದಿಲ್ಲ. ಏಕೆಂದರೆ, ಕಮ್ಯುನಿಸಂ ರಷ್ಯದ ಮಾಜಿ ಸಂಪ್ರದಾಯಸ್ಥ ಕ್ರಿಶ್ಚಿಯನ್ ಒಬ್ಬ ರೂಢಿಸಿಕೊಂಡ ಪಾಷಂಡ ಅಭಿಪ್ರಾಯ. ಕಮ್ಯುನಿಸಂ ಸಹ, ಪಾಶ್ಚಾತ್ಯ ಜೀವನ ಶೈಲಿಯಂತೆ ಗ್ರೀಕ್ ಮಹೂದಿ ಪರಂಪರೆಯ ಅವಿಭಾಜ್ಯ ಅಂಗ. ಹಾಗೂ ಈ ಇಡೀ ಪಾಶ್ಯಾತ್ಯ ಸಾಂಸ್ಕೃತಿಕ ಪರಂಪರೆ ಹಿಂದೂ ಚೇತನಕ್ಕೆ ಪರಕೀಯವಾದದ್ದು"**

ದೀನ್ ದಯಾಳಜಿಯವರು ಪಾಶ್ಚಾತ್ಯ ಚಿಂತನ ಧಾರೆಯ ಸಂಪೂರ್ಣ ಪರಿಚಯ ಹೊಂದಿದ್ದರು ಎಂಬುದನ್ನು ನಾವಿಲ್ಲಿ ನೆನಪಿಡಬೇಕು.

ಮಾರ್ಕ್ಸ್ ಸಿದ್ಧಾಂತವಲ್ಲದೆ (ಎಡ್ವರ್ಡ್ ಬೆರ್‌ಸ್ಟೈನ್‌ರಿಂದ ಟಿಟೋವರೆಗೆ ಪರಿಷ್ಕರಣವಾದಿಗಳ ವಿವಿಧ ಅವತರಣಿಕೆಗಳೂ ಸೇರಿದಂತೆ), ರಾಬರ್ಟ್ ಓವೆನ್, ಫೋರಿಯರ್, ಕ್ಯಾಬೆಟ್ ಮೊದಲಾದವರ ಪ್ರತ್ಯಕ್ಷ ಅಥವಾ ಪರೋಕ್ಷ ಸಾಮಾಜಿಕ

ಪ್ರಯೋಗಗಳ ಪರಿಚಯ ಪಂಡಿತ್‌ಜಿ ಅವರಿಗಿತ್ತು. ಸೈಂಟ್‌ಸೈಮನ್ನನ ಸಿದ್ಧಾಂತಗಳು, ಗ್ರಾಚಸ್ ಬಬೂಫನ ಬಂಡಾಯ; ಬ್ಲಾಂಕ್ವೆಯ 'ಅಲ್ಪಸಂಖ್ಯಾತ ಪ್ರಜ್ಞಾ ಸಿದ್ಧಾಂತ' : ಲೂಯಿ ಬ್ಲಾಂಕ್‌ನ ವಿಕಸನಶೀಲ ಸಮಾಜವಾದ; ಶ್ಲೂಜೆ ಡೆಲಿಸಿಚ್‌ನ 'ಸ್ವಸಹಾಯ' ಸಿದ್ಧಾಂತ; ಜರ್ಮನಿಯ ತ್ರಿಮೂರ್ತಿಗಳಾದ ಬ್ರೂನೊ ಬಾವರ್, ಮೋಸೆಸ್ ಹೆಸ್ ಮತ್ತು ಕರಾಲ್‌ಗ್ರನ್ ಅವರ 'ನೈಜಸಮಾಜವಾದ' ಇವೆಲ್ಲವನ್ನು ಅವರು ಚೆನ್ನಾಗಿ ಅರಿತಿದ್ದರು. ಅವರು ಲ್ಯಾಸ್ಲೆ, ಸಿಸ್ಮೋಂಡಿ, ಲಾಮೆನ್ನಿಯಾಸ್ ಮತ್ತು ಪ್ರೌಢಾನ್ ಅವರುಗಳ ಅಧ್ಯಯನ ಮಾಡಿದ್ದರು. ಮಾರ್ಕ್ಸ್ ಪೂರ್ವ ಮತ್ತು ಮಾರ್ಕ್ಸೋತ್ತರ ಐರೋಪ್ಯ ಚಿಂತನಕ್ರಮವನ್ನು ಪಂಡಿತ್‌ಜಿ ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದ್ದರು. ಈ ವಿಶ್ಲೇಷಣೆಯಲ್ಲಿ ಬಂಡವಾಳ ಶಾಹಿಯಿಂದ ಅರಾಜಕತೆವರೆಗಿನ ಹಲವು ವ್ಯವಸ್ಥೆಗಳು, ಸಮಾಜವಾದದ ವಿವಿಧ ಮಾದರಿಗಳೂ ಸೇರಿವೆ.

ಭಾರತೀಯ ಚಿಂತನ ಪರಂಪರೆಯ ವಿವಿಧ ಧಾರೆಗಳ ಪರಿಚಯಹೊಂದಿದ್ದದ್ದು ದೀನ್ ದಯಾಳಜಿ ಅವರ ವಿಶೇಷ ಗಳಿಕೆಯಾಗಿತ್ತು. ಮನುಕುಲಕ್ಕೆ ಹಿಂದೂ ಋಷಿಗಳು ನೀಡಿರುವ ವಿಶಿಷ್ಟ ಉಡುಗೊರೆಯಾದ "ಧರ್ಮ"ದ ಸಾಧಕ ಬಾಧಕಗಳನ್ನು, ಪರಿಣಾಮಗಳನ್ನು ಅವರು ಸಂಪೂರ್ಣವಾಗಿ ಗ್ರಹಿಸಿದ್ದರು. ಮಾರ್ಕ್ಸ್ ಸಿದ್ಧಾಂತದ ಮೂಲ ಸೂತ್ರಗಳನ್ನು ವೇದಾಂತದಲ್ಲಿ ಮುಂಗಾಣಲಾಗಿದೆ ಎನ್ನುವ ಶ್ರೀ ಡಾಂಗೆ ಮತ್ತು ಶ್ರೀ ಬನಿ ದೇಶಪಾಂಡೆಯವರ ಪ್ರತಿಪಾದನೆಗಳು ವಿವಾದಾತ್ಮಕವಾಗಿರಬಹುದು. ಆದರೆ ಕಾರ್ಲ್ ಮಾರ್ಕ್ಸ್‌ಗೆ ಹಿಂದೂ ಜೀವನ ಪದ್ಧತಿ ಹಾಗೂ ಬ್ರಹ್ಮಾಂಡದ ಬಗ್ಗೆ ತಿಳಿದಿದ್ದರೆ ಪೂರ್ಣ ಪರಿವರ್ತನೆಗಳಾಗುತ್ತಿದ್ದವು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿರಲಾರದು.

ವೈವಿಧ್ಯತೆಯ ಮಧ್ಯೆ ಏಕತೆಯ ಸಾಧನೆ, ಅಖಂಡ ಶಿಲೆಯಂತೆ ಆಧಾರವಾಗಿರುವ ಅದ್ವೈತ ದರ್ಶನ; ಭೌತ ಮತ್ತು ಅಭೌತಗಳು, ಐಹಿಕ–ಪಾರಮಾರ್ಥಿಕಗಳು ಇವುಗಳ ದ್ವಂದ್ವ ವಿವರಣೆಯ ಅರಿವು; 'ಸ್ಯಾದ್ವಾದ' ಪರಂಪರೆಯಲ್ಲಿ ಸತ್ಯದ ಗ್ರಹಿಕೆ; ಅನಂತ ವಿಶ್ವದ ನಿಯಮಾನುಸಾರ ಮಾನವನ ತತ್‌ಕ್ಷಣ ಸಮಸ್ಯೆಗಳನ್ನು ಪರಿಹರಿಸುವ ಕಲೆ; ಇವೇ ಮೊದಲಾದವು ಹಿಂದೂ ಧರ್ಮದ ಕೊಡುಗೆಗಳು. ಇವು ಮಾರ್ಕ್ಸ್ ಚಿಂತನೆಗೆ ಮೌಲಿಕವಾದ ಹೊಸ ಆಯಾಮಗಳನ್ನು ಜೋಡಿಸುತ್ತಿದ್ದವು ಹಾಗೂ ಅದರಲ್ಲಿ ಮಾರ್ಪಾಟುಗಳನ್ನು ಮಾಡುತ್ತಿತ್ತು. ಪಂಡಿತ್‌ಜೀ ಮತ್ತು ಮಾರ್ಕ್ಸ್ ಇಬ್ಬರೂ ಪ್ರಥಮ ಪಂಕ್ತಿಯ ಮಾನವತಾವಾದಿಗಳು. ಮಾನಸಿಕ ಹಿನ್ನೆಲೆಯ ಕಾರಣಗಳಿಂದಾಗಿ ಅವರುಗಳ ಮಾನವತಾವಾದ ವಿವಿಧ ರೂಪಗಳನ್ನು, ಆಕೃತಿಗಳನ್ನು ಪಡೆದಿವೆಯಾದರೂ ಇಬ್ಬರ ಸ್ಫೂರ್ತಿ ಮೂಲಗಳು ಒಂದೇ, ಸಮಕಾಲೀನ ಪ್ರಪಂಚದ ಸನ್ನಿವೇಶ–ಸಂದರ್ಭಗಳೂ ಒಂದೇ.



**೩. ಮಾರ್ಕ್ಸ್‌ನ ಗುರಿಗಳು**

**ಮಾರ್ಕ್ಸ್ ಪ್ರಕಾರ :**

> **"ಮಾನವನ ಗುರಿ ಎಂದರೆ ಮಾನವಕುಲದ ಸಫಲತೆ. ಮಾನವ ತನ್ನನ್ನ ಅರ್ಥಮಾಡಿಕೊಳ್ಳುವುದು. ಅಂದರೆ ಯಾವ ಯಾವ ಸಂಬಂಧಗಳು ಇತ್ಯಾದಿ ಯಾವುದೆಲ್ಲವೂ ಮಾನವನನ್ನು ಅಸಹಾಯಕನನ್ನಾಗಿಸಿವೆಯೋ, ಗುಲಾಮನನ್ನಾಗಿಸಿವೆಯೋ ಚಾರಿತ್ರ್ಯ ಹೀನನ್ನಾಗಿಸಿವೆಯೋ ಆ ಸಕಲ ಶಕ್ತಿಗಳನ್ನೂ ವಿಧಿ ಪೂರ್ವಕವಾಗಿ ಮೂಲೋತ್ಪಾಟನಗೊಳಿಸುವುದೇ ಮಾನವನ ಸಫಲತೆಯ ಮುಖ್ಯ ಗುರಿಯಾಗಿದೆ. ಈ ಶಕ್ತಿಗಳ ಮೂಲೋತ್ಪಾಟನೆ ಮಾನವ ಕುಲದ ಸಫಲತೆಯ ಕಡ್ಡಾಯವಾದ ಗುರಿಯಾಗಿದೆ."**

ಮಾರ್ಕ್ಸ್ ಅಮಾನವೀಕರಣಕ್ಕೆ ಮಂಗಳ ಹಾಡಲು ಪ್ರಯತ್ನಿಸಿದರು ಹಾಗೂ ಬಂಡವಾಳಶಾಹಿ ವ್ಯವಸ್ಥೆಯ ಸ್ವಯಂ ಪರಕೀಯ ಮನೋಭಾವವನ್ನು ಕೊನೆಗಾಣಿಸಲು ಪ್ರಯತ್ನಿಸಿದರು. "ಮಾನವ ಈ ಪ್ರಪಂಚದಲ್ಲಿ ಅಮಾನವನಾಗಿ ಬದುಕುತ್ತಿದ್ದಾನೆ" ಎನ್ನುವುದು ಅವರ ವಿಷಾದಪೂರ್ಣ ಶೋಧವಾಗಿತ್ತು. ಅವರಿಗೆ ಕಮ್ಯುನಿಸ್ಟ್ ಸಿದ್ಧಾಂತವೆಂದರೆ :

> **"ಮಾನವನ ಉದ್ಧಾರ ಮತ್ತು ಪುನಶ್ಚೇತನದ ಪ್ರಕ್ರಿಯೆಯಲ್ಲಿ ಐತಿಹಾಸಿಕ ಬೆಳವಣಿಗೆಯ ಒಂದು ಘಟ್ಟ – ಕಮ್ಯುನಿಸ್ಟ್ ಸಿದ್ಧಾಂತ"**

ಮತ್ತೆ ಅವರ ಮಾತುಗಳನ್ನೇ ಉಲ್ಲೇಖಿಸುವುದಾದರೆ :

> **"ಕಮ್ಯುನಿಸ್ಟ್ ಸಿದ್ಧಾಂತದ ಗುರಿ ಸುಸ್ಥಿರ ಸರ್ಕಾರದ ರಚನೆಯಲ್ಲ. ನಮಗೆ ಕಮ್ಯುನಿಸಂ ಎಂದರೆ ಸುಭದ್ರ ಸರ್ಕಾರವಲ್ಲ. ವಾಸ್ತವ ಪರಿಸ್ಥಿತಿ ಇದಕ್ಕೆ ಹೊಂದಿಕೊಂಡು ಹೋಗಬೇಕು ಎನ್ನುವ ರಚನೆಯಲ್ಲ. ಇವತ್ತಿನ ಎಲ್ಲ ವಿದ್ಯಮಾನಗಳನ್ನೂ ಎಲ್ಲ ಸ್ಥಿತಿಗತಿಗಳನ್ನೂ ನಿಷೇಧಿಸುವ ನಿಜವಾದ ಆಂದೋಲನವನ್ನು ನಾವು ಕಮ್ಯುನಿಸಂ ಎಂದು ಕರೆಯುತ್ತೇವೆ."**

ಸಮಾಜದ ಉನ್ನತ ಮಾದರಿಯ ತತ್ತ್ವಗಳೇನು? ಮಾರ್ಕ್ಸ್ ದೃಷ್ಟಿಯಲ್ಲಿ , "ಪ್ರತಿ ವ್ಯಕ್ತಿಯ ಸರ್ವಾಂಗೀಣ ಪ್ರಗತಿ". ಸಂಪತ್ತು ಒಂದು ಧ್ರುವದಲ್ಲಿ ಶೇಖರಣೆಗೊಂಡರೆ ಏಕಕಾಲದಲ್ಲಿ ಇದಕ್ಕೆ ವಿರುದ್ಧವಾದ ಧ್ರುವದಲ್ಲಿ ಬಡತನವೂ ಗುಡ್ಡದೋಪಾದಿಯಲ್ಲಿ ರಾಶಿಗೂಡಿರುತ್ತದೆ. ದುಡಿಮೆ. ಚಿತ್ರಹಿಂಸೆ, ಗುಲಾಮಗಿರಿ, ಕ್ರೌರ್ಯ, ನೈತಿಕ ಅವನತಿ ಇವೆಲ್ಲ ರಾಶಿರಾಶಿಯಾಗಿ ಬೆಳೆದಿರುತ್ತವೆ. ಹಣ ಮಾನವನ ದುಡಿಮೆ ಮತ್ತು ಅಸ್ತಿತ್ವಗಳ ಪರಭಾರಿಕೆಯ ತಿರುಳು. ಬಂಡವಾಳದ ಗರಿಷ್ಠ ಸ್ವಯಂಅಭಿವೃದ್ಧಿ, ವಿಸ್ತರಣೆಗಳೇ ಬಂಡವಾಳಶಾಹಿ ಉತ್ಪಾದನೆಯ ಗುರಿ ಮತ್ತು ಉದ್ದೇಶಗಳು. ತನ್ಮೂಲಕ ಸಾಧ್ಯವಾದಷ್ಟೂ ಅತ್ಯಧಿಕ ಮಿಗುತಾಯ ಮೌಲ್ಯವನ್ನು ಸೃಷ್ಟಿಸುವುದು, ಈ ಪ್ರಕಾರ ಬಂಡವಾಳಶಾಹಿ ಕಾರ್ಮಿಕ ಶಕ್ತಿಯನ್ನು ಶೋಷಿಸುವುದು

ಇವೇ ಬಂಡವಾಳಶಾಹಿ ಉತ್ಪಾದನೆಯ ಗುರಿಗಳಾಗಿವೆ. ಮಾನವನನ್ನು ಆರ್ಥಿಕ ಶೃಂಖಲೆಗಳಿಂದ ವಿಮುಕ್ತಗೊಳಿಸಬೇಕು, ಮಾನವ ಅಗತ್ಯಗಳ ಸಾಮ್ರಾಜ್ಯದಿಂದ ಮುಕ್ತನಾಗಿ ಸ್ವಾತಂತ್ರ್ಯದ ರಕ್ಷೆಯೊಳಕ್ಕೆ ಪ್ರವೇಶಮಾಡಬೇಕು ಎನ್ನುವುದು ಮಾರ್ಕ್ಸ್‌ನ ಆಕಾಂಕ್ಷೆಯಾಗಿತ್ತು.

ಎಂಗಲ್ಸ್ ಹೇಳುತ್ತಾನೆ:

> **"ಆದರ್ಶ ಪರಿಸ್ಥಿತಿಯಲ್ಲಿ ಉತ್ಪಾದಕ ದುಡಿಮೆ ಮಾನವನನ್ನು ಪರಾಧೀನ ಸ್ಥಿತಿಗೆ ದೂಡುವುದಿಲ್ಲ. ಬದಲು ಪ್ರತಿ ವ್ಯಕ್ತಿಗೂ ತನ್ನ ದೈಹಿಕ ಮತ್ತು ಮಾನಸಿಕ ಮತ್ತಿತರ ಸಾಮರ್ಥ್ಯಗಳ ಬಳಕೆಗೆ, ಅಭಿವೃದ್ಧಿಗೆ ಅವಕಾಶಗಳನ್ನು ಕಲ್ಪಿಸುವ ಮೂಲಕ ಮಾನವನ ವಿಮೋಚನಾ ಮಾರ್ಗವಾಗುತ್ತದೆ."**

ಮಾರ್ಕ್ಸ್ ಹೇಳುತ್ತಾನೆ:

> **''ವೃತ್ತಿ ಉದ್ಯೋಗಗಳ ಆಯ್ಕೆಗೆ ಮಾನವಕುಲದ ಕಲ್ಯಾಣ ಹಾಗೂ ಸ್ವಯಂಪರಿಪೂರ್ಣತೆಗಳೇ ಮುಖ್ಯ ಮಾರ್ಗದರ್ಶಕ ತತ್ವವಾಗಬೇಕು."**

ಇದನ್ನು ಸಾಧಿಸಲು ಪ್ರಸಕ್ತ ಇರುವ ಬಂಡವಾಳಶಾಹಿ ಮೌಲ್ಯಾಧಾರಿತ ವ್ಯವಸ್ಥೆಯನ್ನು ಬದಲಾಯಿಸಬೇಕು. ಈ ವ್ಯವಸ್ಥೆ ಶೋಷಕ ಮತ್ತು ಶೋಷಿತರಿಬ್ಬರನ್ನೂ ಕೆಡಿಸುತ್ತದೆ. ಕಾರ್ಮಿಕನಲ್ಲಿ ತಾನೊಂದು ಪ್ರಾಣಿಯಷ್ಟೆ ಎನ್ನುವ ಭಾವನೆ ಮೂಡಿಸುವ ಬಂಡವಾಳಶಾಹಿ ವ್ಯವಸ್ಥೆಯನ್ನು ನೆಲಸಮ ಮಾಡಬೇಕು. ತನ್ಮೂಲಕ ಕಾರ್ಮಿಕರನ್ನು ಪ್ರಾಣಿ ಲೋಕದಿಂದ ಮೇಲೆತ್ತಿ ನಿಜವಾದ ಮಾನವಸ್ಥಿತಿ ಇರುವ ಲೋಕಕ್ಕೆ ತರಬೇಕು. ಐಹಿಕ ಅಗತ್ಯಗಳ ಶೃಂಖಲೆಯಿಂದ ಮುಕ್ತನಾದ ಮಾನವನಿಗೆ ಸ್ವತಂತ್ರ ಸಾಮ್ರಾಜ್ಯದ ದರ್ಶನವಾಗುತ್ತದೆ. ಅಲ್ಲಿಂದಾಚೆಗೆ ತನ್ನದೇ ಆದ ಗುರಿಯುಳ್ಳ ಮಾನವಶಕ್ತಿಯ ಅಭಿವೃದ್ಧಿ ಶುರುವಾಗುತ್ತದೆ.

ಮಾರ್ಕ್ಸ್‌ನ ಸ್ಫೂರ್ತಿಮೂಲ ನೀತಿಶಾಸ್ತ್ರ ಹಾಗೂ ಅವನು ಅರ್ಥಶಾಸ್ತ್ರವನ್ನು ತನ್ನ ಸಾಧನವಾಗಿ ಬಳಸಿಕೊಂಡ ಎನ್ನುವುದನ್ನು ಎಚ್.ಎಸ್. ಸಿನ್ಹಾ ಅವರು "ಕಮ್ಯುನಿಸ್ಟ್ ಸಿದ್ಧಾಂತ ಮತ್ತು ಭಗವದ್ಗೀತೆ" ಗ್ರಂಥದಲ್ಲಿ ಸಮರ್ಥನೀಯವಾಗಿ ತೋರಿಸಿಕೊಟ್ಟಿದ್ದಾರೆ. ಆದರೆ ಪ್ರಪಂಚವನ್ನು ಬದಲಾಯಿಸುವ ಉತ್ಸಾಹದಲ್ಲಿ, ಅವನು ಪರಿಹಾರ ಮಾರ್ಗಗಳಿಗೆ ಸಂಬಂಧಿಸಿದಂತೆ ಕೈಗಾರಿಕಾ ಪ್ರಧಾನವಾದ ಪಾಶ್ಚಾತ್ಯ ಜಗತ್ತಿನ ಪ್ರಚಲಿತ ಸಂಕಟಗಳತ್ತ ಗಮನಹರಿಸಿದ. ರಾಕ್ಷಸಿ ಬಂಡವಾಳಶಾಹಿಗಳು ಮತ್ತು ಪಾಶ್ಚಾತ್ಯ ಜಗತ್ತಿನ ಕೇಡು ಸಂಕಟಗಳ ಪೂರ್ವ ಕಲ್ಪಿತ ಅಭಿಪ್ರಾಯಗಳು ಅವನ ಚಿಂತನೆಯಲ್ಲಿ ಮೇಲುಗೈ ಆದವು. ಅರಾಜಕ ಚರ್ಚ್‌ನ ಪ್ರಾಬಲ್ಯವೇ ಅಧಿಕವಾಗಿದ್ದ ಪಾಶ್ಚಾತ್ಯ ಜಗತ್ತಿನ ಸಂಕಟಗಳನ್ನು, ಪೀಡನೆಗಳನ್ನು ಗಮನದಲ್ಲಿಟ್ಟುಕೊಂಡು ಮಾರ್ಕ್ಸ್ ತನ್ನ ತೀರ್ಮಾನಗಳನ್ನು ಸಾಮಾನ್ಯೀಕರಿಸಿದ. ಅವನ ತೀರ್ಮಾನಗಳು ಆ ಕ್ಷಣದ ಸಾಂದರ್ಭಿಕ ಹಿನ್ನೆಲೆಯಲ್ಲಿ



ಭಾಗಶಃ ಸಮಂಜಸವಾಗಿದ್ದವು. ಅಂಗೀರಾರ್ಹವಾಗಿದ್ದವು. ಆದ್ದರಿಂದ ಪಾಶ್ಚಾತ್ಯ ಸಂಸದೀಯ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಕಾರ್ಯ ಸಾಧಕತೆ. ಪರಿಣಾಮಕಾರಿತ್ವಗಳಿಗೆ ಸಂಬಂಧಿಸಿದಂತೆ ಮಾರ್ಕ್ಸ್‌ನ ವಿವೇಚನೆಗಳಲ್ಲಿನ ದೋಷಗಳು. ಸಮಷ್ಟಿ ಪ್ರಜ್ಞೆಯ ಮಟ್ಟಕ್ಕೆ ಹೊಂದಿಕೊಳ್ಳುವ ಬಂಡವಾಳಶಾಹಿ ಸಾಮರ್ಥ್ಯ; ಶ್ರಮ ಜೀವಿಗಳ ಪಾತ್ರ; ರೈತ ಸಮುದಾಯದ ಶಕ್ತಿಸಾಮರ್ಥ್ಯಗಳು ಒಂದು ಕುಟುಂಬವಾಗಿ, ಒಂದು ರಾಷ್ಟ್ರವಾಗಿ ಸಾಮಾಜಿಕ ವ್ಯವಸ್ಥೆಯ ಅಂತರ್ಗತಶಕ್ತಿ; – ಇವುಗಳಿಗೆ ಸಂಬಂಧಿಸಿದ ಅವನ ದೋಷಪೂರಿತ ವಿವೇಚನೆಗಳಿಗೆ, ತೀರ್ಮಾನಗಳಿಗೆ ಪ್ರಪಂಚವನ್ನು ಬದಲಾಯಿಸುವ ಉತ್ಸಾಹ ಹಾಗೂ ಪಾಶ್ಚಾತ್ಯ ಜಗತ್ತನ್ನು ಕುರಿತ ಮುನ್ನೋಲವು ಪೂರ್ವಗ್ರಹಗಳೇ ಕಾರಣ. ಸಮತೂಕವಿಲ್ಲದ, ಏರುಪೇರಾದ ಪೂರ್ವ ಕಲ್ಪನೆಗಳು, ಪೂರ್ವಾಗ್ರಹಗಳು ಹೊರತಾಗಿ ನಿಶ್ಚಯವಾಗಿಯೂ ಮಾರ್ಕ್ಸ್‌ಗೆ ಮಾನವಕುಲದ ಸಮಸ್ಯೆಗಳನ್ನು ಕುರಿತು ಸಮ್ಯಕ್ ಚಿಂತನ ನಡೆಸುವ ಸಾಮರ್ಥ್ಯವಿತ್ತು. ಪರಿಹಾರಗಳನ್ನು ರೂಪಿಸುವ ಸಾಮರ್ಥ್ಯವಿತ್ತು. ಈ ಪರಿಹಾರ ಮಾರ್ಗಗಳು ಗುಣಲಕ್ಷಣಗಳಲ್ಲಿ ಸರ್ವಮಾನ್ಯವೂ ಸರ್ವಾನ್ವಯಿಯೂ ಆಗಬಹುದಿತ್ತು.

## ೪. ಏಕಾತ್ಮಮಾನವದರ್ಶನ

ದೀನದಯಾಳಜಿ ಅವರಿಗೆ ಇಂಥ ತಡೆಗಳು, ನಿಷೇಧಗಳೇನೂ ಇರಲಿಲ್ಲ. ರಾಷ್ಟ್ರೀಯ ಪಕ್ಷವೊಂದರ ನಾಯಕರಾದ ಅವರಿಗೆ ರಾಷ್ಟ್ರದ ತತ್‌ಕ್ಷಣದ ಸಮಸ್ಯೆಗಳಿಗೆ ಪರಿಹಾರ ಸೂಚಿಸಬೇಕಾದ ತುರ್ತಿತ್ತು. ಪರಿಹಾರ ಮಾರ್ಗಗಳನ್ನು ಸೂಚಿಸುವುದು ರಾಷ್ಟ್ರೀಯ ಪಕ್ಷದ ನಾಯಕರಾದ ಅವರ ಕರ್ತವ್ಯವಾಗಿತ್ತು. ಅದನ್ನು ಅವರು ಪ್ರಶಂಸನೀಯವಾಗಿ ಮಾಡಿದರು. ಆದರೆ ಅವರ ಈ ಪಾತ್ರ ಅವರ ಏಕಾತ್ಮ ಮಾನವ ಸಿದ್ಧಾಂತ ರೂಪಣೆಯ ಚಿಂತನ ಪ್ರಕ್ರಿಯೆಗೆ ಬಾಧಕವಾಗಲಿಲ್ಲ. ಸಾರ್ವಲೌಕಿಕತ್ವದ ಮಟ್ಟವನ್ನು ಮುಟ್ಟಿದ ಮನಸ್ಸಿನಿಂದ ಮಾತ್ರ ಸಾರ್ವಲೌಕಿಕವಾದ, ಸರ್ವಾನ್ವಯಿಯಾಗುವಂಥ ಗುಣಲಕ್ಷಣಗಳಿಂದ ಕೂಡಿದ ಪರಿಹಾರಗಳನ್ನು ರೂಪಿಸುವುದು ಸಾಧ್ಯ. ಹಾಗೆ ನೋಡಿದರೆ ಅವರ ಜ್ಞಾನ, ಗ್ರಹಿಕೆಗಳು ಮಾನವ ಜೀವಿಗಳಿಗೆ ಮಾತ್ರ ಸೀಮಿತಗೊಂಡಿರಲಿಲ್ಲ. ಮಾನವಪ್ರಜ್ಞೆ ಏಕಕೇಂದ್ರೀಯವಾಗ ಬಾರದೆಂಬುದು ಅವರ ನಿರೀಕ್ಷೆಯಾಗಿತ್ತು. ವಿವಿಧ ರಾಷ್ಟ್ರಗಳ ಅಭಿವೃದ್ಧಿ ಮತ್ತು ಕೊಡುಗೆಗಳಿಂದ ಶ್ರೀಮಂತವಾದ ವಿಶ್ವರಾಷ್ಟ್ರ ಅವರ ಕಲ್ಪನೆಯಾಗಿತ್ತು. ಹಾಗೂ ಮಾರ್ಕ್ಸ್‌ವಾದವೂ ಸೇರಿದಂತೆ ವಿವಿಧ ಧರ್ಮಗಳಿಂದ, ವಿಚಾರಧಾರೆಗಳಿಂದ ಪರಿಪಕ್ವವಾದ ಶ್ರೀಮಂತಿಕೆಯಿಂದ ಕೂಡಿದ ಮಾನವ ಧರ್ಮ ಅವರ ದೃಷ್ಟಿದರ್ಶನವಾಗಿತ್ತು. ಕುಟುಂಬದಿಂದ ಹಿಡಿದು ಬ್ರಹ್ಮಾಂಡದವರೆಗೆ ವಿವಿಧ ಅಂಗಗಳೊಡನೆ ವ್ಯಕ್ತಿಯನ್ನು ಗುರುತಿಸುವಿಕೆ ಮಾನವನ ಪ್ರಜ್ಞಾವಿಕಾಸದ

ಸಾಕಾರರೂಪವಷ್ಟೇ ಎನ್ನುವುದನ್ನು ಅವರು ಅರಿತಿದ್ದರು.

ಪ್ರತಿಯೊಬ್ಬ ವ್ಯಕ್ತಿಯ ಎಲ್ಲ ಶಕ್ತಿ ಸಾಮರ್ಥ್ಯಗಳು ಬೆಳೆಯಬೇಕು, ಅಭಿವೃದ್ಧಿಹೊಂದಬೇಕು ಎಂಬುದನ್ನು ಈ ಇಬ್ಬರು ಚಿಂತಕರೂ ಮನಗಂಡಿದ್ದರು. ದೀನದಯಾಳಜಿ ಮಾನವನನ್ನು ಒಂದು ಅಖಂಡ ಮಾನವತಾವಾದದ ಪರಿಕಲ್ಪನೆಯಲ್ಲಿ ಗಣನೆಗೆ ತೆಗೆದುಕೊಂಡಿದ್ದರೆ ಮಾರ್ಕ್ಸ್ ಆಗಿನ ಪರಿಸ್ಥಿತಿಯ ಪ್ರಭಾವಕ್ಕನುಗುಣವಾಗಿ ವ್ಯಕ್ತಿಯನ್ನು ಆರ್ಥಿಕ ಘಟಕವೆಂದು ಭಾವಿಸಿದ್ದರು. ಮಾರ್ಕ್ಸ್ ಧನಬಲದ ವಿರುದ್ಧ ಇದ್ದರು. ಸ್ವಾಧೀನ ವಿರೋಧಿಯಾಗಿದ್ದರು. ಮಾನವನನ್ನು ಧನದಾಹದಿಂದ, ಆರ್ಥಿಕ ಶೃಂಖಲೆಗಳಿಂದ ವಿಮುಕ್ತಿಗೊಳಿಸಬೇಕೆನ್ನುವುದು ಮಾರ್ಕ್ಸ್‌ನ ಅಪೇಕ್ಷೆಯಾಗಿತ್ತು. ಆದರ ವ್ಯಾವಹಾರಿಕವಾಗಿ ಮಾರ್ಕ್ಸ್ ಮಾನವನ ಅಸ್ತಿತ್ವವನ್ನು ಆರ್ಥಿಕ ದೃಷ್ಟಿಯಿಂದಲೆ ಪ್ರಮುಖವಾಗಿ ಗಣನೆಗೆ ತೆಗೆದುಕೊಂಡರು. ಇದು ಅವರ ಸಿದ್ಧಾಂತದಲ್ಲಿ ಏರುಪೇರಿಕೆಗೆ ಅವಕಾಶ ಮಾಡಿಕೊಟ್ಟಿತು.

ದೀನ್‌ದಯಾಳಜಿ ಧಾರ್ಮಿಕ ಕ್ಷೇತ್ರದಲ್ಲಿನ ಭ್ರಷ್ಟತೆ ಹಾಗೂ ವಿಕೃತಿಗಳ ಕಟುವಿಮರ್ಶಕರಾಗಿದ್ದರು ಅವರು ಅಪ್ರಯೋಜಕವಾದದ್ದರ, ಅನವಶ್ಯಕವಾದದ್ದರ ಜೊತೆ ಅವಶ್ಯಕವಾದುದನ್ನು ಬಿಸುಡಲಿಲ್ಲ. ಪಾಶ್ಚಾತ್ಯ ಜಗತ್ತಿನಲ್ಲಿದ್ದ ಧರ್ಮವಿರೋಧಿ ಬುದ್ಧಿಜೀವಿ ಪರಂಪರೆ ಹಾಗೂ ಕ್ರಿಶ್ಚಿಯನ್ ಚರ್ಚ್‌ನ ವಾಕರಿಕೆ ಬರಿಸುವ ಸಂಪ್ರದಾಯಗಳು ಮಾರ್ಕ್ಸ್‌ನನ್ನು ಧರ್ಮದ ವಿರುದ್ಧ ಬಂಡೇಳಲು ಪ್ರೇರೇಪಿಸಿದ್ದವು. ಅವನು ತನಗೆ ಆಪ್ತವಾಗಿ, ಸಂಪೂರ್ಣವಾಗಿ ತಿಳಿಯದ ಧರ್ಮಗಳ ವಿರುದ್ಧವೂ ಯುದ್ಧ ಸಾರಿದ್ದ.[೨]

ಬಹುತ್ವವು ವಿವಿಧ ರಾಷ್ಟ್ರೀಯ ವ್ಯಕ್ತಿತ್ವಗಳ ರೂಪದ ಒಂದು ಮಾನವಕುಲದ ಮಧ್ಯೆ ಇರಬೇಕೆನ್ನುವುದು ಅಖಂಡ ಮಾನವತಾ ಸಿದ್ಧಾಂತದ ನಂಬಿಕೆಯಾಗಿದೆ. ಅಂತರರಾಷ್ಟ್ರೀಯತೆ ಎನ್ನುವುದು, ರಾಷ್ಟ್ರೀಯತೆಯ ಪ್ರಾರಂಭಿಕ ಹಂತದಿಂದ ರೂಪುಗೊಂಡ ಮಾನವ ಪ್ರಜ್ಞೆಯ ಬಹಿರಂಗ ಸಾಕ್ಷಾತ್ಕಾರ ಎನ್ನುವುದನ್ನೂ ಅದು ನಂಬುತ್ತದೆ. ಮಾರ್ಕ್ಸ್‌ವಾದ ರಾಷ್ಟ್ರೀಯ ಶೂನ್ಯವಾದದ ಸಾಕಾರ "ಶ್ರಮಿಕರಿಗೆ ಪಿತೃಭೂಮಿ ಎನ್ನುವುದಿಲ್ಲ." ಲೆನಿನ್ ಪ್ರಕಾರ, "ಮಾನವಕುಲ ತುಣುಕುಗಳಾಗಿ, ವಿವಿಧ ರಾಷ್ಟ್ರಗಳಾಗಿ ಛಿದ್ರವಾಗುವುದನ್ನು ಬಹಿಷ್ಕರಿಸುವುದು ಹಾಗೂ ಎಲ್ಲ ರಾಷ್ಟ್ರಗಳನ್ನು ಒಟ್ಟಿಗೆ ಬೆಸೆಯುವುದು ಸಮಾಜವಾದದ ಗುರಿ" ಇದು ಅಂತರ್ಗತವಾಗಿರುವ ರಾಷ್ಟ್ರೀಯ ಪರಿಕಲ್ಪನೆಯ ಅಜ್ಞಾನವನ್ನು ಆಧರಿಸಿದ್ದು. ಕಮ್ಯುನಿಸ್ಟ್ ಸರ್ಕಾರಗಳಿದ್ದ ದೇಶಗಳಲ್ಲೂ ರಾಷ್ಟ್ರೀಯತೆ ಯಾವಾಗಲೂ ಪ್ರಬಲವಾಗಿತ್ತೆಂಬುದನ್ನು ಮರೆಯಲಾಗದು ಕಮ್ಯುನಿಸ್ಟ್ ಕ್ರಾಂತಿಯ ಅವಧಿಯಲ್ಲೂ ರಾಷ್ಟ್ರೀಯತೆ ಧಾಳಾವಾಗಿತ್ತು.[೩]

ಬಾಲ್ಶೆವಿಕ್ ಕ್ರಾಂತಿತತ್ವ ಪರಂಪರೆಯಲ್ಲಿ ಬೇರುಗಳನ್ನು ಹೊಂದಿರದ ಕೆಲವೇ



ಮಂದಿ ಅಧಿಕಾರ ದಾಹಿಗಳು ರಷ್ಯದ ರಾಜಕೀಯ ವ್ಯವಸ್ಥೆಗೆ ಜೋಡಿಸಿದ ಒಂದು ಪರಕೀಯ ವಿಕಾರ ಎನ್ನುವುದು ರಷ್ಯದ ಇತಿಹಾಸ ಕುರಿತಂತೆ ಒಂದು ಪೊಳ್ಳು ಅಭಿಪ್ರಾಯವಾಗಿದೆ. ಬಾಲ್ಶೆವಿಕ್ ಕ್ರಾಂತಿಯ ವಿಜಯ ಯಾವುದೇ ಅರ್ಥದಲ್ಲೂ ಅನಿವಾರ್ಯವಾಗಿರಲಿಲ್ಲ. ಆದರೆ ಬಾಲ್ಶೆವಿಕ್ ಕ್ರಾಂತಿ ಸಿದ್ಧಾಂತ "ಜ಼ಾರ್ ನಿರಂಕುಶಾಧಿಕಾರ ತತ್ತ್ವ ಪರಿಸರಕ್ಕೆ ಪ್ರತಿಕ್ರಿಯೆಯಾಗಿ ಒಂದು ದೇಶೀಯ ದಬ್ಬಾಳಿಕೆಯ ಪ್ರತಿವರ್ತನೆ."

ಮಾಲ್‌ಕೊಲಂ ಡಿ ಕೆನೆಡಿ ಹೇಳಿರುವಂತೆ "ಚೀನೀಯರ ಕಮ್ಯುನಿಸ್ಟ್ ಸಿದ್ಧಾಂತ, ವಿದೇಶಿ ಪ್ರಾಬಲ್ಯವನ್ನು ಕೊಡವಿಹಾಕುವ ನಿರ್ಧಾರದಿಂದ ಹುಟ್ಟಿದ ಚೀನಿ ರಾಷ್ಟ್ರೀಯತೆಯ ಶಿಶು."[೪] ಈ ಮಾತು ವಿಯಟ್ನಾಂ ಮತ್ತು ಇತರ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಕಮ್ಯುನಿಸ್ಟ್ ಸಿದ್ಧಾಂತಕ್ಕೂ ಅನ್ವಯಿಸುತ್ತದೆ.

ಈ ವಿಷಯದಲ್ಲಿ ಮಾರ್ಕ್ಸ್ ಅಭಿಪ್ರಾಯ ಸಂಪೂರ್ಣವಾಗಿ ತಪ್ಪು. ಎಲ್ಲ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿನ ರಾಷ್ಟ್ರೀಯತೆಯ ಪುನರ್ಜಾಗೃತಿಯನ್ನೇ ಉದಾಹರಣೆಯಾಗಿ ನೋಡಬಹುದು, ಪೂರ್ವಯೂರೋಪಿನ ರಾಷ್ಟ್ರಾಭಿಮಾನಿ ಬಂಡಾಯ, ಪಶ್ಚಿಮ ಯೂರೋಪಿನ ಕಮ್ಯುನಿಸ್ಟ್ ಪಕ್ಷಗಳ ಆಂತರಿಕ ಸ್ವಾಯತ್ತತೆ ಬೇಡಿಕೆ ಭಾರತವೂ ಸೇರಿದಂತೆ ಎಲ್ಲ ರಾಷ್ಟ್ರಗಳಲ್ಲೂ ನಡೆದ ರಾಷ್ಟ್ರೀಯ ಪರಂಪರೆಯ ಜೊತೆ ಮಾರ್ಕ್ಸ್‌ವಾದವನ್ನು ಹೊಂದಿಸುವ ಪ್ರಜ್ಞಾಪೂರ್ವಕ ಪ್ರಯತ್ನಗಳು; ವಿಯಟ್ನಾಂ ಮತ್ತು ಕಾಂಬೋಡಿಯಾ ನಡುವಣ ಸಮರ, ಸೋವಿಯತ್ ರಷ್ಯಾ ಒಕ್ಕೂಟ ಮತ್ತು ಚೀನಾ ನಡುವಣ ರಾಷ್ಟ್ರೀಯ ಆತ್ಮಾಭಿಮಾನ ಪ್ರಚೋದಿತ ತಿಕ್ಕಾಟಗಳು – ಇಂಥ ಅನೇಕ ನಿದರ್ಶನಗಳಿವೆ.

ಮಾರ್ಕ್ಸ್ ಸಿದ್ಧಾಂತ ಬೂರ್ಜ್ವಾ ಕುಟುಂಬದ ನಿರ್ಗಮನವನ್ನು ಘೋಷಿಸಿದೆ. ಕುಟುಂಬದ ಅಭಿವೃದ್ಧಿ ಕುರಿತಂತೆ ಮಾರ್ಕ್ಸ್‌ವಾದದ ಅಭಿಪ್ರಾಯಗಳನ್ನು ಏಂಗಲ್ಸ್, ವಿವರವಾಗಿ ನಿರೂಪಿಸಿದ್ದಾರೆ. ಅವರ ಪ್ರಕಾರ ಕುಟುಂಬ ವ್ಯವಸ್ಥೆ ಎನ್ನುವುದು ಆರ್ಥಿಕ ಅಡಿಪಾಯದ ಮೇಲೆ ನಿರ್ಮಿಸಲಾದ ಮಹಡಿ. ಆದರ್ಶಬದ್ಧ ಸಮಾಜದಲ್ಲಿ ವ್ಯಕ್ತಿಯ ಮನೆವಾರ್ತೆಯನ್ನು ಒಂದು ಶಾಖೆಯಾಗಿ ಪರಿವರ್ತಿಸಲಾಗುತ್ತದೆ.

ಪ್ರಜ್ಞಾವಂತಿಕೆ ಬೆಳೆದಷ್ಟೂ ಸಮಷ್ಟಿಯೊಂದಿಗೆ ಗುರುತಿಸಿಕೊಳ್ಳುವಿಕೆ ಜಾಸ್ತಿಯಾಗುತ್ತದೆ. ಆದರೆ ಇದು ವ್ಯಕ್ತಿಯ ವಿಕಸನ ಪ್ರಕ್ರಿಯೆಯಾಗಿದ್ದು ಪ್ರಜ್ಞಾವಂತಿಕೆಯ ಉನ್ನತಸ್ತರಗಳು ಹಿಂದಿನ ಕೆಳಸ್ತರಗಳನ್ನು ಪ್ರತಿರೋಧಿಸುವುದಿಲ್ಲ. ಅದರದು ಒಳಗೊಳ್ಳುವ ಪ್ರವೃತ್ತಿ. ಒಬ್ಬರು ಇನ್ನೊಬ್ಬರಿಗೆ ಅನ್ಯಾಯವೆಸಗದಂತೆ ಏಕಕಾಲದಲ್ಲಿ ಸಮಷ್ಟಿಯಲ್ಲಿ ಸಮಾನತೆಯಿಂದ ಸಂಬಂಧಹೊಂದಿರಬಹುದು. ಇದು ಅಖಂಡತೆಯ ದೃಷ್ಟಿ. ಪ್ರತಿಯೊಬ್ಬ ಜೀವಿಯನ್ನೂ ಅಖಂಡತೆಯ ಮಾರ್ಗದಲ್ಲೆ, ರೀತಿಯಲ್ಲೆ ಅಖಂಡತೆಯ ಪರಿಕಲ್ಪನೆಯಲ್ಲೆ ಮಾನ್ಯ ಮಾಡಬೇಕು. ದೇಹ, ಮನಸ್ಸು, ಬುದ್ಧಿ

ಮತ್ತು ಆತ್ಮಗಳನ್ನು ಪ್ರತ್ಯೇಕ ಅಸ್ತಿತ್ವದ ಅಂಗಗಳೆಂದು ಯೋಚಿಸಬಾರದು.

ಏಕಾತ್ಮತೆ ಅಖಂಡತೆ ಪಂಡಿತ್‌ಯವರ ಮಾನವತಾವಾದ ವಿಶೇಷ ಗುಣಲಕ್ಷಣ. ಮಾನವನ ಸುಖಸಂತೋಷಗಳಿಗಾಗಿ ಸಾಮಾಜಿಕ–ಆರ್ಥಿಕ ವ್ಯವಸ್ಥೆಯನ್ನು ಯಾವ ರೀತಿಯಲ್ಲಾದರೂ ಬಳಸಿಕೊಳ್ಳಬಹುದೆಂಬ ಅಭಿಪ್ರಾಯವನ್ನು ಅವರು ಮೆಚ್ಚಿಕೊಂಡಿದ್ದರು. ಅವರು ಮಾನವ ಪ್ರಜ್ಞೆಯ ಬೆಳವಣಿಗೆಗೆ ಮತ್ತು ರೂಪಣೆಗೆ ಹೆಚ್ಚಿನ ಒತ್ತುಕೊಟ್ಟಿದ್ದರು. ಪ್ರಜ್ಞಾವಂತಿಕೆ ಬೆಳೆಯದೇ ಎಷ್ಟೇ ಯೋಗ್ಯವಾದ ಸಾಮಾಜಿಕ ವ್ಯವಸ್ಥೆಯಲ್ಲೂ ಅಪೇಕ್ಷಿತ ಫಲ ಸಿಗುವುದಿಲ್ಲ ಎನ್ನುವುದು ಅವರ ದೃಢ ಅಭಿಪ್ರಾಯವಾಗಿತ್ತು. ಮಾರ್ಕ್ಸ್ ಪ್ರಕಾರ ಬದುಕು ಪ್ರಜ್ಞೆಯಿಂದ ನಿರ್ಣಯಿತವಾದುದಲ್ಲ. ಬದುಕೇ ಪ್ರಜ್ಞೆಯನ್ನು ನಿರ್ಧರಿಸುತ್ತದೆ. ಮಾನವನ ಅಸ್ತಿತ್ವವನ್ನು ನಿರ್ಧರಿಸುವುದು ಪ್ರಜ್ಞೆಯಲ್ಲ, ಮಾನವರ ಸಾಮಾಜಿಕ ಅಸ್ತಿತ್ವ ಅವರ ಪ್ರಜ್ಞೆಯನ್ನು ರೂಪಿಸುತ್ತದೆ. ಬದುಕು, ಸಾಮಾಜಿಕ ಅಸ್ತಿತ್ವ ಮತ್ತು ಪ್ರಜ್ಞೆ ಇವೆಲ್ಲ ಪರಸ್ಪರ ಕ್ರಿಯೆ–ಪ್ರಕ್ರಿಯೆಗಳಲ್ಲಿ ತೊಡಗಿದ್ದು ಪ್ರಜ್ಞಾವಂತಿಕೆಯೇ ಹೆಚ್ಚು ನಿರ್ಣಾಯಕವಾದದ್ದು ಎನ್ನುತ್ತಾರೆ ಪಂಡಿತ್‌ಜಿ ಅಖಂಡತೆ ಮತ್ತು ಅದರ ಪರಿಣಾಮದ ಒತ್ತಾಸೆಯಿಂದ ಬೆಳೆಯುವ ಪ್ರಜ್ಞಾವಂತಿಕೆ ಕುರಿತ ಪಂಡಿತ್‌ಜಿ ಚಿಂತನೆ ಮಾರ್ಕ್ಸ್‌ನ ಚಿಂತನೆಗಿಂತ ಭಿನ್ನವಾದದ್ದು, ಭಿನ್ನಲಕ್ಷಣಗಳಿಂದ ಕೂಡಿರುವಂಥಾದ್ದು.

ಉದಾಹರಣೆಗೆ ಹೇಳುವುದಾದರೆ ಮಾರ್ಕ್ಸ್ ಮತ್ತು ಪಂಡಿತ್‌ಜಿ ಇಬ್ಬರೂ ರಾಹಿತ್ಯ ಯಾವುದೇ ಸಮಾಜಕ್ಕೂ ಒಂದು ಆದರ್ಶಮಯವಾದ ಸ್ಥಿತಿ ಎನ್ನುತ್ತಾರೆ. ರಾಷ್ಟ್ರೀಯತೆ ಮಾನವನ ಸ್ವಯಂ ಪರಕೀಯತೆಯ ಅಭಿವ್ಯಕ್ತಿ ಎನ್ನುತ್ತಾನೆ ಮಾರ್ಕ್ಸ್. ಏಕೆಂದರೆ ಮಾರ್ಕ್ಸ್ ಪ್ರಕಾರ ಮನಸ್ಸು ಭೌತಿಕ ದ್ರವ್ಯದ ಮೇಲೆ ನಿರ್ಮಾಣಗೊಂಡ ಒಂದು ಮೇಲಂತಸ್ತು. ಮಾರ್ಕ್ಸ್ ಶ್ರಮಜೀವಿಗಳ ಸರ್ವಾಧಿಕಾರತ್ವವನ್ನು ಸಂಕ್ರಮಣಾವಸ್ಥೆ ಎಂದು ಭಾವಿಸಿದ್ದು. ದೀನ ದಯಾಳಜಿಯವರಿಗೆ ಧರ್ಮ ಪ್ರಜ್ಞೆಯೇ ಪರಿಣಾಮಕಾರಿ ಸಾಧನ. ರಾಷ್ಟ್ರೀಯತೆಯ ಕಲ್ಪನೆಯೇ 'ಆತ್ಮ', ಇದು ವ್ಯಕ್ತಿಯ ಆತ್ಮಕ್ಕೆ ಹೋಲಿಸಬಹುದಾದ್ದು. ರಾಷ್ಟ್ರದ ಆತ್ಮವನ್ನು ಸಾಕಾರಗೊಳಿಸಿ ಪಾಲಿಸಲು ಸಹಾಯಕವಾಗುವ ನಿಯಮಗಳನ್ನೇ ಆ ರಾಷ್ಟ್ರದ ಧರ್ಮವೆಂದು ಕರೆಯಲಾಗುತ್ತದೆ. ಪ್ರತಿಯೊಂದು ಸಮಾಜದ ಸಮಷ್ಟಿಗೂ ಅದರದೇ ಆದ ಧರ್ಮವಿದೆ.

## ೫. ಎರಡು ಚಿಂತನ ಮಾರ್ಗಗಳು

ಇಬ್ಬರೂ ಶೋಷಣೆ ವಿರೋಧಿಗಳಾಗಿದ್ದರು. ಶೋಷಣೆಗೆ ಅವಕಾಶ ನೀಡುವ ವ್ಯವಸ್ಥೆಯ ವಿರೋಧಿಗಳಾಗಿದ್ದರು. ಪಂಡಿತ್‌ಜೀ ಹೀಗೆ ಹೇಳುತ್ತಾರೆ.



> **"ಆದರೆ ಒಂದು ಅಂಶವಂತೂ ಸ್ಪಷ್ಟ. ಅನೇಕ ಸಂಸ್ಥೆಗಳು, ಪದ್ಧತಿಗಳು ಹೊಸದಕ್ಕೆ ಜಾಗಮಾಡಿಕೊಡುತ್ತವೆ. ಇದು ಹಳೆಯ ಸಂಸ್ಥೆಗಳು–ಪದ್ಧತಿಗಳಲ್ಲಿ ನಂಬಿಕೆಯುಳ್ಳವರ ಮೇಲೆ ಪ್ರತಿಕೂಲ ಪರಿಣಾಮವುಂಟು ಮಾಡುತ್ತದೆ. ಇನ್ನು ಕೆಲವರು, ಸ್ವಭಾವತಃ ಬದಲಾವಣೆಯನ್ನು ವಿರೋಧಿಸುತ್ತಾರೆ. ಇವರಿಗೂ ಪುನರ್ ನಿರ್ಮಾಣದ ಪ್ರಯತ್ನಗಳಿಂದ ತೊಂದರೆಯಾಗುತ್ತದೆ. ಆದರೆ ಕಾಯಿಲೆಗೆ ಔಷಧಿ ಮಾಡಬೇಕು ಚಿಕಿತ್ಸೆ ಮೂಲಕ ಗುಣಪಡಿಸಬೇಕು. ಆದ್ದರಿಂದ ನಾವು ಯಥಾಸ್ಥಿತಿ ಮನೋಭಾವ ತೊರೆದು ಹೊಸಯುಗಕ್ಕೆ ನಾಂದಿಹಾಡಬೇಕು. ಪುನರ್ ನಿರ್ಮಾಣದ ನಮ್ಮ ಪ್ರಯತ್ನಗಳು ಪೂರ್ವಗ್ರಹ ಪೀಡಿತವಾಗಿರಬಾರದು. ಹಾಗೆಂದು ಪರಂಪರೆಯಿಂದ ನಾವು ಪಡೆದಿರುವುದೆಲ್ಲವನ್ನೂ ಅಗೌರವಿಸಬಾರದು, ಅಲಕ್ಷಿಸಬಾರದು. ತಮ್ಮ ಪ್ರಯೋಜನ, ಉಪಯುಕ್ತತೆಯನ್ನು ಕಳೆದುಕೊಂಡೂ ಹಳತಾದ ಸಂಪ್ರದಾಯಗಳಿಗೆ, ಪದ್ಧತಿಗಳಿಗೆ ಜೋತು ಬೀಳುವ ಅಗತ್ಯ ಇಲ್ಲ."**

ಹಾಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ವ್ಯವಸ್ಥೆಯ ಮೇಲ್ ರಚನೆ, ಮೇಲಂತಸ್ತುಗಳು ಮಾತ್ರವಲ್ಲ ಅಡಿಪಾಯವನ್ನೇ ಹಾಳುಗೆಡವಲು ಮಾರ್ಕ್ಸ್ ರಕ್ತಕ್ರಾಂತಿಯನ್ನು ಪ್ರತಿಪಾದಿಸಿದ. ಪಂಡಿತ್‌ಜಿ ಜನಸಾಮಾನ್ಯರಲ್ಲಿ ಸಂಸ್ಕಾರಗಳ ಮೂಲಕ ಜಾಗೃತಿಯನ್ನು ಮೂಡಿಸಬೇಕು. ಸಮಷ್ಟಿಯಲ್ಲಿ ಜಾಗೃತಿವುಂಟು ಮಾಡಿ ಅವರನ್ನು ಸಂಘಟಿಸಬೇಕು. ಸಂಸ್ಕಾರಗಳ ಮೂಲಕವೇ, ಶಾಶ್ವತವಾದ ಧರ್ಮದ ತಳಹದಿಗೆ ಅಪಾಯವಾಗದಂತೆ, ಅದನ್ನು ಉಳಿಸಿಕೊಂಡು, ಮೇಲ್ ರಚನೆ ಅಂತಸ್ತುಗಳಲ್ಲಿ ಬದಲಾವಣೆ ಮಾಡಬೇಕೆನ್ನುವುದು ಪಂಡಿತ್‌ಜಿ ಅವರ ನಿಲುವಾಗಿತ್ತು.[೧]

ಕುಟುಂಬ ವ್ಯವಸ್ಥೆ ಹಾಗೂ ಅದರ ಸಾಮಾಜಿಕ ಹೊಣೆಗಾರಿಕೆಗಳ ಬಗ್ಗೆಯೂ ಪಂಡಿತ್‌ಜಿ ತೀವ್ರ ಕಾಳಜಿ ಹೊಂದಿದ್ದರು. ಸಾಮಾಜಿಕ ಕರ್ತವ್ಯಗಳು, ನಿರ್ವಹಣೆಗಳು ಹೊಣೆಗಾರಿಕೆಗಳಲ್ಲದೇ ಹೋದರೆ ಕುಟುಂಬ ವ್ಯವಸ್ಥೆ ನಾಶವಾಗುತ್ತದೆ. ಸಾಮಾಜಿಕ ಸತ್ತ್ವ ಅಂಶಗಳಿಲ್ಲದ ಕುಟುಂಬ ವ್ಯವಸ್ಥೆ ದುರ್ಬಲಗೊಳ್ಳುತ್ತದೆ ಎನ್ನುವುದು ಅವರ ಅಭಿಪ್ರಾಯವಾಗಿತ್ತು.

ಮಾರ್ಕ್ಸ್‌ಗೆ ವಿವಾಹ ಪದ್ಧತಿ ಬಗ್ಗೆ ವಿಶೇಷ ಒಲವು ಇಲ್ಲ. ಮಾರ್ಕ್ಸ್ ಹೀಗೆ ಹೇಳಿದ್ದಾರೆ:

> **"ನಮ್ಮ ಸಾಮಾಜಿಕ ವ್ಯವಸ್ಥೆಗೆ ಧಕ್ಕೆಯುಂಟುಮಾಡುವಂಥ ಸಂದರ್ಭದಲ್ಲಿ ಮಾತ್ರ ಸ್ತ್ರೀ–ಪುರುಷರ ಖಾಸಗಿ ಸಂಬಂಧದಲ್ಲಿ ನಾವು ಮಧ್ಯ ಪ್ರವೇಶ ಮಾಡುತ್ತೇವೆ."**

ಆದಾಗ್ಯೂ ಸಮಾಜ ವ್ಯವಸ್ಥೆಗೆ ಯಾವುದು ಧಕ್ಕೆಯುಂಟು ಮಾಡುತ್ತದೆ, ಯಾವುದು ಭಂಗ ತರುತ್ತದೆ ಎನ್ನುವುದನ್ನು ಆಖೈರಾಗಿ ನಿರ್ಧರಿಸುವುದು ಕಮ್ಯುನಿಸ್ಟ್ ಸರ್ಕಾರವೇ. ಈ ಬಗ್ಗೆ ಹೆಚ್ಚಿನ ಚರ್ಚೆ ಅನವಶ್ಯವೆನ್ನಿಸುತ್ತದೆ. ಕಮ್ಯುನಿಸ್ಟ್ ಆಳ್ವಿಕೆಯಲ್ಲೂ ಕುಟುಂಬ ಉಳಿದುಕೊಂಡು ಬಂದಿದೆ. "ಕಪಟವೇಷ, ಬೂಟಾಟಿಕೆಗಳಿಂದ ಅಥವಾ

ಕದ್ದುಮುಚ್ಚಿ ಹೆಂಡತಿಯರನ್ನು ಹಂಚಿಕೊಳ್ಳುವ ಬದಲು ಅಧಿಕೃತವಾಗಿ, ರಾಜಾರೋಷವಾಗಿ ಹಂಚಿಕೊಳ್ಳುವುದು ಉಚಿತ" ಎನ್ನುವ ವಾದಕ್ಕೆ ಇನ್ನೂ ಗೌರವ ಮರ್ಯಾದೆಗಳು ದೊರೆತಿಲ್ಲ.

ಪ್ರತಿ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿ, ಬೆಳವಣಿಗೆಗಳನ್ನು ಮಾರ್ಕ್ಸ್‌ವಾದ ಆಪ್ಯೈರಾಗಿ ಪ್ರತಿಪಾದಿಸುತ್ತದೆಯಾದರೂ ಅದು ತತ್‌ಕ್ಷಣದ ಸನ್ನಿವೇಶ ಸಂದರ್ಭದ ಹಿನ್ನೆಲೆಯಲ್ಲಿ ಮಾನವನ ವ್ಯಕ್ತಿತ್ವವನ್ನು ಇಲ್ಲದಂತೆ ಮಾಡುತ್ತದೆ. ವ್ಯಾವಹಾರಿಕವಾಗಿ ಸಮಾನತೆ ಸಮಾನಸ್ಥಿತಿಯಾಗುತ್ತದೆ. ಪ್ರತಿಯೊಬ್ಬ ಪ್ರಜೆಯೂ ಸರ್ಕಾರಿ ವ್ಯವಸ್ಥೆಯ ಒಂದು ಘಟಕ. ಗಂಡ–ಹೆಂಡತಿ, ತಂದೆ–ತಾಯಿ, ಮಕ್ಕಳ ನಡುವಣ ವ್ಯಕ್ತಿಗತ ಸಂಬಂಧಗಳನ್ನು ನಾಶಮಾಡಬೇಕು. ಮಕ್ಕಳಿಗೆ ಅವರ ತಂದೆ–ತಾಯಿ ಯಾರೆಂಬುದು ತಿಳಿಯದು. ಮಕ್ಕಳ ಪಾಲನೆ ಪೋಷಣೆ ಸರ್ಕಾರದ ಜವಾಬ್ದಾರಿ. ಕುಟುಂಬವ್ಯವಸ್ಥೆ, ವಿವಾಹ ಪದ್ಧತಿ, ಅನುವಂಶಿಕ ಬಾಂಧವ್ಯ ಇದಾವುದೂ ಇರಬಾರದು.

ಇಂಥ, ವ್ಯಕ್ತಿತ್ವವನ್ನೇ ಅಳಿಸಿಹಾಕುವ ನಕಾರಾತ್ಮಕ ದೃಷ್ಟಿ ಮಾನವನನ್ನು ನಾಶಮಾಡುವುದು ಖಚಿತ. ಐಗರ್ ಶಾಫ್ರೆವಿಚ್ ಹೇಳುವಂತೆ ನಿಜವಾದ ಮೂಲಭೂತ ಸಮಸ್ಯೆಯೆಂದರೆ :

> **"ಸಮಾಜವಾದದ ತತ್ವಗಳನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡಂಥ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸುವುದರಿಂದ ಮನುಷ್ಯನನ್ನು ಸಂಪೂರ್ಣವಾಗಿ ಬದುಕಿನ ಸಂಬಂಧದಿಂದ ಪ್ರತ್ಯೇಕಿಸಿದಂತಾಗುತ್ತದೆ. ಇದು ಅವನ ಜೀವನ ಸಂಬಂಧಗಳಲ್ಲಿ ಬದಲಾವಣೆಗಳನ್ನುಂಟು ಮಾಡುತ್ತದೆ ಹಾಗೂ ಮಾನವ ವ್ಯಕ್ತಿತ್ವದ ರೂಪುರೇಷ ವಿನ್ಯಾಸಗಳ ಮೂಲ ಸ್ವರೂಪವನ್ನು ಭಗ್ನಗೊಳಿಸುತ್ತದೆ."**

**೬. ಇಸಂ ರಾಹಿತ್ಯ**

ದೀನ್ ದಯಾಳಜಿ ಮತ್ತು ಮಾರ್ಕ್ಸ್ ಇವರಿಬ್ಬರ ಸಿದ್ಧಾಂತಗಳೂ ಅತ್ಯವಶ್ಯಕವಾಗಿ ಮಾನವತಾ ಜಿಜ್ಞಾಸೆಗಳು. ದುರದೃಷ್ಟವಶಾತ್, ಐರೋಪ್ಯ ಬುದ್ಧಿಜೀವಿಗಳ ಸಾಂಪ್ರದಾಯಿಕ ಪೂರ್ವಾಗ್ರಹಗಳು, ಹಿಂದೂದರ್ಶನ ಕುರಿತಂತೆ ಅಜ್ಞಾನ, ಸಾಕಷ್ಟು ತಿಳುವಳಿಕೆ ಇಲ್ಲದಿರುವುದು ಇವೇ ಮೊದಲಾದ ಕಾರಣಗಳಿಂದಾಗಿ ಮಾರ್ಕ್ಸ್‌ವಾದಿ ಚಿಂತನೆಯಲ್ಲಿ ಅಸಮತೋಲನ ಹಾಗೂ ವಿಭಾಗೀಕರಣ, ವಿಂಗಡಣೆಗಳು ನುಸುಳಿವೆ. ಯಾವುದೇ ವಿಶಿಷ್ಟ ವಾದಗಳ ಮಂಡನೆ ಇವರಿಬ್ಬರ ಉದ್ದೇಶವೂ ಅಲ್ಲ. ಯಾವುದೇ ವಾದ, ಸಿದ್ಧಾಂತಗಳ ಮೆರೆಸದ ವಿವೇಕವನ್ನು ಇಬ್ಬರೂ ತೋರಿದ್ದಾರೆ. ದೀನ್ ದಯಾಳಜಿ ಅವರ 'ವಾದ–ಸಿದ್ಧಾಂತ' ಪ್ರಯೋಗಗಳು ಸನಾತನದ ಧರ್ಮದ ಮಹಾನ್ ಸಿದ್ಧಾಂತ ರಾಹಿತ್ಯ ಅವನ್ನು ಅರ್ಥಮಾಡಿಕೊಳ್ಳಲಾದ ಕೆಳಸ್ತರದ ಬುದ್ಧಿಮತ್ತೆಯ ಜನಸಾಮಾನರಿಗೆ ನೀಡಿರುವ ಒಂದು ವ್ಯಾವಹಾರಿಕ ರಿಯಾಯಿತಿ ಎನ್ನಬಹುದು.



ಮಾರ್ಕ್ಸ್ ಒಮ್ಮೆ ಸ್ವತಃ ಹೀಗೆ ಉದ್ಗಾರಗೈದಿದ್ದರಂತೆ: "ದೇವರ ದಯೆ ನಾನೊಬ್ಬ ಮಾರ್ಕ್ಸ್‌ವಾದಿ ಅಲ್ಲ'' ಇಬ್ಬರೂ ಯಾವುದೆ ವಿಸ್ತೃತವಾದ ಯೋಜನೆಯನ್ನಾಗಲೀ ಕಾರ್ಯಕ್ರಮವನ್ನಾಗಲಿ ಮಂಡಿಸಲಿಲ್ಲ. ಆದರೆ ಮಾರ್ಗದರ್ಶನಗಳನ್ನು ರೂಪಿಸಿದ್ದರು. ಆದರ್ಶರೂಪದ ಸಾಮಾಜಿಕ–ರಾಜಕೀಯ–ಆರ್ಥಿಕ ಸಂಸ್ಥೆಗಳು ಹೇಗಿರಬೇಕು. ಇವುಗಳ ನಡುವಣ ಪರಸ್ಪರ ಸಂಬಂಧ ಹೇಗಿರಬೇಕು ಎನ್ನುವುದನ್ನೂ ಇವರು ನಿಖರವಾಗಿ ನಿರೂಪಿಸಿಲ್ಲ. ಇದು ಹೀಗೆ ಇರಬೇಕಾದ್ದು. ವ್ಯಾವಹಾರಿಕ ಅನುಭವ ಹಾಗೂ ಸತತವಾಗಿ ಪರಿಸ್ಥಿತಿಯನ್ನು ವಿಮರ್ಶಿಸಿ ಮೌಲ್ಯಮಾಪನ ಮಾಡುವ ಮೂಲಕ ಕಾಲಕಾಲದಲ್ಲಿ ಇವುಗಳ ಆಧಾರದ ಮೇಲೆ ಸ್ಪಷ್ಟವಾದ ಕಾರ್ಯಕ್ರಮವೊಂದನ್ನು ತಯಾರಿಸಲಾಯಿತು. "ಪ್ರತಿಯೊಬ್ಬರಿಗೂ ಅವರ ಸಾಮರ್ಥ್ಯಾನುಸಾರ, ಅವರ ಅಗತ್ಯಾನುಸಾರ" ಎನ್ನುವ ಸಾರ್ವತ್ರಿಕ ಸೂತ್ರ ಅಖಂಡ ಮಾನವತಾ ಸಿದ್ಧಾಂತದ ವಿವೇಚನೆಗನುಗುಣವಾಗಿಯೇ ಇದೆ. ಮಾನವ 'ಬೇಕು'ಗಳಿಂದ ಮುಕ್ತನಾಗಬೇಕು; ಆತ್ಮತೃಪ್ತಿಗಾಗಿ ಕ್ರಿಯೆ ಮತ್ತು ಉತ್ಪಾದನೆಗಳು ಇರಬೇಕು. ಇದು ಆದರ್ಶ ಸ್ಥಿತಿ ಎನ್ನುವುದು ಇಬ್ಬರ ಚಿಂತನ ಲಹರಿ ಭಾವಿಸುತ್ತದೆ. ಸಮಾಜೀಕೃತ ಮಾನವ ಜಿಜ್ಞಾಸೆ ಕಮ್ಯುನಿಸ್ಟ್ ಸಿದ್ಧಾಂತದ ಕೊನೆಯಘಟ್ಟ. ಸಮಾಜೀಕೃತ ಮಾನವ ಎಂದರೆ, "ವರ್ಗರಹಿತ ಸ್ಥಾನಮಾನರಹಿತ ಮಾನವಕುಲ ಸಾಮಾನ್ಯವಾಗಿ, ಪರಸ್ಪರ ಸೌಹಾರ್ದತೆ–ಸಾಮ ರಸ್ಯಗಳಿಂದ ಬದುಕುವ ಸಮಗ್ರ ವ್ಯಕ್ತಿಗಳನ್ನೊಳಗೊಂಡ ರೂಪರಹಿತ ಸಮಷ್ಟಿತನ ಎಂದು ಅರ್ಥ. ಈ ಸಮಾಜೀಕೃತ ಮಾನವ ಜಿಜ್ಞಾಸೆಯೂ ಸ್ಥೂಲವಾಗಿ ಅಖಂಡ ಮಾನವತಾ ಸಿದ್ಧಾಂತದ ಅಂತಿಮ ಗುರಿಗೆ ಸಂಗತವಾಗಿಯೇ ಇದೆ.

ಆದರೆ ಇದರಲ್ಲಿ ಮಾರ್ಕ್ಸ್‌ಗೆ ಒಂದು ಪ್ರತಿಕೂಲವಿತ್ತು. ಅದೆಂದರೆ, ಅವನಿಗೆ ಆಸರೆಗೊಂದು ಪರಂಪರೆ ಇರಲಿಲ್ಲ. ಅಂತಿಮ ಗುರಿಸಾಧನೆಗೆ ಸೂಕ್ತ ಸಾಧನವಾಗಬಲ್ಲ ಪರಂಪರೆಯ ಆಸರೆ ಅವನಿಗಿರಲಿಲ್ಲ. ಹೀಗಿರುವಾಗ ಸಮಗ್ರ ವ್ಯಕ್ತಿ ಅಥವಾ ಪರಿಪೂರ್ಣನಾದ ವ್ಯಕ್ತಿಯ ಸಜ್ಜುಗೊಳಿಸುವುದು ಹೇಗೆ ಸಾಧ್ಯವಾದೀತು? ಆದರ್ಶ ಸಮಾಜವನ್ನು ಪಾಲಿಸಿ ಪೋಷಿಸುವ ಶಕ್ತಿ ಯಾವುದು?

**೭. ಗುರಿಗಮ್ಯತೆ**

ಮಾನವನ ಪ್ರಗತಿ ಎಂದರೆ ಏಕ ಕಾಲಕ್ಕೆ ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಗಳ ಪ್ರಗತಿ ಎಂಬುದು ಹಿಂದೂ ಸಂಸ್ಕೃತಿಯ ಗ್ರಹಿಕೆ. ಅದು ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಗಳ ಅಗತ್ಯಗಳನ್ನು ಪೂರೈಸುವ ಚತುರ್ವಿಧ ಹೊಣೆಗಾರಿಕೆಯನ್ನೊಳಗೊಂಡ ಆದರ್ಶವೊಂದನ್ನು ನಮ್ಮ ಮುಂದೆ ಮಂಡಿಸುತ್ತದೆ. ಮಾನವನ ಸಮಗ್ರ ಪ್ರಗತಿಸಾಧನೆಯೇ ಅಥವಾ ಪರಿಪೂರ್ಣತೆಯ ಸಾಧನೆಯೇ

ಇದರ ಉದ್ದೇಶ. ಚತುರ್ವಿಧ ಪುರುಷಾರ್ಥಗಳಾದ ಧರ್ಮ–ಅರ್ಥ–ಕಾಮ ಮತ್ತು ಮೋಕ್ಷಗಳು ಒಂದು ಸಮಗ್ರ ಸಮನ್ವಯಿತ ರೀತಿಯಲ್ಲಿ ವ್ಯಕ್ತಿಯ ಅಂತಿಮ ಗುರಿಯನ್ನು ರೂಪಿಸುತ್ತವೆ. ಪುರುಷಾರ್ಥಗಳ ಈ ಕಾರ್ಯ ವ್ಯವಸ್ಥೆಯಲ್ಲಿ ಅರ್ಥ–ಕಾಮಗಳು ಧರ್ಮ ಮತ್ತು ಮೋಕ್ಷಗಳ ನಡುವೆ ಇರುಕಿಕೊಂಡಿವೆ. ಐಹಿಕ ಜೀವನ ಒಂದು ಸಮತೋಲನದಲ್ಲಿ ಆಧ್ಯಾತ್ಮಿಕ ಜೀವನೊಂದಿಗೆ ಸಂಯೋಜನೆಗೊಂಡು ಏಕೀಕೃತವಾಗಿದೆ. ಇದರಲ್ಲಿ ಧರ್ಮವೇ ಮುಖ್ಯ ಆಧಾರ, ಧರ್ಮವೇ ಪಾರಮ್ಯ. ಧರ್ಮ ಆದರ್ಶ ಪರಿಸ್ಥಿತಿಯಲ್ಲಿ ಸಮಾಜವನ್ನು ಪೋಷಿಸುತ್ತದೆ, ರಕ್ಷಿಸುತ್ತದೆ. ಆದರ್ಶಮಯವಾದ ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು ಧರ್ಮ ಕ್ರಮಬದ್ಧಗೊಳಿಸುತ್ತದೆ, ಅದಕ್ಕೆ ಸ್ಥಿರತೆಯನ್ನು ನೀಡುತ್ತದೆ. ಈ ವ್ಯವಸ್ಥೆಯ ಚೌಕಟ್ಟಿನೊಳಗೆ ವಿವಿಧ ಸಂಸ್ಥೆಗಳು ಕಾರ್ಯನಿರ್ವಹಿಸಲು ಧರ್ಮ ವಿಧಿವಿಧಾನಗಳನ್ನು ರೂಪಿಸುತ್ತದೆ. ತನ್ಮೂಲಕ ಇವುಗಳ ಕಾರ್ಯನಿರ್ವಹಣೆಯನ್ನು ವಿಧಿ ಬದ್ಧಗೊಳಿಸುತ್ತದೆ. ಇವೆಲ್ಲಕ್ಕೂ ಒಂದು ಅಂಗೀಕಾರಾರ್ಹತೆಯನ್ನು ತಂದುಕೊಡುತ್ತದೆ.

ಹೀಗೆ ಹಿಂದೂಪರಂಪರೆ ವಿವಿಧ ಹಂತಗಳಲ್ಲಿ ಪುನರ್ ನಿರ್ಮಾಣಕ್ಕೆ ಅಗತ್ಯವಾದ ಸಾಧನ ಸಲಕರಣೆಗಳನ್ನು ನಮಗೆ ಒದಗಿಸುತ್ತದೆ. ಇದು ಏಕಾತ್ಮ ಮಾನವದರ್ಶನದ ಗುರಿಗಮ್ಯತೆ. ಚಿಂತನ ಪದ್ಧತಿಗಳ, ಜಿಜ್ಞಾಸೆಗಳ ತೌಲನಿಕ ಅರ್ಹತೆಗಳ ಅಧ್ಯಯನ ಅನವಶ್ಯಕ, ಅದೊಂದು ಅತಿಯಾಗುತ್ತದೆ. ಪ್ರತಿಯೊಂದು ಪದ್ಧತಿಯೂ ತನ್ನಷ್ಟಕ್ಕೇ ಶ್ರೇಷ್ಠವಾದದ್ದು. ಮಹತ್ವವಾದದ್ದು. ಸಮಸ್ಯೆ ಇರುವುದು ಇವುಗಳನ್ನು ಪರಸ್ಪರ ಪೂರಕವಾಗಿ ಸಮನ್ವಯಗೊಳಿಸುವುದೆಂತು ಎನ್ನುವುದರಲ್ಲಿ. ನಮಗೆ ಇದೊಂದು ಅಪರಿಹಾರ್ಯವಾದ ಸಮಸ್ಯೆಯಾಗಬಾರದು. ವ್ಯಾಸ, ಶಂಕರರು ಉಜ್ವಲವಾಗಿ ಸಾಕ್ಷಾತ್ಕಾರಗೊಳಿಸಿರುವ ಸಮನ್ವಯ ದೃಷ್ಟಿ, ಸಮನ್ವಯ ಕೌಶಲ ನಮ್ಮ ರಾಷ್ಟ್ರೀಯ ಮೇಧಾಶಕ್ತಿ, ಧೀಮಂತಿಕೆಗಳ ಒಂದು ಅಸಾಧಾರಣ ಲಕ್ಷಣವಾಗಿದೆ.



**ಆಕರಗಳು**

1. It is also noteworthy that in the West there prevailed nothing equivalent to Dharma which comprises eternal, unchanging Universal Laws and socio-economic orders changing from time to time in the light of the former.
2. Paradoxically enough, feedom of religion has been incorporated now in the latest constitutions of USSR and China and religion is raising its head even in Albania which is "the world's first atheist state":
3. Fainsod in his *How Russia is Ruled.*
4. *A Short History of Communism in Asia.*
5. *The Origin of the Family, Private Property and the State.*
6. The Communist Manifesto devotes some space to wife-sharing.

# ೧೫. ಎಂ.ಎನ್. ರಾಯ್ ಮತ್ತು ದೀನ್ ದಯಾಳ್ : ಮಾನವತಾವಾದದ ಪ್ರತಿಪಾದಕದ್ವಯರು

**ಡಾ. ಅಶೋಕ್ ಮೋದಕ್***

ಶುರುವಿಗೇ ನಾನು ಎರಡು ಮುಖ್ಯ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರಗಳನ್ನು ಕೊಡಬೇಕಾಗಿದೆ. ಮೊದಲನೆಯದು : ಏಕೆ ಇವರಿಬ್ಬರನ್ನೂ ಹೋಲಿಸಿ ನೋಡಬೇಕು? ಎರಡನೆಯದು : ಇವರ ಸಿದ್ಧಾಂತಗಳನ್ನು ಪರಸ್ಪರ ಹೋಲಿಸಿ ನೋಡುವುದು ಹೇಗೆ?

ಮೊದಲನೆಯ ಪ್ರಶ್ನೆಗೆ ಉತ್ತರಿಸುವುದಾದರೆ, ತೀವ್ರಗಾಮಿ ಮಾನವತಾ ವಾದವನ್ನು ಅಖಂಡ ಮಾನವತಾ ವಾದದೊಂದಿಗೆ ಹೋಲಿಸಿ ನೋಡುವುದು ಆಸಕ್ತಿದಾಯಕ ಮಾತ್ರವಲ್ಲ. ಬೋಧಪ್ರದವಾದದೂ ಹೌದು ಎಂದು ನಾನು ಹೇಳಲಿಚ್ಛಿಸುತ್ತೇನೆ. ಈ ಮೊದಲಿನ ಪ್ರತಿಪಾದನೆಯಾದ ಸುಪ್ರಸಿದ್ಧ ರಾಜಕೀಯ ಜಿಜ್ಞಾಸು ಮಾನವೇಂದ್ರನಾಥ್ ರಾಯ್ ಅವರ ಚಿಂತನೆಯೊಂದಿಗೆ ಹೋಲಿಸಿ ನೋಡುವ ಮುನ್ನ ಏಕಾತ್ಮ ಮಾನವ ದರ್ಶನದ ಸೂಕ್ತ ದೃಷ್ಟಿ ಕೋನದಿಂದ ಪರಿಶೀಲಿಸುವುದು ಇಲ್ಲಿಯ ಉದ್ದೇಶವಾಗಿದೆ. ಇದರಿಂದಾಗಿ ಅನೇಕ ವಾದ ವಿವಾದಗಳ ಸ್ಪಷ್ಟ ಚಿತ್ರ. ಸ್ಪಷ್ಟನೆ ಸಾಧ್ಯವಾಗಲಿದೆ. ಮಾನವತಾ ಸಿದ್ಧಾಂತ ಕುರಿತು ಚಿಂತನಮಂಥನ ನಡೆಸಿದವರು ದೀನ್‌ದಯಾಳ್‌ಜಿ ಒಬ್ಬರೇ ಅಲ್ಲ ಅಥವಾ ಖಂಡಿತವಾಗಿಯೂ ಚಿಂತನೆ ನಡೆಸಿದವರಲ್ಲಿ ಮೊದಲಿಗರೂ ಅಲ್ಲ. ಮಾನವ ಹಿತಾಸಕ್ತಿ ತೀವ್ರ ಕಾಳಜಿ, ಕಳವಳಗಳನ್ನು ವ್ಯಕ್ತಪಡಿಸಿರುವ ಬುದ್ಧಿಜೀವಿಗಳ ಒಂದು ತಾರಾಗಣವೇ ಇದೆ. ಇಲ್ಲೊಂದು ಸುಸಂಗತವಾದ, ಸಮಂಜಸವಾದ ಪ್ರಶ್ನೆ ಉದ್ಭವಿಸುತ್ತದೆ: ದೀನ್‌ದಯಾಳಜಿ ತುಂಬ ಸಮರ್ಥವಾಗಿ ಪ್ರತಿಪಾದಿಸಿರುವ ಅಖಂಡ ಮಾನವತಾ ಸಿದ್ಧಾಂತದಲ್ಲಿ ನಾವೀನ್ಯತೆಯಾದರೂ ಏನಿದೆ? ನ್ಯಾಯಕ್ಕಾಗಿ ಜೀವಮಾನ ಇಡೀ ಧರ್ಮಯುದ್ಧ ನಡೆಸಿದ ಮಾನವೇಂದ್ರ ನಾಥ್ ರಾಯ್ ಆಖೈರಾಗಿ ಮಾನವತಾ ಸಿದ್ಧಾಂತವನ್ನು ರೂಪಿಸಿದರು. ಆಶ್ಚರ್ಯದ ಮಾತೆಂದರೆ ಶುರುವಿನಲ್ಲೇ

* ರೀಡರ್, ಸೋವಿಯತ್ ಅಧ್ಯಯನ ಕೇಂದ್ರ, ಮುಂಬಯಿ ವಿಶ್ವವಿದ್ಯಾನಿಲಯ



ಅವರು ಈ ಸಿದ್ಧಾಂತಕ್ಕೆ "ಅಖಂಡ ಮಾನವತಾಸಿದ್ಧಾಂತ" ಎಂದು ನಾಮಕರಣ ಮಾಡಿದ್ದರು. ಎಂ.ಎನ್. ರಾಯ್ ಅವರು ಎಲ್ಲಿ, ಹೇಗೆ ಈ ಶಿರೋನಾಮೆಯನ್ನು ಸೃಷ್ಟಿಸಿದರು ನಾನು ನಂತರ ವಿವರಿಸಲಿದ್ದೇನೆ. ಎಂ.ಎನ್. ರಾಯ್ ಅವರೂ ಇದೇ ಶಿರೋನಾಮೆಯಡಿ ಮಾನವತಾ ಸಿದ್ಧಾಂತವನ್ನು ಪ್ರಚುರ ಪಡಿಸುವ ಪ್ರಯತ್ನಮಾಡಿದ್ದರು ನಂತರದ ದಿನಗಳಲ್ಲಿ ದೀನ್ ದಯಾಳ್ ಉಪಾಧ್ಯಾಯರು ಈ ಶಿರೋನಾಮೆಯನ್ನೆತ್ತಿಕೊಂಡರು ಎಂದಷ್ಟೆ ಹೇಳುವುದು ಸದ್ಯದ ಸಂದರ್ಭದಲ್ಲಿ ಸಾಕಾದೀತು. ಈ ವಿಷಯ ಕುರಿತು ಪ್ರಬಂಧರಚಿಸಲು ನನಗೆ ಇದೊಂದು ಹೆಚ್ಚಿನ ಕಾರಣವಾಯಿತು ಜೊತೆಗೆ, ಮಾನವೇಂದ್ರನಾಥ್ ಮತ್ತು ದೀನ್ ದಯಾಳಜಿ ಇಬ್ಬರೂ ಇವತ್ತಿನ ಭಾರತದ ರಾಜಕಾರಣದಲ್ಲಿ ತುಂಬ ಅಪರೂಪವಾಗುತ್ತಿರುವ ಕ್ರಿಯಾಶೀಲ ಬುದ್ಧಿಜೀವಿಗಳ ವರ್ಗಕ್ಕೆ ಸೇರಿದವರು. "ಧರ್ಮ ಮತ್ತು ನಂಬಿಕೆಗಳಿಗೆ ಯಾವುದೇ ಆಧಾರ ಇಲ್ಲ ಎಂಬುದನ್ನು ಕಂಡು ಹಿಡಿದ ಭಾರತೀಯ ಚಿಂತಕರು ಕೆಲವೇ ಮಂದಿ ಅದರಲ್ಲಿ ಎಂ.ಎಸ್. ರಾಯ್ ತನಿಯಾಗಿ ನಿಲ್ಲುತ್ತಾರೆ" ಎನ್ನುವುದು ಅಲ್ಲಗಳೆಯಲಾಗದ ಸಂಗತಿ. ಪಂಡಿತ್ ದೀನದಯಾಳ್ ಉಪಾಧ್ಯಾಯರು ಧರ್ಮರಾಜ್ಯ ಪರಿಕಲ್ಪನೆಯಲ್ಲಿ ಅಪಾರವಾದ ನಂಬಿಕೆಯುಳ್ಳವರಾಗಿದ್ದರು ಅವರು ಮಹಾತ್ಮಗಾಂಧಿಯವರಂತೆ ರಾಜಕೀಯವನ್ನೂ ಆಧ್ಯಾತ್ಮೀಕರಿಸಲಿಚ್ಛಿಸಿದ್ದರು. ಮಾನವೇಂದ್ರನಾಥ್ ಮತ್ತು ದೀನದಯಾಳರನ್ನು ತುಲನಾತ್ಮಕ ಅಧ್ಯಯನ ಮಾಡುವುದು ತುಂಬ ಪ್ರಯೋಜನಕಾರಿ. ಏಕೆಂದರೆ, ತಾಯ್ನಾಡಿನ ಇಬ್ಬರು ಉಜ್ವಲವ್ಯಕ್ತಿಗಳು ಹೇಗೆ ತಮ್ಮದೇ ಆದ ರೀತಿಯಲ್ಲಿ ಮಾನವತಾ ತತ್ತ್ವದರ್ಶನವನ್ನು ವ್ಯಾಖ್ಯಾನ ಮಾಡಿದರು ಎನ್ನುವುದನ್ನು ತಿಳಿಯಲು ಸಾಧ್ಯವಾಗುತ್ತದೆ.

ಇಂಥ ತೌಲನಿಕ ಅಧ್ಯಯನ ಏಕಾತ್ಮ ಮಾನವತಾ ಸಿದ್ಧಾಂತವನ್ನು ಅರಿತುಕೊಳ್ಳಲು ಸೂಕ್ತವಾದ ದೃಷ್ಟಿಕೋನವನ್ನು ಒದಗಿಸುತ್ತದೆ. ಮಿಗಿಲಾಗಿ ಇದು ತೀವ್ರಗಾಮಿ ಮಾನವತಾವಾದ ಮತ್ತು ಅಖಂಡ ಮಾನವತಾವಾದದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಲಿದೆ. ಮಾನವತಾ ತತ್ತ್ವ ಸಿದ್ಧಾಂತವನ್ನು ಹೇಗೆ ಐಹಿಕ ದೃಷ್ಟಿಕೋನದಿಂದ ನೋಡಲು ಸಾಧ್ಯ, ಹೇಗೆ ಆಧ್ಯಾತ್ಮಿಕ ದೃಷ್ಟಿಕೋನದಿಂದ ನೋಡಲು ಸಾಧ್ಯ ಎನ್ನುವುದೂ ಇಂಥ ಅಧ್ಯಯನದಿಂದ ಗೊತ್ತಾಗಲಿದೆ.

ತೀವ್ರಗಾಮಿ ಮಾನವತಾವಾದ ಮತ್ತು ಏಕಾತ್ಮ ಮಾನವದರ್ಶನಗಳನ್ನು ತುಲನಾತ್ಮಕವಾಗಿ ಪರಾಮರ್ಶಿಸುವಾಗ ನನ್ನ ಮಾರ್ಗ ಹೇಗಿರುತ್ತದೆ? ಮಾರ್ಗ ಯಾವುದಿರುತ್ತದೆ ಎಂಬುದನ್ನು ನನ್ನ ಎರಡನೆಯ ಪ್ರಶ್ನೆ ತಿಳಿಯಲಪೇಕ್ಷಿಸುತ್ತದೆ. ತತ್ತ್ವಶಾಸ್ತ್ರದ ವಿದ್ಯಾರ್ಥಿ ತತ್ತ್ವವಿಜ್ಞಾನಿಯ ಬದುಕನ್ನು ಉಪೇಕ್ಷಿಸಲಾರ. ಚಿಂತಕನ ಬದುಕು ಅವನ ಚಿಂತನೆಯ ಮಾರ್ಗವನ್ನು ರೂಪಿಸುತ್ತದೆ. ಅಂತೆಯೇ ಒಂದು ನಿರ್ದಿಷ್ಟ ಚಿಂತನಕ್ರಮನ್ನು ಪ್ರಜ್ಞಾಪೂರ್ವಕವಾಗಿ ಸ್ವೀಕರಿಸುವುದೂ ಚಿಂತಕನ ಜೀವನ

ವಿನ್ಯಾಸವನ್ನು ನಿರ್ಧರಿಸುತ್ತದೆ. ಇಂಥ ವಿವಾದಗಳನ್ನು ಬಿಡಿಸುವ ಅಗತ್ಯವಿಲ್ಲ. ತತ್ತ್ವಶಾಸ್ತ್ರದ ಉಗಮ ಮತ್ತು ಬೆಳವಣಿಗೆಯ ಪರಾಮರ್ಶೆ ವಿದ್ಯಾರ್ಥಿ, ತತ್ತ್ವಶಾಸ್ತ್ರ ಜೀವನವನ್ನು ಹೇಗೆ ರೂಪಿಸಿತು ಎನ್ನುವುದನ್ನು ಅರಿತುಕೊಳ್ಳಲು ದಾರಿದೀಪವಾಗುತ್ತದೆ. ಜೊತೆಗೆ ತತ್ತ್ವಶಾಸ್ತ್ರ ಹೇಗೆ ತತ್ತ್ವಜ್ಞಾನಿಯ ಬದುಕಿನಿಂದ ರೂಪುಗೊಂಡಿತು ಎನ್ನುವುದೂ ಗೊತ್ತಾಗುತ್ತದೆ. ಇದೇ ಮುಖ್ಯವಾದದ್ದು. ಇಂಥ ಪರಿಶೀಲನೆಯಿಂದ, ಹೇಗೆ ಒಂದು ನಿರ್ದಿಷ್ಟ ವಿಧಾನದಲ್ಲಿ ಸಮಸ್ಯೆಯನ್ನು ಪತ್ತೆಮಾಡಲಾಯಿತು ಹಾಗೂ ಹೇಗೆ ಅದಕ್ಕೆ ಪರಿಹಾರ ಕಂಡುಹಿಡಿಯಲಾಯಿತು. ಒಬ್ಬ ತತ್ತ್ವಜ್ಞಾನಿಯಿಂದ ನಿರ್ದಿಷ್ಟ ರೀತಿಯಲ್ಲಿ ಹೇಗೆ ಪರಿಹಾರ ಕಂಡು ಹಿಡಿಯಲು ಸಾಧ್ಯವಾಯಿತು ಎನ್ನುವುದನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ.

ಈ ಪ್ರಬಂಧದಲ್ಲಿ ಮೊದಲಿಗೆ ಎಂ.ಎನ್. ರಾಯ್ ಮತ್ತು ದೀನ್ ದಯಾಳ್ ಉಪಾಧ್ಯಾಯರು ಸಮಕಾಲೀನ ಸಮಸ್ಯೆಗಳನ್ನು ಅದಕ್ಕೆ ಕಾರಣಗಳನ್ನು ಗುರುತಿಸಿದರೆಂಬುದನ್ನು ಪರಿಶೀಲಿಸಲಾಗುವುದು. ನಂತರ ಚಿಂತಕರು ಶಿಫಾರಸುಮಾಡಿರುವ ಪರಿಹಾರಗಳನ್ನು ವಿಶ್ಲೇಷಿಸಲಾಗುವುದು. ಆಖೈರಾಗಿ ನಾವು ಈ ಎರಡೂ ತತ್ತ್ವ ಸಿದ್ಧಾಂತಗಳ ಗುಣಲಕ್ಷಣಗಳನ್ನು ಸಾರಾಂಶರೂಪದಲ್ಲಿ ಹೇಳಬಹುದು.

ಎಂ.ಎನ್. ರಾಯ್ ಮತ್ತು ದೀನ್ ದಯಾಳರು ನಡೆಸಿದ ಸಮಕಾಲೀನ ಸಮಸ್ಯೆಗಳ ನಿದಾನ ಕುರಿತು ಅಧ್ಯಯನ ಮಾಡುವುದಕ್ಕೆ ಮೊದಲು ಇವರಿಬ್ಬರೂ ಮಾನವತಾವಾದಿಂದ ಆಕರ್ಷಿತರಾದದ್ದು ಹೇಗೆ ಎನ್ನುವುದನ್ನು ತಿಳಿಯುವುದು ಅಪೇಕ್ಷಣೀಯ. ಕಮ್ಯುನಿಸ್ಟ್ ಚಳವಳಿಯ ಅನುಭವಗಳಿಂದ ಆದ ಹತಾಶೆ ಎಂ.ಎನ್. ರಾಯ್ ಅವರಿಗೆ ಮಾನವತಾವಾದದ ಮಹತ್ವವನ್ನು ಅರ್ಥಮಾಡಿಕೊಳ್ಳಲು ಕಾರಣವಾಯಿತು. ದೀನದಯಾಳರು ಹಿಂದೂ ಸಂಸ್ಕೃತಿಯ ಅಧ್ಯಯನದ ಮುಖಾಂತರ ಮಾನವತಾವಾದದಿಂದ ಆಕರ್ಷಿತರಾದರು. ಇವರಿಬ್ಬರ ನಡುವಣ ಈ ವ್ಯತ್ಯಾಸದ ಫಲ ಪರಿಣಾಮಗಳೆಂದರೆ, ಎಂ.ಎನ್. ರಾಯ್ ಅವರು ನಮ್ಮಲ್ಲಿ ತಮ್ಮ ಬಗ್ಗೆ ಸಹಾನುಭೂತಿ ಉಕ್ಕುವಂತೆ ಮಾಡುತ್ತಾರೆ; ದೀನದಯಾಳರು ನಮ್ಮ ಸಂಸ್ಕೃತಿಯ ಅಧ್ಯಯನಕ್ಕೆ ಒತ್ತಾಸೆಯಾಗುತ್ತಾರೆ. ರಾಯ್ ಅವರ ಮನೋಧರ್ಮ ನೇತ್ಯಾತ್ಮಕವಾದುದಾದರೆ, ದೀನ್‌ದಯಾಳ್ ಅವರದು ಇತ್ಯಾತ್ಮಕವಾದದ್ದು. ಕಮ್ಯುನಿಸ್ಟ್ ಚಳವಳಿಯ ಕಹಿ ಅನುಭವಗಳು ರಾಯ್ ಅವರನ್ನು ವಿವಿಧ ಕ್ಷೇತ್ರಗಳಲ್ಲಿ ಸೋವಿಯತ್ ಒಕ್ಕೂಟದ ಸಾಧನೆಗಳ ವಿಮರ್ಶಾತ್ಮಕ್ಕೆ ಅಧ್ಯಯನಕ್ಕೆ ಹಚ್ಚಿದವು. ಇದರಿಂದಾಗಿಯೇ ಮಾರ್ಕ್ಸ್ ಸಿದ್ಧಾಂತದ ಸೂತ್ರಗಳನ್ನು ಕಟು ವಿಮರ್ಶೆಗೆ ಒಳಪಡಿಸಿದರು. ಇಂಥ ಕಟುವಿಮರ್ಶೆ, ಉಗ್ರಪರೀಕ್ಷೆಗಳು ಅವರನ್ನು ನಿಷ್ಠಾವಂತ ಕಮ್ಯುನಿಸ್ಟರಿಗೆ ಹಾಗೂ ಬುದ್ಧಿಜೀವಿ ಮಾರ್ಕ್ಸ್‌ವಾದಿಗಳಿಗೆ ಸಮಾಲೊಡ್ಡುವಂತೆ ಪ್ರೇರೇಪಿಸಿದವು. (ಮಾಸ್ಕೋ ಅಥವಾ ಪೀಕಿಂಗ್‌ಗೆ ನಿಷ್ಠನಾದ ಕಮ್ಯುನಿಸ್ಟ್ ಅತ್ಯವಶ್ಯಕವಾಗಿ ಬುದ್ಧಿವಂತನೇ ಆಗಿರಬೇಕಿಲ್ಲ. ಅವನು ಮಾರ್ಕ್ಸಿಸಂನಲ್ಲಿ ನಿಷ್ಠೆ ತೋರೆದು ಮಾಸ್ಕೋ ಅಥವಾ ಪೀಕಿಂಗ್‌ನ ಗಾಳಿಯನ್ನು ಅನುಸರಿಸುತ್ತಾನೆ). 'ರೀಸನ್, ರೊಮ್ಯಾಂಟಿಸಿಸಂ ಅಂಡ್ ರೆವಲ್ಯೂಶನ್' ೧೯೫೫ರಲ್ಲಿ ರಾಯ್ ಅವರು ರಚಿಸಿದ ಕೃತಿ. ಈ ಕೃತಿಯಲ್ಲಿ ತತ್ತ್ವಶಾಸ್ತ್ರ ದರ್ಶನ ಕ್ಷೇತ್ರದಲ್ಲಿ ಮಾಡಿರುವ ವಿವಿಧ ಪ್ರಯೋಗಗಳನ್ನು ತೀವ್ರವಾಗಿ ಖಂಡಿಸಲಾಗಿದೆ. ಈ ಗ್ರಂಥದಲ್ಲಿ ರಾಯ್, ಮಾರ್ಕ್ಸ್ ಸಿದ್ಧಾಂತವಾಗಲೀ ಬಂಡವಾಳಶಾಹಿಯಾಗಲೀ ಪ್ರಪಂಚದ ವ್ಯಾಧಿಗಳಿಗೆ ಔಷಧವಲ್ಲ ಎಂದು ಓದುಗರಿಗೆ ಯಶಸ್ವಿಯಾಗಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಈ ಗ್ರಂಥದಿಂದ ಆಯ್ದ ಒಂದು ಉಲ್ಲೇಖವನ್ನು ಗಮನಿಸದೇ ಇರಲಾಗದು:

> **"......ವ್ಯಕ್ತಿಯ ಚಾರಿತ್ರ್ಯಹರಣ ವ್ಯಕ್ತಿಸ್ವಾತಂತ್ರ್ಯ ಕುರಿತ ಮುಕ್ತ ಪ್ರಜಾಸತ್ತಾತ್ಮಕ ಸಿದ್ಧಾಂತವನ್ನು ಕಳಂಕಗೊಳಿಸಿತು. ಹಾಗೂ ಮಾರ್ಕ್ಸ್‌ವಾದಿ ಸಮಷ್ಟಿ ಸ್ವಾಮ್ಯವಾದ ತಲೆಎತ್ತಲು ಅನುವು ಮಾಡಿಕೊಟ್ಟಿತು. ಇದು ಸಂಸ್ಥೆಗಳು ಮಾನವನನ್ನು ಸಂಪೂರ್ಣವಾಗಿ ಮರೆಮಾಡುತ್ತವೆ, ವ್ಯಕ್ತಿ ನಗಣ್ಯನಾಗುತ್ತಾನೆ ಎನ್ನುವ ವಾದವನ್ನು ಮಾನ್ಯ ಮಾಡಿದವು. ಈ ಆಕ್ಷೇಪಣೆಗೆ ಪ್ರತಿಯಾಗಿ ಸಮಾಜದ ಪುನರ್ ನಿರ್ಮಾಣ ಮಾನವನ ಸ್ವಾತಂತ್ರ್ಯವನ್ನು ಮರಳಿಸುವುದೆಂಬ ವಾದವನ್ನು ಮಂಡಿಸಲಾಯಿತು. ಆದರೆ ಆಖೈರಾಗಿ, ನಿರಂಕುಶ ಸರ್ವಾಧಿಕಾರಗಳ ಸಂಘರ್ಷದಲ್ಲಿ ಪ್ರಜಾಪ್ರಭುತ್ವವನ್ನು ನಾಶಗೊಳಿಸಲಾಯಿತು. ನಮ್ಮಕಾಲದ ಅತ್ಯಂತ ದೊಡ್ಡ ಬಿಕ್ಕಟ್ಟೊಂದು ನಾಗರಿಕ ಮನುಕುಲವನ್ನು ಆವರಿಸಿತು. ಇದು, ಬಹುಶಃ ಇತಿಹಾಸ ಕಂಡರಿಯದ ಮಹಾನ್ ದುರಂತ. ರಾಜಕೀಯ, ಆರ್ಥಿಕ, ನೈತಿಕ, ಆಧ್ಯಾತ್ಮಿಕಗಳನ್ನೊಳಗೊಂಡ, ಇಡೀ ಮನುಕುಲದ ಆಸ್ತಿತ್ವಕ್ಕೇ ರಾಹುಗ್ರಸ್ತವಾದ ದುರಂತ."**

ಮಾನವೀಯತೆ ಕುರಿತಂತೆ ದೀನ್ ದಯಾಳರ ಚಿಂತನಕ್ರಮವೇ ಸಂಪೂರ್ಣವಾಗಿ ಭಿನ್ನವಾದದ್ದು. ದೀನ್ ದಯಾಳರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿ ಸಮಾಜಸೇವೆಯ ತಮ್ಮ ಬದುಕನ್ನು ಆರಂಭಿಸಿದರು. ಹಿಂದೂ ಸಂಸ್ಕೃತಿಯ ಆಧಾರದ ಮೇಲೆ ರಾಷ್ಟ್ರದ ಪುನರ್ ನಿರ್ಮಾಣಕ್ಕಾಗಿ ಪಣತೊಟ್ಟು ೧೯೩೭ರಲ್ಲಿ ಕಾರ್ಯೋನ್ಮುಖವಾದ ಆರೆಸ್ಸೆಸ್ ದೀನ್ ದಯಾಳರಿಗೆ ತಮ್ಮ ವ್ಯಕ್ತಿತ್ವದ ಸಂಪೂರ್ಣ ಪ್ರಕಾಶಕ್ಕೆ ಸಾಕಷ್ಟು ಕಾಲವನ್ನೂ, ಕೆಲಸವನ್ನೂ ನೀಡಿತು. ಆರೆಸ್ಸೆಸ್ ಒಂದು ರಾಷ್ಟ್ರೀಯ ಸಂಸ್ಥೆ, ಆಂದೋಲನವಲ್ಲ. ಆದ್ದರಿಂದ ಅದರ ಆಸಕ್ತಿ ಅಖಿಲಭಾರತ ಮಟ್ಟದ ಆಪಾರ ಅನ್ವಯಿತ ಕಾರ್ಯಸ್ವರೂಪದ ಕಾಯಕದಲ್ಲಿ. ಯಾವುದೇ ಚಳವಳಿ, ಆಂದೋಲನ ವ್ಯಕ್ತಿಯ, ವ್ಯಕ್ತಿಗತ ಜೀವನ ಅಥವಾ ಸಾಮಾಜಿಕ ಜೀವನದಲ್ಲಿ, ವ್ಯಕ್ತಿಯ ಪ್ರಾಧಾನ್ಯವನ್ನೇ ಮೆರೆಸಲು ಆರೆಸ್ಸೆಸ್ ಅವಕಾಶ ನೀಡುವುದಿಲ್ಲ. ಅಂದರೆ ಆರೆಸ್ಸೆಸ್, ವ್ಯಕ್ತಿ ಮತ್ತು ಸಾಮಾಜಿಕ ಜೀವನದ ಮಧ್ಯೆ ಗಡಿರೇಖೆಯನ್ನು

ಗುರುತಿಸಲು ಇಚ್ಛಿಸುವುದಿಲ್ಲ. ವ್ಯಕ್ತಿಗತ ಜೀವನವಿರಲಿ, ಸಾಮಾಜಿಕ ಜೀವನವಿರಲಿ, ವ್ಯಕ್ತಿ ತನ್ನ ನಡವಳಿಕೆಯಲ್ಲಿ ಹಿಂದೂ ಸಂಸ್ಕೃತಿಯನ್ನು ಬಿಂಬಿಸಬೇಕು ಎಂದು ಆರೆಸ್ಸೆಸ್ ನಿರೀಕ್ಷೆ. ಆರೆಸ್ಸೆಸ್ ವ್ಯಕ್ತಿಯಲ್ಲಿ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಬಿತ್ತುತ್ತದೆ ಹಾಗೂ ಇದರ ಗುರಿ ಭಾರತದಾದ್ಯಂತ ನಡೆದ ಇಂಥ ಕೆಲಸವನ್ನು ಆಧರಿಸಿದ ರಾಷ್ಟ್ರೀಯ ಏಕತೆಯೇ ಆಗಿರುತ್ತದೆ. ದೀನ್ ದಯಾಳ್ ಉಪಾಧ್ಯಾಯರು ಪ್ರತಿಪಾದಿಸಿದ ಏಕಾತ್ಮ ಮಾನವದರ್ಶನದ ಬೀಜಗಳು ಅವರು ಆರೆಸ್ಸೆಸ್‌ನ ಪ್ರಚಾರಕರಾಗಿದ್ದ ಕಾಲದಲ್ಲೇ ಬಿತ್ತನೆಗೊಂಡ ಬೀಜಗಳು.

ಸಂಕ್ಷೇಪವಾಗಿ ಹೇಳುವುದಾದರೆ, ಕಮ್ಯುನಿಸ್ಟ್ ಚಳವಳಿ ಮಾನವೇಂದ್ರನಾಥರನ್ನು ತೀವ್ರಗಾಮಿ ಮಾನವತಾವಾದದ ಪಥದತ್ತ ಮುನ್ನುಗ್ಗಲು ಪ್ರೇರೇಪಿಸಿತು. ಆರೆಸ್ಸೆಸ್ ಹದಗೊಳಿಸಿದ ಅಖಂಡತೆಯ ಮನೋಧರ್ಮ ದೀನದಯಾಳರನ್ನು ಏಕಾತ್ಮ ಮಾನವದರ್ಶನದ ಪ್ರತಿಪಾದಕರನ್ನಾಗಿಸಿತು.

ಕೆಳಗೆ ಬರುವ ಅಧ್ಯಾಯಗಳಲ್ಲಿ, "ಮಾನವೀಯತೆಯತ್ತ ಮಾನವೇಂದ್ರರ ಪಥದಲ್ಲಿ" ಮುಖ್ಯ ಗುಣಲಕ್ಷಣಗಳನ್ನು ಗುರುತಿಸುವ ಪ್ರಯತ್ನಮಾಡಲಾಗಿದೆ. ಜೊತೆ ಜೊತೆಗೇ "ಮಾನವೀಯತೆಯತ್ತ ದೀನದಯಾಳರ ಪಥವನ್ನು" ಗುರುತಿಸಲಾಗಿದೆ. ಈ ಬಗೆಯ ಚರ್ಚೆಯ ಒಂದು ಅನುಕೂಲವೆಂದರೆ, ಎರಡೂ ಪಂಥಗಳ ಹೋಲಿಕೆಗಳು ಮತ್ತು ವೈರುಧ್ಯಗಳನ್ನು ಗುರುತಿಸಲು ಸಾಧ್ಯವಾಗುವುದು. "ಮಾನವೀಯತೆಯ ಪಥ", ಮಾನವೇಂದ್ರ ನಾಥರು ಹಾಗೂ ದೀನದಯಾಳರು ಮಾನವತಾ ಸಿದ್ಧಾಂತಕ್ಕೆ ಹೇಗೆ ಬಂದು ಮುಟ್ಟಿದರು ಎಂಬುದನ್ನು ಚರ್ಚಿಸಲು ನಮಗೆ ಮಾರ್ಗಸೂಚಿಯಾಗಲಿದೆ. ಸಮಸ್ಯೆ ಮತ್ತು ನಿಧಾನ ಕುರಿತ, ಪರಿಹಾರಗಳನ್ನು ಕುರಿತ ಯಥಾರ್ಥ ಮಾನವತಾ ಸಿದ್ಧಾಂತವನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

**ಮಾನವತಾವಾದ–ಮಾನವೇಂದ್ರರ ಪಥ**

ಮಾನವೇಂದ್ರರ ಪಥದ ಮುಖ್ಯ ಲಕ್ಷಣಗಳನ್ನು, ಸಂಗತಿಗಳನ್ನು ಈ ಕೆಳಗಿನಂತೆ ಪಟ್ಟಿಮಾಡಬಹುದು.

**೧. ನೇತ್ಯಾತ್ಮಕ ದೃಷ್ಟಿ ಮತ್ತು ಸಂಶಯಪ್ರವೃತ್ತಿಯ ಫಲವಾದ ಹತಾಶೆ.**
**೨. ಮಾರ್ಕ್ಸ್ ಸಿದ್ಧಾಂತದ ಕೆಲವೊಂದು ವಿಚಾರಗಳು ಮನಸ್ಸಿನ ಮೇಲೆ ಬೀರಿದ ಗಾಢ ಪ್ರಭಾವದ ಪರಿಣಾಮಗಳು**
**೩. ಐರೋಪ್ಯ ಮಾನದಂಡದ ಅನ್ವಯೀಕರಣ**
**೪. ಉಪಕರಣವಾದದ ಅನ್ವಯೀಕರಣ**

ಈಗ ನಾವು ಈ ಲಕ್ಷಣಗಳನ್ನು ಕುರಿತು ವಿವರವಾಗಿ ಚರ್ಚಿಸಬಹುದು.



**೧. ನೇತ್ಯಾತ್ಮಕ ದೃಷ್ಟಿಯ ಫಲವಾದ ಹತಾಶೆ**

೧೯೪೮ರಲ್ಲಿ ಎಂ.ಎನ್. ರಾಯ್ "ದಿ ಹ್ಯೂಮನಿಸ್ಟ್ ವೇ" (ಮಾನವತಾ ಮಾರ್ಗ) ಎನ್ನುವ ತ್ರೈಮಾಸಿಕದ ಪ್ರಕಟಣೆಯನ್ನು ಪ್ರಾರಂಭಿಸಿದರು. ಇಲ್ಲಿ ನಾವು ಗಮನಿಸಬೇಕಾದ ಒಂದು ಅಂಶವಿದೆ. ಅದು : ವಾಸ್ತವವಾಗಿ ಮಾನವೇಂದ್ರ ನಾಥರು ೧೯೪೫ರಲ್ಲೇ 'ದಿ ಮಾರ್ಕ್ಸಿಯನ್ ವೇ' (ಮಾರ್ಕ್ಸ್‌ವಾದದ ಮಾರ್ಗ) ಎನ್ನುವ ಹೆಸರಿನ ತ್ರೈಮಾಸಿಕವೊಂದನ್ನು ಪ್ರಾರಂಭಿಸಿದ್ದರು ಎಂಬುದು. ಅದೇ ೧೯೪೮ರಲ್ಲಿ 'ದಿ ಹೂಮನಿಸ್ಟ್ ವೇ' ಆಯಿತು. ಆದರೆ ಈ ಹೆಸರು ಬದಲಾವಣೆ ತುಂಬ ಗಮನಾರ್ಹವಾದದ್ದು. ಎಂ.ಎನ್. ರಾಯ್ ಮಾನವನಾ ಪಥದತ್ತ ಮಾರ್ಗ ಬದಲಾಯಿಸುತ್ತಿರುವುದನ್ನು ಅದು ಬಿಂಬಿಸುತ್ತದೆ. ಈ ಬದಲಾವಣೆ ೧೯೪೮ರಲ್ಲಿ ಹಠಾತ್ತನೆ ಸಂಭವಿಸಿದ್ದಲ್ಲ. ೧೯೩೩ರಷ್ಟು ಹಿಂದೆಯೇ ರಾಯ್ ಅವರ ವೈಚಾರಿಕ ಪ್ರಧಾನ ಮನಸ್ಸು ಮಾರ್ಕ್ಸ್‌ವಾದದ ಎಲ್ಲೆಗಳನ್ನು ಮೀರಿ ಹೊರಬರಲು ತಡಕಾಡುತ್ತಿತ್ತು. ೧೯೪೦ರ ಮೇ ತಿಂಗಳಲ್ಲಿ ಡೆಹರಾಡೂನ್ ಬೇಸಿಗೆ ಶಿಬಿರವೊಂದರಲ್ಲಿ ಮಾತನಾಡುತ್ತ ಸ್ವತಃ ರಾಯ್ ಅವರೇ ಈ ಮಾತನ್ನು ಒಪ್ಪಿಕೊಂಡಿದ್ದಾರೆ. (ಈ ಭಾಷಣಗಳನ್ನು ನಂತರ ೧೯೪೨ರ ನವೆಂಬರ್‌ನಲ್ಲಿ "ಸೈಂಟಿಫಿಕ್ ಪಾಲಿಟಿಕ್ಸ್" ಎನ್ನುವ ಗ್ರಂಥರೂಪದಲ್ಲಿ ಪ್ರಕಟಿಸಲಾಯಿತು). ರಾಯ್ ಅವರು ಅವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದ್ದಾರೆ:

> "ಏಳು ವರ್ಷಗಳ ಹಿಂದೆ ನಾನು ಸಂಪ್ರದಾಯಬದ್ಧ ಮಾರ್ಕ್ಸ್‌ವಾದಿಯಾಗಿ ಶುದ್ಧ ಸೂತ್ರ–ತತ್ತ್ವಗಳಿಂದ ಪಥ ಬದಲಿಸುವ ಬಗ್ಗೆ ಟೀಕಿಸಿದ್ದೆ. ಆ ಕಾಲದಲ್ಲೂ ಕಮ್ಯುನಿಸಂನಾಚೆ ನೋಡುವ ದೃಷ್ಟಿ–ಧೋರಣೆಗಳಿದ್ದವು. ವರ್ಗ ಹೋರಾಟ ಕುರಿತು ಮಾತನಾಡುವಾಗ ನಾನು ಸಾಮಾಜಿಕ ವ್ಯವಸ್ಥೆ, ಸಂಘಟನೆಯ ಅಂಟುನಂಟುಗಳ ಅಂಶಕ್ಕೆ ಹೆಚ್ಚು ಮಹತ್ವ ನೀಡಿದ್ದೆ."

ಎರಡನೇ ಮಹಾಯುದ್ಧಕ್ಕೂ ಮುಂಚೆಯೇ ಎಂ.ಎನ್. ರಾಯ್ ಅವರ ಜೀವನದಲ್ಲಿ ಹೊಸ ಚಿಂತನ ಮಾರ್ಗವೊಂದು ಹೀಗೆ ರೂಪುಗೊಳ್ಳುತ್ತಿತ್ತು ಎರಡನೇ ಮಹಾಯುದ್ಧೋತ್ತರ ವರ್ಷಗಳಲ್ಲಿ ಈ ಚಿಂತನ ಮಾರ್ಗ ಸ್ಪಷ್ಟ ರೂಪುರೇಷೆಯನ್ನು ಪಡೆದುಕೊಂಡಿತು. ೧೯೪೬ರ ತಿಂಗಳಲ್ಲಿ ಡೆಹರಾಡೂನ್‌ನಲ್ಲಿ ನಡೆದ ಅಧ್ಯಯನ ಶಿಬಿರ ತಮ್ಮ ವಿಮೋಚನಾ ತತ್ತ್ವಗಳನ್ನು ಅನುಯಾಯಿಗಳಿಗೆ ವಿವರಿಸಿ ಹೇಳಲು ಒಂದು ಮಹತ್ತ್ವದ ಅವಕಾಶವನ್ನು ಕಲ್ಪಿಸಿತು. ಬಹಳಕಾಲದಿಂದ ಅನೇಕ ವಿಷಯ ವಿಚಾರಗಳು ಅವರ ಮನಸ್ಸನ್ನು ಕೊರೆಯುತ್ತಿದ್ದವು. ಈ ವಿಷಯಗಳ ಬಗ್ಗೆ ಆಳವಾದ ಧ್ಯಾನ ಚಿಂತನೆಗಳು ಖಚಿತವಾದ ತೀರ್ಮಾನಗಳಿಗೆಡೆ ಮಾಡಿಕೊಟ್ಟಿದ್ದವು. ಇಪ್ಪತ್ತನೆ ಶತಮಾನದ ಭೌತಶಾಸ್ತ್ರ ಲೋಕಾಯತ ವಾದದ ಅಡಿಪಾಯವನ್ನು ಸ್ಫೋಟಿಸಿತೆನ್ನುವುದನ್ನು ಅವರು ಕಂಡುಕೊಂಡರು. ಆದ್ದರಿಂದಲೇ ಅವರು ಹೀಗೆ

ಹೇಳಿದರು.

> **“ಆಧುನಿಕ ಭೌತಶಾಸ್ತ್ರ ಹತ್ತೊಂಬತ್ತನೆ ಶತಮಾನದ ಐಹಿಕ ಸಿದ್ಧಾಂತವನ್ನು ಸಂಪೂರ್ಣವಾಗಿ ಅಸಮರ್ಥನೀಯವಾಗಿಸಿದೆ. ತರ್ಕರಹಿತವಾಗಿಸಿದೆ. ಆದಾಗ್ಯೂ ಮಾರ್ಕ್ಸ್‌ವಾದಿ ಪಂಡಿತರು ಇನ್ನೂ ಇಪ್ಪತ್ತನೆ ಶತಮಾನದ ಭೌತಶಾಸ್ತ್ರವನ್ನಾಧರಿಸಿ ತಾತ್ತ್ವಿಕ ವಿಮರ್ಶೆಯ ವಿರುದ್ಧ ಹೋರಾಟದಲ್ಲಿ ತೊಡಗಿದ್ದಾರೆ. ಇಂದಿಗೂ ಅವರು ನೂರು ವರ್ಷಗಳಷ್ಟು ಹಿಂದೆ ಬರೆಯಲಾದ ಏಂಗಲ್ಸ್‌ನ” "Anti-Duhring" ಗ್ರಂಥದಿಂದ ಸೂಕ್ತಿಗಳನ್ನು ಉಲ್ಲೇಖಿಸುತ್ತಾರೆ”**

ಅವರು ಮುಂದುವರಿದು ತುಂಬ ದಿಟ್ಟವಾದ ಟೀಕೆಮಾಡಿದರು.

> **“ನಾವು ಮಾರ್ಕ್ಸ್‌ನ ಎಲ್ಲ ಕೃತಿಗಳನ್ನೂ ಧೂಳು ತುಂಬಿದ ಪತ್ರಾಗಾರಕ್ಕೆಸೆಯಬೇಕು. ಅವುಗಳಿಗೆ ಇವತ್ತಾಗಲೀ, ಭವಿಷ್ಯದಲ್ಲಾಗಲೀ ಐತಿಹಾಸಿಕ ಮೌಲ್ಯಕ್ಕಿಂತ ಹೆಚ್ಚಿನ ಕಿಮ್ಮತ್ತನ್ನು ಹಚ್ಚಬಾರದು”**

೧೯೩೩ರಲ್ಲಿ ಮಾರ್ಕ್ಸ್‌ನ ಎಲ್ಲೆಗಳನ್ನು ಮೀರಿ ಹೊರಬರಲು ಹೊಸಚಿಂತನ ಮಾರ್ಗದಲ್ಲಿ ಪಯಣ ಆರಂಭಿಸಿದ ತತ್ತ್ವಜ್ಞಾನಿ ೧೯೪೭ರ ವೇಳೆಗೆ “ಮಾರ್ಕ್ಸ್‌ನ ಎಲ್ಲ ಕೃತಿಗಳನ್ನೂ ಧೂಳು ತುಂಬಿದ ಪತ್ರಾಗಾರಕ್ಕೆಸೆಯಬೇಕೆನ್ನುವ” ತೀರ್ಮಾನಕ್ಕೆ ಬಂದಿದ್ದರು.

ಈ ಬಗೆಯ ನೇತ್ಯಾತ್ಮಕತೆ ಮಾರ್ಕ್ಸ್ ತತ್ತ್ವ ಸಿದ್ಧಾಂತಗಳಿಗಷ್ಟೇ ಸೀಮಿತಗೊಂಡಿರಲಿಲ್ಲ. ಇದು ಸೋವಿಯತ್ ಒಕ್ಕೂಟ ಕುರಿತ ಅವರ ಪ್ರೀತಿ ಮಮತೆಗಳಿಗೂ ಆವರಿಸಿತ್ತು. ಬಡಪಾಯಿ ಎಂ.ಎನ್. ರಾಯ್ ಯಾವತ್ತೂ ಮಾಸ್ಕೋ ಬಗ್ಗೆ ಅತಿಯಾದ ಸದಭಿಪ್ರಾಯವನ್ನಿಟ್ಟುಕೊಂಡಿದ್ದರು. ಮಾಸ್ಕೋ ನಾಯಕತ್ವ ಅವರನ್ನು ಕಡೆಗಣಿಸಿತ್ತು. ಆದರೂ ಮಾನವೇಂದ್ರನಾಥರ ಹೃದಯದಲ್ಲಿ ಸೋವಿಯತ್ ಒಕ್ಕೂಟದ ಬಗ್ಗೆ ಆಳವಾದ ಪ್ರೀತಿ ವಿಶ್ವಾಸಗಳಿದ್ದವು. ೧೯೧೭ರ ಸೋವಿಯತ್ ಕ್ರಾಂತಿ ಕಷ್ಟಪೀಡಿತ ವಿಶ್ವಕ್ಕೆ ಹೊಸ ದಾರಿಯನ್ನು ತೋರಿದೆಯೆಂಬುದು ಎಲ್ಲ ಕಮ್ಯುನಿಸ್ಟರಿಗೂ ಸ್ಪಷ್ಟವಾಗಿ ತಿಳಿದಿತ್ತು. ಸೋವಿಯತ್ ಒಕ್ಕೂಟ ಕಮ್ಯೂನಿಸ್ಟರಿಗೆ ಸ್ಫೂರ್ತಿ ಕೇಂದ್ರವಾಗಿತ್ತು ಎನ್ನುವುದೂ ಸ್ಪಷ್ಟ. ಮಾನವೇಂದ್ರನಾಥರಿಗೆ ಸೋವಿಯತ್ ಬಗೆಗಿನ ಮಮಕಾರಕ್ಕೆ ಹೆಚ್ಚಿನ ಕಾರಣವಿತ್ತು. ಅವರು ಮಾನವನ ವಿಮೋಚನೆಗಾಗಿ ತೀವ್ರವಾಗಿ ಹಂಬಲಿಸುತ್ತಿದ್ದರು. ಮಾನವನನ್ನು ಅನಾಥ ಪ್ರಜ್ಞೆಯ ಮನೋಭಾವದಿಂದ ಮೇಲಕ್ಕೆತ್ತಿ ಉದ್ಧಾರಮಾಡುವ ನಿಟ್ಟಿನಲ್ಲಿ ಮಾಸ್ಕೋ ಪ್ರಪಂಚಕ್ಕೆ ಮಾರ್ಗದರ್ಶನ ಮಾಡುತ್ತದೆ ಎಂದು ಅವರು ನಿರೀಕ್ಷಿಸಿದ್ದರು. ಸಾಮಾನ್ಯ ಮನುಷ್ಯ ತಾನು ಕಳೆದುಕೊಂಡ ‘ಸ್ವರ್ಗ’ ವನ್ನು ಲೆನಿನ್‌ನ ನಾಡಿನಲ್ಲಿ ಮರಳಿ ಪಡೆಯುತ್ತಾನೆಂದು ಅವರು ಕನಸು ಕಾಣುತ್ತಿದ್ದರು. ಈ ಎಲ್ಲ ಆಸೆಗಳೂ ನುಚ್ಚುನೂರಾದವು. ಸೋವಿಯತ್ ಒಕ್ಕೂಟ ಸಹ, ನೆರೆಹೊರೆಯ ರಾಷ್ಟ್ರಗಳ ವಿಚಾರದಲ್ಲಿ ಉಳಿದ ರಾಷ್ಟ್ರಗಳಂತೆ ಅಂಧ



ದೇಶಾಭಿಮಾನಿಯಾಗಿತ್ತು. ಸಮರಾಸಕ್ತವಾಗಿತ್ತು ಎನ್ನುವುದನ್ನು ಕಣ್ಣಾರೆ ಕಾಣುವ ದುರಂತ ರಾಯ್ ಅವರದಾಗಿತ್ತು.

ಹೀಗೆ ಮಾರ್ಕ್ಸ್ ಸಿದ್ಧಾಂತ ಒಂದು ಗೊಡ್ಡು ಸಂಪ್ರದಾಯವಾಗಿ ಪಂಥ ಅಥವಾ ಧರ್ಮವಾಗಿ ಅವನತಿಯ ಮಾರ್ಗ ಹಿಡಿದದ್ದು ರಾಯ್ ಅವರನ್ನು ತಲ್ಲಣಗೊಳಿಸಿತ್ತು. ಸೋವಿಯತ್ ಒಕ್ಕೂಟ ಒಂದು ಅಂಧ ದೇಶಾಭಿಮಾನಿ ರಾಷ್ಟ್ರವಾಗಿ ಕುಸಿದದ್ದು ಅವರನ್ನು ಕಂಗೆಡಿಸಿತ್ತು.

ಸೋವಿಯತ್ ಒಕ್ಕೂಟದ ಆಂತರಿಕ ರಾಜಕಾರಣದ ಬಗ್ಗೆಯೂ ರಾಯ್ ಅವರು ಇಷ್ಟೇ ಕಟುವಾಗಿ ಟೀಕಿಸುತ್ತಿದ್ದರು. ಮಾನವೇಂದ್ರನಾಥರು ೧೯೩೭ರ ಸುವಿಖ್ಯಾತ ಮಾಸ್ಕೋ ವಿಚಾರಣೆ ಕುರಿತ ತಮ್ಮ ವ್ಯಾಖ್ಯಾನವನ್ನು ಬದಲಾಯಿಸಿದ್ದರೆಂಬುದು ಕುತೂಹಲದ ಸಂಗತಿ. ಇದಕ್ಕೆ ಮೊದಲು ಅವರು ಮಾಸ್ಕೋ ವಿಚಾರಣೆಗಳನ್ನು ಅಪಾರ್ಥ ಬರುವಂತೆ ತಿರುಚಿದವು ಅಥವಾ ಅತಿರೇಕಗಳು ಅಥವಾ ವ್ಯಕ್ತಿ ಆರಾಧನೆಯ ಫಲಗಳೆಂದು ಪರಿಗಣಿಸಿದ್ದರು. ಎರಡನೆ ಮಹಾಯುದ್ಧದ ನಂತರ ರಾಯ್ ಅವರು ಈ ವಿಚಾರಣೆಗಳನ್ನು ಏಕಪಕ್ಷೀಯ ಸರ್ವಾಧಿಕಾರದ ಸಹಜ ಫಲಶೃತಿಯೆಂದು ಖಂಡಿಸಿದರು. ಈ ಮೊದಲು ಅವರು ಹಿಟ್ಲರ್ ಮತ್ತು ಸ್ಟಾಲಿನ್ ನಡುವಣ ಐತಿಹಾಸಿಕ ಒಪ್ಪಂದವನ್ನು ಸ್ವಾಗತಿಸಿದ್ದರು ಆಗ ಈ ಸ್ವಾಗತಕ್ಕೆ ಅವರು ನೀಡಿದ ಸಮರ್ಥನೆಯು ವಿಚಿತ್ರವೂ ವಿಶಿಷ್ಟವೂ ಆದುದಾಗಿತ್ತು. ಈ ಒಪ್ಪಂದ ಬಂಡವಾಳಶಾಹಿಗಳ ನಡುವೆ ಪರಸ್ಪರ ಬಡಿದಾಟವನ್ನು ಪ್ರೋತ್ಸಾಹಿಸುವುದೆಂದೂ ಇದರಿಂದ ಕಮ್ಯುನಿಸಂ ಬೆಳವಣಿಗೆಗೆ ಸಹಾಯಕವಾಗುವುದೆಂದು ಆಗ ಹೇಳಲಾಗುತ್ತಿತ್ತು. ಸೋವಿಯತ್ ಒಕ್ಕೂಟ ಹಿಟ್ಲರ್‌ನೊಂದಿಗೆ ಇಂಥದೊಂದು ಒಪ್ಪಂದ ಮಾಡಿಕೊಳ್ಳಲು ಅದರ ಸ್ವಾರ್ಥ ರಾಷ್ಟ್ರೀಯ ಉದ್ದೇಶಗಳ ಕಾರಣ ಎಂಬುದು ನಂತರದ ವರ್ಷಗಳಲ್ಲಿ ರಾಯ್ ಅವರಿಗೆ ಮನವರಿಕೆಯಾಯಿತು. ಆದ್ದರಿಂದ ಎಡಪಂಥದ ಚಿಂತಕರಲ್ಲಿ ಭ್ರಮನಿರಸನವುಂಟುಮಾಡಿದ್ದಕ್ಕಾಗಿ ರಾಯ್ ಅವರು ಸೋವಿಯೆಟ್ ಒಕ್ಕೂಟವನ್ನು ಕಟುವಾಗಿ ಟೀಕಿಸಿದರು.

## ಮಾರ್ಕ್ಸ್‌ವಾದದ ಅಚ್ಚಳಿಯದ ಪ್ರಭಾವದ ಪರಿಣಾಮ

ನಂತರದ ವರ್ಷಗಳಲ್ಲಿ ಎಂ.ಎನ್. ರಾಯ್ ಮಾರ್ಕ್ಸ್ ಸೂತ್ರಸಿದ್ಧಾಂತಗಳ ವಿರುದ್ಧ ಟೀಕಾ ಪ್ರಚಾರ ಶುರು ಮಾಡಿದ್ದದಾದರೂ ಅವರು ಮಾರ್ಕ್ಸ್‌ವಾದಿ ಚಿಂತನೆಯಲ್ಲಿ ನಂಬಿಕೆ ಕಳೆದುಕೊಂಡಿದ್ದರು ಎಂದು ಅದರ ಅರ್ಥವಲ್ಲ. ಮಾರ್ಕ್ಸ್ ಸಿದ್ಧಾಂತವನ್ನು ಕೆಲವೊಂದು ಲೋಪ–ದೋಷಗಳಿಂದ ಮುಕ್ತಗೊಳಿಸಿದರೆ ಅದನ್ನು ಪ್ರಪಂಚವನ್ನು ಬದಲಾಯಿಸಲು ಒಂದು ಉಪಯುಕ್ತ ಆಸ್ತ್ರವಾಗಿ ಬಳಸಬಹುದೆಂಬ

ವಿಶ್ವಾಸ ಅವರಲ್ಲಿತ್ತು.

೧೯೪೫ರಲ್ಲಿ ಪ್ರಕಟಿಸಿದ 'ಹ್ಯೂಮನಿಸ್ಟ್ ವೇ" ತ್ರೈಮಾಸಿಕದ ಪ್ರಥಮ ಸಂಪಾದಕೀಯದಲ್ಲಿ ಇಂಥ ವಿಶ್ವಾಸ ಬಿಂಬಿತವಾಗಿತ್ತು. ಅದರ ಆಯ್ದಭಾಗ ಈ ಕೆಳಗಿನಂತಿದೆ:

> **"ಕುತರ್ಕಗಳಿಂದ, ತಪ್ಪು ಅಭಿಪ್ರಾಯಗಳಿಂದ ಮುಕ್ತಗೊಂಡ ಹಾಗೂ ವೈಜ್ಞಾನಿಕ ತಿಳಿವಳಿಕೆಯ ಬೆಳಕಿನಲ್ಲಿ ಖಚಿತಗೊಂಡ ಮಾರ್ಕ್ಸ್‌ವಾದದ ಇತ್ಯಾತ್ಮಕ ಅಂಶಗಳು ಹೆಚ್ಚು ಸಮಗ್ರವಾದ ತತ್ತ್ವಶಾಸ್ತ್ರವಾಗಬಲ್ಲವು. ಇದನ್ನು ಸಮಗ್ರ ಅಥವಾ ತೀವ್ರಗಾಮಿ ಮಾನವತಾವಾದವೆಂದು ಕರೆಯಬಹುದು. ಸ್ಪಷ್ಟದ ಕಾಣ್ಕೆಯು ಈ ಮಾನವತಾವಾದದಲ್ಲಿ ಮಾರ್ಕ್ಸ್ ಮಾರ್ಗ ವಿಲೀನಗೊಳ್ಳಲಿದೆ."**

ಕೆಲವೊಂದು ವಿಚಾರಗಳನ್ನು, ತಪ್ಪುಗ್ರಹಿಕೆಗಳನ್ನು ತೆಗೆದುಹಾಕಿ ವೈಜ್ಞಾನಿಕ ವಿಚಾರಗಳನ್ನು ಸೇರಿಸಬೇಕೆಂದು ಈ ರೀತಿ ರಾಯ್ ಸಲಹೆ ಮಾಡಿದ್ದರು. ಮಾರ್ಕ್ಸ್‌ವಾದವನ್ನು ಒಂದು ಸಿದ್ಧಾಂತವನ್ನಾಗಿಸುವ ತುಡಿತವನ್ನು ದೂರವಿಟ್ಟು ನೋಡಿ, ಆಗ ನೋಡಿ "ಮಾರ್ಕ್ಸ್‌ವಾದ ಉತ್ತಮ ಜಗತ್ತಿಗಾಗಿ ಹೋರಾಡುವ ಪ್ರತಿಯೊಬ್ಬರ ತಾತ್ವಿಕ ಅಸ್ತ್ರವಾಗಿರುತ್ತದೆ"[೨] ಎನ್ನುವುದನ್ನು. ಮಾರ್ಕ್ಸ್‌ವಾದದ ಮೂಲ ವಿಚಾರಧಾರೆ ಅಖಂಡ ಮಾನವತಾವಾದಕ್ಕನುಗುಣವಾಗಿತ್ತೆಂಬುದು ರಾಯ್ ಅವರಿಗೆ ಖಾತ್ರಿಯಾಗಿತ್ತೆನ್ನುವುದನ್ನು ಮೇಲಿನ ಉಲ್ಲೇಖ ಸೂಚಿಸುತ್ತದೆ. ಆದರೆ, ತಮ್ಮ ಮಾನವತಾತತ್ತ್ವದ ಯೋಗ್ಯತೆಯ ಅಳತೆಗೋಲಾಗಿ, "ತೀವ್ರಗಾಮಿ", "ಹೊಸ", "ಅಖಂಡ" ಇಂಥ ಕೆಲವೊಂದು ವಿಶೇಷಣಗಳು ಅಗತ್ಯವೆನಿಸಿದ್ದವು.

ರಾಯ್ ಅವರಿಗೆ ಇನ್ನೂ ಮಾರ್ಕ್ಸ್‌ವಾದದಲ್ಲಿನ ಕೆಲವು ಇತ್ಯಾತ್ಮಕ ಅಂಶಗಳಲ್ಲಿ ನಂಬಿಕೆಯಿತ್ತೆಂಬುದನ್ನು ಕೆಳಗಿನ ಮಾತುಗಳಿಂದ ಸಾಬೀತುಗೊಳಿಸಬಹುದು:

> **"ತೀವ್ರಗಾಮಿತ್ವ ಮಾರ್ಕ್ಸ್‌ವಾದದಿಂದ ವಿಮುಖವಾದುದಲ್ಲ, ಬೇರೆದಾರಿ ಹಿಡಿದುದಲ್ಲ. ತೀವ್ರಗಾಮಿತ್ವದಲ್ಲಿ ನೇತ್ಯಾತ್ಮಕತೆ, ನಿಷೇಧಾರ್ಥಗಳು ತುಸು ಕಡಿಮೆಯಾಗಿವೆ ಅಷ್ಟೆ. ಆದರೆ ತೀವ್ರಗಾಮಿತ್ವ ಮಾರ್ಕ್ಸ್‌ವಾದಕ್ಕೆ ಪರಿಷ್ಕಾರಗಳನ್ನು ಸೂಚಿಸುತ್ತದೆ. ಈ ಕಾರಣದಿಂದಾಗಿಯೇ ಕರಾರುವಾಕ್ಕಾಗಿ ಅದು ಮಾರ್ಕ್ಸ್‌ವಾದದ ವೈಜ್ಞಾನಿಕ ತಿರುಳನ್ನು ಪ್ರತಿನಿಧಿಸುತ್ತದೆ. ಅಬಾಧಿತ ಸತ್ಯವಾಗಲೀ ಪರಿಪೂರ್ಣಜ್ಞಾನವಾಗಲೀ ಇಲ್ಲ."[೩]**

ವಾಸ್ತವವಾಗಿ ಎಂ.ಎನ್. ರಾಯ್ ಮಾರ್ಕ್ಸ್‌ವಾದದಲ್ಲಿ ವಿರೋಧಿಸಿದ್ದು ವರ್ಗ ಸಂಘರ್ಷದ ಪರಿಕಲ್ಪನೆಯನ್ನು. ಮಾರ್ಕ್ಸ್ ಬೋಧಿಸಿದ ಸಮಾಜ ವಿಕಾಸದ ಅನಿವಾರ್ಯ ಪ್ರಕ್ರಿಯೆಯ ಪರಿಕಲ್ಪನೆಯನ್ನು ಅವರು ವಿರೋಧಿಸಿದ್ದರು. ಮಾನವನ ಸ್ವಾತಂತ್ರ್ಯ ಎನ್ನುವುದು ಒಂದು ಅಮೂರ್ತಕಲ್ಪನೆ ಎಂಬ ಮಾರ್ಕ್ಸ್‌ನ ತಿರಸ್ಕಾರವನ್ನೂ ಅವರು ಟೀಕಿಸಿದ್ದರು. "ನಮ್ಮ ಅಸ್ತಿತ್ವವನ್ನು ನಮ್ಮ ಪ್ರಜ್ಞಾವಂತಿಕೆ ನಿರ್ಧರಿಸುವುದಿಲ್ಲ, ನಮ್ಮ ಪ್ರಜ್ಞಾವಂತಿಕೆಯನ್ನು ಅಸ್ತಿತ್ವ ನಿರ್ಧರಿಸುತ್ತದೆ" ಎನ್ನುವ ಮಾರ್ಕ್ಸ್ ತತ್ವ



ರಾಯ್ ಅವರಿಗೆ ಒಪ್ಪಿತವಾಗಿತ್ತು. ಐಹಿಕವಾದದಲ್ಲಿನ ರಾಯ್ ಅವರ ನಂಬಿಕೆ ಮಾರ್ಕ್ಸ್‌ನ ಅಚ್ಚಳಿಯದ ಪ್ರಭಾವದ ಫಲವೆಂದೇ ಪರಿಗಣಿಸಬೇಕು. ಧರ್ಮ ಗತಕಾಲದ ಒಂದು ಅವಶೇಷ ಎನ್ನುವುದರಲ್ಲೂ ರಾಯ್ ಅವರಿಗೆ ಸತತವಾಗಿ ಸಂಶಯವಿತ್ತು. ಧರ್ಮದ ಬಗ್ಗೆ ರಾಯ್ ಹೇಗೆ ಸಂಶಯ ಪ್ರಕೃತಿಯವರಾಗಿದ್ದರೆಂಬುದು ಮಹಾತ್ಮಗಾಂಧಿಯವರ ಬಗ್ಗೆ ಆಡಿರುವ ಶ್ಲಾಘನೆಯ ನುಡಿಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ:

> **"ಮೂಲತಃ ಧಾರ್ಮಿಕ ಮನುಷ್ಯ ತಮ್ಮ ಅನುಯಾಯಿಗಳೆದುರು ಘನವಾದ ಆದರ್ಶಗಳನ್ನು ಮಂಡಿಸಿದ್ದರು. ಮಾನವ ಚೇತನ ಧಾರ್ಮಿಕ ಸಂಪ್ರದಾಯ ಶಿಷ್ಟಾಚಾರಗಳ ಚಿಂತನೆಯ ಸಮ್ಮೋಹಕ ಪರಿಧಿಯಿಂದ ಹೊರಬರದೇ ಗಾಂಧೀಜಿಯವರು ಈ ಘನ ಆದರ್ಶಗಳನ್ನು ಸಾಧಿಸುವುದು ಕಷ್ಟ."[೪]**

ವಾಸ್ತವವಾಗಿ ಹೇಳುವುದಾದರೆ ಮಾನವತಾ ವಾದದ ಪಥ ರಾಯ್ ಅವರನ್ನು ಸಂಪೂರ್ಣವಾಗಿ ಮಾರ್ಕ್ಸ್ ವಿಚಾರಗಳ ಪ್ರಭಾವದಿಂದ ಮುಕ್ತಗೊಳಿಸಿರಲಿಲ್ಲ ಎನ್ನುವುದೇ ಸತ್ಯ.

**೩. ಐರೋಪ್ಯ ಮಾನದಂಡಗಳ ಅನ್ವಯೀಕರಣ**

ಮಾನವೇಂದ್ರನಾಥ್ ತಮ್ಮ ರಾಜಕೀಯ ಜೀವನದ ಪ್ರಾರಂಭಿಕ ವರ್ಷಗಳಲ್ಲಿ ಕಟ್ಟಾ ಉಗ್ರಗಾಮಿ ರಾಷ್ಟ್ರೀಯವಾದಿಗಳಾಗಿದ್ದು ಆಖೈರಾಗಿ ತೀವ್ರಗಾಮಿ ಮಾನವತಾವಾದಿಗಳಾದವರು. ಆದರೆ, ಕಮ್ಯುನಿಸಂ ಮುಖೇನ ರಾಷ್ಟ್ರೀಯವಾದದಿಂದ ಮಾನವತಾವಾದದವರೆಗೆ ಸಾಗಿಬಂದ ಪಯಣದುದ್ದಕ್ಕೂ ಅವರು ಐರೋಪ್ಯ ಮಾನದಂಡಗಳನ್ನು ಬಳಸಲು ಆಗ್ರಹಪಡಿಸಿದ್ದರು. ಯೂರೋಪಿನ ವಿದ್ಯಮಾನಗಳಲ್ಲಿ, ಅಲ್ಲಿನ ಪರಿಳಿತಗಳಲ್ಲಿ ಅವರು ತೀವ್ರ ಆಸಕ್ತರಾಗಿದ್ದರು. ಅವುಗಳಿಂದ ಪ್ರಭಾವಿತರಾಗಿದ್ದರು. ಅವರು ಅತ್ಯಂತ ಸಹಜವೆನ್ನುವ ರೀತಿಯಲ್ಲಿ ಯೂರೋಪಿನ ಗತಕಾಲದ ಘಟನೆ–ವಿದ್ಯಮಾನಗಳನ್ನು ನೆನಪಿಸಿಕೊಳ್ಳುತ್ತಿದ್ದರು ಹಾಗೂ ಯುರೋಪಿನ ಗತಕಾಲದ ಘಟನೆಗಳ ಹಿನ್ನೆಲೆಯಲ್ಲಿ ವರ್ತಮಾನ ಕಾಲದ ಘಟನೆಗಳನ್ನು ವ್ಯಾಖ್ಯಾನಿಸುತ್ತಿದ್ದರು. ಅವರ ಸಮಗ್ರ ಕೃತಿಯಾದ "ರೀಸನ್, ರೋಮ್ಯಾಂಟಿಸಿಸಂ ಅಂಡ್ ರೆವಲ್ಯೂಶನ್" ಗ್ರಂಥದಲ್ಲಿ ಎರಡನೆ ಮಹಾಯುದ್ಧಾನಂತರದ ವಿಶ್ವದ ಬಿಕ್ಕಟನ್ನು, "ಇತಿಹಾಸದ ಅತಿದೊಡ್ಡ ಬಿಕ್ಕಟ್ಟು. ಇದು ಕೇವಲ ರಾಜಕೀಯ ಅಥವಾ ಆರ್ಥಿಕ ಬಿಕ್ಕಟ್ಟಷ್ಟೇ ಆಗಿರದೆ ಆಧ್ಯಾತ್ಮಿಕ–ನೈತಿಕ ಬಿಕ್ಕಟ್ಟು ಆಗಿತ್ತು" ಎಂದು ವಿವರಿಸಲಾಗಿದೆ. ಹಾಗೂ ಈ ಕೆಳಗಿನ ಇನ್ನೊಂದು ಪ್ರಸ್ತಾಪವೂ ಆ ಗ್ರಂಥದಲ್ಲಿದೆ:

> **"ಬಿಕ್ಕಟ್ಟಿನ ಫಲವಾಗಿ ಆಧುನಿಕ ವಿಶ್ವ ಇಂದು ಪತನ ಪೂರ್ವ ರೋಮನ್ ಸಾಮ್ರಾಜ್ಯದ ಅವನತಿಯ ಸ್ಥಿತಿಯತ್ತ ಜಾರುತ್ತಿದೆ."[೫]**

ರಾಯ್ ಅವರ ಅಭಿಪ್ರಾಯದಂತೆ ಮಾನವ ಆಧುನಿಕ ಪ್ರಪಂಚದ ಸಂಸ್ಥೆಗಳು,

ಪದ್ಧತಿಗಳ ಅಧೀನನಾಗಿದ್ದ. ಒಂದು ಆಧ್ಯಾತ್ಮಿಕ ಬಂಡಾಯ ಆಗಿನ ಅಗತ್ಯವಾಗಿತ್ತು. "ಆಧುನಿಕ ವಿಶ್ವದ ಸೂರ್ಯೋದಯವಾದಾಗ ಯುರೋಪ್ ಅನುಭವಿಸಿದಂಥ ಒಂದು ಆಧ್ಯಾತ್ಮಿಕ ಬಂಡಾಯ" ಆಗತ್ಯವಾಗಿತ್ತು.

"ಯುರೋಪಿನಲ್ಲಿ ಮಧ್ಯಯುಗದಲ್ಲೇ ಮಾನವತಾವಾದದ ಉದಯವಾಗಿತ್ತು" ಎನ್ನುವುದು ರಾಯ್ ಅವರಿಗೆ ಸಂಪೂರ್ಣವಾಗಿ ಮನವರಿಕೆಯಾಗಿತ್ತು. ಯೂರೋಪಿನ ಇತಿಹಾಸದ ನವೋದಯ ಕಾಲ ಅವರ ಮೇಲೆ ತುಂಬ ಪ್ರಭಾವ ಬೀರಿತ್ತು. ಅವರ ಪ್ರಕಾರ ನವೋದಯಕಾಲ ಮನೋಕ್ರಾಂತಿಯ ಅತ್ಯುತ್ತಮ ಪಾಠಗಳನ್ನು ಸಾದರಪಡಿಸಿತ್ತು ಹಾಗೂ ಇಂಥ ಕ್ರಾಂತಿಯೇ ರಾಯ್ ಅವರ ಹಂಬಲವಾಗಿತ್ತು. "ರೀಸನ್–ರೊಮ್ಯಾಂಟಿಸಿಸಂ ಅಂಡ್ ರೆವಲ್ಯೂಶನ್" ಗ್ರಂಥದ ವಿಮರ್ಶಕರೊಬ್ಬರು ಹೇಳಿರುವಂತೆ ರಾಯ್ ಅವರು "ನವೋದಯ, ಸುಜ್ಞಾನ ಮತ್ತು ಮಹಾನ್ ಕ್ರಾಂತಿಗಳು ವೀರಯುಗದ ವೈಭವಗಳಲ್ಲ, ಅವು ಇವತ್ತಿಗೂ ಒತ್ತರಿಸಿಕೊಂಡು ಬರುವ ಪ್ರಸ್ತುತಗಳು. ನಾವೇನು, ನಮ್ಮ ನಿರೀಕ್ಷೆಗಳೇನು, ನಮ್ಮ ಪೂರ್ವಭಾವನೆಗಳೇನು ಎಂಬೆಲ್ಲ ಕೆದಕುವ ಪ್ರಶ್ನೆಗಳೊಂದಿಗೆ ನಮ್ಮಲ್ಲಿ ಪುನರವತರಿಸುತ್ತವೆ ಹಾಗೂ ನಮ್ಮಲ್ಲಿ ಧೈರ್ಯವಿಶ್ವಾಸಗಳಿದ್ದಲ್ಲಿ, ನಮ್ಮ ಮಹಾನ್ ಪರಂಪರೆಯ ಸೃಜನಶೀಲ ಶಕ್ತಿ ನಮ್ಮೊಳಗೆ ಅಂತರ್ಗತವಾಗಿದ್ದಲ್ಲಿ ವೀರಯುಗದ ವೈಭವಗಳು ನಮ್ಮ ಭವಿಷ್ಯದ ಬಾಗಿಲನ್ನು ತೆರೆಯಲಿವೆ."[೭] ಎನ್ನುವುದನ್ನು ತಿಳಿಯಲು ಪ್ರೇರಕರಾಗಿದ್ದರು.

> **"ಬಹುಶಃ ರಾಯ್ ಧರ್ಮವನ್ನು ಖಂಡಿಸಿ 'ವಿವೇಕಕ್ಕೆ' ಅನಗತ್ಯವಾದ ಮಹತ್ವವನ್ನು ನೀಡಿದರು. ಅವರು ಪ್ರತ್ಯೇಕವಾಗಿ ಐರೋಪ್ಯ ಇತಿಹಾಸದಲ್ಲಿ ಮಗ್ನರಾದದ್ದು, ತಮ್ಮ ಚಿಂತನೆಯನ್ನು ಕೇಂದ್ರೀಕರಿಸಿದ್ದು ಇದಕ್ಕೆ ಕಾರಣವಿದ್ದೀತು.**

**ಉಪಕರಣವಾದದ ಆಕರ್ಷಣೆ**

ಏನನ್ನು ಬೇಕಾದರೂ ಬಳಸಿ ಎನ್ನುತ್ತದೆ ಉಪಕರಣವಾದ ಹಾಗೂ ಬಳಸಿದ ವಸ್ತುವನ್ನು ಅದರ ಬಳಕೆಯ ಆಧಾರದ ಮೇಲೆ ಮೌಲ್ಯಮಾಪನಕ್ಕೆ ಗುರಿಪಡಿಸಿ ಎಂದೂ ಹೇಳುತ್ತದೆ. ಇದೇ ಉಪಕರಣವಾದ. ರಾಯ್ ಮಾರ್ಕ್ಸ್‌ವಾದವನ್ನು ಅದು ಅಂತರ್ಗತ ವಿರೋಧಾಭಾಸಗಳಿಂದ ಕೂಡಿದೆ ಎನ್ನುವ ಕಾರಣಕ್ಕಾಗಿ ಅದನ್ನು ನಿರಾಕರಿಸಲಿಲ್ಲ; ಅದರ ಆಂತರಿಕ ಗುಣಗಳೂ ವಿವಾದಾಸ್ಪದವಾದದ್ದು ಎನ್ನುವ ಕಾರಣಕ್ಕಾಗಿಯೂ ನಿರಾಕರಿಸಲಿಲ್ಲ. ರಾಯ್ ಅವರು ಒಂದು ಪ್ರಶ್ನೆ ಎತ್ತಿದ್ದರು. ಈಗಿನ ಪ್ರಪಂಚದಲ್ಲಿ ಶ್ರಮಜೀವಿಗಳಿಂದ ರಕ್ತಕ್ರಾಂತಿ ಸಾಧ್ಯವೆ?

> **"ಫ್ರೆಂಚ್ ಮತ್ತು ರಷ್ಯನ್ ಕ್ರಾಂತಿಗಳಲ್ಲಿ ಆದಂತೆ ದಂಗೆ ಏಳುವ ಮೂಲಕ, ಸಂಕಲ್ಪಬಲವೊಂದರಿಂದಲೇ ಅಲ್ಪಸಂಖ್ಯಾತ ಪಕ್ಷವೊಂದು ಅಧಿಕಾರವನ್ನು ವಶಪಡಿಸಿಕೊಳ್ಳುವ ಕಾಲ ಮುಗಿದು ಹೋಯಿತು.**



–ರಾಯ್ ಮುಂದುವರಿದು ಇನ್ನೊಂದು ಮಾತನ್ನೂ ನೆನಪಿಸಿದ್ದರು :

> **"ರಷ್ಯ ಕ್ರಾಂತಿಯ ನಂತರದ ಕ್ರಾಂತಿಯ ಇತಿಹಾಸ ಅವಿಚ್ಛಿನ್ನ ಪರಾಜಯಗಳ ಇತಿಹಾಸ."[೮]**

ಶ್ರೀಸಾಮಾನ್ಯನನ್ನು ಅವನ ಸಲುವಾಗಿಯೇ ವಿಮುಕ್ತನನ್ನಾಗಿಸುವುದು ರಾಯ್ ಉದ್ದೇಶವಾಗಿತ್ತು. "ಕೊನೆ ಇಲ್ಲದ ಮಾನವನ ಸ್ವಾತಂತ್ರ್ಯದ ಹೋರಾಟದ ಮೂಲ ಅಸ್ತಿತ್ವಕ್ಕಾಗಿ ಮೃಗಗಳು ನಡೆಸುವ ಹೋರಾಟದಲ್ಲಿದೆ" ಧರ್ಮ ಮಾನವನ ಬುದ್ಧಿಶಕ್ತಿಯನ್ನು ಕೊಲ್ಲುತ್ತದೆ ಎನ್ನುವ ಕಾರಣದಿಂದಾಗಿ ರಾಯ್ ಧರ್ಮವನ್ನು ಖಂಡಿಸಿದ್ದರು.

ಸಂಕ್ಷಿಪ್ತವಾಗಿ ಹೇಳುವುದಾದರೆ ಉಳಿವು, ಅಸ್ತಿತ್ವಗಳಿಗೆ ಸ್ವಾತಂತ್ರ್ಯ ಅಗತ್ಯ. ಸ್ವಾತಂತ್ರ್ಯ ಜೀವನದ ಎಲ್ಲ ಕ್ಷೇತ್ರಗಳಲ್ಲೂ ವಿವೇಕ ಪಾರಮ್ಯವನ್ನು ಗಳಿಸಬೇಕೆಂದು ಆಗ್ರಹಪಡಿಸುತ್ತದೆ; ಆದರೆ ಮಾರ್ಕ್ಸ್‌ವಾದ ಅಥವಾ ಧರ್ಮ ಮಾನವನ ಮನಸ್ಸಿನ ಮೇಲೆ ಸವಾರಿ ಮಾಡಿದಾಗ ವಿವೇಕ ನಾಶಹೊಂದುತ್ತದೆ. ಎಲ್ಲವನ್ನೂ, ವ್ಯಕ್ತಿ ಸ್ವಾತಂತ್ರ್ಯದ ಗುರಿಯನ್ನು ಯಾವ ರೀತಿ ಮುಟ್ಟುವುದು ಸಾಧ್ಯ ಎನ್ನುವುದರ ಮೇಲೆ ತೀರ್ಮಾನಿಸಬೇಕಾಗುತ್ತದೆ. ಮಾನವನ ಬುದ್ಧಿಶಕ್ತಿ, ಆಯ್ಕೆ ಮತ್ತು ಕಾರ್ಯಕಾರಣಗಳು, ವಿವೇಕಗಳೇ ನಿಜವಾದ ಸ್ವಾತಂತ್ರ್ಯ. ಇವುಗಳನ್ನುಳ್ಳವನೇ ನಿಜವಾದ ಸ್ವತಂತ್ರ ಮಾನವ ಎನ್ನುವ ನಂಬಿಕೆಯೇ, ಈ ಗುಣಗಳನ್ನು ಗಳಿಸುವುದನ್ನೇ ಯಾವುದೇ ತೀರ್ಮಾನಕ್ಕೂ ಮಾನದಂಡವಾಗಿ ಪರಿಗಣಿಸಬೇಕೆಂದು ರಾಯ್ ಹೇಳುವುದಕ್ಕೆ ಪ್ರೇರಣೆಯಾಗಿತ್ತು. ಮಾನವತಾವಾದದತ್ತ ಮಾನವೇಂದ್ರನಾಥರ ಪಥದ ಪ್ರಮುಖ ಲಕ್ಷಣಗಳನ್ನು ಇಲ್ಲಿಯವರೆಗೆ ಚರ್ಚಿಸಿದ್ದಾಯಿತು. ಇನ್ನು ಮಾನವತಾವಾದದತ್ತ ದೀನ್‌ದಯಾಳರ ಪಥದ ಮುಖ್ಯಗುಣಲಕ್ಷಣಗಳ ಅಧ್ಯಯನದತ್ತ ಗಮನಹರಿಸಬಹುದು.

**ಮಾನವತಾವಾದ–ದೀನ್ ದಯಾಳ್ ಪಥ**

ಈ ಪಥದ ಮುಖ್ಯ ಗುಣಲಕ್ಷಣಗಳ ಪಟ್ಟಿ ಈ ಕೆಳಕಂಡಂತಿದೆ :

**೧. ಹಿಂದೂ ಸಂಸ್ಕೃತಿಯಲ್ಲಿ ಗಾಢನಂಬಿಕೆ**

**೨. ಆಧ್ಯಾತ್ಮಿಕತೆಯಲ್ಲಿ, ಧರ್ಮಾನುಷ್ಠಾನದಲ್ಲಿ ನಂಬಿಕೆ**

**೩. ದೇಶೀಯ ಮಾನದಂಡಗಳಿಗಾಗಿ ಆಗ್ರಹ**

**೪. ವಾಸ್ತವಿಕ ಮಾರ್ಗಾನುಸರಣೆಯಲ್ಲಿ ಒಲವು**

ಈ ಎಲ್ಲ ಗುಣಲಕ್ಷಣಗಳನ್ನೂ ನಾವೀಗ ವಿವರವಾಗಿ ಚರ್ಚಿಸೋಣ.

**೧. ಹಿಂದೂ ಸಂಸ್ಕೃತಿಯ ಬಗ್ಗೆ ಗಾಢನಂಬಿಕೆ**

ದೀನ್ ದಯಾಳರ ಸಾಮಾಜಿಕ ಜೀವನದ ಪ್ರಾರಂಭಿಕ ವರ್ಷಗಳಲ್ಲೇ

ಅವರ ಬದುಕಿನಲ್ಲಿ ಏಕಾತ್ಮ ಮಾನವವಾದದ ಬೀಜಗಳ ಬಿತ್ತನೆಯಾಗಿತ್ತು ಎಂದು ನಾನು ಈಗಾಗಲೇ ಪ್ರಸ್ತಾಪಿಸಿದ್ದೇನೆ. ಲಖನೌದಲ್ಲಿ ಆರೆಸ್ಸೆಸ್ ಕಾರ್ಯಕರ್ತರಾಗಿ ಗಳಿಸಿದ ಅನುಭವ ಅವರಿಗೆ ಹಿಂದೂ ಸಂಸ್ಕೃತಿಯ ಶಕ್ತಿಯನ್ನು ಮನವರಿಕೆ ಮಾಡಿಕೊಟ್ಟಿತ್ತು. ಸಾಂಸ್ಕೃತಿಕ ರಾಷ್ಟ್ರೀಯತೆಯ ಎಳೆಗಳನ್ನೇ ವಿಪರೀತವಾಗಿ ಆಧರಿಸಿರುವ ನೆಚ್ಚಿಕೊಂಡಿರುವ ಆರೆಸ್ಸೆಸ್ ಕಾರ್ಯಚಟುವಟಿಕೆಗಳು ನಿಶ್ಚಯವಾಗಿಯೂ ನಮ್ಮ ಸಮಾಜವನ್ನು ಒಂದುಗೂಡಿಸುತ್ತದೆ ಎನ್ನುವದನ್ನು ಅವರು ಮನಗಂಡಿದ್ದರು. ಗುರಿಯಲ್ಲಿ ಮಾತ್ರವಲ್ಲ ಆರೆಸ್ಸೆಸ್‌ನ ವಿಧಿವಿಧಾನಗಳಲ್ಲೂ ಹೊಂದಿದ್ದ ನಂಬಿಕೆ ಅವರನ್ನು ಮಾಮೂಲಿ ಜೀವನ ಕ್ರಮದಿಂದ ವಿಮುಖರನ್ನಾಗಿಸಿತ್ತು. ಪ್ರತಿಯಾಗಿ ಆರೆಸ್ಸೆಸ್‌ಗೆ ತಮ್ಮ ಬದುಕನ್ನು ಸಂಪೂರ್ಣವಾಗಿ ಮುಡುಪಿಟ್ಟರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಲು ನಿರ್ಧರಿಸಿದರು. ತಮ್ಮ ಈ ನಿರ್ಧಾರವನ್ನು ತಿಳಿಸಿ ಸೋದರಮಾವನಿಗೆ ಅವರು ಬರೆದಿರುವ ಪತ್ರ ಇವತ್ತಿನ ಸಂದರ್ಭದಲ್ಲೂ ಸ್ಮರಣೀಯವಾದದ್ದು. ಒಂದು ಪ್ಯಾರಾದಲ್ಲಿ ಅವರ ಪತ್ರದ ಒಕ್ಕಣೆ ಹೀಗಿದೆ:

> **"ವ್ಯಕ್ತಿಯೊಬ್ಬ ತನ್ನ ಸ್ವಾರ್ಥಕ್ಕಾಗಿ ಹಿರಿಮೆಯನ್ನು ಸಾಧಿಸುವುದರಿಂದ ಸಮಾಜಕ್ಕೆ ಒಳ್ಳೆಯದೇನಾಗುತ್ತದೆ? ಸಮಾಜಕ್ಕೆ ಏನು ಉಪಯೋಗ? ಅದೊಂದು ಹಾನಿಕಾರಕ ಬೆಳವಣಿಗೆಯೇ. ದೇಹದ ಸರ್ವಾಂಗೀಣ ಬೆಳವಣಿಗೆ ಒಳ್ಳೆಯದು. ಕಾಲುಗಳು ಮಾತ್ರ ಸ್ಥೂಲವಾಗಿ ಬೆಳೆದು ದೇಹದ ಉಳಿದ ಅಂಗಾಂಗಗಳು ಸಣಕಲಾಗೇ ಉಳಿದರೆ ಅದು ಆನೆಕಾಲು ರೋಗಕ್ಕೆಡೆಮಾಡಿಕೊಡುತ್ತದೆ."[೯]**

ಬೇರೊಂದು ಸಂದರ್ಭದಲ್ಲಿ ಅವರು, "ಬದುಕನ್ನು ಅಖಂಡವಾಗಿ ಪರಿಗ್ರಹಿಸುವುದೇ ಭಾರತೀಯ ಸಂಸ್ಕೃತಿಯ ಆದ್ಯ ಲಕ್ಷಣ" ಎಂದು ಹೇಳಿದ್ದರು.

ವಿವೇಕಾನಂದ ಮತ್ತು ಅರವಿಂದರ ಸಂಪ್ರದಾಯವನ್ನು ಪುನುರುಜ್ಜೀವಗೊಳಿಸಲು ದೀನದಯಾಳಜಿ ಪ್ರಾಮಾಣಿಕವಾಗಿ ಪ್ರಯತ್ನಿಸಿದರು ಎನ್ನುವುದು ಸತ್ಯ. ಮಹಾತ್ಮಾಗಾಂಧಿಯವರೂ ತಮ್ಮ ಜೀವಿತಾವಧಿಯಲ್ಲಿ ಇದೇ ಕೆಲಸ ಮಾಡಿದರು ಎನ್ನುವುದರಲ್ಲಿ ಅನುಮಾನಕ್ಕೆಡೆಯಿಲ್ಲ, ಆದರೆ ಸ್ವಾತಂತ್ರೋತ್ತರ ಕಾಲದಲ್ಲಿ ಮಹಾತ್ಮಾಜಿಯವರಿಗೆ ರಾಜಕೀಯ ಚಟುವಟಿಕೆಗಳಿಗಾಗಿ ತಮ್ಮೆಲ್ಲ ಶಕ್ತಿಯನ್ನೂ ವಿನಿಯೋಗಿಸಬೇಕಾದ ಅನಿವಾರ್ಯತೆಯಿತ್ತು. ಅವರಿಂದ ಇದನ್ನು ದೇಶ ನಿರೀಕ್ಷಿಸಿತ್ತು. ಗಾಂಧೀಜಿಯವರು, ರಾಜಕೀಯ-ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ತ್ರಿವೇಣಿ ಸಂಗಮವನ್ನು ಯಶಸ್ವಿಯಾಗಿ ಸಾಧಿಸಿದ್ದರು ಎಂದೂ ಹೇಳಬಹುದು. ಕೊನೆಯದು ಪ್ರಯಾಗದ ಸರಸ್ವತಿ ನದಿಯ ಹರಿವಿನಂತೆ ಅಗೋಚರವಾಗಿಯೇ ಉಳಿದಿತ್ತು (ಕನಿಷ್ಠ ಪಕ್ಷ ಪ್ರಗತಿಪರರೆನ್ನಿಸಿಕೊಳ್ಳುವವರ ದೃಷ್ಟಿಯಲ್ಲಿ). ಹಿಂದೂ ಸಂಸ್ಕೃತಿ, ಭಾರತೀಯ ಸಂಸ್ಕೃತಿ ಹೇಗೆ ತನ್ನ



ಮಾರ್ಗಾನುಸರಣೆಯಲ್ಲಿ ಅಖಂಡವಾಗಿದೆ ಎಂಬುದನ್ನು ಅರವಿಂದರು ಆಗಿಂದಾಗ್ಗೆ ಒತ್ತಿಹೇಳಿದ್ದಾರೆ.

ಒಂದುಗೂಡಿಸುವ ಪ್ರಯತ್ನಗಳಿಗೆ ಪ್ರಾಧಾನ್ಯ ನೀಡುವ ಕಾರ್ಯಚಟುವಟಿಕೆಗಳು ಹಾಗೂ ಅಖಂಡ ಮಾನವತಾವಾದದಿಂದ ದೀನದಯಾಳಜಿ ಗಾಢವಾಗಿ ಪ್ರಭಾವಿತರಾಗಿದ್ದರು.

**೨. ಆಧ್ಯಾತ್ಮಿಕತೆಯಲ್ಲಿ ಸಂಪೂರ್ಣನಂಬಿಕೆ**

ದೀನದಯಾಳಜೀ ಯಾವತ್ತೂ ಪಾಶ್ಚಾತ್ಯೀಕರಣಗೊಂಡ ಪೌರಾತ್ಯ ಕುಲೀನರ ವರ್ಗಕ್ಕೆ ಸೇರಿದವರಾಗಿರಲಿಲ್ಲ ಅಥವಾ ಭಾರತವನ್ನು ಪ್ರಾಚೀನ ಗತಕಾಲದ ಛಾಯೆಯನ್ನಾಗಿಸುವ ಇಚ್ಛೆಯೂ ಅವರಿಗಿರಲಿಲ್ಲ. ಆದ್ದರಿಂದ ಅವರು ನಮ್ಮ ನೆಲದ ಆಧ್ಯಾತ್ಮಿಕತೆಯನ್ನು ಖಂಡಿಸಲೂ ಇಲ್ಲ ಅಥವಾ ಹಳತಾದ ಆಚರಣೆಗಳಿಗಾಗಿ ಆಗ್ರಹಪಡಿಸುವ ಕಡು ಸಂಪ್ರದಾಯವಾದಿಯೂ ಆಗಿರಲಿಲ್ಲ. ಪೂಜ್ಯ ಸಾಧುಸಂತರ ಆಚಾರ ವಿಚಾರಗಳ ಅಧ್ಯಯನದ ಜೊತೆಗೆ ವಿವೇಕಾನಂದ, ತಿಲಕರಂಥವರ ಕೃತಿಗಳನ್ನು ಅವರು ಆಳವಾಗಿ ಓದಿ ತಿಳಿದುಕೊಂಡಿದ್ದರು. ಇದರಿಂದಾಗಿ ದೀನದಯಾಳಜಿಗೆ ನಮ್ಮ ಸಮಾಜದ ಏಕತೆ ಆಧ್ಯಾತ್ಮಿಕತೆಯಲ್ಲಿ ಅಡಗಿದೆ ಎನ್ನುವುದು ಅರ್ಥವಾಗಿತ್ತು.

ಇಡೀ ಯೂರೋಪನ್ನು ಸುಲಭವಾಗಿ ಒಳಗೊಳ್ಳಬಹುದಾದಂಥ ನಮ್ಮ ದೇಶ ವೈವಿಧ್ಯ ಪೂರ್ಣವಾದದ್ದು. ಈ ದೇಶದ ಇತಿಹಾಸ ಅವಘಡಗಳಿಂದ, ದುರಂತಗಳಿಂದ ತುಂಬಿದೆ. ಆದಾಗ್ಯೂ ನಮ್ಮಲ್ಲಿ ನಾವೆಲ್ಲ ಒಂದು ಎನ್ನುವ ಭಾವನೆ ಇದೆ; ನಮ್ಮೆಲ್ಲದ ಬದುಕು ಈ ದೇಶದ ಏಕತೆಯನ್ನು ಅವಲಂಬಿಸಿದೆ ಎನ್ನುವ ಭಾವನೆ ನಮ್ಮಲ್ಲಿದೆ. ಈ ಭಾವನೆ ನಮ್ಮ ಆಧ್ಯಾತ್ಮಿಕ ಬೋಧನೆಯ ಫಲ. ಪುರುಷ ಸೂಕ್ತ ಪಠಿಸುವ ಮೂಲಕ ನಾವು ನಮ್ಮ ದೇವರನ್ನು ಪೂಜಿಸುವುದಿಲ್ಲವೆ? ಈ ಪುರುಷ ಸೂಕ್ತ ನಮಗೆ ಈ ಸಮಾಜ ಸಶಕ್ತ ಪುರುಷನನ್ನು ಹೋಲುತ್ತದೆ ಎನ್ನುವುದನ್ನು ಜ್ಞಾಪಿಸುತ್ತದೆ, ಸಹಸ್ರಪುರುಷನನ್ನು ಹೋಲುತ್ತದೆ ಎನ್ನುವುದನ್ನು ಜ್ಞಾಪಿಸುತ್ತದೆ. ಸಹಸ್ರ ಶೀರ್ಷ, ಸಹಸ್ರಾಕ್ಷ, ಸಹಸ್ರಪಾದಗಳನ್ನು ಹೊಂದಿರುವ ಪುರುಷನಿವನು.

ದೀನ್‌ದಯಾಳರು ಪುರುಷ ಸೂಕ್ತದ ಸಾಲುಗಳಿಂದಲೇ ನಮ್ಮ ಮನಸ್ಸಿನಲ್ಲಿ ನವಚೈತನ್ಯ ತುಂಬುತ್ತಾರೆ. ಅವರನ್ನು ಮಾನವತಾವಾದ ಗುರಿಗೆ ಎಳೆದು ತಂದ ಪಥ ಅವರ ಮೇಲಾಗಿರುವ ಆಧ್ಯಾತ್ಮಿಕ ಪ್ರಭಾವಕ್ಕೆ ಸಾಕ್ಷಿಯಾಗಿರುವುದನ್ನು ನಾವು ಗಮನಿಸಬಹುದು. ಆಧ್ಯಾತ್ಮಿಕತೆಯಲ್ಲಿ ನಮ್ಮ ಏಕತೆ ಎಂಬುದು ಅವರ ಗಾಢವಾದ ಅಭಿಮತವಾಗಿತ್ತು.

ದೀನದಯಾಳಜಿಯವರ ವ್ಯಾಖ್ಯಾನಗಳನ್ನು ಗಮನಿಸೋಣ:

**"ರಾಷ್ಟ್ರಕ್ಕೊಂದು ಆತ್ಮವಿದೆ, ಇದಕ್ಕೊಂದು ತಾಂತ್ರಿಕ ಹೆಸರಿದೆ–ಚಿತಿ. ಮೆಕ್‌ಡೌಗಲ್ ಪ್ರಕಾರ ಇದು ಸಮಷ್ಟಿಯ ಅಂತರ್ಗತ ಲಕ್ಷಣ. ಹಾಗೆಯೇ ಪ್ರತಿಯೊಂದು ಸಮುದಾಯದ ವ್ಯಕ್ತಿಗಳಿಗೂ ಒಂದು ಅಂತರ್ಗತ ಲಕ್ಷಣವಿರುತ್ತದೆ. ಇದೇ ರೀತಿ ಪ್ರತಿಯೊಂದು ಸಮಾಜವೂ ಅಂತರ್ಗತವಾದ ಲಕ್ಷಣವೊಂದನ್ನು ಹೊಂದಿರುತ್ತದೆ ಇದು ಐತಿಹಾಸಿಕ ಸಾಂದರ್ಭಿಕ ಹಿನ್ನೆಲೆಯ ಫಲಿತವಲ್ಲ."**[೧೦]

ದೀನದಯಾಳಜೀಯವರ ಪ್ರಕಾರ ಇದು ರಾಷ್ಟ್ರದ ಆತ್ಮಕ್ಕೆ ನೀಡಿರುವ ಪ್ರಾಶಸ್ತ್ಯ. ರಾಷ್ಟ್ರಕ್ಕೊಂದು ವ್ಯಕ್ತಿತ್ವವನ್ನು ನೀಡುವ ಆತ್ಮ ಅವಿನಾಶಿ.

ವೈವಿಧ್ಯತೆಯಲ್ಲಿ ಏಕತೆಯಿದೆ ಎನ್ನುವುದನ್ನು ನಮಗೆ ಬೋಧಿಸುವುದು ಆಧ್ಯಾತ್ಮಿಕತೆಯೇ. ಬಾಹ್ಯದಲ್ಲಿ ನಮ್ಮ ನಡುವೆ ಸಾವಿರಾರು ಭಿನ್ನತೆಗಳಿರಬಹುದು. ಆದರೆ ಒಳಗಣ ಚೇತನ ಒಂದೇ. ಈ ಅಂತಃಶ್ಚೇತನವೇ ಎಲ್ಲ ಭಿನ್ನತೆಗಳನ್ನೂ ನಿವಾರಿಸಿ ಎಲ್ಲ ಕಾಲದಲ್ಲೂ ನಮ್ಮನ್ನು ಒಂದುಗೂಡಿಸುತ್ತದೆ.

**೩. ಸ್ವದೇಶಿ ಮಾನದಂಡಗಳಿಗೆ ಆಗ್ರಹ**

ದೀನದಯಾಳಜೀಯವರು ಯಾವುದೇ ಸಮಸ್ಯೆಯನ್ನೂ ಅನ್ಯದೇಶೀಯ ವಿಚಾರಧಾರೆಯಿಂದ ನೋಡಲಿಚ್ಛಿಸಲಿಲ್ಲ ಎನ್ನುವುದು ಅವರ ಬರಹ–ಭಾಷಣಗಳನ್ನು ಬಲ್ಲವರಿಗೆ ತಿಳಿದ ವಿಷಯವೇ ಆಗಿದೆ. ೧೯೫೮ರಲ್ಲಿ ಭಾರತದ ಅರ್ಥ ವ್ಯವಸ್ಥೆಯ ಬಗ್ಗೆ ಅವರು ಬರೆದ ಗ್ರಂಥ ಅವರು ಶುದ್ಧಾಂಗ ಭಾರತೀಯ ಎಂಬುದನ್ನು ನಮ್ಮ ಗಮನಕ್ಕೆ ತರುತ್ತದೆ. ಸಹಕಾರಿ ಬೇಸಾಯವಿರಲಿ, ಸಣ್ಣ ಕೈಗಾರಿಕೆ ಇರಲಿ, ಗುಡಿಕೈಗಾರಿಕೆ ಇರಲಿ ಅಥವಾ ರಾಷ್ಟ್ರೀಕರಣ ವಿಚಾರವಿರಲಿ, ಭಾರತದ ಸಮಸ್ಯೆಗಳನ್ನು ಭಾರತೀಯ ಪರಿಹಾರಗಳಿಂದಲೇ ಬಗೆಹರಿಸಿಕೊಳ್ಳಬೇಕೆಂಬುದನ್ನು ತಮ್ಮ ಅಭಿಮಾನಿ ಓದುಗರು ಮರೆಯಬಾರದೆಂಬುದು ಅವರ ನಿಲುವಾಗಿತ್ತು. ಇದಕ್ಕೆ ಅವರು ಎಂದಿಗೂ ಅವಕಾಶನೀಡಲಿಲ್ಲ. 'ಏಕಾತ್ಮ ಮಾನವದರ್ಶನ' ಪರಿಕಲ್ಪನೆ ರೂಪುಗೊಳ್ಳುವ ಮುನ್ನ ಅವರ ಚಿಂತನಕ್ರಮ ಹೇಗಿತ್ತೆಂಬುದನ್ನು ತೋರಿಸಲು ಮಾತ್ರ ನಾನು ಅವರು ೧೯೫೮ರಲ್ಲಿ ಪ್ರಕಟವಾದ ಪುಸ್ತಕವನ್ನು ಪ್ರಸ್ತಾಪಿಸುತ್ತಿದ್ದೇನೆ.

ದೀನದಯಾಳಜೀಯವರ ಸ್ವದೇಶಿ ವಿಚಾರಧಾರೆ ಕುರಿತಂತೆ ಕೆಲವು ಸ್ಮರಣೀಯ ನಿದರ್ಶನಗಳನ್ನು ನೋಡಬಹುದು:

**(ಅ) ಉಳುವವನಿಗೇ ಭೂಮಿ ಎನ್ನುವ ಘೋಷಣೆ ತುಂಬಾ ಜನಪ್ರಿಯವಾಗಿದ್ದ ದಿನಗಳಲ್ಲಿ ದೀನದಯಾಳಜೀ "ಭೂಮಿ ಬಗ್ಗೆ ಕಾಳಜಿ ಇರುವವನಿಗೆ ಮಾತ್ರ ಭೂಮಿ" ಎನ್ನುವುದನ್ನು ಒತ್ತಿಹೇಳಿದರು. ಭಾರತದಲ್ಲಿ ಭೂಮಿ ಕೇವಲ ಒಂದು ತುಣುಕು ಜಮೀನಲ್ಲ, ಕೇವಲ ಒಂದು ಆಸ್ತಿಯಲ್ಲ. ಅದು ಉಳುವವನ ತಾಯಿ ಇದ್ದಂತೆ ಎಂಬುದನ್ನು ದೀನದಯಾಳಜೀ ಒತ್ತಿಹೇಳಿದ್ದರು. ಈ ಕಾರಣದಿಂದಾಗಿಯೇ ಉಳುವವನು ತಾಯಿಯ ಋಣವನ್ನು ಮರೆಯಬಾರದು, ಎಂದೇ ಅದರ ಬಗ್ಗೆ ಕಾಳಜಿವಹಿಸಬೇಕು.**



**(ಆ) ಪ್ರತಿಯೊಬ್ಬರೂ ತಮ್ಮ ತುತ್ತು ಅನ್ನವನ್ನು ಸಂಪಾದಿಸಬೇಕು ಇದು ಕಮ್ಯುನಿಸ್ಟರು ಜನಪ್ರಿಯಗೊಳಿಸಲಿಚ್ಛಿಸಿದ ಘೋಷಣೆ. ಬಂಡವಾಳಶಾಹಿಯ ಹಿನ್ನೆಲೆಯಲ್ಲಿ ಅರ್ಜಿಸಿದ ವರಮಾನವನ್ನು ಭೋಗಿಸುವ ಜನರಿಗೆ ಅನಗತ್ಯ ಮಾನ್ಯತೆ ನೀಡುವುದರ ವಿರುದ್ಧ ಈ ಘೋಷಣೆ ಶ್ರೇಷ್ಠವಾದುದೇ ಆಗಿದೆ. ಆದರೆ ದೀನದಯಾಳ ಉಪಾಧ್ಯಾಯರಿಗೆ ಇದು ಸಾಲದೆನ್ನಿಸಿತು. ಅರ್ಜಿಸಲಾಗದ ವ್ಯಕ್ತಿಗಳ ಬೇಡಿಕೆಯನ್ನು ತಳ್ಳಿಹಾಕುವುದಾದರೂ ಹೇಗೆ ಸಾಧ್ಯ? ದೌರ್ಬಲ್ಯಗಳು, ಮಕ್ಕಳ ಪಾಲನೆ ಪೋಷಣೆ, ಹಿರಿಯರ ಪಾಲನೆ ಪೋಷಣೆ ಇವರೆಲ್ಲರ ಅನ್ನ ಆಹಾರ ಯೋಗಕ್ಷೇಮಗಳನ್ನು ನೋಡಿಕೊಳ್ಳುವುದು ದುಡಿಯುವ ಮಂದಿಯ ಹೊಣೆ. ದುಡಿಯುವ ಮಂದಿಯಿಂದ ಈ ಅಶಕ್ತರೆಲ್ಲರೂ ನೆರವನ್ನು ನಿರೀಕ್ಷಿಸುತ್ತಾರೆ. ಹೀಗಾಗಿ, ದೀನ್‌ದಯಾಳಜಿಯವರು ಸಮಾಜದ ಏಕತೆಯ ಮಹತ್ವದತ್ತ ನಮ್ಮ ಗಮನ ಸೆಳೆಯುತ್ತಾರೆ. ಎಂದೇ ಅವರು ಹೇಳಿದರು: "ಅನ್ನವನ್ನು ಸಂಪಾದಿಸಬೇಕು ಹಾಗೂ ತಾನು ಸಂಪಾದಿಸಿದ ಅನ್ನವನ್ನು ಇತರರಿಗೂ ಉಣಬಡಿಸಬೇಕು."**

**(ಜೋ ಕಮಾಯೇಗಾ ವಹ್ ಖಾಯೇಗಾ ಔರ್ ಖಿಲಾಯೇಗ)**

**(ಇ) ಜನ ನಿಸ್ಸಂದೇಹವಾಗಿ ಸರ್ವಾಧಿಕಾರದ ಬದಲು ಪ್ರಜಾಪ್ರಭುತ್ವವನ್ನು ಬಯಸಿದರು. ದೀನದಯಾಳಜಿ ಕೇವಲ ಜನರಾಜ್ಯದಿಂದ ತೃಪ್ತರಾಗಲಿಲ್ಲ. ಅವರು ಧರ್ಮರಾಜ್ಯ ಸ್ಥಾಪನೆಯಾಗ ಬೇಕೆಂದು ಅಪೇಕ್ಷೆ ಪಟ್ಟಿದ್ದರು. ಪ್ರಗತಿಶೀಲರ ದೃಷ್ಟಿಯಲ್ಲಿ ಧರ್ಮ ಹಿಂದುಳಿದಿರುವಿಕೆಯ ಸಂಕೇತವೆನಿಸಿಕೊಂಡಿತ್ತು. ಆದರೆ ದೀನದಯಾಳಜಿಯವ ದೃಷ್ಟಿಯಲ್ಲಿ ಧರ್ಮ ಮನುಕುಲದ ವಿಕಾಸದ ಚರಿತ್ರೆಯ ಸರ್ವೋಚ್ಚ ಘಟ್ಟದ ಸಂಕೇತ.**

ಧರ್ಮ ರಾಜ್ಯದ ಎಂದರೆ ಪುರೋಹಿತಶಾಹಿ ಎಂದು ಅರ್ಥವಲ್ಲ. ಯಾವತ್ತೂ ಧರ್ಮರಾಜ್ಯಕ್ಕೆ ಈ ಅರ್ಥವಿರಲಿಲ್ಲ. ಇಂಗ್ಲಿಷಿನ "ರಿಲಿಜನ್" ಪದ ಧರ್ಮದ ಅರ್ಥವನ್ನು ಸಮರ್ಪಕವಾಗಿ ತಿಳಿಸುವುದಿಲ್ಲ ಎಂದು ದೀನದಯಾಳಜಿ ಯಾವಾಗಲೂ ಹೇಳುತ್ತಿದ್ದರು. ಧರ್ಮ ನಮ್ಮ ಜೀವನವನ್ನು ನಾಗರಿಕ ಜೀವನವನ್ನಾಗಿಸುತ್ತದೆ. ಹೇಗೆಂದರೆ ಅದು ನಮ್ಮ ಮನಸ್ಸಿನಲ್ಲಿ ಶ್ರೇಷ್ಠ ಗುಣಗಳನ್ನು ಬಿತ್ತುವ ಮೂಲಕ ನಮ್ಮ ಬದುಕನ್ನು ನಾಗರಿಕಗೊಳಿಸುತ್ತದೆ. ನವದೆಹಲಿಯ "ಆರ್ಗನೈಸರ್" ಪತ್ರಿಕೆಗೆ ಬರೆದ ಅತಿಥಿ ಸಂಪಾದಕೀಯದಲ್ಲಿ ದೀನದಯಾಳಜಿ ಪ್ರಜಾಸತ್ತೆ ಕುರಿತ ತಮ್ಮ ಪರಿಕಲ್ಪನೆಯನ್ನು ವಿವರಿಸಿದ್ದಾರೆ. ಆ ಸಂಪಾದಕೀಯದಿಂದ ಆಯ್ದ ಭಾಗ :

**"ಪ್ರಜಾಪ್ರಭುತ್ವಕ್ಕೆ ಅಧಿಕಾರದಿಂದ ತಟಸ್ಥವಾದ ಒಂದು ಉನ್ನತ ಶ್ರೇಣಿಯ ಅಗತ್ಯವಿದೆ. ಭಗವಾನ್ ಶ್ರೀರಾಮನಂತೆ ಪ್ರಜಾಪ್ರಭುತ್ವದಲ್ಲಿ ರಾಜಕಾರಣಿಯಾದವನು ತಾನಾಗಿ ಬಂದ ಅಧಿಕಾರವನ್ನು ಒಪ್ಪಿಕೊಳ್ಳಬೇಕು ಹಾಗೂ ಅಧಿಕಾರ ತ್ಯಜಿಸಬೇಕಾಗಿ ಬಂದಾಗ**

**ಆದರಿಂದ ಎಷ್ಟೇ ದೊಡ್ಡ ನಷ್ಟವಾಗಲಿ ಹಾಗೆಂದು ಭಾವಿಸದೆ ಅಧಿಕಾರ ತ್ಯಾಗ ಮಾಡಬೇಕು.**

ಇದು ಧರ್ಮರಾಜ್ಯ ಕುರಿತಂತೆ ದೀನ್ ದಯಾಳ್ ದೃಷ್ಟಿ, ದೀನ್‌ದಯಾಳರ ದೃಷ್ಟಿಯ ವ್ಯಾಖ್ಯಾನ. ಹೀಗೆ, ಮಾನವೇಂದ್ರನಾಥರು ಮಾನವನನ್ನು ಧರ್ಮದ ಕಪಿಮುಷ್ಟಿಯಿಂದ ಪಾರುಮಾಡಬೇಕು (ಮಾನವೇಂದ್ರರು ಹಿಂದೂ ಧರ್ಮಕ್ಕೆ ಸಂಶಯದ ಲಾಭವನ್ನೂ ಕೊಡುವುದಿಲ್ಲ) ಎಂದು ಬಯಸಿದರೆ; ದೀನದಯಾಳಜಿ ಈ ರೀತಿಯಲ್ಲಿ ಹಿಂದೂ ಪದದ ರೂಪಾಂತರವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ ಹಾಗೂ ಭಾರತದಲ್ಲಿ ಧರ್ಮ ನಿರ್ವಹಿಸುತ್ತಿರುವ ಪಾತ್ರದ ಬಗ್ಗೆ ಶ್ರದ್ಧಾ ಭಕ್ತಿಯಿಂದ, ಘನತೆಯಿಂದ ಮಾತನಾಡುತ್ತಾರೆ. ಎಂದೇ "ಮಾನವತಾವಾದ" ಕುರಿತಂತೆ ಇವರಿಬ್ಬರು ವಿಭಿನ್ನವಾಗಿ ವ್ಯಾಖ್ಯಾನಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ.

**೪. ವಾಸ್ತವಿಕ ಮಾರ್ಗಾನುಸರಣೆಯಲ್ಲಿ ಒಲವು**

ದೀನ್ ದಯಾಳರು ಯಾವತ್ತು ಪ್ರಯೋಜನವಾದಿ ಮಾರ್ಗ ಹಿಡಿದವರಲ್ಲ. ಉದಾಹರಣೆಗೆ ಹೇಳುವುದಾದರೆ ಅವರು ತಮ್ಮ ಪ್ರಾರಂಭಿಕ ಬರಹಗಳಲ್ಲಿ 'ಪ್ರಾಮಾಣಿಕತೆಯೊಂದೇ ಅತ್ಯುತ್ತಮ ನೀತಿ' ಎಂದು ಪ್ರಶಂಸಿಸುವವರನ್ನು ಖಂಡಿಸಿದ್ದರು. ಪಾಶ್ಚಾತ್ಯರ ದೃಷ್ಟಿಯಲ್ಲಿ "ಜ್ಞಾನವೇ ಅಧಿಕಾರ" ಹಾಗೂ "ಆರೋಗ್ಯವೇ ಭಾಗ್ಯ". ಜ್ಞಾನ ಮಾರ್ಗ ಪವಿತ್ರವಾದದ್ದು ಎನ್ನುತ್ತದೆ ನಮ್ಮ ಪರಂಪರೆ ಇದನ್ನು ದೀನದಯಾಳಜಿ ಸದಾಕಾಲ ನೆನಪಿಸುತ್ತಿದ್ದರು. ("ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ") ಇದೇ ಪರಂಪರೆ ನಮಗೆ ಪ್ರಬಲವಾಗಿರಬೇಕೆಂದು ಬೋಧಿಸುತ್ತದೆ. ಏಕೆಂದರೆ ದುರ್ಬಲನಿಗೆ ಆತ್ಮಸಿದ್ಧಿ ಸಾಧ್ಯವಿಲ್ಲ. (ನಾಯಮಾತ್ಮಾ ಬಲಹೀನೇನ ಲಭ್ಯಃ)

ವಾಸ್ತವದಲ್ಲಿ ಪ್ರಾಮಾಣಿಕತೆಯ ನೀತಿ ದುಬಾರಿ ವೆಚ್ಚದ ಬಾಬು ಆಗಬಹುದು. ಆದಾಗ್ಯೂ ನಾವು ಅಪ್ರಮಾಣಿಕರಾಗಿರಬಾರದು. ಈ ಬಗೆಯ ಜೀವನದಿಂದ ಮಾತ್ರ ನಮ್ಮ ಸಮಾಜದಲ್ಲಿ ಸಾಮರಸ್ಯ. ಅಖಂಡತೆ ಸಾಧ್ಯವೆಂಬುದು ದೀನ್‌ದಯಾಳ್‌ಜಿ ಅವರ ಶ್ರದ್ಧೆಯ ಮೂಲಭೂತ ವಿಚಾರವಾಗಿತ್ತು. ಅವರ ಪ್ರಕಾರ ಜನತೆ ಯಾವುದೇ ಒಂದು ಪಥವನ್ನು ಅದು ತ್ವರಿತಗತಿಯಲ್ಲಿ ತಮ್ಮ ಪ್ರಗತಿಗೆ ಸಹಾಯಕವಾಗುತ್ತದೆ ಎನ್ನುವ ಏಕೈಕ ಕಾರಣಕ್ಕಾಗಿ ಸ್ವೀಕರಿಸಬಾರದು ಅಥವಾ ನಮ್ಮ ಪ್ರಗತಿಯ ವೇಗವನ್ನು ಕುಂಠಿತಗೊಳಿಸುತ್ತದೆ ಎನ್ನುವ ಕಾರಣದಿಂದಾಗಿ ಯಾವುದೇ ಒಂದು ಪಥವನ್ನು ತಿರಸ್ಕರಿಸಲೂಬಾರದು. ಏಕೆಂದರೆ ಪಥಾನುಸರಣೆಯಷ್ಟೆ ನಮ್ಮ ಕರ್ತವ್ಯವೆಂದು ನಮ್ಮ ಬದುಕಿನ ಪರಮಾದರ್ಶ ಹೇಳುತ್ತದೆ. ಉಳಿದ ಫಲಾಫಲಗಳಿಂದ ದೂರವಿರಬೇಕೆಂದೂ ಅದು ಬೋಧಿಸುತ್ತದೆ. ಇಂಥ ಆದರ್ಶಗಳು ಭಾರತೀಯ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಒಂದು ಪಕ್ಷವನ್ನು



ಅಧಿಕಾರಕ್ಕೆ ತರುವ ಸಲುವಾಗಿ ರಕ್ತಸಿಕ್ತ ಹೋರಾಟ ಸಲ್ಲದು, ಅದನ್ನು ತ್ಯಜಿಸಬೇಕು. ಅದು ಕಾರ್ಯತಃ ಸಾಧ್ಯವಲ್ಲ ವ್ಯಾವಹಾರಿಕವಲ್ಲ ಎನ್ನುವ ಕಾರಣಕ್ಕಾಗಿಯೇ ಹೋರಾಟ ಮಾರ್ಗವನ್ನು ತ್ಯಜಿಸಬೇಕಾಗಿಲ್ಲ, ಆದೆ ಮೂಲತಃ ಅದರೆ ದುಷ್ಟ ಮಾರ್ಗವಾದ್ದರಿಂದ ಅದನ್ನು ತ್ಯಜಿಸಬೇಕು. ಮಾನವೇಂದ್ರನಾಥರು ಈ ಪಥವನ್ನು ತಿರಸ್ಕರಿಸಿದ್ದರು. ಇವತ್ತಿನ ಪ್ರಪಂಚದಲ್ಲಿ ಸರ್ಕಾರಿ ವ್ಯವಸ್ಥೆ ಇಷ್ಟೊಂದು ಕ್ರೂರವಾಗಿರುವ ಹಿನ್ನೆಲೆಯಲ್ಲಿ ಹೋರಾಟ ಮಾರ್ಗ ನಿಷ್ಫಲಕಾರಿ ಎನ್ನುವುದು ಅವರ ವಾದ. ಕಾರಣದಿಂದ ರಕ್ತಸಿಕ್ತ ಹೋರಾಟವನ್ನು ತಿರಸ್ಕರಿಸಿದ್ದರು. ಮೂಲತಃ ಅಯೋಗ್ಯ ಎನ್ನುವ ಕಾರಣದಿಂದ ದೀನದಯಾಳಜಿ ಸಾರಾಸಗಟಾಗಿ ಹೋರಾಟಮಾರ್ಗವನ್ನು ಖಂಡಿಸಿದ್ದರು.

**ನಿದಾನ ಮತ್ತು ಪರಿಹಾರ**

ಈ ಇಬ್ಬರು ಚಿಂತಕರೂ ಬೇರೆ ಬೇರೆ ಮಾರ್ಗಗಳ ಮೂಲಕ ಹೇಗೆ ಮಾನವತಾವಾದವನ್ನು ಪ್ರತಿಪಾದಿಸಿದ್ದಾರೆ ಎನ್ನುವುದನ್ನು ನಾವು ಇಲ್ಲಿಯವರೆಗೆ ಚರ್ಚಿಸಿದ್ದೇವೆ. ಕೆಲವು ದೃಷ್ಟಿಕೋನಗಳಲ್ಲಿ ಇಬ್ಬರಲ್ಲೂ ಸಹಮತವಿದೆ. ಉದಾಹರಣೆಗೆ.

- (ಎ) **ಬಂಡವಾಳಶಾಹಿ ಮತ್ತು ಕಮ್ಯುನಿಸ್ಟ್ ವ್ಯವಸ್ಥೆಗಳನ್ನು ಇಬ್ಬರೂ ಕಟುವಾಗಿ ಟೀಕಿಸಿದ್ದಾರೆ.**
- (ಬಿ) **ಆಧುನಿಕ ಪ್ರಪಂಚದಲ್ಲಿ ಸಾಮಾನ್ಯನ ಅಸಹಾಯಕತೆ ಕಂಡು ಇಬ್ಬರೂ ವಿಹ್ವಲರಾಗಿದ್ದಾರೆ.**
- (ಸಿ) **ಮಾನವನ ಐಹಿಕ ಪ್ರಗತಿ ಅವನನ್ನು ಅನಾಥ ಪ್ರಜ್ಞೆಯಿಂದ ಮುಕ್ತಗೊಳಿಸುವುದಿಲ್ಲ ಎನ್ನುವುದು ಇಬ್ಬರಲ್ಲೂ ಆಕ್ರೋಶಕ್ಕೆಡೆ ಮಾಡಿಕೊಟ್ಟಿದೆ.**
- (ಡಿ) **ಶ್ರೀಸಾಮಾನ್ಯನಿಗೆ ಪರಮಗೌರವ ಕೋರಬೇಕೆಂಬುದು ಇಬ್ಬರ ಇಚ್ಛೆಯಾಗಿದೆ. ಪರಮಗೌರವ ಸ್ಥಾನಕ್ಕೆ ಶ್ರೀಸಾಮಾನ್ಯ ಅರ್ಹನೆಂಬುದು ಇಬ್ಬರ ನಿಲುವೂ ಆಗಿದೆ.**

ಇಬ್ಬರಲ್ಲೂ ಸಹ ಮತವಿಲ್ಲದ ಅಂಶಗಳೂ ಸ್ಪಷ್ಟವಾಗಿ ಗೋಚರಿಸುತ್ತವೆ. ಅವು :

- (ಎ) **ಮಾನವೇಂದ್ರರು ಮೂಲತಃ ಐಹಿಕವಾದಿಗಳು, ದೀನದಯಾಳರು ಆಧ್ಯಾತ್ಮಿಕರು.**
- (ಬಿ) **ಮಾರ್ಕ್ಸ್‌ವಾದವನ್ನು ಅದರ ಕುತರ್ಕಗಳಿಂದ, ಭ್ರಮೆ, ಭ್ರಾಂತಿಗಳಿಂದ ಹೇಗಾದರೂ ಮುಕ್ತಗೊಳಿಸಬಹುದೆಂಬುದು, ಎಂ.ಎನ್. ರಾಯ್ ಅವರಿಗೆ ಖಾತ್ರಿಯಾಗಿತ್ತು. ಮಾರ್ಕ್ಸ್‌ವಾದದಿಂದ ಏನಾದರೂ ಪ್ರಯೋಜನ ಉಂಟೆ ಎಂದು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ ಎಂದು ದೀನದಯಾಳಜಿ ಹೇಳಿದ್ದರು.**

**ಈ ಯುಗದಲ್ಲಿ ನಮ್ಮ ಸಂಸ್ಕೃತಿಯಿಂದಲೇ ನಮ್ಮ ಉದ್ಧಾರ ಸಾಧ್ಯ, ನಮ್ಮ ಮುಕ್ತಿ ಸಾಧ್ಯ ಎನ್ನುವುದು ಅವರ ಅಭಿಪ್ರಾಯವಾಗಿತ್ತು.**

(ಸಿ) **ಇಂದಿಗೂ ಧರ್ಮ ಹೇಗೆ ಶ್ರೀಸಾಮಾನ್ಯನ ಮೇಲೆ ತನ್ನ ಪ್ರಾಬಲ್ಯ ಹೇರುತ್ತಿದೆ, ಹೇಗೆ ಸವಾರಿ ಮಾಡುತ್ತಿದೆ ಎನ್ನುವುದು ಎಂ.ಎನ್. ರಾಯ್ ಅವರಲ್ಲಿ ಕಳವಳ ಉಂಟುಮಾಡಿತ್ತು. ದೀನ್‌ದಯಾಳರು ಭಾರತದ ಇತಿಹಾಸದಲ್ಲಿ ಇಣಕಿ ನೋಡಿ, ಧರ್ಮ, ನಮಗೆ ಪರಿಚಿತವಾಗಿರುವ ಉಳಿದೆಲ್ಲ ಬಗೆಯ ಸರ್ಕಾರಗಳಿಗಿಂತ ಉತ್ಕೃಷ್ಟವಾದದ್ದು ಎಂಬುದನ್ನು ಕಂಡುಕೊಂಡಿದ್ದರು.**

(ಡಿ) **ಎಂ.ಎನ್. ರಾಯ್ ಅವರ ಅಂತರಂಗ ಬಹಿರಂಗ ಸೇರಿದಂತೆ ಆಮೂಲಾಗ್ರ ಸಂಪೂರ್ಣ ಬದಲಾವಣೆಯನ್ನು ಬಯಸಿದ್ದರು ತೀವ್ರಗಾಮಿತ್ವದ ಸುಧಾರಣೆಯಿಂದ ಮಾನವತಾವಾದ ಜಾರಿಗೆ ತರಲು ಸಾಧ್ಯ ಎಂದು ಅವರು ನಂಬಿದ್ದರು. ಆದರೆ ದೀನದಯಾಳರು ಸೂಕ್ತ ಸಮನ್ವಯದಿಂದ, ಒಂದುಗೂಡಿಸುವಿಕೆಯಿಂದ ಮಾನವತಾವಾದದ ಪಥದಲ್ಲಿ ಮುನ್ನಡೆ ಸಾಧ್ಯವಿದೆ ಎಂದು ನಂಬಿದ್ದರು.**

(ಇ) **ಕಾಲದ ಅವೈಚಾರಿಕತೆ, ಅತಾರ್ಕಿಕತೆ, ಅವಿವೇಕಗಳು ಹಾಗೂ ಸಮಷ್ಟಿ ಸ್ವಾಮ್ಯವಾದಗಳಿಗೆ ಪ್ರತಿಯಾಗಿ, ಮಾನವೇಂದ್ರರು ಮಾನವ ವಿವೇಕ, ವೈಚಾರಿಕತೆ ಮತ್ತು ವ್ಯಕ್ತಿಯ ಸರ್ವೋತ್ಕೃಷ್ಟತೆ ಇವುಗಳಿಗೆ ಮಹತ್ವ ನೀಡಿದ್ದರು. ದೀನದಯಾಳರು ಎಂದಿಗೂ ಅತಿಗಳಿಗೆ ಹೋಗಲಿಲ್ಲ. ತೀವ್ರ ಮಾರ್ಗ ಹಿಡಿಯಲಿಲ್ಲ. ಅವರ ದೃಷ್ಟಿಯಲ್ಲಿ ವ್ಯಕ್ತಿಯಾಗಲೀ ಸಮಾಜವಾಗಲೀ ಪರಸ್ಪರ ಪ್ರತ್ಯೇಕವಲ್ಲ. ಸಮಾಜ ಮತ್ತು ವ್ಯಕ್ತಿ ಪರಸ್ಪರ ಪೂರಕ. ಅತಿಯಾದ ವ್ಯಕ್ತಿತ್ವವಾದ ಸ್ವಚ್ಛಂದ ಸಮಾಜದ ಬೆಳವಣಿಗೆಗೆ ನೀರೆರೆಯಬಹುದು ಹಾಗೆಯೇ ತೀವ್ರಗಾಮಿ ಸಮಾಜವಾದ ಸ್ವತಂತ್ರ ವ್ಯಕ್ತಿತ್ವವನ್ನು ನಾಶಗೊಳಿಸಬಹುದು ಎನ್ನುವುದು ದೀನದಯಾಳಜಿ ಅಭಿಪ್ರಾಯವಾಗಿತ್ತು. ಆದ್ದರಿಂದಲೇ, ದೀನದಯಾಳಜಿ ಸಮಾಜ ಮತ್ತು ವ್ಯಕ್ತಿ ನಡುವೆ ಸಾಮರಸ್ಯದ ನಂಟನ್ನು ಬಯಸಿದ್ದರು.**

ಎಂ.ಎನ್. ರಾಯ್ ಮತ್ತು ದೀನದಯಾಳ್‌ಜಿ ಹೇಗೆ ವಿಭಿನ್ನ ಪಥಗಳನ್ನು ಅನುಸರಿಸಿದ್ದರೆಂಬುದನ್ನು ಈಗಾಗಲೇ ಸುದೀರ್ಘವಾಗಿ ವಿವರಿಸಲಾಗಿದೆ. ಇವರಿಬ್ಬರ ಮಾನವತಾವಾದ ಪರಿಕಲ್ಪನೆಗಳ ಪ್ರತಿಪಾದನೆ, ನಿರೂಪಣೆಗಳ ಪರಾಮರ್ಶೆಯ ನಂತರವೂ ಇಬ್ಬರ ನಡುವಣ ಭಿನ್ನತೆಗಳು, ವ್ಯತ್ಯಾಸಗಳು, ಭಿನ್ನಾಭಿಪ್ರಾಯಗಳು ಗೋಚರಣೀಯವಾಗಿಯೇ ಉಳಿದಿವೆ. ಆದ್ದರಿಂದ ನಿದಾನ–ಪರಿಹಾರಗಳ ಬಗ್ಗೆ ಇನ್ನೂ ಸುದೀರ್ಘವಾದ ಚರ್ಚೆ ಅನಗತ್ಯವೆನ್ನಿಸುತ್ತದೆ.

ದೀನದಯಾಳ ಉಪಾಧ್ಯಾಯರು, ಧರ್ಮ–ಅರ್ಥ–ಕಾಮ–ಮೋಕ್ಷಗಳನ್ನೊಳಗೊಂಡ ಚತುರ್ವಿಧ ಪುರುಷಾರ್ಥಗಳನ್ನು ತುಂಬ ಯಶಸ್ವಿಯಾಗಿ



ಸಮಕಾಲೀನ ಭಾರತದ ಪರಿಸ್ಥಿತಿಗೆ ಹೊಂದಿಸಿದ್ದಾರೆ. ಇವತ್ತಿನ ಪರಿಸ್ಥಿತಿಗೆ ಚರ್ತುವಿಧ ಪುರುಷಾರ್ಥಗಳನ್ನೇ ಪರಿಹಾರವಾಗಿ ಸೂಚಿಸುವ ಮೂಲಕ ತಮ್ಮ ಅಖಂಡತಾ ಮಾನವ ಸಿದ್ಧಾಂತವನ್ನು ನಿಜವಾದ ಅರ್ಥದಲ್ಲಿ ಸಮಗ್ರವಾಗಿಸಿದ್ದಾರೆ. ಅವಿಭಾಜ್ಯವಾಗಿಸಿದ್ದಾರೆ.

ಏಕಾತ್ಮ ಮಾನವದರ್ಶನದೊಂದಿಗೆ ತೀವ್ರಗಾಮಿ ಮಾನವತಾವಾದದ ಹೋಲಿಕೆ ಏನಿದ್ದರೂ ಪ್ರತಿಕೂಲವಾದ, ಹಗೆತನದ ಧೋರಣೆಗಳೊಂದಿಗೆ ರಾಜ ಅನುಸಂಧಾನ ಮಾರ್ಗಗಳಿಂದ ಮುಂಬರುವ ದಿನಗಳಲ್ಲಿ ಯಶಸ್ಸು ಖಚಿತ ಎನ್ನುವುದನ್ನು ಎತ್ತಿತೋರಿಸುವ ಪ್ರಯತ್ನಕ್ಕೆ ಸೀಮಿತಗೊಂಡಿದೆ. ಹತಾಶರಾಗಬೇಕಾದ ಅಗತ್ಯವಿಲ್ಲ. ಉದ್ವಿಗ್ನರಾಗಬೇಕಾಗಿಲ್ಲ. ನಮ್ಮಲ್ಲಿ ನಂಬಿಕೆ ಕಳೆದುಕೊಳ್ಳುವುದು ಸಲ್ಲ. ನಮ್ಮ ನಮ್ಮಲ್ಲೇ ನಂಬಿಕೆ ವಿಶ್ವಾಸಗಳನ್ನಿಟ್ಟು ಸಾಮರಸ್ಯದ ಮಾರ್ಗದಲ್ಲಿ ಮಾನವತೆಯ ಗುರಿಗಮ್ಯತೆಗಳನ್ನು ಸಾಧಿಸೋಣ.

**ಆಕರಗಳು**


1. A. Appodorai (Ed.): *Documents on Political Thought in Modern India,* Volume II (Bombay, 1976), p. 65.
2. V.B. Karnik, *M.N. Roy- Political Biography* (Bombay, 1978), p. 551.
3. M.N. Roy, *New Orientation* (Calcutta, 1946), p. V. preface.
4. G.P. Bhattacharya, *M.N. Roy and Radical Humanism* (Bombay, 1961), p. 31.
5. M.N. Roy, *Reason, Romanticism and Revolution,* Vol. II (Calcutta, 1955) p. 269, 270.
6. M.N. Roy, *Politics, Power and Parties*. (Calcutta, 1960), p. 112.
7. Quoted in, V.B. Karnik, *M.N. Roy - Political Biography* (Bombay, 1978), p. 608.
8. *Ibid* p. 581.
9. Quoted in Sudhakar Raje (ed.) *Pandit Deendayal Upadhayaya-A Profile* (New Delhi, 1972) p. 164.
10. *Ibid,* p. 177.
11. Deendayal Upadhyaya, *Political Diary* (Bombay, 1968), p. 111.

# ೧೬. ಏಕಾತ್ಮ ಮಾನವದರ್ಶನ ಮತ್ತು ಸಂಪೂರ್ಣ ಕ್ರಾಂತಿ

**ಜನಾ ಕೃಷ್ಣಮೂರ್ತಿ***

ಏಕಾತ್ಮ ಮಾನವದರ್ಶನ
ಸಂಪೂರ್ಣ ಕ್ರಾಂತಿ

–ಇವೆರಡೂ ಭಿನ್ನವಾದ ಪರಿಕಲ್ಪನೆಗಳೆಂದು ಮೇಲ್ನೋಟಕ್ಕೇ ಗೊತ್ತಾಗುತ್ತದೆ. ಮೂಲಭೂತವಾಗಿ ಒಂದು ಇನ್ನೊಂದಕ್ಕಿಂತ ಭಿನ್ನವಾದದ್ದು ಹಾಗೂ ತದ್ವಿರುದ್ಧವಾದದ್ದು. ಸಮಗ್ರ ಅಧ್ಯಯನಕ್ಕಾಗಿ, ಇಂಥ ಒಂದು ಪ್ರಬಂಧದಲ್ಲಿ ಈ ಪರಿಕಲ್ಪನೆಗಳನ್ನು ಒಟ್ಟಿಗೆ ಪರಿಗಣಿಸುವುದು ಸಹ ಒಂದು ವಿಫಲಯತ್ನವೇ ಆದೀತು. ಆದರೆ, ಇವೆರಡೂ ತೋರಿಕೆಗೆ ಕಾಣುವಷ್ಟು ತದ್ವಿರುದ್ಧವಾದುವಲ್ಲ, ಆಖೈರಾಗಿ ಇವು ಪರಸ್ಪರ ಪೂರಕವಾಗಲಿಕ್ಕೂ ಸಾಧ್ಯ ಎನ್ನುವುದು ಆಳವಾದ ಅಧ್ಯಯನದಿಂದ ನಮಗೆ ತಿಳಿದು ಬರುತ್ತದೆ.

## ದೀನ್ ದಯಾಳ್ ಮತ್ತು ಜಯಪ್ರಕಾಶ್

ಏಕಾತ್ಮ ಮಾನವದರ್ಶನದ ಪರಿಕಲ್ಪನೆಯೊಂದಿಗೆ ಜೊತೆಗೂಡಿಸಲಾದ ದೀನ್ ದಯಾಳ್ ಉಪಾಧ್ಯಾಯರು ಜನತೆಯ ಸೇವೆಗಾಗಿ ತಮ್ಮ ಇಡೀ ಬದುಕನ್ನೇ ಮುಡಿಪಾಗಿಟ್ಟವರು. ಪ್ರಾಚೀನ ಕಾಲದಿಂದ ನಮ್ಮ ಸಮಾಜವನ್ನು ಪೋಷಿಸಿರುವ ಚಿರಂತನ ಮೌಲ್ಯಗಳ ಒಳಹೊಕ್ಕು ಆಳವಾದ ಅಧ್ಯಯನ ನಡೆಸಿದ ಅಪರೂಪದ ಬುದ್ಧಿಜೀವಿ ದೀನದಯಾಳ ಉಪಾಧ್ಯಾಯರು. ವಿಶ್ವದಾದ್ಯಂತ ವಿವಿಧ ಆಧುನಿಕ ಸಮಾಜಗಳನ್ನು ರೂಪಿಸಿದ ಶಕ್ತಿಗಳನ್ನು ವಿಮರ್ಶಾತ್ಮಕವಾಗಿ ಅರ್ಥ ಮಾಡಿಕೊಳ್ಳುವ ಜ್ಞಾನ ದಾಹ ಬೆಳೆಸಿಕೊಂಡವರು. ಇಂಥ ವಿಶೇಷ ಅಧ್ಯಯನದಿಂದಾಗಿ ಅವರಿಗೆ, ಭಾರತ ಮಾತ್ರವಲ್ಲದೆ ವಿಶ್ವದ ವಿವಿಧ ಸಮಾಜಗಳು ಎದುರಿಸುತ್ತಿರುವ ಸಮಸ್ಯೆ–

* ಜನತಾ ಪಕ್ಷದ ತಮಿಳ್ನಾಡು ರಾಜ್ಯಘಟಕದ ಪ್ರಧಾನ ಕಾರ್ಯದರ್ಶಿ.



ಸವಾಲುಗಳನ್ನು ಎದುರಿಸಲು ಏಕಾತ್ಮ ಮಾನವ ಸಿದ್ಧಾಂತವನ್ನು ರೂಪಿಸುವುದು ಸಾಧ್ಯವಾಯಿತು. ಈ ಒಂದು ಪರಿಕಲ್ಪನೆಯನ್ನು ಮಂಡಿಸಲು ಅಗತ್ಯವಾದ ಎಲ್ಲ ಪರಿಕರಗಳು ಆಳವಾದ ಅಧ್ಯಯನದಿಂದ ಅವರಿಗೆ ಲಭ್ಯವಾಯಿತು.

ಜಯಪ್ರಕಾಶ ನಾರಾಯಣ್ ಅವರೂ ದೇಶಬಾಂಧವರ ಸೇವೆಗಾಗಿ ತಮ್ಮ ಇಡೀ ಜೀವಮಾನವನ್ನೇ ಸಮರ್ಪಿಸಿದ ಅಪರೂಪದ ನಾಯಕರು. ವ್ಯಕ್ತಿತ್ವ ರೂಪಣೆಯ ಕಾಲಾವಧಿಯಲ್ಲೇ ಜಯಪ್ರಕಾಶರಿಗೆ ಕಮ್ಯುನಿಸ್ಟ್ ಸಿದ್ಧಾಂತ ಮತ್ತು ಸಮಾಜವಾದಿ ಸಿದ್ಧಾಂತ ಶಕ್ತಿಗಳೊಂದಿಗೆ ಒಡನಾಟ ಲಭ್ಯವಾಗಿತ್ತು. ಕಮ್ಯುನಿಸ್ಟ್ ಸಿದ್ಧಾಂತ ಮತ್ತು ಸಮಾಜವಾದಿ ಶಕ್ತಿಗಳನ್ನು ಸಮೀಪದಿಂದ ನೋಡುವ ವಿಪುಲ ಅವಕಾಶಗಳು ಪ್ರಾರಂಭದ ದಿನಗಳಲ್ಲೆ ಜೆಪಿ ಅವರಿಗೆ ಒದಗಿಬಂದಿದ್ದವು. ಮಾನವಕುಲ ಎದುರಿಸುತ್ತಿರುವ ಸಮಸ್ಯೆಗಳಿಗೆ ಇವೇ ನಿಜವಾದ ಪರಿಹಾರವೆಂದು ಆಗ ಜೆಪಿ ದೃಢವಾಗಿ ನಂಬಿದ್ದರು. ಆನಂತರ ಭಾರತೀಯರೊಂದಿಗೆ ಸಂಪೂರ್ಣವಾಗಿ ಗುರುತಿಸಿಕೊಳ್ಳಲು ಸಾಧ್ಯವಾದಾಗ ಅವರಿಗೆ, ವಿಭಿನ್ನವೂ ವಿಶಿಷ್ಟವೂ ಆದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನುಳ್ಳ ಭಾರತದ ಪರಿಸ್ಥಿತಿಯ ಅರಿವಾಯಿತು. ಮೂಲಭೂತ ವ್ಯತ್ಯಾಸಗಳು ಅರ್ಥವಾದವು. ಹೀಗಾಗಿ ಅವರು ಗಾಂಧಿ ತತ್ತ್ವಗಳು ಮತ್ತು ಸರ್ವೋದಯ ಕಾರ್ಯಗಳಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿಕೊಂಡರು. ಇವೆಲ್ಲವೂ ಜೆಪಿ ಅವರಿಗೆ ಭಾರತದ ಸಾಮಾಜಿಕ ಸಮಸ್ಯೆಗಳನ್ನು ಒಳಹೊಕ್ಕು ನೋಡಲು ಅವಕಾಶ ಕಲ್ಪಿಸಿದವು. ಅಷ್ಟೇ ಅಲ್ಲ ಸಮಸ್ಯೆಗಳಿಗೆ ಪರಿಹಾರಗಳೂ ಅವರಿಗೆ ಗೋಚರಿಸತೊಡಗಿದವು. ಇದೆಲ್ಲದರ ಫಲವೇ ಸಂಪೂರ್ಣ ಕ್ರಾಂತಿಯ ಪರಿಕಲ್ಪನೆ.

ಹೀಗೆ, ಈ ಇಬ್ಬರು ಮಹನೀಯರೂ ಆಧುನಿಕ ಪ್ರಪಂಚದ ಸಾಂದರ್ಭಿಕ ಹಿನ್ನೆಲೆಯಲ್ಲಿ ಇವತ್ತಿನ ಭಾರತೀಯ ಸಮಾಜದಲ್ಲಿ ಮಹತ್ವದ ಬದಲಾವಣೆಗಳನ್ನು ಉಂಟುಮಾಡಲು ತಮ್ಮೀ ಪರಿಕಲ್ಪನೆಗಳನ್ನು ಮಂಡಿಸಿದರು.

ಏಕಾತ್ಮ ಮಾನವ ಸಿದ್ಧಾಂತ ಸಂಪೂರ್ಣವಾಗಿ ವಿಕಸನಶೀಲ ಪ್ರಕ್ರಿಯೆಯನ್ನು ಆಧರಿಸಿದೆ. ಕ್ರಾಂತಿಯಲ್ಲಿ ಸಂಘರ್ಷವಿದೆ. ಈ ಸಂಘರ್ಷಗಳೂ ಅನಿವಾರ್ಯವೆಂಬಂತೆ ಹಿಂಸಾತ್ಮಕ ಸ್ವರೂಪದವು. ಎಂದೇ, 'ಸಂಪೂರ್ಣಕ್ರಾಂತಿ' ಎನ್ನುವ ಪದದಲ್ಲೇ ಸಂಘರ್ಷದ ಬೀಜಗಳಿವೆ, ಹಿಂಸಾತ್ಮಕ ಸಂಘರ್ಷದ ಅಂಕುರವಿದೆ ಎನ್ನುತ್ತಾರೆ ಸಂಪೂರ್ಣಕ್ರಾಂತಿಯ ಟೀಕಾಕಾರರು. ಆದರೆ ಏಕಾತ್ಮ ಮಾನವವಾದ ವಿಕಾಸ ಪ್ರಕ್ರಿಯೆಯನ್ನು ಆಧರಿಸಿದ್ದು ಹಿಂಸೆಗೆ ಅವಕಾಶವಿಲ್ಲ. ಅದು ಹಿಂಸೆಯನ್ನು ನಿರಾಕರಿಸುತ್ತದೆ.

ದೀನ್ ದಯಾಳಜಿ ಒಂದು ಏಕಾತ್ಮತಾ ಮಾರ್ಗ ಕಂಡುಕೊಂಡಿದ್ದಾರೆ. ಅವರ ಪ್ರಕಾರ :

**"ಬದುಕನ್ನು ಅಖಂಡವಾಗಿ, ಸಮಗ್ರವಾಗಿ ಗ್ರಹಿಸುವುದು ಭಾರತೀಯ ಸಂಸ್ಕೃತಿಯ**

> **ಪ್ರಥಮ ಲಕ್ಷಣ. ಅದಕ್ಕೊಂದು ಸಮಗ್ರ ದೃಷ್ಟಿಕೋನವಿದೆ. ಅಂಗಗಳ ಬಗ್ಗೆ ಯೋಚಿಸುವುದು ತಜ್ಞರಿಗೆ ಸರಿ ಎನ್ನಿಸಬಹುದು. ಆದರೆ ವ್ಯಾವಹಾರಿಕ ದೃಷ್ಟಿಕೋನದಿಂದ ಅದು ಪ್ರಯೋಜಕಾರಿಯಲ್ಲ. ಬದುಕನ್ನು ವಿಭಾಗಗಳಾಗಿ ವಿಂಗಡಿಸಿ ನೋಡುವ ಪ್ರವೃತ್ತಿಯೇ ಪಾಶ್ಚಾತ್ಯ ಜಗತ್ತಿನಲ್ಲಿನ ಗೊಂದಲಗಳ ಮೂಲ. ಆನಂತರ ಅವುಗಳನ್ನು ಒಂದುಗೂಡಿಸುವ ತೇಪೆ ಕೆಲಸ– ಇದರಿಂದಾಗಿಯೇ ಗೊಂದಲ ಉದ್ಭವಿಸುತ್ತದೆ. ಬದುಕಿನಲ್ಲಿ ಬಹುತ್ವವಿದೆ, ವೈವಿಧ್ಯತೆ ಇದೆ ಎನ್ನುವುದನ್ನು ನಾವೂ ಒಪ್ಪುತ್ತೇವೆ. ಆದರ ಇದರ ಹಿಂದಿರುವ ಏಕತೆಯ ಅನ್ವೇಷಣೆಯಲ್ಲಿ ನಾವು ಸತತ ನಿರತರಾಗಿರುತ್ತೇವೆ. ಇಂಥದೊಂದು ಪ್ರಯತ್ನ ಸಂಪೂರ್ಣವಾಗಿ ವೈಜ್ಞಾನಿಕವಾಗಿರುತ್ತದೆ.”**[೧]

ಮತ್ತೆ ದೀನ್ ದಯಾಳಜಿ ಉವಾಚ :

> **“ವಿವಿಧತೆಯಲ್ಲಿ ಏಕತೆ ಹಾಗೂ ವಿವಿಧ ರೂಪಗಳಲ್ಲಿ ಏಕತೆಯ ಅಭಿವ್ಯಕ್ತಿ ಭಾರತೀಯ ಸಂಸ್ಕೃತಿಯ ಕೇಂದ್ರ ಚಿಂತನೆಯಾಗಿದೆ. ಹೃತ್ಪೂರ್ವಕವಾಗಿ ಸತ್ಯವನ್ನು ಒಪ್ಪಿಕೊಂಡಲ್ಲಿ ವಿವಿಧ ಶಕ್ತಿಗಳ ನಡುವೆ ಸಂಘರ್ಷಕ್ಕೆ ಕಾರಣವಿರುವುದಿಲ್ಲ. ಸಂಘರ್ಷ ಸಂಸ್ಕೃತಿಯ ಅಥವಾ ಪ್ರಕೃತಿಯ ಲಕ್ಷಣವಲ್ಲ. ಅದು ಅವನತಿಯ ಸಂಕೇತ.”**[೨]

ಏಕಾತ್ಮ ಮಾನವದರ್ಶನವನ್ನು ಕುರಿತು ಮತ್ತೊಂದು ಕಡೆ ಉಪನ್ಯಾಸವೊಂದರಲ್ಲಿ ಉಪಾಧ್ಯಾಯರು ಹೀಗೆ ಹೇಳಿದ್ದಾರೆ:

> **“ಸಾಮಾಜಿಕ ಗುರಿಗಳನ್ನು ಸಾಧಿಸಲು ಪ್ರಕೃತಿಯನ್ನು ರೂಪಿಸುವುದೇ ಸಂಸ್ಕೃತಿ. ಆದರೆ ಈ ಪ್ರಕೃತಿ ಸಾಮಾಜಿಕ ಸಂಘರ್ಷಕ್ಕೆಡೆ ಮಾಡಿಕೊಟ್ಟರೆ ಅದು ವಿಕಾರವಾಗುತ್ತದೆ.”**[೩]

ಇದೇ ಉಪನ್ಯಾಸದಲ್ಲಿ ಆಡಿರುವ ಕೆಳಗಿನ ಮಾತುಗಳಲ್ಲಿ ಅವರ ಅಭಿಪ್ರಾಯ ಖಚಿತವಾಗಿ ಹರಳುಗಟ್ಟಿದೆ :

> **“ಮಾನವ ಸಂಬಂಧಗಳ ಆಧಾರದ ಮೇಲೆ ಸಂಘರ್ಷ ಮತ್ತು ಹಗೆತನಗಳನ್ನು ಮಾಡಿದರೆ ಹಾಗೂ ಇದರ ಆಧಾರದನ್ವಯ ಚರಿತ್ರೆಯನ್ನು ವಿಶ್ಲೇಷಿಸಿದಲ್ಲಿ ಆಗ ಇಂಥ ಕ್ರಮದ ಫಲವಾಗಿ ವಿಶ್ವಶಾಂತಿಯ ಕನಸು ಕಾಣುವುದು ನಿರರ್ಥಕವೆನಿಸುತ್ತದೆ.”**[೪]

ಸಂಘರ್ಷ ಮತ್ತು ಹಗೆತನಗಳನ್ನು ದೀನದಯಾಳ್‌ಜಿ ವಿಕಾರವೆಂದು ಪರಿಗಣಿಸಿದ್ದರು. ಆದ್ದರಿಂದ ಅವರ ಅಖಂಡ ಮಾನವತೆಯ ಪರಿಕಲ್ಪನೆಯಲ್ಲಿ ಇವುಗಳಿಗೆ ಸ್ಥಾನವಿಲ್ಲವೆಂದು ದೃಢವಾಗಿ ಹೇಳಬಹುದು.

**ಕ್ರಾಂತಿ–ರಕ್ತಪಾತವಲ್ಲ**

ಕ್ರಾಂತಿಯಲ್ಲಿ ಘರ್ಷಣೆ, ಹಗೆತನಗಳ ನಿರೀಕ್ಷೆ ಇದೆ. ಕ್ರಾಂತಿಗೆ ನಿಘಂಟಿನ ಅರ್ಥ ಸಂಪೂರ್ಣ ಬದಲಾವಣೆ ಎಂದು. ತಲೆಕೆಳಗು ಮಾಡುವುದು, ಪರಿಸ್ಥಿತಿಯ ಹಿನ್ನಡೆ, ಮೂಲಭೂತವಾಗಿ ಪುನರ್‌ನಿರ್ಮಾಣ, ವಿಶ್ವರಾಜಕೀಯ ವ್ಯವಸ್ಥೆ ಅಥವಾ



ಹೊಸ ದೊರೆಯ ಅಧೀನರಿಂದ ಒತ್ತಾಯ ಪೂರ್ವಕ ಬದಲಾವಣೆ ಮೊದಲಾದ ಅರ್ಥಗಳಿವೆ. ಈ ಎಲ್ಲ ಅರ್ಥಗಳೂ ನಿಶ್ಚಯವಾಗಿಯೂ ಘರ್ಷಣೆ ಮತ್ತು ಹಗೆತನಗಳಿರುವ ಪರಿಸ್ಥಿತಿಯನ್ನು ಸಮರ್ಥಿಸುತ್ತವೆ ಹಾಗೂ ಘರ್ಷಣೆ ಮತ್ತು ಹಗೆತನಗಳ ಅನಿವಾರ್ಯ ಪಾತ್ರವನ್ನು ಸಮರ್ಥಿಸುತ್ತವೆ. ಜೊತೆಗೆ ಮತ್ತಷ್ಟು ಮುಂದುವರಿಸಿ ಹೇಳುವುದಾದರೆ, ಕ್ರಾಂತಿ ಎನ್ನುವ ಪದ ಒಂದು ವಿಶಿಷ್ಟ ಐತಿಹಾಸಿಕ ಸಂದರ್ಭದಲ್ಲಿ ನಿರ್ದಿಷ್ಟವಾದ ಜನಪ್ರಿಯ ಅರ್ಥವಂತಿಕೆಯನ್ನು ಪಡೆದುಕೊಂಡಿದೆ. ಸಾಂದರ್ಭಿಕವಾಗಿ ಫ್ರೆಂಚ್ ಕ್ರಾಂತಿ, ರಷ್ಯನ್ ಕ್ರಾಂತಿ, ಚೀನಾ ಕ್ರಾಂತಿಗಳನ್ನು ನೋಡಬಹುದು. ಈ ಮೂರೂ ಕ್ರಾಂತಿಗಳಲ್ಲಿ ಘರ್ಷಣೆ, ಹಗೆತನಗಳಷ್ಟೇ ಅಲ್ಲದೆ ಅಸಂಖ್ಯಾತ ಜನರ ಕಗ್ಗೊಲೆಗೆಡೆ ಮಾಡಿಕೊಟ್ಟ ಭಯಂಕರ ಹಿಂಸಾಚಾರವಿದೆ. ಇಂಥ ಹಿಂಸಾಚಾರಕ್ಕೆ ಇವು ಎಡೆಮಾಡಿಕೊಟ್ಟಿವೆ. ಆದ್ದರಿಂದ, ಈ ಹಿನ್ನೆಲೆಯಲ್ಲಿ ‘ಕ್ರಾಂತಿ’ ಎನ್ನುವ ಪದ ವಿಶೇಷ ಅರ್ಥವನ್ನು ಕಲ್ಪಿಸಿಕೊಳ್ಳಲು ದಾರಿಮಾಡಿಕೊಟ್ಟಿದೆ. ಕ್ರಾಂತಿ ಎಂದರೆ, ಹಿಂಸಾಚಾರ, ರಕ್ತಪಾತ ಎನ್ನುವುದೇ ಈ ವಿಶೇಷಾರ್ಥ. ಕ್ರಾಂತಿ ಎಂದರೆ ಯಾರ ಮನಸ್ಸಿನಲ್ಲಿಯಾದರೂ ಮೊದಲು ಹೊಳೆಯುವುದು ಹಿಂಸಾಚಾರ, ರಕ್ತಪಾತಗಳೇ.

ಈ ಹಿನ್ನೆಲೆಯಲ್ಲೇ, ಸಂಪೂರ್ಣ ಕ್ರಾಂತಿಯ ಟೀಕಾಕಾರರು ಹೇಳುವಂತೆ, ಸಂಪೂರ್ಣ ಕ್ರಾಂತಿಯ ಪರಿಕಲ್ಪನೆಯೇ ನೇತ್ಯಾತ್ಮಕವಾದದ್ದು. ಇದು ಅಖಂಡ ಮಾನವತಾ ಸಿದ್ಧಾಂತ ಪರಿಕಲ್ಪನೆಗೆ ವಿನಾಶಕಾರಿಯಾದದ್ದು. ಹೌದೆ? ನಾನು ಇದನ್ನು ಒಪ್ಪುವುದಿಲ್ಲ.

ಮೇಲೆ ಹೇಳಲಾದ ಮೂರು ಕ್ರಾಂತಿಗಳೂ ಆ ದೇಶಗಳಲ್ಲಿದ್ದ ವಿಶಿಷ್ಟ ಪರಿಸ್ಥಿತಿ ಸಂದರ್ಭ, ಸನ್ನಿವೇಶಗಳಲ್ಲಿ ನಡೆದಂಥವು. ಈ ಮೂರು ಕ್ರಾಂತಿಗಳೂ ಈ ಕೆಳಗೆ ಹೇಳಿರುವ ಕಾರಣಗಳಿಂದಾಗಿ ಹಿಂಸಾತ್ಮಕವೂ ರಕ್ತಪಾತವೂ ಆದವು ಎಂದು ನನ್ನ ದೃಢವಾದ ನಂಬಿಕೆ :

೧. **ಯಾರು ಈ ಕ್ರಾಂತಿಯ ನಾಯಕತ್ವ ವಹಿಸಿದ್ದರೋ ಅವರೆಲ್ಲ ಹಿಂಸೆಯಲ್ಲಿ ನಂಬಿಕೆಯುಳ್ಳವರಾಗಿದ್ದರು ಹಾಗೂ ಅದಕ್ಕನುಗುಣವಾಗಿಯೇ ಸಿದ್ಧತೆಗಳನ್ನು ಮಾಡಿಕೊಂಡಿದ್ದರು.**

೨. **ಆ ಕಾಲದ ಸಮಾಜದ ಮನೋಧರ್ಮ, ಧೋರಣೆಗಳು ರಕ್ತಪಾತದ ಕ್ರಾಂತಿಗೆ ಅನುಕೂಲಕರವಾದ ವಾತಾವರಣವನ್ನು ಸೃಷ್ಟಿಸಿದ್ದವು.**

೩. **ಘರ್ಷಣೆ, ಹಗೆತನ, ಹಿಂಸೆ ಇವುಗಳಿಂದ ಮುಕ್ತವಾದ ಬದಲಾವಣೆಯ ಮಾರ್ಗವೊಂದು ಆಕಾಲದಲ್ಲಿ ಗೊತ್ತಿರಲಿಲ್ಲ. ಫ್ರೆಂಚ್, ರಷ್ಯನ್ ಕ್ರಾಂತಿಗಳು ಚಿರಪರಿಚಿತವಾಗಿದ್ದವು. ಆದರೆ ಚೀನಾ ಕ್ರಾಂತಿ ಇವೆಲ್ಲವನ್ನೂ ತಳ್ಳಿಹಾಕಿ ಮೆರೆಯಿತು. ಇವೆಲ್ಲವನ್ನೂ ಮೆಟ್ಟಿ ಮೆರೆಯಿತು.**

ಆದ್ದರಿಂದ, 'ಕ್ರಾಂತಿ' ಎಂದರೆ ಅದರ ಅರ್ಥ ಅತ್ಯವಶ್ಯಕವಾಗಿ ಘರ್ಷಣೆ, ಹಿಂಸಾಚಾರ, ರಕ್ತಪಾತಗಳೇ ಆಗಬೇಕಿಲ್ಲ. ಹಾಗೆಂದು ವಾದಿಸುವ ಅಗತ್ಯ ಇಲ್ಲ.

ನನ್ನ ಅಭಿಪ್ರಾಯದಲ್ಲಿ ಇದರ ಅರ್ಥ ದೇಶದಿಂದ ದೇಶಕ್ಕೆ ಕಾಲದಿಂದ ಕಾಲಕ್ಕೆ ಬದಲಾಗಬಹುದು. ಉದಾಹರಣೆಗೆ ಮಹಾತ್ಮಾ ಗಾಂಧಿಯವರು ಆಗುಮಾಡಿದ ರಾಜಕೀಯ ಕ್ರಾಂತಿಯನ್ನೇ ತೆಗದುಕೊಳ್ಳಿ. ಬ್ರಿಟಿಷರ ಆಳ್ವಿಕೆಯಿಂದ ದೇಶ ಸ್ವಾತಂತ್ರ್ಯ ಪಡೆಯುವುದಕ್ಕೆ ಅನೇಕ ಸಂಗತಿಗಳು ಕೊಡುಗೆ ನೀಡಿವೆ. ವ್ಯಕ್ತಿಗಳ ಕೊಡುಗೆ ಇದೆ. ಆದರೆ ಇವುಗಳಲ್ಲೆಲ್ಲ ಅತಿ ಪ್ರಮುಖವಾದದ್ದು. ಪ್ರಧಾನವಾದದ್ದು ಮಹಾತ್ಮಾ ಗಾಂಧೀಜಿ ನಾಯಕತ್ವದ ಸ್ವಾತಂತ್ರ್ಯಹೋರಾಟ ಹಾಗೂ ಮಹಾತ್ಮಾ ಗಾಂಧಿಯವರ ಸ್ವಾತಂತ್ರ್ಯ ಹೋರಾಟವನ್ನು ಉದ್ದೇಶಪೂರ್ವಕವಾಗಿಯೇ ಅಹಿಂಸಾತ್ಮಕ ಹೋರಾಟವಾಗಿ ರೂಪಿಸಲಾಗಿತ್ತು ಹಾಗೂ ಅಹಿಂಸಾತ್ಮಕವಾಗಿಯೇ ಹೋರಾಟ ಮಾಡಲಾಯಿತು. ವೈಯಕ್ತಿಕವಾದ, ಕ್ವಚಿತ್ತಾದ ಕೆಲವು ಘಟನೆಗಳನ್ನು ಬಿಟ್ಟರೆ ಒಟ್ಟಾರೆ ಸ್ವಾತಂತ್ರ್ಯ ಹೋರಾಟ ಅಹಿಂಸಾತ್ಮಕ ಹೋರಾಟವಾಗಿತ್ತು ಹಾಗೂ ಅನ್ಯರ ಆಳ್ವಿಕೆ ಮತ್ತು ಸ್ವಾತಂತ್ರ್ಯ ಚಳವಳಿ ನಡುವೆ ಘರ್ಷಣೆಗೆ ಕಾರಣ ಅನ್ಯರ ಆಡಳಿತ ಜನತೆಯ ಸ್ವಧರ್ಮಕ್ಕೆ ವಿರುದ್ಧವಾಗಿತ್ತು. ಗಾಂಧೀಜಿಯವರ ಸಾಧನೆ ನಿಜವಾಗಿಯೂ ರಾಜಕೀಯ ಕ್ರಾಂತಿಯೇ. ಈ ಕ್ರಾಂತಿ ಸಂಪೂರ್ಣ ಬದಲಾವಣೆ ತಂದಿತು. ದೇಶದಲ್ಲಿನ ರಾಜಕೀಯ ಪರಿಸ್ಥಿತಿಯನ್ನು ತಿರುಗುಮುರುಗು ಮಾಡಿತು. ಆಗಿನ ಕಾಲಮಾನ, ಪರಿಸ್ಥಿತಿಗಳನ್ನು ಭಗ್ನಗೊಳಿಸಿ ಬದಲಾವಣೆಗೆ ಕಾರಣವಾದ ಸಾಮಾಜಿಕ ಕ್ರಾಂತಿಗಳಿಗೆ ನಮ್ಮ ಇತಿಹಾಸದಲ್ಲಿ ಬರವಿಲ್ಲ. ಇಂಥ ಸಾಮಾಜಿಕ ಕ್ರಾಂತಿಗಳು ಸಾಮಾಜಿಕ ಆಚಾರ, ಪದ್ಧತಿಗಳನ್ನು ಸಂಪೂರ್ಣವಾಗಿ ಬದಲಾಯಿಸಿವೆ, ತಿರುಗು ಮುರುಗು ಮಾಡಿವೆ.

ಅಸ್ಪೃಶ್ಯತೆ ನಿವಾರಣೆಯಲ್ಲಿ ಆಚಾರ್ಯ ರಾಮಾನುಜರು ಮಹಾನ್ ಸಾಮಾಜಿಕ ಕ್ರಾಂತಿಯನ್ನೇ ನಡೆಸಿದರು. ಅಸ್ಪೃಶ್ಯರಿಗೆ, ಹರಿಜನರಿಗೆ ಅಪೇಕ್ಷಣಿಯ ಸ್ಥಾನಮಾನ ತಂದು ಕೊಟ್ಟ ರಾಮಾನುಜರ ಕ್ರಾಂತಿ ಒಂದು ಶ್ರೇಷ್ಠ ನಿದರ್ಶನ. ಮಹಾನ್ ಸಮಾಜ ಸುಧಾರಕರಾಗಿದ್ದ ರಾಮಾನುಜರು ಒಂದು ಘೋಷಣೆಯಿಂದ ಸಮಾಜದಲ್ಲಿ ಚಕಿತಗೊಳಿಸುವಂಥ ಪರಿವರ್ತನೆ ಉಂಟುಮಾಡಿದರು. ಸಮಾಜ ಅವರನ್ನು ಒಪ್ಪಿಕೊಂಡಿತು. ರಾಮಾನುಜರು ನಡೆಸಿದ್ದು ಅಹಿಂಸಾತ್ಮಕ ಕ್ರಾಂತಿ, ರಕ್ತರಹಿತ ಕ್ರಾಂತಿ. ಅವರು ಮೂಲಭೂತವಾಗಿ ಬದಲಾವಣೆಗಳನ್ನು ಮಾಡಿದರು ಹಾಗೂ ಜನ ಬದಲಾವಣೆಗಳನ್ನು ಒಪ್ಪಿಕೊಂಡರು. ಆದ್ದರಿಂದ ನಮ್ಮ ದೇಶದ ಸಂಸ್ಕೃತಿ ಮತ್ತು ಸಂಪ್ರದಾಯಗಳಲ್ಲಿ ಬದಲಾವಣೆಗೆ ಸಾಕಷ್ಟು ಆಸ್ಪದಗಳಿವೆ. ಅಹಿಂಸಾತ್ಮಕವಾಗಿ, ಶಾಂತರೀತಿಯಲ್ಲಿ ಸುಧಾರಣೆಗಳನ್ನುಂಟು ಮಾಡಲು ಎಲ್ಲ ಕಾರ್ಯಕ್ಷೇತ್ರಗಲ್ಲಿ ಮೂಲಭೂತವಾಗಿ ಬದಲಾವಣೆಗಳನ್ನುಂಟು ಮಾಡಲು ಅವಕಾಶವಿದೆ. ಇಲ್ಲಿ



ಈ ಮಾತನ್ನು ಹೇಳಿರುವುದರ ಉದ್ದೇಶ ಇಷ್ಟೇ. ಭಾರತೀಯ ಪರಿಸ್ಥಿತಿಯಲ್ಲಿ ಕ್ರಾಂತಿಯ ಅರ್ಥ ಆಮದು ಮಾಡಿಕೊಂಡ ಕ್ರಾಂತಿಯ ಅರ್ಥವೇ ಆಗಬೇಕಿಲ್ಲ. ಭಾರತದಲ್ಲಿ ಕ್ರಾಂತಿಯ ಅರ್ಥ ಬೇರೆ ದೇಶಗಳ ಕ್ರಾಂತಿಯ ಅರ್ಥದಂತಲ್ಲ.

ಜಯಪ್ರಕಾಶ ನಾರಾಯಣರೇ ಸ್ಪಷ್ಟವಾಗಿ ಹೇಳಿದ್ದಾರೆ:

> **"ಸಮಾಜದ ಪ್ರಜಾಸತ್ತಾತ್ಮಕ ವ್ಯವಸ್ಥೆ ವಿನ್ಯಾಸಗಳಿಗೆ ಹಾನಿಯುಂಟುಮಾಡದ ರೀತಿಯ ಸಂಪೂರ್ಣ ಕ್ರಾಂತಿ ಶಾಂತಿಯುತವಾಗಿ ನಡೆಯಬೇಕು. ಜನರ ಪ್ರಜಾಸತ್ತಾತ್ಮಕ ಜೀವನ ಮಾರ್ಗಕ್ಕೆ ಧಕ್ಕೆಯುಂಟು ಮಾಡದ ರೀತಿಯಲ್ಲಿ ಶಾಂತಿಯುತವಾಗಿ ಆಗಬೇಕು."**[೫]

ಜೆ ಪಿ ಯವರು ಸಂಪೂರ್ಣ ಕ್ರಾಂತಿಯನ್ನು ವಿವರವಾಗಿ ಮನಗಂಡಿದ್ದರು. ಅವರು ಹೇಳುತ್ತಾರೆ:

> **"ನ್ಯಾಯಯುತ ಮಾರ್ಗಗಳಲ್ಲಿ ವಿಫಲರಾದಾಗ ಅಹಿಂಸೆಯ ಸಹಕಾರದಿಂದ ನಾವು ಮುಂದುವರಿಯಬೇಕು. ಹಿಂಸಾಮಾರ್ಗದಿಂದ ಏನೂ ಸಹಾಯವಾಗದು. ನಾನು ಹಿಂಸಾತ್ಮಕ ಚಳವಳಿಗಳಲ್ಲಿ ಭಾಗವಹಿಸಿದ್ದೇನೆ. ಹಿಂಸಾಮಾರ್ಗದ ಚಳವಳಿಗಳ ಸಿದ್ಧಾಂತ ಮತ್ತು ಕಾರ್ಯಾಚರಣೆಗಳ ಸಂಪೂರ್ಣ ಪರಿಚಯ ನನಗಿದೆ. ಪ್ರೌಢ ಚಿಂತನೆಯ ನಂತರ ನಾನು ಆ ಮಾರ್ಗವನ್ನು ತ್ಯಜಿಸಿದೆ."**[೬]

ಮುಂದುವರಿದು ಅವರು ಹೇಳುತ್ತಾರೆ :

> **"ಈಗಿರುವ ಪರಿಸ್ಥಿತಿಯಲ್ಲಿ ಹಿಂಸಾಮಾರ್ಗ ಅರಾಜಕತೆಗೆಡೆ ಮಾಡಿಕೊಡುತ್ತದೆ. ದೇಶದೊಳಗೆ ವ್ಯಾಪಕವಾಗಿರುವ ಅತೃಪ್ತಿಯನ್ನು ಶಾಂತಿಯುತ ಹೋರಾಟವಾಗಿ ರೂಪಿಸದೇ ಹೋದಲ್ಲಿ ಕ್ವಚಿತ್ತಾದ ಹಿಂಸಾತ್ಮಕ ಘಟನೆಗಳ ಮೂಲಕ ಈ ಅತೃಪ್ತಿ ಸ್ಫೋಟಿಸಬಹುದು. ಇಂಥ ಆಸ್ಫೋಟ ಸರ್ಕಾರದ ಮುಖ್ಯಸ್ಥರು ಯಾರೇ ಇರಲಿ (ಇಂದಿರಾಗಾಂಧಿಯವರಿರಬಹುದು) ಅವರಿಗೆ ಸರ್ವಾಧಿಕಾರವನ್ನು ಹೇರಲು ಹಾದಿ ಸುಗಮ ಮಾಡಿಕೊಡುತ್ತದೆ."**[೭]

–ಆದ್ದರಿಂದಲೇ, ಜೆ. ಪಿ. ಹೇಳುತ್ತಾರೆ :

> **"ಜನರ ಕೋಪ, ಅತೃಪ್ತಿಗಳನ್ನು ಕಷ್ಟನಷ್ಟಗಳಿಂದಾಗಿ ಉಂಟಾಗಿರುವ ಕಹಿಭಾವನೆಗಳನ್ನು ಶಾಂತಿಯುತ ಕ್ರಾಂತಿಕಾರಿ ಚಳವಳಿಯಾಗಿ ರೂಪಿಸಬೇಕು. ಸಂಘಟಿಸಬೇಕು."**[೮]

ಬಿಹಾರ್ ಚಳವಳಿ ಕಾಲದಲ್ಲಿ ಜಯಪ್ರಕಾಶ ನಾರಾಯಣರು ಸಂದೇಹ, ಸಂದಿಗ್ಧತೆಗಳಿಗೆ ಆಸ್ಪದವಿಲ್ಲದಂತೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದ್ದರು.

> **"ಹಿಂಸಾತ್ಮಕ ಚಳವಳಿಯಿಂದ ಬೇಗ ಜಯಗಳಿಸಬಹುದು ಎಂದು ಯಾರಾದರೂ ಭಾವಿಸಿದ್ದಲ್ಲಿ ಅದೊಂದು ಭ್ರಮೆ, ಮಿಥ್ಯಾಕಲ್ಪನೆಯಷ್ಟೆ ಎನ್ನುವುದು ನನ್ನ ಪರ್ಯಾಲೋಚಿಸಿದ ಅಭಿಪ್ರಾಯ. ಹಿಂಸಾತ್ಮಕ ಚಳವಳಿ ಅಹಿಂಸಾತ್ಮಕ ಚಳವಳಿಗಿಂತ**

> **ಕ್ಷಿಪ್ರವಾಗಿ ಫಲ ನೀಡುತ್ತದೆ ಎಂದು ಯಾರಾದರೂ ಹೇಳಿದಲ್ಲಿ ಅಂಥವರು ಐತಿಹಾಸಿಕ ಸಂಗತಿಗಳನ್ನು ಮರೆತಿದ್ದಾರೆ ಎಂದೇ ಅರ್ಥ. ಯಾವ ಉದ್ದೇಶಕ್ಕಾಗಿ ಕ್ರಾಂತಿ ನಡೆಯಿತೋ ಆ ಉದ್ದೇಶ ಈಡೇರಲೇ ಇಲ್ಲ. ಕ್ರಾಂತಿಯ ಗುರಿ ಸಾಧಿಸಲಾಗಲೇ ಇಲ್ಲ. ಒಂದು ವೇಳೆ ಹಿಂಸಾತ್ಮಕ ಕ್ರಾಂತಿ ಯಶಸ್ವಿಯಾದರೂ ಅಪೇಕ್ಷಿತ ಗುರಿ, ಉದ್ದೇಶಗಳ ಸಾಧನೆಗೆ ವರ್ಷಗಳ ಕಾಲ ಕಾಯಬೇಕಾಗುತ್ತದೆ. ಆದರೆ ಅಹಿಂಸಾತ್ಮಕ ಕ್ರಾಂತಿ ಹಾಗಲ್ಲ. ಕ್ರಾಂತಿಯೊಟ್ಟಿಗೆ ಅದು ಹಮ್ಮಿಕೊಂಡ ಗುರಿಯಾದ ಹೊಸ ವ್ಯವಸ್ಥೆಯನ್ನು ರೂಪಿಸುವ, ರಚಿಸುವ ಕಾರ್ಯವೂ ಕ್ರಾಂತಿಯ ಒಂದು ಭಾಗವಾಗಿ ನಡೆಯುತ್ತಿರುತ್ತದೆ. ಇದು ಅಹಿಂಸಾತ್ಮಕ ಕ್ರಾಂತಿಯ ವೈಶಿಷ್ಟ್ಯ. ಉದಾಹರಣೆಗೆ ಫ್ರೆಂಚ್ ಕ್ರಾಂತಿಯನ್ನು ತೆಗೆದುಕೊಳ್ಳೋಣ. ಫ್ರೆಂಚ್ ಕ್ರಾಂತಿ ಮೂರು ಉದ್ದೇಶಗಳ ಸಾಧನೆಗಾಗಿ ನಡೆಯಿತು. ಅವು. ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವ. ಆದರೆ ಕೊನೆಯಲ್ಲಿ ಏನಾಯಿತು? ನೆಪೋಲಿಯನ್ನನ ನಿರಂಕುಶ ಪ್ರಭುತ್ವ ಅಲ್ಲಿ ಇದ್ದೇ ಇತ್ತು. ರಷ್ಯನ್ ಕ್ರಾಂತಿಯಾಗಿ ಐವತ್ತೈದು ವರ್ಷಗಳು ಕಳೆದಿವೆ. ಆದರೆ ಇನ್ನೂ ಕ್ರಾಂತಿಯ ಉದ್ದೇಶಗಳು ಸಫಲವಾಗಿಲ್ಲ. ಗ್ರಾಮ ನಗರಗಳಲ್ಲಿ ಶ್ರಮಜೀವಿಗಳ ಸೋವಿಯತ್ ಸ್ಥಾಪನೆ ಕ್ರಾಂತಿಯ ಉದ್ದೇಶವಾಗಿತ್ತು. ರಷ್ಯನ್ ಭಾಷೆಯಲ್ಲಿ 'ಸೋವಿಯತ್' ಎಂದರೆ ಪಂಚಾಯಿತಿ ಸಭಾ ಎಂದರ್ಥ. ''ಎಲ್ಲಾ ಅಧಿಕಾರ ಸೋವಿಯತ್‌ಗೆ'' ಎನ್ನುವುದು ಅವರ ಕ್ರಾಂತಿಯ ಘೋಷಣೆಯಾಗಿತ್ತು. ಅಂತಿಮವಾಗಿ ಅಧಿಕಾರ ಯಾರ ಹಸ್ತಗತವಾಗಿತ್ತು? ಪಂಚಾಯಿತಿ ಸಭೆಗಳಿಗೆ? ಇಲ್ಲ. ಕಮ್ಯುನಿಸ್ಟ್ ಪಕ್ಷದ ಸರ್ವಾಧಿಕಾರ ಅಲ್ಲಿದೆ. ಅಲ್ಲಿ ಯುವಕರು ಬಹಿರಂಗವಾಗಿ ಚಳವಳಿ ನಡೆಸಲು ಸಾಧ್ಯವೆ? ಕ್ರಾಂತಿ ಯಶಸ್ವಿಯಾಗಿ ಐವತ್ತೈದು ವರ್ಷಗಳ ನಂತರವೂ ಅಲ್ಲಿರುವ ಪರಿಸ್ಥಿತಿ ಇದು.''**[೯]

ಜಯಪ್ರಕಾಶ ನಾರಾಯಣರ ಈ ಸ್ಪಷ್ಟ ಅಭಿಪ್ರಾಯದಿಂದ ಸಂಪೂರ್ಣ ಕ್ರಾಂತಿಯ ಅವರ ಪರಿಕಲ್ಪನೆ ಅಹಿಂಸಾತ್ಮಕವಾದದ್ದು ಎನ್ನುವುದು ಖಚಿತವಾಗುತ್ತದೆ. ಹಾಗೂ ನಮ್ಮ ದೇಶದ ಸಾಂಸ್ಕೃತಿಕ ಹಿನ್ನೆಲೆ, ಜನರ ಮನೋಧರ್ಮ ಇವುಗಳನ್ನೆಲ್ಲ ಗಮನಿಸಿದಾಗ ಜೆ.ಪಿ. ಯವರ ಸಂಪೂರ್ಣ ಕ್ರಾಂತಿ ಪರಿಕಲ್ಪನೆ ರಷ್ಯ, ಫ್ರಾನ್ಸ್, ಚೀನ ಮಾದರಿಯದಾಗಿರಲಿಲ್ಲ ಎನ್ನುವುದೂ ಖಚಿತವಾಗುತ್ತದೆ.

ಸಂಪೂರ್ಣ ಕ್ರಾಂತಿಯ ಬಳಕೆಯಿಂದ ಜೆ.ಪಿ. ಯವರು

> **''ಸಾಮಾಜಿಕ, ಆರ್ಥಿಕ, ರಾಜಕೀಯ, ಶಿಕ್ಷಣ ಮತ್ತು ನೈತಿಕತೆಯಲ್ಲಿ ಮೂಲಭೂತ ಬದಲಾವಣೆಗಳನ್ನು''**

ತರಲಿಚ್ಛಿಸುತ್ತಾರೆ.

ಅವರು ಮೂಲಭೂತ ಬದಲಾವಣೆಗಳು ಎಂದಾಗ, ಈಗಿರುವ ಪದ್ಧತಿ–ಆಚಾರ–ವಿಚಾರಗಳಲ್ಲಿ ಉಂಟುಮಾಡುವ ಬದಲಾವಣೆಗಳು, ಮಾರ್ಪಾಟುಗಳು



ಎಂದೇ ತಿಳಿಯಬೇಕು. ಅಂದರೆ ಜೆ.ಪಿ. ಬದಲಾವಣೆಯನ್ನು ಬಯಸುತ್ತಾರೆ. ಪರಿಸ್ಥಿತಿಯ ಜರೂರಿಗನುಗುಣವಾಗಿ ಬದಲಾವಣೆಯ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಜೆ.ಪಿ. ಯವರು ಕ್ಷಿಪ್ರಗತಿಯಲ್ಲಿ ಈ ಎಲ್ಲ ಬದಲಾವಣೆಗಳಾಗಬೇಕೆಂದು ಬಯಸುತ್ತಾರೆ. ಸಾಮಾಜಿಕ ಜೀವನದ ವಿವಿಧ ಕ್ಷೇತ್ರಗಳಲ್ಲಿ, ಅಲ್ಪಾವಧಿಯಲ್ಲಿ ಆದಷ್ಟು ಕ್ಷಿಪ್ರವಾಗಿ ಬದಲಾವಣೆಗಳನ್ನು ತರುವ ಆತಂಕದಲ್ಲಿ ಬಹುಶಃ ಅವರು ತಮ್ಮ ಪರಿಕಲ್ಪನೆಯನ್ನು ವಿಕಸನಶೀಲ ಪ್ರಕ್ರಿಯೆ ಎನ್ನುವುದಕ್ಕೆ ಬದಲು ಕ್ರಾಂತಿ ಎಂದು ಕರೆದಿದ್ದಾರೆ (ಎವೆಲ್ಯೂಶನ್ ಬದಲು ರೆವಲ್ಯೂಶನ್) ಎನ್ನಿಸುತ್ತದೆ. ಏಕೆಂದರೆ ವಿಕಸನಶೀಲ ಪ್ರಕ್ರಿಯೆ (ಎವಲ್ಯೂಶನ್) ತನ್ನದೇ ಆದ ಸಮಯ ತೆಗೆದುಕೊಳ್ಳುತ್ತದೆ. ಇದು ಅವರ ಮನಸ್ಸಿನಲ್ಲಿದ್ದಿರಬಹುದು. ಅವರು ಕ್ರಾಂತಿಯ ಸಾಧಕ ಬಾಧಕಗಳನ್ನು ಕುರಿತು ಹೇಳುವ ಮಾತುಗಳಲ್ಲಿ ಈ ಲೆಕ್ಕಾಚಾರ ಗೋಚರಿಸುತ್ತದೆ. ಅವರು ಹೇಳುತ್ತಾರೆ:

> **''ಈ ಪ್ರಪಂಚದಲ್ಲಿ ಪ್ರತಿಯೊಂದೂ ಪರಿವರ್ತನೀಯವಾದದ್ದು. ಬದಲಾವಣೆ ನಿರಂತರವಾಗಿ ನಡೆಯುತ್ತಿರುತ್ತದೆ. ಹೊಸದಾಗುತ್ತಿರುತ್ತದೆ. ಹಾಗಿದ್ದಲ್ಲಿ ಕ್ರಾಂತಿ ಅಥವಾ ಕ್ರಾಂತಿಕಾರಕ ಬದಲಾವಣೆ ಎನ್ನುವುದರ ಅರ್ಥವಾದರೂ ಏನು? ಒಂದು ಅರ್ಥದಲ್ಲಿ ಕ್ರಾಂತಿ ಅಥವಾ ಕ್ರಾಂತಿಕಾರಕ ಬದಲಾವಣೆ ತುಂಬ ಕ್ಷಿಪ್ರಗತಿಯಲ್ಲಿ ಆಗುತ್ತದೆ. ಅದು ತೀವ್ರಗಾಮಿಯಾದದ್ದು ಹಾಗೂ ಹೆಚ್ಚು ವ್ಯಾಪಕವಾದದ್ದು. ಕೆಲವೊಮ್ಮೆ ಅದು ಬದಲಾವಣೆಗೊಳ ಪಡುವ ವಸ್ತು, ಉದ್ದೇಶ, ಗುರಿಗಳಲ್ಲಿ ಗುಣಾತ್ಮಕ ಪರಿವರ್ತನೆಗೆಡೆ ಮಾಡಿಕೊಡಬಹುದು. ಉದಾಹರಣೆಗೆ, ನೀರನ್ನು ಕಾಯಿಸಿದಾಗ ಆವಿಯಾಗುತ್ತದೆ.''**[೧೦]

ಆದ್ದರಿಂದ ಸಂಪೂರ್ಣ ಕ್ರಾಂತಿ ಎಂದಾಗ ಆ ಪರಿಕಲ್ಪನೆಗೆ ಕ್ರಾಂತಿ ಪದದ ಅರ್ಥವನ್ನೇ ಅನ್ವಯಿಸಬೇಕಾಗಿಲ್ಲ ಅಥವಾ ಸಂಪೂರ್ಣ ಕ್ರಾಂತಿ ಅಸಂಗತ, ಅಸಮಂಜಸ ಎಂದಾಗಲೀ ಅಥವಾ ಅಖಂಡ ಮಾನವತಾ ಸಿದ್ಧಾಂತದ ಪ್ರತಿಸ್ಪರ್ಧಿ ಎಂದಾಗಲೀ ಭಾವಿಸಬೇಕಾಗಿಲ್ಲ.

## ಬದಲಾವಣೆಯ ಅಗತ್ಯ

ಈಗಿನ ಸಮಾಜದಲ್ಲಿ ವಿವಿಧ ದೃಷ್ಟಿಕೋನಗಳಿಂದ ಬದಲಾವಣೆಯಾಗಬೇಕಾಗಿದೆ ಎನ್ನುವುದು ಅಖಂಡ ಮಾನವತಾ ಸಿದ್ಧಾಂತ ಹಾಗೂ ಸಂಪೂರ್ಣ ಕ್ರಾಂತಿಯ ನಿಲುವಾಗಿದೆ. ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಮೊದಲಾದ ಕ್ಷೇತ್ರಗಳಲ್ಲಿ ಆಗಬೇಕಾಗಿರುವ ಬದಲಾವಣೆಗಳ ಬಗ್ಗೆ, ಬದಲಾವಣೆಯ ರೀತಿ ನೀತಿ, ವಿನ್ಯಾಸಗಳ ಬಗ್ಗೆ ದೀನದಯಾಳಜಿಯವರು ಮಾತಾಡಿದ್ದಾರೆ. ಅವರು ಯಥಾಸ್ಥಿತಿ ಮುಂದುವರಿಕೆ ಪರವಾಗಿಲ್ಲ, ಅವರು ತಮ್ಮ ಭಾಷಣದಲ್ಲಿ ನಿರ್ದಿಷ್ಟವಾಗಿ ಹೇಳಿದ್ದಾರೆ: ''ನಾವು ಯಥಾಸ್ಥಿತಿ ಮನೋಭಾವವನ್ನು ಕಿತ್ತೊಗೆಯಬೇಕು

ನವಯುಗದಲ್ಲಿ ಪದಾರ್ಪಣ ಮಾಡಬೇಕು."[೧೧]

ಸಂಪೂರ್ಣಕ್ರಾಂತಿ ಎಂದಾಗ ತಮ್ಮ ಮನಸ್ಸಿನಲ್ಲೇನಿದೆ ಎನ್ನುವುದನ್ನು ಜೆ.ಪಿ. ಯವರೂ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ:

> **"ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ನೈತಿಕ ಕ್ಷೇತ್ರಗಳಲ್ಲಿ ಮೂಲಭೂತ ಬದಲಾವಣೆಗಳನ್ನು ತರಬೇಕೆನ್ನುವುದೇ ನನ್ನ ಸಂಪೂರ್ಣ ಕ್ರಾಂತಿಯ ಗುರಿ. ಈ ಉದ್ದೇಶದಿಂದಲೇ ನಾನು ಈ ಚಳವಳಿಯನ್ನು ಸಂಪೂರ್ಣಕ್ರಾಂತಿಯೆಂದು ಮನಗೂಂಡಿದ್ದೇನೆ."[೧೨]**

ಆದ್ದರಿಂದ, ಬದಲಾವಣೆಗಳಿಗೆ ಸಂಬಂಧಿಸಿದಂತೆ, ವಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲಿ "ನವ ಯುಗಾರಂಭಕ್ಕೆ ಅನು ಮಾಡಿಕೊಡತಕ್ಕಂಥ ಬದಲಾವಣೆ ಉಂಟುಮಾಡುವುದು ಇಂದಿನ ಅಗತ್ಯವಾಗಿದೆ ಎನ್ನುವುದರಲ್ಲಿ ಜೆ. ಪಿ. ಮತ್ತು ದೀನದಯಾಳಜಿ ಅವರ ವಿಚಾರಗಳಲ್ಲಿ, ಮಾರ್ಗಗಳಲ್ಲಿ ಹೋಲಿಕೆ ಇದೆ. ಸಮಾಂತರ ಚಿಂತನೆ ಇದೆ. ಪರಸ್ಪರ ಸಂವಾದಿಯಾಗಿವೆ ಎಂದು ಹೇಳಬಹುದು.

ಸಮಾಜದಲ್ಲಿನ ವ್ಯಕ್ತಿ ದೀನದಯಾಳಜಿ ಅವರ ಕೇಂದ್ರ ಬಿಂದು ಎನ್ನುವುದು ಏಕಾತ್ಮ ಮಾನವತಾ ಸಿದ್ಧಾಂತ ಅಧ್ಯಯನದಿಂದ ವೇದ್ಯವಾಗುತ್ತದೆ. ದೀನದಯಾಳಜಿ ವ್ಯಕ್ತಿಯ ಮೇಲೆ ತಮ್ಮ ಗಮನ ಕೇಂದ್ರೀಕರಿಸಿದ್ದಾರೆ ಎನ್ನುವ ಅನಿವಾರ್ಯ ತೀರ್ಮಾನಕ್ಕೆ ಬರಬೇಕಾಗುತ್ತದೆ. ಮಾನವನ ಅಮಾನವೀಕರಣಕ್ಕೆ ಅವರ ವಿರೋಧವಿದೆ. ಅವರು ಹೇಳುತ್ತಾರೆ:

> **"ದೇವರ ಪರಮ ಸೃಷ್ಟಿಯಾದ ಮಾನವ ತನ್ನ ಅಸ್ಮಿತೆಯನ್ನು ಕಳೆದುಕೊಳ್ಳುತ್ತಿದ್ದಾನೆ. ಅವನನ್ನು ಅವನ ಹಕ್ಕು ಬದ್ಧ ಸ್ಥಾನದಲ್ಲಿ ನಾವು ಪುನರ್ ಪ್ರತಿಷ್ಠಾಪಿಸಬೇಕಾಗಿದೆ. ಅವನಿಗೆ ತನ್ನ ಘನತೆಯನ್ನು ಮನವರಿಕೆ ಮಾಡಿಕೊಡಬೇಕಾಗಿದೆ, ಅವನ ಸಾಮರ್ಥ್ಯಗಳಲ್ಲಿ ಪುನರ್‌ಜಾಗೃತಿಯಂಟು ಮಾಡಬೇಕಿದೆ ಹಾಗೂ ತನ್ನ ಸುಪ್ತವ್ಯಕ್ತಿತ್ವದ ದಿವ್ಯ ಮೇರುವನ್ನು ಸಾಧಿಸುವಂತೆ ಅವನನ್ನು ಉತ್ತೇಜಿಸಬೇಕಾಗಿದೆ. ಮಾನವನ, ಏಕಾತ್ಮ ಮಾನವನ ಪ್ರಗತಿ ಮತ್ತು ಸಂತೋಷವೇ ನಮ್ಮ ಗುರಿ."[೧೩]**

ದೀನದಯಾಳಜಿಯವರ ಪ್ರಕಾರ ಪ್ರತಿವ್ಯಕ್ತಿಯೂ ಕುಟುಂಬ, ಸಮುದಾಯ ಸರ್ಕಾರ, ರಾಷ್ಟ್ರ ಮೊದಲಾದ ಒಂದು ಅಥವಾ ಅದಕ್ಕೂ ಹೆಚ್ಚಿನ ಸಂಸ್ಥೆಗಳ ಅಂಗ. ಅವನು ಮಾನವ ಕುಲದ ಅಂಗವೂ ಹೌದು. ದೀನದಯಾಳಜಿ ಅವರಿಗೆ ಇದರಲ್ಲಿ ವಿವಾದಾತ್ಮಾಕವಾದುದೇನೂ ಕಾಣುವುದಿಲ್ಲ. ಅವರ ಪ್ರಕಾರ:

> **"ವ್ಯಕ್ತಿ ಅನೇಕ ಬಗೆಯ ಜೀವಗಳಲ್ಲಿ ಬದುಕುತ್ತಾನೆ. ಹೀಗೆ ವ್ಯಕ್ತಿಗೆ ಬಹುವಿಧ ವ್ಯಕ್ತಿತ್ವವಿದೆಯಾದರೂ ತನ್ನ ಜೀವನದ ವಿವಿಧ ಅಂಗಗಳು, ವಿವಿಧ ವ್ಯಕ್ತಿತ್ವಗಳ ನಡುವೆ ಪರಸ್ಪರ ಸಂಘರ್ಷವಾಗದಂತೆ ವ್ಯಕ್ತಿ ನಡೆದುಕೊಳ್ಳಬೇಕು. ಇದು ಬಹಳ ಮುಖ್ಯವಾದದ್ದು. ಆದರೆ ಇವೆಲ್ಲ ಪರಸ್ಪರ ಪೂರಕವಾಗಿ, ಪೋಷಕವಾಗಿ**



> **ಏಕೀತೃವಾಗಿರಬೇಕು. ಈ ಗುಣ ಮನುಷ್ಯನಿಗೆ ಜನ್ಮಜಾತವಾದದ್ದು."[೧೪]**

ಆದ್ದರಿಂದಲೇ ಅವರು ವ್ಯಕ್ತಿಗೆ ಮಹತ್ವ ನೀಡುತ್ತಾರೆ.

ಜೆ.ಪಿ. ಅವರಲ್ಲೂ ಇದೇ ಮನೋಧರ್ಮವನ್ನು ನಾವು ಕಾಣುತ್ತೇವೆ. ಜೆ.ಪಿ. ಹೇಳುತ್ತಾರೆ:

> **"ಚಳವಳಿ ಕೇವಲ ಸರ್ಕಾರದ ಬದಲಾವಣೆಗಷ್ಟೇ ಅಲ್ಲ. ಅದು ಸಮಾಜ ಪರಿವರ್ತನೆಗೆ. ಸಮಾಜ ಎಂದರೆ ವ್ಯಕ್ತಿ ಹಾಗೂ ಸಮುದಾಯದಲ್ಲಿ ಬದಲಾವಣೆ. ಆದ್ದರಿಂದಲೇ ನಾನು ಈ ಚಳವಳಿಯನ್ನು ಸಂಪೂರ್ಣ ಕ್ರಾಂತಿ ಎಂದು ಕರೆದಿರುವುದು."[೧೫]**

ಸಂಪೂರ್ಣ ಕ್ರಾಂತಿ ಕುರಿತ ಪ್ರಶ್ನೆಯೊಂದಕ್ಕೆ ಜೆ. ಪಿ. ಹೀಗೆ ಉತ್ತರಿಸಿದ್ದಾರೆ:

> **"ಸಮಾಜ, ರಾಜಕೀಯ, ಆರ್ಥಿಕ, ನೈತಿಕ, ಆಧ್ಯಾತ್ಮಿಕ ಇವೆಲ್ಲವನ್ನೊಳಗೊಂಡಂತೆ ಭಾರತೀಯ ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ಸಮಗ್ರ, ಸರ್ವಾಂಗೀಣ ಬದಲಾವಣೆಯಾಗಬೇಕಾದ ಅಗತ್ಯವಿದೆ ಎನ್ನುವುದರ ಬಗ್ಗೆ ಎರಡು ಅಭಿಪ್ರಾಯವಿರಲಾರದು. ಇದನ್ನು ಸಾಧಿಸುವುದು ಹೇಗೆ ಎನ್ನುವುದೇ ಪ್ರಶ್ನೆ. ನೀವು ಸಂಪೂರ್ಣ ಕ್ರಾಂತಿಗಾಗಿ ಹೋರಾಡುತ್ತಿದ್ದೀರಿ. ಪ್ರತಿಯೊಂದೂ ಬದಲಾಗಬೇಕು. ಮೊಟ್ಟ ಮೊದಲಿಗೆ ಮನುಷ್ಯ ಬದಲಾಗಬೇಕು. ಆದ್ದರಿಂದ ಪ್ರತಿವ್ಯಕ್ತಿ, ಅವನ ಶಿಕ್ಷಣ ಅಥವಾ ಮರುಶಿಕ್ಷಣ, ಪರಿಷ್ಕರಣ, ಹೊಸರೂಪ ಕೊಡುವುದು, ಪುನರ್ ನಿರ್ಮಾಣ ಎಲ್ಲವೂ ವ್ಯಕ್ತಿಯಿಂದಲೇ ಶುರುವಾಗಬೇಕು. ಹೀಗೆ ವ್ಯಕ್ತಿಯಿಂದ ನಾವು ಬದಲಾವಣೆಯನ್ನು ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಮೊದಲಾದ ಕ್ಷೇತ್ರಗಳಿಗೆ ಕೊಂಡೊಯ್ಯುತ್ತೇವೆ."[೧೬]**

ಹೀಗೆ, ಸಂಪೂರ್ಣ ಕ್ರಾಂತಿಯ ಪರಿಕಲ್ಪನೆಯ ಮೂಲಕೇಂದ್ರವೂ ವ್ಯಕ್ತಿಯೇ. ಅದೂ ವ್ಯಕ್ತಿಕೇಂದ್ರಿತವೇ, ಅಖಂಡ ಮಾನವತಾ ಸಿದ್ಧಾಂತವೂ ವ್ಯಕ್ತಿಕೇಂದ್ರಿತವೇ.

## ಆರ್ಥಿಕ–ಸಾಮಾಜಿಕ ಸಮಸ್ಯೆಗಳು

ದೇಶ ಎದುರಿಸುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ದೀನದಯಾಳಜಿ ಮತ್ತು ಜೆ ಪಿ ಯವರ ದೃಷ್ಟಿಕೋನ ಮತ್ತು ಅಭಿಪ್ರಾಯಗಳಲ್ಲಿ ಅನೇಕ ಸಾದೃಶ್ಯಗಳಿವೆ. ಉದಾಹರಣೆಗೆ ಸಮಾಜದಲ್ಲಿನ ಜಟಿಲವಾದ ಜಾತಿ ಪ್ರಶ್ನೆಯನ್ನೇ ತೆಗೆದುಕೊಳ್ಳೋಣ. ಈ ಜಟಿಲ ಸಮಸ್ಯೆ ಬಗ್ಗೆಯೂ ಇಬ್ಬರ ಅಭಿಪ್ರಾಯಗಳೂ ಏಕರೂಪದ್ದಾಗಿವೆ. ಆದರೆ ಅವರು ಸಮಸ್ಯೆ ಎದುರಿಸುವ ವಿಧಾನಗಳು ಭಿನ್ನವಾಗಿರುವಂತೆ ತೋರಬಹುದು.

ಜಾತಿಪದ್ಧತಿ ರಾಷ್ಟ್ರದ ಸೃಷ್ಟಿ ಎನ್ನುತ್ತಾರೆ ಪಂಡಿತ್‌ಜಿ. ಅವರ ಪ್ರಕಾರ, "ಕುಟುಂಬ, ಜಾತಿ, ಸಂಘ, ಶ್ರೇಣಿ ಇವೆಲ್ಲ ಕಾಲಾನುಕಾಲದಲ್ಲಿ ಅಗತ್ಯಾನುಸಾರ ರಾಷ್ಟ್ರದಿಂದ ಸೃಷ್ಟಿಯಾದವು." ಇದರ ಸಹಜ ತಾತ್ಪರ್ಯವೆಂದರೆ, ಆಗತ್ಯವೆನಿಸಿದಾಗ

ರಾಷ್ಟ್ರ ಸೃಷ್ಟಿಸಿದ ಒಂದು ಪದ್ಧತಿ, ಅದು ಅನಗತ್ಯವೆನ್ನಿಸಿದಾಗ ಹೋಗಬೇಕು. ಅಖಂಡ ಮಾನವತಾ ಸಿದ್ಧಾಂತ ಕುರಿತ ಉಪನ್ಯಾಸದಲ್ಲಿ ಪಂಡಿತ್‌ಜಿ, ಜಾತಿಗಳ ಉಗಮ ಕುರಿತು ಸವಿಸ್ತಾರವಾಗಿಯೇ ಚರ್ಚಿಸಿದ್ದಾರೆ ಮತ್ತು ಹೀಗೆ ಹೇಳುತ್ತಾರೆ:

> **"ಚಾತುರ್ವರ್ಣಗಳು ವಿರಾಟ್ ಪುರುಷನ ನಾಲ್ಕು ಅಂಗಗಳು. ಒಂದು ಮತ್ತೊಂದಕ್ಕೆ ಪೂರಕ. ಅಷ್ಟೇ ಅಲ್ಲ ಅವುಗಳಿಗೆ ತಮ್ಮದೇ ಆದ ಅಸ್ಮಿತೆ ಇದೆ ಮತ್ತು ಏಕತೆ ಇದೆ."**[೧೭]

ಇಷ್ಟೆಲ್ಲ ಹೇಳಿದನಂತರ ಪಂಡಿತ್‌ಜಿ ಅಭಿಪ್ರಾಯ ಪಡುತ್ತಾರೆ :

> **"ವಿವಿಧ ಪದ್ಧತಿಗಳಲ್ಲಿ, ಸಂಸ್ಥೆಗಳಲ್ಲಿ ಮತ್ತು ಸಮಾಜದಲ್ಲಿ ಅವನತಿಯ ಪ್ರಕ್ರಿಯೆ ಹಲವಾರು ಕಾರಣಗಳಿಂದಾಗಿ ಶುರುವಾಗಬಹುದು."**

ಮುಂದುವರಿದು ಅವರು ಹೇಳುತ್ತಾರೆ :

> **"ಸಮಾಜದ ಆತ್ಮ ದುರ್ಬಲವಾದರೆ ಸಮಾಜದ ಉಳಿದ ಅಂಗಾಂಗಗಳೆಲ್ಲವೂ ದುರ್ಬಲವಾಗುತ್ತವೆ, ನಿಷ್ಪರಿಣಾಮಕಾರಿಯಾಗುತ್ತವೆ. ಯಾವುದೇ ಒಂದು ನಿರ್ದಿಷ್ಟ ಪದ್ಧತಿ ನಿರುಪಯುಕ್ತವೆನಿಸಬಹುದು ಅಥವಾ ಹಾನಿಕಾರಕವೆನ್ನಿಸಬಹುದು. ಅಲ್ಲದೇ, ಕಾಲಾನುಸಾರವಾಗಿ ಸ್ಥಳ-ಸಂದರ್ಭಗಳಿಗನುಸಾರವಾಗಿ, ಒಂದು ಪದ್ಧತಿಯಲ್ಲಿ ಅದರ ಉಪಯುಕ್ತತೆ ಕುರಿತಂತೆ ಬದಲಾವಣೆಗಳಾಗಬಹುದು. ಇಂಥ ಸಂದರ್ಭಗಳಲ್ಲಿ ನಾವು ಪದ್ಧತಿಯ ಈಗಿನ ಸ್ಥಿತಿಯನ್ನು ಪರಾಮರ್ಶಿಸುವುದರ ಜೊತೆಗೆ ಹೇಗೆ ಪರಸ್ಪರ ಪೂರಕವಾಗಿರಬಹುದು ಎನ್ನುವುದನ್ನೂ ಪರ್ಯಾಲೋಚಿಸಬೇಕಾಗುತ್ತದೆ ಹಾಗೂ ಏಕತೆಯ ಪ್ರಜ್ಞೆಯೊಂದೇ ಸೂಕ್ತ ನಡವಳಿಕೆಗೆ ಮಾನದಂಡವಾಗಬಹುದು."**[೧೮]

ಪಂಡಿತ್‌ಜಿಯವರು ಜನ್ಮಾಧಾರಿತ ಜಾತಿ ಪದ್ಧತಿಯನ್ನು ಬೆಂಬಲಿಸಿಲ್ಲ. ಹುಟ್ಟು ಜಾತಿಗೆ ಆಧಾರವಾಗಬಹುದು. ಜಾತಿಮೂಲವಾಗಬಾರದು ಎನ್ನುವುದನ್ನು ಅವರ ವಿಚಾರಧಾರೆ ಸ್ಪಷ್ಟ ಪಡಿಸುತ್ತದೆ. ಆದ್ದರಿಂದ, ಜನ್ಮಾಧಾರಿತ ಜಾತಿಪದ್ಧತಿ ಬಹಳ ತಡವಾಗಿ ಬಂದಿರಬೇಕು ಹಾಗೂ ಆನಂತರ ಸಾಮಾಜಿಕ ಸಂಪ್ರದಾಯಗಳು, ಸಂಸ್ಥೆಗಳು ಅದಕ್ಕೆ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಅನುಮೋದನೆ, ಮನ್ನಣೆ ನೀಡಿರಬೇಕು. ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಮಾನ್ಯಮಾಡುತ್ತ ದೀನದಯಾಳಜಿ ಸ್ಪಷ್ಟವಾಗಿ ಹೇಳುತ್ತಾರೆ: ಬೃಹತ್ ಪ್ರಾಚ್ಯ ವಸ್ತುಸಂಗ್ರಹಾಲಯದ ರಕ್ಷಕರಾಗುವ ಉದ್ದೇಶ ನಮಗಿಲ್ಲ."[೧೯] ಅವರು ಮುಂದುವರಿದು ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ:

> **"ನಮ್ಮ ಗುರಿ ಸಂಸ್ಕೃತಿ ರಕ್ಷಣೆ ಮಾತ್ರವಲ್ಲ ಅದನ್ನು ಕಾಲಕ್ಕನುಗುಣವಾಗಿ ಚೈತನ್ಯಶೀಲವಾಗಿಸುವುದು, ಪುನುರುಜ್ಜೀವನಗೊಳಿಸುವುದು ನಮ್ಮ ಉದ್ದೇಶ. ನಮ್ಮ ರಾಷ್ಟ್ರ ಈ ಬುನಾದಿಯ ಮೇಲೆ ಭದ್ರವಾಗಿ ನಿಲ್ಲುವಂತೆ ಮಾಡುವುದು ಹಾಗೂ ನಮ್ಮ ಸಮಾಜ ಆರೋಗ್ಯಪೂರ್ಣವಾದ, ಪ್ರಗತಿಶೀಲವಾದ, ಧ್ಯೇಯ ಆದರ್ಶಗಳಿಂದ ಕೂಡಿದ ಬಾಳ್ವೆ ನಡೆಸುವಂತೆ ನೋಡಿಕೊಳ್ಳುವುದು ನಮ್ಮ ಗುರಿ. ನಾವು ಅನೇಕ ಸಂಪ್ರದಾಯಗಳಿಗೆ ಮಂಗಳ ಹಾಡಬೇಕಾಗುತ್ತದೆ ಹಾಗೂ ನಮ್ಮ ಸಮಾಜದಲ್ಲಿ ಮೌಲ್ಯಗಳನ್ನು ಹಾಗೂ ರಾಷ್ಟ್ರೀಯ ಏಕತೆಯನ್ನು ಬೆಳೆಸಲು ಸಹಾಯಕವಾಗುವಂಥ ಸುಧಾರಣೆಗಳನ್ನು ಜಾರಿಗೆ ತರಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ತೊಡರಾಗುವ ಸಂಪ್ರದಾಯಗಳನ್ನು ನಾವು ತೆಗೆದುಹಾಕುತ್ತೇವೆ. ಮಾನವ ಶರೀರದ ಮಿತಿಗಳ ಬಗ್ಗೆ ಯಾರೂ ವ್ಯಥೆಪಡಬೇಕಾಗಿಲ್ಲ. ದೇಹದಲ್ಲಿ ಕ್ಯಾನ್ಸರ್ ವ್ರಣ ಹರಡಿದ್ದರೆ ಶಸ್ತ್ರಚಿಕಿತ್ರೆ ಮಾಡಿಸಿಕೊಳ್ಳಬೇಕಾಗುತ್ತದೆ. ಅಷ್ಟೇ. ಆರೋಗ್ಯಪೂರ್ಣವಾದ ಅಂಗಾಂಗಗಳನ್ನೇ ಕತ್ತರಿಸಿ ಹಾಕುವ ಅಗತ್ಯವಿಲ್ಲ. ಇವತ್ತು ಸಮಾಜ ಅಸ್ಪೃಶ್ಯತೆಯಂಥ ದುಷ್ಟಪದ್ಧತಿಗಳಿಂದ ಪೀಡಿತವಾಗಿದ್ದರೆ ಅದನ್ನು ಕೊನೆಗಾಣಿಸಬೇಕು. ಮಾನವ ತನ್ನ ಸಹಮಾನವನನ್ನು ತನಗಿಂತ ಕೀಳಾಗಿಕಾಣುವ ಪರಿಸ್ಥಿತಿಗೆ ಕಾರಣವಾಗಿರುವ, ರಾಷ್ಟ್ರೀಯ ಏಕತೆಗೆ ಬೆದರಿಕೆಯಾಗಿರುವ ಇಂಥ ದುಷ್ಟ ಪದ್ಧತಿಗಳಿಗೆ ನಾವು ಅಂತ್ಯವನ್ನು ಕಾಣಿಸಬೇಕು."**[೨೦]



ಜನ್ಮಾಧಾರಿತ ಜಾತಿ ಪದ್ಧತಿಯೂ ಬೇರೆಯವರನ್ನು ತಮಗಿಂತ ಕೀಳಾಗಿ ಕಾಣುವ ಪ್ರವೃತ್ತಿಗೆ ಎಡೆ ಮಾಡಿಕೊಡುತ್ತದೆ ಹಾಗೂ ರಾಷ್ಟ್ರೀಯ ಏಕತೆಗೆ ಬೆದರಿಕೆಯನ್ನೊಡ್ಡುತ್ತದೆ. ಆದ್ದರಿಂದ ಇವೆಲ್ಲ ಹಾನಿಕರ ದುಷ್ಟ ಪದ್ಧತಿಗಳು. "ಇಂಥ ಹಾನಿಕರ ದುಷ್ಟಪದ್ಧತಿಗಳನ್ನು ನಾವು ಕೊನೆಗಾಣಿಸಲೇಬೇಕು."

ಜಯಪ್ರಕಾಶ ನಾರಾಯಣರೂ ಸಂಪೂರ್ಣ ಕ್ರಾಂತಿಯ ಪರಿಧಿಯೊಳಗೇ ಜಾತಿಪದ್ಧತಿ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ಹೇಳುತ್ತಾರೆ:

> **"ಒಂದು ಸಂಗತಿ ನನ್ನನ್ನು ಉದ್ದಕ್ಕೂ ಕಾಡಿದ್ದು ಜಾತಿಪದ್ಧತಿ. ಒಂದು ಕಾಲದಲ್ಲಿ ಜಾತಿ ಪದ್ಧತಿಯಲ್ಲಿ ಸದ್ಗುಣ, ಋಜುತ್ವಗಳು ಏನೇ ಇದ್ದಿರಬಹುದು. ಆದರೆ ಅದೀಗ ನಮ್ಮ ಕಾಲಿಗೆ ಕಟ್ಟಿಕೊಂಡ ಭಾರವಾದ ಕೊರಡಾಗಿ ಪರಿಣಮಿಸಿದೆ. ಅದು ಈ ದೇಶದ ಪ್ರಗತಿಗೆ ತಡೆಯಾಗಿದೆ ಎಂದು ನಾನು ಒತ್ತಿಹೇಳಿದ್ದೇನೆ. ಭಾರತದ ಸಮಾಜವನ್ನು ಸಮಾನತಾ ಸಿದ್ಧಾಂತದ ಮಾರ್ಗದಲ್ಲಿ ಪುನರಚಿಸುವುದಕ್ಕೆ ನಾವು ಹೆಚ್ಚಿನ ಮಹತ್ವ ನೀಡಬೇಕಾಗಿದೆ. ಶೋಷಣೆ ಇರಬಹುದು. ಬಡವರು-ಶ್ರೀಮಂತರು ಇರಬಹುದು ಇಂಥವೆಲ್ಲ ಇರಬಹುದು. ಆದರೆ ಜನ್ಮದ ಆಧಾರದ ಮೇಲೆ ರೂಪಿಸಲಾಗಿರುವ, ಒಬ್ಬರು ಮೇಲು ಮತ್ತೊಬ್ಬರು ಕೀಳು ಎನ್ನುವ ಭೇದ-ತಾರ-ತಮ್ಯತೆಗಳು ಇರಬಾರದು. ಈ ತಾರತಮ್ಯಗಳು ನಿಜಕ್ಕೂ ನಮ್ಮ ದೇಶದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ದೊಡ್ಡ ತೊಡಕುಗಳು. ಇದು ಹೋಗಬೇಕು."**

ಸಹಮಾನವರಲ್ಲಿ ಕೆಲವರನ್ನು ತನಗಿಂತ ಕೀಳಾಗಿಕಾಣುವ ಪ್ರವೃತ್ತಿಗೆಡೆಮಾಡಿಕೊಡುವ, ರಾಷ್ಟ್ರದ ಏಕತೆಗೆ ಬೆದರಿಕೆಯಾಗಿರುವ ಜಾತಿ ಪದ್ಧತಿ ತೊಲಗಬೇಕೆಂದು ದೀನದಯಾಳಜಿ ಅಭಿಪ್ರಾಯಪಡುತ್ತಾರೆ. ಜೆ.ಪಿ. ಯವರದೂ ಇದೇ ಅಭಿಪ್ರಾಯ. ಆದರೆ ರೀತಿ ಬೇರೆ. "ಜನ್ಮಾಧಾರಿತ ಈ ಭೇದ ತಾರತಮ್ಯತೆ,

ಕೆಲವರು ಮೇಲು, ಕೆಲವರು ಕೀಳು ಎನ್ನುವ ಭೇದಭಾವನೆ ನಮ್ಮ ಅಭಿವೃದ್ಧಿ ಪಥದಲ್ಲಿ ದೊಡ್ಡ ತೊಡಕುಗಳು, ಅಡೆತಡೆಗಳು. ಆದ್ದರಿಂದ ಇದು ಹೋಗಬೇಕು."[೨೧]

ಆರ್ಥಿಕ ಕ್ಷೇತ್ರದಲ್ಲೂ ಕೆಲವು ವಿಷಯಗಳಲ್ಲಿ ಅಖಂಡಮಾನವತಾ ಸಿದ್ಧಾಂತ ಹಾಗೂ ಸಂಪೂರ್ಣ ಕ್ರಾಂತಿಯ ಪರಿಕಲ್ಪನೆಯಲ್ಲಿ ತದ್ವತ್ತಾದ ಅಭಿಪ್ರಾಯಗಳಿವೆ.

ಜೆ.ಪಿ. ಹೇಳುತ್ತಾರೆ :

> **"ಯೋಜಿತ ಅಭಿವೃದ್ಧಿಯ ಆದ್ಯತೆ, ಪ್ರಮುಖ ಗುರಿ, ದೇಶದ ಪ್ರತಿಪ್ರಜೆಗೂ ನಿತ್ಯಗಟ್ಟಳೆಯ ಅವಶ್ಯಕತೆಗಳನ್ನು ಪೂರೈಸುವುದಾಗಬೇಕು."[೨೨]**

ದೀನದಯಾಳಜಿ ಇದೇ ಅಭಿಪ್ರಾಯವನ್ನು ಬೇರೆ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಅವರು ಹೇಳುತ್ತಾರೆ. "ಪ್ರತಿಯೊಬ್ಬ ಪ್ರಜೆಗೂ ಕನಿಷ್ಠ ಮಟ್ಟದ ಜೀವನ ನಿರ್ವಹಣೆಯನ್ನು ಖಾತ್ರಿಯಾಗಿಸುವುದು"[೨೩] ನಮ್ಮ ಅರ್ಥ ವ್ಯವಸ್ಥೆಯ ಮುಖ್ಯ ಧ್ಯೇಯವಾಗಬೇಕು. ಯಾವುದೇ ಅರ್ಥ ವ್ಯವಸ್ಥೆಯೂ ಪ್ರತಿಪ್ರಜೆಗೂ ಮಾನವ ಜೀವನದ ಮೂಲಭೂತ ಅಗತ್ಯಗಳನ್ನು ಪೂರೈಸಬೇಕು ಎನ್ನುವುದು ದೀನದಯಾಳರ ದೃಢನಂಬಿಕೆ. ಅನ್ನ, ಆಹಾರ, ವಸತಿ, ಬಟ್ಟೆ ಇವುಗಳ ಜೊತೆಗೆ ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯಗಳನ್ನೂ ಅವರು ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಸೇರಿಸಿದ್ದಾರೆ.

ಪ್ರತಿಯೊಬ್ಬ ಪ್ರಜೆಗೂ ಸಂಪೂರ್ಣ ಉದ್ಯೋಗಾವಕಾಶ ಕಲ್ಪಿಸಬೇಕು ಎನ್ನುವುದು ಜೆ ಪಿ ಯವರ ಸಂಪೂರ್ಣಕ್ರಾಂತಿಯ ಮುಖ್ಯ ಉದ್ದೇಶವಾಗಿದೆ. ದೀನದಯಾಳಜಿ ಅವರು ಅಖಂಡ ಮಾನವತಾ ಸಿದ್ಧಾಂತದಲ್ಲಿ ಹೀಗೆ ಹೇಳಿದ್ದಾರೆ:

> **"ಸಮಾಜದಲ್ಲಿನ ಪ್ರತಿಯೊಬ್ಬ ಸದೃಢ ಪ್ರಜೆಗೂ ಉದ್ಯೋಗಾವಕಾಶ ಕಲ್ಪಿಸುವುದು ನಮ್ಮ ಅರ್ಥ ವ್ಯವಸ್ಥೆಯ ಗುರಿಯಾಗಬೇಕು."[೨೪]**

ವಿವಿಧ ಕೈಗಾರಿಕೆಗಳ ಒಡೆತನದ ಬಗ್ಗೆ ಅಖಂಡ ಮಾನವತಾ ವಾದ ಮತ್ತು ಸಂಪೂರ್ಣ ಕ್ರಾಂತಿ ಸಿದ್ಧಾಂತಗಳ ಆಧಾರಿತ ಮಾರ್ಗವನ್ನಾಗಲಿ, ಜಬರ್‌ದಸ್ತಿನ ಮಾರ್ಗವನ್ನಾಗಲೀ ಒಪ್ಪುವುದಿಲ್ಲ. ಅಖಂಡ ಮಾನವತಾ ವಾದ ಕುರಿತ ಉಪನ್ಯಾಸದಲ್ಲಿ ದೀನದಯಾಳಜಿ ಆರ್ಥಿಕ ಉದ್ದೇಶಗಳನ್ನು ಕುರಿತು ಘೋಷ್ವಾರೆಯಾಗಿ ಹೀಗೆ ಹೇಳಿದ್ದಾರೆ:

> **"ವಿವಿಧ ಕೈಗಾರಿಕೆಗಳ ಮಾಲೀಕತ್ವವನ್ನು, ಅವು ಸರ್ಕಾರದ್ದಿರಲಿ, ಖಾಸಗಿಯವರದಿರಲಿ ವ್ಯಾವಹಾರಿಕತೆ ಆಧಾರದ ಮೇಲೆ, ಕಾರ್ಯ ಸಾಧುತ್ವದ ಆಧಾರದ ಮೇಲೆ ನಿರ್ಧರಿಸಬೇಕು."[೨೫]**

ಜಯಪ್ರಕಾಶ ನಾರಾಯಣರು ಸಂಪೂರ್ಣ ಕ್ರಾಂತಿಯಲ್ಲಿ ಹೀಗೆ ಹೇಳಿದ್ದಾರೆ. "ಮಾಲೀಕತ್ವದ ಪ್ರಶ್ನೆ ಬಂದಾಗ ವ್ಯಕ್ತಿತ್ವವೇ ಮುಖ್ಯ ಕಾಳಜಿಯಾಗಬಾರದು."[೨೬] ಹಾಗೂ "ಒಂದು ಕಂಪನಿ ಅಥವಾ ಒಂದು ಸಂಸ್ಥೆಯ ಒಡೆತನ ಸರ್ಕಾರಕ್ಕೆ ಸೇರಿದ್ದೇ ಖಾಸಗಿಯವರಿಗೆ ಸೇರಿದ್ದೇ ಎನ್ನುವುದು ಹೆಚ್ಚಿನ ವ್ಯತ್ಯಾಸವನ್ನೇನೂ



ಮಾಡುವುದಿಲ್ಲ."

ನಮ್ಮ ಅರ್ಥ ವ್ಯವಸ್ಥೆಯಲ್ಲಿ ಯಂತ್ರೋಪಕರಣಗಳ ಬಳಕೆ ವಿಚಾರದಲ್ಲೂ ಜಯಪ್ರಕಾಶ ನಾರಾಯಣ್ ಮತ್ತು ದೀನ್ ದಯಾಳಜಿಯವರು ಬಹುತೇಕ ಒಂದೇ ರೀತಿಯ ಅಭಿಪ್ರಾಯವನ್ನು ಹೊಂದಿದ್ದಾರೆ. ಯಂತ್ರೋಪಕರಣಗಳು ಕಾರ್ಮಿಕರ ಶ್ರಮಕ್ಕೆ ಪೂರಕವಾಗಿರಬೇಕೆ ವಿನ: ಕಾರ್ಮಿಕರ ಜಾಗವನ್ನು ಅವು ಆಕ್ರಮಿಸಬಾರದು ಎನ್ನುವುದು ಇಬ್ಬರ ಅಭಿಪ್ರಾಯವೂ ಆಗಿದೆ. ದೀನದಯಾಳಜಿ ಹೇಳುತ್ತಾರೆ :

> **"ದೈಹಿಕ ಶ್ರಮವನ್ನು ತಗ್ಗಿಸಿ ಕಾರ್ಮಿಕರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಯಂತ್ರಗಳನ್ನು ಸೃಷ್ಟಿಸಲಾಗಿದೆ. ಆದ್ದರಿಂದ ಯಂತ್ರಗಳು ಮಾನವನಿಗೆ ಸಹಾಯಕವೇ ಹೊರತು ಪ್ರತಿಸ್ಪರ್ಧಿಯಲ್ಲ."[೨೭]**

ದೀನ್ ದಯಾಳಜಿಯವರ ಪ್ರಕಾರ ನಮ್ಮ ನಿರ್ದಿಷ್ಟ ಆರ್ಥಿಕ ಅಗತ್ಯಗಳಿಗನುಸಾರ ಯಂತ್ರಗಳನ್ನು ತಯಾರಿಸಬೇಕು. ಜೆ.ಪಿ. ಯವರು, ಯಂತ್ರಗಳ ಬಗ್ಗೆ ಗಾಂಧಿಯವರು ಹೇಳಿರುವ ಮಾತುಗಳನ್ನೇ ಅನುಮೋದಿಸುತ್ತಾರೆ. ಯಂತ್ರಗಳು ಮಾನವನನ್ನು ನಿಯಂತ್ರಿಸಬಾರದು, ಮಾನವ ಯಂತ್ರಗಳನ್ನು ನಿಯಂತ್ರಿಸಬೇಕು ಎನ್ನುವುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತೆಂದು ಜೆ.ಪಿ. ಹೇಳುತ್ತಾರೆ. ಜೊತೆಗೆ ಅವರು ತಮ್ಮ ಪರಮ ಮಿತ್ರರಾದ ಶೂಮೆಕರ್ ಅವರ ಮಾತುಗಳನ್ನು ಉಲ್ಲೇಖಿಸಿದ್ದಾರೆ.

> **"ನನ್ನ ಮಿತ್ರರಾದ ದಿವಂಗತ ಶೂಮೆಕರ್ ಅವರು, ಮನುಷ್ಯನ ಎರಡು ಕೈಗಳಿಗಿಂತ ಉತ್ತಮವಾದ ಯಂತ್ರವನ್ನು ಇಲ್ಲಿಯವರೆಗೆ ಸೃಷ್ಟಿಸಲಾಗಿಲ್ಲ, ಈ ಎರಡು ಕೈ ಯಂತ್ರಗಳಿಗೆ ಸಾಕಷ್ಟು ಕೆಲಸ ಕೊಡದೇ, ಈ ನೈಸರ್ಗಿಕ ಯಂತ್ರಗಳು ಕೆಲಸವಿಲ್ಲದೆ ಸೋಮಾರಿಯಾಗಿರುವಾಗ ಹೊಸಯಂತ್ರಗಳನ್ನು ಸೃಷ್ಟಿಸುವ ಅಗತ್ಯವಿಲ್ಲ ಎಂದು ಹೇಳುತ್ತಿದ್ದರು. ಮನುಷ್ಯರ ಪಾಲುದಾರಿಕೆಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸುವಂಥ ಆರ್ಥಿಕ ಮತ್ತು ಸಮಾಜದ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ರೂಪಿಸಬೇಕೆನ್ನುವುದೇ ಇಲ್ಲಿನ ಮುಖ್ಯ ವಿಷಯವಾಗಿದೆ."[೨೮]**

ಮೇಲಿನ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಯೋಚಿಸಿದಾಗ, ಅಖಂಡ ಮಾನವತಾ ಸಿದ್ಧಾಂತ ಮತ್ತು ಸಂಪೂರ್ಣ ಕ್ರಾಂತಿ ಪರಿಕಲ್ಪನೆಗಳಲ್ಲಿ ಸಮಾನವಾದದ್ದು ಏನೂ ಇಲ್ಲ ಎಂದು ಹೇಳಿ ಸುಲಭವಾಗಿ ಕೈ ತೊಳೆದುಕೊಳ್ಳುವುದು ಸಾಧ್ಯವಿಲ್ಲ ಎನ್ನಿಸುತ್ತದೆ. ಈ ಪ್ರಬಂಧಕ್ಕೆ ಪುಟಗಳ ಮಿತಿ ಇರುವುದರಿಂದ ಈ ಎರಡೂ ಪರಿಕಲ್ಪನೆಗಳಲ್ಲಿ ಭಿನ್ನಮತಕ್ಕಿಂತ ಸಹಮತ ಇರುವ ಅಂಶಗಳೇ ಹೆಚ್ಚಾಗಿರುವುದನ್ನು ಸವಿಸ್ತಾರವಾಗಿ ಚರ್ಚಿಸುವುದು ಇಲ್ಲಿ ಸಾಧ್ಯವಾಗಿಲ್ಲ. ಆದರೆ ಜೆ.ಪಿ. ಮತ್ತು ದೀನ್ ದಯಾಳಜಿಯವರ ನಡುವಣ ಮಾರ್ಗಭಿನ್ನತೆಯನ್ನು, ವಿಭಿನ್ನ ಮನೋಧರ್ಮವನ್ನು ನಾವು ಮರೆಯಲಾಗದು.

ದೀನ್ ದಯಾಳಜಿಯವರ ಪಯಣ ಮಾರ್ಗ, ದಿಕ್ಕುದಿಸೆಗಳು ಭಾರತೀಯ ಸಮಾಜದಿಂದ ಅಂತರ ರಾಷ್ಟ್ರೀಯ ಸಮಾಜದತ್ತ. ಜೆ ಪಿ ಯವರ ಪಯಣ ಮಾರ್ಗ, ದಿಕ್ಕುದಿಸೆಗಳು ಅಂತರರಾಷ್ಟ್ರೀಯ ಸಮಾಜದಿಂದ ಭಾರತೀಯ ಸಮಾಜದತ್ತ ಈ ಕಾರಣದಿಂದಾಗಿಯೇ ಅನ್ವಯವಾಗುತ್ತದೆ ಹಾಗೂ ಏಕಾತ್ಮ ಮಾನವದರ್ಶನದ ಪರಿಕಲ್ಪನೆ ಇಡೀ ಮಾನವಕುಲಕ್ಕೆ ಅನ್ವಯಿಸುತ್ತದೆ. ಈ ರೀತಿಯಲ್ಲೇ ನೋಡಿದಲ್ಲಿ, ಏಕಾತ್ಮ ಮಾನವದರ್ಶನ ಮತ್ತು ಸಂಪೂರ್ಣ ಕ್ರಾಂತಿಗಳ ಪರಿಕಲ್ಪನೆಗಳನ್ನು ವ್ಯಕ್ತಿಕೇಂದ್ರಿತ ಪರಿಕಲ್ಪನೆಗಳು ಎಂದು ವರ್ಣಿಸುವುದೂ ಸೂಕ್ತವೂ ಸಮರ್ಥನೀಯವೂ ಆಗಬಲ್ಲದು. ಸಂಪೂರ್ಣ ಕ್ರಾಂತಿಯ ಕೇಂದ್ರ ಮತ್ತು ಪರಿಧಿ, ಪರಿವೇಷ್ಟಗಳು ಭಾರತೀಯ ಸಮಾಜವಾದರೆ ಏಕಾತ್ಮ ಮಾನವದರ್ಶನದ ಕೇಂದ್ರವಲಯ, ಪರಿವೇಷ್ಟಗಳು ವ್ಯಾಪಕವಾದವು. ಇದರ ಪರಿಧಿ ಭಾರತೀಯ ಸಮಾಜವಷ್ಟೇ ಅಲ್ಲ ಇಡೀ ಮನುಕುಲವನ್ನೊಳಗೊಳ್ಳುವಷ್ಟು ವ್ಯಾಪಕವಾದದ್ದು. ಅದರ ಪರಿವೇಷ್ಟನ ವಲಯ ಮನುಕುಲವ್ಯಾಪಿಯಾದದ್ದು.



**ಆಕರಗಳು**


1. Upadhyaya, Deendayal, *Integral Humanism,* 1965, p. 18.
2. *Ibid,* p. 19.
3. *Ibid,* p. 20.
4. *Ibid,* p. 21.
5. *Total Revolution* published by V.R. Radhakrishnan, Madras, 1978, p. xv.
6. *Ibid,* p. 8.
7. *Ibid,* p. 8
8. *Ibid,* p. 8,
9. *Bihar Movement* by A.N. Sivaraman, Madras, 1975, p. 66 (Tamil)
10. *Total Revolution,* p. 35
11. *Integral Humanism,* p. 79.
12. *Total Revolution,* p. 7.
13. *Integral Humanism,* p. 76-77.
14. *Ibid,* p. 41-42.
15. *Total Revolution,* p. 15.
16. *Ibid,* p. 40-41.
17. *Integral Humanism,* p. 43.
18. *Ibid,* p. 43-44
19. *Ibid,* p. 79.
20. *Ibid,* p. 79-80.
21. *Total Revolution,* p. 41.
22. *Ibid,* p. 2
23. *Integral Humanism,* p. 77.
24. *Ibid,* p. 69.
25. *Ibid,* p. 78.
26. *Total Revolution,* p. 42.
27. *Integral Humanism,* p. 70.
28. *Total Revolution,* p. 47.

BLANK PAGE



# ಗುರಿಗಮ್ಯತೆ

ಕೆ.ಎಸ್. ಸುದರ್ಶನ್
ಡಾ. ಮುರಳೀ ಮನೋಹರ ಜೋಶಿ
ಚತುರ್ವೇದಿ ಬದರೀನಾಥ್
ಸುರೇಂದ್ರ ಪ್ರಸಾದ್ ಗೈನ್

BLANK PAGE



# ೧೭. ಒಂದು ಅವಿಚ್ಛಿನ್ನ ಸತತ ಪ್ರವಾಹ : ಏಕಾತ್ಮ ಮಾನವದರ್ಶನ

**ಕೆ.ಎಸ್. ಸುದರ್ಶನ್**

**"ತನ್ನ ಹೊಟ್ಟೆಪಾಡಿಗಾಗಿ ಸಂಪಾದಿಸುವುದು ಪ್ರಕೃತಿ ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಇನ್ನೊಬ್ಬರ ಅನ್ನ ಕಸಿಯುವುದು ವಿಕೃತಿ. ಅನ್ಯರಿಗೆ ಅನ್ನವಿಕ್ಕಲು ಸಂಪಾದಿಸುವುದು ಸಂಸ್ಕೃತಿ.**

–ಈ ವಾಕ್ಯ ದೀನದಯಾಳಜಿ ಅವರ ಚಿಂತನೆಯ ಸಾರಾಂಶ ಸಂಪುಟವಿದ್ದಂತೆ. ಬೇರೆಯವರಿಗೆ ಅನ್ನವಿಕ್ಕುವುದಕ್ಕೆ ಪ್ರೇರಣೆ, ಅನ್ಯರ ಬಗೆಗಿನ ಏಕಾತ್ಮತೆಯ ಭಾವನೆ. ಈ ಭಾವನೆಯಿಲ್ಲದಿದ್ದಲ್ಲಿ ಬೇರೆಯವರಿಗಾಗಿ, ಮಿಕ್ಕವರಿಗಾಗಿ ದುಡಿಯುವಂತೆ ಪ್ರೇರೇಪಿಸುವು ಅಸಾಧ್ಯ.

## ಪಾಶ್ಚಾತ್ಯ ಏಕಕೇಂದ್ರೀಯತೆ

ಪಾಶ್ಚಿಮಾತ್ಯ ಹಾಗೂ ಅಮೆರಿಕನ ಚಿಂತನೆಯಲ್ಲಿ ಏಕಕೇಂದ್ರೀಯತೆಯನ್ನು ಪ್ರಕೃತಿ ಸಹಜವಾದದ್ದು, ಸ್ವತಃ ಸಿದ್ಧವಾದದ್ದು ಎಂದು ಪರಿಗಣಿಸಲಾಗಿದೆ ಎನ್ನುವುದು ನಮಗೆಲ್ಲ ಗೊತ್ತಿರುವ ಸಂಗತಿ. ಏಕ ಕೇಂದ್ರೀಯತೆ ಎಂದರೆ ತನ್ನ ತಲೆಮಾರನ್ನು ಮಾತ್ರ ಕುರಿತು ಕಾಳಜಿಮಾಡುವುದು ಎಂದರ್ಥ. ಮುಂದಿನ ಉತ್ತರೋತ್ತರ ತಲೆ ಮಾತುಗಳ ಬಗೆಗ ತನಗೊಂದು ಕರ್ತವ್ಯವಿದೆ. ಹೊಣೆಗಾರಿಕೆಯಿದೆ ಎನ್ನುವ ಭಾವನೆಯಾಗಲಿ, ಪ್ರಜ್ಞೆಯಾಗಲೀ ಪಾಶ್ಚಾತ್ಯರಲ್ಲಿಲ್ಲ. ಏಕೆಂದರೆ ಹಿಂದಿನ ತಲೆಮಾರಿನವರು. ಪೂರ್ವಜರು ಇವರ ಬಗ್ಗೆ ಕಾಳಜಿವಹಿಸಿರಲಿಲ್ಲ. ಪಾಶ್ಚಾತ್ಯ ತಂದೆ–ತಾಯಿಯರು ಸಂತಾನಾಪೇಕ್ಷಿಗಳಲ್ಲ, ಅವರಿಗೆ ಮಕ್ಕಳ ಬೇಡ. ಅವರ ದೃಷ್ಟಿಯಲ್ಲಿ ಭೋಗ ಪ್ರಧಾನ ಅಪೇಕ್ಷೆಯಿಂದ ಒಂದುಗೂಡಿದ್ದರ ಉಪೋತ್ಪನ್ನ ಮಕ್ಕಳು. ಈ ಉಪೋತ್ಪನ್ನ ಮಕ್ಕಳ ಸಂತಾನವೂ ಉಪೋತ್ಪನ್ನ ಸಂತಾನವೇ ಆಗಿರುತ್ತದೆ. ಹೀಗಾಗಿ ಒಂದು ತಲೆಮಾರಿನವರು ಇನ್ನೊಂದು ತಲೆಮಾರಿನವರ ಬಗ್ಗೆ ಹೊಣೆಗಾರಿಕೆಯ ಪ್ರಜ್ಞೆ ಹೊಂದಿರಬೇಕಾಗಿಲ್ಲ ಎನ್ನುವುದು ಸಹಜ. ಅಮೆರಿಕದ ವ್ಯಕ್ತಿಕೇಂದ್ರಿತ ಜೀವನ ಪದ್ಧತಿ ಈ ಚಿಂತನೆಯ ಫಲ. ವ್ಯಕ್ತಿಕೇಂದ್ರಿತ ಜೀವನ

ವಿಧಾನದಲ್ಲಿ ಸ್ವಾರ್ಥಹಿತವೊಂದೇ ವ್ಯಕ್ತಿಯ ಕಾಳಜಿ. ಇಂಥ ಸಂಸ್ಕೃತಿಯಲ್ಲಿ ಮಿಕ್ಕವರ ಪೋಷಣೆಗಾಗಿ ಸಂಪಾದಿಸಬೇಕು ಎನ್ನುವ ಪ್ರೇರಣೆ ಅಂಕುರಿಸುವುದೂ ಇಲ್ಲ. ಹೀಗೆ ಈ ರೀತಿಯ ಅಮೆರಿಕನ್ ವ್ಯವಸ್ಥೆಯಲ್ಲಿ ಹಣದ ಲೆಕ್ಕಾಚಾರದಲ್ಲಿ ದುಡಿಮೆಯ ಮೌಲ್ಯಮಾಪನ ಶುರುವಾಗುತ್ತದೆ. ಇದು ವ್ಯಕ್ತಿಯ ಶೈಶವಾವಸ್ಥೆಯಲ್ಲೆ ಪ್ರಾರಂಭವಾಗುತ್ತದೆ. ಮಕ್ಕಳು ಹದಿನಾರನೆಯ ವಯಸ್ಸಿಗೇ ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಾರೆ. ಹಾಗಾದಲ್ಲಿ ಮಕ್ಕಳು ತಂದೆತಾಯಿಯರಿಗೆ ಹೊರೆಯಾಗುವುದಿಲ್ಲ. ಇದು ಮಕ್ಕಳು ಮತ್ತು ತಂದೆ–ತಾಯಿಯರ ನಡುವಣ ಪ್ರೀತಿವಾತ್ಸಲ್ಯಗಳ ಬಾಂಧವ್ಯವನ್ನು ದುರ್ಬಲಗೊಳಿಸುತ್ತದೆ. ಪರಿಣಾಮವಾಗಿ ಮಕ್ಕಳು ಸಣ್ಣ ವಯಸ್ಸಿನಲ್ಲೇ ತಂದೆ–ತಾಯಿಯರಿಂದ ದೂರವಾಗಿ ತಮ್ಮದೇ ಸಂಸಾರ ಆರಂಭಿಸುತ್ತಾರೆ.

## ಭಾರತೀಯ ಚಿಂತನೆ

ಈ ಬಗೆಯ ಧೋರಣೆ ನಮಗೆ ಯಾವತ್ತಿನಿಂದಲೂ ಪರಕೀಯವಾದದ್ದು. ನಾವು ಬದುಕನ್ನು ಒಂದು ಸಂತತ ಹರಿವಿನಂತೆ ಪರಿಗ್ರಹಿಸಿದ್ದೇವೆ. ನಾವು ನಮ್ಮ ಹಿಂದಿನ ಮೂರು ತಲೆಮಾರುಗಳಿಗೆ ಹೊಣೆಗಾರರಾಗಿರುತ್ತೇವೆ. ಹಾಗೂ ನಮ್ಮ ಮುಂದಿನ ಮೂರು ತಲೆಮಾರುಗಳ ಮೇಲೆ ನಂಬುತ್ತೇವೆ. ಆದ್ದರಿಂದ ನಾವು ಅವರ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದೇ ನಾವು ಏಳು ತಲೆಮಾರುಗಳ ಕಾಳಜಿವಹಿಸುತ್ತೇವೆ. ಮೂರು ಹಿಂದಿನ ತಲೆಮಾರು, ಮೂರು ಮುಂದಿನ ತಲೆಮಾರು ಮೇಲೆ ನಮ್ಮ ಸ್ವಂತ ಹುಟ್ಟು. ನಾವು ನಮ್ಮ ಪೂರ್ವೀಕರನ್ನು ಪೂಜ್ಯಭಾವನೆಯಿಂದ ಸ್ಮರಿಸುತ್ತೇವೆ ಹಾಗೂ ಮುಂಬರಲಿರುವ ತಲೆಮಾರುಗಳ ಹಿತರಕ್ಷಣೆಗಾಗಿ, ಯೋಗಕ್ಷೇಮಕ್ಕಾಗಿ ಪ್ರಾರ್ಥಿಸುತ್ತೇವೆ.

ಒಟ್ಟಾರೆಯಾಗಿ ಜೀವನವೊಂದು ಸಂತತ ಹರಿವ ಪ್ರವಾಹವಿದ್ದಂತೆ. ನಾವೇನಿದ್ದರೂ ಈ ಪ್ರವಾಹದ ನೀರ ಮೇಲಣ ಗುಳ್ಳೆಗಳು ಮಾತ್ರ. ನಮ್ಮ ಈ ಜನ್ಮದ ಕಾರಣ ಪೂರ್ವಜನ್ಮದ್ದು. ಪೂರ್ವಜನ್ಮ ಕರ್ಮಗಳು ಈ ಜನ್ಮದ ಕರ್ಮಗಳು ನಮ್ಮ ಭವಿಷ್ಯದ ಮೇಲೆ ಪ್ರಭಾವ ಬೀರುತ್ತವೆ. ಈ ಜ್ಞಾನೋದಯ, ಅಂದರೆ ಕರ್ಮಫಲದ ಪ್ರಭಾವ ಪರಿಣಾಮಗಳ ತಿಳಿವು ನಮ್ಮಲ್ಲಿ ಹೊಣೆಗಾರಿಕೆಯ ಪ್ರಜ್ಞೆಯನ್ನು ಮೂಡಿಸುತ್ತದೆ.

ನಾವು ಕೇವಲ ಕುಟುಂಬದ ಒಂದು ಅಂಗವಷ್ಟೇ ಅಲ್ಲ; ನಾವು ಸಮಾಜದ ಅಂಗವೂ ಹೌದು. ಹೀಗಾಗಿ ಈ ಸಮಾಜಕ್ಕೆ ಸೇವೆ ಸಲ್ಲಿಸಿದವರೆಲ್ಲರನ್ನೂ ನಾವು ನಮ್ಮ ಪೂರ್ವಿಕರು, ಪೂರ್ವಜರು ಎಂದೇ ಭಾವಿಸುತ್ತೇವೆ. ಆದ್ದರಿಂದಲೇ ನಾವು ರಾಮಕೃಷ್ಣ, ವಿಕ್ರಮಾದಿತ್ಯ ಇವರುಗಳನ್ನು ನಮ್ಮ ವಂಶಾವಳಿಯ



ಮುಖ್ಯಕೊಂಡಿಗಳೆಂದು ಪರಿಗಣಿಸುತ್ತೇವೆ. ನಮ್ಮ ಪ್ರಾಚೀನ ಪರಂಪರೆ ಸಂಪ್ರದಾಯಗಳು ತಲೆಮಾರಿನಿಂದ ತಲೆಮಾರಿಗೆ ಅವಿಚ್ಛಿನ್ನವಾಗಿ ಹರಿದುಬಂದಿವೆ. ನಾವು ನಮ್ಮ ಪೂರ್ವಜರ ಸ್ಫೂರ್ತಿದಾಯಕ ಆದರ್ಶಗಳನ್ನು ಇವತ್ತಿನ ಅಗತ್ಯಗಳಿಗನುಸಾರವಾಗಿ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತೇವೆ. ಹೀಗೆ ನಮ್ಮ ಭವಿಷ್ಯವನ್ನೂ ರೂಪಿಸಿಕೊಳ್ಳುತ್ತೇವೆ.

## ಕಾಲದ ನಿರಂತರ ಪ್ರವಾಹ

ನಮ್ಮ ರಾಷ್ಟ್ರೀಯ ಹಿನ್ನೆಲೆಯಲ್ಲಿ ನಾವು ಭೂತ, ವರ್ತಮಾನ ಮತ್ತು ಭವಿಷ್ಯತ್ಕಾಲಗಳನ್ನು ಅವುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲೂ ಇಡಿಯಾಗಿಯೇ ಗ್ರಹಿಸುತ್ತೇವೆ. ಗತಕಾಲದ ಬಗ್ಗೆ ಹೆಮ್ಮೆ, ವರ್ತಮಾನ ಕಾಲದ ಬಗ್ಗೆ ಕಾಳಜಿ–ಆಸಕ್ತಿಗಳನ್ನು ಹೊಂದುವುದರಿಂದ ಹಾಗೂ ಭವಿಷ್ಯದ ಬಗ್ಗೆ ಕನಸು ಕಾಣುವುದರಿಂದ ಸಮಾಜದ ಪ್ರಗತಿಗೆ ಸಹಾಯವಾಗುತ್ತದೆಂದು ಶ್ರೀ ಅರವಿಂದರು ಹೇಳಿದ್ದಾರೆ. ದೀನದಯಾಳಜಿ ಅವರು ಅಖಂಡಮಾನವತಾ ಸಿದ್ಧಾಂತದಲ್ಲಿ ಈ ಆಲೋಚನೆಗೊಂದು ಸಂಘಟಿತ ರೂಪನೀಡಿದ್ದಾರೆ. ಇಡೀ ಬ್ರಹ್ಮಾಂಡ ಪೂರ್ಣತೆಯ ಸಾಕ್ಷಾತ್ಕಾರ ಅಥವಾ ವಿಸ್ತರಣೆ ಎಂದು ಅವರು ಹೇಳಿದ್ದಾರೆ. ಆದ್ದರಿಂದ ಆತ್ಮ ಮತ್ತು ಪರಮಾತ್ಮನು, ಪರಿಮಿತ ಮತ್ತು ಅನಂತ ಇವು ಅವಿಭಾಜ್ಯ, ಪರಸ್ಪರ ಅವಲಂಬಿತ ಹಾಗೂ ಸಮಗ್ರ. ಈ ಅನಂತವನ್ನು ಕಾಲಾತೀತವನ್ನು, ಅಖಂಡವಾದ ಪೂರ್ಣತೆಯನ್ನು ಅನುಭವಿಸಿ ನೋಡುವುದು ನಮ್ಮಿಂದ ಅಸಾಧ್ಯ. ಏಕೆಂದರೆ, ಅಜ್ಞಾನ ಮತ್ತು ಮಾಯದ ಪೊರೆ ನಮ್ಮನ್ನು ಆವರಿಸಿರುತ್ತದೆಯಾದ್ದರಿಂದ ವ್ಯಕ್ತಿ ತನ್ನ ಕುಟುಂಬವನ್ನು ಮಾತ್ರ ತನ್ನ ವಿಸ್ತರಣೆ ಎಂದು ಭಾವಿಸುತ್ತಾನೆ. ತಂದೆ–ತಾಯಿ, ಸೋದರಿಯರು, ಹೆಂಡಿರ, ಮಕ್ಕಳು ಮೊದಲಾದ ಮನೆಮಂದಿಯ ಸುಖಸಂತೋಷಗಳಿಗಾಗಿ ವ್ಯಕ್ತಿ ತನ್ನ ಸ್ವಂತ ಆಸಕ್ತಿಯನ್ನು ಮೀರಿ ಸ್ವಂತ ಇಚ್ಛೆಯಿಂದಲೇ ಎಲ್ಲ ಕಷ್ಟ ನಷ್ಟಗಳನ್ನೂ ಎದುರಿಸುತ್ತಾನೆ.

## ವ್ಯಕ್ತಿಯಿಂದ ಸಮಾಜದತ್ತ

ಮಿಕ್ಕವರೊಡನೆ ಏಕಾತ್ಮತೆಯನ್ನು ಮಾಡುವ ಏಕೀಕರಣ ತತ್ವ ಕುಟುಂಬದೊಂದಿಗೇ ನಿಲ್ಲುವುದಿಲ್ಲ. ಅದು ಕುಟುಂಬಕ್ಕಷ್ಟೇ ಸೀಮಿತವಾದುದಲ್ಲ. ಏಕೆಂದರೆ ಕುಟುಂಬವೂ ಸಮಾಜದ ಒಂದು ಘಟಕ. ನಾನು ಸಂಪಾದಿಸಿದ್ದನ್ನು ನನ್ನ ಹಾಗೂ ನನ್ನ ಕುಟುಂಬದ ಪಾಲನೆ ಪೋಷಣೆ ಬಳಸಬಹುದಾದರೂ ನಾನು ಸಮಾಜಕ್ಕೆ ಸೇರಿದವನು, ನನ್ನನ್ನು ಹಾಗೂ ನನ್ನ ಕುಟುಂಬವನ್ನು ಪೋಷಿಸುವ ಸಮಾಜಕ್ಕೆ ನಾನು ಹೊಣೆಗಾರ. ಸಮಾಜದ ಬಗ್ಗೆ ನನ್ನ ಕರ್ತವ್ಯಗಳಿವೆ. ನಾನು

ಸಮಾಜದ ಬಗ್ಗೆ ಕಾಳಜಿ ವಹಿಸಿದರೆ ಪ್ರತಿಯಾಗಿ ಸಮಾಜವು ನನ್ನ ಕಾಳಜಿ ವಹಿಸುತ್ತದೆ. ಇದೇ ರೀತಿ ಸಮಾಜವು ಇಡೀ ಮಾನವ ಕುಲದ ಒಂದು ಅಂಗ. ಆದ್ದರಿಂದ ಎಲ್ಲ ಸಮಾಜಗಳೂ ಒಟ್ಟು ಮಾನವಕುಲದ ಹಿತಾಸಕ್ತಿಗಾಗಿ ಒಂದುಗೂಡಿ ಕೆಲಸಮಾಡಬೇಕು. ಮಾನವಕುಲ ಪ್ರಕೃತಿಯ ಒಂದು ಅಂಗ. ಪ್ರಕೃತಿ, ಮಾನವಕುಲಕ್ಕೆ ಅದರ ಪಾಲನೆ–ಪೋಷಣೆ–ರಕ್ಷಣೆಗಳಿಗೆ ಅಗತ್ಯವಾದ ಎಲ್ಲ ಸಾಧನ ಸಂಪನ್ಮೂಲಗಳನ್ನು ಒದಗಿಸುತ್ತದೆ. ಪ್ರಕೃತಿಯೇ ದೇವರ ಒಂದು ಅಂಗ. ಹೀಗೆ ನಾವೆಲ್ಲ ಪರಾಧೀನರಾಗದೆ ಮೂಲ ಸತ್ಯದಲ್ಲಿ ಒಂದುಗೂಡಿದ್ದೇವೆ. ಇದು ಹಿಂದೂ ಚಿಂತನೆಯ ಬಾರತೀಯ ಚಿಂತನೆಯ ತಿರುಳು. ದೀನದಯಾಳ್‌ಜೀಯವರು ಈ ಚಿಂತನೆಯನ್ನು ಅಖಂಡಮಾನವತಾ ಸಿದ್ಧಾಂತವೆಂದು ಕರೆದಿದ್ದಾರೆ.

ಈ ಪ್ರಪಂಚದಲ್ಲಿ ಸರ್ವಸ್ವವೂ ಎಲ್ಲದರೊಂದಿಗೆ ಬಿಡಿಸಲಾಗದ ರೀತಿಯಲ್ಲಿ ಸೇರಿಕೊಂಡಿದೆ. ವಿಶ್ವದಲ್ಲಿ ಎಲ್ಲಿ ಏನೇ ಆಗಲಿ ಅದರ ಸೋಂಕು ಇಡೀ ವಿಶ್ವಕ್ಕೆ ತಗುಲುತ್ತದೆ. ವಿಶ್ವದ ಈ ಅಂತರಸಂಬಂಧವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ವಿಫಲರಾಗಿರುವುದರಿಂದ ನಾವು ತಪ್ಪುಗಳನ್ನು ಮಾಡುತ್ತೇವೆ. ನಿರ್ದಯವಾಗಿ ಪ್ರಕೃತಿಯನ್ನು ಶೋಧಿಸುತ್ತೇವೆ. ಪ್ರಕೃತಿಯನ್ನು ನಾಶಮಾಡುತ್ತೇವೆ. ಪ್ರತಿಯಾಗಿ ಪ್ರಕೃತಿಯ ವಿಕೋಪಕ್ಕೆ ಗುರಿಯಾಗುತ್ತೇವೆ. ಮಾನವನ ಪ್ರಜ್ಞಾಹೀನ ವಿನಾಶಕಾರಿ ಕೃತ್ಯಗಳ ವಿರುದ್ಧ ಪ್ರಕೃತಿಯ ಭಯಾನಕ ಬಂಡಾಯ ಈ ಗ್ರಹದಲ್ಲಿ ಮಾನವನ ಅಸ್ತಿತ್ವದ ಅಳಿವು–ಉಳಿವುಗಳ ಪ್ರಶ್ನೆಯನ್ನೇ ಎತ್ತಿದೆ. ಪಾಶ್ಚಾತ್ಯರ ಅಸಮಗ್ರ ಚಿಂತನೆಯಿಂದಾಗಿ ಈ ವಿಪತ್ಕಾರಿ ಪರಿಸ್ಥಿತಿ ಉದ್ಭವಿಸಿದೆ. ಆದ್ದರಿಂದ ಇನ್ನು ಮುಂದೆ ನಾವು ವಿಶ್ವಮಾನವ ಸಮುದಾಯದ ಕಲ್ಯಾಣದ ಸಲುವಾಗಿ ಅಖಂಡವಾದ ಬಹು ಆಯಾಮಗಳುಳ್ಳ ಮಾರ್ಗವನ್ನು ಅನುಸರಿಸಬೇಕಾಗಿದೆ. ದೀನದಯಾಳ್‌ಜೀ ಅವರ ಏಕಾತ್ಮ ಮಾನವವಾದ ಇಂಥ ಸಮಗ್ರ ಮಾರ್ಗ, ಸಮಗ್ರ ಚಿಂತನೆಯೊಂದನ್ನು ನೀಡುತ್ತಿದೆ.

ಅವರು ಮಾನವನಿಂದ ದೇವರವರೆಗೆ ವ್ಯಾಪಿಸುವ ಅಭಿವೃದ್ಧಿಯ ದೃಷ್ಟಿಕೋನವೊಂದನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಅವರು ಹೇಳುತ್ತಾರೆ ಮಾನವ, ದೇಹ, ಹೃದಯ, ಬುದ್ಧಿ ಮತ್ತು ಆತ್ಮಗಳಿಂದ ಸಂಯೋಜಿತನಾದವನೆಂದು. ಈ ಸಂಯೋಜಿತ ಧಾತುಗಳು ಮನುಷ್ಯ ಸ್ವರೂಪವನ್ನು ಮಾತ್ರ ತೋರುವುದಿಲ್ಲ. ಮನುಷ್ಯನಿಗಷ್ಟೇ ಅವು ಸೀಮಿತವಾದುದಲ್ಲ. ಪ್ರತಿಯೊಂದರಲ್ಲೂ ಅವುಗಳು ಇರಬೇಕು.

ರಾಷ್ಟ್ರದ ಪರಿಕಲ್ಪನೆಯೂ ಈ ನಾಲ್ಕು ಅಂಗಗಳನ್ನು ಒಳಗೊಂಡಿದೆ. ರಾಷ್ಟ್ರದ ಪರಿಕಲ್ಪನೆ ಹೀಗಿದೆ: (ಅ) ಭೌಗೋಳಿಕ ಪ್ರದೇಶ ಹಾಗೂ ಅದರ ನಿವಾಸಿಗಳು ರಾಷ್ಟ್ರದ ದೇಹ (ಆ) ನಾವು ರಾಷ್ಟ್ರಕ್ಕೆ ಸೇರಿದವರು. ಅದರ ಅಂಗ ಎನ್ನುವ ಪ್ರಜ್ಞೆ ರಾಷ್ಟ್ರೀಯ ಭಾವನೆಯನ್ನು ಹುಟ್ಟಿಸುತ್ತದೆ. ಈ ಭಾವನೆಯೇ ಹೃದಯ. ರಾಷ್ಟ್ರೀಯತೆಯ



ತಿರುಳು, ಸಾರಾಂಶ ಇರುವುದು ಸಮಾನ ಸಂತತಿಯಲ್ಲಿ, ಪೂರ್ವಜರ ಪರಂಪರೆಯಲ್ಲಿ, ಸಂಪ್ರದಾಯ ಪದ್ಧತಿಗಳಲ್ಲಿ ಹಾಗೂ ಸಂಸ್ಕೃತಿಯಲ್ಲಿ (ಇ) ರಾಷ್ಟ್ರದ ಆಗು ಹೋಗುಗಳನ್ನು, ವಿದ್ಯಮಾನಗಳನ್ನು ನಿರ್ವಹಿಸಲು ನಾವು ರೂಪಿಸುವ ಕಾನೂನುಗಳೇ ರಾಷ್ಟ್ರದ ಬುದ್ಧಿಮತ್ತೆ (ಈ) ರಾಷ್ಟ್ರದ ಗುರಿಗಮ್ಯತೆಗಳನ್ನು ನಿರ್ಧರಿಸುವ ಆತ್ಮ.

ರಾಷ್ಟ್ರಗಳು ಕೆಲವೊಂದು ಗುರಿಗಮ್ಯತೆಗಳೊಂದಿಗೆ, ವಿಶಿಷ್ಟವಾದ ಗುರಿಗಳೊಂದಿಗೆ ಆಸ್ತಿತ್ವಕ್ಕೆ ಬರುತ್ತದೆ. ತಮ್ಮ ಗುರಿಗಮ್ಯತೆಗಳನ್ನು ಮರೆಯದೆ ಎಲ್ಲಿಯವರೆಗೆ ಅವುಗಳ ಸಾಧನೆಗಾಗಿ ಶ್ರಮಿಸುವವೋ ಅಲ್ಲಿಯವರೆಗೆ ಅವು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತವೆ. ಯಾವಾಗ ತಮ್ಮ ಅಸ್ತಿತ್ವದ ಕಾರಣ, ಮೂಲೋದ್ದೇಶಗಳನ್ನು ಮರೆತುಬಿಡುತ್ತವೆಯೋ ಆನಂತರ ಅವು ತಮ್ಮ ಅಸ್ತಿತ್ವವನ್ನೂ ಕಳೆದುಕೊಳ್ಳುತ್ತವೆ.

ದೇಹ, ಹೃದಯ, ಮನಸ್ಸು, ಮತ್ತು ಆತ್ಮ ಈ ನಾಲ್ಕು ಅಂಗಗಳಿಗೆ ಸೇವೆ ಸಲ್ಲಿಸಿ, ತನ್ಮೂಲಕ ಮನುಷ್ಯ ಸಮಾಜ, ಪ್ರಕೃತಿ, ಮತ್ತು ದೇವರುಗಳ ನಡುವೆ ಒಂದು ಸಾಮರಸ್ಯದ ಸಂಬಂಧವನ್ನು ಸೃಷ್ಟಿಸುವಂಥ ವ್ಯವಸ್ಥೆ ಇಡೀ ಮನುಕುಲಕ್ಕೆ ಪ್ರಯೋಜನಕಾರಿಯಾಗಿಬಹುದು. ನಮ್ಮ ಪ್ರಾಚೀನ ಹಿಂದೂ ವ್ಯವಸ್ಥೆ ಮತ್ತು ಅದರ ಅನೇಕ ಸಂಸ್ಥೆಗಳು, ಪದ್ಧತಿಗಳು ಇಂಥದೊಂದು ಸಹಜೀವನಕ್ಕಾಗಿ, ಸಹಬಾಳ್ವೆಗಾಗಿ ಪ್ರಯತ್ನಿಸಿದವು.

ಆದರೆ ಬ್ರಿಟಿಷರ ಆಳ್ವಿಕೆ ನಮ್ಮ ಪದ್ಧತಿಗಳನ್ನು ಸಂಪ್ರದಾಯಗಳನ್ನು ಹರಿದು ಚಿಂದಿಚಿಂದಿ ಮಾಡಿತು. ಬ್ರಿಟಿಷರು ತಮ್ಮದೇ ಆದ ಪದ್ಧತಿಗಳನ್ನು, ಸಂಪ್ರದಾಯಗಳನ್ನು ನಮ್ಮ ಸಮಾಜದಲ್ಲಿ ನಾಟಿ ಮಾಡಿದರು. ಇವೆಲ್ಲ ನಮ್ಮ ಬುದ್ಧಿಮತ್ತೆಗೆ, ನೀತಿಶಾಸ್ತ್ರಗಳಿಗೆ ವಿರುದ್ಧವಾಗಿದ್ದವು. ಇದು ನಮ್ಮ ಬದುಕಿನಲ್ಲಿ ಅಸಂಬದ್ಧತೆಗಳನ್ನು, ಅಸಾಂಗತ್ಯಗಳನ್ನು, ವಿರೋಧಾಭಾಸಗಳನ್ನು ತಂದವು. ಇದರಿಂದ ನಾವು ಸ್ಫೂರ್ತಿದಾಯಕರಾಗಿಲ್ಲ. ಅಥವಾ ಈ ನಿಟ್ಟಿನಲ್ಲಿ ಮುಂದುವರಿಯುವ ಉತ್ಸಾಹವೂ ನಮಗಿಲ್ಲ. ದೀನ್‌ದಯಳ್‌ಜೀ ಹೇಳುತ್ತಿದ್ದರು, ನಮ್ಮೆಲ್ಲ ಪದ್ಧತಿಗಳೂ ನಮ್ಮ ಬದುಕಿನ ಗುರಿಗಮ್ಯತೆಗಳಿಗನುಸಾರವಾಗಿರಬೇಕು ಹಾಗೂ ಅತ್ಯವಶ್ಯವಾಗಿ ಏಕಾತ್ಮಕತೆಯಿಂದ ಕೂಡಿರಬೇಕು. ಈ ಹಿನ್ನೆಲೆಯಲ್ಲೇ ನಾವು ಈ ಮೂಲತತ್ತ್ವವನ್ನು 'ಸಂಸ್ಕೃತಿ' ಎಂದೂ ಕರೆದಿದ್ದೇವೆ. ಅಂದರೆ, ಮಿಕ್ಕವರ, ಅಖಂಡ ಸಂಸ್ಕೃತಿಗೆ ಅನ್ನಸಂತರ್ಪಣೆ.

# ೧೮. ಹಿಂದುತ್ವ : ಒಂದು ಭೌಗೋಳಿಕ ಸಾಂಸ್ಕೃತಿಕ ಪರಿಕಲ್ಪನೆ

**ಡಾ. ಮುರಳೀ ಮನೋಹರ ಜೋಶಿ***

*(ಭಾರತೀಯ ಜನತಾಪಾರ್ಟಿಯ ಆಗಿನ ಅಧ್ಯಕ್ಷರು ಲೇಖಕರು ಪ್ರಸಿದ್ಧ ಭೌತವಿಜ್ಞಾನಿಗಳು. ಹಿಂದೂ ಸಂಸ್ಕೃತಿ, ಭಾರತೀಯತ್ ಮತ್ತು ಅಖಂಡಮಾನವತಾ ಸಿದ್ಧಾಂತ ಇವೆಲ್ಲದರ ಅರ್ಥ ಒಂದೇ, ಆದರೆ ಸಂದರ್ಭಾನುಸಾರ ಅರ್ಥೈಸಲಾಗುತ್ತದೆ. ಬೇರೆಯಾಗಿ ಕಾಣುತ್ತದೆಯೇ ಹೊರತು ಅವೆಲ್ಲ ಒಂದೇ, ಬೇರೆಯಲ್ಲ ಎನ್ನುವುದು ಲೇಖಕರ ದೃಢನಿಲುವು.)*

ಹಿಂದೂ ಪ್ರಯೋಗವನ್ನು ನಮಗೆ ಅನ್ವಯಿಸಿದ್ದು ಹದಿನೆಂಟನೆಯ ಶತಮಾನದಲ್ಲಿ ಎನ್ನುವುದು ಚಾರಿತ್ರಿಕವಾಗಿ ಸರಿಯಲ್ಲ. ಹಿಂದೂ ಪದ ಪ್ರಯೋಗದ ಬಳಕೆ ಎಂಟನೇ ಶತಮಾನದಷ್ಟು ಹಿಂದೆಯೇ ರೂಢಿಯಲ್ಲಿತ್ತು. 'ಸಿಂಧೂ' ಎನ್ನುವುದು ಹಿಂದೂ ಪದ ಪ್ರಯೋಗಕ್ಕೆ ಪ್ರೇರಣೆ. ಡೇರಿಯಸ್‌ನ, ಜರಾತುಷ್ಟ್ರ ಮತ್ತು ನಾಕ್ಷೆ ರುಸ್ತುಂ ಬರಹಗಳ ಇರಾನಿಯನ್ ಶಾಸನಗಳಲ್ಲಿ 'ಹಿಂದೂ' ಪದ ಪ್ರಯೋಗಗಳು ಇವೆ. ಹಿಂದೂಗಳು (ಸಿಂಧೂ ನದಿ ಸುತ್ತಣ ನಿವಾಸಿಗಳು) ತನಗೆ ತೆರಿಗೆ ಪಾವತಿಸುತ್ತಿರುವುದರಿಂದ ತಾನು ಅದೃಷ್ಟವಂತನೆಂದು ಡೇರಿಯಸ್ ಈ ಶಾಸನಗಳಲ್ಲಿ ಹೇಳಿದ್ದಾನೆ. ಹಿಂದೂಗಳು ದೈವಾನುಗ್ರಹಕ್ಕೆ ಪಾತ್ರರಾದ ಜನರೆಂದು ಜರಾತುಷ್ಟ್ರ ಹೇಳುತ್ತಾನೆ. ಪರ್ಶಿಯನ್ ಉಚ್ಚಾರಣೆಯ ವ್ಯತ್ಯಾಸಗಳಿಂದಾಗಿ ಹಿಂದೂ ಪದ ಹುಟ್ಟಿಕೊಂಡಿತು. ಪರ್ಶಿಯನ್ ಭಾಷೆಯಲ್ಲಿ 'ಸಿಂಧೂ'ವನ್ನು ಹಿಂದೂ ಎಂದು ಉಚ್ಚರಿಸಲಾಗುತ್ತದೆ. "ಸಪ್ತಾಹ" (ವಾರ) 'ಹಫ್ತಾಹ' ಆಗುತ್ತದೆ. ನಾವು "ಮಾಸ" ಎಂದು ಕರೆದರೆ ಪರ್ಶಿಯನ್ನರು "ಮಹೀನಾ" ಎಂದು ಕರೆಯುತ್ತಾರೆ. ಹ್ಯೂಯನ್ ತ್ಸ್ಯಾಂಗ್ 'ಸಿಂಧೂ'ವನ್ನು 'ಶಿಂತೂ' ಎಂದು ಕರೆದ. ಮಧ್ಯ ಪ್ರಾಚ್ಯ ಮತ್ತು ಜಪಾನಿನ ಜನ 'ಸಿಂಧೂ'ವನ್ನು 'ಸಂತೂ' ಎಂದೇ ಉಚ್ಚರಿಸುತ್ತಾರೆ. ಪರ್ಶಿಯನ್ನರು ಯೂರೋಪಿಯನ್ನರ ಜೊತೆ ಸಂಪರ್ಕಬೆಳೆಸಿದಾಗ, ಸಿಂಧೂ, ಇಂದೂ ಆಯಿತು. ಇಂದೂ 'ಇಂಡಸ್' ಆಯಿತು. ಇಸ್ಲಾಂ ಹುಟ್ಟುವುದಕ್ಕೆ ಮುಂಚೆ ಅರಬ್ಬರು ತಮ್ಮ ಗಣಿತಶಾಸ್ತ್ರವನ್ನು 'ಹಿಂಡ್ಸಾ' ಎಂದು ಕರೆಯುತ್ತಿದ್ದರು. 'ಹಿಂದೂ' ಪದ ಮೂಲತಃ



ಒಂದು ಭೌಗೋಳಿಕ ಪರಿಕಲ್ಪನೆಯಾಗಿ ಹುಟ್ಟಿತು ಕ್ರಮೇಣ ಅದು ಭೌಗೋಳಿಕ–ಸಾಂಸ್ಕೃತಿಕ ಪರಿಕಲ್ಪನೆಯಾಗಿ ಬೆಳೆಯಿತು. ಸಿಂಧೂ ನದಿತೀರದಲ್ಲಿ ಹಾಗೂ ಅದರ ಸುತ್ತ ಮುತ್ತ ವಾಸಮಾಡುತ್ತಿದ್ದ ಜನರ ಜೀವನ ಮತ್ತು ಜೀವನ ತತ್ತ್ವಗಳೇ ಹಿಂದೂ ತತ್ತ್ವಶಾಸ್ತ್ರವೆಂದು ಪ್ರಸಿದ್ಧಿಪಡೆಯಿತು.

ಇಂಡೋನೇಷಿಯಾ ಜನಸಂಖ್ಯೆಯಲ್ಲಿ ಹೆಚ್ಚುಮಂದಿ ಮುಸ್ಲಿಮರು; ಅವರ ಧರ್ಮ ಇಸ್ಲಾಂ ಆದರೆ ಅವರ ದೇಶವನ್ನು ಇಂಡೊನೇಷಿಯಾ ಎಂದೂ ಕರೆಯಲಾಗುತ್ತದೆ. ಇಂಡೊನೇಷಿಯಾ ಎಂದರೆ ಹಿಂದೂ ಏಷ್ಯಾ. ಇಂಡೊನೇಷಿಯಾ ಒಂದು ಡಚ್ ಪದ. ದೇವತಾರಾಧನೆಯ ಪದ್ಧತಿ ಮುಸ್ಲಿಂ ಆದಾಗ್ಯೂ ಅವರ ಜೀವನತತ್ತ್ವ ಹಿಂದೂ ಎನ್ನುವುದು ಇದರ ಅರ್ಥ. ಎಂದೇ ಇಂಡೊನೇಷಿಯಾ ಜನ ದೇವರ ಆರಾಧನೆಯ ಪದ್ಧತಿ, ವಿಧಿವಿಧಾನಗಳಲ್ಲಿ (ಧರ್ಮ) ಬದಲಾವಣೆ ಮಾಡಿಕೊಂಡರೇ ವಿನ: ತಮ್ಮ ಹೆಸರನ್ನು ಬದಲಾಯಿಸಿಕೊಳ್ಳಲಿಲ್ಲ. ಉದಾಹರಣೆಗೆ ಹೇಳುವುದಾದರೆ ಅವರು ತಮ್ಮ ದೇಶವನ್ನು ಮಹಮದೀಯ ಏಷ್ಯಾ ಎಂದು ಕರೆಯಬಹುದಿತ್ತು. ಅಂದರೆ ನಾನು ಇಲ್ಲಿ ಹೇಳಲಿಚ್ಛಿಸುತ್ತಿರುವ ವಿಷಯವೆಂದರೆ ಹಿಂದುತ್ವ ಎನ್ನುವುದು ಒಂದು ಭೌಗೋಳಿಕ ಸಾಂಸ್ಕೃತಿಕ ಎಂಬುದನ್ನು ಕಂಠೋಕ್ತವಾಗಿ ಪೋಷಿಸುವುದೇ ಆಗಿದೆ. ಇಂಡೋನೀಸಿಯಾದಿಂದ ಹಿಡಿದು ಆಫ್‌ಘನೀಸ್ತಾನದವರೆಗೆ ಈ ಭೌಗೋಳಿಕ–ಸಾಂಸ್ಕೃತಿಕ ಪರಿಕಲ್ಪನೆ ವ್ಯಾಪಿಸಿದೆ. ಪಾಕಿಸ್ತಾನವೂ ಈ ಪದವ್ಯಾಖ್ಯೆಯಲ್ಲೇ ಬರುತ್ತದೆ. ಪಾಕಿಸ್ತಾನದ ಧಾರಾವಾಹಿಗಳು ನಮ್ಮ ಜೀವನ ಮೌಲ್ಯಗಳನ್ನು ಬಿಂಬಿಸುತ್ತವೆಯೇ ವಿನ: ಪಾಶ್ಚಾತ್ಯ ಮೌಲ್ಯಗಳನ್ನಲ್ಲ. ಬಂಗ್ಲಾದೇಶದ ಸಂಗೀತಕ್ಕೆ ಇದೇ ಮಾತನ್ನು ಅನ್ವಯಿಸಬಹುದು.

ಬೇರೆ ಯಾವ ದೇಶದ ಸಂಸ್ಕೃತಿಯೂ ಹಿಂದೂ ದರ್ಶನವನ್ನು ಎತ್ತಿಹಿಡಿಯುವುದಿಲ್ಲ. ದೀನ್ ದಯಾಳಜಿಯವರು ಹಿಂದೂ ದರ್ಶನವನ್ನು "ಧಾರ್ಮಿಕ ದರ್ಶನ" ಎಂದು ಕರೆದರು. ಈ ವಿಚಾರದಲ್ಲಿ ಅವರ ಮತ್ತು ಗುರೂಜಿಯವರ ಅಭಿಪ್ರಾಯಗಳಲ್ಲಿ ವ್ಯತ್ಯಾಸಗಳೇನೂ ಇಲ್ಲ. ಭಿನ್ನಮತ ಇಲ್ಲ. ಇಬ್ಬರೂ ಇದನ್ನೇ ಬೇರೆ ಬೇರೆ ರೀತಿಯಲ್ಲಿ ಹೇಳುತ್ತಿದ್ದರಷ್ಟೆ.

ವಿಕೇಂದ್ರೀಕರಣ ಕುರಿತಂತೆಯೂ ಇವರಿಬ್ಬರ ಅಭಿಪ್ರಾಯದಲ್ಲಿ ಮೂಲಭೂತ ಭಿನ್ನಾಭಿಪ್ರಾಯಗಳೇನೂ ಇಲ್ಲ. ಗುರೂಜಿಯವರು ವಿಕೇಂದ್ರೀಕರಣದ ಬಗ್ಗೆ ಅತಿಯಾದ ಒಲವನ್ನು ಹೊಂದಿದ್ದರಷ್ಟೆ. ಅವರು ಸಮಾಜ ರಚನೆಯಲ್ಲಿ 'ವಲಯಿತ' ಪರಿಕಲ್ಪನೆಗೆ ಒತ್ತು ಕೊಟ್ಟಿದ್ದರು. ಅಂದೆ ಸಮಾಜ ಸಂರಚನೆ ವಿನ್ಯಾಸ ಸದಾಕಾಲ ವಿಸ್ತರಿಸುವ ಸಾಮರ್ಥ್ಯವುಳ್ಳ ಕೇಂದ್ರಮಯವಾಗಿರಬೇಕೆನ್ನುವುದು ಅವರ ಉದ್ದೇಶವಾಗಿತ್ತು. ವ್ಯಕ್ತಿಯನ್ನು, ಕುಟುಂಬವನ್ನು, ಸಮುದಾಯವನ್ನು, ಗ್ರಾಮವನ್ನು, ಪ್ರಾಂತ್ಯವನ್ನು, ರಾಜ್ಯವನ್ನು, ರಾಷ್ಟ್ರವನ್ನು. ಮಾನವಕುಲವನ್ನು ಹಾಗೂ ಇಡೀ

ಬ್ರಹ್ಮಾಂಡವನ್ನು ತನ್ನ ಪರಿಧಿಯೊಳಗೆ ಒಳಗೊಳ್ಳುವಷ್ಟು ಈ ಕೇಂದ್ರವಲಯ ವಿಸ್ತಾರವಾಗಿರಬೇಕು. ದೀನ್ ದಯಾಳ್ ಉಪಾಧ್ಯಾಯರೂ ತಮ್ಮ ಏಕಾತ್ಮ ಮಾನವ ಸಿದ್ಧಾಂತದಲ್ಲಿ ಇದೇ ಪರಿಕಲ್ಪನೆಯನ್ನೇ ಮಂಡಿಸಿದ್ದಾರೆ. ಈ ಚಿಂತನೆಯ ಮೂಲ ಇರುವುದೇ ವಿಕೇಂದ್ರೀಕರಣದಲ್ಲಿ. ಇದು ಸರ್ವದಾ ವಿಸ್ತಾರಗೊಳ್ಳುತ್ತಿರುವ ಸಂಬಂಧಗಳ ಅವಿಚ್ಛಿನ್ನ ಸರಪಳಿಯಲ್ಲಿ ವ್ಯಕ್ತಿ ಪ್ರಮುಖ ಸ್ಥಾನವನ್ನು ಹೊಂದಿರುವಂಥ ವಿಕೇಂದ್ರೀಕರಣ. ಈ ಅಮಿತ ವಿನ್ಯಾಸದಲ್ಲಿ ವ್ಯಕ್ತಿಯ ಸಾಮರ್ಥ್ಯ ಬೆಳೆಯುತ್ತದೆ. ಗುರೂಜಿಯವರ ಪ್ರಕಾರ ಕೇಂದ್ರೀಕರಣ ಪ್ರಕೃತಿಗೆ ಮತ್ತು ಪ್ರಕೃತಿ ನಿಯಮಗಳಿಗೆ. ವಿರುದ್ಧವಾದದ್ದು. ಸರ್ಕಾರದ ಅಧಿಕಾರ ಕೇಂದ್ರೀಕರಣ, ಸಾಮಾಜಿಕ ಅಥವಾ ಆರ್ಥಿಕ ಕೇಂದ್ರೀಕರಣ ಇರಬಹುದು ಯಾವುದೇ ಬಗೆಯ ಕೇಂದ್ರೀಕರಣವೂ ಪ್ರಕೃತಿಗೆ ವಿರುದ್ಧವಾದದ್ದು.

ಧರ್ಮ ಅನಂತವಾದದ್ದು, ಅಮಿತವಾದದ್ದು, ಆದ್ದರಿಂದ ಅದು ಚಿರಂತನ ಎಂದು ಯೋಗಿ ಅರವಿಂದರು ಹೇಳಿದ್ದಾರೆ. ಈ ಸನಾತನ ಧರ್ಮವೊಂದೇ ಭಾರತೀಯ ರಾಷ್ಟ್ರೀಯತೆ. ಸನಾತನ ಧರ್ಮ, ಧರ್ಮ ಮತ್ತು ಹಿಂದುತ್ವ ಇವುಗಳಲ್ಲಿ ವಿರೋಧ–ವ್ಯತ್ಯಾಸಗಳು ಏನೂ ಇಲ್ಲ. ಪರಸ್ಪರ ವಿರುದ್ಧವಾದದ್ದು ಏನೂ ಇಲ್ಲ. ನಾವು ಹಿಂದುತ್ವದ ಮೇಲೆ ರಾಜಕೀಯ ಅಥವಾ ಬೇರೆ ಯಾವುದೇ ಅರ್ಥವನ್ನು ಹೇರಿದಾಗ ಸಮಸ್ಯೆ ಉದ್ಭವಿಸುತ್ತದೆ.

ವಿದೇಶೀಯರು ಹಿಂದೂ ಎಂದಾಗ ಅವರು ಹಿಂದೂ ಜೀವನ ಮೌಲ್ಯಗಳನ್ನು ಕುರಿತು ಮಾತನಾಡುತ್ತಿರುತ್ತಾರೆಯೇ ಹೊರತು ಬೇರೆ ಏನನ್ನೂ ಅಲ್ಲ. ವ್ಯಕ್ತಿಯೊಬ್ಬನ ವಾಸ್ತವಿಕ ಹೆಸರು ಬೇರೆಯವರು ಕೊಟ್ಟ ಹಸರಿಗಿಂತ ಭಿನ್ನವಾಗಿರುತ್ತದೆ, ಬೇರೆಯದೇ ಆಗಿರುತ್ತದೆ. ಎಷ್ಟೋ ವೇಳೆ ಹೀಗಾಗುತ್ತದೆ. ಬೇರೆಯವರು ಇಟ್ಟ–ಕೊಟ್ಟ ಹೆಸರೇ ಚಲಾವಣೆಗೆ ಬರುತ್ತದೆ. ವಸ್ತು, ವಿಚಾರ, ಅಸ್ತಿತ್ವ ಇರುವಿಕೆಗಳನ್ನು ಅವರು–ಅವುಗಳ ವಿಶಿಷ್ಟ ಲಕ್ಷಣ–ಸ್ವಭಾವಗಳಿಂದ ಗುರುತಿಸುವುದು, ಮಾನ್ಯ ಮಾಡುವುದು ಹಿಂದೂಗಳ ಪದ್ಧತಿ. ಅವುಗಳ ಅರ್ಥವಿವರಣೆಯಿಂದ ಹಿಂದೂಗಳು ಗುರುತಿಸುವುದಿಲ್ಲ. ಹಿಂದುತ್ವ ಒಂದು ಹೆಸರು. ನಮ್ಮ ಜೀವನ ಪದ್ಧತಿ, ಜೀವನದೃಷ್ಟಿ, ದರ್ಶನ, ನಮ್ಮ ಗುರಿಗಮ್ಯತೆ ಇವುಗಳನ್ನು ಗುರುತಿಸುವುದೇ ಹಿಂದುತ್ವ. ಈ ಹಿಂದುತ್ವ ನಮ್ಮ ಅಸ್ಮಿತೆ. ಸನಾತನ ಧರ್ಮ, ಹಿಂದುತ್ವ, ಅಖಂಡ ಮಾನವತಾ ಸಿದ್ಧಾಂತ ಎಲ್ಲವೂ ಸಮಾನಾರ್ಥಕ, ಎಲ್ಲವೂ ಒಂದೇ. ಇವುಗಳ ಮಧ್ಯೆ ಪರಸ್ಪರ ವಿರೋಧಗಳೇನೂ ಇಲ್ಲ. ಸರ್ಕಾರಗಳು ಬಹುಮತ ಒಂದರಿಂದಲೇ ನಡೆಯುವುದಿಲ್ಲ ಎನ್ನುವ ಅಭಿಪ್ರಾಯಕ್ಕೆ ಬದ್ಧರಾಗಿರುವವರು ಇಡೀ ವಿಶ್ವದಲ್ಲೇ ಹಿಂದೂಗಳು ಮಾತ್ರ ಈ ಅಭಿಪ್ರಾಯಕ್ಕೆ ಬದ್ಧರಾಗಿದ್ದಾರೆ. ಬಹುಮತ ಅಥವಾ ಅಲ್ಪಮತ ಅಥವಾ ಅಲ್ಪಸಂಖ್ಯಾತತ್ತ್ವ ಇವೆಲ್ಲ ಹಿಂದೂ ಚಿಂತನೆಗೆ ಸಂಪೂರ್ಣವಾಗಿ ವಿರೋಧಾತ್ಮಕವಾದವು. ಹಿಂದೂ ಜೀವನ



ದರ್ಶನವನ್ನು ಒಪ್ಪುವವರೆಲ್ಲ ಹಿಂದೂಗಳೇ. ಬೌದ್ಧನೂ ಹಿಂದೂ, ವೈಷ್ಣವ, ಶೈವ, ಮಹಮದೀಯ, ಕ್ರಿಶ್ಚಿಯನ್, ಈಶ್ವರವಾದಿ, ನಿರೀಶ್ವರವಾದಿ, ವೇದಾಂತ, ಸಂಖ್ಯಾ ತತ್ತ್ವಶಾಸ್ತ್ರದ ಅನುಯಾಯಿಗಳು –ಇವರೆಲ್ಲರೂ ಹಿಂದೂಗಳೇ, ಜನ, ಹಿಂದು ಮತ್ತು ಮುಸಲ್ಮಾನರಲ್ಲಿ ವಿರೋಧವಿದೆಯನ್ನುತ್ತಾರೆ. ಅವರು ವಿರೋಧಿಗಳು ಎನ್ನುತ್ತಾರೆ. ಏಕೆಂದರೆ ಈ ಜನಕ್ಕೆ ಹಿಂದುತ್ವದ ಅರ್ಥ ಗೊತ್ತಿಲ್ಲ. ಮತ ಮತ್ತು ಧರ್ಮ ಇವೆರಡರ ನಡುವಣ ವ್ಯತ್ಯಾಸ ತಿಳಿಯಲು ನಾವು ಅಸಮರ್ಥರಾಗಿದ್ದೇವೆ. ಇದು ಪಾಶ್ಚಾತ್ಯ ಮಾದರಿಯ ಚಿಂತನೆಯ ದುಷ್ಪರಿಣಾಮ. ಇಂಥ ತಪ್ಪುಗಳ ಪುನರಾವರ್ತನೆಯನ್ನು, ಇಂಥ ತಪ್ಪುಗಳನ್ನು ಮಾಡುವುದನ್ನು ನಾವು ತಪ್ಪಿಸಬೇಕು. ಧರ್ಮವೊಂದೇ ಸಮಾಜಕ್ಕೆ ಕಾರಣೀಭೂತ, ಧರ್ಮವೇ ಸಮಾಜದ ಸೃಷ್ಟಿಕರ್ತ ಹಾಗೂ ಧರ್ಮ ಅಪರಿಮಿತ, ಅದು ಅಬಾಧಿತ ಧರ್ಮವೇ ಪಾರಮ್ಯ. ಧರ್ಮಕ್ಷೇತ್ರ ಅಬಾಧಿತ.

# ೧೯. ಧರ್ಮದ ಪರಿಕಲ್ಪನೆ : ದೀನ್ ದಯಾಳರ ಚಿಂತನ ಮಾರ್ಗ

**ಚತುರ್ವೇದಿ ಬದರೀನಾಥ್**

*(ಈ ಕೆಳಗೆ ಪ್ರಕಟಿಸಲಾಗಿರುವ ಲೇಖನ Dharma India and the World Order : Twenty Essasys ಎಂಬ ಮುಂಬರಲಿರುವ ತಮ್ಮ ಕೃತಿಗೆ ಅವರು ಬರೆದಿರುವ ಸುಧೀರ್ಘ ಮುನ್ನುಡಿಯ ಒಂದು ಭಾಗವಾಗಿದ್ದು. ಆ ಗ್ರಂಥ ನವದೆಹಲಿಯ Centre for Policy Research ಸಂಸ್ಥೆಯಿಂದ ಪ್ರಕಟವಾಗಲಿದೆ. ಅವರು ಅಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ. ಇಲ್ಲಿ ಲೇಖಕರು ಕೆಲವು ಮೂಲಭೂತ ಪ್ರಶ್ನೆಗಳನ್ನೆತ್ತಿದ್ದಾರೆ: ಧರ್ಮದ ಪರಿಕಲ್ಪನೆಯನ್ನು ಅದರ ಹಿಂದೂ ಬೇರಿನಿಂದ ಬೇರ್ಪಡಿಸಬಹುದೆ? ಹಿಂದೂತ್ವ ಮತ್ತು ಧರ್ಮ ಎಂಬುವುದು ಒಂದೇ ಅಲ್ಲವೆ? ಸಾರ್ವತ್ರಿಕ ಧರ್ಮದ ತತ್ತ್ವ ಮತ್ತು ಧರ್ಮದ ಪರಿಕಲ್ಪನೆ ಹಿಂದೂ ಸಂಸ್ಕೃತಿಯ ವಿಶಿಷ್ಟ ಕೊಡುಗೆಗಳಲ್ಲವೆ? ಈ ಸಂಸ್ಕೃತಿಯ ಪಯಣವನ್ನು ಭಾರತದ ಇತಿಹಾಸ ಮತ್ತು ಭೌಗೋಳಿಕತೆಯಿಂದ ಬೇರ್ಪಡಿಸಬಹುದೆ? ಚತುರ್ವೇದಿಯವರ ಈ ಪ್ರಬಂಧಕ್ಕೆ ಮತ್ತು ಈ ಪ್ರಶ್ನೆಗಳಿಗೆ ನಮ್ಮ ಓದಗರು ನೀಡಲಿರುವ ಪ್ರತಿಕ್ರಿಯೆ ಈ ವಿಷಯದ ಬಗೆಗಿನ ಇತ್ಯಾತ್ಮಕ ಕೊಡುಗೆಯೂ ಆಗಿರುತ್ತಿದೆ. –ಮೂಲಕೃತಿಯ ಸಂಪಾದಕ)*

ಭಾರತ ಕುರಿತಂತೆ ದೀನದಯಾಳರ ರಾಜಕೀಯ ಮತ್ತು ಸಾಮಾಜಿಕ ಪರಿಕಲ್ಪನೆಗಳ ಹಂದರ ಯಾವುದು? ಇಲ್ಲಿ ಅತ್ಯಾವಶ್ಯಕವಾಗಿ ಗಮನಿಸಬೇಕಾದ ಸಂಗತಿ ಎಂದರೆ ಆ ಹಂದರ ಹಿಂದೂ ರಾಷ್ಟ್ರೀಯತೆಯಲ್ಲ ಎನ್ನುವುದು. ನಿಸ್ಸಂಶಯವಾಗಿ ಅವರ ಕಾಳಜಿಯೆಲ್ಲ ಭಾರತ ರಾಷ್ಟ್ರ ಮತ್ತು ಅದರ ಸಾಮಾಜಿಕ, ಆರ್ಥಿಕ ಸಮಸ್ಯೆಗಳ ಬಗ್ಗೆ. ಆದರೆ ಇವುಗಳನ್ನು ಹಿಂದುತ್ವದ ಹಿನ್ನೆಲೆಯಲ್ಲಿ ಧರ್ಮದ ಹಿನ್ನೆಲೆಯಲ್ಲಿ ನೋಡಿದ್ದಾರೆ. ಅವರ ಉಪನ್ಯಾಸಗಳು ಮತ್ತು ಕೃತಿಗಳಲ್ಲಿ, ಒಂದೆರಡು ಅಪವಾದ ಹೊರತಾದಂತೆ ಬಾಕಿ ಎಲ್ಲೂ ಅವರು ಹಿಂದೂ ರಾಷ್ಟ್ರದ ಬಗ್ಗೆ ಮಾತನಾಡುವುದಿಲ್ಲ. ಅವರು ಧರ್ಮ ರಾಜ್ಯದ ಬಗ್ಗೆ ಮಾತನಾಡುತ್ತಾರೆ ಹಾಗೂ ಹಿಂದೂ ರಾಷ್ಟ್ರ ಮತ್ತು ಧರ್ಮ ರಾಜ್ಯ ಈ ಎರಡೂ ಪರಿಕಲ್ಪನೆಗಳ ನಡುವೆ ಅಜಗಜಾಂತರ ವ್ಯತ್ಯಾಸಗಳಿವೆ. ಅಥವಾ ಅವರು ಧರ್ಮವನ್ನು 'ಹಿಂದೂ' ವರ್ಗ ಎಂದೂ ಭಾವಿಸುವುದಿಲ್ಲ. ದೀನದಯಾಳರು ಪ್ರತಿಪಾದಿಸುವ ಚಿಂತನೆಗಳು, ವಿಚಾರಗಳು, ಗೋಳ್ವಲ್ಕರ ಅವರ ವಿಚಾರಗಳಂತೆ, ರಾಷ್ಟ್ರವೊಂದರ ಅಸ್ತಿತ್ವ ಅದರ ವಿಶಿಷ್ಟ ಪ್ರಜ್ಞೆಯಲ್ಲಿದೆ. ಪ್ರಜ್ಞೆ ಬೆಳಕಿಗೆ ಬರುವ ಪ್ರಮಾಣದಲ್ಲೇ ಅದು ಏಳುತ್ತದೆ



ಅಥವಾ ಬೀಳುತ್ತದೆ ಅಥವಾ ಮಂಕಾಗಿ ಕಾಣುತ್ತದೆ. ಗೋಲ್ವಾಲ್ಕರ್ ಅವರು ಭಾರತದ ಪ್ರಜ್ಞೆಯನ್ನು ಹಿಂದೂ ಪ್ರಜ್ಞೆ ಎಂದೇ ಪರಿಗ್ರಹಿಸಿದ್ದಾರೆ. ಆದರೆ ಉಪಾಧ್ಯಾಯರು ಭಾರತದ ಪ್ರಜ್ಞೆಯನ್ನು ಧರ್ಮ[೨] ಎಂದು ಪರಿಗ್ರಹಿಸಿದ್ದಾರೆ. ಇದರ ಬಗ್ಗೆ ನೂರಾರು ತಪ್ಪು ಗ್ರಹಿಕೆಗಳಿವೆ. ಹಿಂದೂ ಸಮಾಜವನ್ನು ಸಂಘಟಿಸುವುದು. ಪ್ರಬಲಗೊಳಿಸುವುದು ಗೋಳ್ವಲ್ಕರ್ ಅವರ ಮುಖ್ಯ ಕಾಳಜಿ. ಅವರ ಅಭಿಪ್ರಾಯದಲ್ಲಿ ಹಿಂದೂ ಸಮಾಜವೇ ಭಾರತರಾಷ್ಟ್ರ. ಆದ್ದರಿಂದ ಹಿಂದೂ ರಾಷ್ಟ್ರ ಪ್ರತಿಯೊಬ್ಬ ಹಿಂದೂಪ್ರಜೆಯ ಶ್ರದ್ಧಾಕೇಂದ್ರವಾಗಬೇಕು. ಆರಾಧನೆಯ ಕೇಂದ್ರವಾಗಬೇಕು. ಭಾರತೀಯ ಪ್ರಜ್ಞೆಯ ನಿಜವಾದ ಗುಣಲಕ್ಷಣವನ್ನು, ಅಂದರೆ ಆತ್ಮವನ್ನು ಬೆಳಕಿಗೊಡ್ಡಬೇಕು ಎನ್ನುವುದು ದೀನ್ ದಯಾಳ್‌ರ ಕಾಳಜಿ. ಆಗ ಮಾತ್ರ, 'ಭಾರತದ ದಿಕ್ಕು ದಿಸೆ ಯಾವುದು?" ಎನ್ನುವ ಪ್ರಶ್ನೆಗೆ ತೃಪ್ತಿಕರವಾದ ಉತ್ತರ ಕಂಡುಕೊಳ್ಳುವುದು ಸಾಧ್ಯವಾದೀತು ಎನ್ನುತ್ತಾರೆ ದೀನದಯಾಳರು.

ಆದರೆ ಭಾರತೀಯ ಸಮಾಜಕ್ಕೆ ವಿಶಿಷ್ಟವಾದ ಪ್ರಜ್ಞಾವಂತಿಕೆಯನ್ನು ನೀಡುವ, ಭಾರತ ರಾಷ್ಟ್ರಕ್ಕೆ ದಿಕ್ಕುದಿಸೆ ತೋರುವ, ಮಾರ್ಗದರ್ಶನ ಮಾಡುವ ಆ ಧರ್ಮಯಾವುದು? ಯಾವುದದು? ದೀನ್ ದಯಾಳಜೀಯವರು ಮೊದಲಿಗೆ ಯಾವುದು ಧರ್ಮ ಅಲ್ಲ ಎನ್ನುವುದನ್ನು ನಿರೂಪಿಸುವ ಮೂಲಕ ಭೂಮಿಕೆಯನ್ನು ಸಿದ್ಧಪಡಿಸುತ್ತಾರೆ.[೩] ದೇವಾಲಯ, ಮಸೀದಿ, ಚರ್ಚುಗಳಲ್ಲಿ ಕಾಣಸಿಗುವ ವಸ್ತು ಧರ್ಮವಲ್ಲ. ಅವು ಶಾಲೆಯ ತಿಳುವಳಿಕೆಯ ಧರ್ಮಕ್ಕಿಂತ ಹೆಚ್ಚಿನದಲ್ಲ. ದೇವಾಲಯ ಇತ್ಯಾದಿಗಳೆಲ್ಲ ಮಾಧ್ಯಮಗಳಷ್ಟೆ. ಧರ್ಮ ಒಂದು ಪಂಥವಲ್ಲ. ಒಂದು ತಾತ್ವಿಕ ಅಭಿಪ್ರಾಯವಲ್ಲ ಅಥವಾ ಯಾವುದೇ ಒಂದು ಆಧ್ಯಾತ್ಮಿಕ ಪಥವಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ ಧರ್ಮ ಒಂದು ಜಾತಿಯಲ್ಲ, ಮತವಲ್ಲ.

ಧರ್ಮದ ತಪ್ಪು ಭಾಷಾಂತರ ಜಾತಿ–ಮತ ಎನ್ನುವುದು. ಪಾಶ್ಚಾತ್ಯ ಜಗತ್ತಿನಲ್ಲಿ ಜಾತಿ–ಮತ ಅಥವಾ ರಿಲಿಜನ್ ಎನ್ನುವುದು ಹುಟ್ಟಿಸಿದ ಎಲ್ಲ ಸಾಮಾಜಿಕ ಗೊಂದಲಗಳನ್ನೂ ಧರ್ಮಕ್ಕೆ ಆರೋಪಿಸಲಾಯಿತು. ಆಧುನಿಕ ಪಾಶ್ಚಾತ್ಯ ಜಗತ್ತಿನಲ್ಲಾದಂತೆ ಕ್ರಮೇಣ ಇತರ ರಾಷ್ಟ್ರಗಳ ರಾಜಕೀಯ ಮತ್ತು ಆರ್ಥಿಕ ವಿದ್ಯಮಾನಗಳಿಂದ ಧರ್ಮವನ್ನು ದೂರವಿಡಲಾಯಿತು. ಜಾತ್ಯತೀತ ಸಿದ್ಧಾಂತ ಧರ್ಮದ ಜಾಗಕ್ಕೆ ಬಂತು. ಭಾರತದಲ್ಲೂ ಸ್ವತಂತ್ರ ಭಾರತದ ಜಾತ್ಯತೀತ ನಾಯಕರು ಸಾರ್ವಜನಿಕ ಕ್ಷೇತ್ರದಿಂದ ಧರ್ಮವನ್ನು ವಜಾಮಾಡಿದರು. ಧರ್ಮ ಎನ್ನುವುದು ಒಂದು ಮಧ್ಯಯುಗೀನ ಪದಾರ್ಥ ಎಂದು ದೂರವಿಟ್ಟರು. ಹೀಗಾದುದಕ್ಕೆ ಕಾರಣ ಧರ್ಮವನ್ನು 'ರಿಲಿಜನ್' ಜೊತೆಗಿರಿಸಿದ್ದರಿಂದ ಉದ್ಭವಿಸಿದ ಗೊಂದಲವೇ ಕಾರಣ. ಇಂಗ್ಲಿಷ್ ಭಾಷಾಂತರ ನಮಗೆ ಮಾಡಿದ ಅನೇಕ ಅಪಾಯಗಳಲ್ಲಿ ಇದು ಅತಿದೊಡ್ಡ ಅಪಾಯ.[೪]

ವಿವೇಚನೆಯಿಲ್ಲದೆ ಎಲ್ಲ ಪಾಶ್ಚಾತ್ಯ ಚಿಂತನ ಕ್ರಮಗಳನ್ನು ಭಾರತದ ರಾಜಕೀಯ ಜೀವನದ ಮೇಲೆ ಹೇರಿದ್ದೇ ಆಧುನಿಕ ಭಾರತದ ಎಲ್ಲ ಸಮಸ್ಯೆಗಳಿಗೆ ಮೂಲಕಾರಣ ಎನ್ನುತ್ತಾರೆ ದೀನದಯಾಳಜೀ. ಪಾಶ್ಚಾತ್ಯ ಚಿಂತನ ಕ್ರಮಗಳಿಂದ ಭಾರತದ ಪ್ರಜ್ಞೆಯ ನೈಜ ಗುಣವನ್ನು ಮಸುಕುಗೊಳಿಸಲಾಯಿತೆಂದೂ ಅವರು ಅಭಿಪ್ರಾಯ ಪಡುತ್ತಾರೆ. ಸ್ವಾತಂತ್ರ್ಯ ಬಂದ ನಂತರ ಭಾರತದಲ್ಲಿ ನಡೆಸಿದ ರಾಜಕಾರಣ ಭಾರತದ ಪ್ರಜ್ಞೆಯನ್ನು ಬಿಂಬಿಸಲಿಲ್ಲ. ಪ್ರತಿಯಾಗಿ ಪಾಶ್ಚಾತ್ಯ ಜಗತ್ತಿನ ಒಂದಲ್ಲ ಒಂದು 'ಇಸಮ್'ಗಳನ್ನು ಬಿಂಬಿಸಿದವು. ಇದರ ಫಲವಾಗಿ ಸಾಮಾಜಿಕ ಸಾಮರಸ್ಯ ಸಾಧನೆಯ ಬದಲು ಭಾರತದ ರಾಷ್ಟ್ರ ಜೀವನವೊಂದು ರಣರಂಗವಾಯಿತು; ಘರ್ಷಣಾತ್ಮಕ ಆರ್ಥಿಕ ಮತ್ತು ರಾಜಕೀಯ ಸಿದ್ಧಾಂತಗಳ ರಣರಂಗವಾಯಿತು.[೫]

ಪಾಶ್ಚಾತ್ಯ ಜಗತ್ತಿನಲ್ಲಿ ಉತ್ಪಾದನೆಯ ಸಾಧನವೇ ಸಾಮಾಜಿಕ ಸಂಗತಿಗಳ ನಿರ್ಧಾರದಲ್ಲಿ ನಿರ್ಣಾಯಕ ಎಂದು ಭಾವಿಸುವವರೇ ಮಾಲೀಕರೂ ವಿತರಕರೂ ಆಗಿರುತ್ತಾರೆ. ಎಲ್ಲ ಗೊಂದಲಗಳಿಗೂ ಅವರೇ ಕಾರಣಕರ್ತರಾಗಿರುತ್ತಾರೆ. ಹಾಗೂ ಖಾಸಗಿ ಮಾಲೀಕತ್ವದಿಂದ ಎಲ್ಲವನ್ನೂ ಸರ್ಕಾರದ ಸ್ವಾಮ್ಯಕ್ಕೆ ತೆಗೆದುಕೊಳ್ಳುವುದರಲ್ಲೆ ಎಲ್ಲ ಸಾಮಾಜಿಕ ರೋಗಗಳನ್ನು ಗುಣಪಡಿಸಬಹುದು ಎಂದು ಭಾವಿಸುತ್ತಾರೆ. ವಿಶ್ವದ ಎಲ್ಲೆಡೆ ಇರುವಂತೆ ಭಾರತದಲ್ಲೂ ರಾಜಕೀಯ ಜೀವನ ಶುದ್ಧಾಂಗ ಆರ್ಥಿಕ ವಾಸ್ತವಿಕತೆಗಳನ್ನು ಆಧರಿಸಿರಬೇಕು. ಧರ್ಮ, ಸಂಸ್ಕೃತಿಗಳು ನಂತರದವು. ಈ ರೀತಿ ಯೋಚಿಸುವ ಜನರೂ ಇದ್ದಾರೆ. ಇವರೇ ಸಮಾಜವಾದಿಗಳು. ಕಮ್ಯುನಿಸ್ಟರು. ರಾಜಕೀಯ ಅಧಿಕಾರವೇ ಅತಿ ಮುಖ್ಯ ಸಂಗತಿ ಎನ್ನುವ ಇನ್ನೊಂದು ವರ್ಗದ ಜನರಿದ್ದಾರೆ. ಈ ವರ್ಗದ ಜನರು ಧರ್ಮ, ಸಂಸ್ಕೃತಿ, ಆರ್ಥಿಕತೆ ಎಲ್ಲವನ್ನೂ ರಾಜಕೀಯದ ತಕ್ಕಡಿಯಲ್ಲೇ ತೂಗುತ್ತಾರೆ. ರಾಜಕೀಯ ಎಣಿಕೆಗಳಿಂದಲೇ ನೋಡುತ್ತಾರೆ. ಇವರಲ್ಲಿ ಹೆಚ್ಚು ಮಂದಿ, ಸರ್ಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು. ಭಾರತದ ರಾಜಕಾರಣ ಮತ್ತು ಆರ್ಥಿಕ ನೀತಿಗಳು ಆಯಾ ಧಾರ್ಮಿಕ ತತ್ವಗಳನ್ನು ಆಧರಿಸಿರಬೇಕೆಂದು ಬಯಸುವ ಧಾರ್ಮಿಕ ಗುಂಪುಗಳೂ ಇವೆ. ಧಾರ್ಮಿಕ ಶಾಸ್ತ್ರಾಂಧರು ಈ ಗುಂಪಿಗೆ ಸೇರಿದವರು. ಭಾರತದ ಜೀವನ ಇರುವುದೇ ಅದರ ನಾಗರಿಕತೆಯಲ್ಲಿ, ಆದ್ದರಿಂದ ಈ ನಾಗರಿಕತೆಯನ್ನು ರಕ್ಷಿಸುವುದು. ಬೆಳೆಸುವುದು ನಮ್ಮ ಮುಖ್ಯ ಕಾಳಜಿಯಾಗಬೇಕು ಎನ್ನುವವರೂ ಇದ್ದಾರೆ. ಭಾರತದ ಸಮಾಜದಲ್ಲಿ ಇವರ ಸಂಖ್ಯೆಯೇ ಹೆಚ್ಚು. ಇವರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದವರೇ ಜಾಸ್ತಿ. ಕೆಲವರು ಕಾಂಗ್ರಸ್ಸಿಗರೂ ಇದ್ದಾರೆನ್ನಿ.[೬]

ಅಥವಾ ಬೇರೆ ರೀತಿಯಲ್ಲಿ ಹೇಳುವುದಾದರೆ, ಮೂರು ಮುಖ್ಯ ಗುಂಪುಗಳಿವೆ. ಒಂದು. ಏಕರೂಪದ ನಾಗರಿಕತೆಯನ್ನು ಪ್ರತಿಪಾದಿಸುವ ಗುಂಪು; ಎರಡನೆಯದು ಎರಡು ನಾಗರಿಕತೆಗಳನ್ನು ಪ್ರತಿಪಾದಿಸುವ ಗುಂಪು; ಮೂರನೆಯದು



ಬಹುನಾಗರಿಕತೆಗಳನ್ನು ಪ್ರತಿಪಾದಿಸುವ ಗುಂಪು.

ಮೊದಲನೆಯ ಗುಂಪಿನ ನಂಬಿಕೆ ಪ್ರಕಾರ ಭಾರತದಲ್ಲಿರುವುದು ಒಂದೇ ನಾಗರಿಕತೆ. ಭಾರತದಲ್ಲಿ ಬೇರೆ ಯಾವುದೇ ರೂಪದ ನಾಗರಿಕತೆ ಇರುವುದನ್ನು ಈ ಗುಂಪು ಒಪ್ಪಿಕೊಳ್ಳುವುದಿಲ್ಲ. ಅಂಥ ಇನ್ನೊಂದು ನಾಗರಿಕತೆ ಇದ್ದಲ್ಲಿ ಅವರನ್ನು ಪ್ರಧಾನ ನಾಗರಿಕತೆಯಲ್ಲಿ ವಿಲೀನಗೊಳಿಸಬೇಕೆಂಬುದು ಇವರ ನಂಬಿಕೆ. ಈ ದೃಷ್ಟಿಕೋನವನ್ನು ಪ್ರತಿಪಾದಿಸುತ್ತಿರುವುದು ರಾಷ್ಟ್ರೀಯ ಸ್ವಯಂಸೇವಕ ಸಂಘ. ಎರಡು ನಾಗರಿಕತೆಗಳನ್ನು ಪ್ರತಿಪಾದಿಸುವವವರು ಮುಸ್ಲಿಂಲೀಗ್ ಹೇಳುವಂತೆ, ಹಿಂದೂಗಳು ಮತ್ತು ಮುಸ್ಲಿಮರು ಎರಡು ಪ್ರತ್ಯೇಕ ನಾಗರಿಕತೆಗಳೆಂದು ಸ್ಪಷ್ಟವಾಗಿ, ಮುಚ್ಚುಮರೆಯಿಲ್ಲದೆ ಹೇಳುತ್ತಾರೆ. ಕಾಂಗ್ರೆಸ್ಸಿನಲ್ಲಿರುವಂತೆ ಇನ್ನು ಕೆಲವರು ಬಹಿರಂಗವಾಗಿ ಈ ವಾದವನ್ನು ತಿರಸ್ಕರಿಸುತ್ತಾರೆ. ಆದರೆ ವ್ಯಾವಹಾರಿಕವಾಗಿ ರಾಜಿಮಾಡಿಕೊಳ್ಳುತ್ತಾರೆ. ಇಬ್ಬರೂ ಬೇರೆ ಬೇರೆ ನಾಗರಿಕತೆಗೆ ಸೇರಿದವರು ಎನ್ನುವ ತಮ್ಮ ನಂಬಿಕೆಯನ್ನೇ ಹುಸಿಗೊಳಿಸುತ್ತಾರೆ. ಮೂರನೆಯ ವರ್ಗವೆಂದರೆ, ಭಾರತ 'ಬಹು ನಾಗರಿಕತೆಯ' ರಾಷ್ಟ್ರ ಎನ್ನುವವರು. ಹೀಗೆ ಹೇಳುವವರು ಬೇರೆ ಬೇರೆ ಧರ್ಮಗಳಿಗೆ ಸರಿದವರು. ಸ್ವಯಂ ನಿರ್ಧಾರದ ಹಕ್ಕಿನ ಪ್ರತಿಪಾದಕರು. ತಾವು ಸ್ವಯಮಾಧಿಕಾರವುಳ್ಳವರು ಎನ್ನುವುದರಲ್ಲೇ ತೃಪ್ತರು ಇವರು. ಕಮ್ಯುನಿಸ್ಟರು ಹಾಗೂ ಭಾಷಾಧಾರಿತ ಪ್ರದೇಶವಾದಿಗಳು ಈ ಗುಂಪಿನಲ್ಲಿ ಸೇರಿತ್ತಾರೆ. ಕಮ್ಯುನಿಸ್ಟರ ದೃಷ್ಟಿಯಲ್ಲಿ ಆರ್ಥಿಕ ಹಾಗೂ ಐಹಿಕ ವಿಚಾರಗಳೇ ಮುಖ್ಯ. ನಾಗರಿಕತೆ ತರುವ ವಾಸ್ತವಿಕ ಏಕತೆ ಮುಖ್ಯವಲ್ಲ. ಭಾರತದಲ್ಲಿ ಎರಡು ಅಥವಾ ಮೂರು ನಾಗರಿಕತೆಗಳಿವೆ ಎಂದು ನಂಬುವವರದು ತಪ್ಪು ತಿಳುವಳಿಕೆ ಎನ್ನುವುದು ಸ್ಪಷ್ಟ. ಆದರೆ ಭಾರತದಲ್ಲಿರುವುದು ರಾಷ್ಟ್ರೀಯತೆಯಿಂದ ಪೋಷಿತವಾಗಿರುವ ಒಂದೇ ಒಂದು ನಾಗರಿಕತೆ ಎಂದು ನಂಬಿರುವವರು ಅದರ ಗುಣಲಕ್ಷಣಗಳ ಬಗ್ಗೆ ತಪ್ಪು ತಿಳುವಳಿಕೆಯುಳ್ಳವರಾಗಿದ್ದಾರೆ. ಆದ್ದರಿಂದ, ನಾಗರಿಕತೆ ಎಂದರೇನು?[೭] ಅದರ ಗುಣಲಕ್ಷಣಗಳೇನು ಎನ್ನುವ ಪ್ರಶ್ನೆ ಮತ್ತೆ ನಮ್ಮನ್ನು ಕಾಡುತ್ತದೆ.

ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಪ್ರಶ್ನೆಯನ್ನು ಎತ್ತಿಕೊಳ್ಳುವ ಮೂಲಕ ದೀನದಯಾಳ ಉಪಾಧ್ಯಾಯರು ಭೂಮಿಕೆಯನ್ನು ಮತ್ತಷ್ಟು ಸ್ಪಷ್ಟಗೊಳಿಸುತ್ತಾರೆ. ಈ ಪ್ರಶ್ನೆಯೊಂದಿಗೆ ಭಾರತದ ಭವಿಷ್ಯ ತಳುಕು ಹಾಕಿಕೊಂಡಿದೆ ಹಾಗೂ ಮಾನವಕುಲಕ್ಕೆ ಭಾರತದ ಕೊಡುಗೆಯೊಂದಿಗೆ ಈ ಭವಿಷ್ಯ ತಳುಕು ಹಾಕಿಕೊಂಡಿದೆ ಎನ್ನುತ್ತಾರೆ ಉಪಾಧ್ಯಾಯರು. ಈ ಪ್ರಶ್ನೆಗೆ ಉತ್ತರ ಹುಡುಕುವ ಮೊದಲು, ಭಾರತೀಯ ಮನಸ್ಸಿನಲ್ಲಿ 'ರಾಷ್ಟ್ರ' ಮತ್ತು 'ರಾಷ್ಟ್ರೀಯತೆ' ಇರುವ ಅನೇಕ ದೋಷಪೂರ್ಣವಾದ ತಪ್ಪು ಕಲ್ಪನೆಗಳನ್ನು ನಿವಾರಿಸಬೇಕಾಗಿದೆ. ರಾಷ್ಟ್ರ ಎನ್ನುವುದು ಒಂದು ರಾಜಕೀಯ ಪರಿಕಲ್ಪನೆಯಷ್ಟೇ ಅಲ್ಲ, ಪ್ರಾದೇಶಿಕ ಪರಿಕಲ್ಪನೆಗಿಂತ ಕಿರಿದಾದ, ಬದಲಾಗಬಹುದಾದ

ಮನೋಕಲ್ಪನೆಯಲ್ಲ. ರಾಷ್ಟ್ರ ಎನ್ನುವುದು ಐತಿಹಾಸಿಕವಾಗಿ ಒಟ್ಟಿಗೆ ಬದುಕಿದ ಜನರ ಕ್ರೋಢೀಕರಣವಲ್ಲ ಅಥವಾ ಆ ಜನರೂ ಭೌಗೋಳಿಕ ಪ್ರದೇಶದಲ್ಲಿ ವಾಸಮಾಡುತ್ತಿರುವ ಜನಸಂಚಯವಲ್ಲ ಅಥವಾ ರಾಷ್ಟ್ರ ಎನ್ನುವುದು ಒಂದು ಭೌಗೋಳಿಕ ಪ್ರದೇಶವೂ ಅಲ್ಲ. ರಾಷ್ಟ್ರ ಯಾವುದೆ ರೀತಿಯ ಸಾಮಾಜಿಕ ಕರಾರಿನಿಂದ ಜನಿಸಿಲ್ಲ ಅಥವಾ ಕರಾರೊಂದನ್ನು ರದ್ದುಗೊಳಿಸಿದಾಗ ಅದು ನಾಶವಾಗುವುದೂ ಇಲ್ಲ. ರಾಷ್ಟ್ರ ಅಗಾಧವಾದ ಜೀವಶಕ್ತಿಯಿಂದ ಹುಟ್ಟುತ್ತದೆ. ಅದು ಸ್ವಯಂಭು. ರಾಷ್ಟ್ರಕ್ಕೆ ಐತಿಹಾಸಿಕ ಬೆಳವಣಿಗೆ ಇದೆ ಎನ್ನುವುದು ಸರಿ ಆದರೆ ಚರಿತ್ರೆಯೊಂದರಿಂದಲೇ ರಾಷ್ಟ್ರವನ್ನು ವಿವರಿಸಲಾಗುವುದಿಲ್ಲ. ಭಾಷೆ, ಸಂಸ್ಕೃತಿ, ಸಾಹಿತ್ಯ ಇವೆಲ್ಲವೂ ನಿಸ್ಸಂಶಯವಾಗಿ ರಾಷ್ಟ್ರದ ಏಕತೆಯ ಮೂಲದ್ರವ್ಯಗಳು. ಈ ದ್ರವ್ಯಗಳು ರಾಷ್ಟ್ರವೊಂದಕ್ಕೆ ಜೀವಕೊಡಬಹುದಾದ ಇನ್ನೂ ಮೂಲಭೂತ ಅಂಶವಾದ ಆತ್ಮ ಅಥವಾ ಸ್ವಪ್ರಜ್ಞೆಯನ್ನು ಕೊಡುವುದರಿಂದ ಮೂಲಾಧಾರವಾದವುಗಳು. ಇವೆಲ್ಲ ರಾಷ್ಟ್ರದ ಗುಣಗಳು, ಕಾರಣಗಳಲ್ಲ. ಗುಣಗಳನ್ನು ಕಾರಣಗಳೊಂದಿಗೆ ಗೊಂದಲಗೊಳಿಸಿಕೊಂಡಿರುವ ಪಾಶ್ಚಾತ್ಯ ಚಿಂತಕರು, ಈ ಗುಣಗಳನ್ನು ಒಂದುಗೂಡಿಸುವ ಮೂಲಕ ರಾಷ್ಟ್ರವನ್ನು ಸೃಷ್ಟಿಸಬಹುದೆಂದು ನಂಬಿದ್ದಾರೆ. ಹಾಗೆ ಮಾಡಲು ಸಾಧ್ಯವಿಲ್ಲ. ಏಕೆಂದರೆ ರಾಷ್ಟ್ರೀಯ ಜೀವನದ ಸಮಾನ ಅಂಶಗಳು, ದ್ರವ್ಯಗಳು ಅಂತರ್ಗತ ಪ್ರಜ್ಞಾವಂತಿಕೆಯ ಅಭಿವ್ಯಕ್ತಿಗಳಷ್ಟೆ. ಪ್ರಜ್ಞಾವಂತಿಕೆ ಕೆಲಸಮಾಡುವಾಗಿನ ಅಭಿವ್ಯಕ್ತಿಗಳು. ರಾಜಕೀಯ ಮಾರ್ಗ, ಸಾಧನಗಳ ಮೂಲಕ ಅವುಗಳನ್ನು ಕೃತಕವಾಗಿ ಸೃಷ್ಟಿಸಲಾಗದು. ಪ್ರತಿ ರಾಷ್ಟ್ರಕ್ಕೂ ಅದರದೇ ಆದ ಅನನ್ಯವೂ ಅಸಾಧಾರಣವೂ ಆದ ಸ್ವಪ್ರಜ್ಞೆ ಇರುತ್ತದೆ. ಈ ಸ್ವಪ್ರಜ್ಞೆಯೇ ಇತರರಿಂದ ರಾಷ್ಟ್ರವನ್ನು ಭಿನ್ನವಾಗಿಸುವುದು. ಎಲ್ಲಿಯವರೆಗೆ ರಾಷ್ಟ್ರದ ಆತ್ಮವಾದ ಸ್ವಪ್ರಜ್ಞೆ ಜೀವಂತವಾಗಿರುವುದೋ ಅಲ್ಲಿಯವರೆಗೆ ರಾಷ್ಟ್ರವೂ ಜೀವಂತ ಬದುಕುತ್ತಿರುತ್ತದೆ. ಅದು ಮರಣಹೊಂದಿದಾಗ, ರಾಷ್ಟ್ರವೂ ಸಾಯುತ್ತದೆ. ರಾಷ್ಟ್ರವೊಂದು ಭೂಪ್ರದೇಶವನ್ನು ಕಳೆದುಕೊಳ್ಳುವುದರಿಂದ ಸಾಯುವುದಿಲ್ಲ. ಅಥವಾ ಜನಸಂಖ್ಯೆ ಇಳಿಮುಖವಾಗುವುದರಿಂದ ಸಾಯುವುದಿಲ್ಲ. ರಾಷ್ಟ್ರವೊಂದರ ಸ್ವಪ್ರಜ್ಞೆ ಅಸ್ತಿತ್ವ ಕಳೆದುಕೊಂಡಾಗ ಆ ರಾಷ್ಟ್ರ ಗತಿಸುತ್ತದೆ.[೮]

ಯೂರೋಪಿನಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ ಹೇಗೆ ಒಂದು ರಾಷ್ಟ್ರದ ವಿರುದ್ಧ ಮತ್ತೊಂದರ ಆಕ್ರಮಣಕ್ಕೆ ಕಾರಣವಾಯಿತೆಂಬುದನ್ನೂ ಹೇಳಿದ್ದಾರೆ. ಅದು ಅನಿವಾರ್ಯವಾಗಿತ್ತು. ಈ ಸಂಬಂಧ ಪಾಶ್ಚಾತ್ಯ ರಾಷ್ಟ್ರಗಳ ಉಭಯ ಸಂಕಟ, ಸಂದಿಗ್ಧತೆಗಳನ್ನೂ ಅವರು ಹೇಳಿದ್ದಾರೆ. ಅವರು ತಮ್ಮ ಮನಸ್ಸಿನೊಳಗಿಂದ ತಮ್ಮ ವಿರೋಧಿಗಳು ಮತ್ತು ಶತ್ರುಗಳನ್ನು ಕುರಿತ ಯೋಚನೆಗಳನ್ನು ತೆಗೆದು ಹಾಕಿದಲ್ಲಿ ಅವರೇ ಇಲ್ಲವಾಗಿ ಬಿಡುತ್ತಾರೆ. ಅಸ್ತಿತ್ವ ಕಳೆದುಕೊಳ್ಳುತ್ತಾರೆ. ಏಕೆಂದರೆ ಅವರ ರಾಷ್ಟ್ರೀಯ ಏಕತೆಯ ಬುನಾದಿಯೇ ನಾಶವಾಗಿರುತ್ತದೆ. ಆದರೆ ಹಗೆತನ, ಘರ್ಷಣೆಗಳ



ಮೂಲತತ್ವಗಳೇ ಅವರ ಅಸ್ತಿತ್ವದ ಆಧಾರವಾಗಿ, ಈ ಆಧಾರದ ಮೇಲೆಯೇ ಅವರು ಬಾಳ್ವೆನಡೆಸಿದಲ್ಲಿ ಅವರ ಮಾನವನ ಏಕತೆ, ಶಾಂತಿಯ ಘೋಷಣೆಗಳ ಏನಾಗುತ್ತವೆ? ಮಾನವನ ಏಕತೆ, ಶಾಂತಿಯ ಘೋಷಣೆಗಳು ಸಾಧನೆ ಶೂನ್ಯವಾಗುತ್ತದೆಯಷ್ಟೆ. ಈ ಸಂದಿಗ್ಧತೆ, ಉಭಯ ಸಂಕಟಗಳು ಪಾಶ್ಚಾತ್ಯ ರಾಷ್ಟ್ರೀಯತೆಯ ನೇತ್ಯಾತ್ಮಕ ದೃಷ್ಟಿಕೋನದಿಂದ ಉದ್ಭವಿಸಿದೆಯೆಂದು ಉಪಾಧ್ಯಾಯರು ವಾದಿಸುತ್ತಾರೆ. ಈ ನೇತ್ಯಾತ್ಮಕ ದೃಷ್ಟಿಕೋನವೇ, ಮಾನವ ಜೀವಿತ ಅವಿರತವಾಗಿ ಸಂಘರ್ಷಗಳಿಂದ ಕೂಡಿದ್ದು ಎನ್ನುವ ಪಾಶ್ಚಾತ್ಯ ಅಭಿಪ್ರಾಯಕ್ಕೆ ಕಾರಣ. ಮಾನವ ಜೀವಿತದಲ್ಲಿ ಪ್ರತಿಯೊಬ್ಬರೂ ಮತ್ತೊಬ್ಬರ ವಿರುದ್ಧ ಘರ್ಷಣೆಯಲ್ಲಿ ತೊಡಗಿರುತ್ತಾರೆ. ಮಾನವರು ಪರಸ್ಪರ ವಿರೋಧಿಗಳು ಎಂದು ಪಾಶ್ಚಾತ್ಯ ಚಿಂತಕರ ಗ್ರಹಿಕೆ. ಮಾನವ ಜೀವಿತದಲ್ಲಿ ಘರ್ಷಣೆಯ ಪ್ರವೃತ್ತಿಯ ಶಕ್ತಿಗಳು ಒಂದುಗೂಡಿದಾಗ ಹೊಸದೊಂದು ಶಕ್ತಿಕೂಟ ಹುಟ್ಟಿಕೊಳ್ಳುತ್ತದೆ. ತನಗಿಂತ ಬಲವಾದ ಅಧಿಕಾರ ಶಕ್ತಿಯ ವಿರುದ್ಧ ಹೋರಾಟ ಇದರ ಗುರಿಯಾಗಿರುತ್ತದೆ. ಈ ದೃಷ್ಟಿಕೋನದಿಂದಲೇ ಡಾರ್ವಿನ್ ಜೀವಶಾಸ್ತ್ರವನ್ನು ಗ್ರಹಿಸಿದ್ದು, ಹೆಗಲ್ ತತ್ತ್ವಶಾಸ್ತ್ರವನ್ನು, ಮಾರ್ಕ್ಸ್ ಇತಿಹಾಸವನ್ನು ಗ್ರಹಿಸಿದ್ದು ಹೀಗೆಯೇ ಎನ್ನುತ್ತಾರೆ ಉಪಾಧ್ಯಾಯರು. ಹಿಟ್ಲರನ ನಾಜಿಸಿದ್ಧಾಂತವಾಗಿ ರೂಪಾಂತರಗೊಂಡ ನೀಷೆಯ ವಿಚಾರಧಾರೆಯ ಮೂಲವೂ ಇದೇ ಆಗಿದೆ. ಸಂಘರ್ಷ ಮತ್ತು ಸ್ಪರ್ಧೆ ಬದುಕಿನ ಅಪರಿವರ್ತನೀಯವಾದ ಸತ್ಯಗಳು, ವೈಜ್ಞಾನಿಕ ಸಂಗತಿಗಳು ಎನ್ನುವುದು ಬಂಡವಾಳಶಾಹಿ ಆರ್ಥಿಕ ಸಿದ್ಧಾಂತದ ಗ್ರಹಿಕೆ. ಸಮಾಜವಾದ ಸಂಘಟಿತವಾದ ಸುವ್ಯವಸ್ಥಿತವಾದ ರೂಪಗಳಲ್ಲಿ ಘರ್ಷಣೆಯನ್ನು ಕಾಣುತ್ತದೆ. ಎಂದೇ ಒಂದು ನಿರ್ದಿಷ್ಟ ವರ್ಗವನ್ನು ನಿರ್ಮೂಲಗೊಳಿಸುವ ಮೂಲಕ ವರ್ಗರಹಿತ ಸಮಾಜವನ್ನು ಸ್ಥಾಪಿಸಬೇಕೆಂದು ಸಮಾಜವಾದಿಗಳು ಪ್ರತಿಪಾದಿಸುತ್ತಾರೆ. ಇವರೆಲ್ಲರೂ ರಾಷ್ಟ್ರವನ್ನು 'ಒಂದು ಉಪಯುಕ್ತ ಸಾಧನ'ವೆಂದು ಇಲ್ಲವೆ ಅಡಚಣೆಯೆಂದು ಭಾವಿಸುತ್ತಾರೆ. ರಾಷ್ಟ್ರೀಯತೆ ತಮ್ಮ ಹೋರಾಟಕ್ಕೆ ಸಹಾಯಕವಾಗುವುದರಿಂದ ರಾಷ್ಟ್ರೀಯವಾದಿಗಳು ಅದನ್ನೊಂದು ಉಪಯುಕ್ತ ಸಾಧನವಾಗಿ ಕಾಣುತ್ತಾರೆ. ತಮ್ಮ ಹೋರಾಟಕ್ಕೆ ತೀವ್ರ ಪ್ರತಿರೋಧ ವ್ಯಕ್ತಪಡಿಸುತ್ತದೆ, ತೀವ್ರ ತಡೆ ಒಡ್ಡುತ್ತದೆ ಎನ್ನುವ ಕಾರಣದಿಂದ ರಾಷ್ಟ್ರೀಯತೆಯನ್ನು ವಿರೋಧಿಸುವವರಿಗೆ ಅದೊಂದು ಅಡಚಣೆಯಾಗಿ ಕಾಣುತ್ತದೆ.[೯]

ಪಾಶ್ಚಾತ್ಯ ಚಿಂತಕರು ಬಯಸುವ ಪ್ರೀತಿ–ಸಹಕಾರ ಮತ್ತು ಏಕತೆಗಳಿಗೂ ಮೇಲೆ ಹೇಳಿದ ಜೀವನ ತತ್ವಕ್ಕೂ ಸಾಮರಸ್ಯವಿಲ್ಲ. ಸಂಘರ್ಷ ತತ್ವಗಳಿಗೆ ಪ್ರಾಮುಖ್ಯ ನೀಡುವ ತತ್ವದರ್ಶನದ ಆಧಾರದ ಮೇಲೆ ಘರ್ಷಣೆ ಮುಕ್ತ ಸಮಾಜವನ್ನು ಸೃಷ್ಟಿಸಲಾಗದು. ಏಕೆಂದರೆ, ಮನುಷ್ಯನ ಸ್ವಭಾವವೇ ಘರ್ಷಣೆ ಮೂಲವಾಗಿದ್ದಲ್ಲಿ ಅಥವಾ ಬದುಕಿನ ಬೇರುಗಳೇ ಘರ್ಷಣೆ ಮೂಲದ್ದಾಗಿದ್ದಲ್ಲಿ ಏನನ್ನೂ ಮಾಡಲಾಗದು.

ಇತರರನ್ನು ಅಧೀನರನ್ನಾಗಿಸುವ ಮೂಲಕವೇ ತಾನು ಬದುಕಬೇಕು ಎನ್ನುವುದೇ ಮನುಷ್ಯನ ಪ್ರತಿಪ್ರವೃತ್ತಿಯೂ ಆಗಿದ್ದಲ್ಲಿ ಏನುಮಾಡಲಾದೀತು? ಘರ್ಷಣೆ ಮೂಲವಾದ ಮನಸ್ಸು, ಸ್ವಭಾವಗಳು ಮತ್ತು ಇನ್ನೊಬ್ಬನನ್ನು ತುಳಿದೇ ತಾನು ಬದುಕಬೇಕು ಎನ್ನುವ ಪ್ರವೃತ್ತಿಗಳು ಇರುವಾಗ ಪ್ರೀತಿ–ತ್ಯಾಗ–ಸಹಬಾಳ್ವೆಗಳು ಹೇಗೆ ಸಾಧ್ಯವಾದೀತು? ಇಂಥವರಿಗೆ ಪ್ರೀತಿ, ತ್ಯಾಗಗಳನ್ನು ಬೋಧಿಸುವುದು ಸಾಧ್ಯವಿಲ್ಲ. ಪ್ರೀತಿ–ತ್ಯಾಗಗಳು ಅನಿವಾರ್ಯವಾದಾಗ ಅದನ್ನು ಸಂದರ್ಭಾನುಸಾರ ಮಾಡುತ್ತಾನೆಯೇ ಹೊರತು ತನ್ನ ಸಹಜ ಪ್ರವೃತ್ತಿಯಾಗಿ ಅಲ್ಲ. ತನ್ನೊಳಗಣ ಒಲವಿನಿಂದಲ್ಲ. ಪ್ರಪಂಚ ನಾಶವಾಗುವುದನ್ನು ತಪ್ಪಿಸಬೇಕಾದಲ್ಲಿ ಇಂಥ ಜೀವನ ತತ್ತ್ವ ದರ್ಶನವನ್ನು ಬದಲಾಯಿಸಬೇಕು. ಏಕೆಂದರೆ ಇಡೀ ಸೃಷ್ಟಿ ಸಾಮರಸ್ಯದ ಮೇಲೆ ನಿಂತಿಯೇ ವಿನಃ ಘರ್ಷಣೆಯ ಮೇಲಲ್ಲ. ಬ್ರಹ್ಮಾಂಡದಲ್ಲಿ ಹಾಗೂ ಮಾನವ ಪ್ರಜ್ಞೆಯಲ್ಲಿ ಯಾವುದಾದರೂ ಶಕ್ತಿ ಕಾರ್ಯಪ್ರವೃತ್ತವಾಗಿದ್ದಲ್ಲಿ ಅದು ಸೃಜನಶೀಲವಾದ, ಏಕೀಕೃತವಾದ ಇತ್ಯಾತ್ಮಕವಾದ, ಜೀವ ಪರವಾದ, ಏಕೀಕೃತವಾದ ಇತ್ಯಾತ್ಮಕ ವಾದ, ಜೀವ ಪರವಾದ ಶಕ್ತಿಯಾಗಿರುತ್ತದೆಯೇ ವಿನಃ ವಿನಾಶಕಾರಿಯಾಗಿರುವುದಿಲ್ಲ, ವಿಭಜನಕಾರಿಯಾಗಿರುವುದಿಲ್ಲ.[೧೦]

ರಾಷ್ಟ್ರ ಮತ್ತು ರಾಷ್ಟ್ರೀಯತೆ ಕುರಿತ ಸಾಂಪ್ರದಾಯಕ ಭಾರತೀಯ ದೃಷ್ಟಿಕೋನ ವಿಶ್ವದೃಷ್ಟಿಯಿಂದ ಮೂಡಿಬಂದದ್ದು. ಈ ವಿಶ್ವದೃಷ್ಟಿ ಸೃಷ್ಟಿ ಸಾಮರಸ್ಯಕ್ಕೆ ಸಂಬಂಧಿಸಿದ್ದು, ಪ್ರತಿಯೊಂದೂ ಮತ್ತೊಂದರೊಂದಿಗೆ ಸಂಕಲಿತವಾಗಿದೆ ಎನ್ನುವ ದೃಷ್ಟಿಕೋನವಿದು. ಅನನ್ಯವಾದ ಅಸ್ತಿತ್ವವುಳ್ಳ ವ್ಯಕ್ತಿ ತನ್ನ ನ್ಯಾಯಬದ್ಧವಾದ ಸ್ವಹಿತಾಸಕ್ತಿ ರಕ್ಷಣ, ಸುಖ–ಸಂತೋಷಗಳ ಅರಸುವಿಕೆ ಮೊದಲಾದ ಕಾರ್ಯಗಳಿಂದ ಸಮಾಜ ಜೀವನದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಸಮಾಜ ಜೀವನ ಇನ್ನೂ ಬೃಹತ್ತಾದ, ವಿಸ್ತೃತವಾದ ರಾಷ್ಟ್ರಜೀವನದಿಂದ ತನ್ನ ಅರ್ಥವನ್ನು ಪಡೆದುಕೊಳ್ಳುತ್ತದೆ. ಅಂದರೆ ಹೆಚ್ಚು ವ್ಯಾಪಕವಾದ ರಾಷ್ಟ್ರಜೀವನದಿಂದ ಸಾಮಾಜಿಕ ಜೀವನಕ್ಕೆ ಒಂದು ಅರ್ಥ ಪ್ರಾಪ್ತವಾಗುತ್ತದೆ. ಇನ್ನು ರಾಷ್ಟ್ರ ಮಾನವ ಕುಲದ ವಿಶ್ವವ್ಯಾಪಿ ಹಿತಾಸಕ್ತಿಗಳನ್ನು ಈಡೇರಿಸುವುದರಲ್ಲಿ ತನ್ನ ಅಂತಿಮ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ. ಬದುಕಿನ ಈ ಎಲ್ಲ ಘಟಕಗಳೂ ಪರಸ್ಪರ ಸಂಬಂಧಹೊಂದಿರುತ್ತವೆ. ಈ ಪರಸ್ಪರ ಸಂಬಂಧ ಶ್ರೇಣೀಕೃತವಲ್ಲ. ಇದು ಸಹಜವಾದದ್ದು, ಸ್ವಾಭಾವಿಕವಾದದ್ದು ಹಾಗೂ ಅನುಲ್ಲಂಘನೀಯವಾದದ್ದು. ಇವೆಲ್ಲ ಬದುಕಿನ ಬಗೆಗಿನ ಗೌರವಾದರಗಳಿಂದ ಪವಿತ್ರ ಭಾವನೆಯಿಂದ ಏಕಕಾಲದಲ್ಲಿ ಘಟಿಸುತ್ತಿರುವ ಸಂಬಂಧಗಳು. ಇಲ್ಲಿ ನಿಯಮವಿದೆ. ಆದರೆ ಅದು ವಿಶ್ವದ ಮೇಲೆ ಪ್ರಭುತ್ವ ಸಾಧಿಸುವ ಸ್ಪರ್ಧೆಯ ಅಥವಾ ಘರ್ಷಣೆಯ ನಿಯಮವಲ್ಲ. ಸಹಕಾರ, ಸಮನ್ವಯ, ಆಖ್ಯೆರಾಗಿ ತನ್ನ ಮೇಲೆ ಹತೋಟಿ ಸಾಧಿಸುವ, ಸ್ವಯಂ ಪ್ರಭುತ್ವ ನಿಯಂತ್ರಣ ಸಾಧಿಸಬೇಕೆನ್ನುವ ನಿಯಮವಿದೆ. ಮಾನವನ ಸಂತೋಷ ಸಾಧನೆಗೆ



ಮೊದಲನೆಯ ನಿಯಮವೆಂದರೆ ಸ್ವಯಂಪ್ರಭುತ್ವ, ಸ್ವಯಂಪರಿಣತಿ.[೧೧]

ಉಪಾಧ್ಯಾಯರ ಪ್ರಕಾರ ಇವೆಲ್ಲ ಸಾಂಪ್ರದಾಯಿಕ ಭಾರತೀಯ ರಾಷ್ಟ್ರ ಜೀವನದ ಆದರ್ಶಗಳು. ಇವು ಮೂಲಾಧಾರ ಜೀವಶಕ್ತಿಯಾದ ಭಾರತೀಯ ಪ್ರಜ್ಞೆ, ಆತ್ಮ ಮತ್ತು ಅಸ್ತಿತ್ವದ ಉದ್ದೇಶಗಳನ್ನೊಳಗೊಂಡಿವೆ. ನಾಗರಿಕ ಜೀವನದ ಪೋಷಕಶಕ್ತಿಯಾದ ಧರ್ಮದಲ್ಲಿ ಪ್ರಜ್ಞೆ ಸ್ಪಷ್ಟವಾಗಿ ಸ್ವಯಂ ಪ್ರಕಾಶಿತ. ಪ್ರಜ್ಞೆ ಖಚಿತವಾಗಿ ಧರ್ಮದಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ. ಧರ್ಮ ಪ್ರಮುಖ ಅಂತಃಪ್ರೇರಣೆ, ಭಾರತೀಯ ನಾಗರಿಕತೆಯ ಉಸಿರು. ಶತಶತಮಾನಗಳಿಂದ ತನ್ನ ಅಸಂಖ್ಯಾತದ ವ್ಯತ್ಯಯಗಳ ಅಸ್ತಿತ್ವದ ಮುಖೇನ ಭಾರತ ತನ್ನೆದುರು ಒಂದು ಮಹಾನ್ ಆದರ್ಶವನ್ನು ಹೊಂದಿದೆ. ಅದು ಬದುಕಿನ ವೈವಿಧ್ಯಮಯ ಸಾಕ್ಷಾತ್ಕಾರವನ್ನು ಗೌರವಪೂರ್ವಕ ಸ್ವೀಕಾರ. ತನ್ನೆಲ್ಲ ವಿವಿಧತೆಗಳಲ್ಲಿ ವೈವಿಧ್ಯರೂಪಗಳಲ್ಲಿ ಪ್ರಕಟಗೊಳ್ಳುವ ಬದುಕನ್ನು ಗೌರವದಿಂದ ಒಪ್ಪಿಕೊಳ್ಳಬೇಕೆನ್ನುವುದೇ ಆದರ್ಶ.

ದೀನ್ ದಯಾಳ್ ಉಪಾಧ್ಯಾಯರು ತಮ್ಮ ಮೂರು ಕೃತಿಗಳಲ್ಲಿ ಧರ್ಮ ಅಂದರೆ ಏನಲ್ಲ ಎನ್ನುವುದನ್ನು ಮೊದಲು ಹೇಳಿದ ನಂತರ ಧರ್ಮ ಎಂದರೇನು ಎನ್ನುವ ಜಿಜ್ಞಾಸೆಯನ್ನು ಎತ್ತಿಕೊಳ್ಳುತ್ತಾರೆ. ಅನಂತರ ಇಂದಿನ ಭಾರತದ ಸಮಸ್ಯೆಗಳಿಗೆ ಧರ್ಮವನ್ನು ಅನ್ವಯಿಸಿ ನೋಡುತ್ತಾರೆ. ಯಾವಶಕ್ತಿ ಪೋಷಿಸುವುದೋ, ಯಾವ ಶಕ್ತಿ ನಮಗೆ ಬೆಂಬಲವಾಗಿ ನಿಲ್ಲುವುದೋ ಅದೇ ಧರ್ಮ ಎನ್ನುವ ಪ್ರಾಚೀನ ಅರ್ಥವಿವರಣೆಯನ್ನು ಅವರು ಸ್ಮರಿಸಿಕೊಳ್ಳುತ್ತಾರೆ. ಈ ಗುಣಲಕ್ಷಣಗಳನ್ನೊಳಗೊಂಡದ್ದೆಲ್ಲವೂ ಧರ್ಮ. ಸ್ವಾತಂತ್ರ್ಯೋತ್ತರ ಭಾರತ ಅಂಗೀಕರಿಸಿರುವ ಕಾನೂನು ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಈ ಗುಣಲಕ್ಷಣವಿದ್ದಲ್ಲಿ. ಅವುಗಳಲ್ಲಿ ಸೃಜನಾತ್ಮಕ ನೈತಿಕ ಶಕ್ತಿ ಇದ್ದಲ್ಲಿ ಅದು ಧರ್ಮವಾಗುತ್ತದೆ. ಸರ್ಕಾರ ರಾಷ್ಟ್ರದ ಸಲುವಾಗಿದೆಯೇ ಹೊರತು ಸರ್ಕಾರದ ಸಲುವಾಗಿ ರಾಷ್ಟ್ರವಿಲ್ಲ ಎನ್ನುವುದನ್ನು ಅವರು ಸಮರ್ಥನೀಯವಾಗಿ ಹೇಳುತ್ತಾರೆ. ಇದೇ ರೀತಿ ರಾಷ್ಟ್ರ ರಾಜಕೀಯ ಗುರಿಗಳನ್ನು ಈಡೇರಿಸುವ ಒಂದು ಸಾಧನವಲ್ಲ. ರಾಷ್ಟ್ರವನ್ನು ಬಲಪಡಿಸುವುದೊಂದೇ ನೀತಿಗಳ ಗುರಿಯಾಗಬೇಕು ಹಾಗೂ ನೀತಿಗಳು ರಾಷ್ಟ್ರದ ಗಾಢವಾದ ಸ್ವಪ್ರಜ್ಞೆಯನ್ನು, ಅದರ ಅಸ್ತಿತ್ವದ ಉದ್ದೇಶವನ್ನು ವ್ಯಕ್ತಗೊಳಿಸಬೇಕು. ಯಾರು ಆಳಬೇಕೆಂಬುದನ್ನು ಜನ ನಿರ್ಧರಿಸುತ್ತಾರೆ. ಆದರೆ ಆಡಳಿತದ ತತ್ತ್ವಗಳೇನೆಂಬುದನ್ನು ಚುನಾಯಿಸುವ ಜನರಾಗಲೀ, ಚುನಾಯಿತ ಸರ್ಕಾರವಾಗಲೀ ನಿರ್ಧರಿಸುವುದಿಲ್ಲ. ಧರ್ಮ ಮಾತ್ರ ಅದನ್ನು ನಿರ್ಧರಿಸಬಲ್ಲದು. ಸರ್ಕಾರಗಳು ಬಹುಮತದ ಮೂಲಕ ಆಯ್ಕೆ ಹೊಂದುತ್ತವೆ. ಆದರೆ ಸತ್ಯ ಏನು ನ್ಯಾಯ ಏನು, ನ್ಯಾಯ ಯಾವುದು ಎನ್ನುವುದನ್ನು ಬಹುಮತಾಭಿಪ್ರಾಯದಿಂದ ನಿರ್ಧರಿಸಲಾಗದು. ಸತ್ಯ ನ್ಯಾಯಗಳನ್ನು ಧರ್ಮ ಮಾತ್ರ ನಿರ್ಣಯಿಸಬಲ್ಲದು. ಸಂಕ್ಷಿಪ್ತವಾಗಿ ಹೇಳುವುದಾದರೆ ರಾಷ್ಟ್ರವಾಗಲೀ,

ಜನರ ಬಹುಮತದ ಅಭಿಪ್ರಾಯವಾಗಲೀ ಅಥವಾ ಸರ್ಕಾರವಾಗಲಿ ಸಾರ್ವಭೌಮವಲ್ಲ. ಇವರೆಲ್ಲರ ಮೇಲಿನ ಸಾರ್ವಭೌಮ ಶಕ್ತಿ ಧರ್ಮ. ಇದು ಉಪಾಧ್ಯಾಯರು ಭಾರತದ ಪಾರಂಪರಿಕ ಚಿಂತನೆಯನ್ನು ಅರ್ಥ ಮಾಡಿಕೊಂಡಿರುವುದರ ಸಾರಾಂಶ.

ಈಗಿರುವ ರಾಜಕೀಯ ಧ್ಯೇಯ–ಆದರ್ಶಗಳು, ನೀತಿಗಳನ್ನು ಕುರಿತ ಅವರ ವಿಮರ್ಶೆ ಮತ್ತು ಭಾರತದ ಭವಿಷ್ಯ ಕುರಿತ ಅವರ ಕನಸು–ಕಾಣ್ಕೆಗಳು ಈ ಅರಿವಿನಿಂದ ಉದ್ಭವಿಸಿದವು.

ಅವರು ಕೆಲವೊಂದು ಸ್ಪಷ್ಟವಾದ, ನಿಸ್ಸಂದಿಗ್ಧವಾದ ವಿಮರ್ಶೆ–ಟೀಕೆಗಳನ್ನು ಮಾಡಿದ್ದಾರೆ:

* **ಭಾರತದ ರಾಜಕಾರಣ ತತ್ತ್ವರಹಿತರ, ಸಮಯ ಸಾಧಕರ, ನಿರ್ಲಜ್ಜರ ಶಿಕಾರಿಯ ಕ್ಷೇತ್ರವಾಗಿದೆ;**
* **ರಾಷ್ಟ್ರಜೀವನದ ಗುರಿ ಉದ್ದೇಶಗಳ ಬಗ್ಗೆ ಅಜ್ಞಾನ ಹಾಗೂ ಭಾರತೀಯ ಪ್ರಜ್ಞೆ ಬಗ್ಗೆ ಸಂಪೂರ್ಣ ಅನಾದರ, ತಾತ್ಸಾರ ಭಾವನೆ ಇವುಗಳೇ ಇಂದಿನ ಅವ್ಯವಸ್ಥೆಗೆ ಕಾರಣ;**

ಇಂದಿನ ರಾಜಕೀಯ ವ್ಯವಸ್ಥೆಯಲ್ಲಿನ ದೋಷಗಳನ್ನು ಪಟ್ಟಿಮಾಡುವುದು ಅವರ ಉದ್ದೇಶವಲ್ಲ. ಆದರೆ, ಅವರ ಹೋರಾಟವೆಲ್ಲ ಭಾರತೀಯ ಸಮಾಜದ ಎಲ್ಲ ವ್ಯಾಧಿಗಳ ಮೂಲವಾದ ಒಂದು ಮೂಲಭೂತವಾದ ತಪ್ಪು ಗ್ರಹಿಕೆ ವಿರುದ್ಧ.

ಈಗಿನ ರಾಜಕಾರಣಿಗಳು ಸಾಮಾಜಿಕ ವಾಸ್ತವತೆ ಬಗ್ಗೆ ಭಿನ್ನಭಿನ್ನ, ವಿಚ್ಛಿನ್ನ ದೃಷ್ಟಿ ಹೊಂದಿರುವುದರಲ್ಲೇ ದೋಷವಿದೆ ಎಂದು ಅವರು ಹೇಳುತ್ತಾರೆ. ಈ ವಿಚ್ಛಿನ್ನ ದೃಷ್ಟಿ ಸಮಾಜವನ್ನು ವಿಭಜಿಸಿದೆ. ಆದರ ವಾಸ್ತವಿಕವಾಗಿ ಎಲ್ಲವೂ ಅವಿಭಾಜ್ಯವಾದ. ಪರಸ್ಪರ ಅವಲಂಬಿತವಾದ ಸಾಮಾಜಿಕ ಘಟಕಗಳು. ಯಾವುದೂ ಪ್ರತ್ಯೇಕವಾದುದಲ್ಲ. ಎಂದೇ ಒಡೆದು ನೋಡುವ ದೃಷ್ಟಿ ದೋಷಪೂರ್ಣವಾದದ್ದು. ಅದು ಸಲ್ಲದು ಎನ್ನುತ್ತಾರೆ ಉಪಾಧ್ಯಾಯರು. ಉದಾರ ವ್ಯಕ್ತಿ ಸ್ವಾತಂತ್ರ್ಯವಾದ ಹಾಗೂ ಸಮಾಜವಾದಗಳೂ ವ್ಯಕ್ತಿ ಸಮಾಜದಿಂದ ಭಿನ್ನಭಿನ್ನನಾದವನು ಎನ್ನುವ ಅಭಿಪ್ರಾಯವನ್ನೇ ತಾಳಿವೆ. ವ್ಯಕ್ತಿ ಮತ್ತು ಸಮಾಜದ ನಡುವೆ ಜನ್ಮದಾರಭ್ಯ ಬಂದ ಘರ್ಷಣೆ–ವಿರೋಧಗಳಿದ್ದು ಇವು ಕಾಯಮ್ಮಾದವು ಎನ್ನುವ ಭಾವನೆಯೇ ವ್ಯಕ್ತಿಯನ್ನು ಸಮಾಜದಿಂದ ಭಿನ್ನಭಿನ್ನವಾಗಿ ನೋಡುವ ದೃಷ್ಟಿಗೆ ಕಾರಣ. ಇಂಥ ಭಿನ್ನಭಿನ್ನ ದೃಷ್ಟಿಕೋನದಿಂದಾಗಿ ಎರಡು ಪ್ರತ್ಯೇಕ ಸಾಮ್ರಾಜ್ಯಗಳು ಹುಟ್ಟಿಕೊಂಡಿವೆ. ಒಂದು ವ್ಯಕ್ತಿಗತ ಪ್ರಪಂಚ. ಇನ್ನೊಂದು ಸಾಮಾಜಿಕ ಪ್ರಪಂಚ ಇವುಗಳ ಜೊತೆಗೆ ಪ್ರತ್ಯೇಕ ಹಕ್ಕುಗಳನ್ನು ಮಂಡಿಸುವ ವಾದವೂ ಹುಟ್ಟಿಕೊಂಡಿದೆ. ಈ ಮೂಲಭೂತ ದೋಷ ಈಗಿನ ಭಾರತದ ರಾಜಕೀಯ ಚಿಂತನೆಯಲ್ಲೂ ಇದೆ ಎನ್ನುತ್ತಾರೆ ಉಪಾಧ್ಯಾಯರು.



ಆದರೆ ಭಾರತೀಯ ಚಿಂತನೆ ಸಮಾಜ ಮತ್ತು ವ್ಯಕ್ತಿ ನಡುವೆ ಪರಸ್ಪರ ಘರ್ಷಣೆಯಿಂದೆಯೆಂದು, ವಿರೋಧವಿದೆಯೆಂದು ಭಾವಿಸಿಲ್ಲ. ವ್ಯಕ್ತಿ ಮತ್ತು ಸಮಾಜದ ನಡುವೆ ಪರಸ್ಪರ ವಿರಸ–ಘರ್ಷಣೆಗಳು ಭಾರತೀಯ ಚಿಂತನೆಯ ಗಮನಕ್ಕೆ ಬಂದಿಲ್ಲ. ವ್ಯಕ್ತಿ ಮತ್ತು ಸಮಾಜ ಎರಡೂ ಸಂಘಟ್ಟನೆಯ ಶಕ್ತಿಗಳೆಂದು ಭಾವಿಸಿಲ್ಲ. ಅಥವಾ ವ್ಯಕ್ತಿ ಮತ್ತು ಸಮಾಜ ಪ್ರತ್ಯೇಕ–ಪ್ರತ್ಯೇಕ ಎಂದೂ ಭಾರತೀಯ ಚಿಂತನೆ ಭಾವಿಸುವುದಿಲ್ಲ. ವ್ಯಕ್ತಿ ಮತ್ತು ಸಮಾಜ ಪ್ರತ್ಯೇಕಿಸಲಾಗದವು; ಅವಿಭಾಜ್ಯವಾದವು. ಒಂದನ್ನು ಬಿಟ್ಟು ಇನ್ನೊಂದು ಬದುಕಲಾರದು ಎಂದು ಭಾರತೀಯ ಗ್ರಹಿಕೆ. ಆದರೆ ಪಾಶ್ಚಾತ್ಯ ರಾಷ್ಟ್ರಗಳು ಈ ವಿಷಯದಲ್ಲಿ ಎರಡು ವಿರೋಧಿ ಬಣಗಳಾಗಿ ಒಡೆದು ಹೋಗಿವೆ. ಒಂದು ಬಣ ವ್ಯಕ್ತಿ ಪಾರಮ್ಯತೆಯನ್ನು ಎತ್ತಿಹಿಡಿದು ಸಮಾಜವನ್ನು ವ್ಯಕ್ತಿಗತ ಹಿತಾಸಕ್ತಿಗೆ ಅಧೀನವಾಗಿಸಿದೆ. ಸಮಾಜದ ಪಾರಮ್ಯವನ್ನು ಇನ್ನೊಂದು ಬಣ ಎತ್ತಿಹಿಡಿದಿದೆ. ಈ ಬಣ ಸಮಾಜದ ಸಮಷ್ಟಿ ಹಿತಾಸಕ್ತಿಗಳಿಗೆ ವ್ಯಕ್ತಿ ಅಧೀನನಾಗಿರಬೇಕೆಂದು ಹೇಳುತ್ತದೆ. ಈ ಎರಡೂ ಅಭಿಪ್ರಾಯಗಳು ಏಕಪಕ್ಷೀಯವಾಗಿದ್ದು ಅವ್ಯವಸ್ಥೆಯ ಆಗರವನ್ನೇ ಸೃಷ್ಟಿಸಿರಬಹುದು. ಭಾರತದ ಚಿಂತನ ವಿಧಾನ ಚರಿತ್ರೆಯುದ್ದಕ್ಕೂ ಸಮಾಜ ಮತ್ತು ವ್ಯಕ್ತಿ ಅವಿಭಜಿತ ಘಟಕವೆಂದೇ ಭಾವಿಸಿದೆ. ವ್ಯಕ್ತಿ ಮತ್ತು ಸವಾಜಗಳಿಗೆ ಅವುಗಳದೇ ಆದ ವಿಶೇಷ ಅಗತ್ಯಗಳಿರಬಹುದು. ಆದರೆ ಒಂದನ್ನು ಇನ್ನೊಂದಕ್ಕೆ ಅಧೀನವಾಗಿಸದೇ ಒಂದು ಇನ್ನೊಂದು ನಿಗ್ರಹಿಸದೇ ಪರಸ್ಪರ ಅವಲಂಬನೆಯಲ್ಲೇ, ಈ ಅಗತ್ಯಗಳನ್ನು ಪೂರೈಸಬಹುದು. ಪರಸ್ಪರ ಅವಲಂಬನೆ ಎಂದಾಕ್ಷಣ ಅದು ಅಸಹಾಯಕ ಅವಲಂಬನೆಯಲ್ಲ ಅಥವಾ ಒಂದು ಇನ್ನೊಂದಕ್ಕಿಂತ ಕೀಳು ಎಂದೂ ಅರ್ಥವಲ್ಲ. ಪರಸ್ಪರ ಅವಲಂಬನೆ ಎನ್ನುವುದು ಒಂದು ಸಾಮರಸ್ಯ ಸ್ಥಿತಿ. ಈ ಸಾಮರಸ್ಯ ಸ್ಥಿತಿಯಲ್ಲಿ ಒಂದು ಇನ್ನೊಂದಕ್ಕೆ ಬೆದರಿಕೆಯಾಗಿ ಕಾಣುವುದಿಲ್ಲ. ಸಾಮರಸ್ಯ ಸ್ಥಿತಿಯಲ್ಲಿ ಪರಸ್ಪರ ಅವಲಂಬನೆಯನ್ನು ಬೆಳವಣಿಗೆಯ ಸಹಜ ಅಂಗವೆಂದೇ ಪರಿಗಣಿಸಲಾಗುತ್ತದೆ. ಪರಸ್ಪರ ಅವಲಂಬನೆ ಎನ್ನುವುದಕ್ಕಿಂತ ಪರಸ್ಪರ ಸಾಮರಸ್ಯ ಅಥವಾ ಅಂತರ್ ಸಾಮರಸ್ಯ, ಅಂತರ್‌ಸಮ್ಮತಿ ಎನ್ನುವುದೇ ಹೆಚ್ಚು ಸತ್ಯವಾದದ್ದು ಎಂಬುದನ್ನು ಉಪಾಧ್ಯಾಯರು ಒತ್ತಿಹೇಳುತ್ತಾರೆ. ಅವಲಂಬನೆಯಲ್ಲಿ ಘನತೆ ಕೊಂಚ ಕಡಿಮೆ. ಅದೇ ಅಂತರ್ ಅವಲಂಬನೆ ಅಥವಾ ಪರಸ್ಪರ ಅವಲಂಬನೆಯಲ್ಲಿ ಶುದ್ಧಾಂಗವಾದ ಆತ್ಮಗೌರವವಿದೆ. ಇಂಥ ಒಂದು ವ್ಯವಸ್ಥೆಯಲ್ಲಿ, ಅಂದರೆ, ಪರಸ್ಪರ ಸಾಮರಸ್ಯ ಮತ್ತು ಪರಸ್ಪರ ಸಮ್ಮತಿ, ಒಮ್ಮತಗಳೇ ಸಮಾಜ ಮತ್ತು ವ್ಯಕ್ತಿಯ ನಡುವಣ ಸಂಬಂಧದ ಮಾರ್ಗದರ್ಶನ ಸೂತ್ರವಾದಾಗ ಮಾತ್ರ ಮಾನವನಿಗೆ ನಿಜವಾದ ಸ್ವಾತಂತ್ರ್ಯ ಸಾಧ್ಯವಾದೀತು. ಆದರೆ ಸ್ವತಂತ್ರನಾದವನಿಗೆ ಮಾತ್ರ ಸಮ್ಮತಿಸುವ ನಿರ್ಣಯ ಸಾಧ್ಯ. ಸ್ವಾತಂತ್ರ್ಯದ ನಿಜವಾದ ಅರ್ಥವೆಂದರೆ ಮಿಕ್ಕವರ ಜೊತೆ

ಸಾಮರಸ್ಯದಿಂದ ಬಾಳುವುದು ಎಂದೇ. ತನ್ನಲ್ಲಿ ಅಂತರ್ಗತವಾಗಿರುವ ದೈಹಿಕ, ಮಾನಸಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಶಕ್ತಿಗಳನ್ನು ಸ್ವಾರ್ಥ ಹಾಗೂ ಪರರ ಸೇವೆಗಾಗಿ ವಿನಿಯೋಗಿಸುವುದೇ ನಿಜವಾದ ಸ್ವಾತಂತ್ರ್ಯ. ಇದೇ ಧರ್ಮದ ಅರ್ಥ. ವ್ಯಕ್ತಿ ಮತ್ತು ಸಮಾಜವನ್ನು ಮಾನವತೆಯ ಅಖಂಡತೆಯ ಐಕ್ಯತೆಯಲ್ಲಿ ಬೆಸೆಯುವ ಸಂಪರ್ಕ ತಂತು ಧರ್ಮ.[೧೩]

ಈ ಜೀವನ ದರ್ಶನವೇ ಭಾರತೀಯ ಸಾಮಾಜಿಕ ವ್ಯವಸ್ಥೆಯಾದ ವರ್ಣ ಪದ್ಧತಿಯ ಮೂಲಾಧಾರ. ಇದರಲ್ಲಿ ಸಮಾಜದ ವಿವಿಧ ಅಂಗಗಳ ನಡುವೆ ಪರಿಪೂರ್ಣ ಸಮಾನತೆ ಇದೆ. ವರ್ಣ ಪದ್ಧತಿಯ ಅವನತಿಗೆ ಅದರ ಮೂಲ ಪರಿಕಲ್ಪನೆ ಕಾರಣವಲ್ಲ. ಮಾನವನ ಹಮ್ಮು–ಬಿಮ್ಮು ಮತ್ತು ಸ್ವಾರ್ಥ ಮನೋಭಾವವೇ ಕಾರಣ. ಈ ಸಾಮಾಜಿಕ ಅವ್ಯವಸ್ಥೆಯನ್ನು ಸರಿಪಡಿಸುವುದೇ ಭವಿಷ್ಯದ ಭಾರತದ ಕಾರ್ಯಸೂಚಿಯಾಗಬೇಕು. ಭಾರತ ತನ್ನ ಆತ್ಮವನ್ನು ಮರಳಿ ಪಡೆದುಕೊಂಡಾಗ ಮಾತ್ರ, ಇದು ಸಾಧ್ಯವಾದೀತು. ಅಸಮತೆ ಮತ್ತು ವಿಭಜನೆಯ ಅಡಿಪಾಯದ ಮೇಲೆ ಯಾವುದೇ ಸಾಮಾಜಿಕ ವ್ಯವಸ್ಥೆಯೂ ಉಳಿಯಲಾರದು ಎನ್ನುವ ಸತ್ಯಕ್ಕೆ ಬದ್ಧವಾದ ನಂಬಿಕೆಯೇ ಆತ್ಮದ ಜೀವಜೀವಾಳ. ಪ್ರಕೃತಿಯಲ್ಲಿ ವಿವಿಧತೆ ಇದೆ; ಆದರೆ ವಿವಿಧತೆ ಅಸಮಾನತೆಯಲ್ಲ ಅಥವಾ ವಿಭಜನೆಯೂ ಅಲ್ಲ. ಅಸಮಾನತೆ ಮತ್ತು ವಿಭಜನೆ ಮಾನವ ಘನತೆ ಸತ್ವವನ್ನೇ ಹಾಳು ಮಾಡಬಲ್ಲವು. ಅವು ಮಾನವ ಸತ್ತ್ವವನ್ನು ಎಂದಿಗೂ ಎತ್ತಿಹಿಡಿಯಲಾರವು. ಧರ್ಮದಿಂದ ಮಾತ್ರ ಮಾನವನ ಘನತೆ, ಸತ್ವಗಳನ್ನು ಎತ್ತಿಹಿಡಿಯುವುದು ಸಾಧ್ಯ. ಧರ್ಮದಿಂದ ಮಾತ್ರ ಇದರ ಪಾಲನ ಪೋಷಣೆ ಸಾಧ್ಯ. ಆದ್ದರಿಂದ ಧರ್ಮರಾಜ್ಯ ದೀನ್ ದಯಾಳ್ ಉಪಾಧ್ಯಾಯರ ಕನಸು. ಅವರ ಜೀವನದೃಷ್ಟಿ. ಧರ್ಮ ರಾಜ್ಯವೆಂದರೆ ಪುರೋಹಿತಶಾಹಿಯಲ್ಲ. ಅಸಮಾನತೆಯಲ್ಲ. ವಿಭಜನೆಯಲ್ಲ.

ಭಾರತದ ನಾಗರಿಕತೆಯ ಈ ಪರಂಪರಾನುಗತ ಜೀವನ ದರ್ಶನ, ಸಿದ್ಧಾಂತಗಳಿಂದ ಅವರು ಧರ್ಮರಾಜ್ಯದ ರಾಜಕೀಯ ಮತ್ತು ಆರ್ಥಿಕ ಪರಿವಿಡಿಯನ್ನು ರೂಪಿಸಿದ್ದಾರೆ. ತತ್ವಗಳ ಸ್ಪಷ್ಟತೆ ಮತ್ತು ವ್ಯಾವಹಾರಿಕ ವಿವರಗಳಿಂದ ಕೂಡಿರುವ ಈ ಸತ್ವಾಂಶಗಳು ಕೆಳಗಿನಂತಿವೆ:

(ಅ) **ಪ್ರತಿಯೊಬ್ಬ ವ್ಯಕ್ತಿಗೂ ಕನಿಷ್ಠ ಜೀವನಮಟ್ಟದ ಬದುಕಿನ ಭರವಸೆ. ಇದರಿಂದ ದೇಹದಾರ್ಢ್ಯತೆ ಉಳ್ಳ ಪ್ರತಿವ್ಯಕ್ತಿಗೂ ಧ್ಯೇಯಪೂರ್ಣವಾದ ಉದ್ಯೋಗಾವಕಾಶ ಖಾತ್ರಿಯಾಗಬೇಕು.**

(ಆ) **ಇದಲ್ಲದೆ, ವಿಶ್ವದ ಪ್ರಗತಿಗಾಗಿ, ರಾಷ್ಟ್ರದ ಪ್ರಗತಿಗಾಗಿ ಹಾಗೂ ವ್ಯಕ್ತಿಯ ಪ್ರಗತಿಗಾಗಿ ಅವರವರ ವಿಶಿಷ್ಟ ಪ್ರಜ್ಞಾನುಸಾರ, ಶಕ್ತ್ಯಾನುಸಾರ ಕೊಡುಗೆ ನೀಡುವಂಥ ಅವಕಾಶಗಳು ವ್ಯಕ್ತಿಗೆ ಲಭ್ಯವಾಗಬೇಕು.**



(ಇ) **ರಾಷ್ಟ್ರದ ಉತ್ಪಾದನಾ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ನೈಸರ್ಗಿಕ ಸಂಪನ್ಮೂಲಗಳ ಮಿತವ್ಯಯಕ್ಕಾಗಿ ಹಾಗೂ ರಾಷ್ಟ್ರದ ಸುರಕ್ಷತೆಗಾಗಿ ಸೂಕ್ತ ತಂತ್ರ ಜ್ಞಾನವನ್ನು ರೂಪಿಸಬೇಕು.**

(ಈ) **ವಿವಿಧ ಕೈಗಾರಿಕೆಗಳ ಒಡೆತನ. ಕೈಗಾರಿಕೆಗಳ ಸಣ್ಣದಿರಲಿ, ದೊಡ್ಡದಿರಲಿ, ಸರ್ಕಾರದ್ದಿರಲಿ ಅಥವಾ ಬೇರೆ ಯಾವುದೇ ಸಂಸ್ಥೆಯದಿರಲಿ ಅವುಗಳ ಒಡೆತನವನ್ನು ವ್ಯಾವಹಾರಿಕತೆಯ ಆಧಾರದ ಮೇಲೆ ನಿರ್ಧರಿಸಬೇಕು.**

(ಉ) **ಮೇಲೆ ಪ್ರತಿಪಾದಿಸಲಾಗಿರುವ ವ್ಯವಸ್ಥೆ ಯಾವುದೇ ರೀತಿಯಲ್ಲೂ ಮನುಷ್ಯನನ್ನು ತಿರಸ್ಕಾರದಿಂದ ನೋಡಬಾರದು. ಅಲಕ್ಷಿಸಬಾರದು. ಮಾನವನ ಅಭಿವೃದ್ಧಿಗೆ ಸಾಧನೋಪಾಯವಾಗಬೇಕು; ಭಾರತೀಯ ಸಮಾಜದ ಜೀವನ ಮೌಲ್ಯಗಳನ್ನು ಮತ್ತು ಸಂಸ್ಕೃತಿಯನ್ನು ರಕ್ಷಿಸಬೇಕು ಇದು ಸುರಕ್ಷತಾ ರೇಖೆ. ಯಾವುದೇ ಸಂದರ್ಭದಲ್ಲೂ ಆರ್ಥಿಕ ವ್ಯವಸ್ಥೆ ಈ ರೇಖೆಯನ್ನು ಆಕ್ರಮಿಸಬಾರದು.**

ಪಂಡಿತ್‌ಜೀಯವರ ಕಲ್ಪನೆಯ ಧರ್ಮರಾಜ್ಯದಲ್ಲಿ ಇವೆಲ್ಲದರ ಜೊತೆಗೆ ಪ್ರತಿಯೊಬ್ಬರಿಗೂ ಉಚಿತ ಶಿಕ್ಷಣದ ಏರ್ಪಾಟು ಇರಬೇಕು. ಜನರ ಶಿಕ್ಷಣ ಇರುವುದು ಸಮಾಜದ ಹಿತರಕ್ಷಣೆಗೆ ಸಮಾಜದ ಹಿತಕ್ಕಾಗಿ ಜನ ವಿದ್ಯಾವಂತರಾಗಬೇಕು. ಹೀಗಿರುವಾಗ ಪ್ರಜೆಗೆ ತಾನು ಕಲಿಯುವ ಶಿಕ್ಷಣಕ್ಕೆ ಹಣ ಕೊಡುವಂತೆ ಕೇಳುವುದು ಕಲ್ಪನಾತೀತವಾದದ್ದು. ಒಂದು ವೇಳೆ ಶಿಕ್ಷಣಕ್ಕೆ ಹಣಕೊಡಲು ವ್ಯಕ್ತಿ ಅಸಮರ್ಥನಾಗಿದ್ದಲ್ಲಿ ಅವನು ಅವಿದ್ಯಾವಂತನಾಗಿಯೇ ಉಳಿಯಬೇಕಾಗುತ್ತದೆ. ಪ್ರಾಚೀನ ಭಾರತದಲ್ಲಿ ಶಿಕ್ಷಣ ಯಾವತ್ತೂ ಉಚಿತವಾಗಿತ್ತು. ೧೯೪೭ರವರೆಗೂ ಇದೇ ಸ್ಥಿತಿ ಇತ್ತು. ಭಾರತೀಯ ಸಂಸ್ಥಾನಗಳಲ್ಲೂ ಸಹ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಷ್ಟ್ರದ ಬೊಕ್ಕಸದ ವೆಚ್ಚದಲ್ಲಾಗಬೇಕು. ಶಿಕ್ಷಣದಂತೆ, ವೈದ್ಯಕೀಯ ಸೌಲಭ್ಯಗಳಿಗೂ ಪ್ರಜೆಗಳು ಹಣ ತೆರಬೇಕು ಎನ್ನುವುದೂ ಇಷ್ಟೇ ಕಲ್ಪನಾತೀತವಾದದ್ದು ಎನ್ನುತ್ತಾರೆ ಉಪಾಧ್ಯಾಯರು. ಶಿಕ್ಷಣದಂತೆ ವೈದ್ಯಕೀಯ ಸೌಲಭ್ಯವೂ ಎಲ್ಲರಿಗೂ ಉಚಿತವಾಗಿ ದೊರೆಯಬೇಕೆನ್ನುವುದು ಉಪಾಧ್ಯಾಯರ ನಿಲುವು. ಆರೋಗ್ಯ ಮತ್ತು ಶಿಕ್ಷಣ ಧರ್ಮರಾಜ್ಯದಲ್ಲಿ ಸಮಾಜದ ಎರಡು ಮುಖ್ಯ ಕಾಳಜಿಗಳಾಗಬೇಕು.

ಭಾರತದ ರಾಜ್ಯ ವ್ಯವಸ್ಥೆ ಈ ಬಗ್ಗೆ ಯಾವ ದಿಕ್ಕಿನಲ್ಲಿ ನಡೆಯಬೇಕೆನ್ನುವುದನ್ನು ಅಕ್ಷರಶ: ಸೂಚಿಸುವದಾದಲ್ಲಿ, ಅವು ವಿಕೇಂದ್ರೀಕರಣ ಮತ್ತು ಸ್ವಾವಲಂಬನೆಯ ಮಾರ್ಗಗಳು ಎಂದು ಹೇಳುತ್ತಾರೆ ಉಪಾಧ್ಯಾಯರು. ವಿವಿಧತೆ ನಿಸರ್ಗದ ಅನರ್ಘ್ಯ ಕೊಡುಗೆ. ನಿಸರ್ಗದಂತೆ ಭಾರತೀಯ ಜೀವನದಲ್ಲೂ ಅಪಾರವಾದ ವಿವಿಧತೆ ಇದೆ, ವೈವಿಧ್ಯವಿದೆ. ಈ ವಿವಿಧತೆ, ವೈವಿಧ್ಯಗಳಲ್ಲಿ ಬದುಕು ವಿವಿಧ ಬಣ್ಣ, ವಿವಿಧ ಧ್ವನಿ, ವಿವಿಧ ನೇಯ್ಗೆಗಳಲ್ಲಿ ಸಾಕ್ಷಾತ್ಕಾರಗೊಂಡಿದೆ. ಪ್ರತಿಯೊಂದು ಸಾಮಾಜಿಕ

ಮತ್ತು ಆರ್ಥಿಕ ಕಾರ್ಯನಿರ್ವಹಣೆಯನ್ನು ಒಬ್ಬರ ಅಧಿಕಾರಕ್ಕೊಪ್ಪಿಸುವ ಕೇಂದ್ರೀಕರಣ ಬಗೆಗಿನ ವಿಪರೀತವಾದ ಗೌರವಾದರದಿಂದ ಅವ್ಯವಸ್ಥೆಯುಂಟಾಗುವುದು ಕೇಂದ್ರೀಕರಣ ಜೀವ ವಿರೋಧಿಯಾದದ್ದು. ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಬೇಕು. ವಿವಿಧ ಕೇಂದ್ರಗಳ ಅಧಿಕಾರ ಮತ್ತು ಮುಂದಾಳತ್ವವನ್ನು ಧರ್ಮ ಒಂದುಗೂಡಿಸುತ್ತದೆ. ಇದೇ ರೀತಿ ವಿದೇಶಗಳನ್ನು ಅವಲಂಬಿಸುವ ಶೋಚನೀಯ ಸ್ಥಿತಿ ಹೋಗಲಾಡಿಸಲು ಸ್ವಾವಲಂಬನೆ ಸಾಧಿಸಬೇಕು. ಚಿಂತನೆ, ಆಲೋಚನೆ, ಸಾಮಾಜಿಕ ವ್ಯವಸ್ಥೆ ಪದ್ಧತಿ, ಬಂಡವಾಳ, ಉತ್ಪಾದನಾಮಾರ್ಗ, ತಂತ್ರಜ್ಞಾನ ಮತ್ತು ಗ್ರಾಹಕ ಗುಣಮಟ್ಟ ಹೀಗೆ ಪ್ರತಿಯೊಂದೂ ಕ್ಷೇತ್ರದಲ್ಲೂ ರಾಷ್ಟ್ರ ಸ್ವಾವಲಂಬಿಯಾಗಬೇಕು. ಪರಾವಲಂಬನೆ ಪ್ರಗತಿಯ ಮಾರ್ಗವಲ್ಲ. ಹಾಗೆಂದ ಮಾತ್ರಕ್ಕೆ ಭಾರತ ಕುರುಡಾಗಿ ಪ್ರಾಚೀನ ಮಾರ್ಗಾವಲಂಬಿಯಾಗಬೇಕಿಲ್ಲ. ಅನೇಕ ಹಳೆಯ ಪದ್ಧತಿಗಳು, ಸಂಸ್ಥೆಗಳು, ವ್ಯವಸ್ಥೆಗಳು ಹೋಗಬೇಕು. ಅವುಗಳ ಜಾಗಕ್ಕೆ ಹೊಸದು ಬರಬೇಕು.

ಧರ್ಮ ಬಹುಮತದ ಆಳ್ವಿಕೆಯಲ್ಲೂ ಇಲ್ಲ ಅಥವಾ ಜನರ ಆಳ್ವಿಕೆಯಲ್ಲೂ ಇಲ್ಲ. ಧರ್ಮ ಯಾರ ಅಧೀನದಲ್ಲೂ ಇಲ್ಲ. ಧರ್ಮ ಚಿರಂತನವಾದದ್ದು ಎನ್ನುವುದು ಉಪಾಧ್ಯಾಯರ ಅಂತಿಮ ಪ್ರತಿಪಾದನೆ. ಆದ್ದರಿಂದ ಪ್ರಜಾಪ್ರಭುತ್ವವನ್ನು ಜನತಾ ಆಡಳಿತ ಎಂದಷ್ಟೇ ಅರ್ಥೈಸಿದರೆ ಸಾಲದು. ಅದು ಜನರ ಒಳಿತಿಗಾಗಿ ಜನತಾ ಕಲ್ಯಾಣಕ್ಕಾಗಿ ನಡೆಯುವ ಆಳ್ವಿಕೆಯಾಗಬೇಕು. ಜನರ ಒಳಿತು ಎಂದರೇನು? ಜನತಾ ಕಲ್ಯಾಣ ಎಂದರೇನು? ಜನರಿಗೆ ಯಾವುದು ಹಿತ ಯಾವುದು ಒಳಿತು ಎನ್ನುವುದನ್ನು ಧರ್ಮ ಮಾತ್ರ ನಿರ್ಧರಿಸಬಲ್ಲದು. ಆದ್ದರಿಂದ ಪ್ರಜಾಪ್ರಭುತ್ವ ಧರ್ಮರಾಜ್ಯವಾಗಬೇಕು. ಧರ್ಮದ ಆಡಳಿತವಾಗಬೇಕು. ಧರ್ಮ ಮತ್ತು ಸ್ವಾತಂತ್ರ್ಯಗಳ ಸಂಗಮದಿಂದ ಮಾತ್ರ ನಿಜವಾದ ಪ್ರಜಾಪ್ರಭುತ್ವ ಸಾಧ್ಯ.



**ಆಕರಗಳು**


1. *Samasyaen,* p. 62, pp. 70-1, 72-3; *Disha,* p. 53, 60-1; Manavavada, p. 42.
2. *Samasyaen,* pp. 73-6: *Disha,* pp. 96-7. 192-200, 205-6; *Manavavada,* pp. 50-3, 56-65.
3. *Manavavada,* p. 51
4. *Manavavada,* p. 51
5. Hereafter references are relating to the paragraph as a whole.
6. *Samasyaen,* pp. 2-3.
7. *Samasyaen,* pp. 5-6.
8. *Samasyaen,* pp. 56-8, 61-2, 67-71, 72-6 80-3; *Disha,* pp. 35-41, 45-50, 53-61, 101-8: *Manavavada,* p. 13, 36-8, 40-6.
9. *Samasyaen,* pp. 77-8;
10. *Samasyaen,* pp. 78-82.
11. *Sanasyaen,* pp. 79-81, 82;
12. *Samasyaen,* pp. 65-6, 74-6; *Disha,* pp. 49-50, 53-5, p. 201; *Manavavada,* p 50, pp. 60-2, 62-3.
13. *Disha,* pp. 113-6, 121-2, 127-30, 132-41; *Manavavada,* pp. 47-8.
14. *Samasyaen,* 83-7; *Disha,* pp. 193-207; *Manavavada,* pp. 78-83.
15. *Manavavada,* pp. 72-3.

# ೨೦. ಗ್ರಾಮೀಣ ಅಭಿವೃದ್ಧಿ : ದೀನ್ ದಯಾಳರ ವಿಚಾರಧಾರೆ

**ಡಾ. ಸುರೇಂದ್ರ ಪ್ರಸಾದ್ ಗೈನ್***

ಭಾರತದ ಆರ್ಥಿಕ ಅಭಿವೃದ್ಧಿ ಕುರಿತ ತಮ್ಮ ಆಲೋಚನೆಯಲ್ಲಿ ದೀನದಯಾಳಜಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದರು. ಭಾರತದ ಜನಸಂಖ್ಯೆಯಲ್ಲಿ ಅತಿಹೆಚ್ಚು ಮಂದಿ ಕೃಷಿಯನ್ನು ಅವಲಂಬಿಸಿರುವುದರಿಂದ ಅವರ ದೃಷ್ಟಿಯಲ್ಲಿ ಕೃಷಿ ಅಭಿವೃದ್ಧಿ ಅತಗತ್ಯವೆನಿಸಿತ್ತು. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಕುರಿತ ದೀನದಯಾಳಜಿ ಅವರ ಅಭಿಪ್ರಾಯಗಳನ್ನು ವಿಶ್ಲೇಷಿಸುವುದಕ್ಕೆ ಮೊದಲು ಆರ್ಥಿಕ ಕಾರ್ಯಕ್ರಮದ ಘಟಕಾಂಶಗಳು ಏನೆಲ್ಲ ಇರಬೇಕು ಎನ್ನುವ ಬಗ್ಗೆ ಅವರ ಮೂಲ ಉದ್ದೇಶಗಳೇನು ಎಂಬುದರ ಜ್ಞಾನ ಮುಖ್ಯವಾಗುತ್ತದೆ. ದೀನ್ ದಯಾಳ್‌ಜಿ ಅವರ ಪ್ರಕಾರ ಪ್ರತಿಯೊಂದು ಆರ್ಥಿಕ ಕಾರ್ಯಕ್ರಮವೂ ಈ ಕೆಳಗಿನ ನಾಲ್ಕು ಮೂಲ ಉದ್ದೇಶಗಳನ್ನು ರಕ್ಷಿಸುವ ಹಾಗೂ ಪ್ರವರ್ಧಿಸುವ ಗುರಿಯನ್ನು ಹೊಂದಿರಬೇಕು.

(೧) **ರಾಜಕೀಯ ಸ್ವಾತಂತ್ರ್ಯರಕ್ಷಣೆಗೆ ಅಗತ್ಯವಾದ ಸಾಮರ್ಥ್ಯಗಳನ್ನು ಸೃಷ್ಟಿಸುವುದು ನಮ್ಮ ಆರ್ಥಿಕ ಕಾರ್ಯಕ್ರಮದ ಆದ್ಯಗುರಿಯಾಗಬೇಕು.[೧೩] ಇದು ರಕ್ಷಣಾ ಇಲಾಖೆ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಸ್ವಾವಲಂಬನೆಗೆ ಕರೆನೀಡುತ್ತದೆ. ನಮ್ಮ ಆರ್ಥಿಕ ಕಾರ್ಯಕ್ರಮಗಳು ವಿದೇಶಿ ನೆರವನ್ನು ಅವಲಂಬಿಸಿದರೆ ನಮ್ಮ ಸ್ವಾತಂತ್ರ್ಯದ ಮೇಲೆ ಕಟ್ಟುಪಾಡುಗಳಿರುತ್ತವೆ ಹಾಗೂ ಅದರಿಂದ ದುಷ್ಪರಿಣಾಮಗಳಾಗುತ್ತವೆ. ರಾಷ್ಟ್ರವೊಂದು ವಿದೇಶಗಳನ್ನು ಅವಲಂಬಿಸುವ ಅಭ್ಯಾಸ ಬೆಳೆಸಿಕೊಂಡಲ್ಲಿ ಹಾಗೂ ಸ್ವಾತಂತ್ರ್ಯದ ಬೆಲೆಯನ್ನು ತಿಳಿಯಲು ಅಸಮರ್ಥವಾದಲ್ಲಿ ಅದು ಆತ್ಮಗೌರವವನ್ನು ಕಳೆದುಕೊಳ್ಳುತ್ತದೆ.[೧೪] ವಿದೇಶಿ ನೆರವನ್ನು ಅವಲಂಬಿಸಿದ ರಾಷ್ಟ್ರಕ್ಕೆ ತನ್ನ ಸಂಸ್ಕೃತಿ ಅಗತ್ಯಗಳು ಮತ್ತು ಸ್ವಾತಂತ್ರ್ಯಕ್ಕೆ ಹೊಂದುವಂಥ ಆರ್ಥಿಕ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು ಸಾಧ್ಯವಾಗದು.**

(೨) **ಆರ್ಥಿಕ ಕಾರ್ಯಕ್ರಮಗಳು ನಮ್ಮ ದೇಶದ ಪ್ರಜಾಸತ್ತೆಯನ್ನು ರಕ್ಷಿಸಿ ಬೆಳೆಸುವ ರೀತಿಯಲ್ಲಿರಬೇಕು. ದೀನದಯಾಳರು ರಾಜಕೀಯ ಪ್ರಜಾಪ್ರಭುತ್ವ ಮತ್ತು ಆರ್ಥಿಕ ಪ್ರಜಾಪ್ರಭುತ್ವವನ್ನು ವಿಂಗಡಿಸಿ ಪ್ರತ್ಯೇಕವಾಗಿ ನೋಡುತ್ತಾರೆ. ಹಾಗೂ ರಾಜಕೀಯ ಪ್ರಜಾಪ್ರಭುತ್ವ ಇಲ್ಲದೆ ಆರ್ಥಿಕ ಪ್ರಜಾಪ್ರಭುತ್ವ ಸಾಧಿಸುವುದು ಅಸಾಧ್ಯವೆಂದು ಅಭಿಪ್ರಾಯಪಡುತ್ತಾರೆ.[೧೫] ರಾಜಕೀಯ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರೂ ಆಡಳಿತದಲ್ಲಿ ಪಾಲ್ಗೊಳ್ಳುತ್ತಾರೆ. ಹೀಗೆ ಪ್ರತಿಯೊಬ್ಬರೂ ಪಾಲ್ಗೊಳ್ಳಲು ಅನುಕೂಲವಾಗುವಂತೆ ಆಡಳಿತದಲ್ಲಿ ವಿಕೇಂದ್ರಿಕರಣಕ್ಕೆ ಅವರು ಕರೆ ನೀಡಿದ್ದಾರೆ.**

ಉಪಾಧ್ಯಾಯರ ಆರ್ಥಿಕ ಪ್ರಜಾಪ್ರಭುತ್ವ ಈ ಕೆಳಗಿನ ಅಂಶಗಳನ್ನೊಳಗೊಂಡಿದೆ:

(೧) **ಉತ್ಪಾದನೆಯ ಸ್ವಾತಂತ್ರ್ಯ ಮತ್ತು ಬಳಕೆಯ ಸ್ವಾತಂತ್ರ್ಯ**

(೨) **ಎಲ್ಲರಿಗೂ ಉದ್ಯೋಗ. ತಾನು ಆಯ್ಕೆಮಾಡಿಕೊಂಡ ವೃತ್ತಿಯಲ್ಲಿ ಉತ್ಪಾದನೆ ಮಾಡುವ ಮತ್ತು ಬಳಸುವ ಮುಕ್ತ ಅವಕಾಶಗಳಿದ್ದಲ್ಲಿ ಮಾತ್ರ ಆರ್ಥಿಕ ಸ್ವಾತಂತ್ರ್ಯ ಸವಿಯಲು ಸಾಧ್ಯವಾಗುತ್ತದೆ.[೧೬] ಉತ್ಪಾದನಾ ಸ್ವಾತಂತ್ರ್ಯ ತುಂಬ ಮುಖ್ಯವಾದದ್ದು ಇದರಿಂದ ಬಳಕೆಯ ಸ್ವಾತಂತ್ರ್ಯ ಸಾಧ್ಯವಾಗುತ್ತದೆ. ಉತ್ಪಾದನೆ ಮತ್ತು ಬಳಕೆಯ ಸ್ವಾತಂತ್ರ್ಯಗಳು ಒಂದು ಮಿತಿಯೊಳಗಿರಬೇಕು.[೧೭] ರಾಜಕೀಯ ಸ್ವಾತಂತ್ರ್ಯದಲ್ಲಿ ಎಲ್ಲರಿಗೂ ಮತದಾನದ ಹಕ್ಕು ಎಷ್ಟು ಅಗತ್ಯವೋ ಹಾಗೆಯೇ ಆರ್ಥಿಕ ಸ್ವಾತಂತ್ರ್ಯದಲ್ಲಿ ಎಲ್ಲರಿಗೂ ಉದ್ಯೋಗದ ಹಕ್ಕು ಅಷ್ಟೇ ಮುಖ್ಯವಾದ ಅಗತ್ಯ.[೧೮]**

**ಉದ್ಯೋಗದಲ್ಲಿ ಜೀವನಾವಶ್ಯಕತೆಗಳಿಗೆ ಅಗತ್ಯವಾಗುವಷ್ಟು ವರಮಾನವಿರಬೇಕು. ಪ್ರತಿಯೊಬ್ಬರಿಗೂ ತಮಗೆ ಇಷ್ಟವಾದ ವೃತ್ತಿಯನ್ನು ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯವಿರಬೇಕು. ರಾಷ್ಟ್ರೀಯ ವರಮಾನದಲ್ಲಿ ನ್ಯಾಯಸಮ್ಮತವಾದ ಪ್ರಮಾಣದಲ್ಲಿ ವರಮಾನ ದೊರಕಿಸದ ಉದ್ಯೋಗ 'ಭಿಕ್ಷಾಟನೆ' ಇದ್ದಂತೆ.[೧೯]**

**ಈ ಎಲ್ಲ ಅಂಶಗಳನ್ನೂ ಗಮನದಲ್ಲಿರಿಸಿಕೊಂಡು ದೀನದಯಾಳರು ಕನಿಷ್ಠ ವೇತನ, ನ್ಯಾಯಸಮ್ಮತ ವಿತರಣೆ ಮತ್ತು ಸಾಮಾಜಿಕ ಭದ್ರತೆ ಇವುಗಳಿಗೆ ಪ್ರಾಮುಖ್ಯ ನೀಡಿದ್ದಾರೆ.[೨೦] ಆದರೆ ಈ ಎಲ್ಲ ಸೌಲಭ್ಯಗಳನ್ನು ಪಡೆಯಲು ಪ್ರಜೆಗಳು ತಮ್ಮ ಸಾಮರ್ಥ್ಯಾನುಸಾರ ರಾಷ್ಟ್ರೀಯ ವರಮಾನಕ್ಕೆ ತಮ್ಮ ಪಾಲನ್ನು ಸಲ್ಲಿಸಬೇಕಾಗುತ್ತದೆ.[೨೧]**

* ಲೇಖಕರು ಎಲ್.ಎನ್. ಮಿಥಿಲಾ ವಿಶ್ವವಿದ್ಯಾನಿಲಯಕ್ಕೆ ಡಾಕ್ಟರೇಟ್ ಪದವಿಗಾಗಿ ಸಲ್ಲಿಸಿದ ಸಂಪ್ರಬಂಧದಿಂದ ಆಯ್ದ ಭಾಗಗಳು.

**(೩) ಆರ್ಥಿಕ ಕಾರ್ಯಕ್ರಮಗಳು, ಮಾನವರ ನಡುವೆ ಆಧ್ಯಾತ್ಮಿಕ ಸಂಬಂಧವನ್ನುಂಟು ಮಾಡುವ ಸಂಸ್ಕೃತಿಯನ್ನು ಕಾಪಾಡುವ ಗುರಿ–ಉದ್ದೇಶಗಳನ್ನು ಹೊಂದಿರಬೇಕು.**

ಸಂಕ್ಷಿಪ್ತವಾಗಿ ಹೇಳುವುದಾದರೆ, ದೀನದಯಾಳರ ಪ್ರಕಾರ ಆರ್ಥಿಕ ಕಾರ್ಯಕ್ರಮಗಳ ಗುರಿ ಉದ್ದೇಶಗಳು : ರಾಷ್ಟ್ರ ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸಬೇಕು; ಗ್ರಾಹಕ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಬೇಕು. ಕನಿಷ್ಠ ಜೀವನಮಟ್ಟದ ಭರವಸೆ ನೀಡಬೇಕು, ಅಸಮಾನತೆಯನ್ನು ತಗ್ಗಿಸಬೇಕು ಮತ್ತು ವಿಕೇಂದ್ರೀಕರಣ ಮಾಡಬೇಕು– ಮೊದಲಾದವುಗಳಾಗಿರಬೇಕು.[೨೩]

## ಆರ್ಥಿಕ ಕಾರ್ಯಕ್ರಮಗಳ ಆದ್ಯತೆಗಳು

ಒಳ್ಳೆಯ ಅರ್ಥ ವ್ಯವಸ್ಥೆ ಕೃಷಿ, ಕೈಗಾರಿಕೆ ವಾಣಿಜ್ಯ ಮತ್ತು ಸೇವೆಗಳಲ್ಲಿ ಸಮತೋಲದ ಆಭಿವೃದ್ಧಿಯನ್ನು ಸಾಧಿಸಬೇಕು. ಆದರೆ ತ್ವರಿತಗತಿಯ ಆರ್ಥಿಕ ಅಭಿವೃದ್ಧಿಗಾಗಿ ಅದ್ಯತೆಗಳನ್ನು ಗೊತ್ತು ಪಡಿಸಬೇಕು. ದೀನದಯಾಳಜಿ ಕೆಳಗಿನ ಆದ್ಯತೆಗಳನ್ನು ಸೂಚಿಸಿದ್ದಾರೆ.

### ೧. ಬಡತನ ನಿರ್ಮೂಲನೆ

ಭಾರತ ಬಡ ರಾಷ್ಟ್ರ. ದೀರ್ಘಾವಧಿಯ ಯೋಜನೆ ನಂತರವೂ ಭಾರತದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಶೇ ೪೦ ರಷ್ಟು ಮಂದಿ ಬಡತನರೇಖೆಗೂ ಕೆಳಗಿದ್ದಾರೆ. ಆದ್ದರಿಂದ ಬಡತನ ನಿವಾರಣೆಗೆ ಪ್ರಥಮ ಆದ್ಯತೆ ನೀಡಬೇಕು.

ದೀನದಯಾಳ್ ಅವರ ಪ್ರಕಾರ ಬಡತನದ ನಿರ್ಮೂಲನೆಗೆ ಉತ್ಪಾದನೆಯನ್ನು ಹೆಚ್ಚಿಸುವ ಅಗತ್ಯವಿದೆ. ಇದರ ಜೊತೆಗೆ ಉತ್ಪನ್ನಗಳನ್ನು ಸಮಾಜದಲ್ಲಿ ನ್ಯಾಯಸಮ್ಮತ ರೀತಿಯಲ್ಲಿ ವಿತರಿಸುವುದು ಖಾತ್ರಿಯಾಗಬೇಕು. ಉಪಾಧ್ಯಾಯರ ಅಭಿಪ್ರಾಯದಂತೆ, ಉತ್ಪಾದನೆ ತ್ವರಿತಗತಿಯಲ್ಲಿ ಹೆಚ್ಚುತ್ತಿರುವ ಫಲವಾಗಿ ಅಧಿಕಗೊಳ್ಳುತ್ತಿರುವ ಬೇಡಿಕೆಗನುಗುಣವಾಗಿಲ್ಲ. ಬದಲಾಗುತ್ತಿರುವ ಜೀವನ ಪರಿಸ್ಥಿತಿಗನುಗುಣವಾಗಿಯೂ ಇಲ್ಲ. ನಮಗೆ ಬೇಕಾದದ್ದುರ ಉತ್ಪಾದನೆಯಾಗುತ್ತಿಲ್ಲ. ಬೇಡವಾದದ್ದುರ ಉತ್ಪಾದನೆಯಾಗುತ್ತಿದೆ. ಇದಕ್ಕೆ ಕಾರಣ ನಮ್ಮತನವನ್ನು ಮರೆತು ಪಾಶ್ಚಾತ್ಯೀಕರಣವನ್ನು ಅನುಸರಿಸುತ್ತಿರುವುದು. ಪಾಶ್ಚಾತ್ಯ ರಾಷ್ಟ್ರಗಳ ಅರ್ಥ ವ್ಯವಸ್ಥೆ ಅಗತ್ಯಗಳ ತುಷ್ಟೀಕರಣಕ್ಕೆ ಪ್ರಯತ್ನಿಸುತ್ತದೆ. ದೀನದಯಾಳರ ಪ್ರಕಾರ ಇಂಥ ಅರ್ಥ–ವ್ಯವಸ್ಥೆ ವಿನಾಶಕ್ಕೆ ಹಾದಿ ಮಾಡಿ ಕೊಡುತ್ತದೆ.[೨೪]

### ೨. ಅಗತ್ಯಗಳ ನಿಯಂತ್ರಣ

ಅತ್ಯಧಿಕ ಜನರು ಕನಿಷ್ಠ ಮೂಲಭೂತ ಅಗತ್ಯಗಳೂ ದೊರೆಯದೆ ಕಷ್ಟದಲ್ಲಿ



ಬದುಕನ್ನು ದೂಡುತ್ತಿರುವಾಗ ಹೆಚ್ಚು ಆಕಾಂಕ್ಷೆ ಪಡುವುದು ನೈತಿಕವಾಗಿ ಸರಿಯಲ್ಲ ಎಂದು ದೀನದಯಾಳಜಿ ಅಭಿಪ್ರಾಯಪಡುತ್ತಾರೆ. ಹೆಚ್ಚಿನ ಆಸೆ–ಆಕಾಂಕ್ಷೆಗಳು ಮನುಷ್ಯನನ್ನು ಬಯಕೆಗಳ ದಾಸನನ್ನಾಗಿ ಮಾಡುತ್ತವೆ. ಉನ್ನತ ಜೀವನಮೌಲ್ಯಗಳನ್ನೂ ಬದುಕಿನ ಗುರಿಯನ್ನೂ ಉಪೇಕ್ಷಿಸುವಂತೆ ಮಾಡುತ್ತವೆ. ಅಲ್ಲದೆ ಅಧಿಕ ಆಸೆ ಆಕಾಂಕ್ಷೆಗಳ ಪ್ರವೃತ್ತಿ ಪ್ರಕೃತಿಯನ್ನು ಹೆಚ್ಚಾಗಿ ಶೋಷಿಸುವುದಕ್ಕೆಡೆ ಮಾಡಿಕೊಡುತ್ತದೆ. ಇದು ಇಡೀ ಮನುಕುಲಕ್ಕೆ ಹಾಗೂ ಸಂಸ್ಕೃತಿಗೆ ಕೇಡುಂಟುಮಾಡಬಹುದು.[೨೫] ಇದು ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ. ಉತ್ಪಾದನೆ ಹೆಚ್ಚಿಸುವ ಪ್ರಯತ್ನದಲ್ಲಿ ನಾವು ನಿಸರ್ಗದ ಮೇಲೆ ಸವಾರಿ ಮಾಡಿ ಅದನ್ನು ಆಕ್ರಮಿಸುವುದರತ್ತ ಗಮನಹರಿಸಿದ್ದೇವೆ. ಆದರೆ ಇದರಲ್ಲಿ ನಾವು ಜಯಶಾಲಿಗಳಾದರೂ ನಷ್ಟವಾಗುವುದು ನಮಗೇ.[೨೬] ಎಂದೇ ಉಪಾಧ್ಯಾಯರ ಅಭಿಪ್ರಾಯ ಮಹತ್ವಪೂರ್ಣವಾದದ್ದು.

### ೩. ಗ್ರಾಹಕ ವಸ್ತುಗಳ ಹೆಚ್ಚುವರಿ

ಗ್ರಾಹಕ ಉತ್ಪನ್ನಗಳನ್ನು ಹೆಚ್ಚಾಗಿ ಉತ್ಪಾದಿಸಬೇಕು. ಏಕೆಂದರೆ ಪ್ರತಿಯೊಂದು ಆರ್ಥಿಕ ಚಟುವಟಿಕೆಯ ಮೂಲೋದ್ದೇಶವೂ ಗ್ರಾಹಕ ಉತ್ಪನ್ನಗಳ ತಯಾರಿಕೆಯೇ ಆಗಿದೆ. ಪಾಶ್ಚಾತ್ಯ ಜಗತ್ತಿನಲ್ಲಿರುವಂತೆ, ಮಾನವನನ್ನು ಸಂತುಷ್ಟಗೊಳಿಸಲು ಅತ್ಯಧಿಕ ಉತ್ಪಾದನೆ ಸಹ್ಯವಾಗಬಹುದು.[೨೭] ಆದರೆ ಉತ್ಪಾದನಾ ಪ್ರಕ್ರಿಯೆಯಲ್ಲಿ ಕೊರತೆ ಇರುವ ಸಂಪನ್ಮೂಲಗಳನ್ನು ರಕ್ಷಿಸಲು ಅವಕಾಶಗಳಿರಬೇಕು ಹಾಗೂ ನಿಸರ್ಗದಲ್ಲಿ ಸಮತೋಲ ಕಾಪಾಡಬೇಕು. ಜನತೆಯ ಕೊಳ್ಳುವ ಶಕ್ತಿಗನುಗುಣವಾಗಿರದ ಅಧಿಕ ಉತ್ಪಾದನೆ ಹಿಂಜರಿತಕ್ಕೆ, ನಿರುದ್ಯೋಗಕ್ಕೆ ದಾರಿಮಾಡಿಕೊಡುತ್ತವೆ.

### ೪. ಕನಿಷ್ಠ ಅಗತ್ಯಗಳು

ಪ್ರತಿಯೊಬ್ಬ ಪ್ರಜೆಗೂ ಅನ್ನ ಆಹಾರ, ವಸತಿ, ಉಡುಪು, ಶಿಕ್ಷಣ, ಆರೋಗ್ಯ ಮೊದಲಾದ ಸೌಲಭ್ಯಗಳನ್ನು ಕಲ್ಪಿಸಬೇಕು.[೨೮] ಈ ಕನಿಷ್ಠ ಸೌಲಭ್ಯಗಳನ್ನು ಒದಗಿಸದ ರಾಜ್ಯವನ್ನು ಧರ್ಮ ರಾಜ್ಯ ಎಂದು ಕರೆಯಲಾಗದು.

### ೫. ಆಹಾರದಲ್ಲಿ ಸ್ವಾವಲಂಬನೆ

ಮಾನವನ, ಮೇಲೆ ಹೇಳಿದ ಐದು ಅಗತ್ಯಗಳಲ್ಲಿ ಆಹಾರ ಅತ್ಯಗತ್ಯವಾದದ್ದು. ಅವಶ್ಯಕವಾಗಿರುವ ಆಹಾರಧಾನ್ಯಗಳನ್ನು ಪೂರೈಸಲಾಗದ ಅರ್ಥ ವ್ಯವಸ್ಥೆ ಚಿರಾಯುವಾಗಲಾರದು.[೨೯] ಇದು ಕೃಷಿ ಉತ್ಪಾದನೆ ಹೆಚ್ಚಳಕ್ಕೆ ಕರೆಕೊಡುತ್ತದೆ. ಹಾಗೂ ಕೃಷಿ ಉತ್ಪಾದನೆಯಲ್ಲಿನ ಹೆಚ್ಚಳ ಅರ್ಥವ್ಯವಸ್ಥೆಯ ಉಳಿದ ಅಂಗಗಳನ್ನು

ಪೋಷಿಸಬೇಕು. ಅಭಿವೃದ್ಧಿಶೀಲ ಕೃಷಿಗೆ ಕೈಗಾರಿಕಾ ಉತ್ಪನ್ನಗಳು ಬೇಕು. ಆದ್ದರಿಂದ ಕೈಗಾರಿಕಾ ಉತ್ಪನ್ನಗಳ ಬೇಡಿಕೆಯೂ ಹೆಚ್ಚುತ್ತದೆ. ಇದರಿಂದಾಗಿ ಆರ್ಥಿಕ ಅಭಿವೃದ್ಧಿಗೆ ಅಗತ್ಯವಾದ ಕೃಷಿ ಮತ್ತು ಕೈಗಾರಿಕೆಗಳ ಬೆಳವಣಿಗೆಯೂ ಸಾಧ್ಯವಾದೀತು.[೩೧]

## ಕೃಷಿ

ನಿಸ್ಸಂಶಯವಾಗಿಯೂ ದೇಶದ ಅಭ್ಯುದಯಕ್ಕಾಗಿ ದೀನದಯಾಳರು ಕೃಷಿಗೆ ಆದ್ಯತೆ ನೀಡಿದ್ದರು. ಭಾರತದಲ್ಲಿ ಬಹುಮಟ್ಟಿನ ರೈತರು ಭೂರಹಿತರು ಹಾಗೂ ಸಣ್ಣ ಹಿಡುವಳಿದಾರರು. ಜೀವನ ನಿರ್ವಹಣೆ ಅವರಿಗೆ ಕಷ್ಟದಾಯಕ. ತಲಾ ಲಭ್ಯವಿರುವ ಜಮೀನು ಅತ್ಯಲ್ಪ. ಕೃಷಿಯಿಂದ ಅರ್ಥವ್ಯವಸ್ಥೆಯ ಬೇರೆ ಕ್ಷೇತ್ರಗಳಿಗೆ ಜನರನ್ನು ಸ್ಥಳಾಂತರಿಸುವುದರಿಂದ, ಅಂದರೆ ಬೇರೆ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುವುದರಿಂದ ಕೃಷಿ ಮೇಲಿನ ಒತ್ತಡ ಕಡಿಮೆಯಾಗಬಹುದು ಹಾಗೂ ಕೃಷಿಯಲ್ಲಿ ತೊಡಗಿದವರ ಜೀವನಮಟ್ಟ ಸುಧಾರಿಸಬಹುದು. ಹೀಗೆ ಅರ್ಥ ವ್ಯವಸ್ಥೆಯ ಬೇರೆ ಕ್ಷೇತ್ರಗಳಲ್ಲಿ ತೊಡಗಿರುವವರ ಪೋಷಣೆಗಾಗಿ ಕೃಷಿಯಲ್ಲಿ ಹೆಚ್ಚುವರಿ ಇಳುವರಿ ಅಗತ್ಯ ಉಂಟಾಗುತ್ತದೆ ಕೃಷಿಕ್ಷೇತ್ರ ಬೇರೆ ಬೇರೆ ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ವಸ್ತುಗಳನ್ನೂ ಉತ್ಪಾದಿಸುತ್ತದೆ. ಆದ್ದರಿಂದ ಆರ್ಥಿಕ ಅಭಿವೃದ್ಧಿ ಮತ್ತು ಜೀವನ ಮಟ್ಟ ಸುಧಾರಣೆಗಾಗಿ ಕೃಷಿ ಉತ್ಪಾದನೆ ಅಧಿಕಗೊಳಿಸಬೇಕಾಗುತ್ತದೆ. ಭಾರತದಲ್ಲಿ ಕೃಷಿಗಾಗಿ ತಲಾ ಲಭ್ಯವಿರುವ ಜಮೀನು ಅತ್ಯಲ್ಪ ಪ್ರಮಾಣದ್ದು. ಹೀಗಾಗಿ ಸಾಂದ್ರೀಕೃತ ವ್ಯವಸಾಯವೊಂದೇ ಕೃಷಿ ಉತ್ಪಾದನೆ ಹೆಚ್ಚಿಸಲು ಉಳಿದಿರುವ ಏಕೈಕ ಮಾರ್ಗ.

ಕೃಷಿ ಉತ್ಪಾದನೆ ಹೆಚ್ಚಿಸಬೇಕೆನ್ನುವಾಗ, ಪ್ರಾರಂಭದಲ್ಲಿ ರೈತರು ಕೈಗಾರಿಕಾ ಅಭಿವೃದ್ಧಿಯ ಭಾರವನ್ನು ಭರಿಸಬೇಕೆನ್ನುವ ಅಭಿಪ್ರಾಯವನ್ನು ದೀನದಯಾಳರು ಒಪ್ಪುವುದಿಲ್ಲ. ಅಭಿವೃದ್ಧಿ ಪ್ರಯತ್ನಗಳಿಗೆ ಸ್ಪಷ್ಟ ದಿಕ್ಕು ದಿಸೆ ತೋರುವ ಸಲುವಾಗಿ ರೈತರು ಶುರುವಿಗೆ ಕೈಗಾರಿಕಾ ಅಭಿವೃದ್ಧಿಯ ಹೊರೆ ಹೊರಬೇಕು. ನಂತರ ಇದರಿಂದ ರೈತಸಮುದಾಯದ ಸ್ಥಿತಿ ಸುಧಾರಿಸುತ್ತದೆ[೩೨]. ಈ ಅಭಿಪ್ರಾಯದ ಪ್ರಕಾರ ಕಚ್ಚಾ ವಸ್ತುಗಳು ಹಾಗೂ ಸಿದ್ಧಪಡಿಸಿದ ಉತ್ಪನ್ನಗಳ ಸಂಗ್ರಹಣ ಬೆಲೆಯನ್ನು ಕಡ್ಡಾಯಗೊಳಿಸಬೇಕು ಹಾಗೂ ಒಂದು ನಿರ್ದಿಷ್ಟ ವರ್ಗದ ರೈತರಿಗೆ ಗೇಣಿ ಬಾಡಿಗೆಯನ್ನು ಕಡ್ಡಾಯಗೊಳಿಸಬೇಕು. ಈ ಗೇಣಿದಾರ ರೈತವರ್ಗ ಆರ್ಥಿಕ ವಲಯದ ಬೇರೆಕ್ಷೇತ್ರಗಳಿಗೆ ಉತ್ಪನ್ನಗಳನ್ನು ಪೂರೈಸಬೇಕು ಎನ್ನುವ ವಾದವನ್ನು ದೀನದಯಾಳರು ಭ್ರಮಾತ್ಮಕವಾದದ್ದು ಎಂದು ಕರೆದಿದ್ದಾರೆ.[೩೩] ಇಂಗ್ಲೆಂಡ್ ಈ ನೀತಿಯನ್ನು ಅನುಸರಿಸಿತು. ಇಂಗ್ಲೆಂಡಿನ ಈ ನೀತಿಯಿಂದಾಗಿ ಭಾರತ ಹಾಗೂ ಇತರ ವಸಾಹತುಶಾಹಿ ರಾಷ್ಟ್ರಗಳ ರೈತರು ಇಂಗ್ಲೆಂಡಿನ ಉದ್ಯಮಗಳ ಪೋಷಣೆಯ ಭಾರ ಹೊರಬೇಕಾಗಿ ಬಂತು. ಆದರೆ ಇಂಗ್ಲೆಂಡಿನ ಕೈಗಾರಿಕಾ ಅಭಿವೃದ್ಧಿಯ



ಇವರನ್ನು ತಲುಪಲೇ ಇಲ್ಲ. ಆದ್ದರಿಂದ ಕೈಗಾರಿಕಾ ಅಭಿವೃದ್ಧಿಗಾಗಿ ರೈತಸಮುದಾಯ ಕಷ್ಟಪಡಬೇಕಾಗಿದ್ದಿಲ್ಲ. ಅಮೆರಿಕದಲ್ಲೂ ಅಗತ್ಯಕ್ಕಿಂತ ಹೆಚ್ಚು ಬೆಳೆ ತೆಗೆಯುವ ರೈತರು ತಮ್ಮ ಅಭ್ಯುದಯಕ್ಕಾಗಿ ಬೆಲೆಸ್ಥಿರೀಕರಣ ಮೊದಲಾದ ನೀತಿಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ಇದೆ.[೩೪]

ಕೈಗಾರಿಕಾ ಅಭಿವೃದ್ಧಿಯ ಸಲುವಾಗಿ ಕೃಷಿ ಕ್ಷೇತ್ರದಲ್ಲಿ ಅಭ್ಯುದಯವಾಗಬೇಕೆಂದು ದೀನ್‌ದಯಾಳ್‌ಜಿ ನಂಬಿಕೆ. ಕೃಷಿ ಕ್ಷೇತ್ರದಲ್ಲಿ ಅಭ್ಯುದಯವಾದರೆ ಕೈಗಾರಿಕಾ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುತ್ತದೆ. ಇದರಿಂದಾಗಿ ಅರ್ಥ ವ್ಯವಸ್ಥೆಯ ಕೈಗಾರಿಕೆ ಹಾಗೂ ಇನ್ನಿತರ ರಂಗಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಆದರೆ ಹೆಚ್ಚುವರಿ ಇಳುವರಿಯ ಬೇಡಿಕೆ ಕುಸಿದು ಬೆಲೆಗಳು ಏರುತ್ತವೆ. ಆಹಾರ ಧಾನ್ಯಗಳ ಬೆಲೆ ಏರಿಕೆಯಿಂದಾಗಿ ಕೃಷಿಯೇತರ ಕ್ಷೇತ್ರಗಳಲ್ಲಿ ಸಂಬಳ ಸಾರಿಗೆ ಮಟ್ಟ ಹೆಚ್ಚುತ್ತದೆ. ಇದು ಈ ಕ್ಷೇತ್ರಗಳ ಅಭಿವೃದ್ಧಿಯ ಮೇಲೆ ಪರಿಣಾಮ ಬೀರದೇ ಇರದು. ಕೈಗಾರಿಕೆಗಳ ಉಳಿವಿಗಾಗಿ ಹೆಚ್ಚುವರಿಧಾನ್ಯ ಪೂರೈಸುವಂತೆ ರೈತರನ್ನು ಒತ್ತಾಯಪಡಿಸುವ ಪ್ರಯತ್ನ ನಡೆದಲ್ಲಿ ರೈತರ ಕೈ ಬರಿದಾಗುತ್ತದೆ, ಕೃಷಿ ಅಭಿವೃದ್ಧಿಗಾಗಿ ಹೂಡಲು ಅವರ ಬಳಿ ಹಣಕಾಸು ಇರುವುದಿಲ್ಲ.[೩೫] ರೈತರ ಮೇಲೆ ಉಳಿತಾಯದ ಒತ್ತಡ ಹೇರುವುದು ಸಮಸ್ಯೆಗೆ ಪರಿಹಾರವಲ್ಲ. ಪ್ರತಿಯಾಗಿ ತಮ್ಮ ಅಭಿವೃದ್ಧಿಗಾಗಿ ಉಳಿತಾಯಮಾಡಬೇಕೆಂಬ ಇಚ್ಛೆ, ಒಲವುಗಳು ರೈತರಲ್ಲಿ ಮೂಡಬೇಕು. ರೈತರು ಇಂಥ ಒಲವು ಮೂಡಿಸುವ ಪ್ರಯತ್ನಗಳಾಗಬೇಕು. ರೈತರು ಅಭಿವೃದ್ಧಿಗೆ ಪ್ರಾಮುಖ್ಯ ಕೊಡಬೇಕು. ಕೃಷಿ ಅಭಿವೃದ್ಧಿ ಪ್ರಧಾನವಾಗಬೇಕು. ಇದು ಸಾಧ್ಯವಾಗದೇ ಕೈಗಾರಿಕಾ ಅಭಿವೃದ್ಧಿಗೆ ಅಗತ್ಯವಾದ ಮಾರಕಟ್ಟೆಯನ್ನು ಸೃಷ್ಟಿಸುವುದು ಅಸಾಧ್ಯ.[೩೬]

ರೈತರು ತಮ್ಮ ಅಭಿವೃದ್ಧಿಗಾಗಿ ಶ್ರಮಿಸಬೇಕು. ಜೊತೆಗೆ ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ನೀಡುವ ಮೂಲಕ ರೈತರ ಶ್ರಮಕ್ಕೆ ತಕ್ಕ ಪ್ರತಿ ಫಲ ದೊರೆಯುವಂತೆ ಮಾಡಬೇಕು. ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ನೀಡಿದಲ್ಲಿ ರೈತ ಸಮುದಾಯ ಅಧಿಕ ವರಮಾನದಿಂದ ಉತ್ತೇಜಿತರಾಗುತ್ತಾರೆ. ಇದು ಸೃಷ್ಟಿಸುವ ಉತ್ಸಾಹ ಹೆಚ್ಚಿನ ದುಡಿಮೆಗೆ ಮೀಟುಗೋಲಾಗುತ್ತದೆ. ಕೃಷಿ ಮೇಲಿನ ಒತ್ತಡವನ್ನು ಬೇರೆಕ್ಷೇತ್ರಗಳಿಗೆ ವರ್ಗಾಯಿಸಬೇಕಾದ ಅಗತ್ಯವೂ ಇದೆ. ಆದ್ದರಿಂದ ದೀನದಯಾಳರ ಅಭಿಪ್ರಾಯದ ಪ್ರಕಾರ ಕೃಷಿ ಉತ್ಪಾದನೆಯಲ್ಲಿ ಏರಿಕೆ, ಕೃಷಿ ಮೇಲಿನ ಒತ್ತಡ ತಗ್ಗಿಸುವುದು ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ನಿಗದಿಪಡಿಸುವುದು ಹಾಗೂ ಕೃಷಿಕರ ಜೀವನ ಮಟ್ಟ ಸುಧಾರಿಸುವುದು – ಇವೆಲ್ಲ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಗುರಿಯಾಗಬೇಕು. ಉತ್ಪಾದನೆಗೆ ಅತ್ಯಂತ ಅನುಕೂಲಕರವಾದ ವಾತಾವರಣ ಸೃಷ್ಟಿ, ಗ್ರಾಮೀಣ ಔದ್ಯಮೀಕರಣಕ್ಕೆ ಪ್ರೋತ್ಸಾಹ ಹಾಗೂ ಉತ್ಪನ್ನಗಳಿಗೆ ಲಾಭದಾಯಕ

ಬೆಲೆ ಈ ನೀತಿ ನೆಲಗಟ್ಟಿನ ಮೇಲೆ ಆರ್ಥಿಕ ಕಾರ್ಯಕ್ರಮಗಳನ್ನು ಯೋಜನೆಗಳನ್ನು ರೂಪಿಸಬೇಕು.[೩೭]

## ಗ್ರಾಮೀಣ ಔದ್ಯಮೀಕರಣ

ಕೃಷಿ ಅಭಿವೃದ್ಧಿ ಕುರಿತು ಆಲೋಚಿಸುವಾಗ ಗ್ರಾಮೀಣ ಔದ್ಯಮೀಕರಣದ ಬಗ್ಗೆಯೂ ಯೋಚಿಸಬೇಕಾದ್ದು ಅತ್ಯಗತ್ಯ ಎನ್ನುತ್ತಾರೆ ದೀನದಯಾಳಜಿ. ದುಡಿಯುವ ಕೈಗಳಿಗೆ ಉದ್ಯೋಗ ಒದಗಿಸುವುದರಲ್ಲಿ ಕೃಷಿಕ್ಷೇತ್ರ ಅಸಾಧಾರಣವಾದದ್ದು. ಆದರೆ ವರ್ಷದುದ್ದಕ್ಕೂ ಕೃಷಿ ಕಾರ್ಯ ಚಟುವಟಿಕೆಗಳು ನಡೆಯುತ್ತಿರುವುದಿಲ್ಲ. ಕೆಲವು ತಿಂಗಳುಗಳಲ್ಲಿ ಕೃಷಿ ಕೆಲಸ ಕಾರ್ಯಗಳು ಹೆಚ್ಚಾಗಿದ್ದು ಕೆಲಸಗಾರರಿಗೆ ಬೇಡಿಕೆಯೂ ಹೆಚ್ಚಾಗಿರುತ್ತದೆ. ಎಷ್ಟೋ ವೇಳೆ ಬಿತ್ತನೆ. ನಾಟಿ. ಕುಯಿಲು ಮೊದಲಾದ ಕೃಷಿಕಾರ್ಯಗಳಿಗೆ ಜನ ಸಿಗುವುದೇ ಕಷ್ಟ ಎನ್ನುವಂಥ ಅಭಾವ ಪರಿಸ್ಥಿತಿ ತಲೆದೋರುವುದೂ ಉಂಟು. ಜೊತೆಗೆ ದುರ್ಭಿಕ್ಷದ ದಿನಗಳೂ ಇರುತ್ತವೆ. ಬಿತ್ತನೆ, ನಾಟಿ, ಕುಯಿಲು ಮೊದಲಾದ ಅವಧಿಗಳು ಮುಗಿದು ಕೃಷಿ ಕೆಲಸಕಾರ್ಯಗಳು ಕಡಿಮೆಯಾದಾಗ ದುಡಿಯುವ ಕೈಗಳಿಗೆ ಕೆಲಸವಿಲ್ಲದಂತಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ನಿರುದ್ಯೋಗಿಗಳಾಗುವ ಹಳ್ಳಿಗಳ ಈ ಜನರನ್ನು ನಗರದ ಉದ್ಯಮಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳಬಹುದು. ಆದರೆ ಹಳ್ಳಿಯಿಂದ ದುಡಿಯುವ ಮಂದಿಯನ್ನು ಕಾಯಮ್ಮಾಗಿ ನಗರಗಳ ಉದ್ಯಮಗಳಿಗೆ ವರ್ಗಾಯಿಸುವುದರಿಂದ ಕೃಷಿ ಮೇಲೆ ಪ್ರತಿಕೂಲ ಪರಿಣಾಮವಾಗಲಿದೆ. ಹೇಗೆಂದರೆ ಬಿತ್ತನೆ, ನಾಟಿ, ಕುಯಿಲು ಇವೆ ಮೊದಲಾದ ಕೃಷಿಕಾರ್ಯಗಳ ಅವಧಿಯಲ್ಲಿ ಕೃಷಿ ಕೆಲಸಕಾರ್ಯಗಳಿಲ್ಲದ ಬಿಡುವಿನ ಅವಧಿಯಲ್ಲಿ ಹಳ್ಳಿಯ ದುಡಿಯುವ ಜನರಿಗೆ ಅವರ ಹಳ್ಳಿಗಳಲ್ಲೇ ಉದ್ಯೋಗಾವಕಾಶ ಕಲ್ಪಿಸುವುದು ಅತ್ಯಗತ್ಯ. ಗ್ರಾಮಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಬಿಡುವಿನ ವೇಳೆಯಲ್ಲಿ ಹಳ್ಳಿಗರಿಗೆ ಉದ್ಯೋಗವನ್ನು ಕಲ್ಪಿಸಬಹುದು.[೩೮] ಹೀಗೆ ಕೈಗಾರಿಕಾ ವಿಕೇಂದ್ರೀಕರಣದ ಮೂಲಕ ಬಿಡುವಿನ ವೇಳೆಯಲ್ಲಿ ಹಳ್ಳಿಯ ಜನರಿಗೆ ಉದ್ಯೋಗವನ್ನು ಕಲ್ಪಿಸಿದಂತಾಗುತ್ತದೆ; ಇದರಿಂದ ರೈತರ ವರಮಾನ ಹೆಚ್ಚುತ್ತದೆ ಹಾಗೂ ರೈತರಿಗೆ ತಮ್ಮ ಕಾಲ ಮತ್ತು ಸಂಪನ್ಮೂಲಗಳ ಸದ್ವಿನಿಯೋಗಕ್ಕೆ ಉತ್ತಮ ಅವಕಾಶಗಳನ್ನೂ ಒದಗಿಸಿದಂತಾಗುತ್ತದೆ.

## ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳು

ಸಾಂದ್ರೀಕೃತ ವ್ಯವಸಾಯಕ್ಕಾಗಿ ದೀನದಯಾಳಜಿ ಎರಡು ಬಗೆಯ ಕಾರ್ಯಕ್ರಮಗಳನ್ನು ಸಲಹೆ ಮಾಡುತ್ತಾರೆ,[೩೯] ೧. ತಾಂತ್ರಿಕ ೨. ಸಾಂಸ್ಥಿಕ ಕಾರ್ಯಕ್ರಮಗಳು.



## ತಾಂತ್ರಿಕ ಕಾರ್ಯಕ್ರಮ

ತಾಂತ್ರಿಕ ಕಾರ್ಯಕ್ರಮಗಳು ಕೃಷಿಸಾಗುವಳಿಯ ವಿಧಾನಗಳಿಗೆ ಸಂಬಂಧಿಸಿದ್ದು. ಯಾವ ಸಂಪನ್ಮೂಲಗಳನ್ನು ಬಳಸಬೇಕು? ಉತ್ಪಾದನೆ ಅತ್ಯಂತ ಅನುಕೂಲಕರವಾಗಿರಲು ಅನುವಾಗುವಂತೆ ನಿರ್ದಿಷ್ಟ ಸಂಪನ್ಮೂಲಗಳ ಸಂಯೋಜನೆ ಹೇಗಿರಬೇಕು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡು ನಿರ್ಧಾರಗಳನ್ನು ಕೈಗೊಳ್ಳುವುದು ಈ ಕಾರ್ಯಕ್ರಮಗಳ ಮುಖ್ಯ ಕಾಳಜಿಯಾಗಿರುತ್ತದೆ ಭಾರತದ ರೈತಾಪಿ ಜನರು ಭಾರತೀಯ ಪರಿಸ್ಥಿತಿಗನುಗುಣವಾದ ಸಾಗುವಳಿ ಪದ್ಧತಿಯನ್ನು ರೂಪಿಸಿಕೊಂಡಿದ್ದಾರೆ ಎನ್ನುವುದು ದೀನದಯಾಳ್ ದೃಢನಂಬಿಕೆ. ಸರದಿ ಕೃಷಿ ಪದ್ಧತಿ, ಬೆರಕೆಗೊಬ್ಬರ; ಮಣ್ಣು ಸಂರಕ್ಷಣೆ, ನೆಡು ತೋಪು, ತೋಟಗಾರಿಕೆ ಇವೆಲ್ಲ ಭಾರತೀಯ ಕೃಷಿಕರಿಗೆ ಚೆನ್ನಾಗಿ ತಿಳಿದಿರುವ ಸಂಗತಿಗಳೇ ಆಗಿವೆ. ಭೂಮಿಯ ಫಲವತ್ತತೆಯನ್ನು ಉಳಿಸಿಕೊಂಡು ದೀರ್ಘಕಾಲದಿಂದ ಅವರು ಈ ಎಲ್ಲ ಸಾಗುವಳಿ ಪದ್ಧತಿಗಳನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಹೊಸ ಕೃಷಿ ವಿಧಾನಗಳ ಹೆಸರಿನಲ್ಲಿ ಕಾಲಾನುಕಾಲದಿಂದ ಬಂದಿರುವ ಈ ಸಾಗುವಳಿ ಪದ್ಧತಿಗಳನ್ನು ಒಮ್ಮೆಗೇ ಸಂಪೂರ್ಣವಾಗಿ ಕೈಬಿಡುವುದು ಅಪೇಕ್ಷಣೀಯವಲ್ಲ. ಹೊಸಕೃಷಿ ವಿಧಾನಗಳು ಇನ್ನೂ ಪ್ರಯೋಗಾವಸ್ಥೆಯಲ್ಲಿವೆ ಭಾರತದ ಪರಿಸ್ಥಿತಿಗೆ ಇವು ಹೊಂದಿಕೊಳ್ಳುತ್ತವೆಯೇ ಎಂದು ನೋಡುವ ಪರೀಕ್ಷೆಗಳು ಇನ್ನೂ ನಡೆಯುತ್ತಿವೆ.[೪೦]

ಭಾರತದ ಮಳೆ ಮಾರುತಗಳು ಒಂದು ಜೂಜಾಟವಿದ್ದಂತೆ. ಆದ್ದರಿಂದ ಭಾರತದಲ್ಲಿ ಕೃಷಿಗೆ ನೀರಾವರಿ ಸೌಲಭ್ಯ ಒದಗಿಸಬೇಕಾದ್ದು ಅತ್ಯವಶ್ಯಕ ಎಂದು ಉಪಾಧ್ಯಾಯರು ಒತ್ತಿಹೇಳುತ್ತಾರೆ. ಮಳೆಮಾರುತದ ನಕ್ಷೆ ಭಾರತೀಯ ರೈತನ ಹೃದಯದ ಮಿಡಿತದ ನಕ್ಷೆ ಇದ್ದಂತೆ.[೪೧] ಮಳೆ ಬರಬೇಕಾದ ಕಾಲವಿದೆ. ನಿರ್ದಿಷ್ಟಕಾಲಮಾನದಲ್ಲಿ ಮಳೆಯಾಗಬೇಕು. ಆದರೆ ಇದು ಅನಿಶ್ಚಿತ. ಇಲ್ಲ ಅತಿವೃಷ್ಟಿ ಅಥವಾ ಅನಾವೃಷ್ಟಿ. ಅತ್ಯಧಿಕ ಮಳೆಯಾಗುವುದು. ಮಳೆ ಪ್ರಮಾಣ ಸರಿಯಾಗಿದ್ದಾಗಲೂ ಅದು ಸಾಗುವಳಿಯ ಅಗತ್ಯಗಳಿಗೆ ಪೂರಕವಾಗಿರುತ್ತದೆ ಎನ್ನುವ ಖಾತ್ರಿ ಇಲ್ಲ. ಉಪಾಧ್ಯಾಯರ ಪ್ರಕಾರ ಸಮಾಜಕ್ಕೆ ನೀರಾವರಿ ಸೌಕರ್ಯ ಕಲ್ಪಿಸುವುದು ಆಡಳಿತದ ಜವಾಬ್ದಾರಿ. ಸ್ವಾತಂತ್ರ್ಯಾನಂತರ ಅಮೆರಿಕದ ಹಾದಿ ಹಿಡಿದಿರುವ ಭಾರತ ಬೃಹತ್ ನೀರಾವರಿ ಯೋಜನೆಗಳನ್ನು ಕೈಗೊಂಡಿದೆ. ದೀನ ದಯಾಳರ ಪ್ರಕಾರ ಈ ಬೃಹತ್ ನೀರಾವರಿ ಯೋಜನೆಗಳು ಭಾರತದಂಥ ದೇಶಕ್ಕೆ ಸೂಕ್ತವಲ್ಲ. ಭಾರತಕ್ಕೆ ಸಣ್ಣ ನೀರಾವರಿ ಯೋಜನೆಗಳೇ ಸೂಕ್ತವಾದದ್ದು. ಬೃಹತ್ ನೀರಾವರಿ ಯೋಜನೆಗಳು ತುಲನಾತ್ಮಕವಾಗಿ ದುಬಾರಿಯಾದ ಯೋಜನೆಗಳು ಹಾಗೂ ಕೃಷಿ ಉತ್ಪಾದನೆಯಲ್ಲಿ ತುಲನಾತ್ಮಕವಾಗಿ ಹೆಚ್ಚು ಉಪಯುಕ್ತವಲ್ಲ ಎನ್ನುವುದನ್ನು ದೀನ್ ದಯಾಳಜಿ ಮುಂದಿನ ಕೋಷ್ಟಕದಲ್ಲಿ ತೋರಿಸಿದ್ದಾರೆ.[೪೨]

**ಕೋಷ್ಟಕ ೪.೨ : ೧೯೫೧–೫೭ರ ಅವಧಿಯ ಕೃಷಿ ಉತ್ಪಾದನೆಗೆ ವಿವಿಧ ಯೋಜನೆಗಳ ಕೊಡುಗೆಯನ್ನು ತೋರಿಸುವ ತಃಖ್ತೆ.**

| **ಯೋಜನೆ** | **ಶೇಕಡಾವಾರು ಫಸಲು ಇಳುವರಿ** | **ಗುರಿ ಸಾಧನೆ ಹೂಡಿದಬಂಡವಾಳ** |
|---|---|---|
| ೧. ಬೃಹತ್ ನೀರಾವರಿ ಯೋಜನೆಗಳು | ೪೭ | ೯೨ |
| ೨. ಸಣ್ಣ ನೀರಾವರಿ ಯೋಜನೆಗಳು | ೯೧ | ೬೩ |
| ೩. ಭೂಮಿಯನ್ನು ಸುಧಾರಿತ ಸ್ಥಿತಿಗೆ ತರುವುದು (ಸಂಸ್ಕರಣ) ಮತ್ತು ಅಭಿವೃದ್ಧಿ ಕಾರ್ಯಗಳು | ೭೭ | ೭೫ |
| ೪. ರಾಸಾಯನಿಕ ಗೊಬ್ಬರ | ೫೦ | ೫೯ |
| ೫. ಸುಧಾರಿತ ಬೀಜಗಳು | ೫೫ | ೫೬ |

**ಮಾಹಿತಿ ಮೂಲ :** ಭಾರತೀಯ ಅರ್ಥ ನೀತಿ ವಿಕಾಸ್ ಕಿ ಏಕ್ ದಿಶಾ, ಲೇ: ದೀನದಯಾಳ್ ಉಪಾಧ್ಯಾಯ, ಪ್ರಕಾಶಕರು. ರಾಷ್ಟ್ರಧರ್ಮ ಪಬ್ಲಿಕೇಶನ್, ಲಖನೌ, ೧೯೫೮ ಪುಟ ೩೬

ಬೃಹತ್ ನೀರಾವರಿ ಯೋಜನೆಗಳ ಮುಖ್ಯ ನ್ಯೂನತೆ ಎಂದರೆ ಅವುಗಳ ನೀರಿನ ಮಟ್ಟ ಹೊಲಗದ್ದೆಗಳಿಗೆ ಹಾನಿಯುಂಟು ಮಾಡುವ ಪ್ರಮಾಣದಲ್ಲಿ ಏರುತ್ತದೆ. ಮಣ್ಣನ್ನು ಕ್ಷಾರೀಯಗೊಳಿಸುತ್ತದೆ ಪರಿಣಾಮವಾಗಿ ಭೂಮಿ ಬಂಜರಾಗುತ್ತದೆ. ನೀರಿನ ಸಹಜ ಹರಿವಿಗೆ ಅಡಚಣೆಯಾಗುವುದರಿಂದ ಹಾಗೂ ಮಣ್ಣಿನ ನೀರು ಹೀರುಕೊಳ್ಳುವ ಸಾಮರ್ಥ್ಯ ಕಡಿಮೆಯಾಗುವುದರಿಂದ ಮಳೆಗಾಲದಲ್ಲಿ ಪ್ರವಾಹದ ಭೀತಿ ತಲೆದೋರುತ್ತದೆ. ಜೊತೆಗೆ ಹಳ್ಳಕೊಳ್ಳಗಳಲ್ಲಿ ನೀರು ಸಂಗ್ರಹವಾಗಿ ಆರೋಗ್ಯಕ್ಕೆ ಧಕ್ಕೆಯಾಗುತ್ತದೆ. ಇದು ನಮಗೆ ಸಾಮಾನ್ಯವಾಗಿ ಆಗುತ್ತಿರುವ ಅನುಭವ. ಅಣೆಕಟ್ಟುಗಳ ನೆಲವನ್ನು ಸಿಮೆಂಟ್ ಗಾರೆಗಚ್ಚುಗಳಿಂದ ಸಾಪಾಟುಗೊಳಿಸುವುದು ಹಾಗೂ ನೀರನ್ನು ಕೊಳವೆ ಮೂಲಕ ಹಾಯಿಸುವದರಿಂದ ಸಮಸ್ಯೆಗಳ ಪರಿಹಾರವಾಗಬಹುದಾದರೂ ಇವೆಲ್ಲ ಭಾರಿವೆಚ್ಚದ ಯೋಜನೆಗಳು.

ಆದ್ದರಿಂದ ಸಣ್ಣ ನೀರಾವರಿ ಯೋಜನೆಗಳೇ ಉಚಿತ ಎನ್ನುತ್ತಾರೆ. ಉಪಾಧ್ಯಾಯರು. ಈ ಕೆಳಗಿನ ಕಾರಣಗಳಿಂದಾಗಿ ಭಾರತದಂಥ ರಾಷ್ಟ್ರಕ್ಕೆ ಸಣ್ಣ ನೀರಾವರಿಯೇ ಸೂಕ್ತ ಎಂದು ಅವರ ಅಂಬೋಣ.

೧. **ಕಡಿಮೆ ಖರ್ಚು – ನಮ್ಮ ಸಾಮರ್ಥ್ಯದ ಮಿತಿಯೊಳಗಿರುತ್ತದೆ.**
೨. **ಯಂತ್ರೋಪಕರಣಗಳ ಆಮದು ಹಾಗೂ ವಿದೇಶಿ ತಂತ್ರಜ್ಞಾನವನ್ನು ಅವಲಂಬಿಸಬೇಕಾಗಿಲ್ಲ.**



೩. **ಯೋಜನೆ ನಿರ್ಮಾಣ ಕಾಲಾವಧಿಯೂ ಕಡಿಮೆ.**
೪. **ಬೃಹತ್ ಅಣೆಕಟ್ಟುಗಳಂತೆ ಹೊಲಗದ್ದೆಗಳನ್ನು ಪ್ರವಾಹದಲ್ಲಿ ಕೊಚ್ಚಿಹಾಕುವ ಅಪಾಯವಿಲ್ಲ.**
೫. **ಬೃಹತ್ ನೀರಾವರಿ ಯೋಜನೆಗಳಲ್ಲಿ ನೀರಾವರಿ ಕಾರ್ಯಗಳಿಗೆ ಬಳಕೆ ಸಣ್ಣ ನೀರಾವರಿ ಯೋಜನೆಗಳಿಗೆ ಹೋಲಿಸಿದಲ್ಲಿ ಕಡಿಮೆ.**
೬. **ಸಣ್ಣ ನೀರಾವರಿ ಯೋಜನೆಗಳಿಗೆ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಳ್ಳಬಹುದು. ಸ್ಥಳೀಯ ಸಹಕಾರ ಪಡೆಯಬಹುದು.**

## ಟ್ರ್ಯಾಕ್ಟರೀಕರಣ

ನೀರಾವರಿ ಸೌಲಭ್ಯದ ಜೊತೆಗೆ ರೈತರಿಗೆ ಸುಧಾರಿತ ಬೇಸಾಯಕ್ಕಾಗಿ ಸುಧಾರಿತ ಉಪಕರಣಗಳು, ಸಲಕರಣೆಗಳು, ಗೊಬ್ಬರ ಹಾಗೂ ಬಿತ್ತನೆ ಬೀಜಗಳ ಅಗತ್ಯವಿದೆ. ಕೃಷಿ ಉತ್ಪಾದನೆಯಲ್ಲಿ ಸುಧಾರಣೆಗಾಗಿ ಭಾರತದಂಥ ರಾಷ್ಟ್ರಗಳು ಟ್ರ್ಯಾಕ್ಟರುಗಳನ್ನು ಬಳಸಬೇಕೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ ಉಪಾಧ್ಯಾಯರ ಪ್ರಕಾರ ಭಾರತದಲ್ಲಿ ಕೃಷಿಕಾರ್ಯಗಳಿಗೆ ಟ್ರಾಕ್ಟರುಗಳ ಬಳಕೆ ಸೂಕ್ತವಲ್ಲ.[೪೬] ನಮ್ಮ ರೈತರು ಸಣ್ಣ ಹಿಡುವಳಿದಾರರು ಹಾಗೂ, ಪ್ರಜಾಪ್ರಭುತ್ವ ವ್ಯವಸ್ಥೆ, ಭೂ ಒಡೆತನ, ಪೂರ್ಣ ಉದ್ಯೋಗಾವಕಾಶ ಇಲ್ಲದಿರುವುದು ಇವೇ ಮೊದಲಾದ ಕಾರಣಗಳಿಂದಾಗಿ ಭಾರತದಲ್ಲಿ ಸಮುದಾಯ ಬೇಸಾಯ ಸಾಧ್ಯವಾಗದು. ಜೊತೆಗೆ ಟ್ರಾಕ್ಟರುಗಳ ತಯಾರಿಕೆ, ತೈಲ ಖರೀದಿ, ಅವುಗಳ ರಿಪೇರಿ ವ್ಯವಸ್ಥೆ, ನಿರ್ವಹಣೆ ಮೊದಲಾದ ಸಮಸ್ಯೆಗಳಿವೆ. ಇವೆಲ್ಲ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವುದು ಸಾಧ್ಯವಾಗಬಹುದಾದರೂ ಜಾನುವಾರು ಸಮಸ್ಯೆ ಉದ್ಭವಿಸುತ್ತದೆ. ಹಸು ಎಮ್ಮೆಗಳು ಹಾಲು ಕೊಡುತ್ತವೆ. ಹೈನುಗಾರಿಕೆಯಲ್ಲಿ ಉಪಯೋಗಕ್ಕೆ ಬರುತ್ತವೆ. ಎತ್ತು, ಕೋಣಗಳನ್ನು ಏನುಮಾಡುವುದು. ಅವುಗಳನ್ನು ನಿರುಪಯುಕ್ತವೆಂದು ಪಶ್ಚಿಮ ರಾಷ್ಟ್ರಗಳಂತೆ ನಾವು ಬಳಸಲಾಗದು. ಎತ್ತು ಕೋಣಗಳನ್ನು ಉತ್ಪಾದನೆಗಾಗಿ ಬಳಸುವುದರಿಂದ ನಮ್ಮ ಅರ್ಥ ವ್ಯವಸ್ಥೆಯನ್ನು ಬಲಗೊಳಿಸಬಹುದು. ಎತ್ತುಗಳು ನಮ್ಮ ಸಾಗುವವಳಿಯ ಅಕ್ಷಾಂಶವಿದ್ದಂತೆ.[೪೭] ಟ್ರ್ಯಾಕ್ಟರುಗಳು ನಮ್ಮ ಅರ್ಥ ವ್ಯವಸ್ಥೆಯನ್ನು ಹಾಳುಗೆಡಹುತ್ತವೆ. ಆದರೆ ಕೃಷಿ ಉಪಕರಣ–ಸಲಕರಣೆಗಳನ್ನು ಅವುಗಳ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ದೃಷ್ಟಿಯಿಂದು ಸುಧಾರಿಸುವುದಕ್ಕೆ ಅವಕಾಶವಿದೆ. ಆಧುನಿಕ ಕಾಲದಲ್ಲಿ ವೈಜ್ಞಾನಿಕ ಬೇಸಾಯ ಅತ್ಯಗತ್ಯ. ಆದ್ದರಿಂದ ಕೃಷಿಯ ಯಾಂತ್ರೀಕರಣದ ಬಗ್ಗೆ ದೀನ್ ದಯಾಳರ ಶಂಕೆಗಳು ನಿರಾಧಾರವಾದವೆನ್ನಿಸುತ್ತದೆ. ಏನೇ ಇರಲಿ ಬೇಸಾಯ ಪರಿಸ್ಥಿತಿಗನುಗುಣವಾದ ಕೃಷಿ ಯಂತ್ರೋಪಕರಣಗಳು ಅತ್ಯವಶ್ಯಕವಾಗಿ ಬೇಕಾಗುತ್ತವೆ.

**ರಾಸಾಯನಿಕ ಗೊಬ್ಬರಗಳು**

ಕೃಷಿ ಉತ್ಪಾದನೆ ವೃದ್ಧಿ ಹಾಗೂ ಮಣ್ಣಿನ ಫಲವತ್ತತೆ ರಕ್ಷಣೆಯ ದೃಷ್ಟಿಯಿಂದ ರಾಸಾಯನಿಕ ಗೊಬ್ಬರಗಳನ್ನು ಬಳಸುವ ಅಗತ್ಯವಿದೆ ಎನ್ನುತ್ತಾರೆ ದೀನದಯಾಳ್‌ಜಿ. ಆದರೆ ರಾಸಾಯನಿಕಗಳ ಬಳಕೆಯಲ್ಲಿ ಎಚ್ಚರ ಅಗತ್ಯ ಎಂದು ಹೇಳುವುದನ್ನೂ ಅವರು ಮರೆಯುವುದಿಲ್ಲ. ಮಣ್ಣಿನ ಗುಣ, ಸಾಗುವಳಿ ಪದ್ಧತಿ, ಬೆಳೆ, ನೀರಾವರಿ ಸೌಕರ್ಯ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡು ಸೂಕ್ತ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರಗಳನ್ನು ಬಳಸಬೇಕು.[೪೮] ವರ್ಷಗಟ್ಟಳೆ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತದೆ. ಆದ್ದರಿಂದ ರಾಸಾಯನಿಕ ಗೊಬ್ಬರಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸಬೇಕು. ಬೆರಕೆಗೊಬ್ಬರಗಳ ಜೊತೆ ಬಳಸಬೇಕು. ದೀನದಯಾಳರ ಪ್ರಕಾರ ಹಸುವಿನ ಸಗಣಿ ಒಳ್ಳೆಯ ಗೊಬ್ಬರ. ಸಗಣಿಯನ್ನು ಬೆರಣಿಯಾಗಿ ಬಳಸುವ ಬದಲು ಗೊಬ್ಬರವಾಗಿ ಹೆಚ್ಚು ಬಳಸಬೇಕೆನ್ನುತ್ತಾರೆ ದೀನದಯಾಳ್‌ಜಿ. ಇಂಧನ, ದೀಪ ಹಾಗೂ ರಾಸಾಯನಿಕ ಗೊಬ್ಬರಗಳ ಸಮಸ್ಯೆ ನಿವಾರಣೆಗೆ ಗೋಬರ ಗ್ಯಾಸ್ ಬಳಸಬೇಕೆಂದು ಅವರು ಹೇಳುತ್ತಾರೆ.[೪೯] ಮಣ್ಣಿನ ಫಲವತ್ತತೆ ರಕ್ಷಣೆಗೆ ಸರದಿ ಬೆಳೆ ಅನುಸರಿಸುವುದು ಉಚಿತವೆನ್ನುತ್ತಾರೆ. ಭಾರತದಲ್ಲಿ ಜಾನುವಾರು ಸಂಪತ್ತು ಅಧಿಕವಾಗಿರುವುದರಿಂದ ದೀನ್‌ದಯಾಳಜೀ ಅವರ ಸಲಹೆ ಮಹತ್ವಪೂರ್ಣವಾದದ್ದೆನ್ನಿಸುತ್ತದೆ. ಇದರಿಂದ ರಾಸಾಯನಿಕ ಗೊಬ್ಬರಗಳ ಆಮದಿನ ಹೊರೆಯೂ ಕಡಿಮೆಯಾಗುತ್ತದೆ.

**ಸಾಂಸ್ಥಿಕ ಕಾರ್ಯಕ್ರಮಗಳು**

ಕೃಷಿ ಅಭಿವೃದ್ಧಿಯಲ್ಲಿ ಸಮತೋಲ ಕಾಯ್ದುಕೊಳ್ಳುವ ದೃಷ್ಟಿಯಿಂದ ಮೇಲೆ ನಮೂದಿಸಿದ ವಸ್ತು ಉಪಕರಣಗಳನ್ನು ಸೂಕ್ತ ರೀತಿಯಲ್ಲಿ ವಿತರಿಸುವುದು ಅಗತ್ಯ. ಇಂಥ ವಿತರಣೆಗೆ ಸಾಂಸ್ಥಿಕ ವ್ಯವಸ್ಥೆ ಅಗತ್ಯವಿದೆ. ಸಂಪನ್ಮೂಲ ಗುರುತಿಸುವುದು, ಮಾರುಕಟ್ಟೆಯಲ್ಲಿ ಪೂರೈಸುವುದು, ಗೇಣಿ ನಿರ್ಧಾರ ಇವುಗಳ ನಿರ್ವಹಣೆಗೆ ಸಂಸ್ಥೆಗಳ ಅಗತ್ಯವಿದೆ. ದೀನ್‌ದಯಾಳಜೀ ಅವರು ಸೂಚಿಸಿರುವ ಸಾಂಸ್ಥಿಕ ಕಾರ್ಯಕ್ರಮ ಹೀಗಿದೆ :

**ಗೇಣಿ ಪದ್ಧತಿ**

ಕೃಷಿಯ ಅಭಿವೃದ್ಧಿಗೆ ನೆರವಾಗುವಂಥ ಪರಿಣಾಮಕಾರಿಯಾದ ಗೇಣಿ ಪದ್ಧತಿ ಅಗತ್ಯವಿದೆ. ಕೃಷಿ ಮಾಡುವ ರೈತರು ಮತ್ತು ಕೃಷಿ ಉತ್ಪಾದನೆ ನಡುವೆ ಗಾಢ ಸಂಬಂಧ ಇರುವುದರಿಂದ ಇಂಥದೊಂದು ವ್ಯವಸ್ಥೆಯ ಅಗತ್ಯವಿದೆ. ಭೂಮಿ ಹಕ್ಕು ಮತ್ತು ಭೂ ಉತ್ಪಾದನೆ ಮೇಲೆ ಹಕ್ಕುಗಳು ಪ್ರಾಪ್ತವಾದಲ್ಲಿ ಮಾತ್ರ ರೈತರು ವ್ಯವಸಾಯದಲ್ಲಿ ಆಸಕ್ತಿ ತೋರುತ್ತಾರೆ ಹಾಗೂ ಗರಿಷ್ಠ ಉತ್ಪಾದನೆಗೆ ಶ್ರಮಿಸುತ್ತಾರೆ. ಭಾರತದಲ್ಲಿ ಜಮೀನು ಸಾಗುವಳಿ ಪದ್ಧತಿ, ಜಮೀನ್ದಾರಿಕೆ ಮತ್ತು ಮಧ್ಯವರ್ತಿಗಳನ್ನು



ನಿಷೇಧಿಸಿದ್ದಾಗ್ಯೂ ಇನ್ನು ಮಧ್ಯವರ್ತಿಗಳ ಹಿಡಿತದಲ್ಲೇ ಎಂದು ದೀನ್‌ದಯಾಳ್‌ಜಿ ಭಾವಿಸುತ್ತಾರೆ. ಸ್ವತಃ ಬೇಸಾಯ ಮಾಡದೆ ತಮ್ಮ ಭೂಮಿಯನ್ನು ಗೇಣಿಗೆ ಕೊಡುವ ಮೂಲಕ ಬೆಳೆಯಲ್ಲಿ ಪಾಲು ಪಡೆಯುವ ಜನ ಇನ್ನೂ ಇದ್ದಾರೆ. ಇಂಥ ಪಾಲನ್ನು ಬಾಡಿಗೆಯಂತೆ ಪರಿಗಣಿಸಬಾರದು. ಏಕೆಂದರೆ ಭೂಮಿಗೂ, ಬಾಡಿಗೆಗೆ ನೀಡುವ ಇತರ ವಸ್ತುಗಳಿಗೂ ವ್ಯತ್ಯಾಸವಿದೆ.[೫೦] ಇದರಿಂದಾಗಿಯೇ ನಾವು ತ್ವರಿತವಾಗಿ ಕೃಷಿ ಉತ್ಪಾದನೆ ವೃದ್ಧಿಗೊಳಿಸುವ ಅಗತ್ಯವಿದೆ. ರೈತರಿಗೆ ಅವರು ಬೆಳೆಯುವ ಉತ್ಪನ್ನಗಳ ಮೇಲಿನ ಪೂರ್ಣ ಹಕ್ಕನ್ನು ನಿರಾಕರಿಸಿದಲ್ಲಿ ಅವರಿಂದ ಬಂಡವಾಳ ಹೂಡಿಕೆ ಅಸಾಧ್ಯವಾಗುತ್ತದೆ. ಜಮೀನ್ದಾರರು ಗೇಣಿಯನ್ನು ಹೆಚ್ಚಿಸಬಹುದು ಎನ್ನುವ ಭೀತಿಯಿಂದ ಗೇಣಿದಾರ ರೈತರು ಕೃಷಿ ಉತ್ಪಾದನೆ ಹೆಚ್ಚಿಸುವ ಯೋಚನೆ ಮಾಡುವುದಿಲ್ಲ. ಹೆಚ್ಚು ಬೆಳೆಯಲು ಇಚ್ಛಿಸುವುದಿಲ್ಲ. ಆದ್ದರಿಂದ ಮಧ್ಯವರ್ತಿಗಳನ್ನು ನಿವಾರಿಸಬೇಕೆನ್ನುತ್ತಾರೆ ದೀನ್‌ದಯಾಳ್‌ಜಿ.[೫೧] ಪ್ರತಿಯೊಬ್ಬ ಪ್ರಜೆಗೂ ಉದ್ಯೋಗದ ಭರವಸೆ ನೀಡುವ ಸಮಾಜ ರೈತರನ್ನು ಅವರ ಜೀವನೋಪಾಯದ ಮಾರ್ಗದಿಂದ ವಂಚಿಸಲಾಗದು. ಬೇರೆ ಮೂಲಗಳಿಂದ ಜೀವನೋಪಾಯ ಸಂಪಾದಿಸುವವರಿಗೆ ಭೂಒಡೆತನದ ಹಕ್ಕಿರಬಾರದು.[೫೨] ಇದು ಸೈದ್ಧಾಂತಿಕವಾಗಿ ಶ್ರೇಷ್ಠವಾದ ಯೋಚನೆಯೇ. ಆದರೆ ವ್ಯಾವಹಾರಿಕ ಮಿತಿಗಳಿವೆ. ಭೂಮಿ ಸಂಬಂಧ, ಭೂಮಿಗಾಗಿ ಹಂಬಲ ಹಸಿವು ಎಷ್ಟು ಪ್ರಬಲವಾದದ್ದೆಂದರೆ ಯಾರೊಬ್ಬರಿಗೂ ಭೂಮಿಯ ಒಡೆತನದ ಹಕ್ಕನ್ನು ನಿರಾಕರಿಸುವುದು ಕಷ್ಟವಾಗುತ್ತದೆ. ಅಲ್ಲದೆ ಅನ್ಯ ಮಾರ್ಗದಿಂದ ಅನ್ನ ಸಂಪಾದನೆ ಖಚಿತವಾಗದೇ ಭೂ ಒಡೆತನದ ಹಕ್ಕನ್ನು ನಿರಾಕರಿಸಲಾಗದು.

ಆದ್ದರಿಂದ 'ಗೇಣಿ–ಭೂಮಿ' ವಿಚಾರದಲ್ಲಿ ತತ್ತ್ವಾನುಸಾರ ನಡೆದುಕೊಳ್ಳಬೇಕಾಗುತ್ತದೆ. ನಿಜವಾಗಿ ಬೇಸಾಯ ಮಾಡುವವರಿಗೆ ಮಾತ್ರ ಭೂ ಒಡೆತನದ ಹಕ್ಕಿರಬೇಕು. ಆದರೆ ರೈತರೇ ಸ್ವತಃ ಎಲ್ಲ ಕೃಷಿ ಕಾರ್ಯಗಳನ್ನು ಮಾಡಬೇಕೆನ್ನಲಾಗದು. ರೈತರನ್ನೇ ಎಲ್ಲ ಕೃಷಿಕಾರ್ಯಗಳಿಗೂ ಹೊಣೆ ಮಾಡಿದಾಗ ಸಾಗುವಳಿಯ ಲಾಭ–ನಷ್ಟಗಳಿಗೂ ಅವರೇ ಜವಾಬ್ದಾರರಾಗುತ್ತಾರೆ. ಆದ್ದರಿಂದ ಬಂಡವಾಳ ಹೂಡಿ ಮೇಲುಸ್ತುವಾರಿಯಲ್ಲಿ ಕೃಷಿ ಮಾಡಿಸುವುದೇ ಲಾಭದಾಯಕವೆನ್ನಿಸಬಹುದು. ಎಂದೇ ಭೂ ಒಡೆತನದ ಹಕ್ಕು ಬಯಸುವವರು ಸಾಗುವಳಿ ಕಾರ್ಯದಲ್ಲಿ ಒಂದಲ್ಲ ಒಂದು ರೀತಿ ಭಾಗಿಯಾಗಬೇಕು. ಇಂಥವರು ಕಾರ್ಮಿಕರ ನೆರವು ಪಡೆದುಕೊಳ್ಳಬಹುದು.

**ಭೂ ಒಡೆತನದ ಮಿತಿ**

ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಭೂಮಿಯ ಹಿಡುವಳಿಯಲ್ಲಿ ಮಿತಿ ಇರಬೇಕು ಎನ್ನುವುದು ದೀನದಯಾಳಜೀ ಅವರ ಅಭಿಮತ. ಅಧಿಕ ಜನರಿಗೆ ಜೀವನ ನಿರ್ವಹಣೆಗಾಗಿ ಜಮೀನೇ ಇಲ್ಲದೆ ಇರುವಾಗ ಕೆಲವೇ ಕೆಲವರು ಅಗತ್ಯ

ಮೀರಿ ಜಮೀನು ಹೊಂದಿರುವುದು ಅನಪೇಕ್ಷಣೀಯ. ಭೂ ಹಿಡುವಳಿಯ ಮೇಲೆ ಮಿತಿ ಹೇರುವುದರಿಂದ ಹೆಚ್ಚುವರಿ ಜಮೀನನ್ನು ಭೂರಹಿತರಿಗೆ ಹಂಚಲು ಸಹಾಯವಾಗುತ್ತದೆ. ಆದರೆ ಹೀಗೆ ಹಂಚಿಕೆಯಲ್ಲಿ ಭೂಮಿಯನ್ನು ಪಡೆದವನು ಆ ಭೂಮಿಯಲ್ಲಿ ಸ್ವಂತ ಸಾಗುವಳಿ ಮಾಡಬೇಕೆನ್ನುವುದನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಭೂಮಿ ಹಂಚಿಕೆ ಜಮೀನುರಹಿತರ ಭೂದಾಹ ತಣಿಸುವುದರಲ್ಲಿ ಪರ್ಯವಸಾನಗೊಳ್ಳಬಾರದು. ಏಕೆಂದರೆ ಭೂಮಿ ಪಡೆದವನು ಅದನ್ನು ಸಾಗುವಳಿ ಮಾಡಿ ಆರ್ಥಿಕವಾಗಿ ಲಾಭದಾಯಕ ರೀತಿಯಲ್ಲಿ ಬಳಸಬೇಕು. ಇಲ್ಲದೆ ಹೋದಲ್ಲಿ ಅದು ಲಾಭಕರವಲ್ಲದ ಬಳಕೆಯಾಗುತ್ತದೆ. ಸಾಗುವಳಿ ಮಾಡದೆ ಹೋದಲ್ಲಿ ಕೃಷಿ ಉತ್ಪಾದನೆ ಕುಸಿಯುತ್ತದೆ. ಅಲ್ಲದೆ ಚುರುಕಾದ ಇತರೆ ಆರ್ಥಿಕ ಚಟುವಟಿಕೆಗಳ ಮೂಲಕ ಜನತೆಗೆ ಉದ್ಯೋಗ ಮಾರ್ಗಗಳನ್ನು ತೋರಿಸಬಹುದು ಎಂದಾದಲ್ಲಿ ಕೃಷಿ ಭೂಮಿ ಅನಗತ್ಯವೆನ್ನಿಸಲೂಬಹುದು. ಆದ್ದರಿಂದ ಹೆಚ್ಚುವರಿ ಭೂಮಿಯನ್ನು ಹಂಚುವಾಗ ಸಾಕಷ್ಟು ಕೃಷಿಯೋಗ್ಯ ಭೂಮಿ ಹೊಂದಿಲ್ಲದೇ ಇರುವವರಿಗೆ ಹಾಗೂ ಸಣ್ಣ ಹಿಡುವಳಿದಾರರಿಗೆ ಆದ್ಯತೆ ನೀಡಬೇಕು. ಇಂಥವರಿಗೇ ಹೆಚ್ಚುವರಿ ಭೂಮಿ ವಿತರಣೆಯಾಗಬೇಕು.

ಭೂ ಹಿಡುವಳಿ ಮಿತಿಯಿಂದ ಕೃಷಿ ಉತ್ಪಾದನೆಯೂ ಹೆಚ್ಚಿರಬೇಕು. ಜಮೀನು–ಮಾನವ ಪರಿಮಾಣ ಕಡಿಮೆ ಇರುವುದರಿಂದ ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸುವುದು ಅತ್ಯಗತ್ಯವಾಗಿದೆ. ಭೂಮಿಯನ್ನು ಸಾಗುವಳಿ ಮಾಡದೆ ಬಂಜರು ಬಿಡುವಂಥ ಶ್ರೀಮಂತಿಕೆ ಶಕ್ತಿ ಸಾಮರ್ಥ್ಯಗಳು ನಮ್ಮಲಿಲ್ಲ. ಹಾಗೆಯೇ ಯಂತ್ರೋಪಕರಣಗಳಿಂದ ಸಾಗುವಳಿ ಮಾಡುವುದಕ್ಕೂ ಅವಕಾಶ ನೀಡಬಾರದು. ಕೆಲವೇ ಮಂದಿ ರೈತರು ಬೃಹತ್ ಪ್ರಮಾಣದಲ್ಲಿ ಸಾಗುವಳಿ ಮಾಡಿದರೆ ಮಾರುಕಟ್ಟೆಗೆ ಹೆಚ್ಚುವರಿ ದವಸಧಾನ್ಯ ಪೂರೈಕೆ ಹೆಚ್ಚಬಹುದು. ಆದರೆ ಇದರಿಂದ ಸಾಮಾನ್ಯ ರೈತಾಪಿವರ್ಗದ ಜನರ ಆರ್ಥಿಕಸ್ಥಿತಿ ಕುಸಿಯುತ್ತದೆ. ಕೈಗಾರಿಕಾ ಅಭಿವೃದ್ಧಿಗತಿ ಕುಂಠಿತಗೊಳ್ಳುತ್ತದೆ. ಜೊತೆಗೆ ಗೇಣಿದಾರರಿಗೇ ಭೂಮಿ ಎನ್ನುವ ತತ್ವವನ್ನು ಜಾರಿಗೆ ತರುವುದರಿಂದ, ಸೂಕ್ತ ತಂತ್ರಜ್ಞಾನವನ್ನು ಸಾಗುವಳಿಯಲ್ಲಿ ಅಳವಡಿಸಿಕೊಳ್ಳುವವರಿಂದ ಕೆಲವೇ ಮಂದಿ ಅಧಿಕ ಪ್ರಮಾಣದ ಭೂ ಒಡೆತನ ಹೊಂದುವುದಕ್ಕೆ ಅವಕಾಶಗಳಿರುವುದಿಲ್ಲ.

ಕೃಷಿ ಉತ್ಪಾದನೆ ಹೆಚ್ಚಿಸಲು ಸಂಪನ್ಮೂಲ ಹೊಂದಿರುವವರು ಜಮೀನಿನಲ್ಲಿ ಬಂಡವಾಳ ಹೂಡಬಹುದೆನ್ನುವ ಅಭಿಪ್ರಾಯಕ್ಕೆ ದೀನದಯಾಳರ ವಿರೋಧ ಇರಲಿಲ್ಲ. "ಭಾರಿ ಜಮೀನ್ದಾರರಿಗೂ ಭೂಮಿಯ ಒಡೆತನ ಹಕ್ಕು ಇರಬೇಕು. ಭೂ ಹಿಡುವಳಿ ಮಿತಿ ವಿಧಿಸಿದಲ್ಲಿ ದೊಡ್ಡ ಜಮೀನ್ದಾರರಿಗೆ ತಮ್ಮ ಸಂಪನ್ಮೂಲಗಳನ್ನು ಜಮೀನಿನಲ್ಲಿ ತೊಡಗಿಸುವ ಅವಕಾಶವಿರುವುದಿಲ್ಲ. ಹಾಗೂ ಸಂಪನ್ಮೂಲದ ಕೊರತೆ



ಇರುವ ರೈತರಿಂದ ಭೂಮಿಯ ಲಾಭದಾಯಕ ಬಳಕೆ ಸಾಧ್ಯವಿಲ್ಲ." ಎನ್ನುವ ಅಭಿಪ್ರಾಯವಿದ್ದು ಈ ವಾದದಲ್ಲಿ ಸ್ವಲ್ಪ ಸತ್ಯ ಇದೆ ಎನ್ನುತ್ತಾರೆ ದೀನ್‌ದಯಾಳ್‌ಜಿ. ಲಾಭದಾಯಕವಾಗಿ ಬಳಸಲಾಗದ ಹೆಚ್ಚುವರಿ ಭೂ ಹಿಡುವಳಿಯನ್ನು ಲಾಭದಾಯಕವಾಗಿ ಬಳಸುವುದರಲ್ಲಿ ತಪ್ಪೇನಿಲ್ಲ. ಇದರಿಂದಾಗಿ ಸಂಪನ್ಮೂಲ ಕೊರತೆ ಇತ್ಯಾದಿ ಕಾರಣಗಳಿಂದಾಗಿ ಸಾಗುವಳಿ ಮಾಡದೇ ಬಿಟ್ಟ ಭೂಮಿಯಲ್ಲಿ ಲಾಭಕರ ಹಿಡುವಳಿಗೆ ಅವಕಾಶ ಮಾಡಿಕೊಟ್ಟಲ್ಲಿ ಹೆಚ್ಚು ಮಂದಿ ರೈತರು ಬೆಳೆತೆಗೆಯುವುದು ಸಾಧ್ಯವಾಗುತ್ತದೆ.

ಜಮೀನು, ಬೆಳೆ, ಹಲವಾರು ಬಗೆಯ ಬೆಳೆಗಳ ಸಾಗುವಳಿಯ ಸಾಧ್ಯತೆ, ನೀರಾವರಿ, ನೀರಾವರಿ ಸಂಪನ್ಮೂಲಗಳು, ಅಗತ್ಯಗಳು, ಬೇಡಿಕೆಗಳು, ಪರಿಹಾರ ಇತ್ಯಾದಿಯಾಗಿ ಹಲವಾರು ವಿಚಾರಗಳನ್ನು ಗಣನೆಗೆ ತೆಗೆದುಕೊಂಡು ಭೂಹಿಡುವಳಿ ಮಿತಿಯನ್ನು ಜಾರಿಗೆ ತರಬೇಕೆನ್ನುವುದು ದೀನ್ ದಯಾಳ್‌ಜಿಯವರ ಅಭಿಪ್ರಾಯವಾಗಿದೆ. ಆದರೆ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಪ್ರಕೃತಿ ಸಹಜವಾಗಿ ಸಮರ್ಥಿಸಿಕೊಳ್ಳುವ ರೀತಿಯಲ್ಲಿ ಎಲ್ಲ ಸಂದರ್ಭಗಳಲ್ಲೂ ಭೂ ಹಿಡುವಳಿ ಮಿತಿಯನ್ನೂ ವಿಶದಪಡಿಸುವುದು ಕಷ್ಟ. ಐದು ಜನರ ಒಂದು ಕುಟುಂಬಕ್ಕೆ ಸಾಮಾನ್ಯ ಮಟ್ಟದ ಜೀವನ ನಿರ್ವಹಣೆಗೆ ಅನುಕೂಲವಾಗುವಂಥ ಜಮೀನನ್ನು ಆರ್ಥಿಕವಾಗಿ ಲಾಭದಾಯಕವಾದದ್ದು ಎಂದು ಹೇಳಬಹುದು. ಲಾಭದಾಯಕ ಹಿಡುವಳಿಯ ನಾನಾ ಭಾಗಗಳಲ್ಲಿ ಇಂತಿಷ್ಟು ಪ್ರಮಾಣವನ್ನು ಗರಿಷ್ಠಮಿತಿ ಎಂದು ನಿರ್ಧರಿಸಬಹುದು. ಈ ಗರಿಷ್ಠಮಿತಿ ಮಧ್ಯಮ ವರ್ಗದ ರೈತರನ್ನು ಸಂರಕ್ಷಿಸುವಂತಿರಬೇಕು ಹಾಗೂ ಈ ವರ್ಗದ ರೈತರಿಗೆ ಜಮೀನಿನ ಹೊಸ ರೀತಿಯ ಸಾಗುವಳಿಗೆ ಅವಕಾಶವಿರಬೇಕು.[೫೭] ಒಮ್ಮೆ ಭೂ ಹಿಡುವಳಿ ಮಿತಿಯನ್ನು ನಿರ್ಧರಿಸಿದ ನಂತರ ಅದನ್ನು ಪ್ರಮಾಣಿಕವಾಗಿ ಅನುಷ್ಠಾನಕ್ಕೆ ತರಬೇಕು. ಅನಿಶ್ಚಿತತೆ ಅಭಿವೃದ್ಧಿಗೆ ಮಾರಕ. ಆದ್ದರಿಂದ ಭೂ ಹಿಡುವಳಿ ಮಿತಿ ನಿರ್ಧಾರದ ನಂತರ ಅನಿಶ್ಚಿತತೆ ತಲೆದೋರಬಾರದು. ದೊಡ್ಡ ಜಮೀನ್ದಾರರಿಗೆ ಮತ್ತು ಸಹಕಾರಿ ಬೇಸಾಯಕ್ಕೆ ಭೂ ಹಿಡುವಳಿ ಮಿತಿಯಿಂದ ವಿನಾಯಿತಿ ನೀಡಬೇಕೆನ್ನುವುದನ್ನು ದೀನ್‌ದಯಾಳಜಿ ಸಮರ್ಥಿಸುವುದಿಲ್ಲ.

## ಸಹಕಾರಿ ಬೇಸಾಯ

ದೀನ್ ದಯಾಳ್ ಅವರು ಸಹಕಾರಿ ಬೇಸಾಯದ ಪರವಾಗಿಲ್ಲ. ಭಾರತೀಯ ಪರಿಸ್ಥಿತಿಯಲ್ಲಿ ಇಂಥ ಬೃಹತ್ ಪ್ರಮಾಣದ ಬೇಸಾಯ ಸಾಧ್ಯವಿಲ್ಲ ಎನ್ನುವುದು ಅವರ ಅಭಿಮತ. ಅವರ ಪ್ರಕಾರ ಚೀನಾಕ್ಕೆ ಭೇಟಿ ನೀಡಿದ್ದ ನಿಯೋಗವೊಂದರ ಶಿಫಾರಸಿನಂತೆ ಭಾರತದಲ್ಲಿ ಸಹಕಾರಿ ಬೇಸಾಯ ಪದ್ಧತಿಯನ್ನು ಆಚರಣೆಗೆ

ತರಲಾಗಿದೆ. ಆದರೆ ವ್ಯಾವಹಾರಿಕ ಸಾಧ್ಯತೆ ಬಗ್ಗೆ ಅವರಿಗೆ ಅನುಮಾನಗಳಿವೆ.[೫೮] ನಮ್ಮ ಪರಿಸ್ಥಿತಿ, ನಮ್ಮ ಪ್ರಕೃತಿ, ಭೂಮಿಯೊಂದಿಗೆ ನಮ್ಮ ರೈತರ ಭಾವನಾತ್ಮಕ ಸಂಬಂಧ ಹಾಗೂ ನಮ್ಮಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆ ಇವೆಲ್ಲದಕ್ಕೂ ಸಹಕಾರಿ ಬೇಸಾಯ ಪದ್ಧತಿ ಹೊಂದಿಕೊಳ್ಳುವುದಿಲ್ಲ. ನಮ್ಮಲ್ಲಿನ ಈ ಎಲ್ಲ ಸ್ಥಿತಿಗತಿಗಳಿಗೆ ಸಹಕಾರಿ ಬೇಸಾಯ ಸೂಕ್ತವಲ್ಲ. ದೀನದಯಾಳ್‌ಜಿಯವರ ಪ್ರಕಾರ ಸಹಕಾರಿ ಬೇಸಾಯ ಪದ್ಧತಿ ಅಳವಡಿಸಿಕೊಂಡಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತದೆ ಹಾಗೂ ರೈತರು ಲಾಭದಾಯಕ ಕೃಷಿಯ ಆಮಿಷಕ್ಕೊಳಗಾಗುತ್ತಾರೆ ಹಾಗೂ ಸಂಪತ್ತು ಗ್ರಾಮ ಪಂಚಾಯಿತಿಗಳ ಕೈವಶವಾಗುತ್ತದೆ.[೫೯] ಕೃಷಿ ಸಾಗುವಳಿಯನ್ನು ರೈತರ ಪಾಡಿಗೇ ಬಿಟ್ಟು ಬಿಡಬೇಕು. ಅದರಲ್ಲಿ ಸರ್ಕಾರ ಕೈಹಾಕಬಾರದು. ಆದರೆ ರೈತರಿಗೆ ಅಗತ್ಯವಾದ ಸವಲತ್ತುಗಳನ್ನು ಸರ್ಕಾರ ಒದಗಿಸಬೇಕು. ಕೃಷಿಯಲ್ಲಿ ಇದೇ ಸರಿಯಾದ ಮಾರ್ಗ ಎನ್ನುತ್ತಾರೆ ದೀನದಯಾಳಜಿ.

**ಆಕರಗಳು**


13. Deendayal Upadhyaya : *Arth Niti; Vikas Ki Ek Disha* (Hindi), Rastradharam Publication, Lucknow, p. 16.
14. *Ibid,* p. 17.
15. *Ibid,* p. 18.
16. *Ibid,* p. 19.
17. *Ibid,* p. 20.
18. *Ibid,* p. 19.
19. *Ibid,* p. 19.
20. *Ibid,* p. 19.
21. *Ibid,* p. 21.
22. *Ibid,* p. 32
23. *Ibid,* p. 58
24. Deendayal Upadhyaya : *Ekatmamanavvad (Hindi),* Rastradharam Publication pp. 67-69.
25. *Ibid,* p. 69-71.
26. E. F. Schumacher, *Samll is Beautiful,* Radha Krishna, New Delhi. 1977, p. 11.
27. Deendayal Upadhyaya : *Arth Niti,* opcit., p. 25
28. Deendayal Upadhyaya : *Ekatmamanavvad,* op. cit., pp. 72-74.
29. *Ibid,* p. 22.
30. Pt. Deendayal Upadhyaya : *Bharatiya Arthniti,* op. cit., p. 27.





31. *Ibid,* p. 31.
32. *Ibid,* p. 29.
33. *Ibid,* p. 29.
34. *Ibid,* p. 29. 30.
35. *Ibid,* p. 30.
36. *Ibid,* p. 31.
37. Keshav Prasad Singh : *Ekatma Manavvad Me Arth Vyavastha Ka Swaroop,* Manthan, Deendayal Research Institute, New Delhi, Vol. 1, No. 4, 1979, p. 34.
38. *Ibid,* p. 35.
39 *Bhartiya Arthniti.* op. cit., p. 34.
40. *Ibid,* p. 35.
41. *Ibid,* p. 25.
42. *Ibid,* p. 36.
43. *Ibid,* p. 36.
44. *Ibid,* p. 36.
45. *Ibid,* p. 37.
46. *Ibid,* p. 38.
47. *Ibid,* p. 38.
48. *Ibid,* p. 39.
49. *Ibid,* p. 40
50. *Ibid,* p. 41
51. *Ibid,* p. 41
52. *Ibid,* p. 41
53. *Ibid,* p. 41
54. *Ibid,* p. 42.
55. *Ibid,* p. 44.
56. *Ibid,* p. 45.
57. *Ibid,* p. 47-48.
58. *Ibid,* p. 50.
59. *Ibid,* p. 51.